ಜನಪ್ರಿಯ
ಪುಸ್ತಕ ಮಾಲೆ

# ಕಳೆದ ಆ ದಿನಗಳು

ಎನ್. ಮಲ್ಲಪ್ಪ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

# ಕಳೆದ ಆ ದಿನಗಳು

(ಆತ್ಮಕತೆ)

ಎನ್.ಮಲ್ಲಪ್ಪ


ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦೦೧೮

**KALEDA AA DINAGALU:** An Autobiography written by N.Mallappa and Published by V.Sreenivasa, Administrator, Kannada Pustaka Pradhikara (Kannada Book Authority), Pampamahakavi Road, Chamarajapet, Bangalore-560018

Pages: 268+xx

ಪ್ರಥಮ ಮುದ್ರಣ: 1987
ದ್ವಿತೀಯ ಮುದ್ರಣ: 1989
ತೃತೀಯ ಮುದ್ರಣ: 1999

ಗ್ರಂಥಸ್ವಾಮ್ಯ : **ಕನ್ನಡ ಪುಸ್ತಕ ಪ್ರಾಧಿಕಾರ**

ಬೆಲೆ: ರೂ.60/-

ಮುದ್ರಕರು: **ಅನನ್ಯ ಲೇಜರ್‌ಟೆಕ್**
೨೨, ೭ನೇ ಮೇನ್,
೨೧ನೇ ಕ್ರಾಸ್,
ವಿಜಯನಗರ ೩ನೇ ಹಂತ
ಮೈಸೂರು

# ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕ ಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ 'ಕಳೆದ ಆ ದಿನಗಳು' ಎಂಬ ಪುಸ್ತಕ ಅಚ್ಚಾಗುತ್ತಿರುವುದು ಹರ್ಷದ ಸಂಗತಿ.

ಶ್ರೀ ಎನ್.ಮಲ್ಲಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತವಾದ ಹೆಸರೇನೂ ಅಲ್ಲ. ಆದರೆ ಸಾಹಿತ್ಯ ರಚನೆಗೆ ಮೂಲ ಪ್ರೇರಣೆ ಜನಜೀವನದ ಗಾಢವಾದ ಮತ್ತು ಸೂಕ್ಷ್ಮವಾದ ಅನುಭವ ಹಾಗೂ ಅದನ್ನು ಸ್ಪಷ್ಟವಾಗಿ ಕಣ್ಣಿಗೆ ಕಟ್ಟುವಂತೆ ಮನಸ್ಸಿಗೆ ಮುಟ್ಟುವಂತೆ ಅಭಿವ್ಯಕ್ತಿಸುವ ಭಾಷಾ ಕೌಶಲ. ಈ ದೃಷ್ಟಿಯಿಂದ ಈ ಕೃತಿ ನಮ್ಮ ಮನಸ್ಸನ್ನು ತಟಕ್ಕನೆ ಸೆಳೆದುಕೊಳ್ಳುತ್ತದೆ. ಶ್ರೀ ಎನ್.ಮಲ್ಲಪ್ಪನವರು ಹಳ್ಳಿಯಲ್ಲಿ ಹುಟ್ಟಿ ಆ ಬದುಕಿನ ದಟ್ಟವಾದ ಹಾಗೂ ವೈವಿಧ್ಯಮಯವಾದ ಆಪ್ತ ಸ್ಪರ್ಶಕ್ಕೆ ಒಳಗಾದವರು. ಅಲ್ಲಿಯ ಬಡತನ, ಅಜ್ಞಾನ, ಮುಗ್ಧತೆ, ಅನಕ್ಷರತೆ, ಅಕೃತ್ರಿಮತೆ, ಮುಂತಾದವುಗಳನ್ನು ಕಂಡು ಉಂಡವರು. ಹಾಗೆಯೇ ಸರ್ಕಾರಿ ಕೆಲಸಕ್ಕೆ ಸೇರಿ ತಮ್ಮ ಪ್ರಾಮಾಣಿಕತೆ, ದಕ್ಷತೆ, ಸಾಮಾಜಿಕ ಕಾಳಜಿ, ಮುಂತಾದವುಗಳಿಂದಾಗಿ ಅಧಿಕಾರದ ಏಣಿಯನ್ನು ಹಂತ ಹಂತವಾಗಿ ಹತ್ತಿದವರು. ಹಲವು ಸಾಮಾಜಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ ನಿಷ್ಪೃಹತೆಯಿಂದ ಬೆಳೆಸಿ ಎತ್ತರಕ್ಕೆ ಏರಿಸಿದವರು. ಹಾಗೆಯೇ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಗ್ರಾಮೀಣ ಜನತೆಗೆ ಏನೆಲ್ಲಾ ಸಹಾಯವನ್ನು ಮಾಡಬಹುದೋ ಅದೆಲ್ಲವನ್ನು ನಿರ್ವಂಚನೆಯಿಂದ ಮಾಡಿದವರು. ದೀನ-ದಲಿತ, ಬಡವ-ಜನತೆಯ ಬದುಕನ್ನು ನೇರ್ಪುಗೊಳಿಸಲು ಶ್ರದ್ಧೆಯಿಂದ ಕಾಯಕಯೋಗಿಯಾಗಿ ದುಡಿದವರು ಇವರು. ಅವರ ಸರಳವೂ, ಪ್ರಗತಿಪರವೂ, ಕಾರ್ಯನಿಷ್ಠವೂ ಆದ ಬದುಕಿನ ವಿವರಗಳು ಈ ಕೃತಿಯಲ್ಲಿ ಹೃದಯಂಗಮವಾಗಿ ಅಲಂಕಾರಗಳ ಯಾವುದೇ ಕೃತಕ ಹೊದಿಕೆಯಿಲ್ಲದೆ ಇಲ್ಲಿ ಅನ್ಯದೃಶ್ಯವಾಗಿ ಅನಾವರಣಗೊಂಡಿವೆ. ಜನಪರ ಕಾಳಜಿವುಳ್ಳ ಸರ್ಕಾರಿ ಅಧಿಕಾರಿಯೊಬ್ಬ ಏನೆಲ್ಲಾ ಸಮಾಜಹಿತ ಕಾರ್ಯಗಳನ್ನು ಮಾಡಬಹುದೆಂಬುದಕ್ಕೆ ಈ ಕೃತಿ ತೋರ್ಬೆರಳಾಗಿದೆ. ಸರಳ ಸುಂದರ ಕೃತಿಯನ್ನು ಈ ಮಾಲೆಯಲ್ಲಿ ಪ್ರಕಟಿಸಲು ಅನುಮತಿಯಿತ್ತ 'ರಂಗಮ್ಮ ಮಲ್ಲಪ್ಪ ಟ್ರಸ್ಟ್' ಪ್ರಕಾಶನದವರಿಗೆ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೈಸೂರಿನ ಅನನ್ಯ ಲೇಸರ್ ಟೆಕ್ ಅವರಿಗೆ, ಜನಪ್ರಿಯ ಪುಸ್ತಕ ಮಾಲೆಯಲ್ಲಿ ಈ ಕೃತಿಯನ್ನು ಪ್ರಕಟಿಸಲು ಅನುಮೋದಿಸಿದ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳು.

ದಿನಾಂಕ : 30-4-99
ಬೆಂಗಳೂರು

**ಎಚ್.ಜಿ.ಲಕ್ಕಪ್ಪಗೌಡ**
ಅಧ್ಯಕ್ಷರು

# ಅಭಿಮಾನದ ಮಾತು

ಶ್ರೀ ಮಲ್ಲಪ್ಪನವರು ಬರೆದಿರುವ ಸಂಕ್ಷಿಪ್ತ ಆತ್ಮಕತೆಯನ್ನು ಓದಿದೆ. ಅವರು ಗ್ರಾಮೀಣ ಜನರಿಗೆ ಅರ್ಥವಾಗುವ ರೀತಿಯಲ್ಲೆ ಸರಳ ಕನ್ನಡದಲ್ಲೆ ತಮ್ಮ ಅನುಭವಗಳನ್ನು ಈ ಪುಸ್ತಕದಲ್ಲಿ ನಿರೂಪಿಸಿರುತ್ತಾರೆ. ಶ್ರೀ ಮಲ್ಲಪ್ಪನವರು ದೊಡ್ಡ ಪದವಿಯನ್ನು ಅಲಂಕರಿಸಿದವರಲ್ಲ. ಸರ್ಕಾರಿ ನೌಕರಿಯನ್ನು ಸೇರಿ ಅಂತಿಮದಲ್ಲಿ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ 'ಕಮೀಷನರಾಗಿ' ನಿವೃತ್ತಿ ಹೊಂದಿದವರು. ಇಂದಿನ ಕಾಲದಲ್ಲಿ ಕೆಲವು ಸಣ್ಣ ವ್ಯಕ್ತಿಗಳು ಹೇಗೋ ಮಾಡಿ ದೊಡ್ಡ ಪದವಿಗೆ ಏರುತ್ತಾರೆ. ದೊಡ್ಡ ವ್ಯಕ್ತಿಗಳು ಸಣ್ಣ ಸ್ಥಾನದಲ್ಲಿದ್ದರೆ ಜನರಿಗೆ ಒಳಿತಾಗುತ್ತದೆ. ಅದಕ್ಕೆ ಬದಲಾಗಿ ಸಣ್ಣ ವ್ಯಕ್ತಿಗಳು ದೊಡ್ಡ ಸ್ಥಾನದಲ್ಲಿದ್ದರೆ ಬಹಳ ಅಪಾಯ. ಶ್ರೀ ಮಲ್ಲಪ್ಪನವರು ಸಣ್ಣ ಹುದ್ದೆಯಲ್ಲಿದ್ದ ಒಬ್ಬ ದೊಡ್ಡ ವ್ಯಕ್ತಿಯಾಗಿದ್ದರು.

ನಾನು ಈ ರಾಜ್ಯದ ಕಂದಾಯ ಮಂತ್ರಿಯಾಗಿದ್ದಾಗ ಶ್ರೀ ಮಲ್ಲಪ್ಪನವರು ಕಂದಾಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಷನರಾಗಿದ್ದರು. ಆ ಕಾಲದಲ್ಲೆ ಅವರ ಪ್ರಾಮಾಣಿಕತೆ ಮತ್ತು ದಕ್ಷತೆಗಳನ್ನು ನಾನು ಮೆಚ್ಚಿದ್ದೇನೆ. ಅವರಿಗೆ ಬಡಬಗ್ಗರ ಮೇಲೆ ಬಹಳ ಅನುಕಂಪವಿತ್ತು. ನನಗೆ ತಿಳಿದಮಟ್ಟಿಗೆ ಅವರು ಎಂದೂ ಲಂಚಕ್ಕೆ ಕೈ ಒಡ್ಡಿದವರಲ್ಲ. ಸಾಗುವಳಿಗೆ ಯೋಗ್ಯವಾಗಿರುವ ಸರ್ಕಾರಿ ಬಂಜರು ಭೂಮಿಯನ್ನು ಬಡಬಗ್ಗರಿಗೆ ಹಂಚುವ ಸಲುವಾಗಿ ಶ್ರೀ ಮಲ್ಲಪ್ಪನವರನ್ನು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಒಬ್ಬ ವಿಶೇಷ ಅಧಿಕಾರಿಯನ್ನಾಗಿ ನೇಮಕ ಮಾಡಿದ್ದೆ. ಅವರು ಎರಡು ಜಿಲ್ಲೆಗಳಲ್ಲಿಯೂ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಹರಿಜನ. ಗಿರಿಜನರಿಗೂ ಇತರ ಬಡಜನರಿಗೂ, ಸ್ಥಳದಲ್ಲಿಯೇ ಹಂಚಿಕೆ ಮಾಡಿ, ಸ್ಥಳದಲ್ಲಿಯೇ ಸಾಗುವಳಿ ಚೀಟಿಗಳನ್ನು ಕೊಟ್ಟಿದ್ದರು. ಅಂದು ಅವರಿಗಿದ್ದ ಅವಕಾಶ ಈಗಿನ ಕಾಲದ ಕೆಲವು ಅಧಿಕಾರಿಗಳಿಗೆ ಸಿಕ್ಕಿದ್ದರೆ ಕನಿಷ್ಠ ಪಕ್ಷ ಅರ್ಧ ಕೋಟಿ ರೂಪಾಯಿಗಳನ್ನು ಲಪಟಾಯಿಸುತ್ತಿದ್ದರು. ನಾನು ಭೂಮಿಯನ್ನು ಹಂಚುವ ಸಲುವಾಗಿ ನೇಮಿಸಿದ್ದ ಬಹುಮಂದಿ ವಿಶೇಷಾಧಿಕಾರಿಗಳು

ಮಲ್ಲಪ್ಪನವರಷ್ಟೇ ನಿಸ್ಪೃಹರಾಗಿದ್ದರು. ಇಂದಿನ ಕಾಲದಲ್ಲಿ ಅಂತಹ ಅಧಿಕಾರಿಗಳನ್ನು ಕಾಣುವುದೇ ಅಪರೂಪವಾಗಿದೆ. ಮಲ್ಲಪ್ಪನವರ ಆತ್ಮಕತೆಯಿಂದ ಕೆಲವರಿಗಾದರೂ ಪ್ರೇರಣೆ ದೊರೆಯಲೆಂದು ಹಾರೈಸುತ್ತೇನೆ.

ಬೆಂಗಳೂರು
ದಿನಾಂಕ: 28-2-1987 **ಕಡಿದಾಳ್ ಮಂಜಪ್ಪ**

# ನನ್ನ ಮಾತು

''ಅಂತು ಇಂತು ಎಂಟು ವರ್ಷಕ್ಕೆ ನನ್ನ ಮಗ ದಂಟು'' ಎನ್ನುವ ಗಾದೆ ಮಾತಿನಂತೆ 80 ವರ್ಷಕ್ಕೆ ನಾನೊಂದು ಪುಸ್ತಕ ಬರೆದೆ. ಅದು ನನ್ನ ಕತೆಯೇ ಹೌದು. ಮಹಾರಾಜ ಕಾಲೇಜಿನಲ್ಲಿ 1931ರಲ್ಲಿ ಜೂನಿಯರ್ ಬಿ.ಎ. ತರಗತಿ ಓದಬೇಕಾದರೆ ಗುರು ತೀ.ನಂ.ಶ್ರೀ ಕನ್ನಡ ಭಾಷಾ ತರಗತಿಯಲ್ಲಿ ನನ್ನ ಪ್ರಬಂಧದ ದಾಟಿಯನ್ನು ಮೆಚ್ಚಿ ''ನೀವು ಲೇಖನ ವ್ಯವಸಾಯ ಮಾಡಿ'' ಎಂದಿದ್ದರು. ಎಲ್ಲಾ ಶಿಷ್ಯರು ಗುರುಗಳ ಮಾತಿನಂತೆ ನಡೆದಿದ್ದರೆ ಲೋಕ ಹೇಗಿರುತ್ತಿತ್ತು. ನಾನು ಬೇರೆ ವ್ಯವಸಾಯ ಮಾಡಲಾರಂಭಿಸಿದೆ. ಸಹಕಾರ ಇಲಾಖೆ. ರೆವಿನ್ಯೂ ಇಲಾಖೆ. ಕಾಳಿದಾಸ ವಿದ್ಯಾವರ್ಧಕ ಸಂಘ, ಒಂದಿಷ್ಟು ರಾಜಕೀಯ ರಂಗ ಹೀಗೆ ಎಲ್ಲೆಡೆ ಕೆಲಸ ಮಾಡಲು ಹೊರಟೆ. ಒಂದಿಷ್ಟು ಸಂತೃಪ್ತಿ ಕೂಡ ನನ್ನ ಪಾಲಾಗಿತ್ತು. ಎಲ್ಲಾ ತಹಬಂದಿಗೆ ಬರುತ್ತಿದೆ ಎನ್ನುವಾಗ ನನ್ನ ಶ್ರೀಮತಿ ಹಠಾತ್ತನೆ ಕ್ಯಾನ್ಸರ್ ಕಾಯಿಲೆಗೆ ತುತ್ತಾದಳು. ನಾನು ಒಂದು ಮೂಲೆ ಸೇರಿದೆ. ಈ ತನಕದ ನನ್ನ ಬದುಕನ್ನೆಲ್ಲಾ ನೆನೆಸಿಕೊಳ್ಳುತ್ತಾ. ಅವಳ ರೋಗದ ಏರಿಳಿತಗಳನ್ನು ನೋಡುತ್ತ ಕುಂತೆ. ಅನೇಕ ಮಿತ್ರರು ಅಭಿಮಾನಿಗಳು ಸಂತಾಪ ಹೇಳುವುದಕ್ಕೆ ಬಂದರು. ಅವರು ತಾನೆ ಹೇಳಿದ ಮಾತನ್ನೆ ಎಷ್ಟು ದಿನ ಹೇಳಿಯಾರು. ಮಕ್ಕಳು ತಾಯಿಯ ಭಯಂಕರ ಕಾಯಿಲೆಯಿಂದ ದಿಕ್ಕೆಟ್ಟರು. ನನ್ನ ದೀರ್ಘ ಜೀವನದಲ್ಲಿ ಸಾಕಷ್ಟು ಸಿಹಿ-ಕಹಿ ಉಂಡಿದ್ದ ನನಗೆ ಇದು ಅನಿವಾರ್ಯ ಅನಿಸತೊಡಗಿತು. ತೀವ್ರವಾದ ವ್ಯಾಸಂಗ ಹಾಗೂ ಹಾಸ್ಟಲ್ ಕೆಲಸಕ್ಕೆ ಮನಕೊಟ್ಟು ಮನೆಯ ಕಷ್ಟವನ್ನು ಮರೆಯತೊಡಗಿದೆ. ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ 'ಭಾವ' ಗ್ರಂಥವನ್ನು ಪುನಃ ಓದಲು ಪ್ರಾರಂಭ ಮಾಡಿದೆನು. ಈ ಸಂದರ್ಭದಲ್ಲೆ ನನ್ನ ತರುಣ ಮಿತ್ರ ಕೆ.ಆರ್.ಕಮಲೇಶ್ ನನಗೆ ಹೇಗೋ ಗಂಟು ಬಿದ್ದ. 'ನೀವು ಆತ್ಮಕತೆ ಬರೆಯಿರಿ' ಎಂದು ವರಾತ್ತು ಶುರುಮಾಡಿದ. ಏನು ಮಾಡುವುದು ಬಾಯಿ ಮಾತನಾಡುವಷ್ಟೇ ವೇಗದಿಂದ ಕೈಯಿಂದ ಬರೆದುಕೊಳ್ಳುವುದಿಲ್ಲ. ಯಾವ ವಿಚಾರ ಹೇಳಬೇಕೆಂದು ಒಂದು ಸಾರಿ ಅನಿಸಿದರೆ ಮತ್ತೊಂದು ಸಲ ಹತ್ತಾರು ವಿಷಯಗಳು ಒಮ್ಮಿಂದೊಮ್ಮೆಲೆ ಧಾಳಿ ಮಾಡಲು ಪ್ರಾರಂಭ ಮಾಡುತ್ತವೆ. ಈ ಹಠಮಾರಿ ಮಾಯಾವಿ ಕುದುರೇನ ನಾನು ಸವಾರಿ ಮಾಡಲೇಬೇಕು. ರಾಜವಿಕ್ರಮ ಹಾಗೂ ಅರ್ಜುನನಂತೆ ಅದರ ಮೇಲೇರಿ ಕೆಳಗೆ ಬೀಳಬಾರದು ಎಂದು ನಿಶ್ಚಯ ಮಾಡಿಕೊಂಡೆ. ನನ್ನ ಬದುಕಿನ ಕುದುರೆಯ ಹಿಡಿದು ಕುಳಿತೆ.

ಈಗ ಹೇಗೆ ಕೊನೆ ಮುಟ್ಟದೆನೋ ಗೊತ್ತಿಲ್ಲ. ಕುದುರೆಗೆ ದಣಿವಾಗಿದೆಯೇ ಅಥವಾ ವೃಥಾ ದಣಿದಿದ್ದೇನೋ ಈ ಗ್ರಂಥ ಓದಿದ ಸಹೃದಯರು ಹೇಳಬೇಕು. ನಾನು ಯಾವಾಗಲೂ ಹೇಳುತ್ತಿದ್ದಂತೆ ನನ್ನದು ಆಲದಮರದಂತಹ ಬದುಕಲ್ಲ, ಆಲದ ಮರದ ವಿಸ್ತಾರ ಭವ್ಯತೆ ನನ್ನಲ್ಲಿಲ್ಲ. ನಾನೊಂದು ತುಳಸಿಗಿಡ. ಪ್ರವಾಹ ಬಂದರೆ ಕೊಚ್ಚಿ ಹೋಗುತ್ತೇನೆ. ಒಂದು ಚೂರು ಮಣ್ಣಿನ ನೆಲ ಸಿಕ್ಕರೆ ಅಲ್ಲೇ ಚಿಗುರಿಕೊಳ್ಳುತ್ತೇನೆ. ನನ್ನ ತಾಯಿ ಕಲಿಸಿದ ನೈತಿಕ ಪಾಠ. ಗೆಳೆಯರು ಕಲಿಸಿದ ಪ್ರಾಮಾಣಿಕತೆಯ ಪಾಠ. ಟಿ.ಮರಿಯಪ್ಪ ಮುಂತಾದವರು ಬೋಧಿಸಿದ ಸೇವಾ ಕೈಂಕರ್ಯ, ಮಡದಿ, ಮಕ್ಕಳು ಕಲಿಸಿದ ಸ್ನೇಹ-ಸೌಹಾರ್ದತೆಗಳನ್ನು ಬದುಕಿನಲ್ಲಿ ಒಂದಿಷ್ಟು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ನನ್ನ ಅಲ್ಪ ದುಡಿಮೆಗೆ ಬೆಟ್ಟದಷ್ಟು ಋಣ ಭಾರವನ್ನು ನನಗೆ ಅಭಿನಂದನಾ ಗ್ರಂಥವನ್ನು ತರುವುದರ ಮೂಲಕ ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘದ ಮಿತ್ರರು ಮಾಡಿದ್ದಾರೆ. ಅವರಿಗೆಲ್ಲಾ ಬಾಯಿ ಉಪಚಾರದ ಮಾತು ಹೇಳುವುದು ಸೌಜನ್ಯವೆನಿಸುವುದಿಲ್ಲ. ಈ ಗ್ರಂಥವನ್ನು ಓಧಿ ಇದನ್ನು ಕುರಿತು ಅಭಿಮಾನದ ಮಾತನ್ನು ಹೇಳಿದವರು ಕರ್ನಾಟಕದ ಸಾರ್ವಜನಿಕದ ಬದುಕಿನಲ್ಲಿ ದೊಡ್ಡ ಸ್ಥಾನದಲ್ಲಿರುವ ಶ್ರೀ ಕಡಿದಾಳ್ ಮಂಜಪ್ಪನವರು.

ಈ ಗ್ರಂಥದ ಬೀಜಾಂಕುರಾರ್ಪಣೆಯಿಂದಿಡಿದು ಇಂದಿನವರೆಗೆ ಇದನ್ನ ನೋಡಿಕೊಂಡವ ನಮ್ಮ ಹುಡುಗ ಕೆ.ಆರ್.ಕಮಲೇಶ್. ಈ ಗ್ರಂಥ ಸಿದ್ಧವಾಗುತ್ತಿರುವಾಗ ಇದರ ಬಗ್ಗೆ ಆತ್ಮೀಯವಾಗಿ ವಿಚಾರಿಸಿಕೊಳ್ಳುತ್ತಿದ್ದ ಮಿತ್ರರೆಂದರೆ ಹೆಚ್.ಆರ್.ದಾಸೇಗೌಡ, ವಿ.ಚಿಕ್ಕವೀರಯ್ಯ, ಕೆ.ದಾಸಪ್ಪ, ಹೆಚ್.ಜಿ.ಸಣ್ಣಗುಡ್ಡಯ್ಯ ಮತ್ತು ಕಮಲೇಶನ ತಾಯಿ, ಎಸ್.ಎನ್.ಸರೋಜಮ್ಮ ಮೊದಲಾದವರು.

ನಮ್ಮ ಕುಟುಂಬದ ಸದಸ್ಯರು ಇದರ ಪ್ರಕಟಣಾ ಭಾರ ಹೊತ್ತಿದ್ದಾರೆ. ನಮ್ಮ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಇದೀಗ ನಿವೃತ್ತರಾಗಿ ನಾಗರಾಜ ಮುದ್ರಣಾಲಯದ ಮಾಲೀಕರಾದ ಕೃಷ್ಣಮೂರ್ತಿಯವರು ಇದನ್ನು ಅಚ್ಚು ಮಾಡಿದ್ದಾರೆ. ಎಸ್.ಕೆ.ವೇಣುಗೋಪಾಲ್ ಅಚ್ಚಿನ ಮನೆಗೆ ಸಾಕಷ್ಟು ಸುತ್ತಾಡಿದ್ದಾರೆ. ಖ್ಯಾತ ಕಲಾವಿದ ಪ.ಸ.ಕುಮಾರ್ ರಕ್ಷಾಪುಟ ಬರೆದು ಕೊಟ್ಟಿದ್ದಾರೆ. ಇವರೆಲ್ಲರ ಪ್ರೀತಿ ದೊಡ್ಡದು. ನನ್ನ ಬಗ್ಗೆ ಇರುವ ಅಭಿಮಾನಕ್ಕೆ ಕೃತಜ್ಞತೆಯ ಮಾತೊಂದನ್ನು ಬಿಟ್ಟು ಮತ್ತೇನು ಹೇಳಲು ಸಾಧ್ಯ?

ಇಲ್ಲಿ ಬರುವ ವಿಚಾರಗಳು ನಾನು ನೆನಪಿನಿಂದ ಮಾತ್ರ ಹೇಳಿದ್ದಾಗಿದೆ. ನನಗೆ ಗೊಂದಲದಲ್ಲಿರುವ ಅಥವಾ ಪೂರ್ಣವಾಗಿ ಗೊತ್ತಿಲ್ಲದಿರುವ ವಿಚಾರಗಳನ್ನು ಹೇಳಲಿಕ್ಕೆ ಹೋಗಿಲ್ಲ. ಹಾಗೂ ಇಲ್ಲಿ ಬರುವ ವ್ಯಕ್ತಿ ಮತ್ತು ಘಟನೆಗಳು ನಾನು ನೋಡಿದ್ದು ಮಾತ್ರವಾಗಿದೆ. ಅದೇ ವ್ಯಕ್ತಿ ಅಥವಾ ಘಟನೆಗಳು ಬೇರೆಯವರ ಕಣ್ಣಿನಲ್ಲಿ ಭಿನ್ನವಾಗಿ ಕಂಡರೆ ಆಶ್ಚರ್ಯವಿಲ್ಲ. ಹೀಗಾಗಿ ಓದುಗರು ಇಲ್ಲಿನ ಪರಿಸರವನ್ನು ವ್ಯಕ್ತಿಯೊಬ್ಬರ ಹಿನ್ನೆಲೆಯೆಂದೇ ಭಾವಿಸಿ ಅರಿತುಕೊಳ್ಳಬೇಕಾಗಿ ವಿನಂತಿ.

ನನ್ನ ಬರಹದ ಮೊದಲ ಪ್ರಯತ್ನದ ತೀರ್ಪುಗಾರರು ನೀವು ಮಾತ್ರ.

ದಿನಾಂಕ 15-8-1987
2120, ಸೋಮೇಶ್ವರಪುರಂ ಎನ್.ಮಲ್ಲಪ್ಪ
ತುಮಕೂರು-2

# ಪುಸ್ತಕಕ್ಕೆ ಮೊದಲು

ಅದೊಂದು 1983ರ ಏಪ್ರಿಲ್ ಮೊದಲ ವಾರವಿರಬಹುದು. ಪತ್ರಿಕೆ, ಪ್ರಕಾಶನೋದ್ಯಮ ಸರ್ಕಾರಿ ನೌಕರಿ ಮುಂತಾಗಿ ನನ್ನ ಬದುಕಿಗೆ ಬೇರೆ ಬೇರೆ ತಾತ್ಕಾಲಿಕ ತಾಣಗಳು ದೊರಕ್ಕಿದ್ದರೂ ನೆಮ್ಮದಿ ಕಾಣದೆ ತೊಳಲಾಡುತ್ತಿದ್ದೆ. ಅಂತಹ ಸಂದರ್ಭದಲ್ಲೆ ನಮ್ಮ ಕುಟುಂಬಕ್ಕೆ ಶ್ರೀರಕ್ಷೆಯಾಗಿದ್ದ ಗಾಂಧಿವಾದಿ, ಸಾಹಿತಿ, ತತ್ವಗಳನ್ನು ಉಪದೇಶಕ್ಕಲ್ಲದೆ ಆಚರಣೆ ಸಾಧ್ಯ ಎಂದು ನಿರೂಪಿಸಿದ ದಿವಂಗತ ಜಿ.ವಿ.ನಾರಾಯಣ ಮೂರ್ತಿ ನನ್ನನ್ನು ಕರೆದು ''ಅಯ್ಯೋ ಮಗುವೆ, ಹೀಗೆ ನಾನಾ ಕಡೆ ಓಡಿದರೆ ಗುರಿಮುಟ್ಟಲು ಸಾಧ್ಯವೇ? ತುಮಕೂರಿಗೆ ಹೋಗಿ ನನ್ನ ಮಿತ್ರ ಮಲ್ಲಪ್ಪನವರನ್ನು ನೋಡಿ ಅವರ ಕಾಲೇಜಿನಲ್ಲೆ ಮೇಷ್ಟ್ರು ಕೆಲಸಕ್ಕೆ ಸೇರಿಕೋ'' ಎಂದರು. ಅವರ ಆಜ್ಞಾಧಾರಕನಾದ ನಾನು ಒಂದು ಭಾನುವಾರ ಸೋಮೇಶ್ವರಪುರಂನಲ್ಲಿರುವ ಮಲ್ಲಪ್ಪನವರ ಮನೆಗೆ ಬಂದೆ. ಹೆಸರನ್ನು ಮಾತ್ರ ಕೇಳಿದ್ದ ನನಗೆ ಖಾಸಗಿ ಕಾಲೇಜಿನ ಅಧ್ಯಕ್ಷರು ಎಂದರೆ ಏನೇನೋ ಕಲ್ಪನೆ. ಆದರೆ ಮಲ್ಲಪ್ಪನವರು ಅದಕ್ಕೆ ತದ್ವಿರುದ್ಧ. ಎಳೆತನದಿಂದಲೂ ನನ್ನನ್ನು ಬಲ್ಲವರಂತೆ ಮಾತು ಊಟ, ತಿಂಡಿ ನೀಡಬೇಕಾದರೆ ತಂದೆಯೋಪಾದಿಯ - ಗತ್ತು. ನನ್ನ ಕೆಲಸದ ಬಗ್ಗೆ ಮಾತಾಡುತ್ತಾರೆ ಎಂದುಕೊಂಡರೆ ಅವರಿಗೆ ಪ್ರಿಯವಾಗಿದ್ದ ಸಾಹಿತ್ಯ, ಖಾದಿ, ಯುವಜನಾಂಗದ ಬಗ್ಗೆ ಪ್ರಸ್ತಾಪ. ಕೊನೆಯಲ್ಲಿ ಬೀಳ್ಕೊಡುತ್ತಾ ''ಮುಂದೆ ಹೇಗಿದ್ದರೂ ಇಲ್ಲಿಗೆ ಬರುತ್ತೀಯಲ್ಲಾ, ನೋಡುವಾ'' ಎಂಬ ಸಮೀಕ್ಷಾ 'ನುಡಿ'. ಅವರ ಆಣತಿಯಂತೆ ಕಾಳಿದಾಸ ಕಿರಿಯ ಕಾಲೇಜಿನಲ್ಲೆ ಉಪನ್ಯಾಸದ ಕೆಲಸಕ್ಕೆ ಬಂದೆ. ಸಂಜೆ ಬೆಳಿಗ್ಗೆ ಅವರೊಡನೆ ಸುತ್ತಾಡುವ ಅಭ್ಯಾಸ ಮಾಡಿಕೊಂಡೆ. ಹಿರಿಯರ ಜೊತೆ ಈಗಾಗಲೇ ಮೂರು-ನಾಲ್ಕು ಅಭಿನಂದನಾ ಗ್ರಂಥವನ್ನು ತಂದಿದ್ದ ನನಗೆ ಅದನ್ನು ಮಲ್ಲಪ್ಪನವರಿಗೂ ತರುವ ಆಸೆ. ಇದನ್ನು ಕೇವಲ ಆಸೆಯಾಗಿರಿಸದೇ ನನಸಾಗಿಸಿ ಅದನ್ನು ಕಾರ್ಯರೂಪಕ್ಕಿಳಿಸಿದವರು ದಿವಂಗತ ಕೆ.ದಾಸಪ್ಪ, ಖ್ಯಾತ ಕವಿ ವಿ.ಚಿಕ್ಕವೀರಯ್ಯ, ಕಾಳಿದಾಸ ಕಿರಿಯ ಕಾಲೇಜಿನ ಪ್ರಾಚಾರ್ಯರಾದ ಕೆ.ಸಿ.ರಾಮಯ್ಯ, ಶಾಸಕ ಸಿ.ಎನ್.ಭಾಸ್ಕರಪ್ಪ ಹಾಗೂ ಕಾಳಿದಾಸ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾದ ಹನುಮಂತಣ್ಣ ಮುಂತಾದವರು. ಆ ಗ್ರಂಥ ಕೂಡ ಮಲ್ಲಪ್ಪನವರ ವಿವಿಧ ಮುಖಗಳನ್ನು ಚಿತ್ರಿಸುತ್ತದೆಂಬ ನಂಬಿಕೆ ಇರಲಿಲ್ಲ. ಅದರಲ್ಲೂ ಮಲ್ಲಪ್ಪನವರು ಯಾವುದೇ ಭಾಜ-ಭಜಂತ್ರಿ ಇಲ್ಲದೇ ನಿಶ್ಯಬ್ದವಾಗಿ ಕೆಲಸ ಮಾಡಿದವರು. ಕೆಲಸದಲ್ಲಿ

ಮಲ್ಲಪ್ಪನವರ ಅಳುಕನ್ನು ಮಾಯ ಮಾಡಿ ಈ ಗ್ರಂಥಕ್ಕೆ ಸೌಂದರ್ಯ ಹಾಗೂ ನಿರ್ದಿಷ್ಟತೆಯನ್ನು ತಂದು ಕೊಟ್ಟವರು ಬೆಂಗಳೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ನಿರ್ದೇಶಕರಾದ ಹೆಚ್.ಆರ್.ದಾಸೇಗೌಡ ಅವರು. ಪ್ರಾಮಾಣಿಕತೆಯೊಂದೇ ಮನುಷ್ಯನ ವ್ಯಕ್ತಿತ್ವದ ಅಳತೆಗೋಲೆಂದು ಭಾವಿಸಿ ಈ ಗ್ರಂಥಕ್ಕೆ ಅಭಿಮಾನದ ನುಡಿ ಬರೆದು ಕೊಟ್ಟವರು ಕರ್ನಾಟಕದ ಹಿರಿಯ ವ್ಯಕ್ತಿ ಕಡಿದಾಳ್ ಮಂಜಪ್ಪನವರು. ಮಲ್ಲಪ್ಪನವರ ಬದುಕನ್ನು ಉತ್ಕೃಷ್ಟವಾಗಿ ಪ್ರೀತಿಸಿ ಈ ಗ್ರಂಥದ ತಯಾರಿಕೆಗೆ ಒತ್ತಾಯ ಮಾಡುತ್ತಿದ್ದವರು ನನ್ನ ತಾಯಿ ಎಸ್.ಎನ್.ಸರೋಜಮ್ಮ. ಈ ಗ್ರಂಥ ಪೂರ್ಣಗೊಳ್ಳಲು ನಮಗೆ ನೆರವಾದವರು ಎಸ್.ಕೆ.ವೇಣುಗೋಪಾಲ್, ಟಿ.ಎಂ.ನಂಜರಾಜ್, ಟಿ.ಎಂ.ಶಂಕರ್ ಟಿ.ಎಂ.ಕುಮಾರ್ ಮುಂತಾದವರು. ಈ ಗ್ರಂಥದ ಒಳಿತೆಲ್ಲಾ ಅವರುಗಳಿಗೆ ಸೇರಿದ್ದು.

ಮಲ್ಲಪ್ಪನವರ ಮೇಲೆ ಶುದ್ಧ ಪ್ರೀತಿ ಇರಿಸಿರುವ ನಾಗರಾಜ ಮುದ್ರಣಾಲಯದ ಮಾಲೀಕರು, ಸ್ನೇಹ ಜೀವಿಗಳು ಹಾಗೂ ಸಾಹಿತ್ಯಾಸಕ್ತರಾದ ಶ್ರೀ ಕೃಷ್ಣಮೂರ್ತಿಗಳು ತುಂಬಾ ಆಸಕ್ತಿಯಿಂದ ಇದನ್ನು ಅಚ್ಚು ಮಾಡಿದ್ದಾರೆ. ನನ್ನ ಬೇಜವಾಬ್ದಾರಿತನದಿಂದ ಗ್ರಂಥದಲ್ಲಿ ಮುದ್ರಣ ದೋಷಗಳು ಸಾಕಷ್ಟಿವೆ. ಅದಕ್ಕೆ ಕ್ಷಮೆ ಕೋರುತ್ತಾ ಮರು ಮುದ್ರಣದಲ್ಲಿ ಇದನ್ನು ಸರಿಪಡಿಸುತ್ತೇನೆಂದು ವಿನಮ್ರವಾಗಿ ಸೂಚಿಸಬಯಸುತ್ತೇನೆ. ಈ ಗ್ರಂಥದ ಸಿದ್ಧತೆಯ ಸಮಯದಲ್ಲಿ ನೆರವಾದ ಅಂದರೆ ಹಸ್ತಪ್ರತಿ ಸಿದ್ಧಮಾಡಿ ಕೊಟ್ಟ, ಎಸ್.ಕೆ.ಸುಬ್ಬಲಕ್ಷ್ಮಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಜಿ.ಶಿವಣ್ಣ, ಚಂದನ ಪ್ರಿಂಟರ್ಸ್‌ನ ಶ್ರೀನಿವಾಸಮೂರ್ತಿ, ಬೆಂಗಳೂರು ಪ್ರೆಸ್ಸಿನ ವಿಜಯಕುಮಾರ್, ಅಂದವಾಗಿ ರಕ್ಷಾಪುಟ ಮುದ್ರಿಸಿಕೊಟ್ಟ ಪ್ರಿಸಿಷನ್ ಫೋಟೋಟೈಪ್ ಸರ್ವೀಸಿನ ಕೆ.ಜಿ.ಭಾಸ್ಕರ ಅವರಿಗೆ ಕೃತಜ್ಞತೆಗಳು.

ಮಲ್ಲಪ್ಪನವರ ಕಾಯಕ ತತ್ವದ ಬದುಕು ನನ್ನಲ್ಲಿ ತುಸು ಆಸಕ್ತಿ ಹಾಗೂ ಮಾರ್ಗದರ್ಶನವನ್ನು ನೀಡಿದೆ. ನನ್ನಂತೆ ಇತರೇ ಯುವಕರಿಗೂ ಇದು ಪ್ರೇರಣೆ ನೀಡಬಲ್ಲುದೆ?

**ಕೆ.ಆರ್.ಕಮಲೇಶ್**

ಸ್ಥಳ: ಬೆಂಗಳೂರು ಸಂಪಾದಕರು

ದಿನಾಂಕ: 15-8-1987 ಯುಜವನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ

# ಎರಡನೆಯ ಮುದ್ರಣ

ಸುಮಾರು ಎರಡು ವರ್ಷಗಳ ಹಿಂದಿನ ಮಾತು. ಅಂದರೆ 1987ರಲ್ಲಿ ತುಮಕೂರಿನಲ್ಲಿ ನಡೆದ ಸರಳ ಸಮಾರಂಭದಲ್ಲಿ ಈ ಪುಸ್ತಕ ಬಿಡುಗಡೆಯಾಯಿತು. ಸಚಿವರುಗಳಾದ ಶ್ರೀಯುತರಾದ ವಿ.ಎಲ್.ಪಾಟೀಲ್, ಸಿದ್ಧರಾಮಯ್ಯ, ಶ್ರೀ ಲಕ್ಷ್ಮಿನರಸಿಂಹಯ್ಯ ಹಾಗೂ ಉಪಸಭಾಪತಿ ಎಸ್.ಮಲ್ಲಿಕಾರ್ಜುನಯ್ಯ ನವರುಗಳು ನನ್ನ ಬಗ್ಗೆ ಪ್ರೀತಿಯ ಮಳೆಗರೆದರು. ಸಾಹಿತಿಗಳಾದ ಪ್ರೊ: ಎಚ್.ಜೆ.ಲಕ್ಕಪ್ಪಗೌಡ ಹಾಗೂ ಪ್ರೊ: ಹೆಚ್.ಆರ್.ದಾಸೇಗೌಡ ಅವರು 'ಹಳೆಯ ಮೈಸೂರು ಪ್ರಾಂತ್ಯದ ಸುಸಂಸ್ಕೃತ ದಿನಗಳನ್ನು ದಾಖಲೆ ಮಾಡಿರುವ ಗ್ರಂಥವಿದು' ಎಂದರು, ನನಗೋ ಎದೆಯೊಳಗಿನ ಅಳುಕು ಮಾಯವಾಗಿರಲಿಲ್ಲ. 'ಪ್ರಜಾಮತ'ದಲ್ಲಿ ಪ್ರೊ: ಎಲ್.ಎಸ್.ಶೇಷಗಿರಿರಾವ್, 'ಪ್ರಜಾವಾಣಿ'ಯಲ್ಲಿ ಪ್ರೊ: ಸುಮತೀಂದ್ರ ನಾಡಿಗ್ 'ಶೂದ್ರ'ದಲ್ಲಿ ಶ್ರೀ ಕೆ.ಬಿ.ಸಿದ್ಧಯ್ಯ ಹಾಗೂ ಅನಂದಮೂರ್ತಿ ಅವರು ಈ ಪುಸ್ತಕವನ್ನು ಮೆಚ್ಚಿದರು. ಇದರ ಜೊತೆಗೆ ಕನ್ನಡನಾಡಿನ ಸಹೃದಯರು ಈ ಗ್ರಂಥದ ಬಗ್ಗೆ ಮೆಚ್ಚಿಗೆಯನ್ನೇ ವ್ಯಕ್ತಪಡಿಸಿದ್ದಾರೆ. 'ಆತ್ಮಕತೆ'ಯಂತಹ ಗ್ರಂಥ ಕನ್ನಡದಲ್ಲಿ ಇಷ್ಟು ಬೇಗನೆ ಎರಡನೆಯ ಮುದ್ರಣಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಪರಿಶೀಲಿಸಬೇಕಾಗಿ ಕೋರುತ್ತೇನೆ.

ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಮುದ್ರಣ ವೆಚ್ಚಕ್ಕಾಗಿ ಎರಡು ಸಾವಿರ ರೂಪಾಯಿಗಳನ್ನು (ರೂ.2,000-00) ಮಂಜೂರು ಮಾಡಿದೆ.

ನಾನೊಬ್ಬ ಹಳ್ಳಿಯಿಂದ ಬಂದವ. ತಂದೆ-ತಾಯಿಗಳ ಹಾಗೂ ಪರಿಸರದಿಂದ ಒಂದಿಷ್ಟು ಬದುಕಲು ಕಲಿತವನು. ಹೀಗೆ ಬದುಕಿದ ನನ್ನನ್ನು ಕೂಡ ಮಾನ್ಯ ಮಾಡಿದ ಸಮಾಜಕ್ಕೆ ಹಾಗೂ ಆ ಅನುಭವ ಕೃತಿರೂಪದಲ್ಲಿ ಬಂದಾಗ ಓದಿ ಮೆಚ್ಚಿದ ಸಹೃದಯರಿಗೆ ನನ್ನ ಅನಂತಾನಂತ ವಂದನೆಗಳು. ಅವರುಗಳ ಅಗಾಧವಾದ ಅಭಿಮಾನದ 'ಋಣ' ನನ್ನ ಮೇಲಿದೆ.

ಎರಡನೆಯ ಮುದ್ರಣಕ್ಕೆ ಶ್ರಮಿಸಿದವರು ನನ್ನ ಮಗಳು ಚಿಕ್ಕಮ್ಮ, ಅಳಿಯ ಹೆಚ್.ಗಂಗಯ್ಯ, ಯುವಕರ್ನಾಟಕ ಸಂಪಾದಕರಾದ ಕಮಲೇಶ್ ಹಾಗೂ ಮಗ ಟಿ.ಎಂ.ನಂಜರಾಜು ಅವರುಗಳು. ರಂಗಮ್ಮ ಮಲ್ಲಪ್ಪ ಟ್ರಸ್ಟ್‌ನವರೇ ಎರಡನೆಯ ಮುದ್ರಣದ ಜವಾಬ್ದಾರಿ ಹೊತ್ತಿದ್ದಾರೆ. ಈ ಸಾರಿ ಅಂದವಾಗಿ

ಮುದ್ರಿಸಿಕೊಟ್ಟವರು ಭಾರತಲಕ್ಷ್ಮೀ ಪ್ರೆಸ್, ಬಳೇಪೇಟೆ, ಬೆಂಗಳೂರು. ಈ ಎಲ್ಲ ಮಹನೀಯರಿಗೂ ಮತ್ತೊಮ್ಮೆ ಕೃತಜ್ಞತಾ ಪೂರ್ವಕವಾದ ವಂದನೆಗಳು.

ತುಮಕೂರು
ದಿನಾಂಕ 28-12-1989 **ಎನ್.ಮಲ್ಲಪ್ಪ**

# ಪರಿವಿಡಿ


೧. ಮುನ್ನುಡಿ
೨. ಅಭಿಮಾನದ ಮಾತು
೩. ನನ್ನ ಮಾತು
೪. ಪುಸ್ತಕಕ್ಕೆ ಮೊದಲು
೫. ಎರಡನೆಯ ಮುದ್ರಣ
೬. ಚಿತ್ರಗಳು


| ಅಧ್ಯಾಯಗಳು | ಪುಟಗಳು |
|---|---|
| ೭. ಮುಂಬಾಗಿಲು | ೧ |
| ೮. ಮಡಿಲು | ೩ |
| ೯. ಬೆಳಕು | ೩೩ |
| ೧೦. ಅಲೆದಾಟ | ೪೭ |
| ೧೧. ಆಸರೆ | ೫೩ |
| ೧೨. ಸೊಸೈಟಿ ಇನ್ಸ್‌ಪೆಕ್ಟರ್ | ೫೬ |
| ೧೩. ಅಮಲ್ದಾರ್ | ೧೦೭ |
| ೧೪. ತುಮಕೂರು ಗ್ರಾಮಾಂತರ ಕೈಗಾರಿಕಾ ಇಲಾಖೆ | ೧೩೪ |
| ೧೫. ತುಮಕೂರು - ೨ (ಅಸಿಸ್ಟೆಂಟ್ ಕಮೀಷನರ್) | ೧೪೪ |
| ೧೬. ಖಾದಿ ಗ್ರಾಮೋದ್ಯೋಗ ಮಂಡಳಿ | ೧೫೫ |
| ೧೭. ಮೈಸೂರು ಡಿವಿಜನಲ್ ಕಮೀಷನರ್ ಆಫೀಸ್ | ೧೬೧ |
| ೧೮. ಸೆಣಸಾಟ | ೧೬೯ |
| ೧೯. ಸಮ್ಮೇಳನ | ೧೭೩ |
| ೨೦. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿ | ೧೭೬ |
| ೨೧. ಉಣ್ಣೆ ಕೈಮಗ್ಗದ ನೇಕಾರರ ಸಹಕಾರ ಸಂಘ | ೧೮೯ |
| ೨೨. ಶ್ರೀ ಕಾಳಿದಾಸ ಕೋ-ಆಪರೇಟೀವ್ ಬ್ಯಾಂಕ್ | ೨೧೬ |
| ೨೩. ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆ | ೨೨೧ |
| ೨೪. ನನ್ನ ಮನೆ | ೨೩೪ |
| ೨೫. ಕೊನೆಗೆ ಉಳಿದದ್ದೇನು | ೨೪೯ |
| ೨೬. ಅಭಿಪ್ರಾಯಗಳು | ೨೫೮ |

# ಕಳೆದ ಆ ದಿನಗಳು



ನನ್ನ ಬಾಳ ಸಂಗಾತಿ ದಿ॥ ಶ್ರೀಮತಿ ರಂಗಮ್ಮ






ಮಧುಗಿರಿ ಸ್ಥಳೀಯ ಜಮೀನು ಅಡಮಾನ ಸಹಕಾರ ಬ್ಯಾಂಕಿನ ಆಧಿಕಾರಯುಕ್ತ ಅಧ್ಯಕ್ಷನಾಗಿದ್ದಾಗ




26-9-1971 ರಂದು ತುಮಕೂರಿನಲ್ಲಿ ರಾಜ್ಯ ಕುರುಭ ಉಣ್ಣೆ ನೇಕಾರರ ಸಮ್ಮೇಳನವನ್ನು ಶ್ರೀ ಡಿ. ದೇವರಾಜ ಅರಸರವರು ಉದ್ಘಾಟನೆ ಮಾಡಲು ಆಗಮಿಸಿದಾಗ



ಕಾಳಿದಾಸ ಗೆಳೆಯರ ಬಳಗದ ವತಿಯಿಂದ ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ
ಕುರುಬರ ಸಮ್ಮೇಳನ ಜರುಗಿದಾಗ ನನ್ನ ಜೊತೆ, ಉದ್ಘಾಟನೆ ಮಾಡಿದ
ಮುಖ್ಯಮಂತ್ರಿ ರಾಮಕೃಷ್ಣಹೆಗಡೆ, ಸಚಿವರುಗಳಾದ ವಿ.ಎಲ್. ಪಾಟೀಲ್
ಮತ್ತು ಸಿದ್ದರಾಮಯ್ಯ ಹಾಗೂ ಶಾಸಕ ಕೆ. ಮಲ್ಲಪ್ಪ



ಚಿಕ್ಕನಾಯ್ಕನಹಳ್ಳಿ, ಕಂಬಳಿ ಮಾರ್ಕೆಟಿಂಗ್ ಸಹಕಾರ ಸಂಘದ ಪ್ರಥಮ ವಾರ್ಷಿಕ ಮೀಟಿಂಗು ನಡೆದಾಗ
ಹಿಂದುಳಿದ ಪ್ರಮುಖ ಮುಖಂಡರಾದ ದಿ ॥ ನಿಳಗಿರಿ ಸಂಜೀವಯ್ಯನವರು ಮತ್ತು ತುಮಕೂರು
ನಗರ ಸಭೆಯ ವೈಸ್ ಪ್ರೆಸಿಡೆಂಟ್‌ರಾದ ದಿ ॥ ಬಿ. ಮಲ್ಲಪ್ಪರವರೊಂದಿಗೆ (1942)



ಸಹಾಯ ಧನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ನನ್ನೊಡನೆ ದಿ॥ ಜಿ.ವಿ. ನಾರಾಯಣಮೂರ್ತಿ ಹಾಗೂ ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ॥ ಶಿವಕುಮಾರಸ್ವಾಮಿಗಳು



ಹೂವು ನನಗೆ ಭಾರವಾಗಿ ಕಂಡ ದಿನ

# ಮುಂಬಾಗಿಲು

ಬದುಕು ಒಂದು ಚಿತ್ರ-ವಿಚಿತ್ರಗಳ ಸಂಮಿಶ್ರಣವಲ್ಲವೆ? ನಾವು ಯಾವುದನ್ನು ಮಾಡಿಯೇ ತೀರುತ್ತೇವೆ ಎನ್ನುತ್ತೇವೆಯೋ ಅದು ಕೆಲವೊಮ್ಮೆ ಆಗಲಾರದು. ಬೇಡದ ವಿಷಯಗಳು ಸುಲಭವಾಗಿ ಕೈಗೂಡಬಹುದು. ಎರಡನ್ನೂ ನಮ್ಮ ಖಾತೆಗೆ ಸೇರಿಸಿಕೊಂಡು 'ನಾನು ಇದನ್ನು ಸಾಧಿಸಿದೆ' 'ಇದು ನನಗೆ ಕೈ ಕೊಟ್ಟಿತು' ಎಂದು ಕೊರಗುವುದುಂಟು. 'ಉಳುವುದು ಬಿತ್ತುವುದು ನಮ್ಮಿಚ್ಛೆ', 'ಬೆಳೆಯುವುದು ಬಿಡುವುದು ದೈವೇಚ್ಛೆ' ಎಂಬ ಸೂಕ್ತಿ ನೆನಪಿನಲ್ಲಿದ್ದರೂ ಆಚರಣೆಗೆ ತರುವುದು ಕಷ್ಟಸಾಧ್ಯವಾದ ಮಾತು. ಈ ತರಹದ ನಿರ್ಲಿಪ್ತತೆಗೆ ನಮ್ಮ ಅಹಂಕಾರ ನಮ್ಮನ್ನು ಬಿಡುವುದಿಲ್ಲ. ಆದರೆ ಸತ್‌ಶಕ್ತಿಗಳು ಮಾತ್ರ ಈ ಅಹಂಕಾರವನ್ನು ಅದುಮುತ್ತಲೇ ಇರುತ್ತವೆ. ಹೀಗೆ ಬದುಕು ಒಳಿತು ಕೆಡುಕುಗಳ ಸಂಮಿಶ್ರಣವೆನ್ನಬಹುದು. ಇವುಗಳ ನಡುವೆ ಒಂದಿಷ್ಟು ಕೆಲಸ ಕಾರ್ಯಗಳು. ವಯಸ್ಸಾದಂತೆಲ್ಲಾ ಅವುಗಳನ್ನು ಮೆಲುಕು ಹಾಕಿದಾಗ ಬದುಕಿನ ಏಳು-ಬೀಳು ಅರಿವಾಗುತ್ತದೆ. ಸರಿಯಾದ ಅರ್ಥದಲ್ಲಿ ಇದು ಆತ್ಮವಿಮರ್ಶೆಯಾಗದಿದ್ದರೂ ಗತ ಕಾಲದ ಬದುಕಿನ ಘಟನೆಗಳು ಕಣ್ಮುಂದೆ ಸುಳಿಯುತ್ತವೆ. ಜೀವನದಲ್ಲಿ ಮೂಡಿದ ಸನ್ನಿವೇಶಗಳು, ವ್ಯಕ್ತಿತ್ವ ರೂಪಿಸಿದ ವ್ಯಕ್ತಿಗಳು, ಅರೆಕೊರೆಯನ್ನು ಅಮೂರ್ತ ರೂಪದಿಂದ ತುಂಬಿದ ವಿಭೂತಿ ಪುರುಷರು, ಮನುಷ್ಯ ಸಹಜ ಶಕ್ತಿ-ದೌರ್ಬಲ್ಯದಿಂದ ನಾವೆಸಗಿದ ಒಳಿತು ಕೆಡುಕುಗಳು ಗೋಚರಿಸುತ್ತವೆ. 'ಅರಿವೇ ಗುರು' ಎಂಬ ಶರಣ ವಾಕ್ಯ ಸಂಪೂರ್ಣವಾಗಿ ಅರ್ಥವಾಗದಿದ್ದರೂ ನಮ್ಮ ಬದುಕಿನ ಮೇಲ್ಪದರಗಳು ತಿಳಿಯುತ್ತವೆ. ಇದು ಎಲ್ಲಾ ವ್ಯಕ್ತಿಗಳ ಬದುಕಿಗೂ ಅನ್ವಯಿಸುವಂತಹದು. ಮಹಾ ಚೇತನದ ಬದುಕು ಆ ಯುಗಕ್ಕೆ ಮಾತ್ರ ಸ್ಫೂರ್ತಿ ಕೊಡದೆ ಮುಂದಿನ ಹಲವಾರು ಯುಗಗಳಿಗೂ ಸ್ಫೂರ್ತಿದಾಯಕವೆನಿಸುತ್ತದೆ. ವ್ಯಾಸ, ವಾಲ್ಮೀಕಿ, ಅರಿಸ್ಟಾಟಲ್, ಟಾಲ್‌ಸ್ಟಾಯ್, ಗಾಂಧಿ ಮುಂತಾದವರನ್ನು ಈ ವರ್ಗದಲ್ಲಿ ಹೆಸರಿಸಬಹುದು. ಮೌಲ್ಯಾಧಾರಿತ ಬದುಕನ್ನು ನಡೆಸಿ ತಮ್ಮ ಪರಿಸರದಲ್ಲಿರುವವರ ಮೇಲೆ ನಿಚ್ಚಳ ಪ್ರಭಾವ ಬೀರುವ ವ್ಯಕ್ತಿಗಳು ಕೆಲವರು ಇದ್ದಾರೆ. ಜಾರ್ಜ್‌ವಾಷಿಂಗ್‌ಟನ್, ಅಬ್ರಹಾಂ ಲಿಂಕನ್, ಸುಭಾಷ್‌ಚಂದ್ರಬೋಸ್, ವಿಶ್ವೇಶ್ವರಯ್ಯ, ಅಂಬೇಡ್ಕರ್, ಮಾವೋತ್ಸೆ ತುಂಗ್, ಜಯಪ್ರಕಾಶ್ ನಾರಾಯಣ್ ಮುಂತಾದವರು ಈ ವರ್ಗಕ್ಕೆ ಸೇರ್ಪಡೆಯಾಗುತ್ತಾರೆ. ಕೊನೆಯದಾಗಿ ತಮ್ಮ ಬದುಕನ್ನು ನೇರವಾಗಿಸಲು

ನಿರಂತರ ಹೋರಾಟ ನಡೆಸಿ, ಅನೇಕ ದೌರ್ಬಲ್ಯಗಳ ನಡುವೆಯೂ ಒಂದಿಷ್ಟು ಕೆಲಸ ಮಾಡಿದವರು ಇದ್ದಾರೆ. ಮೇಲಿನ ವರ್ಗದವರು ಸೀಮಿತ ಸಂಖ್ಯೆಯಲ್ಲಿದ್ದರೆ, ಇವರದು ಧಾರಾಳವೆಂದು ಹೇಳಬಹುದಷ್ಟಿದೆ. ಆನೆಯ ಬದುಕು ಮಾತ್ರ ದಾಖಲೆಗೆ ಯೋಗ್ಯವೆ? ಕಾಡಿನಲ್ಲಿ ಶ್ರೀಗಂಧದ ಮರವೊಂದಿದ್ದರೆ ಸಾಕೆ? ಮಲ್ಲಿಗೆ ಮಾತ್ರ ಮುಡಿಯಲು ಯೋಗ್ಯವೆ? ಧ್ಯೇಯನಿಷ್ಠೆ, ಸತತ ಪ್ರಯತ್ನ, ಪ್ರಾಮಾಣಿಕತೆ, ಸಮಾಜದ ಜೀವನಾಡಿಯ ಜೊತೆ ಸ್ಪಂದನ ಹಾಗೂ ಕಷ್ಟಗೈಮೆಯುಳ್ಳ ಪ್ರತಿಯೊಂದು ಬದುಕೂ ದಾಖಲೆಗೆ ಅರ್ಹವೆಂದೇ ನನ್ನ ನಂಬಿಕೆ.

# ಮಡಿಲು

ಏಳು ದಶಕಗಳಿಗೂ ಮೀರಿದ ನನ್ನ ಬದುಕನ್ನು ನೆನೆದಾಗ ಒಂದು ಕ್ಷಣ ವಿಸ್ಮಯದಿಂದ ಮೂಕನಾಗುತ್ತೇನೆ. ಎಷ್ಟು ಬೇಗ ಕಾಲ ಚಕ್ರ ಉರುಳಿದೆ. ನಮ್ಮವ್ವ ಮಾಡುತ್ತಿದ್ದ ಹನಗೊನೆ ಸೊಪ್ಪಿನ ಎಸರು ಹಾಗೂ ಕೋಳಿ ಸಾರಿನ ರುಚಿಯನ್ನು ನನ್ನ ನಾಲಿಗೆ ಇನ್ನೂ ಮರೆತಿಲ್ಲ. ಆದರೆ ಆ ದಿನಗಳು ನೆನಪಿನಿಂದ ಮರೆಯಾಗುತ್ತಿವೆ. ನಮ್ಮೂರಿನ ಸುತ್ತಮುತ್ತಲಿದ್ದ ಆ ಮಾವಿನ ತೋಪೆಲ್ಲಿ? ನಗರಪ್ರದೇಶಕ್ಕೆ ಹತ್ತಿಕೊಂಡಿದ್ದರೂ ಅಚ್ಚ ಗ್ರಾಮೀಣ ಪರಿಸರದಿಂದಾಗಿ ಸರಳ ಮನಸ್ಸಿನ ಆ ಜನಗಳೆಲ್ಲಿ? ಮತ ಮೌಢ್ಯದಿಂದ ಆಳುದ್ದ ವ್ಯಕ್ತಿಗಳು ಭಯಭೀತರಾಗಿ ಮೂಲೆ ಹಿಡಿಯುವ ಕಾಲವನ್ನು ಕಾಣಲಿಕ್ಕೆ ಸಾಧ್ಯವೇ? ಊರೊಟ್ಟಿನ ಕೆಲಸವೆಂದು ನಿಷ್ಕಾಮದಿಂದ ದುಡಿಯುತ್ತಿದ್ದ ವ್ಯಕ್ತಿಗಳನ್ನು ಕಾಣಲಾಗುವುದೆ? ನೆನಪಿನಾಳದಲ್ಲಿ ಮಾತ್ರ ಅವರನ್ನು ಗುರುತಿಸಲಿಕ್ಕೆ ಸಾಧ್ಯ ಉಂಟು.

ನನ್ನ ತಾತ ಕೋಟೆ ಮಲ್ಲಯ್ಯ. ಗುಬ್ಬಿ ತಾಲ್ಲೂಕಿನ ಮೂಗನಾಯಕನ ಕೋಟೆಯಿಂದ ತುಮಕೂರಿಗೆ ಸಮೀಪದಲ್ಲಿರುವ ಅರ್ಜಿ ರಂಗಣ್ಣನ ಪಾಳ್ಯಕ್ಕೆ ಕುರಿ ಅಡ್ಡಾಡಿಸಿಕೊಂಡು ಬಂದನಂತೆ. ಅರ್ಜಿ ರಂಗಣ್ಣ ಎಂಬ ನಾಯಕ ವರ್ಗಕ್ಕೆ ಸೇರಿದ ಮನುಷ್ಯನೊಬ್ಬ ಹಿಂದೆ ಅಲ್ಲಿದ್ದನಂತೆ. ಆತನಿಂದ ಈ ಪಾಳ್ಯಕ್ಕೆ ಈ ಹೆಸರು ಬಂತೆಂದು ಹೇಳುತ್ತಾರೆ. ಆತ ಅರ್ಜಿ ಬರೆಯುವುದರಲ್ಲಿ ನಿಸ್ಸೀಮನಂತೆ. ಅಲೆಮಾರಿಯ್ಯಾಗಿ ಕುರಿ ಮಂದೆ ಹೊಡೆದುಕೊಂಡು ಬಂದ ನಮ್ಮ ತಾತ ಅಲ್ಲಿಯೇ ನೆಲೆ ನಿಂತು ತರಗು ಗುಡಿಸಿ ಗುಡಿಸಲೊಂದನ್ನು ಹಾಕಿಕೊಂಡರು. ನಮ್ಮ ತಂದೆ ಬಂಡಿ ನಂಜಪ್ಪ-ತಾಯಿ ಚಿಕ್ಕಮ್ಮ; ನಮ್ಮ ತಂದೆಗೆ ಹತ್ತು ಮಕ್ಕಳು. ಎಲ್ಲವೂ ಕ್ಷುದ್ರ ದೇವತೆಗಳ ದುರಾಗ್ರಹಕ್ಕೆ ಬಲಿಯಾಗಿ ನಮ್ಮಕ್ಕ, ಅಣ್ಣ ಮತ್ತು ನಾನು ಮಾತ್ರ ಉಳಿದೆವಂತೆ. ತಿಗುಳರ ಹನುಮಕ್ಕನ ಎದೆಹಾಲು ಕುಡಿದು ನಾನು ಬೆಳೆದೆನೆಂದು ನಮ್ಮವ್ವ ಹೇಳುತ್ತಿದ್ದಳು. ನಮ್ಮ ತಾತ, ತಂದೆಯ ಕಾಲದ ಮಣ್ಣಿನ ಮಾಳಿಗೆ ಮನೆ ಶಿಥಿಲವಾಗಲು, ನಮ್ಮ ತಾಯಿ ಪಕ್ಕದಲ್ಲಿ ಒಂದು ಸಣ್ಣ ಹೊಸ ಗುಡಿಸಲೊಂದನ್ನು ಹಾಕಿಕೊಂಡಳು. ನಾನು ಮಾಳಿಗೆ ಮನೆಯಲ್ಲಿ ಹುಟ್ಟಿದ್ದು. ನಾನು ಎರಡು ವರ್ಷದ ಮಗುವಾಗಿದ್ದಾಗಲೇ ನಮ್ಮ ತಂದೆ ತೀರಿಕೊಂಡಿದ್ದರು. ನಮ್ಮ ತಂದೆ ಬಡವರಾದರೂ, ಅನಕ್ಷರಸ್ಥರಾದರೂ ಪರೋಪಕಾರದ ಗುಣವುಳ್ಳವರು. ಹೆಗಲ

ಮೇಲೆ ಒಂದು ಗುದ್ದಲಿ ಹಾಕಿಕೊಂಡು ಬೆಳಿಗ್ಗೆ ಹೊರಟರೆ ಮುಗೀತು. ಕೊರಕಲು ಸರಿಮಾಡುವುದು, ದನಕರುಗಳಿಗೆ ಗೋಕಟ್ಟೆ ನಿರ್ಮಿಸುವುದು ಅವರ ತೆವುಲಾಗಿತ್ತು. ನಮ್ಮವ್ವ ಚಿಕ್ಕಮ್ಮ ಅಚ್ಚ ಗ್ರಾಮೀಣ ಸಂಸ್ಕೃತಿಯನ್ನೆಲ್ಲಾ ಎರಕ ಹೊಯ್ದಂತಿದ್ದ ಹೆಣ್ಣು. ಬೆಳಿಗ್ಗೆ ಎದ್ದು ಆಕೆ ನೆನೆಸುತ್ತಿದ್ದ ದೇವರುಗಳು ಒಂದೇ-ಎರಡೇ, ನೂರಾರು. ಮನೆ ದೇವರು ಮೈಲಾರಲಿಂಗ, ಎರೆಕಟ್ಟೆಯಮ್ಮ, ಬನಶಂಕರಮ್ಮ, ಪಿರಿಪಟ್ಟಲದಮ್ಮ, ಕುಚ್ಚಂಗಿಯಮ್ಮ, ಕಾಳಗಟ್ಟಮ್ಮ, ಸೂರದ ಸೆಟ್ಟಳ್ಳಪ್ಪ ಇನ್ನೂ ದೊಡ್ಡ ಪಟ್ಟಿ ಇರುತ್ತಿತ್ತು. ದೇವರು ದಿಂಡರಿಗೆ ಹೋಗುವುದರ ಜೊತೆಗೆ ಸಣ್ಣಪುಟ್ಟ ಕಾಯಿಲೆಗಳಿಗೆ ನನ್ನ ತಾಯಿಯೇ ಚಿಕಿತ್ಸೆ ಮಾಡುತ್ತಿದ್ದರು. ಭೇದಿ, ಹೊಟ್ಟೆನೋವುಗಳಿಗೆ, ಒಂದೆರಡು ಒಣ ಮೆಣಸಿನ ಕಾಯಿಗಳನ್ನು ತಕ್ಕೊಂಡು ಮನಸ್ಸಿನಲ್ಲೇ ಮನೆ ದೇವರ ನೆನಸಿಕೊಳ್ಳುತ್ತಾ ಹೊಟ್ಟೆ ಮೇಲೆ ನೀವಳಿಸಿ ಬೆಂಕಿಗೆ ತಗುಲಿಸುವುದು. ಇನ್ನು ಮೈಗೆ ಇರಿಸು ಮುರಸಾಗಿ ತಲೆ ನೋವಾದರೆ ಕರಿ ಬಳೆ ಚೂರಿನಿಂದ ಕೆಂಪಗೆ ಕಾಸಿ ನೆತ್ತಿ ಸುಳಿಗೆ, ಕಿವಿ ಪಕ್ಕಕ್ಕೆ ಚುಟಿಕೆ ಹಾಕಿಸುತ್ತಿದ್ದರು. ನನಗೆ ಜ್ಞಾಪಕವಿರುವಂತೆ ನನ್ನ ಚಿಕ್ಕಂದಿನಲ್ಲಿ ಕೊರಳು-ತೋಳುಗಳಲ್ಲಿ ಒಂದೋ-ಎರಡೋ ಯಂತ್ರ ನೇತಾಡುತ್ತಲೇ ಇದ್ದವು. ಮನೆಯಲ್ಲಿ ಕಾಯಿಲೆಯಾಗಲಿ ಇನ್ನೇನಾದರೂ ಏರುಪೇರಾಗಲಿ ಕೋಳಿಯ ಕಾಲು ತೊಳೆದು ಆ ದೇವತೆಯ ಹೆಸರು ಹೇಳಿ ಬಿಟ್ಟರೇ ಆಕೆಗೆ ಸಮಾಧಾನ.

ಎಲ್ಲದಕ್ಕೂ ಕೋಳಿಯೊಂದನ್ನೇ ಬಿಟ್ಟರೆ ಹೇಗೆ? ಆಯಾ ದೇವರುಗಳ ಗ್ರೇಡು ಮೇಲೆ ಅವು ವ್ಯತ್ಯಾಸವಾಗುತ್ತಿದ್ದುದುಂಟು. ಕಾಳಗಟ್ಟಮ್ಮನಿಗೆ ಕೋಣ, ಸರಪಣಿ ದೇವರಿಗೆ ಹೊತ, ಎರಕಟ್ಟೆಯಮ್ಮನಿಗೆ ಕೋಳಿ ಇತ್ಯಾದಿ. ನಮ್ಮವ್ವನಿಗೆ ದಾಸಯ್ಯನವರ ಮೇಲೆ ಅಪರಿಮಿತವಾದ ಭಕ್ತಿ. ವರ್ಷಕ್ಕೊಮ್ಮೆ ದಾಸಯ್ಯರುಗಳಿಗೆ ಎಡೆ ಇಕ್ಕುವುದನ್ನು ಆಕೆ ತಪ್ಪಿಸುತ್ತಿರಲಿಲ್ಲ. ಹರಿಸೇವೆಯ ಜೊತೆ ದೇವದೂತರೆಂದು ಪರಿಗಣಿತರಾದ ಅವರನ್ನು ವಿಶೇಷವಾಗಿಯೇ ಉಪಚರಿಸಲಾಗುತ್ತಿತ್ತು. ಊರಿನವರೆಲ್ಲಾ ಸೇರಿ ದಾಸಯ್ಯನಿಗೆ ನಡೆದುಕೊಳ್ಳುತ್ತಿದ್ದರು. ಮಕ್ಕಳಾಗದ ಹೆಂಗಸರಿಗೆ, ಕಾಯಿಲೆ ಕಸಾಲೆ ಇದ್ದ ಹೆಂಗಸರಿಗೆ ಎಡೆ ಹಾಕುತ್ತಿದ್ದ ದಿನ ದಾಸಯ್ಯ ಪೂಜೆ ಹಾಕುತ್ತಿದ್ದನು. ಅಗಸ ನಡೆಮುಡಿ ಹಾಸಿಕೊಳ್ಳುತ್ತಾ ಹೋಗಬೇಕು. ನೂರಾರು ಕಾಯಿ, ಬಾಳೆಹಣ್ಣು, ಹಲಸಿನ ಹಣ್ಣುಗಳಿಂದ ಸಿದ್ಧಪಡಿಸಿದ್ದ ರಸಾಯನವನ್ನು ಒಬ್ಬರು ಆ ಬಟ್ಟೆಯಮೇಲೆ ಇಡುತ್ತಾ ಬರಬೇಕು, ಉದ್ದನೆಯ ಮೂರುನಾಮ, ಕಚ್ಚೆಪಂಚೆ

ಉಟ್ಟ ದಾಸಯ್ಯರುಗಳು ಜಾಗಟೆ, ಶಂಖ ಶಬ್ದಗಳೊಡನೆ 'ಪರಾಕ್' 'ಹೋಪರಾಕ್' 'ಗೋವಿಂದ' ಎಂದು ಕೂಗುತ್ತ ಅದನ್ನು ತಿನ್ನುತ್ತ ಬರುತ್ತಾರೆ. ಈ ಸಮಯದಲ್ಲಿ ಅವರ ಕರುಣೆಗಾಗಿ ಕಾದಿದ್ದ ಮಡಿಯುಟ್ಟ ಹೆಂಗಸರುಗಳು ಎಡೆ ಹತ್ತಿರನೆ ಕುಳಿತಿರುತ್ತಾರೆ. ದಾಸಯ್ಯ ಆ ಹೆಂಗಸರ ಮೇಲೆ ಬಿದ್ದು ಒದ್ದಾಡಿ ಕಚ್ಚಿ ರಸಾಯನ ತಿನ್ನುತ್ತ ಮುಂದಕ್ಕೆ ಹೋಗುತ್ತಾನೆ, ಆ ಹೆಂಗಸರುಗಳು ಮತ್ತು ಇತರರು ಆತ ತಿಂದುಳಿದ ರಸಾಯನವನ್ನು ಪ್ರಸಾದವೆಂದು ತಿನ್ನುತ್ತಿದ್ದರು.

ನಮ್ಮ ತಂದೆ ಸತ್ತ ನಂತರ ನಮ್ಮವ್ವನೇ ನಮ್ಮ ಮೂವರನ್ನು ಸಾಕಿದಳು. ಊರಿನವರೆಲ್ಲಾ ಆಕೇನ ಅವ್ವ, ಅಕ್ಕ ಎಂದೇ ಮಾತನಾಡಿಸುತ್ತಿದ್ದರು. ಸಂಜೆ ಆಯಿತೆಂದರೆ ಉಂಡ ಕೆಲವು ಜನ ನಮ್ಮ ಗುಡಿಸಲಮನೆ ಜಗುಲಿಯಲ್ಲಿ ಸೇರುತ್ತಿದ್ದರು. ಅವರ ಮಾತಿಗೆ ವಿಷಯ ಯಾವುದು-ಗಾಳಿ, ದೆವ್ವ, ಪಿಶಾಚಿ, ಭೂತ, ದೇವರು ಮುಂತಾದವುಗಳೆ. ಪ್ರತಿಯೊಬ್ಬರು ಇವುಗಳೊಡನೆ ತಮ್ಮ ಅನುಭವಗಳನ್ನು ರೋಮಾಂಚಕಾರಿಯಾಗಿ ಪೈಪೋಟಿಯಿಂದ ವರ್ಣಿಸುತ್ತಿದ್ದರು, ಬಾಲಕನಾದ ನನಗೆ ಭಯ, ಆದರೆ ಕೇಳಬೇಕೆಂಬ ಕುತೂಹಲ. ಆ ಗುಂಪಿನಲ್ಲಿ ಕೆಲವರು ನಮ್ಮ ಮನೆಯ ಪಕ್ಕದ ನಾಡ ಹೆಂಚಿನ ಮನೆಯಲ್ಲಿ ಬೀಡಿಗಳು ಜೂಜು ಕಟ್ಟಿ ಇಸ್ಪೀಟಾಡುತ್ತಿದ್ದರು. ಬೀಡಿಗಳ ಹೊಗೆಯನ್ನು ಹೆಮ್ಮೆಯಿಂದ ದಮ್ಮೆಳೆಯುತ್ತಾ ಇಸ್ಪೀಟೆಲೆ ಬಿಸಾಕುತ್ತಿದ್ದ ಅವರ ಮೋಡಿಗೆ ನಾ ಬೆರಗಾಗುತ್ತಿದ್ದೆ. ಹಾಗೆಯೇ ಒಂದು ದಮ್ಮು ಎಳೆದರೆ ದೊಡ್ಡವನಾಗಿ ಬಿಡುತ್ತೇನೆ ಎನ್ನುವ ಆಸೆ. ಹಾಗೆ ಅವರು ಸೇದಿ ಬಿಸಾಕಿದ ಮೋಟು ಬೀಡಿಯನ್ನು ಸಂಗ್ರಹಿಸಿ ಹಚ್ಚಿ ಸರಿಯಾಗಿ ದಮ್ಮೆಳೆಯಲು ಬಾರದೆ ಕಣ್ಣು ಮೂಗಿನಲ್ಲಿ ನೀರು ತರಿಸಿಕೊಂಡಿದ್ದೂ ಉಂಟು.

ನಮಗಿದ್ದುದು ಮೂರೂವರೆ ಎಕರೆ ಜಮೀನು. ರಾಗಿ ಹುರುಳಿ ಮಾತ್ರ ಬೆಳೆಯುತ್ತಿದ್ದೆವು. ಮುದ್ದೆ, ಸೊಪ್ಪು ಅಥವಾ ಕಾಳಿನ ಎಸರೇ ನಮ್ಮ ನಿತ್ಯದ ಭಕ್ಷ್ಯ. ವಾರಕ್ಕೊಮ್ಮೆ ತುಮಕೂರು ಸಂತೆಗೆ ಬರುತ್ತಿದ್ದ ನಮ್ಮವ್ವ ನಾವು ತಿನ್ನದೆ ಕೂಡಿಡುತ್ತಿದ್ದ ತುಪ್ಪ ಅಥವಾ ಬೆಣ್ಣೆಯನ್ನು ಮಾರಿ ಉಪ್ಪು ಮೆಣಸಿನಕಾಯಿ ತರುತ್ತಿದ್ದಳು. ಅನ್ನ ವಾರದಲ್ಲಿ ಒಂದೆರಡು ದಿನ ಮಾಡುತ್ತಿದ್ದರೂ ಅದನ್ನು ಪ್ರಸಾದದಂತೆ ನೀಡಲಾಗುತ್ತಿತ್ತು. ಗಂಡನನ್ನು ಕಳೆದುಕೊಂಡ ಆ ಹೆಂಗಸು ನರಮನುಸನನ್ನು ನಂಬದೆ, ದೇವಾನುದೇವತೆಗಳೇ ತನಗೆ ರಕ್ಷಕರೆಂದು ನಂಬಿದ್ದಳು. ಯಾರಾದರೂ ಬಂದು ಕಷ್ಟ ಸುಖ ಹೇಳಿಕೊಂಡರೆ ಅಥವಾ ನಮಗೆ

ಕಷ್ಟ ಕಾರ್ಪಣ್ಯ ಬಂದರೆ "ಆ ಕುಚ್ಚಂಗಮ್ಮನೆ ರಕ್ಷಿಸಬೇಕು" "ತಾಯಿ ಕೈ ಬಿಡೋದಿಲ್ಲ" "ಇವತ್ತು ಪ್ರಸಾದ ಕೊಟ್ಟವಳೆ" ಎನ್ನುತ್ತಿದ್ದಳು. ಇನ್ನು ಸೂರ್ಯ ಹುಟ್ಟೋ ಹೊತ್ತಿಗಾಗಲೇ ಕಾಣಿಸಿಕೊಳ್ಳುತ್ತಿದ್ದ ಎತ್ತಪ್ಪ-ಜುಂಜಪ್ಪ, ಜೋಗರು ಕಣಿ ದಾಸಯ್ಯ ಹಾಗೂ ಜಂಗಮರನ್ನು ಕಂಡರೆ ಆಕೆಗೆ ಪರಮಭಕ್ತಿ. ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡು ಮರದ ತುಂಬ ರಾಗೀನೋ, ಕಾಳನ್ನೋ ಕೊಟ್ಟರೆ ಆಕೆಗೆ ಸಮಾಧಾನ. ಹಿತ್ತಲಲ್ಲಿ ಕುಂಬಳಕಾಯಿ ಬೆಳೀಲಿ ಅಥವಾ ತಿಂಗಳವರೆ ಕಾಯಿ ಬರಲಿ ಮೊದಲು ಐನೋರಿಗೆ ಕೊಟ್ಟು ಬಿಡಬೇಕು. ನಮ್ಮ ಮನೆಯಿಂದ ನಾಲ್ಕೈದು ಫರಲಾಂಗ್ ದೂರದಲ್ಲಿದ್ದ ಹೊನ್ನೇನಹಳ್ಳಿಯಲ್ಲಿ ಕುಚ್ಚಂಗಮ್ಮ ನೆಲೆಸಿದ್ದಳು. ರಾತ್ರಿ ಹೊತ್ತು ನಮ್ಮವ್ವನ ಜೊತೆ ನಾನು ಹೋಗುತ್ತಿದ್ದೆ. ಭಾರಿ ಕಗ್ಗತ್ತಲು, ಮರಗಳ ಸಾಲು ಕೊಂಬೆಗಳ ನಡುವೆ ತಿಕ್ಕಾಟ, ಸುಯ್ಯೆಂದು ಬೀಸುವ ಸುಳಿಗಾಳಿ, ನನಗಾದರೋ ಒಂದೊಂದು ಮರವು ವಿಚಿತ್ರಾಕಾರದಲ್ಲಿ ಕಾಣಿಸುತ್ತಿತ್ತು. ಗಾಳಿಯ 'ಭರ್ರೋ' ಎಂಬ ಶಬ್ದ ಇನ್ನಾವುದೋ ಅರ್ಥ ಧ್ವನಿಯಂತೆ ಭಾಸವಾಗುತ್ತಿತ್ತು. 'ಅವ್ವ ಅಲ್ನೋಡು ಏನು ಕಾಣ್ತದೆ' 'ಅವ್ವ ಇಲ್ಲಿ ಯಾರೋ ಕಿರುಚಿಕೊಳ್ಳುತ್ತಾರೆ' ಎಂದರೆ ನಾನು, "ಬಾರ್ಲ ಮಗ ಸುಮ್ಕೆ ನನ್ನ ತಾಯಿ ಕಾಪಾಡುತ್ತಾಳೆ" ಎಂತಿದ್ಲು. 'ಭೀತಿ' ಅನೈತಿಕತೆಯ ತಾಯಿ ಎಂದು ನೀತ್ಸೆ ನುಡಿದ. ಸತ್ಯ ಧರ್ಮಗಳ ರಕ್ಷಣೆಗೆ ಅದು ಸಾಧ್ಯವಾಗುತ್ತದೆಂಬ ಮಾತು ಅರೆಸತ್ಯವಾದರೂ ಮೌಢ್ಯಕ್ಕೂ, ಅದರ ಜೊತೆಗೆ ಆತನ ಅಧಃಪತನಕ್ಕೂ ಇದೇ ಕಾರಣವಾಗುತ್ತದೆ. ಈ ಮಾತನ್ನು ನಾನೇಕೆ ಹೇಳುತ್ತಿದ್ದೇನೆಂದರೆ ನಾನು ಇಂಟ್ರಿಮೀಡಿಯಟ್ ಓದುತ್ತಿರಬೇಕಾದರೆ ನನ್ನ ತಾಯಿ ನಿಧನರಾದರು. ವಯಸ್ಸೇನೋ ಆಗಿತ್ತು. ಅದಕ್ಕಿಂತ ಹೆಚ್ಚಾಗಿ ಹೊಟ್ಟೆಯ ಕಾಯಿಲೆಯಿಂದ ನರಳುತ್ತಿದ್ದರು. ಆಗ ಆಕೆ ಯಾವ ಔಷಧವನ್ನೂ ತೆಗೆದುಕೊಳ್ಳದೆ ಎಲ್ಲಾ ದೇವರುಗಳಿಗೂ ಹರಕೆ ಹೊತ್ತರು. ಒಂದು ಶುಕ್ರವಾರ ಅಮ್ಮನ ಗುಡಿಗೆ ಹೋಗಿ 'ಹೂ ಪ್ರಸಾದ ಕೇಳಿ' ತಾಯಿ ಒಲಿದಳೆಂದು ನಿಶ್ಚಿಂತಳಾಗಿ ಮಲಗಿದ ನನ್ನವ್ವ ಮತ್ತೆ ಏಳಲೇ ಇಲ್ಲ. ದೇವ-ದೇವತೆಗಳಲ್ಲಿ ಅನನ್ಯಭಕ್ತಿ, ದೇವರ ಏಜೆಂಟರೆಂದು ಕರೆಸಿಕೊಳ್ಳುವ ಜನರಲ್ಲಿ ಗಾಢವಿಶ್ವಾಸ, ಬೈಗಿನಿಂದ ಸಂಜೆಯವರೆಗೆ ಹೊಲದಲ್ಲಿ ದುಡಿಯುವ ಕಾಯಕನಿಷ್ಠೆ, ಎಲ್ಲರಲ್ಲಿ ಒಂದಾಗಿ ಬೆರೆಯುವ ಗುಣ ನನ್ನ ತಾಯಿಯದು. ಆದರೆ ಮನುಷ್ಯ ಸಹಜವಾದ ದೌರ್ಬಲ್ಯಗಳೇನೂ ಇರಲಿಲ್ಲವೆಂದೇನಲ್ಲ. ನಾನು ಸಣ್ಣೋನಾಗಿದ್ದಾಗಿನ ಮಾತು. ನಾವು ವಾಲಿಗೆ ಬೇರೆಯವರ ಹೊಲ ಮಾಡುತ್ತಿದ್ದೆವು. ಕೊನೆಯಲ್ಲಿ ಕಣದಲ್ಲಿ ಒಕ್ಕಣೆ ಮಾಡಿ

ಪಾಲು ಮಾಡುವ ಸಂದರ್ಭ. ಎರಡು ಗುಡ್ಡೆ ಮಾಡಿದ್ದೆವು. ಪಾಲುದಾರರಿಗೆ ಇರಿಸಿದ್ದ ಗುಡ್ಡೆಯಿಂದ ಒಂದು ಗೂಡೆ ರಾಗೀನ ನನ್ನೆದುರಿಗೆ ನಮ್ಮಮ್ಮ ನಮ್ಮ ಗುಡ್ಡೆಗೆ ಹಾಕಿಕೊಂಡರು. ನನಗೋ ಒಂದು ರೀತಿಯ ಕಸಿವಿಸಿ, ಈ ರೀತಿ ಮಾಡೋದು ಸರಿಯೆ ಎಂಬ ತಾಕಲಾಟ, ಆದರೆ ದೊಡ್ಡೋರಿಗೆ ಬುದ್ಧಿಗಿದ್ದಿ ಹೇಳೋದು ಸಾಧ್ಯವೆ? ಈ ತರಹದ ಲೋಭತನಕ್ಕೆ ಪ್ರೇರಣೆ ನೀಡೋದು ಯಾವುದು? ದಾರಿದ್ರ್ಯ, ಅನಂತರ ಅವಶ್ಯಕತೆ, ಹಸಿವು ಎಂಥೋರನ್ನಾದರೂ ಕೆಟ್ಟವರನ್ನಾಗಿ ಮಾಡಿ ಬಿಡುತ್ತದೆ. ಒಂದು ತುಂಡು ಹೊಲದಲ್ಲಿ ಕೇವಲ ಮುಗಿಲ ಮಳೆಯನ್ನೇ ನಚ್ಚಿ ಮೂರು ಮಕ್ಕಳನ್ನು ಸಾಕುವ ಆಕೆಯಲ್ಲಿ ಇನ್ನಾವ ಗುಣ ಬೆಳೆಯಲು ಸಾಧ್ಯ?

## ಪ್ರಾಥಮಿಕ ಶಿಕ್ಷಣ

''ವಿದ್ಯೆ ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೈವತ್ವಕ್ಕೆ ಎತ್ತುವ ಒಂದು ಸಾಧನ'' ಎನ್ನುವ ರಾಷ್ಟ್ರಕವಿ ಕುವೆಂಪುರವರ ಮಾತು ನನ್ನ ಪಾಲಿಗಂತೂ ಅಕ್ಷರಶಃ ಸತ್ಯವೆನಿಸಿದೆ. ಇಂದು ನಾನು ಯಾವುದನ್ನು ಅಜ್ಞಾನ, ಮೂಢ ನಂಬಿಕೆ, ಕಂದಾಚಾರವೆಂದು ಘಳಿಯುತ್ತಿರುವೆನೋ ಅಂತಹ ಪ್ರಜ್ಞೆ ಬರಲು ಲೌಕಿಕ ವಿದ್ಯೆಗಳ ಜೊತೆ ಸ್ವಾನುಭವಸಿದ್ಧವಾದ ಜ್ಞಾನ ಸಹ ಸಹಾಯ ನೀಡಿದೆ. ನಾನು ಶಾಲೆಗೆ ಸೇರಿದ್ದೇ ಒಂದು ಸಾಹಸವಾಯಿತು. ದನ, ಕುರಿ, ಮೇಕೆಗಳನ್ನು ಮೇಸಲು ಹೋಗುತ್ತಿದ್ದ ನನಗೆ ನಮ್ಮೂರ ನಾಯಕರ ಮಕ್ಕಳು ಠೀವಿಯಿಂದ ಸ್ಕೂಲಿಗೆ ಹೋಗುತ್ತಿದ್ದುದನ್ನು ಕಂಡರೆ ಏನೋ ಆಸೆ. ಅವ್ವ ನಾನು ಸ್ಕೂಲಿಗೆ ಹೋಗುತ್ತೇನೆಂದರೆ ಸಾಕು, ಅಳುತ್ತಾ 'ಬೇಡಪ್ಪ ಬೇಡ, ನಿನಗಿಂತ ಹಿಂದೆ ಮೂವರು ಹಿರೇರು ಇದ್ರು. ಹೋಗಿ, ಮುಸ್ಸಂಜೆ ಬಂದು ಗಡ್ಡೆ ಜ್ವರ ಬಂದು ಮಲಗ್ದೋರು ಮೇಲೇಳಲಿಲ್ಲ. ಇಸ್ಕೂಲಿಗೆ ಹೋಗಿ ನೀನೆನ್ನ ಕೈ ಬಿಡಬೇಡಪ್ಪ' ಎನ್ನುತ್ತಿದ್ದಳು. ನನಗೋ ಒಂದು ಸಾರಿಯಾದರೂ ಸ್ಕೂಲು ಮುಖ ಹೇಗಿದೆ ಎಂಬುದನ್ನು ನೋಡಬೇಕೆಂಬ ಆಸೆ. ಒಂದಿನ ನಾನು ಬಿಲ್‌ಕುಲ್ ದನ ಕಾಯೋಕೆ ಹೋಗೋದಿಲ್ಲವೆಂದು ಹಟ ಹಿಡಿದೆ. ಆಕೆ ಪರಿಪರಿ ತಿಳಿ ಹೇಳಿದರೂ ಕೇಳದಿದ್ದಾಗ ನನ್ನ ಮೊಂಡುತನಕ್ಕೆ ಬಾಗಿ ನಮ್ಮ ಪಾಳ್ಯದ ರಂಗಸಾಮಿಗೆ ಹೇಳಿ ಸ್ಕೂಲಿಗೆ ಸೇರಿಸಿದಳು. ಪ್ರೈಮರಿ ಅಂದರೆ ಮರಳಕ್ಲಾಸಿಗೆ ಸೇರಿದ್ದಾಗಿತ್ತು. ಅವ್ವನಂತೂ ಬಗೆ ಬಗೆಯ ದೇವರುಗಳು ನನ್ನನ್ನ ಕಾಯಬೇಕಂತಾ ಹರಕೆ ಹೊತ್ತಳು

ಎರೆಕಟ್ಟಮ್ಮಗೆ ಕೋಳಿ ಕುಯ್ದು ಹರಕೆ ಹೊತ್ತಳು. ಕುಯ್ದ ಮೇಲೆ ಕೋಳಿ ತಲೆ ಮೇಲೆ ನೀರು ಹನಿಕಿಸುತ್ತಾ ಅದು ಬಾಯ್ಬಾಯ್ ಬಿಟ್ಟರೆ ಮಾತ್ರ 'ಅವ್ವ' ತೃಪ್ತಳಾಗುವಳು ಎಂಬ ನಂಬಿಕೆ. ಅಂತೂ ನಮ್ಮ ತಾಯಿಯ ದೇವತೆಗಳ ಕೃಪೆಯಿಂದಲೋ ಅಥವಾ ಪ್ಲೇಗು ರೋಗ ಆ ಹೊತ್ತಿಗೆ ಹತೋಟಿಗೆ ಬಂದಿದ್ದರಿಂದಲೋ ನನಗಂತೂ ಯಾವ ರೋಗಾನೂ ಬರಲಿಲ್ಲ.

ಒಂದು ದಿನ ಸ್ಕೂಲಿಗೆ ಲೇಟಾಗಿ ಹೋದೆ. ಮೇಷ್ಟ್ರು ಗದರಿ 'ಯಾಕೋ ಲೇಟು' ಎಂದರು. ನಾನು 'ಸಾ ನಮ್ಮಕ್ಕ ಇಟ್‌ಕುದಿಯಕ್ಕಾಕಿದ್ದೀನಿ. ತಿರುವುತ್ತೀನಿ, ಬ್ಯಾಗ ಉಂಡ್ಕೊಂಡೋಗಲಾ ಅಂದ್ಲು ಅದ್ಕೆ ಹೊತ್ತಾಯ್ತು' ಎಂದೆ. ಇಡೀ ತರಗತಿ ಗೊಳ್ಳೆಂದಾಗ ನನಗೆ ಯಾಕಿಂಗ್ ನಗತಾರಂತ ಆಶ್ಚರ್ಯ. ಕೊನೆಗೆ ಮೇಷ್ಟ್ರು 'ಕೂತ್ಕೊ ಹೋಗು' ಎಂದರು. 1922ರ ತನಕ ತುಮಕೂರಿನ ಉತ್ತರ ಬಡಾವಣೆಯಲ್ಲಿದ್ದ ಮಿಷನರಿ ಪ್ರೈಮರಿ ಸ್ಕೂಲಿನಲ್ಲಿ ನನ್ನ ವ್ಯಾಸಂಗ.

ನಾನು ಸ್ಕೂಲಿಗೆ ಸೇರಿದ್ದು ಹೊಸ್ತು. ಬೇಗ ದೊಡ್ಡವನಾಗಿ ಬಿಡಬೇಕೆಂಬ ಹಂಬಲ. ನಮ್ಮ ಪಾಳ್ಯದ ಕರಿಮಲ್ಲಯ್ಯ ಒಳ್ಳೆಯಹರೆಯದ ಮನುಷ್ಯ. ಅವನನ್ನೋಡಿದರೆ ಏನೋ ಖುಷಿ ನನಗೆ. ಸ್ವಲ್ಪ ತಮಾಷೆ ಮಾಡೋ ಪ್ರವೃತ್ತಿ. ನಮ್ಮ ತಿಪ್ಪೆ ಹತ್ತಿರ ಗೊಬ್ಬರ ತುಂಬ್ತಿದ್ದ. ನನ್ನೋಡಿ 'ಲೇ ಮಗ ನೀ ಬೇಗ ದೊಡ್ಡೋನಾಗಬೇಕಾದರೆ ನಿನ್ ಬುಲ್‌ಕಾಯಿಗೆ ಕಳ್ಳಿ ಹಾಲಾಕ್ಲೆ' ಎಂದ. ನನಗೆ ಏನೂ ತಿಳೀದು. ರವಸ್ಥೋದಮೇಲೆ ಸುತ್ತಮುತ್ತಲು ಯಾರೂ ಇಲ್ಲದ್ದನ್ನು ನೋಡ್ಕೊಂಡು ಬುಲ್ಕಾಯ್ ಬಾಯ್ಗ ಕಳ್ಳಿ ಮುರಿದು ಸುರಿದೆ. ಒಂದೆರಡು ಘಂಟೆ ಕಳೆದ ಮೇಲೆ ನನ್ನ ಗೋಳು ಹೇಳತೀರದು, ಯಮಯಾತನೆ, ಉಚ್ಚೆ ಹುಯ್ದರೂ ರಕ್ತವೆ ಹೋಗ್ತಿತ್ತು. ನಮ್ಮವ್ವನ ಗೋಳು ಪಾಳ್ಯಕ್ಕೆಲ್ಲಾ ಮುಟ್ಟಿತು. ನಾನು ದುಮ್ಮಳಿಸುತ್ತಿದ್ದೆ. ಆದರೆ ವಿಷಯ ಮಾತ್ರ ತಿಳಿಸಲಿಲ್ಲ. ಹರಕೆಗಳ ಸುರಿಮಳೆ. ಬೆಸ್ತರ ಹನುಮಂತಯ್ಯನಿಂದ ಬೆಳಗ್ಗೆ ಸಾಯಂಕಾಲ ಮಂತ್ರ ಹಾಕಿಸಿಕೊಂಡಿದ್ದಾಯ್ತು. ದಿನ ಕಳೆದಂತೆ ಗುಣವಾಯ್ತು ಅನ್ನಿ.

ಇದಕ್ಕಿಂತ ಹಿಂದೆ ನಡೆದ ಸಂಗತಿಯಿದು. ಒಂದು ದಿನ, ನಾನೂ ಭಾವಮ್ಮೆದುನ ಚಿಕ್ಕಹನುಮ ಇಬ್ಬರೂ ಮನೆಯಲ್ಲಿದ್ದೆವು. ಮಟ ಮಟ ಮಧ್ಯಾಹ್ನ, ಗಾಳಿ ಬರೋ ಅಂತ ಬೀಸುತ್ತಿತ್ತು. ಒಲೆಯ ಮೇಲೆ ಬೆಂಕಿಪಟ್ಟಣ ಬಿದ್ದಿರುವುದನ್ನು ಕಂಡೆವು. ಸರಿ ಅದನ್ನು ತಕ್ಕೊಂಡು ಕೈಗೆ ಎಟಕುತ್ತಿದ್ದ ನಮ್ಮ ಹುಲ್ಲು ಜೋಪಡಿ

ಸೂರ ಹತ್ರ ಹೋಗಿ ಸೂರಿನ ಹುಲ್ಲು ಕೆದರಿ ಸೊಡ್ಡ ಮಾಡಿ ಬೆಂಕಿಕಡ್ಡಿ ಗೀರಿ ಹಚ್ಚುವ ಯತ್ನ ಮಾಡಿದೆವು. ಜೋರಾಗಿ ಗಾಳಿ ಬೀಸುತ್ತಿದುದ್ದರಿಂದ ಗೀರಿದ ಕಡ್ಡಿಯೆಲ್ಲಾ ಆರಿ ಹೋಗುತ್ತಿತ್ತು. ಗುಡಿಸಿಲಿನ ಹುಲ್ಲು ಬಗ್ ಅಂತ ಹತ್ತಿಕೊಂಡು ಉರಿಯುತ್ತಿರುವುದನ್ನು ನೋಡಿ ಕೇಕೆ ಹಾಕಿ ಕುಣಿದು ಕುಪ್ಪಳಿಸಬೇಕೆಂತಿದ್ದೆವು. ನಾವು ಮಾಡುತ್ತಿದ್ದುದನ್ನು ದಾರಿಯಲ್ಲಿ ಹೋಗುತ್ತಿದ್ದ ಹೊಟ್ಟೆ ಗಂಗಯ್ಯ ನೋಡಿಬಿಟ್ಟು ಓಡಿ ಬಂದು ಬೆಂಕಿಪಟ್ಣ ಕಿತ್ತುಕೊಂಡು ಮುಖ ಮೋರೆ ನೋಡದೆ ನಮ್ಮಿಬ್ಬರಿಗೂ ಎಲ್ಡೆಳ್ಡು ಕೊಟ್ಟು ''ವಾಸ ಮಾಡೋ ಗುಡಿಸಿಲಿಗೆ ಬೆಂಕಿ ಇಡುತ್ತೀರಾ ಬಡ್ಡಿ ಮಕ್ಕಳ್ರಾ'' ಎಂದು ಬೈದು ಛೀಮಾರಿ ಹಾಕಿದ. ಇವನೆಲ್ಲಿ ಬಂದು ವಕ್ಕರಿಸಿದನಪ್ಪ ಎಂದು ನಾನು ಮನಸಿನಲ್ಲೇ ಅವನ್ನ ಬೈಕೊಂಡೆ. ರಾಮಾಯಣದ ಕಪಿ ಲಂಕೆನ ಗೊತ್ತಿದ್ದೂ ಸುಟ್ಟನಂತೆ, ಬಾಲವಿಲ್ಲದ ಕಪಿಗಳು ನಾವು ವಾಸಿಸುವ ಮನೇನ ಸುಡುತ್ತಿದ್ದೇವೆ.

ಓದೇನೋ ಸಾಗುತ್ತಿತ್ತು. ಮರಳ ಮೇಲೆ ತಿದ್ದಿಸ್ತಿದ್ರು. ಏನು ಓದಬೇಕೆಂದು ತಿಳುವಳಿಕೆಯೆ ಅಥವಾ ನನ್ನ ಮಗ ಇಂತಹದನ್ನ ಓದಬೇಕೆಂಬ ಆಕಾಂಕ್ಷೆಯುಳ್ಳ ಹಿರಿಯರೆ.... ನಾವೇ ಸರ್ವಜ್ಞರು. ನಾನು ಮಾತ್ರ ಕನ್ನಡ ಪದ್ಯಗಳನ್ನು ರಾಗವಾಗಿ ಹಾಡ್ತಿದ್ದೆ. ಗೋವಿನ ಕಥೆ ಹಾಡನ್ನು-ನಾನು ರಾಗವಾಗಿ ಓದೋದು ಕೇಳಿ ನಮ್ಮವ್ವ ತಲೆ ತೂಗ್ತಿದ್ಲು. ನಮ್ಮ ಶಾಲೆಯಲ್ಲಿ ಒಂದು ಪದ್ಧತಿ. ವಾರಕ್ಕೊಮ್ಮೆ ಶಾಲೆಯ ಕೊಠಡಿಗಳನ್ನು ಸಗಣಿಯಿಂದ ಸಾರಿಸೋದು. ಸರದಿ ಮೇಲೆ ಇದನ್ನು ಪ್ರತಿಯೊಬ್ಬರೂ ಮಾಡಬೇಕಾಗಿತ್ತು. ಒಂದಿನ ನಾನು ಮತ್ತು ನನಗಿಂತ ಚಿಕ್ಕೋನು ಹೆಚ್.ಚಿಕ್ಕಣ್ಣ ಎಂಬುವವ ನೀರು ತರಲು ಗಡಿಗೆ ತಕ್ಕೊಂಡು ಬಾವಿಗೆ ಹೋದೆವು. ಸೇದಬೇಕಾದ್ರೆ ಗಡಿಗೆ ಕಲ್ಲಿಗೆ ತಗಲಿ ಒಡೆದು ಹೋಯ್ತಿತು. ಒಂದೆರಡು ಕ್ಲಾಸ್ ಹಿಂದಿದ್ದ ಮಿತ್ರನಿಗೆ ನಾವು ಒಡೆದಿಲ್ಲವೆಂದು ಹೇಳೆಂದು ತಾಕೀತು ಮಾಡಿದೆ. ಕ್ಲಾಸ್ ಟೀಚರ್ ಹತ್ತಿರ ಬಂದೆವು. ಚಿಕ್ಕಣ್ಣ ನಾನೇ ಒಡೆದಾಕಿದ್ದು ಅಂತ ಹ್ಯಾಪ್ ಮೋರೆ ಹಾಕ್ಕೊಂಡು ಹೇಳಿದ. ನನಗೋ ಸುಳ್ಳು ಹೇಳಿದ್ದಕ್ಕೆ ಅಪಮಾನ ಎನಿಸಿತು. ಚಿಕ್ಕವನಲ್ಲಿರುವ ಧೈರ್ಯ ನನ್ನಲ್ಲಿಲ್ಲವಲ್ಲ ಎಂಬ ಕೊರಗು. ಇನ್ಮೇಲಾದರೂ ಏನಾದರೂ ಆಗಲಿ ಸತ್ಯ ಹೇಳಬೇಕೆಂಬ ಛಲ ನನ್ನಲ್ಲಿ ಮೂಡಿತ್ತು. ಇದಕ್ಕಿಂತ ಮುಂಚೆ ಇರಬೇಕು. ಇಂತಹದೇ ಘಟನೆ ನಡೀತು. ರಜಾ ದಿನದಲ್ಲಿ ಗದ್ದೆ ಬಯಲಿಗೆ ದನ ಅಟ್ಟಿಕೊಂಡು ಹೋಗುತ್ತಿದ್ದೆ. ಒಂದಿನ ನನ್ನ ಜತೇಲಿ ಹೆಂಚಿನ ಪಾಳ್ಯದ ಮರಿಯಪ್ಪ ಕೂಡಿ ಕುರಿ ಕಾಯಲು ಬಂದಿದ್ದ. ಆತ

ಒಂದು ಅರ್ಧಾಣೆ ಬಿಲ್ಲೆಯನ್ನು ಹೆಗಲ ಮೇಲಿನ ವಲ್ಲಿಯಲ್ಲಿ ಗಂಟು ಹಾಕುತ್ತಿದ್ದನ್ನು ನೋಡಿದೆ. ಆತ ಕುರಿಮೇಯಲು ಬಿಟ್ಟು ಒಂದು ಹೊಂಗೆ ಮರದ ಮೇಲೆ ಕುಳಿತ. ವಲ್ಲಿ ಕೆಳಗೆ ನೇತಾಡುತ್ತಿತ್ತು. ಆತ ಅತ್ತಿತ್ತ ನೋಡ್ತಿರಬೇಕಾದರೆ ವಲ್ಲಿಯ ಅಂಚಿಗೆ ಕಟ್ಟಿದ್ದ ಅರ್ಧಾಣೆ ಬಿಲ್ಲೆನ ಲಕ್ ಅಂತ ಎಗರಿಸಿದೆ. ಮಾರನೆಯ ದಿನ ಆತ ಬರಲಿಲ್ಲ. ನಾನು ನನ್ನ ಮಿತ್ರರು ಅದಕ್ಕೆ ಕಡ್ಲೆಕಾಯಿ ಕೊಂಡು ತಿಂದೆವು. ಆತನನ್ನು ನೋಡಿದಾಗಲೆಲ್ಲಾ ನನಗೊಂದು ರೀತಿ ಪಾಪ ಪ್ರಜ್ಞೆ..... 'ಕಳ್ಳನ ಮನಸ್ಸು ಹುಳ್ಳುಳ್ಳಗೆ ಅಂದ ಥಾಗೆ' ಒಂದಿನ ತಡೀಲಾರ್ದೆ ಅಳುತ್ತಾ ಆತನ ಮುಂದೆ ಇದ್ವಿಷಯವನ್ನೆಲ್ಲಾ ಹೇಳಿಬಿಟ್ಟೆ. ಮರಿಯಪ್ಪ ತುಂಬಾ ದೊಡ್ಡ ಮನುಷ್ಯ, ಉದಾರಿ, ಇಂತಹದನ್ನೆಲ್ಲಾ ಮುಂದೆ ಮಾಡ್ಬೇಡಪ್ಪ ಅಂತ ಹೇಳಿ ತೇಲಿಸಿಬಿಟ್ಟ.

## ಮಾಧ್ಯಮಿಕ ಶಿಕ್ಷಣ

''ಶೂದ್ರನಪ್ಪೊಡಂ ತಪಂ ಶಕ್ತಿದಾಯಕಂ'' ಎನ್ನುವ ಮಾತನ್ನು ಈಗ ಧಾರಾಳವಾಗಿ ಹೇಳುತ್ತಿದ್ದೇವೆ. ಹಿಂದೆ ಹೀಗೆನ್ನಲು ಧೈರ್ಯ ಯಾರಿಗಿತ್ತು? ಪ್ರೈಮರಿ ಸ್ಕೂಲು ಮುಗಿಸಿ ನಗರದಲ್ಲಿದ್ದ ಗೌರ್ನಮೆಂಟ್ ಎ.ವಿ. ಸ್ಕೂಲಿಗೆ ಸೇರಿದೆ. ಶ್ರೀ ನರಸಿಂಹ ಶಾಸ್ತ್ರಿಗಳೆಂಬುವರು ಇಂಗ್ಲೀಷ್ ಪಾಠ ಹೇಳುತ್ತಿದ್ದರು. ಅವರ ಜಾತಿಯವರು ಉಚ್ಚಾರಣೆಯಲ್ಲಿ ತಪ್ಪು ಮಾಡಿದರೆ 'ಶೂದ್ರ ಮುಂಡೇದೆ' ಎಂದು ಗುಡುಗುತ್ತಿದ್ದರು. ಹಮಾಂ ಕೋಮ್ ಜಾತಿಗೆ ಸೇರಿದ ಹುಡುಗರನ್ನು ಕಂಡರೆ ಸಾಕು ಮುಖ ಸಿಂಡರಿಸಿಕೊಳ್ಳುತ್ತಿದ್ದರು. 'ಇವರೆಲ್ಲ ಬಂದು ಸ್ಕೂಲು ಹಾಳಾಗೋಯ್ತು' ಎನ್ನುವುದೇ ಅವರ ಕೊರಗು. ನನ್ನ ಪಕ್ಕದಲ್ಲಿ ತಿಗಳರ ಜಾತಿಗೆ ಸೇರಿದ ಕೆಂಪೇಗೌಡ ಎಂಬುವವನು ಕುಳಿತುಕೊಳ್ಳುತ್ತಿದ್ದ. ಆತನಿಗೆ ನಾಲಿಗೆ ತಿರುಗುತ್ತಿರಲಿಲ್ಲ. ಆಗ ಶಾಸ್ತ್ರಿಗಳು ''ನಿಂಗೆ ನಾಲಿಗೆ ತಿರುಗೋಲ್ಲ 'ತಿಗಳತಾ ಕೆಡತ ನೆರೆಹೊರೆಯೋರ್ನ ಕೆಡಿಸಿದ' ಅನ್ನೋ ಗಾದೆ ಹಾಗೆ ನೀನು ಸ್ಕೂಲಿಗೆ ಬಂದು ಬೇರೆಯವರ ಯಾಕೆ ಕೆಡಿಸುತ್ತೀಯ'' ಎಂದು ಛೀಮಾರಿ ಹಾಕುತ್ತಿದ್ದರು. ''ಸತ್ತ ಕುರೀನ ಹೊತ್ಕೊಂಡು ಬಾವೀಗೆ ಬೀಳೋದು ಬಿಟ್ಟು ನೀನ್ಯಾಕೆ ಇಂಗ್ಲೀಷ್ ಕಲಿಯೋಕೆ ಬಂದ್ಯೋ'' ಅಂತ ಎಲ್ಲಿ ಅಂತಾರೋ ಅಂತ ನನ್ನೆದೆ ಬಡಕೊಳ್ತಿತ್ತು. ನನ್ನವ್ವ ಬೆಳಗಿನ ಜಾವಕ್ಕೆ ಎಬ್ಬಿಸುತ್ತಿದ್ದಳು. ಒಂದು ಕಡೆಯಿಂದ ಉರು ಹಚ್ಚುತ್ತಿದ್ದ ನನಗೆ ಆ ಮಾತು ಅವರಿಂದ ಕೇಳುವ ಸಂದರ್ಭ ಬರಲಿಲ್ಲ. ಆದರೂ ಕೆಳವರ್ಗದ ಜನ ತಮ್ಮ ಕುಲ ಕಸುಬುಗಳನ್ನು ಬಿಟ್ಟು, ಮೇಲ್‌ವರ್ಗದವರಂತೆ ಸಮಾನರಾಗಿ

ವಿದ್ಯೆ ಕಲಿಯಲು ಬಂದದ್ದು ಆ ಉಪಾಧ್ಯಾಯರ ದೃಷ್ಟಿಯಲ್ಲಿ ಮಹಾ ಅಪರಾಧವಾಗಿತ್ತು.

ಆ ಕಾಲದಲ್ಲಿ ನಡೆಯುತ್ತಿದ್ದಂತಹ ಬಾಬಯ್ಯನ ಜಲ್ದಿ ವಿಚಾರ ಹೇಳಬೇಕು. ಮುಸ್ಲಿಮರ ಹಬ್ಬಕ್ಕೆ ಹುಲಿವೇಷ ಹಾಕಲು ನಮ್ಮ ಹುಡುಗರೇ ಹೋಗ್ಬೇಕು. ಮದುವೆಯಾದ ಮದುವಣಿಗರು ಬಾಬಯ್ಯನಿಗೆ ಹರಕೆ ಕಟ್ಕೊಳ್ಳುತ್ತಿದ್ದರು. ಅದರ ಹಬ್ಬದ ದಿನ ಹೋಗಿ ನಮ್ಮವರು ಕೊಂಡ ಹಾಯುತ್ತಿದ್ದರು. ಅವರ ದೇವರಿಗೆ ಸಕ್ಕರೆ ಓದಿಸುತ್ತಿದ್ದರು. ಅದು ನಮ್ಮ ಹಬ್ಬದಷ್ಟೇ ಸಂತೋಷವಾಗಿರುತ್ತಿತ್ತು. ಇನ್ನು ಹೊಲದಲ್ಲಿ ಕೆಲಸ ಮಾಡುವಾಗಲಂತೂ ಕುರುಬ, ತಿಗಳ, ನಾಯಕ, ಹೊಲೆಯ, ಸಾಬರು ಎನ್ನುವ ಭೇದವೇ ಇರುತ್ತಿರಲಿಲ್ಲ.

ನನ್ನ ವಿದ್ಯಾರ್ಥಿ ಜೀವನದಲ್ಲಿ ಮಹಾತ್ಮ ಗಾಂಧಿಯವರನ್ನು ನೋಡಿದ್ದು ಮರೆಯಲಾಗದ ಘಟನೆ. ಆ ಪವಿತ್ರ ಚೇತನದ ನುಡಿಗಳನ್ನು ಕೇಳಿದ ಕಿವಿ, ನೋಡಿದ ಕಣ್ಣು ಸಾರ್ಥಕ್ಯವನ್ನು ಪಡೆದವೆಂದೇ ನನ್ನ ಭಾವನೆ. ಮಹಾ ಪುರುಷರ ಜನ್ಮ ಚರಿತ್ರೆ ಕಾಲದಲ್ಲಿ ಕೊನೆಗೊಂಡರೂ, ಅವರ ಜೀವನ ಯಾತ್ರೆ ಕಾಲವನ್ನು ಗೆದ್ದುನಿಂತ ಚಿರಂಜೀವಿ. ದೀನ ದರಿದ್ರರ ದುಃಖಾರ್ತರ ಕಣ್ಣೀರೊರೆಸಿದ, ಭಾರತೀಯರನ್ನು ಸಂಪ್ರದಾಯದ ಸಂಕೋಲೆಯಿಂದ ಬಿಡಿಸಲೆತ್ನಿಸಿದ, ರಾಷ್ಟ್ರದ ಕುಂಡಲಿಯನ್ನು ಬರೆದ, ಅನ್ಯಾಯಕ್ಕೆ ಹೆದರಿ ಮಣಿಯದೆ, ಅಹಿಂಸೆ, ಶಾಂತಿ ಶಿಸ್ತುಗಳಿಂದಲೇ ಜನತೆಯ ಆರಾಧ್ಯ ಪುರುಷರಾಗಿದ್ದ ಮಹಾತ್ಮಗಾಂಧೀಜಿ ನಮಗೆಲ್ಲ ದೈವ ಸ್ವರೂಪಿಯಾಗಿದ್ದರೆಂದರೆ ತಪ್ಪೇನೂ ಇಲ್ಲ. ನಮ್ಮ ಪಾಳ್ಯದಿಂದ ಗಾಂಧೀಜಿ ನೋಡಲು ಓಡೋಡಿ ಬರುತ್ತಿದ್ದ ನನಗೆ ಕೋಡಿ ಬಸವಣ್ಣನ ಗುಡಿಯ ಹತ್ತಿರ ಮಿತ್ರ ಸಂಜೀವಶೆಟ್ಟಿ ಸಿಕ್ಕ. ''ನನ್ನ ಸೈಕಲ್ ಹಿಂದೆ ನಿಂತ್ಕೊಳ್ಳೊ'' ಎಂದ. ನನಗೂ ಆತುರ, ಹಿಂದೆ ಸೈಕಲ್ಲುಗಳಿಗೆ ಈಗಿನಂತೆ ಕ್ಯಾರಿಯರ್ ಇರುತ್ತಿರಲಿಲ್ಲ. ಸೀಟಿನಲ್ಲಿ ಕುಳಿತವನ ಹಿಂಭಾಗ ಹಿಡಿದು ನಿಂತೆ. ಹೆಬ್ಬೆಟ್ಟು ಸ್ಪೋಕ್ಸ್‌ಗಳಿಗೆ ಸಿಕ್ಕಿ ರಕ್ತ ಬಂದರೂ ನನಗರಿವಾಗಲಿಲ್ಲ. ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಭಾರೀ ಜನಸಂದಣಿ. ಹೇಗೋ ನುಸುಳಿಕೊಂಡು ಹತ್ತಿರ ಹೋಗಿ ಮಹಾತ್ಮರ ದರುಶನ ಪಡೆದೆ. ಹಿಂದಿಯಲ್ಲಿ ಮಾತನಾಡುತ್ತಿದ್ದ ಮಹಾತ್ಮರ ತೇಜಃಪೂರ್ಣ ಮುಖ ಇಂದಿಗೂ ನನ್ನ ನೆನಪಿನಲ್ಲಿದೆ.. ಅವರ ಭಾಷಣವನ್ನು ಸರಳ ವಾಕ್ಯದೊಡನೆ ಇಂಗ್ಲೀಷ್‌ಗೆ ರಾಜಾಜಿ ಅನುವಾದಿಸುತ್ತಿದ್ದರು. ನನ್ನಂತಹ ಮಿಡಲ್ ಸ್ಕೂಲ್

ವಿದ್ಯಾರ್ಥಿಗೂ ಅದು ಅರ್ಥವಾಗುತ್ತಿತ್ತೆಂದರೆ, ರಾಜಾಜಿಯ ಇಂಗ್ಲೀಷ್ ಭಾಷೆಯ ಸರಳತೆಯನ್ನು ಗಮನಿಸಬೇಕಲ್ಲವೇ? ಯಾರೋ ಒಬ್ಬರು ಕನ್ನಡದಲ್ಲೂ ಭಾಷಣದ ಸಾರಾಂಶವನ್ನು ಹೇಳಿದ್ದುಂಟು. 'ಭಾರತ್ ಮಾತಾಕಿ ಜೈ' 'ಮಹಾತ್ಮ ಗಾಂಧೀ ಕಿ ಜೈ' ಎಂಬ ಘೋಷಣೆಗಳು ಗಗನ ಮುಟ್ಟುತ್ತಿದ್ದವು. ಆ ಸಂದರ್ಭದಲ್ಲಿ ಗಾಂಧೀಜಿ ಏನು ಹೇಳುತ್ತಿದ್ದರೂ ಹಿಂದು ಮುಂದು ಯೋಚಿಸದೆ ಜನ ನುಗ್ಗುತ್ತಿದ್ದುದುಂಟು ನಿಜ. ಜನತೆಗೆ ಅಂತಹ ನಂಬಿಕೆ ತಮ್ಮ ನಾಯಕನ ಮೇಲೆ. ಆದರೆ ಗಾಂಧೀಜಿ ಶಿಸ್ತು, ಅಹಿಂಸೆಗಳನ್ನು ತೊರೆಯ ಕೂಡದೆಂದು ಆಗ್ರಹ ಪಡಿಸಿದ್ದರು. ಅಂತಹ ನಾಯಕತ್ವವನ್ನು ಇಂದಿಗೆ ಹೋಲಿಸಿದಾಗ ಗಾದೆಯ ಮಾತೊಂದಲ್ಲದೆ ಮತ್ತೇನೂ ನೆನಪಿಗೆ ಬಾರದು. ಗಾಂದೀಜಿ ಭಾಷಣ ಮುಗಿದು ಅವರು ಹೋಗುವ ತನಕ ನನಗೆ ಮೈಮೇಲೆ ಅರಿವೇ ಇರಲಿಲ್ಲ. ಆನಂತರ ಮನೆಗೆ ಹೋಗೋಣ ಎಂದು ಹೆಜ್ಜೆ ಇಟ್ಟರೆ ಕಾಲೇ ಊರಲಾಗದು. ರಕ್ತ ಸೋರಿ ಹೆಪ್ಪುಗಟ್ಟಿ ಕಾಲೆಲ್ಲಾ ಮರಗಟ್ಟಿ ಹೋಗಿದೆ. ಹತ್ತು ಹದಿನೈದು ದಿನಗಳ ನಂತರ ನನ್ನ ಹೆಬ್ಬೆಟ್ಟು ಗುಣವಾದರೂ ಗಾಯದ ಮಚ್ಚೆ ಇಂದಿಗೂ ಇದೆ.

ಒಂದು ಹಗಲೊತ್ತು ಉಂಡು ಜಗುಲಿ ಮೇಲೆ ಹಾಗೆ ಕುಂತಿದ್ದೆ. ಪಕ್ಕದ ಪಾಳ್ಯದಿಂದ ಬಂದವನೊಬ್ಬ 'ಆ ಮನೇನು ಸತ್ತೋದ' ಅಂತ ಹೇಳಿ ದಿಢೀರನೆ ಓಡಿ ಹೋದ. ಛೀ ಅವನಿಗೇನಾಗಿತ್ತು. ಹೋದವಾರ ನೋಡಿದ್ದೆನಲ್ಲ, ಅಂದುಕೊಂಡು ಕೋಣೆಯಲ್ಲಿದ್ದ ಅವ್ವನಿಗೆ ವಿಷಯ ಹೇಳಲು ಹೋದೆ. ''ಸರೀ ಬಿಡೂ ಮಗ'' ಎಂದು ಆಕೆ ತೇಲಿಸಿಬಿಟ್ಟಳು. ಎಲ್ಲರ ಸಾವಿಗೂ ಎದೆಹೊಡೆಕೊಂಡು ಅಳುತ್ತಿದ್ದ ಅವ್ವನಿಗೆ ಈಗೇನಾಯ್ತು ಎಂಬುದೇ ನನ್ನ ಚಿಂತೆ. ಆನಂತರ ಗೊತ್ತಾಯ್ತು 'ಆ ವ್ಯಕ್ತಿ ಸತ್ತಿಲ್ಲ, ಕಾಗೆಗಳು ಒಂದಾದ್ದನ್ನ ನೋಡಿದ್ನಂತೆ' ಹೀಗೆ ಸಾವಿನ ಸುಳ್ಳು ಸುದ್ಧಿಯನ್ನು ಹಬ್ಬಿಸದಿದ್ದರೆ ಅಶುಭವಂತೆ. ಒಂದು ವಾರದ ನಂತರ ಅರಳಿ ಮರದ ಕಡೆ ಕಣ್ ತಿರುಗಿಸಿದಾಗ ಅನಾಯಾಸವಾಗಿ ಕಾಗೆಗಳು ಒಂದಾದ್ದನ್ನ ನೋಡ್ದೆ. ಹಿಂದಿನದೆಲ್ಲಾ ಗೆಪ್ತಿಯಾಗಿ ಅರಿಶಿನದ ನೀರು ಚೆಲ್ಲಿದ ಹಾಗಾಯ್ತು. ಅವ್ವನಿಗೆ ಹೇಳಿದರೆ ಹಿಂದಿನಂಗೆ ಸುಳ್ಳು ಸಾವಿನ ಸುದ್ದಿ ಪ್ರಚಾರ ಆಗ್ತದೆ. ನೋಡೋಣ ಏನಾಗ್ತದೆ ಅಂತ ಮನದಲ್ಲೆ ಬೈತ್ತಿಟ್ಟೆ. ಹತ್ತು ದಿನಗಳು ಕಳೆಯಿತು. ತಿಂಗಳಾಯಿತು. ನಾನಿನ್ನೂ ಬದುಕಿಯೆ ಇದ್ದೆ. ಈಗ ಅನಿಸತೊಡಗಿದೆ ನಾವೆಂತಹ ಘೋರ ಅಂಧಕಾರದಲ್ಲಿದ್ದೆವೆಂದು.

ಶಿರಾ ಗೇಟಿನ ಆಚೆಗೆ ಏಕನಾಥಮ್ಮನ ಗುಡಿ ಇತ್ತು. ತಿಂಗಳಿಗೊಂದು ಸಾರಿಯಾದರೂ ದೇವರು ಹೊರಡುತ್ತಿತ್ತು. ಖಂಡಿತ ನಮ್ಮ ಪಾಳ್ಯಕ್ಕೆ ಅದರ ಸರ್ಕೀಟ್ಟು ತಪ್ಪುತ್ತಿರಲಿಲ್ಲ. ದೇವರು ಹೊತ್ತೋರು ಹಿಂದುಮುಂದೆ ಓಲಾಡುತ್ತಾ ದೇವರು ಮೈಮೇಲೆ ಬಂದವರಂತೆ ನಟಿಸುತ್ತಿದ್ದರು. ಕೆಲವೊಮ್ಮೆ ಚಿಕ್ಕವರಾದ ನಾವು ಅವರ ತುಳಿತಕ್ಕೂ ಸಿಕ್ಕಾಕಿಕೊಳ್ಳುತ್ತಿದ್ದೆವು. ಯಾರು ಹೆಚ್ಚು ಓಲಾಡುತ್ತಾರೋ ಅಂಥೋರಿಗೆ 'ದೇವರ್ನ ಚೆನ್ನಾಗಿ ಹೊರತಾನೆ' ಅಂತ ಶಭಾಸ್ ಗಿರಿ ಕೊಡುತ್ತಿದ್ದರು.

ಉಗಾದಿ ಹಿಂದೆ ಮುಂದೆ-ಊರೆಲ್ಲಾ ವರ್ಷಕ್ಕೊಮ್ಮೆ ಹೊರಬೀಡು ಬಿಡುತಿದ್ದು ಕಸಿತೋಪಿನ ನೆರಳಿನಲ್ಲಿ-ಹೊರಬೀಡಮ್ಮ, ಕಾಲವಳಿಯಮ್ಮ-ದೇವರುಗಳನ್ನು ಮಾಡಿ ಕೋಳಿಕೊಯ್ದು ಎಡೆಹಾಕಿ-ನಾಲ್ಕು ಜನಕ್ಕೆ ಊಟ ಹಾಕೋದು ಸಂಪ್ರದಾಯ, ಸಂಜೆ ಹೊತ್ತಿಗೆ ವಾಪಸ್ಸು ಬರುತ್ತಿದ್ದೆವು. ಧೂಳು ಸಂಜೆಯಲ್ಲಿ ಹರಿಜನರ ಹನುಮಂತ ದೊಡ್ಡಸಿದ್ಧ ಮತ್ತು ಚಿಕ್ಕುಚ್ಚ ಇವರು ''ಹೈಲಿಗೆ ಸಾಮಿ'' 'ಹೈಲಿಗ' ಎಂದು ಕೋಳಿ ರಕ್ತ ಬೆರೆಸಿದ ಅರಿಶಿನದ ಅನ್ನವನ್ನು ಊರಸುತ್ತ ಶಾಂತಿಗಾಗಿ ಎರಚುತ್ತಾ ಬರುವರು. ಶಾಂತಿಗಾಗಿ ಬಲಿ ಕೊಡುವ ಪದ್ಧತಿ, ಕೆಲವೊಂದು ಐತಿಹಾಸಿಕ ಕಾರಣಗಳಿಂದಾಗಿ ಅದು ಮರೆಯಾಗಿದ್ದರೂ ಅದರ ಸೂಕ್ಷ್ಮ ಪ್ರಭಾವ ಆಗಿನ್ನೂ ಉಳಿದಿತ್ತು ಎನ್ನುವುದಕ್ಕೆ ಇದು ಸಾಕ್ಷಿ ಎನಿಸುತ್ತದೆ.

ಆಗಾಗ್ಗೆ ನಾಯಕರು ನನ್ನ ತಾಯಿಗೆ ಗುಡಿಸಲು ಕಿತ್ತಿಕೊಂಡು ಹೋಗು ಅಂತ ಇಲ್ಲದ ಕಿರುಕುಳ ಕೊಡುತ್ತಿದ್ದುದು ಸರಿಯಷ್ಟೆ. ಇವರ ಕಾಟ ತಡಿಯಲಾರದೆ ಇವರ ಸಹವಾಸವೇ ಬೇಡ ಎಂದು ಪಿಂಚಿಣಿದಾರ ದೊಡ್ಡಯ್ಯ ಎಂಬುವರಿಂದ ನಮ್ಮ ತಾಯಿ ಅರಳಿಮರದ ಪಾಳ್ಯದಲ್ಲಿ ಒಂದು ಸೈಟನ್ನು ಎರಡು ಮೂರು ಗೂಡೆ ರಾಗಿ ಕೊಟ್ಟು ಕೊಂಡರು. ಹಸಿ ಇಟ್ಟಿಗೆಯಿಂದ ಒಂದು ಸಣ್ಣ ಹೆಂಚಿನ ಮನೆ ಕಟ್ಟಿಸಿದರು. ಇದಕ್ಕಾಗಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅರ್ಧ ಗೋಡೆ ಎದ್ದಾಗ ಶಾಮಯ್ಯರ್ ಎಂಬುವ ಸ್ಯಾನಿಟರಿ ಇನ್ಸ್‌ಪೆಕ್ಟರ್ ಬಂದು ಸರಿಯಾಗಿ ಲೈಸೆನ್ಸ್ ತಂದಿಲ್ಲ ಅಂತ ನನ್ನ ತಾಯಿಗೆ ಹೆದರಿಸಿ ಗೋಡೆ ಕೆಡವುಸ್ತೀನಿ ಅಂದ. ಗೋಳಾಡಿದರೂ ಬಿಡದೆ, ಏನೋ ಕೊಟ್ಟ ಮೇಲೆ ಸುಮ್ಮನಾದ. ಇದನ್ನು ನೋಡಿ ನನ್ನ ಮೈಯೆಲ್ಲಾ ಉರಿತಿರೋದು. ಅರಳಿ ಮರದ ಪಾಳ್ಯದ ಹೊಸ ಮನೆಗೆ ಹೋಗಿ 10 ತಿಂಗಳಾಗಿತ್ತು. ಬರಬಾರದ ಕಾಯಿಲೆಯೊಂದು ನನಗೆ ವಕ್ಕರಿಸಿತು.

ಇದ್ದಕ್ಕಿದ್ದಂತೆ ಮಾತೇ ನಿಂತುಹೋಯಿತು. ಕೀಲು ಕೀಲೆಲ್ಲಾ ಹಿಡಿದುಕೊಂಡು ಬಿಟ್ಟವು. ಯಮಬಾಧೆಯಾಗುತ್ತಿತ್ತು. ನನ್ನ ತಾಯಿ ಯಾವ ಯಾವುದೋ ದೇವರುಗಳಿಗೆಲ್ಲಾ ಹರಕೆ ಕಟ್ಟಿದರು. ಏನೂ ಫಲವಿಲ್ಲ. ಮೂಗು ಮುಖ ಗೊತ್ತಾಗದ ಈ ಕಾಯಿಲೆಗೆ ಮದ್ದೇನಂತ ಪಾಳ್ಯದವರೆಲ್ಲ ಯೋಚಿಸಿದರಂತೆ. ಕೆಲವರು ಹೊಸಮನೆ ಆಗಿ ಬರೋದಿಲ್ಲ. ಮೊದಲು ಆರು ತಿಂಗಳೋ ವರ್ಷವೋ ಬಿಟ್ಟು ಬಿಡಿ, ಹುಡುಗನಿಗೆ ರಾವು ಬಡಿದಿದೆ ಎಂದರಂತೆ. ಯಾರೋ ಪಂಡಿತರೊಬ್ಬರು ಇದು ಧನುರ್ವಾಯು, ಹುಡುಗ ಬದುಕುವುದಿಲ್ಲ ಎಂದರಂತೆ. ಯೀ ಬರಬಾರದ್ಕಾಯ್ಲೆ-ಬರೋಕ್ಮುಂಚೆ-ಸುಮಾರು 15 ದಿನಗಳ ಹಿಂದೆ ನಂಜುಂಡೇಶ್ವರನ ಹರಕೆ ಅಂತ ಗೋವಿನ ಗಂಜಳ-ಸಗಣಿಗಳಿಂದ ಸಾರ್ಸಿ ಪೂಜೆ ಮಾಡಿದ ನೆಲಗಂಗಳದ ಮೇಲೆ 3 ದಿನ ಅನ್ನ ಉಣಿಸಿದ್ಲು ನಮ್ಮವ್ವ. ಅದರ್ದೆ ಗಾಚಾರ ಇದು ಅಂದೆ. ನಮ್ಮವ್ವ ಹೌಹಾರಿ 'ಬಿಡ್ತು ಅನ್ನಪ್ಪ' ಅಂತ ಗೋಳಾಡ್ತು. ನಾನು ಮಗುವಿದ್ದಾಗ ಹಾಲುಣ್ಣಿಸಿದ ತಿಗಳರ ಹನುಮಕ್ಕ ಇದೆಲ್ಲಾ ತಿಳಿದು ಓಡಿ ಬಂದಳು. ಜೊತೆಯಲ್ಲಿ ಎರಡು ಮೂರು ಒಳ್ಳೆ ರಸದಾಳೆ ಕಬ್ಬಿನ ಜಲ್ಲೆಯ ತುಂಡುಗಳನ್ನು ತಂದಿದ್ದಳು. ಸಿಪ್ಪೆ ತೆಗೆದು ಒಂದೆರಡು ತುಂಡುಗಳನ್ನು ಸಣ್ಣ ಸಣ್ಣಗೆ ತುಂಡರಿಸಿದಳು. ಹರ ಸಾಹಸ ಮಾಡಿ ಬಾಯಿ ಬಿಡಿಸಿ ಹಲ್ಲು ಆಡಿಸುವಂತೆ ಮಾಡಿ ಅಷ್ಟಿಷ್ಟು ರಸ ಒಳ ಹೋಗುವಂತೆ ಮಾಡಿದಳು. ಈ ಕಬ್ಬಿನ ಹಾಲು ಅಷ್ಟಿಷ್ಟು ಒಳ ಹೋದಂತೆಲ್ಲಾ ಮೈಯನ್ನು ಅಲುಗಾಡಿಸತೊಡಗಿದೆನಂತೆ. ಆರೇಳು ತಾಸಿನ ನಂತರ ಕಣ್ಣೀರು ಹರಿಯೋದು ನಿಂತು ಅದೆಷ್ಟೋ ಗೆಲುವಾಯಿತಂತೆ. ಆ ಹನುಮಕ್ಕತಾಯ ಕೈಗುಣವೋ ಅವಳು ತಂದ ರಸದಾಳೆ ಕಬ್ಬಿನ ಪ್ರಭಾವವೋ ನನ್ನ ಪ್ರಾಣ ಉಳಿಯಿತು. ಹನುಮಕ್ಕನಿಂದ ಅರಳಿಮರದ ಪಾಳ್ಯದ ಹೊಸ ಮನೆ ಒಗ್ಗಿ ಬಂತು ಅನ್ನಬೇಕು.

ನಾನು ಲೋಯರ್ ಸೆಕೆಂಡರಿಯಲ್ಲಿ ಓದುವಾಗ ನಡೆದ ಘಟನೆ. ನನಗೆ ತಲೆಯ ಹಿಂಭಾಗ ಕುತ್ತಿಗೆಯನ್ನು ಆವರಿಸಿಕೊಂಡು ಭಾರಿ ಹುಣ್ಣೊಂದು ಎದ್ದು ನರಕಯಾತನೆ ಶುರುವಾಯ್ತು. ನನ್ನ ತಾಯಿ ನಂಜುಂಡೇಶ್ವರನಿಗೆ ಹರಕೆ ಕಟ್ಟಿದ್ದೂ ಅಲ್ಲದೆ ಕೂದಲು ಮಂಡೆ ಬಿಡಿಸಿದರು. ನಾಗಪ್ಪನಿಗೂ ಹರಕೆ ಕಟ್ಟಿದ್ದಾಯಿತು. ತಾಯಿ ತನಗೆ ತಿಳಿದ ಚಿಕಿತ್ಸೆ ಮಾಡಲು ಶುರು ಮಾಡಿದಳು. ಹುತ್ತದ ಪ್ರಸಾದವನ್ನು (ಹುತ್ತದ ಕೆಂಪು ಮಣ್ಣು) ನಂಜುಡೇಶ್ವನ ಹೆಸರಿನಲ್ಲಿ ಬೆಳಿಗ್ಗೆ ಸಾಯಂಕಾಲ ಲೇಪ ಹಾಕಿದರು. ಒಂದೆರಡು ದಿನಗಳಲ್ಲಿ ಈ ಹುತ್ತದ ಪ್ರಸಾದದ ಚಿಕಿತ್ಸೆಯಿಂದ ರಕ್ತ

ಸೋರುವುದು ನಿಂತು ನಂತರದ ದಿನಗಳಲ್ಲಿ ಗಾಯ ವಾಸಿಯಾಯಿತು.

1925ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಕಟ್ಟಿದೆ. ಮೇಷ್ಟ್ರು ಏನು ಹೇಳಿದ್ರೋ ಅವನ್ನೆಲ್ಲಾ ಬಾಯಲ್ಲೆ ಹೇಳುವಷ್ಟು ಉರು ಹೊಡೆದಿದ್ದೆ. ಪರೀಕ್ಷೆ ಮುಗೀತು. ಅದರ ಯೋಚನೆ ಬಿಟ್ಟು ವ್ಯವಸಾಯ ಕೆಲಸ ಮಾಡಲಾರಂಭಿಸಿದೆ. ಮಹಾತ್ಮರೊಬ್ಬರು ಕನಸಿನಲ್ಲಿ ಕಾಣಿಸಿಕೊಂಡು 'ನೀ ಪಾಸಾಗಿದ್ದೀಯ' ಎಂದು ನುಡಿದಂಗಾಯ್ತು. ಹಟ್ಟಿ ಲಕ್ಕಮ್ಮ ದೇವರ ಹತ್ತಿರ ಹೋಗಿ ಹೂ ಪ್ರಸಾದ ಕೇಳಿಬಂದೆ. ಬಲಗಡೆ ಬಿದ್ದ ಹೂ ಪ್ರಸಾದ ತೆಗೆದುಕೊಂಡು ಖುಷಿಯಿಂದ ಮನೆಗೆ ಬಂದೆ. ಅಂತೂ ಹೇಗೋ ಪಾಸಾಗಿತ್ತು. ಮನುಷ್ಯನ ಸುಪ್ತಾವಸ್ಥೆಗಳಲ್ಲಿರುವ ಆಸೆಗಳು ಆತನನ್ನು ವಿವೇಚನಾರಹಿತನನ್ನಾಗಿಸಿ, ಎಂಥ ಕೂಪಕ್ಕಾದರೂ ತಳ್ಳಬಹುದಲ್ಲವೆ? ಬೇಸಿಗೆಯಲ್ಲೆ ಸ್ಕೂಲಿಗೆ ರಜಾದಿನಗಳು. ನಮ್ಮ ಪಾಳ್ಯದಲ್ಲಿರೋರು ಸುತ್ತಮುತ್ತ ಹಳ್ಳಿಯೋರು ಇವರಿಗೆಲ್ಲಾ ಬಿಡುವು ದಿನಗಳು. ಹಿರಿಯರೆಲ್ಲಾ 'ಕನಕದಾಸರ ನಳಚರಿತ್ರೆ' ಓದೋ ಮಗ ಅಂತ ಗಂಟು ಬೀಳುತ್ತಿದ್ದರು. ನಾನಂತೂ ರಾಗವಾಗಿ ನಳಚರಿತ್ರೆಯನ್ನ ಓದುತ್ತಿದ್ದೆ. ಕಷ್ಟ ಕೋಟಳೆ ಪರಿಹಾರವಾಗಬೇಕಾದರೆ ನಳಚರಿತ್ರೇನ ಓದಬೇಕೆಂಬುದು ನಮ್ಮ ಹಳ್ಳಿಗರ ನಂಬಿಕೆ. ಕೊನೇ ದಿನ ಮಂಗಳಾರತಿಮಾಡಿಸಿ, ಚರುಪು ಹಂಚೋದು ಅಲ್ಲದೆ ನೂರಾರು ಜನಕ್ಕೆ ದಾಸೋಹ ಸಹ ನಡೆಯುತ್ತಿತ್ತು.

## ಪ್ರೌಢಶಾಲಾ ಶಿಕ್ಷಣ

ನಾನು ಲೋಯರ್ ಸೆಕೆಂಡರಿ ಪಾಸಾದದ್ದು ನಮ್ಮ ಪಾಳ್ಯದಲ್ಲೆ ಹರ್ಷ ತಂದಿತ್ತು. ನನ್ನವ್ವನಂತೂ 'ಮೇಷ್ಟ್ರು ಕೆಲಸಕ್ಕೆ ಸೇರಿಕೊಳ್ಳಪ್ಪ, ನೀ ಪೇಟ ಕಟ್ಕೊಳ್ಳದ್ದನ್ನ ನೋಡಿ ನಾನು ಸಾಯಬೇಕು' ಎಂದು ದುಂಬಾಲು ಬಿದ್ದಳು. ಮೀನಾ ಮೇಷ ಎಣಿಸಿ ಸರ್ಕಾರಿ ಪ್ರೌಢಶಾಲೆಗೆ ಸೇರಿದೆ. ನನ್ನ ಪ್ರೌಢಶಾಲಾ ವಿದ್ಯಾಭ್ಯಾಸ ಹೇಳಿಕೊಳ್ಳೋಂತದ್ದೇನಲ್ಲ. ಆಗ್ಲೆ ನಮ್ಮವ್ವ ಮೆತ್ತಗಾಗ್ತ ಬಂದಿದ್ಲು. ಈ ಸಂದರ್ಭದಲ್ಲಿ ನಮ್ಮಣ್ಣನ ಮದುವೆ ನಡೀತು. ತಾಯಿಗೆ ಕಾಯಿಲೆ. ಹುಡುಗನಾದರೂ ಎಲ್ಲದಕ್ಕೂ ನಾನೇ ಓಡಾಡಬೇಕು. ದುಡ್ಡು ಕಾಸು ಕರಿಮಣಿ ಒಂದೂ ಇಲ್ಲ. ಬೆಳೆದಿದ್ದ ರಾಗಿಯಲ್ಲಿ ಅರ್ಧಕ್ಕರ್ಧ ಮದುವೆ ಖರ್ಚು ನೀಗಲೋಸುಗ ಮಂಡಿಗೆ ನಾನು, ನಮ್ಮಣ್ಣ ಗಾಡೀಲಿ ಹೇರಿಕೊಂಡು ಹೋದೆವು. ಮಧ್ಯಾಹ್ನದವರೆವಿಗೂ ಕಾಯ್ದು ನಂತರ ದಾನ ಧರ್ಮ ದಲ್ಲಾಳಿ ಮತ್ತಿನ್ನೇನೋ

ಜಾತ ಮಂಡಿವರ್ತಕ ನಮ್ಮ ಕೈಗೆ ಐವತ್ತು ರೂಪಾಯಿ ಇಟ್ಟ. ನನಗೆ ಸಿಡಿಲು ಬಡಿದಂತಾಯಿತು. ವಿಧಿ ಇಲ್ಲ. ಮನೆಗೆ ಬಂದು ತಲೆ ಮೇಲೆ ಕೈ ಹೊತ್ತು ಕುಂತೆ. ಮುಂದೆ ಕೊನೆ ಪಕ್ಷ 500 ಆದರೂ ಬೇಕು. ಎಲ್ಲಿ ಒದಗಿಸೋದು. ಕೊನೆಗೆ ಹಿತೈಷಿಗಳು ಬಂದರು. ಕವಾಡಿಗರ ರುದ್ರಪ್ಪ ಎಂಬುವರು 350 ರೂಪಾಯಿ ಸಾಲ ಕೊಡುವುದಾಗಿಯೂ ಬಡ್ಡಿ ಶೇ. 15 ರಷ್ಟು ಕೊಡಬೇಕೆಂತಲೂ, ಇದ್ದ ಒಂದೇ ಆಸ್ತಿ ಮೂರುವರೆ ಎಕರೆ ಹೊಲವನ್ನು ಅವರಿಗೆ ಆಧಾರ ಮಾಡಬೇಕೆಂತಲೂ ತೀರ್ಮಾನ ಆಯಿತು. ನಮ್ಮ ರೈತಾಪಿ ಜನಾಂಗದಲ್ಲಿ ತಲೆಮಾರಿನಿಂದ ತಲೆಮಾರಿಗೆ ರವಾನಿ ಆಗೋದು ಸಾಲ ಒಂದೇತಾನೆ. ಅರ್ಥವಿಲ್ಲದ ಸಂಪ್ರದಾಯ, ದೇವರು ದಿಂಡರು, ಮದುವೆ ಮುಂಜ ಹಬ್ಬ ಹುಣ್ಣಿಮೆಗಳು ರೈತನ ಗೆಯ್ಮೆಯನ್ನೆಲ್ಲ ನುಂಗಿ ನೀರು ಕುಡಿಯುತ್ತವೆ. ಸಾಲದ ಹೊರೆಯಿಂದ ಜಮೀನು ಅಡ ಇಡೋದು, ದುಬಾರಿ ಬಡ್ಡಿಯಿಂದ ಅದನ್ನ ಮಾರೋದು. ನಿರ್ಗತಿಕನಾಗಿ ಬೇರೆಯವರಲ್ಲಿ ಜೀತ ಮಾಡೋದು ಆಮೇಲೆ ಇದ್ದೇ ಇದೆ. ವಂಶಪಾರಂಪರ್ಯವಾಗಿ ಸಾಗಲ್ಪಡುವ ಈ ಸಾಲದ ಸಂಕೋಲೆಗೆ ಮುಪ್ಪಸಾವುಗಳೆ ಇಲ್ಲವೇನೋ. ನಮ್ಮ ಕುಟುಂಬವೇನೂ ಹೊರತಾಗಿರಲಿಲ್ಲ. ಅಣ್ಣನ ಮದುವೆ ಎಂದರೆ ಸಾಮಾನ್ಯವೆ? ಎಲ್ಲ ಮಾಮೂಲಿನಂತೆ ನಡೆಯಬೇಕು. ನನಗೆ ಅನುಭವವಿಲ್ಲ. ಶಾಸ್ತ್ರ-ಸಂಪ್ರದಾಯವನ್ನು ಬಿಡುವುದುಂಟೆ? ಕುಲದ ಊಟ, ಧಾರೆ ಊಟ, ಬೀಗರ ಊಟ, ಪೆಂಡಿಗಟ್ಲೆ ವೀಳೆದೆಲೆ ಕೊಡೋದು ಎಡೆಬಿಡದ ವ್ಯಾಜ್ಯಗಳ ನಡುವೆ ನಮ್ಮಣ್ಣನ ಮದುವೆ ನಡೆದು ಹೋಯಿತು. ಮರ್ಯಾದೆ ಹೋಗುವುದೆಂದು ಮಾಡಿದ ಕೈಗಡದ ಸಾಲವೂ ಸೇರಿ 700 ರೂಪಾಯಿ ಖರ್ಚಾಗಿ ನಮ್ಮ ಸ್ಥಿತಿ ಚಿಂತಾಜನಕವೇ ಆಯಿತು.

ನಂಜುಂಡೇಶ್ವರನಿಗೆ ಮಂಡೆ ಬಿಟ್ಟುದ್ದುದರಿಂದ ತಲೆ ತುಂಬಾ ಕೂದಲು ಹುಲುಸಾಗಿ ಬೆಳೆದಿದ್ದನ್ನು ಬಾಚಿ ಹಿಂಭಾಗಕ್ಕೆ ಗಂಟು ಹಾಕುತ್ತಿದ್ದೆ. ಆಗ ನನಗೆ ಸುಮಾರು 15-16 ವಯಸ್ಸಿರಬಹುದು. ಕಪ್ಪಾಗಿದ್ದರೂ ಮುಖ ಮೈ ಮಾಟದಲ್ಲಿ ರಂಗು ರಂಗಾಗಿದ್ದು ಆಕರ್ಷಕವಾಗಿದ್ದೆನಂತೆ. ಹಾಲು ಚೆಲ್ಲಿದಂತೆ ಬೆಳದಿಂಗಳ ಬೆಳಕು ಇರುವಾಗ, ಅದೆಷ್ಟೋ ಆಟ ಪಾಟಗಳನ್ನು ಆಡುವುದು ಗ್ರಾಮದಲ್ಲಿ ರೂಢಿಯಲ್ಲಿತ್ತು. ಸರಿ ಕಪ್ಪಾಗಿದ್ದರೂ ವರ್ಣ ರಂಜಿತವಾಗಿದ್ದ ನನ್ನ ಮೇಲೆ ಬಿತ್ತು ಪಾಳ್ಯದ ಹೆಂಗಸರ ಕಣ್ಣು. ಬೆಳದಿಂಗಳ ಮದುವೆಯ ಆಟಕ್ಕಾಗಿ ನನಗೆ ಸೀರೆಯನ್ನುಡಿಸಿ ಹೆಣ್ಣಾಗಿ ಕೂಡಲು ಕೇಳಿಕೊಂಡರು ಹೆಂಗಸರೆಲ್ಲ. ನನಗೋ

ನಾಚಿಕೆಯೋ ನಾಚಿಕೆ. ನಾನು ಬಡಪೆಟ್ಟಿಗೆ ಒಪ್ಪಲಿಲ್ಲ; ಆದರೆ ಆ ಪುಣ್ಯಾತಗಿತ್ತಿಯರು ಬಿಡಬೇಕಲ್ಲ. ನನಗಿಂತ ಹಿರಿಯಾತ ಹನುಮಂತು ಮದುಮಗನಾದ. ಮಡಿಲಕ್ಕಿ ಕಟ್ಟಿದರು, ಶೋಭಾನೆ ಹೇಳಿದರು, ಹಸೆ ಹಚ್ಚಿದರು, ಸಂಚಿ ತುಂಬಿದರು. ಸುಲಗ್ನ ಸಾವಧಾನ ಎಂತ ಧಾರೆಯೂ ಬಿದ್ದು ಹೋಯ್ತು. ಹನುಮಂತನಿಂದ ಮಂಗಳಸೂತ್ರವೊಂದು ಸಹ ನನ್ನ ಕೊರಳಿಗೆ ಬಿತ್ತು. ಪಾಳ್ಯವೆಲ್ಲಾ ಅಲ್ಲಿ ನೆರೆದಿತ್ತು. ಆಗಾಗ್ಗೆ ನನ್ನ ಗೆಪ್ತಿಯ ಪದರದಲ್ಲಿ ಇದೆಲ್ಲವೂ ನುಸುಳಿ ಬಂದರೆ ರೋಮಾಂಚನವಾಗುತ್ತದೆ. ಆ ದಿನಗಳಲ್ಲಿ ನಮ್ಮ ಹಳ್ಳಿಯವರಿಗೆ ಏನು ಮನರಂಜನೆ? ಸಿನಿಮಾ, ಟಿ.ವಿ. ಆಕಾಶವಾಣಿಯೂ ಎಲ್ಲವೂ ಅವರಿಗೆ ದೊರೆಯತ್ತಿದ್ದವೆ? ಹಳ್ಳಿ ಸುಗ್ಗಿ ಮತ್ತು ಇಂತಹ ಸ್ವಕಲ್ಪಿತ ಸಮಯ ಸನ್ನಿವೇಶಗಳೇ ಅವರ ಬಾಳಿನ ಮನರಂಜನಾ ಘಳಿಗೆಗಳಾಗುತ್ತಿದ್ದವು.

ಅಣ್ಣನ ಮದುವೆ ಆದರೆ ಮುಗಿಯಿತೆ? ಊರಿನಲ್ಲಿ ಮಾರಿಹಬ್ಬ ಮಹಾನವಮಿಯಲ್ಲಿ ಹಿರಿಯೋರ್ಗೆ ಧೂಪ ಹಾಕಬೇಡವೆ? ಹಾಗೇ ಊರಿನಲ್ಲಿ ಮಾರಿಹಬ್ಬ ಆಗಲೇಬೇಕು. ನಾಲ್ಕೈದು ಮೇಕೆ-ಒಂದು ಕೋಣಾನ ಅಮ್ಮನಿಗೆ ಅರ್ಪಿಸಿ ಹಬ್ಬ ಮಾಡಬೇಕೆಂದು ಊರಲ್ಲೆಲ್ಲ ಸಾರಿದರು, ಅದೇ ರೀತಿ ಮನೆಗೊಂದು ಆಳಿನಂತೆ ಮರಿಕೊಳ್ಳಲು ಸಂತೆಗೆ ಹೋದೆವು, ನಾನು ನಮ್ಮನೆಯಿಂದ ಹೊರಟೆ. ಕೆಲಸ ಮುಗಿಸಿ ರಾತ್ರಿ ಮನೆಗೆ ಬಂದ್ರೆ ಅವ್ವ 'ಮಗಾ ನಿಮ್ಮಣ್ಣ ಗಾಡೀನ ತೋಪಿನ ಹತ್ತಿರನೆ ಬಿಟ್ಟು ಬಂದವನೆ ಯಾರಾದರೂ ಸಾಗಿಸಿಬಿಟ್ರೆ ಏನ್‌ಗತಿ' ಅಂತ ಹಲುಬಿದರು. 'ಯಾಕೆ ಚಿಂತ ನಾ ಹೊಡೆದುತರುತೀನಿ' ಅಂತ ಹೇಳಿ ಕಣ್ಣ ಅಗಡು ಸಮೇತ ಎತ್ತನ್ನ ಕೊಟ್ಟಿಗೆಯಿಂದ ಬಿಚ್ಚಿಕೊಂಡು ಹೊರಟೆ. ರಾತ್ರಿ ಹತ್ತು ಗಂಟೆ ಮೇಲಿರಬಹುದು. ನನ್ನಕ್ಕ 'ತಡೀಲ ಮಗ ನಾ ಬತ್ತೀನಿ ಅಮವಾಸ್ಯೆ ಕಗ್ಗತ್ಲಾಗೆ-ಯಾಕೆ ಒಬ್ಬನೇ ಒಂಟಿದಿ' ಅಂತ ಜೊತೆಗೂಡಿದಳು, ಒಂದು ಹತ್ತು ಹೆಜ್ಜೆ ಹಟ್ಟಿ ಮುಂದೆ ಹಾಕಿದೆವು. ನಮ್ಮ ಕಣ್ ಸೂರಿನಲ್ಲೆ ಬೆಳಕಿನ ಪುಂಜವೊಂದು ನಿಧಾನವಾಗಿ ಊರ ಹಿಂದಿನಿಂದ ತೇಲಿದಂತಾಯ್ತು. ಹೊಂಗೆ ಮರದ ಸಾಲು ತೂರೆ, ತೋಪು, ಗಾಡಿ ಎಲ್ಲಾ ಸ್ಪಷ್ಟವಾಗಿ ನಿಂತಿರೋದು ಕಾಣುತ್ತದೆ. ಬೆಳಕಿನ ಉಂಡೆ ಮಾತ್ರ ಹಾಗೇ ಉರುಳಿ-ಉರುಳಿ ತುಮಕೂರು ಸ್ಮಶಾನದ ಕಡೆಗೆ ಹೋಗುತ್ತಿದೆ. ಪಕ್ಕದಲ್ಲಿದ್ದ ನಮ್ಮಕ್ಕನ್ನ ಕೇಳಿದರೆ ''ನನಗೇನೂ ಕಾಣಲ್ಲಪ್ಪ'' ಅಂತಾಳೆ. ನನಗೋ ಭಯ ಮಿಶ್ರಿತವಾದ ಆಶ್ಚರ್ಯ, ಈ ತನಕ ಅದು ಎಂತಹ ಬೆಳಕಾಗಿದ್ದಿರಬಹುದು

ಎಂಬುದರ ಬಗ್ಗೆ ಕುತೂಹಲಿಯೇ ಆಗಿದ್ದೇನೆ. ಯಾರನ್ನು ವಿಚಾರಿಸಿದರೂ ಅದು ಸಮಸ್ಯೆಯಾಗಿಯೇ ಉಳಿದಿದೆ.

ನಮ್ಮ ಹೈಸ್ಕೂಲು ಅಧ್ಯಾಪಕರೆಂದರೆ ಡಿ.ನರಸಿಂಹನ್, ಭೀಮರಾವ್, ಪ್ರೊ: ಎಂ.ಯಮುನಾಚಾರ್ಯ, ಪಂ|| ರಂಗಚಾರ್ಯ ಮೊದಲಾದವರು, ಡಿ.ನರಸಿಂಹನ್ ನಿಷ್ಠಾವಂತ ಅಧ್ಯಾಪಕರು. ವಿದ್ಯಾರ್ಥಿಗಳಲ್ಲಿ ಅತೀವ ಶಿಸ್ತಿರಬೇಕೆನ್ನುವವರು. ಒಂದು ದಿನ ತರಗತಿಯಲ್ಲಿ ಪಾಠ ಮಾಡುತ್ತಿರಬೇಕಾದರೆ ಪಕ್ಕದವನು ನನಗೇನೋ ಕಿವೀಲೆ ಹೇಳಲಿಕ್ಕೆ ಬಂದ. ಇದನ್ನು ಕಂಡ ನರಸಿಂಹನ್ ನಮ್ಮಿಬ್ಬರನ್ನು 'Stand up' ಎಂದರು, ನನಗೆ ಮೊದಲಿನಿಂದಲೂ ಆತ್ಮ ಗೌರವದ ಬಗ್ಗೆ ಕಾಳಜಿ. ನನ್ನ ತಪ್ಪಿಲ್ಲದಿದ್ದರೂ ಎದ್ದು ನಿಂತೆ. Stand up on the bench ಎಂದರು. ನಾನು ನಿಲ್ಲಲಿಲ್ಲ. ನನ್ನದೇನೂ ತಪ್ಪಿಲ್ಲವೆಂದು ಹೇಳುವಷ್ಟರಲ್ಲೆ 'Get out from my class room' ಎಂದು ಗುಡುಗಿದರು. ನಾನು ಎರಡನ್ನೂ ಮಾಡಲಿಲ್ಲ. ಪ್ರಾಯಶಃ ನರಸಿಂಹನ್ ಇದನ್ನು ಛಾಲೆಂಜಾಗಿ ತೆಗೆದು ಕೊಂಡರೇನೋ, ಹೆಡ್‌ಮಾಸ್ಟರ್ ರೂಮಿಗೆ ಓಡಿದರು. ಆಗ ಡಾ: ಕೆ.ಎನ್.ಕಿನಿ ಎಂಬುವವರು ಹೆಡ್‌ಮಾಸ್ಟರ್. ಭೌತಶಾಸ್ತ್ರದಲ್ಲಿ ತುಂಬಾ ಪರಿಣತರು. ಸುಮಾರು ಆರಡಿ ಚಿಲ್ಲರೆ ಎತ್ತರ, ಎತ್ತರಕ್ಕೆ ತಕ್ಕ ಹಾಗೆ ಗಾತ್ರ. ಭವ್ಯ ಮೂರ್ತಿ, ನೋಡಿದರೆ ಒಂದು ತರಹ ಮೈ ಜುಮ್ಮೆನ್ನುತ್ತಿತ್ತು. ನನಗೆ ಹೆಡ್‌ಮಾಸ್ಟರರಿಂದ ಬುಲಾವ್ ಬಂತು. ಎದೆ ಲಬ್‌ಡಬ್ ಹೊಡೆದುಕೊಳ್ಳೋಕೆ ಶುರುವಾದರೂ ನನ್ನದೇನೂ ತಪ್ಪಿಲ್ಲ ಎಂಬ ಆತ್ಮವಿಶ್ವಾಸ. ಅಂತರಾತ್ಮ ನುಡಿಸಿದಂತೆ ಹೇಳಿ ಬಿಟ್ಟರೆ ಆಯ್ತು ಅಂದುಕೊಂಡು ಹೆಡ್‌ಮಾಸ್ಟರವರ ಕೊಠಡಿಗೆ ಜೀವ ಕೈಯ್ಯಾಗೆ ಹಿಡ್ಕೊಂಡ್ ಹೋದೆ. ನಾನು ನಮಸ್ಕಾರ ಮಾಡಿ ನಿಲ್ಲುತ್ತಿದ್ದಂತೆಯೇ Are you a Maharaja to disobey your teacher? ಡಾ|| ಕಿನಿ ಗುಡುಗಿದರು. ಆಗ ನಾನು ಕೊಂಚ ಮೆತ್ತನೆಯ ಧ್ವನಿಯಲ್ಲಿ ಆದರೂ ಧೈರ್ಯವಾಗಿ 'Yes Sir, I am a Maharaja so for as my self-respect and honour are concerned' ಎಂದೆ. ನನ್ನ ಉತ್ತರ ಕೇಳಿ ಹೆಡ್‌ಮಾಸ್ಟರ್ ತಬ್ಬಿಬ್ಬಾದರು. ನಾನು ತಲೆ ತಗ್ಗಿಸಿನಿಂತೆ, ಒಂದು ಕ್ಷಣಮೌನ. ಆನಂತರ ಹೆಡ್ ಮಾಸ್ಟರ್ ಸಾವಧಾನದಿಂದ 'Yes Mr. Mallappa you can go' ಎಂದರು. ತರಗತಿಯ ಹುಡುಗರು ನನಗೆ ಛೀಮಾರಿ ಹಾಕಿರಬೇಕೆಂದು ಊಹಿಸಿದ್ದರೆ ನಾನು ಹುಮ್ಮಸ್ಸಿನಿಂದಲೆ ಹೆಜ್ಜೆ ಹಾಕುತ್ತ ನನ್ನ ಜಾಗದಲ್ಲಿ ಬಂದು ಕುಳಿತೆ. ಶ್ರೀ ನರಸಿಂಹನ್ ಬಂದು ಪಾಠ

ಮುಂದುವರಿಸಿದರು. ಅಂದು ನಾನು ಅಂತರಾತ್ಮ ನುಡಿದಂತೆ ನಡೆಯುವುದೇ ಶ್ರೇಯಸ್ಕರವೆಂದು ನಂಬಿದೆ.

ಈ ಸಂದರ್ಭದಲ್ಲಿ ಕನ್ನಡ ಪಂಡಿತ್ ರಂಗಚಾರ್ಯರ ವಿಷಯ ಹೇಳದಿದ್ರೆ ಲೋಪವಾಗುತ್ತದೆಂದು ಭಾವಿಸುತ್ತೇನೆ. ಮುಂಭಾಗದ ತಲೆಯೆಲ್ಲಾ ಬೋಡು ಹಿಂಭಾಗದ ತಲೆಯಲ್ಲಿ ಇಳಿಬಿದ್ದ ಪಿಳ್ಳಜುಟ್ಟಿನ ಸಣ್ಣ ಗಂಟು. ಎದ್ದು ಕಾಣುವ ಮೂರು ನಾಮ. ಮಾರುದ್ದ ಮೇಲುಕೋಟೆ ಅಂಚಿನ ಪಂಚೆ ಉಟ್ಕೊಂಡು ಕೆಂಪು ಶಾಲು ಹೊದ್ಕೊಂಡು ಬಂದ್ರೆ ಯಾರಿಗಾದ್ರು ಜಾಗ ಬಿಡಬೇಕು ಎನಿಸುತ್ತಿತ್ತು. ಅವರ ವೇಷಭೂಷಣಗಳನ್ನು ನೋಡಿದರೆ ಸಾಕು ಅವರ ಬ್ರಾಹ್ಮಣಿಕೆ ಎದ್ದು ಕಾಣುತ್ತಿತ್ತು. ಒಂದಿನ ನಮ್ಮ ಮಿತ್ರ 'ಯಾಕ ಸಾ ಬ್ರಾಹ್ಮಣರನ್ನ ಹಾರವರು ಅಂತಾರೆ' ಅಂದ ''ಅಯ್ಯೋರಂಡೆಗಂಡ ಅಷ್ಟು ಗೊತ್ತಾಗಲ್ವ ಮಡಿ ಮೈಲಿಗೆ ಮೇಲೆಯೇ ಬ್ರಾಹ್ಮಣ್ಯ ಇರೋದು. ಎಂಜಲು ಪಂಜಲು ಇರುವುದನ್ನೆಲ್ಲಾ ಅಲ್ಲಲ್ಲೆ ದಾಟುತ್ತ ಹಾರುತ್ತಾ ಬರುವುದರಿಂದ ಅವರನ್ನು ಹಾರವರು★ ಅಂತಾರೆ ಕಣೋ'' ಎಂದರು.

ಮೊದಲ ಸಾರಿ ಎಸ್.ಎಸ್.ಎಲ್.ಸಿ.ಯಲ್ಲಿ ಡುಂಕಿ ಹೊಡೆದೆ. ಅಣ್ಣನ ಮದುವೆ, ಊರ ಹಬ್ಬ, ಅಕ್ಕನೂರಿಗೆ ಓಡಾಟ, ಅನಾರೋಗ್ಯದಿಂದಾಗಿ ಆ ವರ್ಷ ಹೋಯ್ತು. ನನಗೆ ಮೊದಲಿನಿಂದಲೂ ಲೆಕ್ಕ ಎಂದರೆ ಎಲ್ಲಿಲ್ಲದ ತಲೆನೋವು. ಆ ಪೇಪರೆಂದರೆ ಉಸಿರು ಕಟ್ಟುವುದು ಎಂಬುದೇ ಯೋಚನೆ. ಮಿತ್ರರೊಬ್ಬರು ಆಪತ್ತು ಬಾಂಧವರಂತೆ ಸಿಕ್ಕಿದರು. ''ನೋಡಿ ಹಾಸನದ ಪ್ರೌಢಶಾಲೆಯ ರಿಟೈರ್ ಆಗಲಿರುವ ಮುಖ್ಯೋಪಾಧ್ಯಾಯರು ಈ ಸಾರಿ ಮ್ಯಾಥಮಾಟಿಕ್ಸ್ ಪೇಪರ್ ಕೊಟ್ಟಿದ್ದಾರಂತೆ. ಅವರು ಪ್ರಶ್ನೆ ಉತ್ತರಗಳನ್ನು ಒಳಗೊಂಡ ಒಂದು ನೋಟ್ಸ್ ಪ್ರಿಂಟ್ ಮಾಡಿಸಿದ್ದಾರಂತೆ. ಅದನ್ನು ತರಿಸಿ ಅನುಕೂಲ ಆಗಬಹುದು'' ಎಂದರು, ಹೊಳೇಲಿ ಮುಳುಗಿದೋನಿಗೆ ಹಗ್ಗ ಸಿಕ್ಕಿದಂತಾಯ್ತು. ತಕ್ಷಣ ನೋಟ್ಸ್ ತರಿಸಿದೆ. 100-120 ಲೆಕ್ಕಗಳನ್ನು ಮಾಡಲಾಗಿತ್ತು. ಸರಿ ರಾತ್ರಿ ಹಗಲು ಬೆಳಗಿನ ಜಾವ ಅವುಗಳನ್ನೆಲ್ಲಾ ಲೈನು ಲೈನು ಸಮೇತ ಉರು ಹೊಡೆಯುವುದೆ ನನಗೆ ಪರಿಪಾಠವಾಯಿತು. ಪರೀಕ್ಷೆ ಬಂತು. ಮುಕ್ಕಾಲು ಮೂರುವೀಸೆ ಪಾಲು ಲೆಕ್ಕಗಳು ಇದ್ದಂತಾಯ್ತು. ಮುಕ್ಕಾಲು ಪಾಲು ನಾನು ಉರು ಹೊಡೆದಿದ್ದವೇ

★ ಹಾರುವನ್-ಪಾರುವನ್-ಪಾರು-ಭವಿಷ್ಯ ನೋಡುವವನು.

ಬಂದಿದ್ದು. ನನಗೆ ಸ್ವರ್ಗಕ್ಕೆ ಮೂರೇ ಗೇಣು ಇದ್ದಂತೆನಿಸಿತು, ಚೆನ್ನಾಗಿ ಭಟ್ಟಿ ಇಳಿಸಿದೆ. ರಿಟೈರ್ ಆಗಲಿರುವ ಆ ಪುಣ್ಯಾತ್ಮ ಹೆಡ್‌ಮಾಸ್ಟರು, ಅವರ ಮಕ್ಕಳುಮರಿ ತಣ್ಣಗಿರಲೆಂದು ಪ್ರಾರ್ಥಿಸಿದೆ. ಕೋಡಿಬಸವಣ್ಣನ ಗುಡಿಗೆ ಹೋಗಿ (ದಿನಾ ಈ ಗುಡಿ ಮುಂದೇ ಪರೀಕ್ಷೆಗೆ ಹೋಗುತ್ತಿದ್ದೆ) ಕರ್ಪೂರ ಊದುಗಡ್ಡಿ ಹಚ್ಚಿ ಅಡ್ಡ ಬಿದ್ದು ಇಡ್‌ಗಾಯ್ ಹೊಡೆದೆ. ಫಲಿತಾಂಶ ಬಂತು. ಉತ್ತಮ ಶ್ರೇಣಿಯಲ್ಲಿ ಪಾಸಾಗಿದ್ದೆ. ಜೂನಿಯರ್ ಇಂಟ್ರಮೀಡಿಯಟಿಗೆ ಅರ್ಜಿ ಹಾಕಿದೆ. ಆಗಿನ ಸೂಪರಿಂಟೆಂಡೆಂಟ್ 'ನೀನು ಆಪ್ಷನಲ್ ಗಣಿತ ತೆಗೆದುಕೊಬೇಕು. ನಿನಗೆ ಗಣಿತದಲ್ಲಿ 80 ಅಂಕಗಳು ಬಂದಿದೆ' ಅಂತ ಪಟ್ಟು ಹಿಡಿದರು, ನನಗೆ ಜಂಘಾಬಲವೆ ಉಡುಗಿ ಹೋಯ್ತು. ಇನ್ನೆಲ್ಲಿ ಹುಡಕ್ಲಪ್ಪಾ ಹಾಸನದ ಮುಖ್ಯೋಪಾಧ್ಯಾಯರನ್ನ ಅಂತ, 'ಬೇಡಿ ಸಾ ದಯವಿಟ್ಟು ನನ್ನ ಈ ಗಣಿತದಿಂದ ಬಿಡುಗಡೆ ಮಾಡಿ ನೀವೇನು ಕೊಟ್ರೂ ತಗೊಂತೀನಿ' ಎಂದೆ. ಅಂತೂ ಗಣಿತದ ಹಿಡಿತದಿಂದ ಬಿಡುಗಡೆ ಆದೆ.

## ಇಂಟರ್ ಮೀಡಿಯಟ್

'ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್ ಕ್ಷಣತ್ಯಾಗೇ ಕುತೋ ವಿದ್ಯಾ ಕ್ಷಣ ತ್ಯಾಗೇ ಕುತೋ ಧನಂ.' ಅಂದರೆ ಒಂದು ಕ್ಷಣವನ್ನೂ ಉಪೇಕ್ಷಿಸದೆ ವಿದ್ಯೆಯನ್ನೂ, ಬಿಡಿಗಾಸನ್ನೂ ಅಸಡ್ಡೆ ಮಾಡದೆ ಹಣವನ್ನೂ ಸಂಪಾದಿಸಬೇಕು. ಕ್ಷಣವನ್ನು ವ್ಯರ್ಥ ಮಾಡಿದರೆ ವಿದ್ಯೆ ಇಲ್ಲ. ಬಿಡಿಗಾಸನ್ನು ಉಪೇಕ್ಷಿಸಿದರೆ ಹಣವಿಲ್ಲ ಎನ್ನುವ ನುಡಿಮುತ್ತು ಈ ಸಂದರ್ಭದಲ್ಲಿ ಉಲ್ಲೇಖನಾರ್ಹ. 'ಭೂಮಿಯಲ್ಲಿ ಹುಟ್ಟು ಕುರುಡರಿಗಿಂತ ಕಣ್ಣುಳ್ಳ ಕುರುಡರೆನಿತೊಳರು?' ಎಂಬ ಕುವೆಂಪುರವರ ಸೂಕ್ತಿ ನೆನಪಿಗೆ ಬರುತ್ತದೆ. ಒಂದು ಕ್ಷಣವನ್ನೂ ವ್ಯರ್ಥಮಾಡದೆ ವಿದ್ಯೆಯನ್ನು ಕಲಿಯಬೇಕೆಂಬುದಾಗಲಿ ಬಗೆಗಣ್ಣು ತೆರೆಯುವ ತನಕ ಮನುಷ್ಯನಿಗೆ ಅಂಧಕಾರ ದೂರವಾಗುವುದಿಲ್ಲವೆಂಬ ಮಾತಾಗಲಿ, ವಿದ್ಯೆಯ ನಿಜವಾದ ಮಹತ್ವ ತಿಳಿಸುತ್ತದೆ. ತಂದೆ ತಾಯಿಗಳು ಈ ಭೌತಿಕ ಶರೀರವನ್ನು ಕೊಟ್ಟಿದ್ದರೂ ಏಕಲವ್ಯ ಹೇಳುವಂತೆ ''ಆತ್ಮಮಂ ಕೊಟ್ಟವರ್..... ಬಿಜ್ಜೆಗಲಿಸಿದವರ್'' ನಿಜವಾದ ಮಾತಾ-ಪಿತೃಗಳಾಗುತ್ತಾರೆ. ನನ್ನ ಹೈಸ್ಕೂಲು ವಿದ್ಯಾಭ್ಯಾಸ ಯಾವ ಮಟ್ಟದಲ್ಲಿ ನಡೆಯಿತೆಂಬುದನ್ನು ಆಗಲೇ ಹೇಳಿದ್ದೇನೆ. ಜೀವನಕ್ಕೊಂದು ಮಾರ್ಗ. ಅದರ ದಾರಿ ವಿದ್ಯಾರ್ಹತೆಯ ಮೇಲೆ ಆಗಲಿ ಎಂಬ ಬಯಕೆ. ಆದರೆ 'ಸರ್ವಾತ್ಮ

ಸಾಧನೆಯೇ ಸರ್ವ ಸೇವಾ ವ್ರತ'' ಎಂಬ ಭಾವನೆ ಮೂಡಿದ್ದು ಈ ಕಾಲದಲ್ಲಿ. ಇದಕ್ಕೆ ಕಾರಣ ನಮ್ಮ ಮನೆಯವರಲ್ಲ, ಪರಿಸರವಲ್ಲ. ನನಗೆ ವಿದ್ಯೆ ಕಲಿಸಿದವರು. ನನಗೆ ಆತ್ಮಜ್ಞಾನ ಅರುಹಿದವರು. ಈ ಕಾಲದಲ್ಲಿ ಕನ್ನಡದ ಸರ್ವಶ್ರೇಷ್ಠ ವಿಮರ್ಶಕರೆಂದು ಖ್ಯಾತರಾಗಿರುವ, ಅತ್ಯುತ್ತಮ ಸೃಜನಶೀಲ ಹಾಗೂ ಅನುವಾದ ಬರಹಗಳಿಗೆ ಯಾವಾಗಲೂ ಹೆಸರಾಗಿರುವ ಶ್ರೀ ಎಸ್.ವಿ.ರಂಗಣ್ಣನವರು, ನಮ್ಮ ಮೇಸ್ಟ್ರಾಗಿದ್ದರು. ಅವರ ಶಿಷ್ಯನೆಂಬ ಒಣಹೆಮ್ಮೆ ಮಾತ್ರ ನನ್ನದು. ಅವರ ಅಗಾಧ ಕ್ರಿಯಾಶೀಲತೆಯಾಗಲಿ, ವಿದ್ವತ್ತಾಗಲಿ, ನನ್ನಲ್ಲಿ ಮೈಗೂಡದಿದ್ದರೂ ಚಟುವಟಿಕೆಯುಳ್ಳ ಅವರ ಬದುಕು ನನ್ನನ್ನು ಆಕರ್ಷಿಸಿತು. ಅವರು ನಡೆಸುತ್ತಿದ್ದ ಸಾಹಿತ್ಯಗೋಷ್ಠಿ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ನಾನು ತಪ್ಪದೆ ಭಾಗಿ. ವಿದ್ಯಾಭ್ಯಾಸದ ನಂತರ ನನ್ನದು ಬೇರೆ ದಾರಿಯಾದರೂ 'ಆಚಾರ್ಯರೆನಿತೋ ಶಿಷ್ಯರೊಳ್ ಆನ್ ಒರ್ವನ್' ಎಂಬ ಹೆಮ್ಮೆ ನನಗಿದೆ.

ಎಸ್.ಎಸ್.ಎಲ್.ಸಿ. ಮುಗಿಸಿದ ನಂತರ ಜ್ಯೂನಿಯರ್ ಇಂಟರ್ ಮೀಡಿಯೆಟ್‌ಗೆ ಸೇರಲು ಹೋದೆ, ನಮ್ಮವ್ವನಿಗಂತೂ ನಾ ಪೇಟ ಕಟ್ಕೊಂಡು ಮೇಸ್ಟ್ರಾಗ ಬೇಕಾಗಿತ್ತೆಂಬ ಬಯಕೆ; ಕೊನೆಗೂ ಆಕೆಯ ಆಸೆ ಕೈಗೂಡಲಿಲ್ಲವೆಂದೇ ಹೇಳಬೇಕು. ಗಣಿತದ ಕಪಿಮುಷ್ಠಿಯಿಂದ ಪಾರಾಗಿ ಇತಿಹಾಸ, ತರ್ಕಶಾಸ್ತ್ರಗಳನ್ನು ಐಚ್ಛಿಕವಾಗಿ ತೆಗೆದುಕೊಂಡೆ ಆಗ ಈಗಿನಂತೆ ಹಿಂದುಳಿದ ಜಾತಿಯವರು ಓದಿಗೆ ಬರುತ್ತಿದ್ದುದು ಕಡಿಮೆ, ಬಂದ ಒಬ್ಬಿಬ್ಬರು ಎಸ್.ಎಸ್.ಎಲ್.ಸಿ.ಯಲ್ಲೆ ಕೈ ತೊಳೆದುಕೊಂಡು ಬಿಡುತ್ತಿದ್ದರು. ಒಂದಿಷ್ಟು ಜನ ಕಾಲೇಜು ಮೆಟ್ಟಲು ಹತ್ತಿದರೂ ಪದವಿ ತೆಗೆದುಕೊಳ್ಳುತ್ತಿದ್ದವರು ಒಬ್ಬರೋ ಇಬ್ಬರೋ ಎನ್ನಬೇಕು. ಆಗ ವಿದ್ಯಾರ್ಥಿ ಉಪನ್ಯಾಸಕರ ನಡುವೆ ಸುಮಧುರವಾದ ಬಾಂಧವ್ಯವಿತ್ತು. ಹಿರಿಯನೆಂಬ ಬಿಗುಮಾನವಾಗಲಿ, ತಾನೇ ಸರ್ವಜ್ಞನೆಂಬ ಅಹಂಕಾರವಾಗಲಿ ಉಪನ್ಯಾಸಕರಲ್ಲಿ ಕಾಣುತ್ತಿರಲಿಲ್ಲ. ಹಾಗೆಯೇ ಒಣ ಪ್ರತಿಷ್ಠೆ, ಸೊಗಸುಗಾರಿಕೆ, ಆಲಸ್ಯ, ಉಡಾಫೆ, ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ಕಡಿಮೆ ಎನ್ನಬೇಕು. ಶ್ರೀ ರಂಗಣ್ಣನವರ ಮನೇಲಿ ಯಾವುದೇ ಹಬ್ಬವಾಗಲಿ ಅಥವಾ ವೈದೀಕವಾಗಲಿ, ನಾವು ರೋವರ್ ಸ್ಕೌಟ್ ವಿದ್ಯಾರ್ಥಿಗಳು ತಪ್ಪದೆ ಹಾಜರಾಗುತ್ತಿದ್ದೆವು. ನಡುಮನೆಯಲ್ಲಿ ಕುಳ್ಳಿರಿಸಿ ನಮಗೆಲ್ಲಾ ವಡೆಯೋ ಚಿತ್ರಾನ್ನನೋ ಪಾಯಸವನ್ನೋ ಕೊಟ್ಟರೇ ಅವರಿಗೆ ತೃಪ್ತಿ. ನಾವುಗಳೂ ಅಷ್ಟೆ ಶಾಲೆ, ಮನೆಯೆಂದಷ್ಟೇ ತಿರುಗುತ್ತಿದ್ದವರಲ್ಲ, ಎಷ್ಟೋ ಸಂದರ್ಭದಲ್ಲಿ ರಂಗಣ್ಣನವರು ಬಯಲಿನಲ್ಲಿ

ನಮ್ಮನ್ನು ಕೂರಿಸಿಕೊಂಡು ಶ್ರೀಯವರ ಗದಾಯುದ್ಧ ನಾಟಕ ಪಾಠ ಮಾಡಿರೋದುಂಟು. ನಮಗೆ ಅರ್ಥವಾಗಲಿ ಬಿಡಲಿ ಗ್ರೀಕ್ ನಾಟಕಗಳನ್ನು ಓದಿ ರುದ್ರನಾಟಕದ ಕಲ್ಪನೆಯನ್ನು ನಮ್ಮ ತಲೆಗೆ ತುಂಬಿ ಅವುಗಳಿಂದ ಶ್ರೀಯವರು ಹೇಗೆ ಪ್ರಚೋದಿತರಾದರೆಂಬುದನ್ನು ತಿಳಿಸದೆ ಬಿಡುತ್ತಿರಲಿಲ್ಲ. ಎಸ್‌ವಿ.ರಂಗಣ್ಣನವರ ನೇತೃತ್ವದಲ್ಲಿ ಸಾಹಿತ್ಯ ಗೋಷ್ಠಿ ಕಾರ್ಯಕ್ರಮ ಜರುಗುತ್ತಿತ್ತು. ಪ್ರತಿವಾರದ ಕೊನೆಯಲ್ಲಿ ಚರ್ಚಾಕೂಟ, ಸಾಹಿತ್ಯ ಗೋಷ್ಠಿ, ಜನಪದ ಹಾಗೂ ಭಾವಗೀತೆಗಳ ಕಾರ್ಯಕ್ರಮ ಜರುಗುತ್ತಿದ್ದವು. 'ಭಾರತದ ರೈತ' 'ಭಾರತದಲ್ಲಿ ಪ್ರಜಾಪ್ರಭುತ್ವದ ಅವಶ್ಯಕತೆ' 'ಭಾರತದ ಭವಿಷ್ಯ' ಮುಂತಾದ ವಿಚಾರಗಳಲ್ಲಿ ಬಿಸಿ ಬಿಸಿ ಚರ್ಚೆ ನಡೆಯುತ್ತಿದ್ದುದುಂಟು. ನಾನಂತೂ ನಮ್ಮ ತರಗತಿಯ ಪ್ರತಿನಿಧಿಯಾಗಿ ಇಂತಹವುಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದೆ. ತಿಂಗಳಲ್ಲಿ ಒಂದಾವರ್ತಿ ಅಂದಿನ ಮಹಾಮಹಿಮರ ಭಾಷಣಗಳ ಕಾರ್ಯಕ್ರಮವಿರುತ್ತಿತ್ತು. ಬಿ.ಎಂ.ಶ್ರೀ.... ಡಿಸೋಜ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ದೇವುಡು ನರಸಿಂಹಶಾಸ್ತ್ರಿ ಮುಂತಾದವರು ನಮ್ಮ ಕಾಲೇಜಿಗೆ ಬಂದಿದ್ದರು. ಸಹಜವಾದ ಸರಳವಂತಿಕೆ ನಿರಾಡಂಬರ ವ್ಯಕ್ತಿತ್ವದ ವೆಂಕಣ್ಣಯ್ಯನವರು ಕನ್ನಡ ಭಾಷೆಯ ಶ್ರೇಷ್ಠತೆಯನ್ನು ಕುರಿತು ಮಾತನಾಡಿದ ನೆನಪು. ಭಾಷಣದ ನಂತರ ನಮ್ಮಡಿಗೆ ಬಂದು ಪ್ರತಿಯೊಬ್ಬ ವಿದ್ಯಾರ್ಥಿಯ ಪರಿಚಯ ಮಾಡಿಕೊಂಡು ನಿರ್ಮಲ ವಾತ್ಸಲ್ಯದಿಂದ ಬೆನ್ನು ತಟ್ಟಿದ, ಆ ಮುಗ್ಧ ಮೂರ್ತಿಯ ನೆನಪು ಇನ್ನೂ ಹಸಿರಾಗಿದೆ.

ನಮ್ಮ ಕಾಲೇಜಿಗೆ ಬಾರದಿದ್ದರೂ ಇದೇ ಸಮಯದಲ್ಲಿ ತುಮಕೂರಿಗೆ ಆಗಮಿಸಿದ್ದ ಶ್ರೀ ಕೆ.ಹೆಚ್.ರಾಮಯ್ಯನವರನ್ನು ಜ್ಞಾಪಿಸಿಕೊಳ್ಳಲೇಬೇಕು. ಹಿಂದುಳಿದ ವರ್ಗಗಳಲ್ಲಿ ಅರಿವು ಮೂಡಿಸಲು ಆತ ಕೊನೆಯತನಕ ಹೆಣಗಿದ್ದುಂಟು. ಶ್ರೀರಾಮಯ್ಯನವರು ಅತ್ಯುತ್ತಮ ಭಾಷಣಕಾರರು. ವೇದಿಕೆ ಹತ್ತಿದರೆ ಸಾಕು, ತಮ್ಮ ಗ್ರಾಮೀಣ ನುಡಿಗಟ್ಟುಗಳಿಂದ ಶ್ರೋತೃ ಸಮೂಹವನ್ನು ಸೆರೆಹಿಡಿದು ಬಿಡುತ್ತಿದ್ದರು. ಅವರ ಹಾಸ್ಯ ಪ್ರಜ್ಞೆ, ಜೀವನಾನುಭವ, ಕೆಳವರ್ಗಗಳಲ್ಲಿ ವಿದ್ಯೆ ಪ್ರಸಾರ ಮಾಡಬೇಕೆಂಬ ಹಂಬಲ ನಿಜಕ್ಕೂ ಪ್ರಶಂಸಾರ್ಹವಾದುದು. ಯುವರಾಜ ನರಸಿಂಹರಾಜಒಡೆಯರವರ ತೀರಾ ಆಪ್ತರಾಗಿದ್ದ ಅವರು ಪೂರ್ಣ ಆಯಸ್ಸು ಪಡೆದಿದ್ದರೆ ಕೆಳವರ್ಗದ ಜನತೆಗೆ ಎಷ್ಟೋ ಉಪಕಾರವಾಗುತ್ತಿತ್ತು. ಈ ಸಮಾರಂಭಗಳು ಯಾವಾಗಲೂ ಸಂಜೆ ಆರರಿಂದ ಎಂಟರವರೆಗೆ ನಡೆಯುತ್ತಿತ್ತು. ಬೆಳಿಗ್ಗೆ ಬೇಗ ಒಂದೀಟು ಮುದ್ದೆನೋ, ಕಾಳೊ

ತಿಂದು ಬಂದರೆ ಮುಗೀತು. ರಾತ್ರಿಗೆ ಊಟ. ಇಂತಹ ಸಮಾರಂಭವೊಂದನ್ನು ಮುಗಿಸಿಕೊಂಡು ತಿರುಗುತ್ತಿದ್ದಾಗ ನಡೆದ ಘಟನೆಯೊಂದು ಜ್ಞಾಪಕಕ್ಕೆ ಬರುತ್ತಿದೆ. ಕಾಲೇಜಿನಿಂದ ನಮ್ಮ ಪಾಳ್ಯಕ್ಕೆ ಎರಡೂವರೆ ಮೈಲಿ ಆಗಬಹುದು. ಊರಂಚನ್ನು ದಾಟಿದ ಮೇಲೆ ಹೊಂಗೆ, ಅರಳಿ, ಹಾಗೂ ಆಲದ ಮರಗಳ ನಡುವೆ ಸ್ಮಶಾನದ ತೋಟದ ಸಂದಿನಿಂದ ನಡೆದು ಹೋಗಬೇಕು. ಒಂದೆರಡು ಫರ್ಲಾಂಗು ಕಳೆದರೆ ತುಮಕೂರು ನಗರದ ಸಾರ್ವಜನಿಕ ಸ್ಮಶಾನ ಸಿಗುತ್ತೆ. ಆ ದಿನ ರಾತ್ರಿ ಒಂಬತ್ತು ಗಂಟೆ ಸಮಯ. ಸಮಾರಂಭದ ಗುಂಗಿನಲ್ಲಿದ್ದು ನಾನು ಹರಿಶ್ಚಂದ್ರ ಪ್ರತಿಮೆ ದಾಟಿ ನಮ್ಮ ಪಾಳ್ಯದ ತಿರುವನ್ನು ಮುಟ್ಟಿದೆ. ತುಂತುರುಮಳೆ ಎಲ್ಲಿತ್ತೋ ಪ್ರಾರಂಭವಾಯಿತು. ಭರ್ರ್ರೋ ಎಂಬ ಗಾಳಿ. ಮರಗಳ 'ಕಿಟಲ್ ಕಿಟಲ್' ಎನ್ನುವ ಶಬ್ದ. ಮೋಡ ಕವಿದಿದ್ದು ಏನೂ ಕಾಣದಂತಹ ಕಗ್ಗತ್ತಲು. ಸ್ಮಶಾನದಲ್ಲಿದ್ದ ಕಲ್ಯಾಣಿಯನ್ನು ನಾನು ಬಳಸಿ ಹೋಗಬೇಕಾಗಿತ್ತು. ನಾನು ಅದರ ಹತ್ತಿರ ಬರುವಾಗ ಯಾರೋ ಎದ್ದ ಆಳು ಪಾವಟಿಕೆಗಳ ಮೇಲೆ ಶಬ್ದದೊಡನೆ ಕಲ್ಯಾಣಿ ಮೆಟ್ಟಿಲನ್ನು ಹತ್ತಿ ಬಂದಂತಾಯಿತು. ಅಚ್ಚ ಬಿಳಿ ಉಡುಪು ಮಾತ್ರ ಕತ್ತಲಲ್ಲಿ ಕಾಣಿಸುತ್ತಿತ್ತು. ನನಗೆ ಜಂಘಾಬಲವೇ ಉಡುಗಿ ಹೋದಂತಾಯ್ತು. ಪೈಜಾಮವೆಲ್ಲಾ ಒದ್ದೆ. ಎಲ್ಲ ಧೈರ್ಯವನ್ನು ಒಟ್ಟುಗೂಡಿಸಿ 'ಯಾರವರೆಂದೆ' ಉತ್ತರವಿಲ್ಲ. 'ಕೆಟ್ನೆಲ್ಲಪ್ಪೊ' ಅಂತ ಪಾಳ್ಯದ ಕಡೆ ಓಟ ಕಿತ್ತೆ. ಗದ್ದೆ ಬದುವಿನಲ್ಲಿ ನಡೆಯೋದೆ ಕಷ್ಟ ಎನ್ನಬೇಕಾದರೆ, ಇನ್ನೂ ಓಡೋಡಿ ಬರಬೇಕಾದರೆ ನನ್ನಳುಕೆಷ್ಟು ಎಂಬುದನ್ನು ಊಹಿಸಿ, ಮಳೆಯಲ್ಲೂ ಬೆವರಿನಿಂದ ನನ್ನ ಬಟ್ಟೆಗಳು ತೊಯ್ದುವು, ಓಡೋಡಿ ಬಂದು ನಮ್ಮ ಮನೆಯ ಕದವನ್ನೊದ್ದೆ. ನಾನು ಒದ್ದ ಅವಾಂತರಕ್ಕೆ ಬಾಗಿಲ ಹಿಂದೆ ಇದ್ದ ಕಾಲ್‌ಚೊಂಬು ಅಷ್ಟು ದೂರ ಹೋಗಿ ಬಿತ್ತು. ನನ್ನವ್ವ ಅಣ್ಣ ಆಗಲೇ ಘುಲಗಿದ್ದರು. ದಿಢೀರನೇ ಎದ್ದು ಕುಂತ್ರು, ನಡುಮನೆಗೆ ಹೋದೆ, ಅಡುಗೆ ಕೋಣೆಯಲ್ಲಿ ಸಾಲಾಗಿ ಪೇರಿಸಿದ್ದ ಮಡಕೆ ಸಾಲುಗಳು ಆ ಮಿಣಕು ಬುಡ್ಡೆಯಲ್ಲಿ ವಿಚಿತ್ರಾಕಾರವಾಗಿ ಕಂಡವು. ನನ್ನ ಗಾಬರಿ ನೋಡಿ ನಮ್ಮವ್ವ ಏನಾಯ್ತಾ ಮಗ ಅಂತ ಅರಚಿಕೊಳ್ಳೋಕೆ ಪ್ರಾರಂಭಿಸಿದಳು. ಏನಾದರೂ ಹೇಳಿದರೆ ರಾತ್ರಿಯೆಲ್ಲಾ ಅವರು ನಿದ್ದೆ ಮಾಡೋದಿಲ್ಲ ಎಂಬುದು ಗೊತ್ತು 'ಏನೂ ಇಲ್ಲ'ವೆಂದು ಉಂಡಶಾಸ್ತ್ರ ಮಾಡಿ ಮಲಗಿದೆ. ನಿದ್ದೆ ಬರದು. ಕನಸಿನಲ್ಲೂ ಏನೇನೋ ಕಾಣಿಸಿಕೊಂಡ ಹಾಗೆ. ಬೆಳಿಗ್ಗೆ ಎದ್ದರೆ ಒಂತರಹ ಮುಜುಗರ ''ನಾನು ಬಡ್ಕಳ್ಳುತ್ತೀನಿ ಹೊತ್ತು ಮುಳುಗೊಕಿಂತ ಮೊದ್ಲು ಗೂಡು ಸೇರ್ಲ ಅಂತ, ಯಾವೊತ್ತು ಎಂಗೊ ಅಂದ್ರೆ ನನ್ನ ಮಾತೆ ಕಿವೀಗೆ ಹಾಕ್ಕೊಳೋದಿಲ್ಲ'' ಎಂದು

ಅವ್ವನ ವಟ ವಟ, 'ನೀ ಸುಮ್ನಿರವ್ವ ಈಗ ಮಲ್ಲಣ್ಣ ಏನ್ ಮಾಡಿದನಂತ ಹಿಂಗೆ ವಟ ವಟ ಅಂತಿ' ಅನ್ನೋ ಅಕ್ಕನ ಸಾಂತ್ವನದ ನುಡಿ. ಅಂದು ರಜ ದಿನ, ಕಾಲೇಜಿಗೆ ಹೋಗಲಿಲ್ಲ. ಮನೇಲೆ ಕುಂತೆ. ನನ್ನ ಸಪ್ಪಗಿನ ಮುಖ ನೋಡಿ 'ಹೊನ್ನೇನಹಳ್ಳಿಗೆ ಹೋಗಿ ಕುಚ್ಚಂಗಮ್ಮನಿಗೆ ಅಡ್ಡ ಬಿದ್ದು ಬರೋಣ ಬಾರೋ' ಎಂದು ಅವ್ವನ ಬಲವಂತ. ಒಂದು ಪೂಜೆನಾದರೂ ಹಾಕಸ್ಬೇಕು-ಅಂತ ನಮ್ಮಣ್ಣನ ತೀರ್ಮಾನ. 'ಏನ್ ಬ್ಯಾಡ ಸುಮ್ಕಿರ್ರೀರಾ, ನಾ ಬರ್‍ರ್ಕೊಂತೀನಿ' ಎನ್ನುವುದು ನನ್ನ ಹೇಳಿಕೆ. ಒಟ್ನಲ್ಲಿ ಕವಿ ಬೇಂದ್ರೆಯವರು ಹೇಳಿದಂತೆ 'ಭೀತನ ಹಿಂದೆ ಭೂತ' ಎಂಬ ಮಾತು ನಿಜವಿರಬಹುದು. ಮಹಾರಾಷ್ಟ್ರದ ಸುಪ್ರಸಿದ್ಧ ಕಾದಂಬರಿಗಾರರಾದ ವಿ.ವಿ.ಖಾಡೇಕರ್ ಹೇಳುವಂತೆ ಜಗತ್ತಿನಲ್ಲಿ ಪೀಡೆ ಪಿಶಾಚಿಗಳಿಲ್ಲದಿದ್ದರೂ ಮನುಷ್ಯನ ಮನಸ್ಸಿನಲ್ಲಿರುವುದಂತೂ ಖಂಡಿತ.

ರಾಷ್ಟ್ರದಾದ್ಯಂತ ಸ್ವಾತಂತ್ರ್ಯದ ಕಿಡಿ ಉರಿಯುತ್ತಿದ್ದ ಕಾಲವದು. ಗಾಂಧಿ, ನೆಹರು, ಪಟೇಲ್, ಜಿನ್ನ, ಪಂಡಿತ ಮದನಮೋಹನಮಾಳವೀಯ, ಆಲಿ ಸಹೋದರರು ಸುಭಾಷ್‌ಚಂದ್ರಬೋಸ್, ಅವರುಗಳು ನಮಗೆ ಆರಾಧ್ಯ ಸ್ವರೂಪರಾಗಿದ್ದರು; ಕರ್ನಾಟಕದಲ್ಲೂ ಮಹಾಮಹಾ ನಾಯಕ ಶಿರೋಮಣಿಗಳಿದ್ದರು. ಚಂಗಲರಾಯರೆಡ್ಡಿ, ಪಟ್ಟಾಭಿರಾಮನ್, ಹೆಚ್.ಸಿದ್ದಯ್ಯ, ತಾಳಕೆರೆ ಸುಬ್ರಹ್ಮಣ್ಯಂ, ಹೆಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಹರ್ಡಿಕರ್ ಮಂಜಪ್ಪ, ಸಾಹುಕಾರ್ ಚನ್ನಯ್ಯ, ಟಿ.ಮರಿಯಪ್ಪ, ಎಂ.ಹೆಚ್.ಷಾ ಮುಂತಾದವರು ಮನೆ ಮಠಗಳನ್ನು ಬಿಟ್ಟು ಹೋರಾಟದ ಕಣಕ್ಕೆ ಇಳಿದರು, ನಮಗೂ ಬಿಸಿರಕ್ತ. ಈಚಲು ಮರ ಕಡಿಯೋದು, ಹೆಂಡದಂಗಡಿ ಮುಂದೆ ಪಿಕೆಟಿಂಗ್ ನಡೆಸೋದು ನಮ್ಮಗಳ ಸರ್ವ ಸಾಮಾನ್ಯವಾದ ಸಾಹಸವಾಗಿತ್ತು. ಆದರೆ ಎಲ್ಲಾ ಬಿಟ್ಟು ಚಳುವಳಿಗೆ ಧುಮುಕೋ ಪರಿಸರ ನಮಗೆಲ್ಲಿ? ಒಪ್ಪತ್ತಿಗಿದ್ರೆ ಮತ್ತೊಪ್ಪತ್ತಿಗೆ ಏನ್‌ಮಾಡೋದು ಎಂಬ ಚಿಂತೆ. ಕಣ್ಣುಕಟ್ಟಿದ ಕುದುರೆ ಹುಲ್ಲು ಕಂಡು ಅತ್ತಿತ್ತ ಸರಿದಾಡಿದರೂ ಮಾಲೀಕನೇಟಿಗೆ ಹೆದರಿ ಓಡುತ್ತಿರುವಂತೆ ಗುರಿ ಮುಟ್ಟಬೇಕೆಂಬ ಛಲದಿಂದ ನೆಟ್ಟ ನೋಟದಿಂದ ಓಡಿದೆ. ಬಿ.ಸಿ.ನಂಜುಂಡಯ್ಯ, ಟಿ.ವಿ.ತಿಮ್ಮೇಗೌಡ ಮಾಲಿಮರಿಯಪ್ಪ ಮುಂತಾದವರು ಈ ಕಾಲದಲ್ಲಿ ನನ್ನ ಸಹಪಾಠಿಗಳಾಗಿದ್ದರು, ರಂಗಯ್ಯಂಗಾರ್ ಎಂಬ ಧುರೀಣರೊಬ್ಬರು ಈ ಕಾಲದಲ್ಲಿ ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿದ್ದರ ನೆನಪು. ಗಾಂಧಿ ಸಾಹಿತ್ಯದಲ್ಲಿ ಅದ್ಭುತ ಕೆಲಸ ಮಾಡಿರುವ, ಸ್ವಾತಂತ್ರ್ಯ ನಂತರವು ಮಹಾತ್ಮರು ಹೇಳಿದ

ರಚಾನಾತ್ಮಕ ಕೆಲಸದಲ್ಲಿ ತನ್ನನ್ನೇ ತೊಡಗಿಸಿಕೊಂಡು ಈ ಮೂಲಕ ನಮ್ಮ ಜಿಲ್ಲೆಗೆ ಮಹತ್ತರ ಸೇವೆ ಸಲ್ಲಿಸಿರುವ ಜಿ.ಎ.ನಾರಾಯಣಮೂರ್ತಿ ನನಗೆ ಅತ್ಯಂತ ಆಪ್ತರಾದ ಗೆಳೆಯ. ನನ್ನ ಹಾಗೆಯೇ ಕರ್‍ರಗೆ, ಕುಳ್ಳಾಗಿದ್ದ ದೇಹ ಆತನದು. ಹೆಂಗೆಳೆಯರು ನಾಚುವಂತಹ ಜಡೆ. ಗಣಿತಶಾಸ್ತ್ರ ಆತನಿಗೆ ಅಚ್ಚುಮೆಚ್ಚು. ನನಗೊ ಅದು ತಲೆ ತಿನ್ನುವ ವಿಷಯ. ಆದರೆ ನಮ್ಮನ್ನು ಸಮಾನವಾಗಿಸುವ ಒಂದು ಮಾಧ್ಯಮವೆಂದರೆ ಆತ ಹೇಳುತ್ತಿದ್ದ ದೇವರನಾಮಗಳು. ನನಗೆ ಯಾವಾಗಾದರೂ ಬೇಸರವಾಗಲಿ ಆತನ ಕೊಠಡಿಗೆ ಹೋಗಿ 'ಒಂದು ಪದಹಾಡು ಮೂರ್ತಿ' ಎಂದು ಜಾಂಡ ಹೂಡಿ ಬಿಡುತ್ತಿದ್ದೆ. ದೇವರನಾಮ ಹೇಳ್ತ ತನ್ನನ್ನೇ ಮೈ ಮರೆಯುವ ಆತನನ್ನು ಕಂಡರೆ ಏನೋ ಆನಂದ. ಹೀಗೆ ಬೆಳೆದು ಬಂದ ನಮ್ಮ ಸ್ನೇಹ ದಶಕಗಳು ಉರುಳಿದರೂ ಮರೆಯದೆ ಹಾಗೆ ಉಳಿದಿರುವುದಕ್ಕೆ ನಮ್ಮಿಬ್ಬರ ನಿರ್ವ್ಯಾಜ ಪ್ರೇಮವೇ ಕಾರಣ.

1927ರ ಹೊತ್ತಿಗೆ ಇರಬಹುದು. ತುಮಕೂರು ವಿದ್ಯುತ್ ಶಕ್ತಿ ಪಡೆಯಿತು. ಈಗ ಇರುವ ರೆಡ್‌ಕ್ರಾಸ್‌ನ ಚರ್ಚ್ ಮುಂಭಾಗದಲ್ಲಿ ಅಗಲವಾದ ಹಾಳು ಭಾವಿ (ಈಗಿರುವ ರೆಡ್‌ಕ್ರಾಸ್ ಸಂಸ್ಥೆಯ ಸ್ಥಳದಲ್ಲಿ) ಇದ್ದು ಅದು ಬಿದ್ದಿದ್ದ ಕಾರಣ ಅದನ್ನು ಮುಚ್ಚಿ ಸಮಾರಂಭಕ್ಕೆ ಅಂದು ಅಣಿ ಮಾಡಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್, ಅವರ ಸೋದರರು, ದಿವಾನ, ರಾಜಪರಿವಾರದವರು ಸಮಾರಂಭಕ್ಕೆ ಆಗಮಿಸಿದ್ದರು. ನಾವು ಎಸ್.ವಿ.ರಂಗಣ್ಣನವರ ಶಿಷ್ಯರು ಎಂದರೆ ಸ್ಕೌಟ್‌ರೋವರ್ಸ್‌ಗಳಲ್ಲವೆ? ವೇದಿಕೆ ಸುತ್ತ ನೋಡ್ಕೊಳ್ಳುವುದೆ ನಮ್ಮ ಹೊಣೆ. ಸಮಾರಂಭ ಸರಿಯಾಗಿ ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯವರು ಗಂಭೀರಪೂರ್ಣವಾದ ವ್ಯಕ್ತಿತ್ವ, ನಾಡು ನುಡಿಗಳ ಬಗ್ಗೆ ಅಸಾಧಾರಣ ಪ್ರೇಮ. ತಮ್ಮ ಬರೆದ ಭಾಷಣದಲ್ಲಿ 'ನಮ್ಮ ಜನರು ವಿದ್ಯಾವಂತರಾಗಬೇಕು, ಆಧುನಿಕ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಪ್ರಗತಿ ಸಾಧಿಸಬೇಕು. ಹೋರಾಟವೊಂದೆ ಪ್ರಗತಿಯ ರಾಜಮಾರ್ಗ, ಪ್ರಗತಿಯ ಮತ್ತೊಂದು ಮುಖವೇ ಕ್ರಾಂತಿ' ಹೀಗೆ ಇನ್ನೂ ಏನೇನೋ ಹೇಳಿದ್ದುಂಟು. ಹುಚ್ಚು ಆವೇಶಕ್ಕಿಂತ ಚಿಂತನಾ ಪೂರ್ಣವಾದ ಯೋಚನೆಗಳು ಜನತೆಯ ಮಟ್ಟವನ್ನು ಮೇಲಕ್ಕೇರಿಸಬಲ್ಲವೆಂಬುದು ಅವರ ನುಡಿಯಾಗಿತ್ತು. ಆನಂತರ ಸ್ವಿಚ್ಚನ್ನು ಅದುಮಿ ತುಮಕೂರು ನಗರಕ್ಕೆ ಬೆಳಕು ಬರುವಂತೆ ಮಾಡಿದರು. ಜನಗಳು ಆಶ್ಚರ್ಯ ಹಾಗೂ ಸಂತೋಷದಿಂದ

ಹರ್ಷೋದ್ಗಾರ ಮಾಡಿದರು.

ಈ ಕಾಲದಲ್ಲಿ ಎಸ್.ವಿ.ರಂಗಣ್ಣನವರ ನೇತೃತ್ವದಲ್ಲಿ ತುಮಕೂರಿನಲ್ಲಿ ರೋವರ್ ಸ್ಕೌಟ್ ಚಟುವಟಿಕೆಗಳು ಭರದಿಂದ ನಡೆಯುತ್ತಿದ್ದವು. ನಾನು ಕೂಡ ಒಬ್ಬ ರೋವರ್ ಸ್ಕೌಟು. ಒಂದು ಕ್ರಿಸ್‌ಮಸ್ ರಜಾದಲ್ಲಿ ಶಿವಮೊಗ್ಗಾಕ್ಕೆ ಹೋದೆವು. ಫುಟ್‌ಬಾಲ್ ವಾಲಿಬಾಲ್, ಕ್ರಿಕೆಟ್ ಮುಂತಾದ ಆಟಗಳನ್ನು ಶಿವಮೊಗ್ಗ ಕಾಲೇಜಿನವರ ಮೇಲೆ ಆಡಿದೆವು. ಮುಕ್ಕಾಲು ವೀಸ ಪಾಲು ಎಲ್ಲಾ ಆಟಗಳನ್ನೂ ನಾವೇ ಗೆದ್ದೆವು. ಎರಡು ದಿನದ ನಂತರ ಶಿವಮೊಗ್ಗಾದಿಂದ ಬೆಳಗಿನ ಜಾವ 3 ಗಂಟೆಗೆ ಎದ್ದು ಸೆಟ್ಟಹಳ್ಳಿ ಕಾಡಿಗೆ ನಡೆದೇ ಹೋದೆವು. ಆದಷ್ಟು ಕಾಡನ್ನೆಲ್ಲಾ ಸುತ್ತಿ ಬಳಸಿದೆವು. ಹೆಜ್ಜೇನು ಹುಳುಗಳಿಂದ ಒಂದೆರಡು ಕಡೆ ಕಡಿಸಿಕೊಂಡು ಪಾರಾದದ್ದೂ ಆಯಿತು. ಸಾಯಂಕಾಲ 5 ಗಂಟೆ ವೇಳೆಗೆ ಉಪ್ಪಿಟ್ಟು ತಯಾರಿಸಿ ತಿಂದು ಊರು ಕಡೆ ಹೊರಟೆವು. ಇಷ್ಟು ಹೊತ್ತಿಗಾಗಲೇ ರಂಗಣ್ಣನೋರು ನಡೆಸಿದ ಆಯುರ್ವೇದ ಔಷಧ ಪರೀಕ್ಷೆಯಲ್ಲಿ ನಾನು ಮೊದಲಸ್ಥಾನಗಳಿಸಿದ್ದೆ. ಗಿಡಮೂಲಿಕೆಗಳಿಂದ ಎಂತೆಂಥ ಔಷಧಿ ತಯಾರಿಸಬಹುದು ಅಂತ ನನ್ನವ್ವ ಕಲಿಸಿ ಕೊಟ್ಟದ್ದನ್ನ ಬರೆದು ಬಹುಮಾನ ಗಿಟ್ಟಿಸಿಕೊಂಡಿದ್ದೆ. ಹಾಗೆ ಸುಮ್ಮನೆ ನಡೆದು ಹೊರಟ ನಮ್ಮನ್ನ ರಂಗಣ್ಣ ಮೇಷ್ಟು 'ಯಾಕ್ ಫಾರೆಸ್ಟ್‌ರನ್ನಿಂಗ್ ತೊಗೊಳ್ಳಬಾರದು' ಅಂತ ಪ್ರಚೋದಿಸಿದರು. ನಮ್ಮಗಳನ್ನ ಕೇಳಬೇಕೆ 'ಸರಿ' ಎಂದೆವು. 'ಹೇಗಪ್ಪ ಓಡೋದು ಗಡದ್ದಾಗಿ ಉಪ್ಪಿಟ್ಟು ಸೇರಿಸಿ ಬಿಟ್ಟಿದ್ದೇನಲ್ಲ' ಅಂತ ನನ್ನ ಯೋಚನೆ. ಬಿಟ್ಟರೆ ಮರ್ಯಾದೆ ಉಳಿಯುತ್ತದೆಯೇ? ಅಂತ ಇನ್ನೂ ಒಂದಿಷ್ಟು ನೀರು ಕುಡಿದು ಬಾಯಿಗೆ ಬೆರಳು ಹಾಕಿ ತಿವಿದುಕೊಂಡು ತಿಂದಿದ್ದನ್ನೆಲ್ಲಾ ಕಕ್ಕಿ ಹೊಟ್ಟೆ ಖಾಲಿ ಮಾಡಿಕೊಂಡು ಓಡಲು ಪ್ರಾರಂಭಿಸಿದೆ. ಅಂತೂ ಎರಡನೆಯ ಸ್ಥಾನ ನನಗೆ ದಕ್ಕಿತು. ಬಡ್ಡಿಮಗ ರೇವಣ್ಣ ಮೊದಲನೆ ಜಾಗ ಬಿಟ್ಕೊಡಲಿಲ್ಲ. ಆನಂತರ ಬೆಳಿಗ್ಗೆ ನಮಗೆಲ್ಲಾ ಬೀಳ್ಕೊಡುಗೆ ಸಮಾರಂಭ, ಅಲ್ಲಿನ ಕಾಲೇಜು ಸೂಪರಿಂಟೆಂಡೆಂಟ್ ಹಾಗೂ ರಂಗಣ್ಣನೋರ ಗುರುಗಳಾಗಿದ್ದ ನಾಗೇಶರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡುತ್ತಾ 'ಈ ರಂಗಣ್ಣನವರಿಗೆ ನಾನು ಇಂಗ್ಲೀಷಿನಲ್ಲಿ ಹಿಂದೆ 95 ಅಂಕಗಳನ್ನು ಕೊಟ್ಟಿದ್ದೇನೆಂದರೆ, ಇವರು ಮಹಾ ವಿದ್ವಾಂಸನಾಗುವುದರಲ್ಲಿ ಸಂಶಯವೆ ಇಲ್ಲವೆಂದು ಆಗಲೇ ಹೇಳಿದ್ದೆನೆಂದು ಸಾರಿದರು. ಆಗಿನ್ನೂ ರಂಗಣ್ಣನವರ ಸಾಹಿತ್ಯ ಸೇವೆ ಅಷ್ಟಾಗಿ ಬೆಳಕು ಕಂಡಿರಲಿಲ್ಲ. ಆನಂತರ

ಸಾಯಂಕಾಲ ಮನರಂಜನಾ ಕಾರ್ಯಕ್ರಮ, ನಮ್ಮ ತಂಡದವರಿಂದ 'ಭಕ್ತ ಪ್ರಹ್ಲಾದ' ಎಂಬ ಬಯಲಾಟ. ಪಾತ್ರಧಾರಿಗಳು ಗ್ರೀನ್ ರೂಮಿನಿಂದ ಪ್ರವೇಶಿಸುತ್ತಿರಲಿಲ್ಲ. ಕೊನೆಯಲ್ಲೆಲ್ಲೋ ನಿಂತುಕೊಂಡು ಸೂತ್ರಧಾರನ ಆಜ್ಞೆಯಂತೆ ಕೂಗುತ್ತ ಝೇಂಕರಿಸುತ್ತಾ. ದುಗುಳದಿಂದ ರಂಜಿಸುವ ಪಂಜುಗಳನ್ನು ಹಿಡಕೊಂಡು ಪ್ರೇಕ್ಷಕರನ್ನು ಸೀಳಿಕೊಂಡು ರಂಗವೇದಿಕೆಯನ್ನು ಹತ್ತುತ್ತಿದ್ದರು. ಆಟದ ಸೂತ್ರಧಾರ ಹನುಮನಾಯಕನ ಪಾತ್ರ ನನ್ನದೆ. ಮಿತ್ರ ಒಡ್ಡಗಲ್ಲಪ್ಪ ಹಿರಣ್ಯಾಕ್ಷ. ಭದ್ರಪ್ಪ ಹಿರಣ್ಯಕಶ್ಯಪು. ಟಿ.ಆರ್.ರಾಮಯ್ಯ ಪ್ರಹ್ಲಾದನ ತಾಯಿಪಾತ್ರ. ಜಿಲ್ಲಾ ಡೆಪ್ಯುಟಿ ಕಮೀಷನರ್ ಆದಿಯಾಗಿ ಜನ ಕಿಕ್ಕಿರಿದು ತುಂಬಿತ್ತು. ಅಪಾರ ಜನತೆ ನಮ್ಮ ಕುಣಿತ, ವೇದಿಕೆಯ ಬಳಕೆ, ಹನುಮನಾಯ್ಕನ ವರಸೆ, ಅವನು ಬಳಸುವ ಕಂದ ಮಟ್ಟುಗಳ ಹಾಡುವಿಕೆ ಇವುಗಳನ್ನು ಕಂಡು ಚಪ್ಪಾಳೆ ತಟ್ಟಿ, ವಾರೆವ್ಹಾ! ವ್ಹಾ! ಎಂದು ನಮಗೆ ಶಭಾಶ್‌ಗಿರಿ ಕೊಟ್ಟರು. ಒನ್ಸ್‌ಮೋರುಗಳ ಸುರಿ ಮಳೆಯೋ ಸುರಿಮಳೆ. ರಂಗಣ್ಣನವರಿಗೆ, ಅದಕ್ಕಿಂತಲೂ ಹೆಚ್ಚಾಗಿ ನಮಗೆ ಆದ ಆನಂದ ಹೇಳತೀರದು.

ವರ್ಷದ ಕೊನೆಯಲ್ಲಿ ಸ್ಕೌಟ್ ದಳದ ವಾರ್ಷಿಕೋತ್ಸವದ ಸಮಾರಂಭ, ಅದರ ಅಂಗವಾಗಿ ಆಟೋಟಗಳ ಸ್ಪರ್ಧೆ, ನಮ್ಮ ಸರ್ಕಾರಿ ಕಾಲೇಜಿನಿಂದ (ಬೆಂಗಳೂರು ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿರುವ) ಸಿದ್ಧಗಂಗೆ ಬೆಟ್ಟಕ್ಕೆ ಕಂಟ್ರಿ ಮೈಲ್ ರೇಸ್ ಏರ್ಪಟ್ಟಿತ್ತು. ನಾನೊಬ್ಬ ಸ್ಪರ್ಧಾಳು. ಯಾವಾಗಲೂ ನನಗೆ ದ್ವಿತೀಯ ಸ್ಥಾನವೆ ಮೀಸಲೆ! ಈ ಸಾರಿ ಒಂದು ಕೈ ನೋಡಿಬಿಡಬೇಕೆಂದುಕೊಂಡು, ಬೆಳಗಿನಜಾವಕ್ಕೆ ಎದ್ದು ನಮ್ಮ ಹೊಲದ ಹತ್ತಿರಕ್ಕೆ ಓಡೋದು. ಅಲ್ಲಿರುವ ಸಿದ್ಧಕಟ್ಟೆ ಏರಿಮೇಲೆ ಓಡೋಡಿ ಹತ್ತೋದು. ಅದೇ ವೇಗದಲ್ಲಿ ಮನೆ ಸೇರೋದು ನನ್ನ ತಯಾರಿಯ ಅಭ್ಯಾಸವಾಯಿತು. ಸ್ಪರ್ಧೆ ದಿನ ಬಂತು. ಸಾಯಂಕಾಲ ನಾಲ್ಕು ಗಂಟೆಗೆ ಅದು ಪ್ರಾರಂಭವಾಗುವುದೆಂದು ತಿಳಿದು ಎರಡು ಗಂಟೆಗೇನೆ ನಮ್ಮ ಪಾಳ್ಯ ಬಿಟ್ಟು ತೋಟದ ಸಾಲಿನಲ್ಲಿ ಬರುತ್ತಿದ್ದೆ. ಒಂದು ಕವಲು ದಾರಿ ಬಳಸಿ ನೇರ ರಸ್ತೆಗೆ ಇಳಿವ ಹೊತ್ತಿಗೆ ಇಬ್ಬರು ಗುಂಡಮ್ಮಂದಿರು (ಗಂಡ ಸತ್ತ ಬ್ರಾಹ್ಮಣ ವಿಧವೆಯರು) ಎದರುರಾಗಬೇಕೆ? ಒಳ್ಳೆ ಪೀಡೆಗಳ ಸಹವಾಸ ಆಯಿತಲ್ಲಪ್ಪ: ಮನೆಯಿಂದ ಹೊರಡಬೇಕಾದರೆ ಬೆಕ್ಕುಗಿಕ್ಕು ಅಡ್ಡಾಗೋದನ್ನ ತಪ್ಪಿಸಿಕೊಂಡು ಬಂದರೆ ಇವರು ವಕ್ಕರಿಸಬೇಕೆ? ಸರಿ ಒಂದು ನಿಮಿಷ ಕುಂತು ಶಾಸ್ತ್ರ ಮಾಡಿ ಹೊರಟೆ, ಕಾಲೇಜಿಗೆ ತಲುಪಿದ ತಕ್ಷಣ ಮಿತ್ರರ ಹಾಗೂ ಸ್ಪರ್ಧೆಯ

ಸಿದ್ಧತೆ ನೋಡಿ ಆ ವಿಷಯ ಮರೆತು ಹೊಯ್ತು. ಸುಮಾರು 20-25 ಜನ ಓಡಲು ಸಿದ್ಧರಾದೆವು. ಎಲ್ಲರೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಿ ಕ್ಯಾತ್ಸಂದ್ರದ ಮೂಲಕ ಸಿದ್ಧಗಂಗೆ ಬೆಟ್ಟ ಏರಲು ಮುಂದಾದರು. ನಾನು ಕಾಲುದಾರಿ ಹಿಡಿದೆ. ಹೊಲ ಕುಯ್ದಿದ್ದ ಕಾರಣ ಕೂಳೆಗಳು ಕಾಲಿಗೆ ಚುಚ್ಚಿ ರಕ್ತ ಬಂತು. ಅಲ್ಲಲ್ಲೆ ಜನ ಕಣಗಳಲ್ಲಿ ಒಕ್ಕಣೆ ಕೆಲಸ ಮಾಡುತ್ತಿದ್ದರು. ಹೀಗೆ ಹುಚ್ಚಾ ಪಟ್ಟೆ ಓಡುತ್ತಿದ್ದ ನನ್ನನ್ನು ಕಂಡು ನಾಯಿಗಳು ಅಟ್ಟಿಸಿಕೊಂಡು ಬಂದವು. ಕಾಲಿಗೆ ಕೂಳೆ ಚುಚ್ಚಿದ ನೋವು ಬೇರೆ ನಾಯಿಗಳ ಕಾಟ ಬೇರೆ. ಅಂತು ಇಂತು ಇಂತಹ ಏದುಬ್ಬಸದಿಂದ ಬೆಟ್ಟ ಏರಲು ಪ್ರಾರಂಭಿಸಿದೆ. ಇನ್ನೊಂದು ನೂರು ಅಡಿ ಇರಬಹುದು. ದಿಢೀರನೆ ತೋಟದ ಸಂದಿನಲ್ಲಿ ಕಂಡ ಗುಂಡಮ್ಮಂದಿರು ನೆನಪಿಗೆ ಬರಬೇಕೆ! ಕೈ ಕಾಲು ನಡುಕ ಅಲ್ಲೇ ಕುಸಿದೆ! ದೂರದಲ್ಲಿದ್ದ ನಮ್ಮ ಮೇಷ್ಟರುಗಳಿಗೆ ಗಾಬರಿ. ಕಣ್‌ಬಿಟ್ರೆ ಹಿಂಬದಿಯಲ್ಲೆ ಏರೇರಿ ಎದುರಾಳಿ ರೇವಣ್ಣ ಬರುತ್ತಿದ್ದ! ಶಕ್ತಿನೆಲ್ಲಾ ಒಂದುಗೂಡ್ಸಿ ಒದರಿ ಎದ್ದು ನಿಂತೆ. ಓಡಿದೆ... ಓಡಿದೆ.... ಕೊನೆಗೂ ಸ್ಪರ್ಧೆಯಲ್ಲಿ ಮೊದಲನೆ ಸ್ಥಾನ ನನ್ನದಾಯಿತು. ನನಗೆ ಬೆಳ್ಳಿ ಕಪ್ಪು ಬಂತು. ''ಧೀರನಾದವನು ಒಂದು ಸಾರಿ ಮಾತ್ರ ಸತ್ತರೆ ಭೀತನಾದ ವ್ಯಕ್ತಿ ಪ್ರತಿ ನಿಮಿಷ ಸಾಯ್ತಾನಂತೆ'' ಅನ್ನೋ ಮಾತನ್ನು ನನ್ನಂತ ಅದರುದೊಮ್ಮೆ ಮನುಷ್ಯನ್ನ ನೋಡಿಯೆ ಹೇಳಿರಬೇಕು. ಇದೇ ಕಾಲದಲ್ಲಿ ನಡೆದ ವೈಯಕ್ತಿಕ ಘಟನೆಯೊಂದನ್ನು ಹೇಳಬೇಕು. ಕವಿ ಪೋಪನ 'ತಪ್ಪು ಮಾಡೋದು ಮನುಷ್ಯನ ಸ್ವಭಾವ, ಕ್ಷಮಿಸೋದು ದೈವದ ಸ್ವಭಾವ' (To err is human forgive is divine) ಮಾತು ನಿಜವಾದರೆ ದೈವ ನನ್ನನ್ನ ಕ್ಷಮಿಸಿರಲೇಬೇಕು. ಆದದ್ದು ಹೀಗೆ. ನಾನು ಮತ್ತು ನನ್ನ ಸೋದರಮಾವ ನರಸಯ್ಯನವರು ವ್ಯಾಸಂಗದ ಪ್ರಭಾವದಿಂದಲೋ ವೈಯಕ್ತಿಕ ವ್ಯಕ್ತಿ ಪ್ರಭಾವದಿಂದಲೋ ಮಾಂಸಾಹಾರವನ್ನು ತ್ಯಜಿಸಬೇಕೆಂದು ನಿರ್ಧರಿಸಿದೆವು, ಹಾಗೆಯೇ ಸ್ವಲ್ಪ ದಿನ ನಡೆಯಿತು. ಮನೆಯಲ್ಲಿ ತರಾಟೆಗೆ ಶುರು ಮಾಡಿದರು· ನಿಮ್ಮನ್ನು ಬಿಟ್ಟು ನಾವು ಹೆಂಗೆ ತಿನ್ನೋದು? ನಮಗೂ ಕೂಡ ಅಷ್ಟೆ. ಗಂಗಳದಲ್ಲಿ ಬಾಡ್ನೆಸರು ಮುದ್ದೆ ಕಂಡರೆ ಬಾಯ್ನೀರು ಸುರಿಯೋದು. ಯಾರೋ ಅಪ್ಪಂತ ಹಿರಿಯರು ಹೇಳಿದರು. ದಂಡದ ರೂಪದಲ್ಲಿ ಮೂರು ಕಾಸು ದೇವರಿಗೆ ಹಾಕಿ ತಿನ್ನೋಕೆ ಶುರುಮಾಡಿ ಅಂತ. ನನ್ನ ಸೋದರ ಮಾವ ಹಾಗೇ ಮಾಡ್ಬಿಟ್ರು. ನಂಗೋ ಮನಸ್ಸಿನಲ್ಲೇ ಅಳುಕು. ಒಂದು ತಿಂಗಳ ಕಾಲ ತಡೆಹಿಡಿದೆ. ಈ ಕಡೆ ಚಪಲ ಹಾಗೂ ಮನೆಯವರ ಒತ್ತಾಯ ಹೆಚ್ಚಾಯ್ತು. ಕೊನೆಗೆ ಕೋಡಿ ಬಸಪ್ಪನ ಗುಡಿಗೆ ಹೋಗಿ 'ಬಿಡ್ತು' ಅಂತ ನಾಲ್ಕಾಣೆ ದಂಡ ಹಾಕಿ ವ್ರತ ಮುರಿದುಕೊಂಡು

ಪ್ರಾರಂಭ ಮಾಡಿದೆ. ಆದರೆ ಈಚೆಗೆ ಆಗ್ನಿಂದಲೂ ಮನಸ್ಸಿನ ವ್ಯಾಕುಲ, ಆರೋಗ್ಯದೃಷ್ಟಿ ಇವುಗಳಿಂದಾಗಿ ಮಾಂಸಾಹಾರವನ್ನು ಪೂರ್ತ ತ್ಯಜಿಸಿದ್ದೇನೆ. ಮನುಷ್ಯ ಹೇಗೆ ಇಂದ್ರಿಯ ಚಾಪಲ್ಯಗಳಿಗೆ ಬಲಿಯಾಗ್ತಾನೆ ಎಂಬುದನ್ನು ನೆನೆದರೆ ನನ್ನ ಈ ಸಂಬಂಧದ ಬದುಕಿಗೆ ಅರ್ಥವಿಲ್ಲ ಅನ್ನಿಸುತ್ತದೆ.

ಹೇಗೋ ಶಾಲಾ ಚಟುವಟಿಕೆಗಳಲ್ಲಿ ನಾ ಮುಂದಿದ್ದರೂ, ಮನೆಯ ಪರಿಸ್ಥಿತಿ ಶೋಚನೀಯವಾಗಿತ್ತು. ಅಣ್ಣನ ಮದುವೆಯ ದೆಸೆಯಿಂದ ಮಾಡಿದ ಸಾಲಗಳು ಇನ್ನೂ ಹಾಗೆ ಕುಂತಿದ್ವು. ನಮ್ಮ ಗೇಯ್ಮೆಯೆಲ್ಲಾ ಅವುಗಳ ಬಡ್ಡಿಗೆ ಹೋಗುತ್ತಿತ್ತು. ಒಂದು ದಿನ ಯಾವುದೋ ಸಮಾರಂಭ ಮುಗಿಸಿಕೊಂಡು ಹಟ್ಟಿ ಸೇರಿದಾಗ ರಾತ್ರಿ 8-30 ಇರಬಹುದು. ಮನೆಯವರೆಲ್ಲಾ ಪಡಸಾಲೆಯಲ್ಲಿ ಮಲಗಿದ್ದರು. ಜಾಕಾಯ ಪೆಟ್ಟಿಗೆ ಹತ್ತಿರ ನಮ್ಮಕ್ಕ, ನಮ್ಮವ್ವ ಹಾಗೆ ಸಾಕಾಗಿ ಸೋತು ಒರಗಿಕೊಂಡಿದ್ದರು. ಮೂಲೆಯೊಂದರಲ್ಲಿ ನಮ್ಮಣ್ಣ, ಅತ್ತಿಗೆ ಮಲಗಿದ್ದರು. ಬಾಗಿಲ ಬಳಿ ಇದ್ದ ಒರಳು ಕಲ್ಲು ಮೇಲೆ ಗೂಡೆ ಇಟ್ಟಿದ್ದರು. ಬೀಸುವ ಕಲ್ಲು ನಿವೃತ್ತವಾಗಿ ಮಲಗಿತ್ತು. ಮನೆಯಲ್ಲಿ ಏನೂ ಇಲ್ಲದಿದ್ದಾಗ ಒಬ್ಬರನ್ನೊಬ್ಬರು ಮಾತನಾಡಿಸದೆ ಹಾಗೆ ಉರುಳಿಕೊಳ್ಳೋದು ನಮ್ಮ ಮನೆ ಪರಿ ಪಾಟ. ನಡುಮನೆ ದಾಟಿ ಅಡುಗೆ ಕೋಣೆಗೆ ಹೋದೆ. ಒಲೆಗೆ ಬೆಂಕೀನೆ ಹಾಕಿರಲಿಲ್ಲ. ಹಿಟ್ಟು ಎಸರಿನ ಮಡಕೆಗಳು ಬೋರ್‍ಲು ಬಿದ್ದಿದ್ದವು. ಇನ್ನು ಇತರೆ ಮಡಕೆಕುಡಿಕೆ ತಡಕಿದೆ ಎಲ್ಲೂ ಏನೂ ಇಲ್ಲ. ನನಗೋ ಬೆಳಗ್ಗೆ ಒಂದಿಷ್ಟು ಹಿಟ್ಟು ತಿಂದು ಹೋದ್ದು. ಏನಾದರೂ ತಿನ್ನಬೇಕೆಂಬ ಅದಮ್ಯ ಆಸೆ, ಹಸಿವಿನಿಂದ ಹುಚ್ಚನಂತಾಗಿದ್ದೆ. ಕಣ್ಣು ಹಾಗೆ ಮುಚ್ಚಿ ಹೋಗುತ್ತಿದ್ದುವು. ಹೊಟ್ಟೆ ತಾಳ ಹಾಕುತ್ತಿತ್ತು. ಹಾಲು ಮೊಸರು ತುಪ್ಪಗಳನ್ನಿಡಲು ಚಾವಣಿಯ ಗಳಕ್ಕೆ ಕಟ್ಟಿ ಇಳಿಬಿಟ್ಟಿದ್ದ ನಿಲುವು ಕಾಣಿಸಿತು. ಅವನ್ನು ನೋಡಿದರೆ ಒಂದು ಸಣ್ಣ ಕುಡಿಕೆಯಲ್ಲಿ ಒಳ್ಳೆಗೂ ಕಮ್ಮಿಯಷ್ಟು ಹಾಲಿತ್ತು. "ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಹಾಲು ಸಾಕ" ಎಂದುಕೊಂಡೆ. ಪಕ್ಕದಲ್ಲಿ ನೋಡಿದರೆ ದೇವಾನುದೇವತೆಗಳಿಗೆ ಪೀಡೆ ಪರಿಹಾರಾರ್ಥ ಅರಿಶಿನದ ಬಟ್ಟೆಯಲ್ಲಿ ನಿಲುವಿಗೆ ಹರಕೆ ಕಟ್ಟಿದ ಹರುಕು ಸಣ್ಣ ಸಣ್ಣ ಮೀಸಲು ಅಕ್ಕಿ ಗಂಟುಗಳು ಕಾಣಿಸಿಕೊಂಡವು. ಸದ್ದು ಮಾಡದೆ ಎರಡು ಮೂರು ಗಂಟು ಬಿಚ್ಚಿದೆ, ಒಂದು ಹಿಡಿಯಷ್ಟು ಅಕ್ಕಿ ಆಯಿತು. ತೊಳೆದು ಮಣ್ಣಿನ ಪಾಸಾಲೆಗೆ ಸುರುವಿ ಒಲೆ ಮೇಲಿಟ್ಟು ಪುಳ್ಳೆ ನೂಕಿ ಉರಿ ಮಾಡಿದೆ. ಅವ್ವ ಮತ್ತು ಅಕ್ಕ ಎಚ್ಚರವಾಗಿದ್ದಿರಬಹುದು ಮೊಟ್ಟೆ ಗಿಟ್ಟೆ ಬೇಸಿಕೊಂಡು ತಿಂತಾನೇನೋ ಅಂತ

ಸುಮ್ಮಿರಬಹುದು. ಮೂವ್ವತ್ತು ನಲ್ವತ್ತು ನಿಮಿಷಗಳಲ್ಲಿ ಅನ್ನ ಆಯ್ತು. ತಟ್ಟೆಗೆ ಸುರ್ಕೊಂಡು ಉಪ್ಪು ಹಾಕಿ ಮಿದ್ದು ಒಂದು ತುತ್ತು ಬಾಯ್ಗಾಕೊಂಡೆ, ಏನೂ ತಿನ್ನದೆ ಬೈಗಿನಿಂದ ಹೊಲದಲ್ಲಿ ದುಡಿದ ಬಂದಿದ್ದ ಅತ್ತಿಗೆ, ಅಕ್ಕ, ಅವ್ವ ಹಾಗೂ ಅಣ್ಣ ತಟಕ್ಕನೆ ಜ್ಞಾಪಕಕ್ಕೆ ಬಂದರು. ಚೊಂಬಿನಲ್ಲಿದ್ದ ನೀರ್ಕುಡಿದು, ಹಾಗೆಯೇ ತಟ್ಟೆಗೆ ಕೈ ತೊಳೆದುಕೊಂಡು ಎದ್ದೆ; ''ನನ್ನಂತಹ ಪಾಪಿಯುಂಟೆ'' ಎಂದು ರಾತ್ರಿಯೆಲ್ಲಾ ಪರಿತಪಿಸಿದೆ. ಮನೆ ಮಂದಿಯೆಲ್ಲಾ ಉಪಾಸ ಮಲಗಿರುವಾಗ ನಾನು ಅನ್ನ ತಿನ್ನುವುದು ಪಾಪ ಕಾರ್ಯವಲ್ಲವೆ?

ಬದುಕೊಂದು ಸಮರ ಎನ್ನುವುದಕ್ಕೆ ಚಿಕ್ಕಂದಿನ ನನ್ನ ಬದುಕೇ ಸಾಕ್ಷಿಯಾಗಿದೆ. 'ಪರಿಪರಿ ಪರೀಕ್ಷೆಗಳು, ಪರಿಭವದ ಶಿಕ್ಷೆಗಳು ಬದುಕಿನ ಅಂಗಗಳೆನ್ನುವ' ಡಿ.ವಿ.ಜಿ. ಮಾತು ಸಂಪೂರ್ಣ ಸತ್ಯವಾದದ್ದು. ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಿರಬಹುದು. ಒಂದು ದಿನ ಭಯಂಕರ ಮಳೆ ಬಿರುಗಾಳಿಗೆ ನಾವಿದ್ದ ಗುಡಿಸಲಿನ ಹಂಚಿ-ಹುಲ್ಲು ಗರಿಗಳೆಲ್ಲಾ ಹಾರಿ ಹೋಯಿತು. ನಮ್ಮವ್ವ ಬೀದೀಲಿ ನಿಂತ್ಕೊಂಡು ಬಾಯ್ಬಡಕೊಳ್ಳುತ್ತಿದ್ದಳು. ನಾನಂತು ಮುಗ್ಧನಾಗಿ ಅವ್ವನ ಸೆರಗೆಳೆದು ಮಳೆಗಾಳಿ ಹೊಡೆತ ತಡೆಯಲಾರದೆ 'ವಸೂರಯ್ಯನ ಮನೆಗೋಗೋಣ ಬಾ' (ಹೊಸೂರಯ್ಯ ನಮ್ಮೂರಿಗೇ ಒಳ್ಳೆ ಬಲಾಢ್ಯರು) ಅಂತ ಗೋಗರೆದೆ. ನಮ್ಮ ಆಕ್ರಂದನ ದನ ಅಟ್ಟಿಸಿಕೊಂಡು ಗದ್ದೆ ಬೈಲಿನಿಂದ ಮಳೆಯಲ್ಲೇ ಬರುತ್ತಿದ್ದ ನಾಯಕರ ಪೈಲ್ವಾನ್ ಕೆಂಪಣ್ಣ ಕೇಳಿಸಿ 'ನಾನಿದ್ದೀನಿ ಚಿಕ್ಕಮ್ಮವ್ವ ಹೆದರಬೇಡ' ಅಂತ ಕೂಗೇಳ್ತಾ ಧಡಧಡ ಓಡಿ ಬಂದು ಚಕ್ಕಂತ ಗುಡಿಸಿಲು ಮೇಲಕ್ ನೆಗೆದ. ನನ್ನವ್ವ ಹಾರಿ ಹೋಗಿದ್ದ ಗರಿ-ಹಂಚಿ-ಹುಲ್ಲ ತೆಕ್ಕೆ ಮಾಡಿಕೊಟ್ಟರು. ಅದೆಲ್ಲಾ ಹೊದ್ದಿಸಿ-ಮಾರಾಯ ಹುಯ್ತಿರೋ ಮಳೇಲೆ ಸರಿಮಾಡಿಕೊಟ್ಟ. ಆ ಪುಣ್ಯಾತ್ಮನಂತ ಸಹೃದಯನನ್ನು ಈಗಿನ ನಮ್ಮ ಆಧುನಿಕರ ಬದುಕಿನಲ್ಲಿ ಕಾಣಲು ಸಾಧ್ಯವೇ? ಹಳ್ಳೀಲಿ ಯಾರ್ಗೆ ಕಷ್ಟ ಬರಲಿ, ಸುಖ ಬರಲಿ ಹಂಚಿಕೊಳ್ಳೊ ಮುಗ್ಧ ಗ್ರಾಮೀಣರು ಈಗ ಇಲ್ಲ. ಆ ಸಮಷ್ಟಿ ಸಂಪ್ರದಾಯವೇ ಈಗ ಮಂಗಮಾಯವಾಗಿ ಕಣ್ಮರೆಯಾಗುತ್ತಿದೆ.

ಚಿಕ್ಕಂದಿನಲ್ಲಿ ತಂದೆ ಕಳೆದುಕೊಂಡ ನಾನು ತಾಯಿಯ ಸೆರಗಿನಲ್ಲೇ ಬೆಳೆದೆ. ಸಣ್ಣವನಾಗಿದ್ದಾಗ ತಾಯಿ ಪಕ್ಕದಲ್ಲಿ ಮಲಗಿಕೊಂಡರೆ ನಿದ್ದೆ. 'ತಾಯಿ ಇಲ್ಲದ ಮನೆ ಮನೆಯಲ್ಲವೆಂದು' ಆಲೀಸ್ ಹಥಾರನ್ ಹೇಳಿದ. ''ತಾಯಿಯೆಂಬೋಳು

ದೇವರಿಗೆ ಸರಿಸಮ' 'ಯಾರಿದ್ರೂ, ನನ್ನ ತಾಯಿಯನ್ನೋವರು ಇದ್ದಾರ' ತಾಯಿ ಇದ್ದಲ್ಲಿ ಗಂಗೆ, ತಾಯಿ ಇದ್ದಲ್ಲಿ ಸ್ವರ್ಗ' ಎಂಬ ಜನಪದದ ಮಾತುಗಳು ಅನುಭವದಿಂದ ಬಂದಂತಹವು. ಇಂತಹ ತಾಯೀನ ನಾನು ಇಂಟರ್ ಮೀಡಿಯಟ್‌ನಲ್ಲಿರುವಾಗ ಕಳಕೊಂಡೆ. ಅಂತಹ ನಷ್ಟ ನನಗಿನ್ಯಾವಾಗಲೂ ಆಗಿಲ್ಲವೆಂದು ಹೇಳಬೇಕು. ನನ್ಮಗ ಪೇಟ ಕಟ್ಟಿ ಮೇಷ್ಟ್ರಾಗಬೇಕೆಂಬ ಆಕೆಯ ಆಸೆ ನೆರವೇರಲಿಲ್ಲ. ನನಗೋ ಆಕೆ ಎಲೆ ಅಡಿಕೆಗೆ ತಿರಿಯೋದನ್ನ ತಪ್ಪಿಸಲಾಗಲಿಲ್ಲ. ಹತ್ತಾರು ತ್ಯಾಪೆ ಹಾಕಿದ ಸೀರೆ ತಪ್ಪಿಸಿ ಒಳ್ಳೆದ ಸೀರೆ ಕೊಡಿಸಲಾಗಲಿಲ್ಲ. ಸಂತೆಗೋದಾಗ ತನ್ನ ಹರಕು ಸೀರೆ ನೋಡಿ ಯಾರಾದ್ರು ಏನಾದರು ಅಂದ್ರೆ 'ನಮ್ಮ ಬಡತನ ನಿಮ್ಮನ್ನ ಇಂಗನ್ನಿಸ್ತದೆ' ಅಂತ ಹೇಳಿ ಮುಖ ಚಿಕ್ಕದು ಮಾಡಿಕೊಳ್ಳುತ್ತಿದ್ದಂತಹ ನನ್ನ ತಾಯ ಚಿತ್ರ (ಸಂತೆಗೆ ನಾನೂ ಹಿಂದೆ ಬಿದ್ದು ತಾಯಿ ಜತೆ ಹೋಗುತ್ತಿದ್ದೆ) ಇನ್ನೂ ನನ್ನಿಂದ ಕಣ್ಮರೆಯಾಗಿಲ್ಲ. ಮಕ್ಕಳ ಮೇಲೆ ಕಡುಬಡತನದಿಂದಾಗಿ ಸಿಟ್ಟು ಮಾಡಿಕೊಂಡು ದೇಶಾಂತರ ಹೋಗ್ತೀನಿ ಅಂತ ಹೊರಟ ಆಕೇನ ಅನೇಕ ಸಾರಿ ಸಾಂತ್ವನದ ಮಾತುಗಳನ್ನಾಡಿ ಮನೆಗೆ ಕರೆದುಕೊಂಡು ಬಂದಿದ್ದುಂಟು. ಆದರೆ ಆಕೆಗೆ ಹೊಟ್ಟೆ ತುಂಬ ಊಟ ಹಾಕಲಿಕ್ಕೆ ಮಾತ್ರ ನನಗಾಗಲಿಲ್ಲ. ಆನಂತರ ನಾನು ದುಡಿದು ಅನೇಕರಿಗೆ ಹಾಕಿದ್ದೇನೆ. ಅನೇಕರ ಕಷ್ಟಕ್ಕೂ ಆಗಿದ್ದೇನೆ ಎಂಬ ಅಲ್ಪ ತೃಪ್ತಿ ಕೂಡ ನನಗಿದೆ. ಆದರೆ ತಾಯಿಯನ್ನು ಸಕಾಲದಲ್ಲಿ ನೋಡಿಕೊಳ್ಳಲು ಆಗಲಿಲ್ಲವಲ್ಲಾ ಎಂಬ ಸಂಕಟ ಮಾತ್ರ ನನ್ನಿಂದ ದೂರವಾಗಿಲ್ಲ. ಆಕೆ ಒಂದು ವರ್ಷದಿಂದ ಹೊಟ್ಟೆ ಶೂಲೆ ಅನುಭವಿಸುತ್ತಿದ್ದು ಯಾವ ಔಷಧೋಪಚಾರವನ್ನೂ ನಂಬದೆ ಹೊನ್ನೇನಹಳ್ಳಿಯ ಕುಚ್ಚಂಗಮ್ಮನಿಗೆ ಶರಣಾದಳು. ಒಂದು ಶುಕ್ರವಾರ ನನ್ನ ಜೊತೇಲಿ ಕುಚ್ಚಂಗಮ್ಮನ ಗುಡಿಗೆ ಹೋಗಿ ಪೂಜಾರಿ ಹೊಲೇರ ಸಿದ್ದಯ್ಯನಿಂದ ವೀಳೆದೆಲೆ ಕವಳಿಗೆ ಪೂಜೆ ಹಾಕಿಸಿ ಅಮ್ಮ ಬಲಗಡೆ ಪರ್ಸಾದ ಕೊಟ್ಲೆಂದು ನಿಶ್ಚಿಂತಳಾಗಿ ಬಂದು ಮಲಗಿದ ಆಕೆ ಪುನಃ ಏಳಲಿಲ್ಲ. ಕೊನೆಗೂ ಕುಚ್ಚಂಗಮ್ಮ ಕೈ ಕೊಟ್ಟಳು. ಅಜ್ಞಾನವೊಂದು ವರವೆಂದು ಹೇಳುವುದಾದರೆ ನಮ್ಮವ್ವನ ನಿಶ್ಚಿಂತ ಮರಣ ಕೂಡಾ ಯೋಗ ಎನ್ನಬೇಕು. ಆರು ಉಳೋದರಿಂದ ಹಿಡಿದು ಕೋಳಿಗೆ ಹಿಟ್ಟಾಕೋ ತನಕ ಏಕಾಗ್ರತೆಯಿಂದ ದುಡೀತಿದ್ದ ಆಕೆ ನಿಜವಾದ ಕರ್ಮಯೋಗಿ, ಆಕೆಯ ನೆನಪಿಗೆ ಬಿದಿರ ಊರುಗೋಲೊಂದು ಮೂಲೆ ಬಳಿ ನಿಂತಿತ್ತು. ಅದನ್ನು ನೋಡಿದಾಗಲೆಲ್ಲಾ ನನ್ನ ದುಃಖದ ಕಟ್ಟೆ ಒಡೆಯವುದು ಅಂದಿನಿಂದ ನಾನಂತೂ ಅನಾಥನಾದೆ.

ಅಪ್ಪ ಸತ್ತು ಒಂದು ತಿಂಗಳ ತನಕ ಯಾವುದೇ ಕೆಲಸ ಮಾಡಲು ಮನಸ್ಸಿಲ್ಲ. ಸತ್ತವರ ಜೊತೆ ನಾವು ಹೋಗುವ ಹಾಗಿಲ್ಲ. ನಮ್ಮ ದುಡಿಮೆ ನಡೀಬೇಕಲ್ಲವೆ? ಪರೀಕ್ಷೆ ಬೇರೆ ಹತ್ತಿರ ಬಂತು, ಪಠ್ಯೇತರ ಚಟುವಟಿಕೆಯಲ್ಲಿ ಮುಳುಗಿದ್ದ ನನ್ನನ್ನು ಮಿತ್ರರು ಎಚ್ಚರಿಸಿದರು. ಓದಿನಲ್ಲಿ ಮಗ್ನನಾದೆ. ಮನೆಯಲ್ಲೋ ಇರಸು ಮುರುಸು. ನನ್ನಕ್ಕ ಆಗ್ಲೆ ಗಂಡನ ಮನೇಗೆ ಹೋಗಿದ್ದಳು. ಒಬ್ಬರಿಗೆ ಹೊರೆಯಾಗೋದು ಯಾಕೆಂದು ಅಣ್ಣ ಅತ್ತಿಗೆಯರನ್ನು ಬಿಟ್ಟು ಮಿತ್ರರ ಕೊಠಡಿ ಸೇರಿದೆ. ಕೊನೆಗೆ ಹೇಗೋ ಕಾಲೇಜು ಹಾಸ್ಟೆಲಿನ ಪಕ್ಕದಲ್ಲಿದ್ದ ಲಂಬರ್ ರೂಮನ್ನು ರಂಗಣ್ಣೋರಿಂದ ಪಡೆದು ಕಷ್ಟ ಪರಂಪರೆಗಳ ನಡುವೆ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದೆ. ರಜಾ ದಿನದಲ್ಲಿ ಏನು ಮಾಡೋದು, ಅಕ್ಕನ ಮನೆಯಲ್ಲಿ ಜಾಂಡ ಹಾಕಿದೆ.

# ಬೆಳಕು

ಕಳನೇರಿ ಇಳಿವುದು ವೀರಂಗೆ ಮತವಲ್ಲ
ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ
ಮನದೊಡೆಯ ಮನವನಿಂಬುಗೊಂಬನಯ್ಯ
ಏರಲಾಗದ ಶ್ರೀ ಪರ್ವತವ
ಏರಿ ಇಳಿದೊಡೆ ವ್ರತಕ್ಕೆ ಭಂಗ. . . . . .

ಅಕ್ಕಮಹಾದೇವಿ ಹೇಳಿದಂತಾಗಿತ್ತು ನನ್ನ ಸ್ಥಿತಿ. ಹೇಗೋ ಕಷ್ಟಗಳನ್ನೆದುರಿಸಿ ಇಂಟರ್‌ಮೀಡಿಯಟ್ ಮುಗಿಸಿದೆ. ಉತ್ತಮ ಶ್ರೇಣಿಯಲ್ಲಿ ಪಾಸಾದೆ. ಮುಂದೇನು ಮಾಡೋದು, ಓದಿಗೆ ಶರಣು ಹೇಳೋದೆ. ತಾಯಿಯನ್ನು ಕಳಕೊಂಡು, ನೆರೆಯವರ ಆಶ್ರಯದಲ್ಲಿದ್ದ ನಾನು ಯಾವ ತೀರ್ಮಾನಕ್ಕೆ ಬರಲಿ. ಅವ್ವ ಹೇಳಿದಂತೆ ಎಸ್.ಎಸ್.ಎಲ್.ಸಿ. ಪಾಸಾಗಿದ್ದಾಗ್ಲೆ ಮೇಷ್ಟು ಕೆಲಸಕ್ಕೆ ಸೇರಿದ್ದರೆ ಕೊನೇ ಪಕ್ಷ ಆಕೆ ಎಲೆ ಅಡಿಕೆಗೆ ಇನ್ನೊಬ್ಬರನ್ನು ಅಂಗಲಾಚೋದನ್ನ ತಪ್ಪಿಸಿ ತ್ಯಾಪೆ ಶ್ಯಾಲೆಯ ಬದ್ಲು ಒಳ್ಳೇದನ್ನ ಕೊಡಿಸಬಹುದಾಗಿತ್ತು. ಹುಟ್ಟಿದ ಎರಡು ವರ್ಷಕ್ಕೆ ಅಪ್ಪನ್ನ ತಿನ್ಕೊಂಡ ಅಂತ ನೆರೆಹೊರೆಯೋರು ಹಂಗಿಸುತ್ತಿದ್ದರೂ ಹಸುಗೂಸು ಅದೇನು ಮಾಡೀತು ಅಂತ ಎಲ್ಲರ ಪ್ರೀತಿಯನ್ನು ತಾನೊಬ್ಬಳೆ ಇತ್ತು ಕಾಪಾಡಿದ ನನ್ನವ್ವ ನನ್ನ ಪಾಲಿಗಂತೂ ದೇವರೇ ಆಗಿಬಿಟ್ಟಿದ್ದಳು. ಆದರೆ ನನ್ನನದಲ್ಲಿ ಛಲವೊಂದು ಮೂಡಿತು. ಏನಾದ್ರು ಆಗಲಿ ಎಂತಾದ್ರು ಆಗಲಿ ಪದವಿ ತಗೊಳ್ಳಬೇಕು. ಜನಗಳೊಳಗೆ ಬೆರ್ತು ಯಾವುದಾದರು ಕೆಲಸಕ್ಕೆ ಸೇರಿ ಕೆಲವರಿಗಾದ್ರು ಸಹಾಯ ಮಾಡಬೇಕು. ಆಗ್ಲೆ ನನಗೆ ಮುಕ್ತಿ ಅನ್ನಿಸುತ್ತಿತ್ತು. ಕುವೆಂಪುರವರ 'ಸ್ವಾಮಿ ವಿವೇಕಾನಂದ' ಗ್ರಂಥದಲ್ಲಿ ಬರುವ ''ಇದುವರೆಗೂ ವಿಘ್ನಗಳೊಡನೆ ಸಂಗ್ರಾಮ ಮಾಡದೆ ಯಾರೂ ಯಾವ ಮಹಾಕಾರ್ಯವನ್ನೂ ಸಾಧಿಸಿಲ್ಲ'' ಎಂಬ ಮಾತು ನನ್ನನ್ನು ಆಕರ್ಷಿಸಿತು. ಈಗಾಗಲೇ ನನ್ನ ಮಿತ್ರ ಟಿ.ಆರ್.ರಾಮಯ್ಯ ಮೈಸೂರಿಗೆ ಹೋಗಿದ್ದ. 'ಕಾಲೇಜು ಇನ್ನೇನು ಪ್ರಾರಂಭ ಆಗ್ತದೆ ನೀ ಬಾ' ಅಂತ ತಗಾದೆ ಮಾಡ್ತಿದ್ದ. ನಾನು ಮೂರು ಕಡೆ ವಿಚಾರಿಸಿದೆ. ಬಿಡಿಗಾಸೂ ಸಿಗಲಿಲ್ಲ. ತಲೆ ಮೇಲೆ ಕೈ ಹೊತ್ತುಕೊಂಡು ಕುಂತೆ. ಸೋದರ ಮಾವ ಸಿ.ನರಸಯ್ಯನೋರು ಈ ಸಂದರ್ಭದಲ್ಲಿ 'ಕರ್ತವ್ಯ ಪಾಲನೇಯೇ ಧರ್ಮ, ಅದೇ ನೀತಿ, ಅದೇ ಸುಖ, ಇಲ್ದಿದ್ರೆ ವ್ಯಕ್ತಿತ್ವವೇ ನಾಶ ಆದಂತೆ' ಅನ್ನೋ ಅಂತ

ಮಾತುಗಳನ್ನಾಡಿ ನನ್ನ ಹುರಿದುಂಬಿಸಿ ಮೈಸೂರು ತಲುಪಲು ಬೇಕಾದ ಛಾರ್ಜು ವಗೈರೆ ಕೊಟ್ಟರು. 'ನನ್ನ ತಮ್ಮ ಬೋ ದೊಡ್ಡೋದಿಗೆ ಮೈಸೂರಿಗೋಯ್ತಾನೆ ಅಂತ' ಸಡಗರದಿಂದ ನನ್ನಕ್ಕ ದಾರಿಗೆ ಬುತ್ತೀನ ಕಟ್ಟಿ ಕೊಟ್ಲು. ಮಧ್ಯಾನ್ಹವೆ ತುಮಕೂರಿನಿಂದ ರೈಲಿನಾಗೆ ಹೊರಟು ಬೆಂಗಳೂರು ತಲುಪಿ ಅಲ್ಲಿಂದ ಮೈಸೂರಿಗೆ ಹೊರಟೆ. ಅಂತ ದೊಡ್ಡ ನಗರ ಈಸು ದಿನದ ತನಕ ನಾ ಕಂಡೋನಲ್ಲ. ಶ್ರೀರಂಗಪಟ್ಟಣದಿಂದ ಮೈಸೂರಿಗೆ ಹೋಗೋ ಸಮಯದಲ್ಲಿ ನನಗಾದ ಸಂತೋಷ ಅಷ್ಟಿಷ್ಟಲ್ಲ. ಬಹುದೂರದಲ್ಲಿ ಕಾಣಿಸುತ್ತಿದ್ದಂತಹ ಚಾಮುಂಡಿಬೆಟ್ಟ ಮೋಡ ಕವಿದಿದ್ದರಿಂದ ಆಕಾಶಕ್ಕೆ ಪೋಣಿಸಿದ್ದಾರೇನೋ ಅನ್ನೋ ಹಾಗೆ ದೀಪದಮಾಲಿಕೆ, ಜಗದ್ವಿಖ್ಯಾತ ಅರಮನೆ ಮೇಲಿನ ಬಣ್ಣದ ದೀಪ, ಬೆಟ್ಟದ ತಪ್ಪಲಿನಲ್ಲಿ ಕತ್ತಲಲ್ಲೂ ಮಿಣುಗುತ್ತಿದ್ದ ಲಲಿತ ಮಹಲ್ ಅರಮನೆ-ನನಗೆ ಆಶ್ಚರ್ಯದ ಜೊತೆ ಗಾಬರಿ ಉಂಟುಮಾಡುತ್ತಿದ್ದವು. ಪಕ್ಕದ ಗದ್ದೆಗಳಲ್ಲಿ ಬೆಳೆದು ನಿಂತಿದ್ದ ಕಬ್ಬು ರೈತನ ದುಡಿಮೆಯನ್ನು ಸಾರಿಸಾರಿ ಹೇಳುತ್ತಿತ್ತು. ಕಾವೇರಿ ತಾಯಿ ಸರಸ ಗಂಭೀರದಿಂದ ಕಲರವ ಧ್ವನಿಮಾಡ್ತಾ ಹೆಜ್ಜೆ ಹಾಕುತ್ತಿದ್ದಳು. ಇಂತಹ ಸೊಬಗನ್ನು ಅನುಭವಿಸುತ್ತಾ ನಾನು ಮೈಸೂರಿಗೆ ಬರಲು ಪಟ್ಟ ಬವಣೆಯೆಲ್ಲಾ ಮನದಲ್ಲಿ ಅಳಿಸಿಹೋಗಿ ಹೊಸ ಚೈತನ್ಯ ನನ್ನಲ್ಲಿ ಬಂತು. ತನ್ನ ಪತ್ರದಂತೆ ಮಿತ್ರ ರಾಮಯ್ಯ ಸ್ಟೇಷನ್ನಿಗೆ ಬಂದಿದ್ದ. ಸಂತೋಷದಿಂದಲೆ ಸರ್ವೆ ಅಸಿಸ್ಟೆಂಟ್ ಸೂಪರಿಡೆಂಟ್ರು ವೆಂಕಟಶಾಮಯ್ಯನವರ ಮನೆಗೆ ಕರೆದುಕೊಂಡು ಹೋದ. ಮಾರನೆ ದಿನ ಮಹಾರಾಜಾ ಕಾಲೇಜಿಗೆ ಹೋಗಿ ಪ್ರಿನ್ಸಿಪಾಲ್ ಜೆ.ಸಿ.ರ್‍ಯಾಲೊ ಅವರನ್ನು ಕಂಡು ಕಾಲೇಜಿಗೆ ಸೇರಲು ಅರ್ಜಿ ಕೊಟ್ಟೆ. ಉತ್ತಮ ಅಂಕಗಳು ಬಂದಿದ್ದ ಕಾರಣ ಯಾವ ತೊಂದರೆಯೂ ಇಲ್ಲದೆ ಕಾಲೇಜಿಗೆ ಸೇರ್ಪಡೆಯಾಯಿತು. ತುಮಕೂರು, ಕೋಲಾರ, ಬೆಂಗಳೂರು ಸುತ್ತಮುತ್ತಲಿನ ಹಿಂದುಳಿದ ವಿದ್ಯಾರ್ಥಿಗಳೆಲ್ಲರೂ ಬಿ.ವೆಂಕಟಶಾಮಯ್ಯನವರ ಮನೇಲಿ ಜಾಂಡ ಹಾಕಿದ್ರು. ನಾನೂ ಸೇರ್ಕಂಡೆ. ಸರ್. ಎಂ.ವಿಶ್ವೇಶ್ವರಯ್ಯನವರ ಹಳ್ಳಿಯ ಪಕ್ಕದ ಬಚ್ಚಳ್ಳಿಯವರಾದ ವೆಂಕಟ ಶಾಮಯ್ಯನೋರು ಅವರ ಸಹಪಾಟಿಯೂ ಹೌದು, ವಿಶ್ವೇಶ್ವರಯ್ಯನೋರಂತೆ ಓದಿನಲ್ಲಿ ಚುರುಕಾದ ಅವರು ಉತ್ತಮ ಶ್ರೇಣಿಯಲ್ಲಿ ಪಾಸಾಗಿ ಮೈಸೂರಿನಲ್ಲಿ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿದ್ದರು. ಷೇಕ್ಸ್‌ಪಿಯರ್‌ನ ಎಲ್ಲಾ ನಾಟಕಾನ ಬಾಯ್ನಲ್ಲೆ ಹೇಳ್ತಿದ್ದರು. ಒಂದು ಪಕ್ಷ ಅವೆಲ್ಲಾ ಕಳೆದುಹೋಗಿದ್ರೂ ವೆಂಕಟಶ್ಯಾಮಯ್ಯನೋರಂತೂ ತಪ್ಪಿಲ್ಲದೆ ಅವನ್ನು ಡಿಕ್ಟೇಟ್ ಮಾಡಿಸುತ್ತಿದ್ರು ಅಂದ್ರೆ ಆಶ್ಚರ್ಯ ಏನೂ ಆಗೋದಿಲ್ಲ. ಹಿಂದುಳಿದ

ವರ್ಗದ ವೆಂಕಟಶಾಮಯ್ಯನೋರು ಯಾವ ಕೆಲಸಕ್ಕೆ ಸೇರಿದ್ರೋ ಅದೇ ಕೆಲಸದಲ್ಲಿ ನಿವೃತ್ತರಾದರು! ಆದರೆ ಇದನ್ನು ಅವರು ಮನಸ್ಸಿಗೆ ಹಚ್ಚಿಕಂಡೋರಲ್ಲ, ಹಿಂದುಳಿದ ವಿದ್ಯಾರ್ಥಿಗಳು ವಿದ್ಯಾಕಾಂಕ್ಷಿಗಳಾಗಬೇಕು. ಸ್ವಾಭಿಮಾನ ಬೆಳೆಸಿಕೊಂಡು ಕಾರ್ಯ ಪ್ರವೃತ್ತರಾಗಬೇಕೆಂಬುದೇ ಅವರ ಇಚ್ಛೆಯಾಗಿತ್ತು. ಯಾವ ವಿದ್ಯಾರ್ಥಿ ಬರಲಿ ಅವರ ಮನೆಯಲ್ಲಿ ಯಾವಾಗಲೂ ಸುಸ್ವಾಗತ, ಅನ್ನ, ವಸತಿಗಳನ್ನು ನೀಡಿ ತಮ್ಮ ಮಕ್ಕಳಿಗಿಂತ ಮಿಗಿಲಾಗಿ ನೋಡಿಕೊಳ್ಳುತ್ತಿದ್ದರು. ಪ್ರಾರಂಭದಲ್ಲಿ ನಾವು ಅವರ ಆಶ್ರಯದಲ್ಲೇ ಇದ್ದೆವು. ಈ ಕಾಲದಲ್ಲೇ ಹಿಂದುಳಿದ ಪಂಗಡದ ನಾಯಕರಾದ ಸ್ವಾತಂತ್ರ್ಯ ಹೋರಾಟಗಾರರೂ ಮುಂದೆ ವಿವಿಧ ಸಚಿವ ಸ್ಥಾನಗಳನ್ನು ಅಲಂಕರಿಸಿ ರಾಜ್ಯಕ್ಕೆ ಬಹು ವಿಧದ ಸೇವೆ ಸಲ್ಲಿಸಿದ ನಾಗಮಂಗಲ ತಾಲ್ಲೂಕಿನ ಟಿ.ಮರಿಯಪ್ಪನವರು ಮೈಸೂರಿನ ಹೆಚ್.ಸಿ.ದಾಸಪ್ಪನವರ ಜೊತೆಯಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ನಮ್ಮಂತಹ ವಿದ್ಯಾರ್ಥಿಗಳನ್ನು ಕಂಡರೆ ಮರಿಯಪ್ಪನವರಿಗೆ ಏನೋ ಮಮತೆ. ಆಗ ಈಗಿನಂತೆ ಹಿಂದುಳಿದ ವಿದ್ಯಾರ್ಥಿಗಳಿಗೆ ವಸತಿಗೃಹಗಳೇನೂ ಇರಲಿಲ್ಲ. ಮರಿಯಪ್ಪನವರು ಸಾಹುಕಾರ ಡಿ.ಬನುಮಯ್ಯನವರನ್ನು ಕಂಡು ದಿವಾನ್ ರೋಡಿನಲ್ಲಿದ್ದ 'ಭೂತ ಬಂಗಲೆ' ಎಂದು ಹೆಸರಾಗಿದ್ದ ಮನೆಯೊಂದನ್ನು ಬಾಡಿಗೆಗೆ ಪಡೆದು ಹಾಸ್ಟೆಲ್ ಪ್ರಾರಂಭಿಸಿದರು. ಮೊದಲಿಗೆ ತಾವೇ ಹಣ ಹಾಕಿ ನಮಗೆ ಆಶ್ರಯ ನೀಡಿದರು. ಸ್ವಂತ ತಮ್ಮ ಅಡಿಗೆಯಾತ ನಾಯರ್‌ನ ಕಳಿಸಿ 'ಹುಡುಗರನ್ನ ಚನ್ನಾಗಿ ನೋಡ್ಕೊ' ಎಂತು ತಾಕೀತು ಮಾಡಿದರು. ವಾರಕ್ಕೊಮ್ಮೆ ವೆಂಕಟಶಾಮಯ್ಯನವರ ಜೊತೇಲಿ ಬಂದು, ನಮ್ಮಗಳ ಓದು, ಆರೋಗ್ಯ ವಿಚಾರಿಸ್ಕೊಳ್ಳದೆ ಇರುತ್ತಿರಲಿಲ್ಲ. ಅವರ ನಿಷ್ಕಳಂಕ ಪ್ರೇಮ, ಬಡವರ ಬಗೆಗಿದ್ದ ಸಹಾನುಭೂತಿ, ವಿದ್ಯಾರ್ಥಿಗಳ ಜೊತೆ ಬೆರೆಯುವ ಸರಳತೆ, ಎಂತಹವರನ್ನಾದರೂ ಬೆರಗುಗೊಳಿಸುತ್ತಿತ್ತು. ಮಹಾಪುರುಷ ಯಾರು ಎಂಬ ಮಾತಿಗೆ ದಾರ್ಶನಿಕರೊಬ್ಬರು ಹೀಗೇನ್ನುತ್ತಾರೆ ''ದೀನ ದರಿದ್ರರ ದುಃಖಾರ್ತರ ಕಣ್ಣೀರ ಒರೆಸುವವನು. ಮಾನವರನ್ನು ಸಂಪ್ರದಾಯದ ಸಂಕೋಲೆಯಿಂದ ಬಿಡಿಸುವವನು. ಅಜ್ಞಾನದ ಅಂಧಕಾರವನ್ನು ದೂರ ಮಾಡುವವನು, ನಾಡಿನ ಸಂಪತ್ತನ್ನು ಹೆಚ್ಚಿಸುವವನು, ರಾಜ್ಯದ ಅಥವಾ ರಾಷ್ಟ್ರದ ಜಾತಕ ಬರೆಯುವವನು, ವ್ಯಕ್ತಿಗಳಲ್ಲಿ ಮೇಲು ಕೀಳು ಎಂಬುದನ್ನು ಪರಿಗಣಿಸದೆ ಸರ್ವರನ್ನೂ ಸಮಾನರನ್ನಾಗಿ ನೋಡುವವನು, ಅನ್ಯಾಯಕ್ಕೆ ಮಣಿಯದೆ ನಿಜದ ನೇರಕ್ಕೆ ನಡೆಯುವ ಧೃಡತೆಯುಳ್ಳವನು'' ಮರಿಯಪ್ಪನವರನ್ನು ಬಲ್ಲ ಕೆಲವರಿಗೆ ಮೇಲಿನ ಕೆಲವು ಮಾತುಗಳನ್ನಾದರೂ ಅವರಿಗೆ ಅನ್ವಯಿಸಬಹುದು ಎನಿಸುತ್ತದೆ.

ಮುಂದೆ ಒಂದೆರಡು ವಿಚಾರಗಳನ್ನು ಅವರ ಬಗ್ಗೆ ನಾನು ಹೇಳುತ್ತೇನೆ. ಎಷ್ಟೋ ಜನಕ್ಕೆ ಗೊತ್ತಿಲ್ಲ. ಆರೋಗ್ಯ ತಪ್ಪಿದ ತಕ್ಷಣವೆ ಅವರು ಸಚಿವ ಪದವಿಯನ್ನು ಬಿಟ್ಟು ಹೊರಬಂದರು. ಅಷ್ಟೇ ಅಲ್ಲ ಮಂತ್ರಿಯಾಗಿದ್ದಾಗ್ಲೂ ಆಮೇಲೂ ಸರ್ಕಾರ ಅವರ ವೈದ್ಯಕೀಯ ಖರ್ಚನ್ನು ಭರಿಸ್ತೀವಿ ಅಂದರೆ ವಿನಯದಿಂದಲೆ ನಿರಾಕರಿಸಿದರು.

ತೆಂಗಿನಮರ ಸತ್ಫಲವನ್ನು ನೀಡಬೇಕಾದರೆ ನೆಟ್ಟ ಸಸಿ, ಹಾಕಿದ ಬೀಜ, ಮಣ್ಣಿನ ಗುಣ, ನೀರು, ಗೊಬ್ಬರ ಇವೆಲ್ಲಾ ಪರಿಗಣನೆಗೆ ಬರುತ್ತವೆ. ಯಾವ ಒಂದು ಕಾರ್ಯದಲ್ಲೂ ತುಸು ಮೈಮರೆತರೂ ಇಡಿ ಫಲವೇ ಹಾಳಾಗೋಗುವಲ್ಲಿ ಸಂಶಯವಿಲ್ಲ. ಹಾಗೇನೆ ವಿದ್ಯಾರ್ಥಿ ಜೀವನ ಸ್ಫುಟವಾಗಿ ಅರಳಬೇಕಾದರೆ ಶಾಲೆ ಹಾಗೂ ಅವರ ಪರಿಶ್ರಮ ಅತ್ಯವಶ್ಯಕ. ಬಿ.ವೆಂಕಟಶಾಮಯ್ಯರಂತಹ ಸೇವಾ ಚೇತನರು, ಟಿ.ಮರಿಯಪ್ಪನೋರಂತಹ ಕ್ರಿಯಾಶೀಲರ ಜೊತೆ ಸ್ವಲ್ಪ ಕಾಲವಿದ್ದ ನನ್ನ ಬಾಳು ಪಾವನವೆಂದೇ ನನ್ನ ಭಾವನೆ. ನನಗೆ ದಾರಿದೀಪವಾದ ಮತ್ತೊಂದು ತಾಣವೆಂದರೆ ಮಹಾರಾಜಾ ಕಾಲೇಜು. ಮೈಸೂರಿಗೆ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆ ಇರುವಂತೆ ಮಹಾರಾಜಾ ಕಾಲೇಜಿಗೂ ವೈಶಿಷ್ಟ್ಯಪೂರ್ಣವಾದ ಇತಿಹಾಸವಿದೆ. ಕಾಡಿನ ನಡುವಿದ್ದ ಗುರುಕುಲದಂತೆ ಅದು ಅಂದು ಕಂಗೊಳಿಸುತ್ತಿತ್ತು. ಸುತ್ತ ಮರಗಳ ನಡುವೆ, ವಿಶಿಷ್ಟ ಮಾದರಿಯ ಕಾಲೇಜಿನ ಕಟ್ಟಡ. ವಿಶಾಲವಾದ ಕಿಟಕಿಗಳಿಂದ ಬೀಸುವ ತಂಗಾಳಿ. ನಿಶ್ಶಬ್ದ ವಾತಾವರಣ, ತರತರಹ ಪಕ್ಷಿಗಳ ಕಲರವ ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ಯುವುದು. ಮಹಡಿಯ ಮೇಲೆ ಕುಳಿತು ಪಾಠ ಕೇಳುವ ಸೌಭಾಗ್ಯ ದೊರೆತಾಗಲಂತೂ ನಮ್ಮ ಹಿಗ್ಗಿಗೆ ಪಾರವೇ ಇಲ್ಲ. ದೂರದಲ್ಲಿ ಕಾಣುತ್ತಿದ್ದ ಚಾಮುಂಡಿಬೆಟ್ಟ, ಲಲಿತ ಮಹಲ್ ಹಾಗೂ ಅರಮನೆಯ ಸ್ಥಿರ ಚಿತ್ರಣಗಳು ಮೂಕನನ್ನು ಕವಿಯಾಗಿಸುವುವು. ಈ ಕಡೆ ಕಾಣಿಸುತ್ತಿದ್ದ ಪ್ರಾಚ್ಯಸಂಶೋಧನಾಲಯದ ಪಕ್ಕದಲ್ಲಿದ್ದ ಕುಕ್ಕನಹಳ್ಳಿ ಕೆರೆ ಇವೆಲ್ಲಾ ಪ್ರಾಚೀನ ಕಾಲವೊಂದರ ನೆನಪನ್ನು ತರುತ್ತಿದ್ದವು. ಇನ್ನು ನಮಗೆ ದೊರೆತಿದ್ದ ಗುರುವೃಂದದವರ ಬಗ್ಗೆ ಹೇಳಬೇಕೆ, ಅವರೊ ಮಹಾಮಹಿಮರು, ಹೇಮಾಹೇಮಿಗಳು. ಮೊದಲ ನೋಟದಲ್ಲೆ ಮಂತ್ರಮುಗ್ಧರನ್ನಾಗಿಸುವ ಕೌಶಲ್ಯ ಉಳ್ಳವರು. ಪ್ರೊ. ತೀ.ನಂ.ಶ್ರೀ ಪ್ರೊ. ವೆಂಕಟೇಶ್ವರನ್, ಪ್ರೊ. ರ್‍ಯಾಲೊ, ಪ್ರೊ. ಡಿಸೋಜ, ಶ್ರೀ ತಿರುಮಲಾಚಾರ್, ಡಾ|| ಎಂ.ಹೆಚ್.ಕೃಷ್ಣ, ಡಾ|| ಕುಮ್ಮಾರಪ್ಪ, ಡಾ|| ಎಂ.ಹೆಚ್.ಗೋಪಾಲ್,

ಪ್ರೊ. ಎ.ಎನ್.ಮೂರ್ತಿರಾವ್, ಪ್ರೊ. ಮ್ಯಾಕಂಟಾಷ್, ಶ್ರೀ ನಾ. ಕಸ್ತೂರಿ ಮೊದಲಾದವರು ಅಧ್ಯಾಪಕರಾಗಿದ್ದರು. ಆಗ ಯುವರಾಜ ಕಾಲೇಜಿನಲ್ಲಿ ಕುವೆಂಪುರವರು ಅಧ್ಯಾಪಕರಾಗಿದ್ದರು. ಮಹಾರಾಜಾ ಕಾಲೇಜಿನ ಜೂನಿಯರ್ ಬಿ.ಎ.ಹಾಲ್ ಎಂದರೆ. ಮೈಸೂರಿನ ವಿದ್ಯಾರ್ಥಿಗಳೆಲ್ಲರ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಸ್ಥಾನವಿದ್ದಂತೆ. ನಾಟಕವೋ ಉಪನ್ಯಾಸವೋ ಯಾವುದೋ ಒಟ್ಟಿನಲ್ಲಿ ಪ್ರತಿವಾರ ಕಾರ್ಯಕ್ರಮವಿರುತ್ತಿತ್ತು. 'ಎಚ್ಚಮನಾಯಕ' 'ಯಮನ ಸೋಲು' 'ರಕ್ತಾಕ್ಷಿ' ಮುಂತಾದ ನಾಟಕಗಳನ್ನು ವಿದ್ಯಾರ್ಥಿಗಳೇ ಅಭಿನಯಿಸುತ್ತಿದ್ದರು. ಮಾಸ್ತಿ, ಡಿ.ವಿ.ಜಿ., ಗೊರೂರು ರಾಮಸ್ವಾಮಿ ಅಯ್ಯಂಗಾರ್, ತಿ.ತಾ.ಶರ್ಮ, ಶಂಭಾಜೋಷಿ, ಬಿ.ಎಂ.ಶ್ರೀ., ಕುಲಕರ್ಣಿ ಮುಂತಾದ ಉದ್ದಾಮ ಸಾಹಿತಿಗಳು ಆಗಮಿಸುತ್ತಿದ್ದರು. 'ಭಾರತದಲ್ಲಿನ ಸ್ವಾತಂತ್ರ್ಯ ಹೋರಾಟ' 'ಸ್ವರಾಜ್ಯ' 'ಅಹಿಂಸೆ' 'ಸತ್ಯಾಗ್ರಹ' ಮತ್ತು 'ಗಾಂಧಿಜಿ', 'ಜಪಾನ್ ರಷ್ಯಾದ ಮೇಲೆ ಸಾಧಿಸಿದ ಜಯ ಮುಂತಾದ ವಿಚಾರಗಳಲ್ಲಿ ವಿದ್ಯಾರ್ಥಿಗಳಲ್ಲಿ ಬಿಸಿ ಬಿಸಿಯಾದ ಚರ್ಚೆ, ಅಲ್ಲಿ ನಡೆಯುತ್ತಿತ್ತು. ನನ್ನ ಕಾಲೇಜಿನಲ್ಲಿ ಓದುತ್ತಿದ್ದ, ಮುಂದೆ ರೆವಿನ್ಯೂ ಇಲಾಖೆಯಲ್ಲಿ ಅತ್ಯುತ್ತಮ ಅಧಿಕಾರಿ ಎಂದು ಖ್ಯಾತರಾದ ಶ್ರೀ ಸಿ.ನರಸಿಂಹಮೂರ್ತಿಯವರು ಸ್ಪರ್ಧೆಯಲ್ಲಿ ಆಧುನಿಕ ಯುಗದಲ್ಲಿ ಪ್ರಿಂಟಿಂಗ್ ಪ್ರೆಸ್ಸು ವಿಷಯದ ಮೇಲೆ ಸೊಗಸಾಗಿ ಮಾತನಾಡಿ ಮೊದಲನೆ ಬಹುಮಾನಗಳಿಸಿದ್ದರು. ಇಂಗ್ಲಿಷ್ ಉಪನ್ಯಾಸಕರಾದ ಶ್ರೀ ಅನಂತರಾಮಯ್ಯನವರು ಯಾವುದೋ ಸಂದರ್ಭದಲ್ಲಿ ಮಾತನಾಡುತ್ತಾ, ಗಾಂಧೀಜಿ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದು ನಿರುಪಯುಕ್ತವೆಂದು ಹೇಳಿದರು. ಅವರ ಶುದ್ಧ ಇಂಗ್ಲೀಷ್ ಮಾತ್ರ ಅಲ್ಲಿನವರ ಗಮನ ಸೆಳೆಯಿತೆಂದು ಹೇಳಿ ನಮ್ಮಗಳ ಉಗ್ರ ಪ್ರತಿಭಟನೆಯನ್ನು ಎದುರಿಸಿದರು. ಇಂತಹ ಗೋಷ್ಠಿಗಳಿಗೆಲ್ಲಾ ತಪ್ಪದೆ ನಾನು ಹಾಜರಾಗುತ್ತಿದ್ದೆ. ಇಂತಹ ಸಂದರ್ಭದಲ್ಲಿ ನನಗೆ ಸಮಯ ಪ್ರಜ್ಞೆಯ ಅರಿವು ಮೂಡಿಸಿದ ಸನ್ನಿವೇಶ ಎದುರಾಯಿತು. ನಮ್ಮ ಯೂನಿಯನ್ ಹಾಲಿನಲ್ಲಿ ಅಂದು 'ಭಾರತದಲ್ಲಿ ಪ್ರಜಾಪ್ರಭುತ್ವ' ಎಂಬ ವಿಚಾರದ ಬಗ್ಗೆ ಚರ್ಚಾಗೋಷ್ಠಿ ಏರ್ಪಟ್ಟಿದ್ದಿತು. ನಾನು ಕೂಡ ಒಬ್ಬ ಸ್ಪರ್ಧಾಳು. ಪ್ರೊ. ಎಸ್.ವಿ.ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ಅಂದಿನ ಅಧ್ಯಕ್ಷತೆ ವಹಿಸಿದ್ದರು. ಅನಿವಾರ್ಯ ಕಾರಣದಿಂದಾಗಿ ಒಂದೇ ಒಂದು ನಿಮಿಷ ತಡವಾಗಿ ಹೋದೆ. ನಾನು ಮಾತನಾಡುವ ಸರದಿ ಇತ್ತು. ಅತ್ಯಂತ ಯಶಸ್ವಿಯಾಗಿ ತಯಾರಾಗಿ ಬಂದಿದ್ದ ನಾನು ಅಧ್ಯಕ್ಷರಲ್ಲಿಗೆ ಹೋಗಿ ನನಗೆ ಅವಕಾಶ ಕೊಡಬೇಕಾಗಿ ಬೇಡಿಕೊಂಡೆ. 'ನೊ ಇಟ್ ಈಸ್ ನಾಟ್ ಪಾಸಿಬಲ್'

ಎಂದು ಅವರು ಖಡಾಖಂಡಿತವಾಗಿ ನಿರಾಕರಿಸಿಬಿಟ್ಟರು. ನನಗಾಗ ಏನೇ ಆಗಲಿ-ನಿಯಮಿತ ವೇಳೆಗಳಲ್ಲಿ-ಆಯಾಯ ಕೆಲಸ ಮಾಡೋದು ಉತ್ತಮ. ಈ ಸಮಯ ಪ್ರಜ್ಞೆ ಬಗ್ಗೆ ಗಮನವನ್ನು ಯಾವಾಗಲೂ ಇಟ್ಟುಕೊಳ್ಳಲೇಬೇಕು ಎಂಬ ದೃಢ ನಿಶ್ಚಯ ನನ್ನ ಜೀವನದಲ್ಲಿ ಅಂದಿನಿಂದ ಬೇರೂರಿ ನಿಂತಿದೆಯೆಂದರೆ ತಪ್ಪಾಗಲಾರದು.

ಮಹಾರಾಜಾ ಕಾಲೇಜಿನ ಈ ರೀತಿ ಚಟುವಟಿಕೆಗಳಿಗೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಬ್ಬರೂ ಕಾರಣರಾಗಿದ್ದರು. ಯಾವುದೇ ಸಾಂಸ್ಕೃತಿಕ ಚಟುವಟಿಕೆಯಾಗಲಿ ಬೇಸರಿಸಿಕೊಳ್ಳದೆ ಎಲ್ಲಾ ಅಧ್ಯಾಪಕರೂ ವಿದ್ಯಾರ್ಥಿಗಳೊಡನೆ ಕುಳಿತು ಅದರ ಸೊಗಸನ್ನು ಅನುಭವಿಸುತ್ತಿದ್ದರು. ಯಾವುದೋ ಸಾಹಿತ್ಯಗೋಷ್ಠಿಯೊಂದಕ್ಕೆ ಬಿ.ಎಂ.ಶ್ರೀ.ಬಂದಿದ್ದರು. ಆಗ ಬಾಂಬೆಯಿಂದ ಹೊರಡುತ್ತಿದ್ದ 'ಬಾಂಬೆ ಕ್ರಾನಿಕಲ್ ಇಂಗ್ಲಿಷ್ ವಾರಪತ್ರಿಕೆಯಲ್ಲಿ ನಮ್ಮ ಕನ್ನಡ ಸಾಹಿತ್ಯದಲ್ಲಿ ಪ್ರಾರಂಭವಾಗಿದ್ದ 'ರಿನೈಸಾನ್ಸ್' ಕುರಿತು ಅಗ್ರ ಲೇಖನವೊಂದು ಪ್ರಕಟವಾಗಿತ್ತು. ಚಳುವಳಿಯ ಆಚಾರ್ಯರಾಗಿದ್ದ ಬಿ.ಎಂ.ಶ್ರೀ, ಮಾಸ್ತಿ ಕುವೆಂಪು, ಬೇಂದ್ರೆ, ಪು.ತಿ.ನ. ಮುಂತಾದವರ ಕವನಗಳ ಬಗ್ಗೆ ಪ್ರೌಢಲೇಖನ ಬರೆಯಲಾಗಿತ್ತು. ಅದನ್ನು ಬಿ.ಎಂ.ಶ್ರೀಯವರೇ ಓದಿ ಹೇಳಿದ ನೆನಪು. ಆಗ ತಾನೆ ಪ್ರಸಿದ್ಧಿಯಾಗುತ್ತಿದ್ದ ರತ್ನನ ಪದಗಳನ್ನು ಜಿ.ಪಿ.ರಾಜರತ್ನಂನವರು ಸ್ವತಃ ನಮ್ಮೆದುರು ವಾಚಿಸಿದ್ದರು. ಮರಿಮಲ್ಲಪ್ಪ ಹೈಸ್ಕೂಲಿನ ಆವರಣದ ಸಾರ್ವಜನಿಕ ಸಮಾರಂಭವೊಂದರಲ್ಲಿ ಕುವೆಂಪು ತಮ್ಮ ಗುರುಗಳೊಡನೆ ಬಂದು ಒಂದೆರಡು ಪದ್ಯಗಳನ್ನು ಹಾಡಿದರು. ಅವರ 'ಕಲ್ಕಿ' 'ಜೈಕರ್ನಾಟಕ ಮಾತೆ' ಮುಂತಾದ ಕವನಗಳು ನೆರೆದಿದ್ದವರನ್ನು ಪುಳಕಗೊಳ್ಳುವಂತೆ ಮಾಡಿದವು. ಸ್ವಾತಂತ್ರ್ಯ ಚಳುವಳಿಯು ಭರದಿಂದ ನಡೆಯುತ್ತಿದ್ದ ಆ ಕಾಲದಲ್ಲಿ ಮೈಸೂರಿನ ತಾತಯ್ಯನೆಂದು ಖ್ಯಾತರಾಗಿದ್ದ ವೆಂಕಟಕೃಷ್ಣಯ್ಯನವರು 'ಸಾಧ್ವಿ' ಪತ್ರಿಕೆಯ ಮೂಲಕ ಉಪಯುಕ್ತ ಕೆಲಸ ಮಾಡುತ್ತಿದ್ದರು. ಪಿಟೀಲಿನ ಮಹಾವಿದ್ವಾಂಸರಾದ ಟಿ.ಚೌಡಯ್ಯನವರು. ನಮ್ಮ ಕಾಲೇಜಿನರ ಅನೇಕ ಸಮಾರಂಭಗಳಿಗೆ ಪುಕ್ಕಟೆಯಾಗಿ ಮನರಂಜನೆ ಒದಗಿಸುತ್ತಿದ್ದರು. ಇಂತಹ ಕಾರ್ಯಗಳನ್ನು ಸಂಘಟಿಸುವುದರಲ್ಲಿ ನಮ್ಮ ಯೂನಿಯನ್ ಕಾರ್ಯದರ್ಶಿ ಶ್ರೀ ಎಂ.ಪಿ.ಎಲ್.ಶಾಸ್ತ್ರಿ ಅವರದು ಹಿರಿದಾದ ಪಾತ್ರವಿರುತ್ತಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಾಗಿದೆ.

ಆಗ ಮೈಸೂರಿನ ವಾತವರಣವೇ ಸೊಗಸಾದುದಾಗಿತ್ತು. ನಾವುಗಳು ಸಂಜೆ ಹೊತ್ತು ದೇವಾಂಬ ಅಗ್ರಹಾರ, ರಮಾವಿಲಾಸ ರಸ್ತೆ, ತ್ಯಾಗರಾಜ ರಸ್ತೆ ಮುಂತಾದ ಕಡೆ ಹೋಗುತ್ತಿದ್ದರೆ ಪ್ರತಿಯೊಂದು ಮನೆಯಲ್ಲೂ ಹಾಡಿನ ಸುಮಧುರ ಧ್ವನಿಯೋ ಅಥವಾ ವೀಣೆಯ ಝೇಂಕಾರವೊ ಕೇಳಿಬರುತ್ತಿತ್ತು. 'ಕಲೆ ಸಾಮಾನ್ಯನ ಯೋಗ' ಕಲೆ 'ನನ್ನಿಯ ನೆಲೆಗೆ ಹೆದ್ದಾರಿ' ಎಂದು ಆ ಜನ ಭಾವಿಸಿದ್ದರೇನೋ, ಜಗನ್ಮೋಹನ ಪ್ಯಾಲೇಸಿನಲ್ಲಂತೂ ಯಾವಾಗಲೂ ಸಂಗೀತವೋ ನಾಟಕವೋ ನಡೀತಿತ್ತು. ದಸರಾ ಕಾಲದಲ್ಲಿ ಬಿಡಿ. ಅದು ಗಾದೆ ಮಾತಾಗಿದೆ. ದೇಶ ವಿದೇಶಗಳ ಜನ ಇಲ್ಲಿ ಕಿಕ್ಕಿರಿಯುತ್ತಿದ್ದರು. ರಾಜಭಕ್ತಿಯ ಹೆಚ್ಚಳದಿಂದ ಅಡ್ಡ ಬಿದ್ದ ಜನಗಳಂತೂ ಮೇಲೇಳುತ್ತಲೇ ಇರಲಿಲ್ಲ. ಆ ಸಮಯದಲ್ಲಿ ನಾನು ಟಿ.ಪಿ. ಕೈಲಾಸಂ, ಮಹಮದ್ ಪೀರ್‌ರವರು, ಕೊಟ್ಟೂರು ಬಸಪ್ಪ, ಮುಂತಾದವರ ನಾಟಕಗಳನ್ನು ನೋಡಿದ್ದು. ಪೀರ್‌ರವರು ಅಭಿನಯಿಸುತ್ತಿದ್ದ ಸಂಸಾರ ನೌಕ ನಾಟಕ ನೋಡಿದಾಗಲಂತೂ ಹೆಂಗಳೆಯರಂತೆ ಕಣ್ಣೀರು ಸುರಿಸುತ್ತಿದ್ದೆ. ಇಂತಹ ಎಲ್ಲ ಕಾರ್ಯಕ್ರಮಗಳಿಗೂ ನನ್ನ ಜೊತೆಗಾರನೆಂದರೆ ಕಾಲೇಜು ಮತ್ತು ಹಾಸ್ಟೆಲ್‌ನ ಜೊತೆಗಾರ ಶ್ರೀ ಎಂ.ಕೃಷ್ಣಮೂರ್ತಿ; ''ದುಃಖ ಸಂಕಟ ಭಯಗಳಿಂದ ಕಾಪಾಡುವುದು ಪ್ರೀತಿ ಪಾತ್ರವಾದ ಎರಡಕ್ಷರದ ಮಿತ್ರ'' ಎಂಬ ಮಾತೊಂದಿದೆ. ಇಂತಹ ಸ್ನೇಹ ನಮ್ಮದು. ಇದನ್ನು ಕೂಡ ಒರೆಹಚ್ಚುವ ಸಂದರ್ಭ ಒದಗಿತು, ಕೃಷ್ಣಮೂರ್ತಿ ಮತ್ತು ನಾನು ಕಾಲೇಜಿನಲ್ಲಿ ಮಾತ್ರ ಜೊತೆಗಿರದೆ ಹಾಸ್ಟೆಲಿನಲ್ಲಿ ಕೂಡ ಒಂದೇ ರೂಮಿನಲ್ಲಿದ್ದೆವು. ಕೃಷ್ಣಮೂರ್ತಿ ಕೋಲಾರದ ಕಡೆಯವ. ಒಂದು ದಿನ ಯಾವುದೋ ಮನಸ್ತಾಪಕ್ಕಾಗಿ ನಾವಿಬ್ಬರು ಭಾರಿ ಜಗಳ ಕಾದೆವು. ಆ ರಾತ್ರಿ ತನ್ನಲ್ಲಿದ್ದ ಹರಿತವಾದ ಚಾಕುವನ್ನು ಇನ್ನೂ ಚನ್ನಾಗಿ ಹರಿತವಾಗಿಸಲು ಮಸೆಯುತ್ತಿದ್ದಾಗಲೆ ನಾನು ಗೋಡೆಗೆ ಮುಖ ಮಾಡಿ ನಿದ್ದೆ ಮಾಡಿದೆ. ಆತನದೊಂದು ಅಭ್ಯಾಸ ಪ್ರತಿನಿತ್ಯ ಬೆಳಿಗ್ಗೆ-ರಾತ್ರಿ ಮಲಗುವ ಮುನ್ನ ಬೈಬಲ್ ಪಾರಾಯಣ ಮಾಡೋದು ಇತ್ತೀಚಿನವರೆಗೂ ಅಂದರೆ ಆತ ನಿಧನವಾಗುವ ತನಕ ಈ ಅಭ್ಯಾಸ ಬಿಟ್ಟಿರಲಿಲ್ಲ. ಕೊನೆ ತನಕ ಹಿಂದುವಾಗಿಯೇ ಆತ ಉಳಿದಿದ್ದ. ಆತನಿಗೆ ಬೈಬಲ್ಲಿನಲ್ಲಿದ್ದ ನಿಷ್ಠೆ ಮತ್ತಾವುದರಲ್ಲೂ ಇದ್ದಂತೆ ಕಾಣಲಿಲ್ಲ. ಆವತ್ತು ಕೂಡ ದಿನನಿತ್ಯದಂತೆ ಬೈಬಲ್ ಪಾರಾಯಣ ಮಾಡಿ ಆತ ಕೂಡ ಗೋಡೆಕಡೆಗೆ ಮುಖ ತಿರುಗಿಸಿ ಮಲಗಿದ. ನಾನೂ ಸ್ವಲ್ಪ ಮುಂಗೋಪಿ. ಆದರೆ ಜಗಳ ಆದಮೇಲೆ ಅಷ್ಟೇ ಕೂಲಾಗಿ ಮಲಗಿ ನಿದ್ದೆ ಹೋದೆ. ಮಾಮೂಲಾಗಿ ಐದು ಗಂಟೆಗೆ ಏಳುವಂತೆ ಅಂದು ಕಣ್ ಬಿಟ್ಟರೆ ದೀಪದ ರಜ

ಬೆಳಕು ಕಣ್ ಕೋರೈಸುತ್ತಿದೆ. ಕೃಷ್ಣಮೂರ್ತಿ ಗೋಡೆಗೆ ತಲೆ ಒರಗಿಸಿಕೊಂಡು ಕಣ್ಣೀರು ಸುರಿಸುತ್ತಾ ಕುಂತಿದ್ದಾನೆ, ಸಾವರಿಸಿಕೊಂಡು ಆಗ ಆತ ಮೇಲೆದ್ದು, ನನ್ನ ಕಾಲ ಹಿಡಿಯೋದೆ. ನನಗಾಶ್ಚರ್ಯ. ಹಾಗೂ ಏನಾಯಿತೋ ಎಂಬ ಭಯ, ಆತ ಗಳಗಳ ಅಳುತ್ತಾ 'ಮಲ್ಲಪ್ಪ ಕ್ಷಮಿಸಿದ್ದೇನೆ ಅಂತ ಹೇಳೋ ತನಕ ಕಾಲು ಬಿಡೋದಿಲ್ಲ' ಎಂದ. ನನಗೆ ಏನೊಂದೂ ತೋಚಲಿಲ್ಲ. 'ಏನೋ ವಿಷಗಳಿಗೆ ಜಗಳ ಕಾಯ್ದೆವು. ಅದೆಲ್ಲಾ ಮರೆತುಬಿಡು' ಅಂತ ನಾನು ಸಮಾಧಾನ ಮಾಡಲು ಹೋದೆ. ಆಗ ಆತ "ಮಲ್ಲಪ್ಪ ಹಾಗಲ್ಲ. ರಾತ್ರಿ ನಿನ್ನೊಡನೆ ಜಗಳ ಕಾದ ಮೇಲೆ ನನಗೆ ರೋಷ ಉಕ್ಕಿ ನಿನ್ನ ಮುಗಿಸಿಬಿಡಬೇಕೆಂದು ನನ್ನಲ್ಲಿದ್ದ ಆಗಲೆ ಹರಿತವಾಗಿದ್ದ ಚಾಕುವನ್ನು ಇನ್ನು ಹರಿತವಾಗಿ ಮಸೆದಿಟ್ಟುಕೊಂಡೆ. ನೆಪಕ್ಕೆ ಮಲಗಿದ್ದರೂ ನಿದ್ದೆ ಬರಲಿಲ್ಲ. ಸರಿ ಹೊತ್ತಿನಲ್ಲಿ ಎದ್ದು ದೀಪ ಹಾಕಿ ನಿನ್ನ ಕುತ್ತಿಗೆಗೆ ಚಾಕು ಹಾಕಬೇಕೆಂದು ಕೈ ಎತ್ತಿದೆ. ಅಲ್ಲೆ ರಾತ್ರಿ ಓದಿಟ್ಟಿದ್ದ ಬೈಬಲ್ ಕಾಣಿಸಿತು. ಏಸು ಹೇಳಿದ್ದ 'ನಿನ್ನ ಶತ್ರುವನ್ನು ಪ್ರೀತಿಸು' ಎಂಬುದು ನೆನಪಾಯ್ತು. ಚಾಕುವನ್ನು ಅತ್ತ ಒಗೆದೆ. ಹಾಗೇ ಆ ಕ್ಷಣದಿಂದ ಏನೇನೋ ನೆನಸುತ್ತಾ ಕುಂತಿದ್ದೀನಿ. ನೀನೆದ್ದ ಮೇಲೆ ನಿನ್ನ ಕಾಲು ಹಿಡಿದುಕೊಂಡೆ" ಎಂದ. ಪಾಪಕ್ಕೆ ಪಶ್ಚಾತಾಪಕ್ಕಿಂತ ಮತ್ತೊಂದು ಸಿದ್ಧೌಷದ ಇಲ್ಲವೆಂಬುದು ನಿಜವಾಗಿದ್ದರೆ ಆತ ಈ ಹೊತ್ತಿಗಾಗಲೆ ಎಲ್ಲ ಪಾಪಗಳನ್ನೂ ತೊಳೆದುಕೊಂಡು ಪುನೀತನಾಗಿರುತ್ತಾನೆ ಎಂದುಕೊಂಡು ಕೃಷ್ಣಮೂರ್ತಿಯನ್ನೆಬ್ಬಿಸಿ ಸಮಾಧಾನ ಮಾಡಿ ತಬ್ಬಿಕೊಂಡೆ. ಅಂದಿನಿಂದ ಗೆಳೆಯನೊಲ್ಮೆಯಂ ಬಿಟ್ಟು ಬಾಳುವುದು ಬಾಳಲ್ಲವೆನಿಸಿತು. ನಮ್ಮಿಬ್ಬರ ಸ್ನೇಹದ ಕೊಂಡಿ ಮತ್ತಷ್ಟು ಬಿಗಿಯಾಯಿತು. ಮುಂದೆ ನನಗೊದಗಿದ ಅನೇಕ ಕಷ್ಟಗಳಿಗೆ ಕೃಷ್ಣಮೂರ್ತಿಯ ನುಡಿಗಳೇ ಚೈತನ್ಯ ನೀಡಿದವು. ಹಣಕಾಸಿನ ವಿಚಾರದಲ್ಲಿ ನನ್ನ ಹಾಗೆಯೇ ಇದ್ದರೂ 'ದುಃಖಿಗೆ ನೆರಂ ದುಃಖಿ' ಎನ್ನುವಂತೆ ನನ್ನ ಕಷ್ಟಕ್ಕೆ ತಾನೂ ಕಣ್ಣೀರು ಸುರಿಸಿ ನನ್ನ ಎದೆಹಗುರ ಮಾಡುತ್ತಿದ್ದ. ಇವನ ಜೊತೆಗೆ ಮೂರ್ತಿರಾವ್, ಬಿ.ಪಿ.ರೇವಣ್ಣ, ಮಾಲಿಮರಿಯಪ್ಪ, ಜಿ.ವಿ.ನಾರಾಯಣಮೂರ್ತಿ, ಶಿವಮೊಗ್ಗೆಯ ಸೋಮಶೇಖರ, ರಾಮಯ್ಯ, ಸಿದ್ದಪ್ಪ ಮುಂತಾದವರು ನನ್ನ ಸಹಪಾಠಿಗಳು. ಮಾಸ್ತಿ ವೆಂಕಟೇಶ ಐಯ್ಯಂಗಾರವರ 'ಸಣ್ಣ ಕಥೆಗಳು' ಕುವೆಂಪು ಅವರ 'ಬೆರಳ್ಗೆಕೊರಳ್' ಹಾಗೂ ತೀನಂಶ್ರೀ 'ರಾಕ್ಷಸನ ಮುದ್ರಿಕೆ' ನಮ್ಮ ಪಠ್ಯ ಪುಸ್ತಕಗಳು. ಜೂನಿಯರ್ ಬಿ.ಎ.ನಲ್ಲಿದ್ದಾಗ ತೀನಂಶ್ರೀರವರು ಪ್ರಬಂಧ ಬರೆಯವ ರೀತಿಯ ಬಗ್ಗೆ ಪರೀಕ್ಷೆಯಲ್ಲಿ ಬರೆದಿದ್ದ ನನ್ನ ಪ್ರಬಂಧವನ್ನು ತಂದು ತರಗತಿಯಲ್ಲಿ ಓದಿದರು. ಆನಂತರ ಹತ್ತಿರ ಕರೆದು ಇತರ ಪುಸ್ತಕಗಳನ್ನು ಓದಿ ಜ್ಞಾನವೃದ್ಧಿ

ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಪ್ರಸಿದ್ಧ ಇತಿಹಾಸಕಾರರಾದ ಪ್ರೊ.ವೆಂಕಟೇಶ್ವರನ್ ಇತಿಹಾಸ ಬೋಧಿಸುವುದರಲ್ಲಿ ಪರಿಣತರು. ನೆಪೋಲಿಯನ್ನನ ದಿಗ್ವಿಜಯ ಹಾಗೂ ಪತನವನ್ನು ಅವರು ಹೇಳುತ್ತಿದ್ದರೆ, ಆತನ ಚಿತ್ರವೇ ನಮ್ಮ ಕಣ್ಮುಂದೆ ನಿಂತಿದೆಯೇನೋ ಎನ್ನುವಂತಾಗುತ್ತಿತ್ತು. ಅರ್ಥಶಾಸ್ತ್ರ ಬೋಧಿಸುತ್ತಿದ್ದ ಡಿಸೋಜ ಹಾಗೂ ಇತಿಹಾಸ ಅಧ್ಯಪಕರಾದ ನಾ. ಕಸ್ತೂರಿ ಅವರ ಹಾಸ್ಯ ಪ್ರಜ್ಞೆಯಂತೂ ಎಲ್ಲರನ್ನೂ ಸೆಳೆದಿತ್ತು. ಪ್ರೊ. ಎ.ಎನ್.ಮೂರ್ತಿರಾಯರು ಮ್ಯಾಕ್‌ಬೆತ್ ನಾಟಕವನ್ನೂ ಪ್ರೊ. ಮೆಕಂಟಾಷ್‌ರವರು ಷೆಲ್ಲಿಯ ಕವನಗಳನ್ನು ಹೇಳುತ್ತಿದ್ದರು. ಟೆಂಪೆಸ್ಟ್ ನಾಟಕವನ್ನು ಪ್ರೊ. ನಂಜುಂಡಯ್ಯನವರು ಬೋಧಿಸುತ್ತಿದ್ದರು. ಪ್ರಿನ್ಸಿಪಾಲ್ ಜೆ.ಸಿ.ರ್‍ಯಾಲೋ ವಾರಕೊಮ್ಮೆ ಜನರಲ್ ಇಂಗ್ಲೀಷಿನ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು.

ಇಲ್ಲಿ ಕೂಡ ಆಟದ ಬಯಲಿನಲ್ಲಿದ್ದ ನಾನು ಜಿಮನಾಶಿಯಮ್‌ಗೂ ಹೋಗುತ್ತಿದ್ದೆ. ತುಮಕೂರಿನಲ್ಲಿ ಎಸ್.ವಿ.ರಂಗಣ್ಣನವರು ನಡೆಸುತ್ತಿದ್ದ ಸ್ಕೌಟ್ ಚಟುವಟಿಕೆಗಳು ಇಲ್ಲೇನೋ ಅಷ್ಟು ಸರಿಯಾಗಿರಲಿಲ್ಲ. ಆದರೆ ಎಸ್.ವಿ.ರಂಗಣ್ಣನವರ' ಪ್ರಭಾವವಂತೂ ಇಲ್ಲೂ ಇತ್ತು. ನಮ್ಮ ಕಾಲೇಜಿನ ಸಮಾರಂಭವೊಂದರಲ್ಲಿ ಬಿಎಂಶ್ರೀ ಜೊತೆ ರಂಗಣ್ಣನವರೂ ಕೂಡ ಭಾಗವಹಿಸಿದ್ದರು. ಶ್ರೀ ಅವರು ತಮ್ಮ ಅಮೋಘ ವಾಕ್‌ಶ್ರೀಯಿಂದ ಸಭಿಕರನ್ನು ಮುಗ್ಧಗೊಳಿಸಿದ್ದರು. ನಾವೆಲ್ಲಾ ಶ್ರೀ ಅವರನ್ನು ಅವರ ಭಾಷಣಕ್ಕಾಗಿ ಅಭಿನಂದಿಸಿದರೆ ಶ್ರೀ ಅವರು 'ಎಲ್ಲಾದ್ರೂ ಉಂಟೇ. ವಿಮರ್ಶಕ ರಂಗಣ್ಣನೋರು ಹೇಳಿದರೆ ಬೆಲೆ ಗೊತ್ತಾಗೋದು' ಎನ್ನುತ್ತಿದ್ದರು. ಕೈ ಒಸೆಯುತ್ತಾ ರಂಗಣ್ಣನೋರು 'ಇಲ್ಲ ಗುರುಗಳೆ ವಿಷಯ ಪ್ರತಿಪಾದನೆ ಬಹಳ ಸೊಗಸಾಗಿತ್ತು' ಎನ್ನುತ್ತಿದ್ದರು.

ಪರೀಕ್ಷೆ ಮೂರು ನಾಲ್ಕು ತಿಂಗಳಿರಬೇಕಾದರೆ ನನಗೆ ಅಸಾಧ್ಯವಾದ ಗಂಟಲು ಬೇನೆ ಹಾಗೂ ಎದೆ ನೋವು ಪ್ರಾರಂಭವಾದವು. ಉಷ್ಣಕ್ಕೆ ಒಳ್ಳೆದೆಂದು ನಮ್ಮ ಅಡುಗೆಯಾತ ನಾಯರ್, 'ಕೋನಿಸ್ವಾಮಿ' ಮಾಂಸದ ಸೂಪ್ ಅಂತ ಕುಡಿಸಿ ಅದನ್ನ ಇನ್ನೂ ಹೆಚ್ಚು ಮಾಡಿದ. ಏನು ಔಷಧಿ ತಗೊಂಡರೂ ಗುಣವಾಗದೆ. ಚಿಂತಾಜನಕ ಸ್ಥಿತಿಗೆ ಬಂದೆ. ಸಾಯೋದಾದರೆ ನಮ್ಮ ಪಾಳ್ಯದಲ್ಲೆ ಸಾಯೋಣ ಅಂತ ಅಕ್ಕನ ಮನೆಗೆ ಬಂದುಬಿಟ್ಟೆ. ಈ ಕಾಲದಲ್ಲಿ ನನ್ನಕ್ಕ ಕೆಂಪಚಿಕ್ಕಮ್ಮ ಹೆತ್ತತಾಯಿಗಿಂತ ಮಿಗಿಲಾದ ಸೇವೆ ಮಾಡಿದಳು. ಆಸ್ಪತ್ರೆಗೆ ಅಡ್ಮಿಟ್ ಆದೆ. ಏನು

ಟ್ರೀಟ್‌ಮೆಂಟ್ ಕೊಟ್ಟರೂ ಗುಣವಾಗಲಿಲ್ಲ. ಅನೇಕರು ನನ್ನಾಸೆ ಬಿಟ್ಟರು. ತೌರಿನ ಕುಡಿ ಮುರುಟಿ ಹೋಗ್ತದಲ್ಲಾ ಎಂಬ ಕೊರಗು ನಮ್ಮಕ್ಕನಿಗೆ. ಈ ಮಧ್ಯೆ ನನ್ನ ಕಾಯಿಲೆ ಬಗ್ಗೆ ಮಿತ್ರರು ಅಪಪ್ರಚಾರ ಮಾಡಿ ನನ್ನನ್ನ ಸಾಕಷ್ಟು ಹಿಂಸಿಸಿದರು. ಹಟ್ಟಿ ಲಕ್ಕವ್ವನಿಗೆ ಹರಕೆ ಹೊತ್ಕೊಂಡು ನಮ್ಮಕ್ಕ ಅರೆ ಪ್ರಜ್ಞಾವಸ್ಥೆಯಲ್ಲಿದ್ದ ನನ್ನನ್ನು ಗುಡಿಗೆ ಗಾಡಿಯಲ್ಲಿ ಹಾಕಿಕೊಂಡು ಹೋದಳು. ಅಲ್ಲೂ ಪ್ರಯೋಜನವಾಗಲಿಲ್ಲ. ನಮ್ಮಕ್ಕ ನಾಟಿ ಔಷಧಿಗೆ ಶರಣಾಗಿ ಕಟ್ಟುನಿಟ್ಟಾದ ಊಟೋಪಚಾರ ಮಾಡಿಸಿದಳು. ಬರೀ ಸಪ್ಪೆ ಸಾರು ಚೆನ್ನಾಗಿ ಬೇಯಿಸಿದ ಅನ್ನವನ್ನು ಬಹಳಷ್ಟು ಕಾಲ ತೆಗೆದುಕೊಂಡೆ. ಹತ್ತದಿನ್ನೈದು ದಿನದಲ್ಲಿ ತುಸು ಶಕ್ತಿ ಬಂದಂತಾಗಿ ಸೋದರಮಾವ ನರಸಯ್ಯನವರ ನೆರವು ಪಡೆದು ಮೈಸೂರಿಗೆ ಹೋದೆ. ಪರೀಕ್ಷೆ ಇನ್ನೊಂದೆರಡು ದಿನ ಮಾತ್ರ ಇತ್ತು.

''ಬೇವು ಬಿತ್ತಿ.... ಮಾವು ಬೆಳೆಯಲು ಸಾಧ್ಯವೆ?'' ಎಂದ ಹಾಗೆ ಸತತ ವ್ಯಾಸಂಗವಿಲ್ಲದೆ, ಪರೀಕ್ಷೆಯಲ್ಲಿ ಉತ್ತಮ ಅಂಕ ಬರಲು ಹೇಗೆ ಸಾಧ್ಯ. ನನ್ನ ಜೂನಿಯರ್ ಬಿ.ಎ. ಪಾಸಾಯಿತಷ್ಟೆ, ಸೀನಿಯರ್ ಬಿ.ಎ.ಗೆ ಸೇರಿದೆ. ಮತ್ತೆ ಮಾಮೂಲಿ ಹಾಸ್ಟೆಲ್ ಜೀವನ. ಅನಾರೋಗ್ಯದ ಕಾರಣದಿಂದಾಗಿ ಹೆಚ್ಚು ಚಟುವಟಿಕೆಗಳನ್ನು ಕೈ ಬಿಟ್ಟೆ. ಆದರೂ ಮಿತ್ರರು ಬಲವಂತ ಮಾಡಿ ಶ್ರೀರಂಗಪಟ್ಟಣ, ನಂಜನಗೂಡು, ಕೆ.ಆರ್.ಸಾಗರ ಮುಂತಾದವುಗಳಿಗೆ ಕರಕೊಂಡು ಹೋದರು. ಮಿತ್ರರ ಸಹವಾಸದಿಂದ ರೋಗ ತಹಬಂದಿಗೆ ಬಂದಂತಾಯಿತು. ಇಂತಹ ಸಂದರ್ಭದಲ್ಲಿ ಊರಿನಿಂದ ಬರಸಿಡಲು ಒಡೆಯುವಂತಹ ಸುದ್ದಿಯೊಂದು ಬಂತು. ನಮ್ಮ ಸೋದರಮಾವ ನರಸಯ್ಯ ತಾವು ಕೆಲಸ ಮಾಡುತ್ತಿದ್ದಂತಹ ಖಾಸಗಿ ಮಿಲ್ಲು ಬೆಂಕಿ ಅಪಘಾತಕ್ಕೆ ಸಿಲುಕಿದ್ದು. ತಾವೇ ಕೆಲಸ ಕಳೆದುಕೊಂಡಿರುವುದಾಗಿಯೂ. ಇನ್ನು ಮುಂದೆ ಯಾವುದಕ್ಕೂ ತಮ್ಮನ್ನು ನೆಚ್ಚಿಕೋಬ್ಯಾಡ ಎಂದು ಬರೆದಿದ್ದರು. ಇನ್ನು 'ಸ್ಕಾಲರ್‌ಶಿಪ್' ಪ್ರಕಟಿಸಲು ಎರಡು-ಮೂರು ದಿನ ಇತ್ತು. ಧೈರ್ಯ ತಂದುಕೊಂಡು ಸಮಿತಿಯ ಸದಸ್ಯರ ಮನೆಗೆ ಅಲೆದಾಡಿದೆ. ನಮ್ಮ ಇತಿಹಾಸದ ಪ್ರಾಧ್ಯಾಪಕರಾದ ಡಾ|| ಎಂ.ಹೆಚ್.ಕೃಷ್ಣ ಅವರ ಬಳಿಗೆ ಹೋದೆ. ನನ್ನ ಪರಿಸ್ಥಿತಿಯನ್ನು ವಿವರಿಸಿ ನನ್ನ ಸೋದರಮಾವನಿಗಾದ ನಷ್ಟವನ್ನು ಹೇಳಿ ಅಳುತ್ತಾ ನಿಂತೆ, ಅರ್ಧ ಫ್ರೀಷಿಪ್ಪು ಒಂದನ್ನು ಕೇಳಿದೆ. ಅವರು ಒಂದಿನಿತೂ ಗಾಬರಿ ಮಾಡಿಕೊಳ್ಳದೆ 'ಆಗೋದಿಲ್ಲಪ್ಪ ನನಗೆ ಐದಾರು ಫ್ರೀಷಿಪ್ಪುಗಳನ್ನು ಮಾತ್ರ ಕೊಟ್ಟಿದ್ದಾರೆ. ಪಾರಾನ್ನನೋ ಅಥವಾ

ಭಿಕ್ಷಾನ್ನನೋ ಮಾಡಿಕೊಳ್ಳುತ್ತಿರುವ ನಮ್ಮೋರಿಗೆ ಕೊಡಬೇಕು. ನೀನು, ನಿಮ್ಮೋರನ್ನ ಕಾಣು ಎಂದರು. ನಮಸ್ಕಾರ ಹೇಳಿ ಮುಖ ಚಿಕ್ಕದು ಮಾಡಿಕೊಂಡು ಹಿಂದಿರುಗಿದೆ. ಆದರೆ ಅವರ ಪ್ರಾಮಾಣಿಕತೆಯಂತೂ ನನಗೆ ಮೆಚ್ಚುಗೆಯಾಯಿತು.

ಸ್ಕಾಲರ್‌ಷಿಪ್ ಪ್ರಕಟಿಸುವ ದಿನ ಬಂತು. ಸಂಜೆ ಹೊತ್ತು ಬೋರ್ಡಿಗೆ ಅಂಟಿಸುತ್ತಿದ್ದರು. ಮೊದಲೇ ಮುನ್ನೆಚ್ಚರಿಕೆ ತೆಗೆದುಕೊಂಡು ಬೆಂಕಿಪುಟ್ಟಣದ ಜೊತೆಗೆ ಹೋದೆ, ಅಂತೂ ಆರೂವರೆ ಹೊತ್ತಿಗೆ ಜವಾನ ಬೋರ್ಡ್ ಮೇಲೆ ಅಂಟಿಸಿ ಹೋದ. ಅರ್ಧ ಬೆಂಕಿಪೊಟ್ಟಣವನ್ನೆಲ್ಲಾ ಹಚ್ಚಿ ನೋಡಿದರೂ ನನ್ನ ಹೆಸರು ಕಾಣಲಿಲ್ಲ. ಪುನಃ ಕಡ್ಡಿ ಗೀರಿ ನೋಡಿದೆ. ಎಲ್ಲೂ ನನ್ನ ಹೆಸರು ಕಾಣಲಿಲ್ಲ. 'ನನ್ನ ಹೆಸರೇ ಅಳಿಸಿಹೋಯ್ತೇ ಈ ಪ್ರಪಂಚದಿಂದ'... ಎಂದು ಕುಸಿದು ಬೀಳುವಂತಾಯಿತು. ದಿಕ್ಕೇ ತೋಚದೆ ಹೌಹಾರಿ ಹೋದೆ. ಮನಸ್ಸು ಕೆಣಕಿದ ಜೇನುಗೂಡಾಗಿತ್ತು. ಹಾಗೆಯೇ ಮೆಲ್ಲನೆ ಹೆಜ್ಜೆ ಹಾಕುತ್ತಾ ಕಣ್ಣೀರು ಸುರಿಸುತ್ತಾ ಜೀವನವನ್ನೇ ಅಂತ್ಯಗೊಳಿಸಿಕೊಳ್ಳಲು ಕುಕ್ಕನಹಳ್ಳಿ ಕೆರೆ ಕಡೆಗೆ ಹೊರಟೆ. ಅಲ್ಲಿ ಎಷ್ಟು ಹೊತ್ತು ಕುಂತಿದ್ದೇನೋ, ತಿಳಿಯದು, ಕೃಷ್ಣಮೂರ್ತಿ ನನ್ನ ಹುಡುಕುತಾ ಬಂದವನು ದಿಗ್ಭ್ರಾಂತನಾಗಿ ಕುಂತಿದ್ದ ನನ್ನನ್ನು ಕಂಡು 'ಬೀಜವೆ ಇಲ್ಲದೆ ಹೊಲ ಬಿತ್ತಿದರೆ ಅದು ನಿಷ್ಫಲವಾಗುತ್ತದೆ. ಹಾಗೆ ಪುರುಷ ಪ್ರಯತ್ನವಿಲ್ಲದೆ ದೈವವು ಫಲವನ್ನೀಯುವುದಿಲ್ಲ' ಎಂದು ಅವನು ದೊಡ್ಡ ಉಪನ್ಯಾಸವನ್ನೇ ಮಾಡಹೊರಟ. ಹೊಟ್ಟೆ ತುಂಬಿದ ಮೇಲೆ ತಾನೇ ಕಣ್ತುಂಬಬೇಕು. ಹಾಸ್ಟೆಲ್‌ಗೆ ದುಡ್ಡು ಹೇಗೆ ಕಟ್ಟೋದು. ಕಾಲೇಜ್‌ಫೀಗೆ ಹೇಗೆ ಮಾಡೋದು, ಎಂದು ಚಿಂತಿಸಲಾರಂಭಿಸಿದೆ. 'ಈ ಹಾಳು ಮುಖ ಹೊತ್ತು ತುಮಕೂರಿಗೆ ಹಿಂದಿರುಗಲೆ ಅಥವಾ ಇಲ್ಲೆ ಜೀವನ ಕೊನೆಗೊಳಿಸಿಕೊಳ್ಳಲೆ, ಎಂದು ಪುನಃ ಚಿಂತಿಸಲಾರಂಭಿಸಿದೆ. ಕೆಟ್ಟರೂ ಸುಖಪಡಬೇಕು, ಅನ್ನೊ ಹಾಗೆ ಅವ್ವನ ಬಯಕೆ ತೀರಿಸಲಾಗದಿದ್ದರೂ ಒಂದು ಡಿಗ್ರೀನಾದ್ರು ಪಡಕೊಳ್ಳಬೇಕು. ಇಂದಲ್ಲದಿದ್ದರೆ ನಾಳೆ ವರ್ಷ ಗುರಿ ಮುಟ್ಟಿ ಗೆಲ್ತೀನಿ.... ಎನ್ನುವ ಅಂತರಾತ್ಮದ ನುಡಿಯನ್ನು ನಾನು ಅಲಕ್ಷಿಸುವಂತಿರಲಿಲ್ಲ.

ನನ್ನ ಸ್ಥಿತಿ ತಿಳಿದ ಬಿ.ವೆಂಕಟಸ್ವಾಮಯ್ಯನವರು ಹಾಸ್ಟೆಲಿಗೆ ಬಂದು ಸಮಾಧಾನ ಮಾಡಿ ಜಾನ್ಸನ್‌ನಂಥೋನಿಗೆ ಹಾಕ್ಕೊಳ್ಳಲು ಸರಿಯಾದ ಬೂಡ್ಸ್ ಇರಲಿಲ್ಲ. ಈ ಕಷ್ಟಗಳೇನೂ ಶಾಶ್ವತವಲ್ಲ. ಕಬ್ಬು ಅರೆದರೆ ತಾನೇ ಬೆಲ್ಲ ಬರೋದು ಕಷ್ಟಗಳಲ್ಲಿ

ನೊಂದುಬೆಂದರೆ ತಾನೇ ಬದುಕು. ಇನ್ನುಳಿದ ದಿನಗಳನ್ನು ನಮ್ಮನೇಲೆ ಕಳಿ ಚಿಂತೆ ಬೇಡ. ಎಂದರು. ನಾನಾದರೂ ವಿನಯದಿಂದ ಅವರ ಆಹ್ವಾನವನ್ನು ತಿರಸ್ಕರಿಸಿದೆ. ನನ್ನ ಮಹತ್ತರವಾದ ಐಶ್ವರ್ಯವೆಂದರೆ ಆತ್ಮಗೌರವ. ಅದು ಹೋದರೆ ನಾನು ಸತ್ತಂತೆಯೆ ಸರಿ. ಹಂಗು ಆತ್ಮಗೌರವದ ಮೊದಲ ಶತ್ರು ಎಂದುಕೊಂಡೆ. ಈ ವಿಚಾರ ನಮ್ಮ ಹಾಸ್ಟಲಿನ ಅಧ್ಯಕ್ಷರಾದ ಟಿ.ಮರಿಯಪ್ಪನವರಿಗೆ ತಿಳಿಯಿತು. ನೇರವಾಗಿ ಒಂದಿನ ನನ್ನ ಕೊಠಡಿಗೆ ನುಗ್ಗಿ ''ನಾವೆಲ್ಲ ಸತ್ತುಹೋಗಿದ್ದೇವೇನು. ಚಿಂತೆ ಯೇಕೆ ಓದು ಮುಂದುವರೆಸು. ಗುರಿ ತಾಗದ ಬಾಣ ನೂರಾರು ಎಸೆದರೇನು'', ಎನ್ನುವಂತೆ ಅರ್ಧಂಬರ್ಧ' ಓದಿದರೇನು ಪ್ರಯೋಜನ? ಒಂದು ಡಿಗ್ರಿ ತಕ್ಕೊಂಡ್ರೆ ಅದಕ್ಕೆ ಬೆಲೆ. ನಿನಗಷ್ಟೊಂದು ಸ್ವಾಭಿಮಾನ ಇದ್ದರೆ ಒಂದು ಕೆಲಸ ಮಾಡು: 'ಈ ಹಾಸ್ಟೆಲಿನ ಫ್ರಿಫೆಕ್ಟಾಗಿ ಕೆಲಸ ಮಾಡಿದ್ದಕ್ಕೆ ಪ್ರತಿಯಾಗಿ ಊಟ ಮಾಡಿಕೊ' ಎಂದರು. ನಾನು ಮಾತನಾಡಲು ಅವಕಾಶ ಕೊಡದೆ ಎಲ್ಲವನ್ನೂ ನಿರ್ಣಯ ವಾಕ್ಯದಂತೆ ಹೇಳಿದ ಮರಿಯಪ್ಪನವರಿಗೆ ಎದುರು ಏನು ಹೇಳಲಿ? ತಲೆ ತಗ್ಗಿಸಿನಿಂತೆ. ಊಟ ವಸತಿಗಳ ಸಮಸ್ಯೆ ಬಗೆಹರಿಸಿದರು. ಕಾಲೇಜು ಫೀ ಕಟ್ಟ ಬೇಡವೆ? ಕೊನೆಗೆ ಅಂಜುತ್ತಾ ಅಳುಕುತ್ತಾ ಪ್ರಿನ್ಸಿಪಾಲ್ ಜೆ.ಸಿ.ರ‍್ಯಾಲೋರವರನ್ನು ಕಂಡೆ. ನನಗೆ ತಂದೆ ತಾಯಿಗಳಿಲ್ಲವೆಂದೂ ಮಧ್ಯದಲ್ಲಿ ಅನಾರೋಗ್ಯದ ಕಾರಣ ಪರೀಕ್ಷೇಲಿ ಚೆನ್ನಾಗಿ ಮಾಡ್ಲಿಲ್ಲ ಅಂತ ಹೇಳಿ ಸಹಾಯ ಮಾಡುವಂತೆ ಬೇಡಿದೆ. ದೊಡ್ಡ ಮನಸ್ಸು ಮಾಡಿದ ಅವರು ಅರ್ಧ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿದರು. ಅಂತೂ ನಾನು ಕೊನೆಗೆ ಬದುಕಿದೆ.

ಈ ಸಂದರ್ಭದಲ್ಲಿ ನನ್ನ ಮನಸೆಳೆದ ವ್ಯಕ್ತಿ ಎಂದರೆ ಡಾ.ಜೆ.ಎಂ.ಕುಮಾರಪ್ಪ ಎಂಬುವವರು. ಸಿಲೋನಿನಲ್ಲಿ ಹುಟ್ಟಿದವರಾದರೂ, ಕೊಯಮತ್ತೂರಿನಲ್ಲಿ ನೆಲೆಸಿ ಭಾರತದ ವ್ಯಕ್ತಿಯಾಗಿದ್ದರು. ಆಗ ಅವರು ಮಹಾರಾಜ ಕಾಲೇಜಿನಲ್ಲಿದ್ದರು. ಗಾಂಧಿ ಜಯಂತಿ ಸಮಾರಂಭವೊಂದರಲ್ಲಿ ಅವರು ಮಾತನಾಡಿದಾಗ ನಾವು ಹುಚ್ಚೆದ್ದು ಕುಣಿದಿದ್ದುಂಟು. ಆಂಗ್ಲ ಅಧಿಕಾರಿಗಳೆದುರಿನಲ್ಲಿಯೇ ಅವರುಗಳನ್ನು ಟೀಕಿಸಿ ಗಾಂಧೀಜಿಯ ಆರ್ಥಿಕ ಸಿದ್ಧಾಂತವನ್ನು ಅತ್ಯುತ್ತಮವಾಗಿ ವಿಶ್ಲೇಷಿಸುತ್ತಿದ್ದರು. ಭಾರತದಲ್ಲಿ ಗಾಂದೀಜೀಯ ಪ್ರಭಾವವನ್ನು ಕುರಿತು ಅವರು ಹೇಳುತ್ತಿದ್ದಂತಹ ಈ ಪ್ರಸಂಗ ಇನ್ನೂ ನನ್ನ ನೆನಪಿನಿಂದ ಮಾಸಿಲ್ಲ.... ಅಮೇರಿಕದ ಪತ್ರಿಕೋದ್ಯಮಿಯೊಬ್ಬ ಭಾರತಕ್ಕೆ ಬಂದನಂತೆ. ಲಗೇಜುಗಳನ್ನು

ಕೂಲಿಯವನಿಂದ ಹೊರೆಸಿಕೊಂಡು ಅವನೊಡನೆ ಮಾತನಾಡುತ್ತಾ ನಡೆದು ಬರುತ್ತಿದ್ದನಂತೆ, ಪತ್ರಿಕೋದ್ಯಮಿ ಕೂಲಿಯವನನ್ನ ''ನಿನಗೆ ಇಂಗ್ಲೇಂಡ್ ರಾಜನ ಹೆಸರು ಗೊತ್ತೆ?'' ಎಂದನಂತೆ. ಆನಂತರ 'ನಿಮ್ಮ ವೈಸರಾಯ್ ಯಾರು' ಎಂದ. ಕೂಲಿಯೋನು-'ನಾನು ದಡ್ಡ ಅವರಾರು ನಂಗೋತ್ತಿಲ್ಲ' ಎಂದನಂತೆ. ಪುನಃ ಆತ 'ಈಗ ಬಾಂಬೆ ಮೇಯರ್ ಯಾರು?' ಎಂದನಂತೆ, ಕೂಲಿಯವ 'ಇಲ್ಲ ಅವರ ಹೆಸರೇ ಕೇಳಿಲ್ಲ' ಎಂದನಂತೆ. 'ಹೋಗ್ಲಿ ಗಾಂಧಿ ಅನ್ನೋನ ಹೆಸರು ಕೇಳಿದ್ದೀಯಾ?' ಅಂತ ವಿದೇಶಿ ಪತ್ರಕರ್ತ ಪ್ರಶ್ನಿಸಿದಾಗ ಕೂಲಿಯವ ಲಗೇಜನ್ನು ಕೆಳಗೆ ಹಾಕಿ, ''ದಯಮಾಡಿ ಮಹಾತ್ಮ ಗಾಂಧೀಜಿ ಅಂತ ಹೇಳಿ ಆ ಪುಣ್ಯಾತ್ಮರು ಯಾರಿಗ್ಗೊತ್ತಿಲ್ಲ'' ಎಂದು ಕೈ ಮುಗಿದ. ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ತಿ.ತಾ.ಶರ್ಮರ ಉಪನ್ಯಾಸವೇರ್ಪಟ್ಟಿತ್ತು. 'ಕರ್ನಾಟಕದ ಪ್ರಾಚೀನತೆ' ಕುರಿತು ಶರ್ಮ ಸೊಗಸಾಗಿ ಮಾತನಾಡಿದರು. ಸೊಗಸಾದ ವಾಕ್‌ವೈಖರಿಯ ಶರ್ಮರವರು ಎಂತಹವರಿಗಾದರೂ ಮೋಡಿ ಹಾಕಬಲ್ಲರು, ಶ್ರೀ ಹೆಚ್.ನಂಜುಂಡಯ್ಯ ಎಂಬುವರು ನಮಗೆ ಇಂಗ್ಲೀಷ್ ಡ್ರಾಮ ತೆಗೆದುಕೊಳ್ಳುತ್ತಿದ್ದರು, ಶೀತ ಪ್ರಕೃತಿಯವರು. ಒಂದು ದಿನ ಪಾಠ ಮಾಡಬೇಕಾದರೆ ಬಿಕ್ಕಳಿಸುತ್ತಿದ್ದರು. ಆ ದಿನ ನನಗೆ ನೆಗಡಿಯಾಗಿ ಗಂಟಲು ಕೆರೀತಿತ್ತು. ಮೊದಲ ಬೆಂಚಿನಲ್ಲಿ ಕುಳಿತಿದ್ದ ನಾನು ಮೂರು ನಾಲ್ಕು ಸಾರಿ ಗೊಗ್ಗರ ಶಬ್ದ ಮಾಡಿದೆ. ಮೇಷ್ಟ್ರು 'ವಾಟ್ ಈಸ್ ದಿಸ್?' ಎಂದರು, ನಾ ಸುಮ್ಮನೆ ಎದ್ದು ನಿಂತೆ. 'ಸಿಟ್ ಡೌನ್ ಲರ್ನ್ ಡಿಸಿಪ್ಲಿನ್, ಬಿಹೇವ್ ಪ್ರಾಪರ್ಲಿ, ಇನ್ ಕ್ಲಾಸ್ ರೂಮ್'' ಎಂದು ಗುಡುಗಿದರು. ಮುಂದೆ ಪಾಠ ಮುಂದುವರೆಯಿತು. ನನಗೊಂದು ರೀತಿ ಅವಮಾನ ಆದ ಹಾಗಾಯಿತು. ಅಲ್ಲದೆ ಆ ಕಾಲದಲ್ಲಿ ಮೇಷ್ಟ್ರುಗಳ ಬಗ್ಗೆ ಒಂದು ಚೂರು ಅವಿನಯವಾಗಿ ವರ್ತಿಸಿದರೂ ಭಾರಿ ಪ್ರಮಾದ ಆಗುವುದು. ಆಮೇಲೆ ಸ್ಟಾಫ್ ರೂಮಿಗೆ ಹೋದೆ. ಬಹಳ ಶ್ರದ್ಧೆಯಿಂದ ನಂಜುಂಡಯ್ಯನವರ ಹತ್ತಿರ ಹೋಗಿ 'ಸಾ ನನಗೆ ಮೂರು ದಿನದಿಂದ ಗಂಟಲು ಕೆಟ್ಟಿದೆ. ಹಾಗಾಗಿ ನಿಮ್ಮ ತರಗತಿಯಲ್ಲಿ ಅಸಭ್ಯವಾಗಿ ವರ್ತಿಸಿದೆ. ಕ್ಷಮಿಸಿ' ಎಂದೆ, ಅವರು ಹಸನ್ಮುಖಿಯಾಗಿ, ''ಓ ನಾನಾಗ್ಲೆ ಅದನ್ನು ಮರೆತು ಬಿಟ್ಟೆ, ನೀವು ಹೋಗಿ ಇಟ್ ಈಸ್ ಆಲ್ ಕಾಮನ್'' ಎಂದು ಮೈದಡವಿದರು. ಪರೀಕ್ಷೆ ಹತ್ತಿರ ಬಂತು. ಹಾಸ್ಟೆಲ್ ಕೆಲಸದ ಜೊತೆ ಪರೀಕ್ಷೆಗೆ ಸಾಕಷ್ಟು ಚೆನ್ನಾಗಿ ತಯಾರಿ ನಡೆಸಿದೆ. 'ಹಾಲುಳ್ಳಲ್ಲಿ ಹಬ್ಬ ಮಾಡು ಗಾಳಿ ಇದ್ದಲ್ಲಿ ತೂರಿಕೊ' ಎಂಬ ವಚನಕಾರರ ನುಡಿಯಂತೆ ಹಿರಿಯರು ಕೊಟ್ಟ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು

ನಿರ್ಧರಿಸಿದೆ. ಉತ್ತಮ ಶ್ರೇಣಿಯಲ್ಲಿ ಪಾಸಾಗಬೇಕೆಂಬ ಛಲ ಮೂಡಿತು. ಚೆನ್ನಾಗಿ ವ್ಯಾಸಂಗ ಮಾಡಿದ ಮೇಲೆ ಪರೀಕ್ಷೆಯಲ್ಲಿ ಏನು ಭಯ? ಚೆನ್ನಾಗಿ ಬರೆದೆ. ಪಾಸ್ ಮಾತ್ರವಲ್ಲ, ಮೊದಲ ದರ್ಜೆ ಬರ್ತ್ತದೆಂಬ ಭರವಸೆಯಿಂದ ತುಮಕೂರಿಗೆ ಹಿಂದರುಗಿದೆ.

# ಅಲೆದಾಟ

''ಬಾಳಿನ ಅಶ್ವತ್ಥಕ್ಕೆ ಭಗವಂತನೆ ಬೇರು'' ಎಂಬಂತೆ, ನನ್ನ ನೀರಸ ಬದುಕಿಗೆ ಆಸೆಯೊಂದೆ ನೀರು ಬೇರುಗಳಾಗಿತ್ತು. ಪುರಂದರದಾಸರು 'ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ' ಎನ್ನುತ್ತಾರೆ. ಭಯಂಕರ ವ್ಯಾಧಿ, ಹಣಕಾಸಿನ ತಾಪತ್ರಯಗಳಿದ್ದಾಗಲೂ ನನ್ನಕ್ಕ, ಸೋದರಮಾವ ನರಸಯ್ಯ, ವೆಂಕಟಸಾಮಯ್ಯ. ಹಾಗೂ ಮರಿಯಪ್ಪನವರ ಕೃಪೆಯಿಂದ ನಾನೂ ಪದವೀಧರನಾದೆ. ಶರೀರವೇನೋ ನನ್ನದಾಗಿದ್ದರೂ ಅದು ಋಣಭಾರದಿಂದ ಕುಗ್ಗಿತ್ತು. ಮಗನಿಗಿಂತಲೂ ಮಿಗಿಲಾಗಿ ಕಾಪಾಡಿದ ಅಕ್ಕನಿಗೆ ಹೇಗೆ ಕೃತಜ್ಞತೆ ಅರ್ಪಿಸುವುದು. ಎಡರುತೊಡರುಗಳಿದ್ದರೂ ಹಣ ಸಹಾಯ ಮಾಡಿದ ಸೋದರಮಾವನಿಗೆ ಏನು ಮಾಡುವುದು. ಸ್ಕಾಲರ್‌ಶಿಪ್ ಸಿಗದೆ ಜೀವನವೇ ಅಂಧಕಾರವೆಂದು ಭಾವಿಸಿದಾಗ ಬೆಳಕಿನಂತೆ ಕಾಣಿಸಿಕೊಂಡು ಅದನ್ನು ಪರಿಹರಿಸಿದ ಮರಿಯಪ್ಪನವರನ್ನು ನೆನಸಿದೆ. ''ಎನ್ನ ಕಾಲೆ ಕಂಬ ದೇಹವೆದೇಗುಲ ಶಿರವೇ ಹೊನ್ನ ಕಲಶವಯ್ಯ'' ಎನ್ನಲು, ನಾನೇನೂ ಬಸವಣ್ಣನಂಥ ಭಕ್ತನೆ? ಬಡನತದಲ್ಲಿರುವ ಅಕ್ಕ ತನ್ನ ಅಲ್ಪ ಸ್ವಲ್ಪ ದುಡಿಮೆಯಲ್ಲೇ ನನ್ನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದಳು. ಮಾವಂದಿರಾದ ನರಸಯ್ಯನವರನ್ನು ಕಂಡಾಗ ಎದೆ ಬಿರಿಯುತ್ತಿತ್ತು. ಪ್ರತಿಫಲಾಪೇಕ್ಷೆಯಿಲ್ಲದೆ ಕಾಪಾಡಿದ ಮೈಸೂರಿನ ''ಆ ಹಿರಿಯರಿಬ್ಬರನ್ನೂ'' ನೆನೆದಾಗ ಇವರೆಲ್ಲರ ಋಣ ಹೇಗೆ ತೀರುವಳಿ ಮಾಡೋದಂತ ಯೋಚಿಸಿದೆ. ಫಲಿತಾಂಶ ಬಂದು ಮೂರು ತಿಂಗಳಾದರೂ ಮಾಡಲು ಕೆಲಸವಿಲ್ಲ. ನೆರೆಯ ಮದ್ರಾಸ್ ಪ್ರಾಂತ್ಯದಲ್ಲಿ ಹರಡಿದ್ದ ಬ್ರಾಹ್ಮಣೇತರ ಚಳುವಳಿ ಮೈಸೂರಿಗೂ ಹರಡಿತ್ತು. ಉನ್ನತ ಹುದ್ದೆಯಲ್ಲಿದ್ದವರು ಮೇಲ್ವರ್ಗದ ಜನರೇ. ನಮ್ಮವರು ಇರಲಿ. ಎರಡು ಮೂರನೆಯ ವರ್ಗದ ಜನರು ಸರ್ಕಾರಿ ನೌಕರರಿಗೆ ಹೋಗುತ್ತಿರಲಿಲ್ಲ. ಮೊದಲ ವರ್ಗದವರು ಇನ್ನು ನಮಗೆ ಎಲ್ಲಿ ಸಿಗುತ್ತಾರೆ. ಸಂದರ್ಶನಕ್ಕೆ ಹೋದರೆ ನಿಮ್ಮೋರೂ ಯಾರಾದರೂ ದೊಡ್ಡ ಹುದ್ದೆಯಲ್ಲಿದ್ದಾರ, ಅವರಿಂದ ಬರೆಸ್ಕೊಂಡು ತನ್ನಿ ಎನ್ನುವುದು ಸಾಮಾನ್ಯವಾಗಿತ್ತು. ನಮ್ಮವರನ್ನು ದುರ್ಬೀನ್ ಹಾಕಿ ಹುಡುಕಬೇಕಾಗಿತ್ತು. ಕಛೇರಿಯಿಂದ ಕಛೇರಿಗೆ ಅಲೆದಾಡಿ ಬೆನ್ನು ಬಗ್ಗಿಸಿದರೂ ಫಲವೇನೂ ದೊರೆಯಲಿಲ್ಲ. ನನಗೊ ತ್ರಿಪದಿಯೊಂದು ಯಾವಾಗಲೂ ನೆನಪಿಗೆ ಬರ್ತಿತ್ತು. ''ಕರುಣ ಬಂದರೆ ಕಾಯೊ, ಮರಣ ಬಂದರೆ ಒಯ್ಯೋ; ಕರುಣೆ ಕಲ್ಯಾಣಿ ಬಸವಣ್ಣ ಕಾಶಿಲಿಂಗ ಕಡೆಯ ತನಕ ಕಾಯೊ ಅಭಿಮಾನ''

ಹೀಗೆಂದುಕೊಂಡು ಮೂಲೆ ಹಿಡಿದರೆ ಸರಿಯೆ? ನಾನು ಕಲ್ತಿದ್ದಕ್ಕೆ ಏನು ಪ್ರಯೋಜನ? ಈ ಮಧ್ಯೆ ನಮ್ಮ ಪಾಳ್ಯದಲ್ಲಿ ಬಿಸಿ ಬಿಸಿ ವಾತಾವರಣ, ನಾಯಕರಿಗೂ ನಮ್ಮವರಿಗೂ ಸಣ್ಣ ಸಣ್ಣ ವಿಚಾರದಲ್ಲಿ ಇರುಸು-ಮುರುಸು. ಅಲೆಮಾರಿತನದ ಜೊತೆ ವ್ಯವಸಾಯ ಮಾಡಿಕೊಂಡು 'ಬಡವ ನೀ ಮಡಗಿದ ಹಾಗಿರು' ಎನ್ನುವರು ನಮ್ಮೋರು, ನಮ್ಮ ಹೆಣ್ಣು ಮಕ್ಕಳ ಮೇಲೆ ಅವರ ಕಣ್ಣು. ನಮ್ಮೋರಿಗೇನೋ ಒಳಒಳಗೆ ರೋಷ. ಆದರೆ ಬಡವನ ಸಿಟ್ಟು ದವಡೆಗೆ ಮೂಲ. ನಾನಾಗ ಕಲಿತವನು ಬೇರೆ ಅಲ್ಲವೆ, ಒಂದಿನ ನಾಯಕರ ಗುಂಪಿನ ಯಜಮಾನರಿಗೆ ತಿಳಿಹೇಳಿದೆ, ಸಣ್ಣ ವಿಚಾರಗಳಿಗೆ ನಮ್ಮಲ್ಲಿ ಒಡಕು ಬೇಡ, ಪೊಲೀಸು ಮುಂತಾದವರು ಬಂದ್ರೆ ನಮ್ಮೆಲ್ಲರಿಗೂ ತೊಂದರೆ ಎಂದೆ. ಸ್ವಲ್ಪ ದಿನದಲ್ಲಿ ಪರಿಸ್ಥಿತಿ ಸುಧಾರಿಸಿತು. ಹಳ್ಳೀಲಿ ಹೀಗೆ ನೆಲಕಚ್ಚಿ ಕುಳಿತರೆ ಹೇಗೆ? ಎಂದುಕೊಳ್ಳುತ್ತಿದ್ದೆ. ಜಡತ್ವ ತೊರೆಯಲು ನಾನೆ ಮುಂದಾಗಬೇಕು ಎಂದು ಕಛೇರಿ ಕಛೇರಿಗಳಿಗೆ ಸುತ್ತಿ ತುಮಕೂರಿನ ಎಕ್ಸಿಕ್ಯೂಟಿವ್ ಇಂಜನಿಯರ್‌ರವರಲ್ಲಿ ದಿನಕೂಲಿ ಕೆಲಸಕ್ಕೆ ಸೇರಿದೆ. ಮಾಹೇಯಾನ 30-35 ಸಂಬಳ ಬರುವ ಕೆಲಸಕ್ಕೆ ಮಾತ್ರ ಅರ್ಜಿ ಹಾಕುತ್ತಿದ್ದೆ. ಈ ಎಕ್ಸಿಕ್ಯೂಟಿವ್ ಇಂಜನಿಯರ್ ಆಫೀಸ್ ಕೆಲಸದಲ್ಲಿ ಎರಡು ಮೂರು ತಿಂಗಳು ಮಾತ್ರ ಇದ್ದೆನಷ್ಟೆ. ಮೇಲಿನ ಅಧಿಕಾರಿಗಳಲ್ಲಿ ಸಹೃದಯತೆ ಇರಬೇಕು. ನಮ್ಮ ಪ್ರಥಮ ದರ್ಜೆ ಗುಮಾಸ್ತನಿಗೆ ನಾನು ಅಣಕದ ವಸ್ತುವಾದೆ. ಎಂತದೋ ರಾವ್ ಅಂತ ಆತನ ಹೆಸರು. ನನ್ನ ನಿಸ್ಸಹಾಯಕ ಸ್ಥಿತಿ ನೋಡಿ ಆತ ಮರುಕಪಡೋದು ಬ್ಯಾಡ. ''ಆ ನಿಮ್ಮ ಪದವಿ ಎಲ್ಲಿಗೋಯಿತ್ರಿ'' ಅಂತ ಹಂಗಿಸುತ್ತಿದ್ದ. ಆದರೆ ಅವನು ಪ್ರೊಮೋಷನ್ ಮೇಲೆ ಆ ಜಾಗಕ್ಕೆ ಬಂದಿದ್ದು ಅವನಿಗೆ ಮರೆತುಹೋಗಿತ್ತು. ಅವನು ಹೇಳಿದಂತೆ ನಾನು ಕೇಳಬೇಕೆಂಬುದು ಅವನ ಹಠ ಆಗಿತ್ತು. ತಿಳಿಯದ್ದ ವಿಚಾರದಲ್ಲಿ ತಲೆ ಬಗ್ಗಿಸೋಣ ಬೆನ್ನ ಮೇಲೆ ಸವಾರಿ ಮಾಡೋಕೆ ಬಂದರೆ ಏನು ಮಾಡುವುದು? ಒಂದು ದಿನ ಮಧ್ಯಾಹ್ನದ ಸಮಯ ನಮ್ಮಂಥವರ ಬಗ್ಗೆ ಹೀನಾಯವಾಗಿ ಮಾತನಾಡಿದ. ಸಿಟ್ಟು ತಡೆಯಲಾರದೆ ನಾನು ರೂಲ್ ದೊಣ್ಣೆ ತಗೊಂಡು ಅಟ್ಟಿಸಿಕೊಂಡು ಹೋದೆ. ಆತ ಎಕ್ಸಿಕ್ಯೂಟಿವ್ ಇಂಜನಿಯರ್‌ನ ಮೊರೆ ಹೋದಾಗ ಈ ಕೆಲಸವೇ ಬೇಡ ಅಂತ ಹೇಳಿ ರಾಜೀನಾಮೆ ಕೊಟ್ಟು ಮನೆಗೆ ಹಿಂದಿರುಗಿದೆ.

ವಿದ್ಯಾಭ್ಯಾಸ ಮುಗಿಸಿ ನಿರುದ್ಯೋಗಿಯಾಗಿ ಮನೆ ಸೇರಿದರೂ ನನ್ನಕ್ಕನ ಪ್ರೀತಿ

ಒಂದಿನಿತೂ ಕಡಿಮೆ ಆಗಿರಲಿಲ್ಲ. ಬಡತನ ಕಿತ್ತು ತಿನ್ನುತಿದ್ದರೂ ನನ್ನ ಊಟೋಪಚಾರಗಳಲ್ಲಿ ಮಿಗಿಲಾದ ಆಸಕ್ತಿ ಅವಳಿಗೆ. ಬೈಗಿನಲ್ಲಿ ಹೊಲದಿಂದ ಬದುವಿನ ಬಳಿ ಏಳುತ್ತಿದ್ದ ಅಣಬೇನೋ ಅಥವಾ ಬೆರಕೆ ಸೊಪ್ಪನ್ನೋ ತಂದು ಅಚ್ಚುಕಟ್ಟಾಗಿ ಅಡುಗೆ ಮಾಡುವಳು. ನನಗೆ ಅಣಬೆ ಚಿಕ್ಕಂದಿನಿಂದಲೂ ಪ್ರಿಯವಾದ ಆಹಾರ. ನಮ್ಮವ್ವ ಹೊತ್ತಾರೆ ಎಬ್ಬಿಸಿ ಇದನ್ನ ತರಲು ಕಳಿಸುತ್ತಿದ್ದಳು. ಅದರೊಳಗಡೆ, ಹಾಲ ಅಣಬೆ. ತುಪ್ಪದ ಅಣಬೆ ಎಂದು ಎಷ್ಟೆಷ್ಟೋ ವಿಧ. ಪಾಂಡವರು ಹಿಂದೆ ವನವಾಸದಲ್ಲಿ ಹಾಲು ಕುಡಿದು ಚೆಲ್ಲಿದಾಗ ಈ ಅಣಬೆಯು ಹುಟ್ಟಿಕೊಂಡಿತಂತೆ. ಇದರ ಜೊತೆ ನಮ್ಮಕ್ಕನ ಕೈನ ಪರಮಾಯಿಸಿ ಅವರೆಕಾಯಿ ಇದುಕವರೆ ಸಂಬ್ರ ಬಲು ರುಚಿ- ''ಹಿಟ್ಟ ಮೇಲೆ ಅವರೆಕಾಳ್'' ಅನ್ನೋ ಮಾತು ನಮ್ಮ ಕಡೆ ರೂಢಿ. ಬಡವರ ಬಂಧು ಹಿಟ್ಟಿಗೂ ಹಸಿ ಅವರೆಕಾಳು ಸಾರಿಗೂ ಬಲು ಹೊಂದಾಣಿಕೆ, ಕಳ್ಳುಪಚ್ಚೆ ಎಸರು ಮಾಡಿ ಹಿಟ್ಟಿನ ಮುದ್ದೆ ಗಂಗಳಲ್ಲಿದ್ರಂತೂ ಇವತ್ತ್ಯಾರೋ ಸಂಬಂಧಿಕರು ಬಂದವರೆ ಅಂತ ಸುಲಭವಾಗಿ ತಿಳಿದುಕೊಳ್ಳಬಹುದಾಗಿತ್ತು. ಯಾವತ್ತಾದರೂ ಆಗಲಿ ಅಪರೂಪಕ್ಕೆ ನೆಂಚಿಕೆಗೆ ಸೀಗಡಿ ಪಲ್ಯ ಹುರಿದ ಕರ್ಮೀನು ಇರುತ್ತಿತ್ತು. ಇನ್ಯಾವ ಕಡೆ ಕೆಲಸ ಸಿಕ್ತದೋ ಏನೋ ನಂತಮ್ಮ ಎಷ್ಟು ದಿನ ಇದ್ದಾನು ಅಂತ ನಮ್ಮಕ್ಕ ನನ್ನ ಉಪಚರಿಸಿದ್ದೇ ಉಪಚರಿಸಿದ್ದು. ಲೌಕಿಕ ಜೀವನದಲ್ಲಿ ಮುಳುಗಿ ನೆಲ ಕಚ್ಚಿದ್ದ ಪುರಂದರದಾಸರನ್ನು ಉದ್ದರಿಸಿದ ಸ್ವಾಮಿಯನ್ನು ಕುರಿತು ದಾಸರು ''ಎಂಥದೋ ಹರಿಯ ಕರುಣ, ಎಂಥದೋ ಹರಿಯ ಮಹಿಮೆ'', ಎಂದು ಹಾಡ್ತಾರೆ. ಬೇಗ್ನೆ ತಬ್ಬಲಿಯಾದ ನನಗೆ ಮಾತೃವಾತ್ಸಲ್ಯದ ಸವಿಯನ್ನುಣಿಸಿ ಬೆಳೆಸಿದ ನಮ್ಮಕ್ಕನ ನಿರ್ವ್ಯಾಜ ಪ್ರೇಮ ಎಂತಹದೆಂದು ಆಗಾಗ ಯೋಚಿಸುತ್ತಿರುತ್ತೇನೆ.

ಇಂಜಿನಿಯರ್ ಆಫೀಸಿನಲ್ಲಿ ಕೆಲಸ ಬಿಟ್ಟ ಮೇಲೆ ಜಿಲ್ಲಾಧಿಕಾರಿಗಳ ಕಛೇರಿಗೆ ಸೇರಿದೆ. ಒಂದು ತಿಂಗಳು ಕೂಡಾ ಕೆಲಸ ಮಾಡ್ಲಿಲ್ಲ. ಕೆಲಸ ಹೋಯ್ತು. ನಮ್ಮವರೇ ಆದ ಅರುವಯ್ಯ ಎಂಬಾತ ನನಗೆ ಕೆಲಸ ಕೊಡಿಸಲು ಸಾಕಷ್ಟು ಪ್ರಯತ್ನಿಸಿ ತಮಗೆ ಪರಿಚಯವಿದ್ದ ಚಿತ್ರದುರ್ಗದ ಡಿ.ಸಿ. ಹತ್ತಿರ ಕರಕೊಂಡು ಹೋಗಿದ್ದರು. ಆದ್ರೂ ಕೂಡ ಅಲ್ಲಿ ಏನೂ ಪ್ರಯೋಜನವಾಗಲಿಲ್ಲ.

ನಮ್ಮಕ್ಕನ ಮನೇಲಿ ಇದ್ದೆ. ಗ್ರಂಥಾಲಯಕ್ಕೆ ಭೇಟಿ ಕೊಡೋದು, ಮಿತ್ರ ಟಿ.ಆರ್.ರಾಮಯ್ಯ ಮುಂತಾದವರೊಡನೆ ಹರಟೋದು, ಅಣ್ಣನಿಗೆ ವ್ಯವಸಾಯದ ಕೆಲಸದಲ್ಲಿ ಒಂದು ಚೂರು ಸಹಾಯ ಮಾಡೋದು. ಆಗಾಗ ಬರುತ್ತಿದ್ದಂತಹ

'ಹರಿಜನ್' ಪತ್ರಿಕೇನ ಓದೋದು ನನ್ನ ಆಗಿನ ಕಾರ್ಯಕ್ರಮಗಳಾಗಿದ್ದವು. ''ಸುಭೋದ ಚಂದ್ರಿಕೆ'' 'ತಾಯಿ ನಾಡು' ಪತ್ರಿಕೆಗಳು ನನ್ನನ್ನು ಸಾಕಷ್ಟು ಕೆರಳಿಸುತ್ತಿದ್ದವು. ಆ ಕಾಲದಲ್ಲಿ ನಡೆಯುತ್ತಿದ್ದಂತಹ ಸ್ವಾತಂತ್ರ್ಯ ಹೋರಾಟದ ಘಟನೆಗಳೆ ನಮ್ಮ ಮಾತಿನ ವಿಚಾರ, ಆಗಿನ ಅನೇಕ ವರ್ಣರಂಜಿತ ವ್ಯಕ್ತಿಗಳು ನಮ್ಮ ನಾಯಕ ಶಿರೋಮಣಿಗಳಾಗಿದ್ದರು.

ನನ್ನವ್ವನಿಗಿದ್ದಂತೆ ನನಗೊಂದು ಮಹದಾಸೆ ಇತ್ತು. ಏನೇ ಆಗಲಿ ಹೈಸ್ಕೂಲು ಟೀಚರ್ ಆಗ್ಬೇಕು. ಅದರಲ್ಲೂ ಹಿಸ್ಟರಿನೇ ಪಾಠ ಮಾಡಬೇಕು ಅಂತಿತ್ತು. ಕೊನೆಗೂ ಒಂದು ಪ್ರಯತ್ನರ ನಡೆಸಿದೆ, ಅದೃಷ್ಟಕ್ಕೆ ನಮ್ಮ ಹೈಸ್ಕೂಲಿನಲ್ಲೇ ಒಂದು ತಾತ್ಕಾಲಿಕ ಹುದ್ದೆ ಖಾಲಿಯಾಗಿತ್ತು. ಮೈಸೂರಿಗೆ ಹೋದೆ. ಟಿ.ಮರಿಯಪ್ಪನವರನ್ನು ಕಂಡು ಅಂಗಲಾಚಿ ಅವರಿಂದ ಹೆಚ್.ಸಿ.ದಾಸಪ್ಪನವರಿಗೆ ಹೇಳಿಸಿ, ದಾಸಪ್ಪನೋರಿಂದ ಅಂದು ಡಿ.ಡಿ.ಪಿ.ಐ. ಆಗಿದ್ದ ಸುಲ್ತಾನ್ ಮೊಹಿದ್ದೀನ್‌ಗೆ ಹೇಳಿಸಿ, ಅವರ ಪತ್ರದೊಡನೆ ತುಮಕೂರಿಗೆ ಬಂದು ಇಳಿದೆ. ಡ್ಯೂಟಿ ಮೇಲೆ ಹೋಗಲು ಕೋಟು, ಟೈ ಇರಬೇಕಾಗಿತ್ತು. ಮಿತ್ರ ರಾಮಯ್ಯನನ್ನೆ ಕಾಡಿ ಬೇಡಿ ಟೈ ಸಂಪಾದಿಸಿದೆ. ಆತ ಉಲ್ಲನ್ ಕೋಟು ಕೊಡದೆ ಕಾಟನ್ ಕೋಟು ಕೊಟ್ಟ. ಚಿಂತೆ ಇಲ್ಲ ಎಂದ್ಕೊಂಡು ತರಾತುರಿಯಿಂದ ಡ್ರೆಸ್ ಮಾಡಿಕೊಂಡು ಹೈಸ್ಕೂಲಿಗೆ ಬಂದೆ. ಹೆಡ್‌ಮಾಸ್ಟರ್ ಕೊಠಡಿಗೆ ನುಗ್ಗಿದೆ. ಅವರಿಗೆ ಒಂದು ಕ್ಷಣ ನನ್ನ ವೇಷ ಭೂಷಣ ನೋಡಿ ದಿಗ್‌ಭ್ರಮೆಯಾಗಿರಬೇಕು. ''ಸಾರಿ ಮಲ್ಲಪ್ಪ ಬೆಳಿಗ್ಗೇನೆ ಜೆ.ಡಿ.ಯಿಂದ ಜಯರಾಮ್ ಆರ್ಡರ್ ತಕ್ಕೊಂಡು ಬಂದು ಡ್ಯೂಟಿಗೆ ಜಾಯಿನ್ ಆದರು. ಈಗಾಗ್ಲೆ ಅವರು ಕ್ಲಾಸ್ ತೆಗೆದುಕೊಂಡಿರಬೇಕು'' ಅಂದರು. ನಾನು ಕೊನೆಗೂ ಬೇಸ್ತು ಬಿದ್ದೆ. ನನ್ನ ಮತ್ತು ನನ್ನವ್ವನ ಆಸೆ ಈ ಜನ್ಮದಲ್ಲಿ ನೆರವೇರೋದಿಲ್ಲ ಎಂದು ಹ್ಯಾಪಮೋರೆ ಹಾಕ್ಕೊಂಡು ಮನೆಗೆ ಹಿಂದಿರುಗಿದೆ.

ಇಂತಹ ಸಂದರ್ಭದಲ್ಲಿ ಮೈಸೂರಿನಲ್ಲಿ ರೈಲ್ವೆ ಇಲಾಖೇಲಿ ನನಗೊಂದು ತಾತ್ಕಾಲಿಕ ಹುದ್ದೆ ದೊರೆಯಿತು. ಒಂದು ಕಡೆ ಕೆಲಸ ದೊರೆತ ಸಂತೋಷವೆಂದರೆ ಮತ್ತೊಂದು ಕಡೆ ಚುಂಚ ಹಸು ಚಪ್ಪೆರೋಗದಿಂದ ಸತ್ತು ಹೋಯಿತು. ರೋಗದ ತಾಪದಿಂದ ಅದು ಕಣ್ಣೀರು ಸುರಿಸುತ್ತಿದ್ರೆ ನನಗರಿವಿಲ್ಲದಂತೆಯೆ ನನ್ನ ಕಣ್ಣಲ್ಲಿ ನೀರೂರುತ್ತಿತ್ತು. ಏನು ಮದ್ದು ಮಾಡಿದರೂ ಫಲ ದೊರೆಯಲಿಲ್ಲ. ಅದು ಸತ್ತ ಎರಡು ಮೂರು ದಿನ ಗರ ಹೊಡೆದವನಂತೆ ನಿಂತು ಬಿಟ್ಟೆ. ಆದರ ಅದಮ್ಯ

ಪ್ರೀತೀನ ನಾನು ಖಂಡಿತ ಮರೆಯಲಾರೆ. ನನ್ನ ಮೋರೆ ನೋಡಿ ನಮ್ಮ ಸೋದರ ಮಾವ ಕೊಂಚ ಹಾಸ್ಯದಿಂದಲೇ ನನ್ನನ್ನು ಜಾಗೃತನನ್ನಾಗಿ ಮಾಡಿದರು. ರೈಲ್ವೆ ಇಲಾಖೆಯ ಸಂದರ್ಶನದಲ್ಲಿ ಅವರು ಕೇಳಿದ ಪ್ರಶ್ನೆಗಳನ್ನು ನೋಡಿದರೆ ಇದೇನೋ ಬೋದೊಡ್ಡ ಹುದ್ದೇನೆ ಇರಬೇಕೆನ್ನಿಸುತ್ತಿತ್ತು. 35 ರೂಪಾಯಿನ ಗುಮಾಸ್ತಹುದ್ದೇನ ಕರುಣಿಸಿದರು. ಅಲ್ಲಿ ಮೂರು ತಿಂಗಳಾದ ಮೇಲೆ ಬೆಂಗಳೂರಿನ ನ್ಯಾಯಾಲಯವೊಂದರಲ್ಲಿ ಡೆಪ್ಯುಟಿ ಕೋರ್ಟ್‌ಕ್ಲರ್ಕ್ ಆಗಿ ತಾತ್ಕಾಲಿಕ ಕೆಲಸ ದೊರೆಯಿತು. ಇಲ್ಲಿ ಎರಡು ತಿಂಗಳ ಕಾಲ ಕೆಲಸ ಮಾಡಿದೆ. ನ್ಯಾಯಾಲಯದಲ್ಲಿ ಕೆಲಸವಾಗಬೇಕಾದರೆ ಮೂಲೆ ಮೂಲೆಗೂ ಲಂಚ ಕೊಡಬೇಕು. ಯಾವುದಾದರೊಂದು ಕರಡು ಪ್ರತಿ ತೆಗೆದುಕೊಳ್ಳಬೇಕಾದರೆ ಕಕ್ಷಿದಾರ ಮತ್ತು ಆ ಲಾಯರನ ಹಣ ಬಿದ್ದು ಹೋಗುತ್ತದೆ. ಆದರೆ ನನ್ನ ಸಂಬಂಧವಾದ ಯಾವುದೇ ಪ್ರತಿಯನ್ನಾಗ್ಲಿ ಅಥವಾ ದಾಖಲೇನಾಗ್ಲಿ ತಡೆ ಮಾಡದೆ ಒಂದೇ ದಿನದಲ್ಲಿ ಕೊಟ್ಟು ಬಿಡುತ್ತಿದ್ದೆ. ಇದನ್ನು ಕಂಡ ಅನೇಕ ವಕೀಲರು ಸ್ವತಃ ನಮ್ಮ ಮೇಲಾಧಿಕಾರಿ ಹಾಗೂ ನ್ಯಾಯಾಧಿಕಾರಿಯವರಲ್ಲಿ ಹೇಳಿ ಸಂತೋಷ ವ್ಯಕ್ತ ಪಡಿಸುತ್ತಿದ್ದರು. ರಾಮಣ್ಣ ಎಂಬುವವರು ಆಗ ಅಲ್ಲಿನ ನ್ಯಾಯಾಧೀಶರಾಗಿದ್ದರು ಅನೇಕ ಸಂದರ್ಭದಲ್ಲಿ ನ್ಯಾಯಾಧೀಶರು ಹಂಗಿಗೊಳಗಾಗಿ ಅಸತ್ಯವನ್ನೇ ಸತ್ಯ ಅಂತ ಹೇಳ್ತಾರೆ ಅನ್ನೋದು ಈ ಸಂದರ್ಭದಲ್ಲಿ ನನಗೆ ಮನವರಿಕೆಯಾಯಿತು.

ಬೆಂಗಳೂರಿನಲ್ಲಿ ಕಳಾಸಿಪಾಳ್ಯಂ ಹತ್ತಿರವಿರುವ ಕುರುಬರ ಹಾಸ್ಟೆಲಿನಲ್ಲಿದ್ದೆ. ಅಲ್ಲಿ ನನಗೆ ಅನೇಕ ಜನ ಮಿತ್ರರಿದ್ದರು. ಹೊಟ್ಟೆಗಾಗುವಷ್ಟು ದುಡ್ಡು ಬರುತ್ತಿತ್ತು. ಲೈಬ್ರರಿಗೆ ನಿತ್ಯ ಭೇಟಿ, ನಗರಕ್ಕೆ ಬರುತ್ತಿದ್ದ ಗಣ್ಯ ರಾಷ್ಟ್ರೀಯ ನಾಯಕರ ಭಾಷಣ ಕೇಳೋದು ನನ್ನ ಸಂಜೆಯ ಕಾರ್ಯಕ್ರಮಗಳಾಗಿತ್ತು. 'ಭಾರತದ ಕೋಗಿಲೆ' ಎಂದು ಖ್ಯಾತರಾಗಿದ್ದ ಶ್ರೀಮತಿ ಸರೋಜಿನಿ ನಾಯಿಡು ಈ ದಿವಸಗಳಲ್ಲಿ ಬೆಂಗಳೂರಿಗೆ ಬಂದಿದ್ದರು. ನ್ಯಾಷನಲ್ ಕಾಲೇಜಿನ ಆವರಣದಲ್ಲಿ ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಿದರು. ಪ್ರಾಯಶಃ ಕೆ.ಟಿ.ಭಾಷ್ಯಂ ಅಂದು ಸ್ವಾಗತ ಮಾಡಿದ ನೆನಪು. ಸಮಧುರ ಕಂಠದಿಂದ ಇಂಗ್ಲಿಷ್‌ನಲ್ಲಿ ಭಾಷಣ ಪ್ರಾರಂಭಿಸಿದ ಶ್ರೀಮತಿ ಸರೋಜಿನಿ ನಾಯಿಡು ಅವರು 'ದಕ್ಷಿಣ ಭಾರತದಲ್ಲಿ ಭಾಷ್ಯಂನಂತಹ ವಾಗ್ಮಿಗಳನ್ನು ನಾ ನೋಡಿಲ್ಲ. ಅವರ ಇಂಗ್ಲೀಷ್ ಭಾಷಾ ಪ್ರಭುತ್ವ ಎಂಥವರನ್ನಾದರೂ ಬೆರಗುಗೊಳಿಸುತ್ತದೆ, ಎಂದಾಗ ಬಿರುಸಾದ ಚಪ್ಪಾಳೆ. ಆಕೆ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ ಯಾವಾಗಲೂ ಎತ್ತುತ್ತಿದ್ದರು. ಇಲ್ಲಿರುವ ವೇದ, ಉಪನಿಷತ್ತು, ಮಹಾ ಕಾವ್ಯಗಳ ಮಹತ್ವವನ್ನು

ಕುರಿತು ಹೆಚ್ಚಾಗಿ ಮಾತನಾಡಿದರು. ನಿರರ್ಗಳವಾದ ವಾಕ್‌ಪ್ರವಾಹ. ನಿರಂತರವಾದ ಆಲೋಚನಾ ಸರಣಿ, ಧ್ವನಿಯ ಏರಿಳಿತದಿಂದ ಸಭಿಕರನ್ನು ಮುಗ್ಧರನ್ನಾಗಿಸುವಲ್ಲಿ ಆಕೆ ನಿಸ್ಸೀಮಳೆನ್ನಬೇಕು. ಒಕ್ಕಲಿಗರ ಸಂಘದಲ್ಲೂ ಆಕೆಯ ಉಪನ್ಯಾಸವೇರ್ಪಟ್ಟಿತ್ತು. ಅಲ್ಲಿಗೂ ಹೋದ ನನಗೆ ಎಂಟು ಹತ್ತು ದಿನ ಶ್ರೀಮತಿ ಸರೋಜಿನಿ ನಾಯಿಡು ಅವರ ಭಾಷಣ ವಿಚಾರಗಳೇ ತಲೆ ತುಂಬ.

ಇದಾದ ಒಂದೆರಡು ತಿಂಗಳಲ್ಲಿ ಡಾ॥ ಬಾಬು ರಾಜೇಂದ್ರಪ್ರಸಾದ್‌ರವರು ಬೆಂಗಳೂರಿಗೆ ಬಂದಿದ್ದರು, ಬಿಹಾರ್, ಉತ್ತರ ಪ್ರದೇಶ್, ಮುಂತಾದೆಡೆ ರೈತರನ್ನು ಸಂಘಟಿಸಿ, ಗಾಂಧೀಜಿಯ ಮೆಚ್ಚುಗೆಗೆ ಪಾತ್ರವಾಗಿದ್ದ ಬಾಬು ರಾಜೇಂದ್ರಪ್ರಸಾದ್‌ರವರು ಕಾಂಗ್ರೆಸ್ಸಿನ ಹಿರಿಯ ನಾಯಕರಲ್ಲೊಬ್ಬರು. ಅವರು ಮಾಡಿದ ಅಂದಿನ ಸಾರ್ವಜನಿಕ ಭಾಷಣ ಇಂದಿಗೂ ನನ್ನಲ್ಲಿ ನೆನಪಿರುವಷ್ಟು ಪರಿಣಾಮಕಾರಿಯಾಗಿದೆ. ಭಾರತ ಸ್ವಾತಂತ್ರ್ಯಪಡೆಯಲು ಹೆಚ್ಚುಕಾಲ ಬೇಕಾಗಿಲ್ಲ. ಆದರೆ ಪಡೆದ ಸ್ವಾತಂತ್ರ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಯುವಕರು ಈಗಲೇ ಜಾಗ್ರತರಾಗಿ, ಸಂಘಟಿತರಾಗಬೇಕೆಂದು ರಾಜೇಂದ್ರಪ್ರಸಾದ್ ಹೇಳಿದರು. ಅವರ ಮಾತಿನಂತೆ ಅಂದಿನ ಯುವ ಜನಾಂಗ ಭಾವೋದ್ವೇಗ ತೊರೆದು, ವಾಸ್ತವಿಕ ಪ್ರಜ್ಞೆಯಿಂದ ಕಾರ್ಯೋನ್ಮುಖರಾಗಿದ್ದರೆ ಈ ದೇಶದಲ್ಲಿ ಎಂತಹ ಬದಲಾವಣೆಯನ್ನು ಬೇಕಾದರೂ ತರಲು ಸಾಧ್ಯವಿತ್ತು.

ಅಲ್ಲಿಂದ ನಾನು ಸ್ಟೋರ್ ಪರ್ಚೇಸ್ ಕಮಿಟಿಯ ಇಲಾಖೆಗೆ ಬಂದೆ. ಅಲ್ಲಿ ಕೂಡಾ ನಾನು ಒಂದೆರಡು ತಿಂಗಳು ಹಂಗಾಮಿಯಾಗಿ ರಜಾ ಹೋದವರ ಜಾಗದಲ್ಲಿ ಮಾತ್ರ ಇದ್ದೆ. ಬ್ರಾಹ್ಮಣ ಗುಮಾಸ್ತರೆ ಅಲ್ಲಿ ಹೆಚ್ಚಾಗಿದ್ದರು. ರಜಾ ಬೇಕಿದ್ದರೂ, ಯಾರೂ ರಜಾಕ್ಕೆ ಅರ್ಜಿ ಕೊಡಲೇ ಇಲ್ಲ. ಅಲ್ಲಿಂದ ಹೊರಬಿದ್ದೆ. ಈ ಸಮಯದಲ್ಲಿ ಅಂದರೆ 1935ನೆಯ ಇಸವಿಯ ಆದಿಭಾಗದಲ್ಲಿ ಏಳೆಂಟು ಜನ ಸಹಕಾರ ಸಂಘಗಳ ಇನ್‌ಸ್ಪೆಕ್ಟರನ್ನು ರಿಕ್ರೂಟ್‌ಮೆಂಟ್ ಕಮಿಟಿಯ ಮೂಲಕ ತೆಗೆದುಕೊಳ್ಳಲು ವ್ಯವಸ್ಥೆಯಾಗಿತ್ತು. ಅದರಲ್ಲಿ ಒಂದು ಕುರುಬರ ಜಾತಿಗೆ ಮೀಸಲಾಗಿದ್ದರಿಂದಲೊ ಅಥವಾ ಆರೇಳು ಕಡೆ ಹಂಗಾಮಿಯಾಗಿ ಕೆಲಸ ಮಾಡಿದ್ದರಿಂದಲೋ ಏನೋ ಸೊಸೈಟಿ ಇನ್‌ಸ್ಪೆಕ್ಟರಾಗಿ ಮಾಹೆಯಾನ 40 ರೂ. ತಲುಬಿನ ಮೇಲೆ ತಿಪಟೂರಿಗೆ ಹೋದೆ. ವಿಧಿಯ ಕಾಲ್ಚೆಂಡಾಗಿ ತಿಪಟೂರಿನಿಂದ ಹೊಸದುರ್ಗಕ್ಕೆ ಅಲ್ಲಿಂದ ರವಾನೆಯಾಗಲ್ಪಟ್ಟು ನನಗೆ ಉದ್ಯೋಗ ಸಿಕ್ಕಿತು. ಕೊನೆಗೂ ನಾನು ಖಾಯಂ ನೌಕರ ಎನ್ನಿಸಿಕೊಂಡೆ.

# ಆಸರೆ

''ಅರ್ಕೇ ಚೇನ್ಮಧು ವಂದೇತ್ ಕಿಮರ್ಥ ಪರ್ವತಂ ವ್ರಜೇತ್'' ಎಂಬ ಮಾತೊಂದಿದೆ. ಅಂದರೆ ದಾರಿಯಲ್ಲಿ ಎಕ್ಕದಗಿಡದಲ್ಲಿ ಜೇನು ಸಿಗಬೇಕಾದರೆ ಬೆಟ್ಟದವರೆಗೂ ಏಕೆ ನಡೆಯಬೇಕು? ಹೀಗಾಯಿತು ನನ್ನ ಸ್ಥಿತಿ. ಮರಿಯಪ್ಪನವರ ಆಸೆ, ನನ್ನ ಬಯಕೆಗಳೆರಡೂ ಈಡೇರುವ ಕಾಲ ಒದಗಿ ಬಂದಿತು. ನಮ್ಮ ಗ್ರಾಮವಾಸಿಗಳಿಗೆ ತುಸು ಸೇವೆ ಸಲ್ಲಿಸುವ, ಆ ಮೂಲಕ ನನ್ನ ಬದುಕಿಗೊಂದು ಊರುಗೋಲಾಗುವ ಉದ್ಯೋಗ ದೊರಕಿತು, ಮುವತ್ತೈದೋ ಅಥವಾ ನಲವತ್ತೋ ಅಂತೂ ಕೈಗೊಂದು ಉದ್ಯೋಗ ಪಡೆದು, ಸೊಸೈಟಿ ಇನ್‌ಸ್ಪೆಕ್ಟರ್ ಆಗಿ ತಿಪಟೂರು ವಿಭಾಗಕ್ಕೆ ಬಂದೆ. ಎಲ್ಲ ಹೊಸದಾಗಿ ಕೆಲಸಕ್ಕೆ ಸೇರಿದವರಿಗೆ ಆಗುವಂತೆ ನನಗೂ ಮಿಶ್ರ ಪ್ರತಿಕ್ರಿಯೆ ಕೇಳಿಸಿತು. ಪ್ರಾರಂಭದಲ್ಲೆ ನನ್ನನ್ನು ಕೃಷ್ಣಮೂರ್ತಿ ಎಂಬುವರ ಹತ್ತಿರ ಟ್ರೈನಿಂಗ್ ತೆಗೆದುಕೊಳ್ಳಲು ಹಾಕಲಾಯಿತು. ಜಿಮ್ನಾಷಿಯಂನಲ್ಲಿ ಚೆನ್ನಾಗಿ ಪಳಗಿಸಿದ ಮೂವತ್ತರ ನನ್ನ ದೇಹ ಕಂಡು ಅವರು ಸಂತೋಷಪಟ್ಟರು. ಅಷ್ಟಲ್ಲದೆ ನಾನು ಪದವೀಧರನಲ್ಲವೆ? ಒಂದು ದಿನ ನನ್ನನ್ನು ಅನುಕಂಪದಿಂದ ನೋಡಿ 'ಅಯ್ಯೋ ಮಲ್ಲಪ್ಪ, ಎಂತಹ ಕೆಲಸ ಮಾಡ್ಬಿಟ್ರಿ, ಈ ತ್ಯಾಪೇದಾರಿ ಕೆಲಸ ನಿಮಗ್ಯಾಕೆ ಬೇಕಿತ್ತು. ನಾ ಹದಿನೈದು ವರ್ಷ ಗೇದು ಮಣ್ಣಾಗಿದ್ದೀನಿ. ಏನ್ ಫಲ? ಇದು ಆಗೋದು ಅಲ್ಲ, ಹೋಗೋದು ಅಲ್ಲ ಅಂತ ಮಮ್ಮಲ ಮರುಗಿದರು. ಕೆಲಸಕ್ಕೆ ಬರುವ ಮೊದಲೆ ಸಹಕಾರ ತತ್ವದ ಬಗ್ಗೆ ತುಸು ತಿಳಿದುಕೊಂಡಿದ್ದ ನನಗೆ ಅವರ ಮಾತಿನ ರೀತಿ ಕಂಡು ಆಶ್ಚರ್ಯ. ವಯೋಧರ್ಮಕ್ಕೆ ಅನುಗುಣವಾಗಿ ವಾದ ಮಾಡೋ ಛಲ ನನ್ನದು. ''ಏನ್ ಸಾರ್ ಇಂಗಂತೀರ? ನ್ಯಾಯಮೂರ್ತಿ ರ್‍ಯಾನಡೆ ಹಾಗೂ ಸರ್ ವಿಲಿಯಂ ವೇಡರ್ ಬರ್ಗ್ ಮುಂತಾದವರು ಸಹಕಾರ ಯೋಜನೆಯಿಂದ ಮಾತ್ರ ರೈತರ ಕಷ್ಟ ನೀಗೋದು ಸಾಧ್ಯ ಅಂತಾರೆ. ಜರ್ಮನಿ ಮುಂತಾದ ಯೂರೋಪ್ ರಾಷ್ಟ್ರಗಳು ಇದನ್ನನುಸರಿಸಿ ಎಂತಹ ಪ್ರಗತಿ ಸಾಧಿಸಿಕೊಂಡಿದೆ. 1914ರಲ್ಲಿ ಮೆಕ್ಲಿಗನ್ ಕೊಟ್ಟಂತಹ ವರದಿ ಗ್ರಾಮದ ಬದುಕಿನಲ್ಲಿ ಹೊಸತನ್ನು ಮಾಡಲು ಸಾಧ್ಯವಿಲ್ಲವೆ?'' ಎಂದೆ. ಎಲ್ಲೋ ನೋಡುತ್ತಿದ್ದ ಅವರು ತಟಕ್ಕನೆ ನನ್ನ ಕಡೆ ನೋಡಿ 'ನಿಮ್ಮ ತರಹನೆ ನಾನು ಕೂಡ ಮೊದಲು ಇದನ್ನೆಲ್ಲಾ ಹೇಳ್ತಿದ್ದೆ. ಆಗತಾನೆ ಕಾಲೇಜಿನಿಂದ ಬಂದಿದ್ದೆ. ಅವೆಲ್ಲಾ ಪುಸ್ತಕದ ಬದನೆಕಾಯಿ.... ಪ್ರಾಕ್ಟಿಕಲ್‌ನಲ್ಲಿ ಕಷ್ಟರೀ...

ಸರ್ಕಾರ ಆಗ್ಲಿ ಜನ ಆಗ್ಲಿ ಪ್ರಾಮಾಣಿಕವಾಗಿ ಇದಕ್ಕೆ ಪ್ರಯತ್ನಿಸುವುದಿಲ್ಲ. ಎದ್ದೋಗೋದು ಬಿದ್ದು ಹೋಗ್ಲಿ ಅಂತ ಮಾಡೋಕೆ ಹೋಗ್ತಾರೆ ಅದಕ್ಕೆ ಎಲ್ಲ ಎಕ್ಕುಟ್ಟೋಗೋದು... ಬಿಡಿ ನಿಮ್ಗೆ ಅನುಭವ ಆಗ್ತದೆ.' ಎಂದರು. ಇಂತಹ ಸಂದರ್ಭದಲ್ಲಿ ನಗರದ ಸಹಕಾರ ಸಂಸ್ಥೆಯೊಂದರ ಕಾರ್ಯದರ್ಶಿಯಾದ ಎಂ.ಚಿನ್ನಸ್ವಾಮಿ ''ನೋಡಿ ಮಲ್ಲಪ್ಪ ನೀವು ಈ ಇಲಾಖೆಗೆ ಬಂದು ಒಳ್ಳೆ ಕೆಲಸ ಮಾಡಿದಿರಿ. ದೇಶ ಕಟ್ಟಲಿಕ್ಕೆ ಇರುವಂತಹ ಯೋಜನೆಯೆಂದರೆ ಇದೊಂದೆ. ನೋಡಿ ನಾವು ಪ್ರಾಣಿಗಳಿಂದ ಕೂಡ ಕಲಿಯಬೇಕಾದ್ದಿದೆ. 'ಜೇನುನೊಣ ನೋಡಿ ಸಹಕಾರ ತತ್ವವನ್ನು ಎಂಗನುಸರಿಸುತ್ತದೆ' ಎಂದರು. ಆಗ ನಾನು ''ಇದೆಲ್ಲಾ ವಿದೇಶದ್ದು, ನಮಗೇನೂ ಪ್ರಯೋಜನವಿಲ್ಲ ಅಂತಾರೆ ಕೆಲವರು'' ಅಂದೆ. ಅವರು 'ಬಿಡಿ ಅಂದುಕೊಳ್ಳೋದಕ್ಕೇನಂತೆ? ಸಹಕಾರ ತತ್ವ ಉಗಮವಾದದ್ದೆ ಮನುಷ್ಯನಿಂದ. 'ಅದಕ್ಕೆ ದೇಶ ವಿದೇಶಗಳ ಎಲ್ಲೆ ಇಲ್ಲ. ನಮ್ಮಲ್ಲಿ ಅಧಿಕೃತವಾಗಿ ಮಾತ್ರ 1904ರಲ್ಲಿ ಪ್ರಾರಂಭವಾದ ಧಾರವಾಡ ಜಿಲ್ಲೆಯ ಕಣಗಿನಹಾಳ್ ಸಂಘ ಮೊದಲನೆಯದು. 1929ರ ನಂತರ ಚಂದ್ರಶೇಖರ ಐಯ್ಯರ್ ಸಮಿತಿಯಿಂದಾಚೆಗೆ ಎಲ್ಲೆಲ್ಲೊ ಸಹಕಾರ ಸಂಘಗಳು ಹುಟ್ಟಿಕೊಂಡಿವೆ. ಅದರ ಪ್ರಭಾವವೇ ನಮ್ಮೂರು ಸಂಘ ಕೂಡ'' ''ನಿಜ ಸಾರ್ ನೀವೇಳೋದು. ರಷ್ಯದೋರು ಕೂಡ ಈಗಿದನ್ನು ಚೆನ್ನಾಗಿ ಅನುಸರಿಸುತ್ತಿದ್ದಾರೆ.'' ''ಅಂದರೆ ನೋಡಿ ಮಲ್ಲಪ್ಪ ಜನ ಯಾವಾಗಲೂ ಉತ್ಸಾಹದ ಮೇಲೆ ತಣ್ಣೀರನ್ನು ಎರಚ್ತಾ ಇರ್ತಾರೆ. ಆದ್ರೆ ನಾವು ಉತ್ಸಾಹ ಕಳೆದುಕೋಬಾರದು. ಅವರು ಮೆಚ್ಚೋ ಕಾಲ ಬರ್ತದೆ. ಅಂತ ಮುನ್ನುಗ್ಗ ಬೇಕು'' ಅಂದರು. ನಿಜ ನನ್ನ ಬದುಕನ್ನು ನಾನೇ ಈ ಕ್ಷೇತ್ರದಲ್ಲಿ ರೂಪಿಸಿಕೊಳ್ಳಬೇಕು. ನನ್ನ ಕೆಲಸ ನಾನು ಮಾಡಿದ್ರೆ ಸಾಕು ಎನ್ನಿಸಿತು.

ಆದರ್ಶಗಳ ಹುಚ್ಚಿನಿಂದ ನನ್ನನ್ನು ವಾಸ್ತವಕ್ಕೆ ದೂಡಿದ ಪ್ರಸಂಗವೊಂದನ್ನು ಹೇಳಬೇಕು. ಕೆಲಸಕ್ಕೆ ಸೇರಿ ಒಂದೆರಡು ತಿಂಗಳು ಕಳೆದಿರಬೇಕು. ತಿಪಟೂರು. ಸರ್ಕಲ್‌ನಲ್ಲಿರುವ ತುರುವೆಕೆರೆ ತಾಲ್ಲೂಕಿನ ಮಾಯಸಂದ್ರ ಸಹಕಾರ ಸಂಘಕ್ಕೆ ಭೇಟಿ ಮಾಡುವುದಿತ್ತು. ಬಸ್ಸಿಳಿದು ಸ್ಕೂಲ್ ಹತ್ತಿರಕ್ಕೆ ಹೋಗಿ ಸಂಘದ ಕಾರ್ಯದರ್ಶಿಗೆ ಹೇಳಿ ಕಳಿಸಿದೆ. ಮುಸ್ಸಂಜೆ ಹೊತ್ತು. ಕಾರ್ಯದರ್ಶಿಯವರು ಅಪ್ಪಟ ಬ್ರಾಹ್ಮಣರು. ಯಾರೋ ನನ್ನ ರೂಪ, ತಲೆಗೆ ಕಟ್ಟಿದ್ದ ಸಾದಾ ಮೈಸೂರು ಪೇಟದ, ಬಣ್ಣ ಅವರಿಗಾಗ್ಲೆ ಹೇಳಿರಬೇಕು. ಇಲ್ಲ, ಅವರು ಎಲ್ಲೋ ನಾನು ಬರಬೇಕಾದ್ರೆ ನೋಡಿರಬೇಕು. ನನ್ನನ್ನು ಹರಿಜನನೆಂದು ತೀರ್ಮಾನಿಸಿ

ಮುಖದರ್ಶನ ಮಾಡೋದು ಕೂಡ ಮೈಲಿಗೆ ಎಂದೆನ್ನುವಾಗ ಇನ್ನು ನಾನು ಮುಟ್ಟಿದ ಲೆಕ್ಕದ ಪುಸ್ತಕಗಳನ್ನು ವಾಪಸರ್ರು ತೆಗೆದುಕೊಳ್ಳೋದು ಸಾಧ್ಯವೇ? ಎಂದ್ಕೊಂಡು 'ಊರಲ್ಲಿಲ್ಲವೆಂದು' ಹೇಳಿ ಕಳುಹಿಸಿದರು. ಎಲ್ಲೋ ಆತ ಹೋಗಿರಬೇಕು ಅಂದ್ಕೊಂಡೆ. ನಾನು ಹಾಗೆ ಸುತ್ಕೊಂಡು ಬರೋಣ ಅಂತ ಈಚೆ ಹೊರಟೆ. ನನ್ನ ಎ.ವಿ. ಸ್ಕೂಲಿನ ಅಧ್ಯಾಪಕರಾದ ಟಿ.ಎಲ್.ನರಸಿಂಹಯ್ಯನೋರು ಸಿಕ್ಕಿ 'ಓ ಮಲ್ಲಪ್ಪ ಯಾವಾಗ ಸೇರ್ಕಂಡೆ ಈ ಕೆಲಸಕ್ಕೆ.... ಓ ಅವನ.... ಸೆಕ್ರೆಟ್ರಿ ಮನೆತವನೆ ಇದ್ದ.... ನಾನು ಕಳಿಸ್ತೀನಿ...' ಅಂತ ಬಡಬಡಿಸುತ್ತಾ ಅತ್ತ ಹೋದರು. ಅಂದು ಅಲ್ಲಿ ತೋರಿಸುತ್ತಿದ್ದ ಕ್ಷಯ ರೋಗದ ಸಾಕ್ಷ್ಯ ಚಿತ್ರನ ನೋಡಿ, ಅನಂತರ ಹೋಟೆಲಿನಲ್ಲಿ ಊಟ ಮಾಡಿ ರಾತ್ರಿ ಅಲ್ಲಿ ಪೊಲೀಸ್ ಸ್ಟೇಷನ್‌ನಲ್ಲಿ ಮಲಗಿದೆ. ಬೆಳಿಗ್ಗೆ ಕಣ್ ಬಿಡೋದೆ ತಡ. ಸೆಕ್ರೆಟರಿಯು ಬಾಗಿಲ್ಲಲೆ ಕೈ ಮುಗಿಯುತ್ತಾ ತುಂಬಾ ವಿನಯ ತೋರಿಸುತ್ತಾ ''ಎದ್ರ ಸ್ವಾಮಿ.... ಮನೆಗೆ ದಯಮಾಡಿಸಿ'' ಎಂತ ಆದರೋಪಚಾರ ಮಾಡಿದರು ''ಬೇಡ ಬೇಡ, ಸ್ಕೂಲ್ ಹತ್ತಿರ ಪುಸ್ತಕ ತಾ ನೋಡ್ಕೊಳ್ತೀನಿ' ಅಂತ ಬಿರುಸಾಗಿ ಹೇಳಿದೆ. ಸ್ಕೂಲ್ ಹತ್ತಿರ ಬಂದಂತಹ ಲೆಕ್ಕದ ಪುಸ್ತಕಗಳನ್ನು ನೋಡೋ ಶಾಸ್ತ್ರ ಮಾಡಿ ಅವರನ್ನು ಕಳಿಸಿ ತಿಪಟೂರು ಬಸ್ ಹತ್ತಿದೆ. ಬೆಲೂನಿನಂತೆ ಟುಸ್ ಎಂದಿತು ನನ್ನ ಉತ್ಸಾಹ. ಆದರೆ ನಮ್ಮಂಥೋರಿಗೆ ಇದೇನು ಹೊಸದಲ್ಲವಲ್ಲ. ಸಮಾಧಾನ ಮಾಡೊಕೊಳ್ಳುವುದು ಇದ್ದೇ ಇದೆ. ಕೆಲವರಿಗೆ ಹುಟ್ಟು, ವ್ಯಕ್ತಿತ್ವದ ಬೆಳವಣಿಗೆಗೆ ಪೋಷಕವಾಗುತ್ತದೆ. ಇನ್ನು ಕೆಲವರಿಗೆ ಕೆಡುಕಾಗುತ್ತದೆ. ಹಾಗಾದರೆ ಹುಟ್ಟು ನಮ್ಮ ಕೈಯಲ್ಲಿದೆಯೆ? ಯಾರನ್ನ ದೂಷಿಸಬೇಕೋ ಗೊತ್ತಾಗುವುದೆ ಇಲ್ಲ. ಈ ಜಾತಿಗಳನ್ನು ಯಾರು ಮಾಡಿದರೋ ಅವರ ಮನೆ ಹಾಳಾಗ ಎಂದೆಲ್ಲ ಯೋಚಿಸುತ್ತ ವ್ಯಸನದಿಂದ ಹಿಂದಿರುಗಿದೆ.

# ಸೊಸೈಟಿ ಇನ್‌ಸ್ಪೆಕ್ಟರ್

## ಹೊಸದುರ್ಗ

ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ

ಎನ್ನುವ ಅಲ್ಲಮ ಪ್ರಭುಗಳ ವಚನ ನನ್ನನ್ನು ಜಾಗೃತನನ್ನಾಗಿ ಮಾಡಿತು. ಕಾರಣ ನನ್ನ ಜೀವನದ ದೈವ ನನಗೆ ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆ ಕೊಟ್ಟು, ಇದರ ಮೂಲಕ ಹೊಟ್ಟೆ ಹೊರೆ, ಆದರೆ ಮೈ ಮರೆಯದೆ ನಿನ್ನನ್ನು ಸಮಾಜ ಕಾರ್ಯಗಳಿಗೆ ಮೀಸಲಾಗಿಡೆಂದು ಹೇಳಿತ್ತು. 'ಹೊಸದುರ್ಗ' ಈ ತತ್ವವನ್ನು ಪ್ರಾಯೋಗಿಕವಾಗಿ ನನಗೆ ಮನದಟ್ಟು ಮಾಡಿಕೊಟ್ಟಿತು. 'ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯ ಬೇಕೆ' ಎಂದು ಅಂತರ್ಮುಖಿಯಾಗುವ ಅಲ್ಲಮ ಪ್ರಭು ನಾನಾಗಲಿಲ್ಲ. ಅಜ್ಞಾನವೆಂಬ ತೊಟ್ಟಿಯೊಳಗೆ ಮಲಗಿದ್ದರೂ ಅರಿವಿನ ತೃಪ್ತಿಗೆ ಆಶ್ರಯ ನೀಡುವ ಗುರು ಕೃಪೆಯಿಂದ ನಾ ಮನುಷ್ಯನಾದೆ. ದೌರ್ಬಲ್ಯಗಳ ನಡುವೆ ಒಂದಿನಿತು ಸಮಯ ಸಾಧಿಸಿ, ವೃತ್ತಿಗೆ ಬೇಕಾದ ಅರ್ಹತೆಯನ್ನು, ಬಾಳಿಗೆ ಬೇಕಾದ ಗುರಿಯನ್ನು ಇಲ್ಲಿ ಪಡೆದುಕೊಂಡೆನೆನ್ನಬೇಕು.

ನಾನು ಕೆಲಸಕ್ಕೆ ಹೊಸಬನೆಂದು ತುಮಕೂರಿನ ಅಸಿಸ್ಟೆಂಟ್ ರಿಜಿಸ್ಟ್ರಾರ್ ಎಂ.ಎಸ್.ಸೂರಪ್ಪನವರು ಮೇಲಿನವರಿಗೆ ಬರೆದು ಹಾಕಿ ನನ್ನನ್ನು ಹೊಸದುರ್ಗಕ್ಕೆ ಹೊತ್ತು ಹಾಕಿಸಿದರು. ಇದು ನನಗೆ ಒಳ್ಳೆಯದೇ ಆಯಿತು. ಹೊಸ ರೇಂಜಿನಲ್ಲಿ ನನಗೆ ನಾನೇ ಗುರು, ಮಗು ಎಡವಿ-ಬೀಳುತ್ತಾ ನಡಿಗೆ ಕಲಿಯುವಂತೆ ಕೆಲಸ ಕಲಿತೆ. ಸೋಮಾರಿಯಾಗದೆ ಮೂರು ತಾಲ್ಲೂಕುಗಳನ್ನು ಸುತ್ತಿದೆ. ಆಗ ಹೊಸದುರ್ಗದಲ್ಲಿ ವಿ.ವೆಂಕಟಾಚಲಶೆಟ್ಟಿ ಎಂಬುವವರು ಸೊಸೈಟಿ ಇನ್‌ಸ್ಪೆಕ್ಟರ್ ಆಗಿದ್ದರು. ಅವರನ್ನು ಯಾವುದೋ ಕಾರಣಕ್ಕಾಗಿ ಅಮಾನತ್ತಿನಲ್ಲಿಡಲಾಗಿತ್ತು. ನಾನು ಭೂಪ, ಅವರಿಂದ ಛಾರ್ಜ್ ತೆಗೆದುಕೊಳ್ಳಲು ಮಟಮಟ ಮಧ್ಯಾಹ್ನ ಅಮಾವಾಸ್ಯೆ ದಿನಾನೆ ಹೋಗಿದ್ದೆ. ಅದೇ ದಿವಸ ಸಹ ನಾನು ತಿಪಟೂರಿನಿಂದ ಹೊಸದುರ್ಗಕ್ಕೆ ಪ್ರಯಾಣ ಮಾಡಿದ್ದೆ. ಆತನಿಗೆ ಆಶ್ಚರ್ಯ, ''ಬೇಡ, 'ಮಲ್ಲಪ್ಪ' ಖಂಡಿತ ಅಮಾವಾಸ್ಯೆಯ ದಿವಸ ಬೇಡ. ನಾಳೆ ಛಾರ್ಜ್ ಕೊಡ್ತೀನಿ'' ಎಂದರು

ಸರಿ ಎಂದು ಮಾರನೆ ದಿನವೆ ಆತನಿಂದ ಛಾರ್ಜ್ ತಕ್ಕೊಂಡೆ. ಸೊಸೈಟಿ ಇನ್‌ಸ್ಪೆಕ್ಟರ್ ಕೇಳಲಿಕ್ಕೆ ದೊಡ್ಡ ಹೆಸರು. ಆದರೆ ಮಾಹೆಯಾನ ರೂ. 40 ತಲುಬು. 'ಕೊಡೋದು ಮೂರು ಕಾಸು ಕೋಣೆ ತುಂಬ ಹಾಸು' ಎಂಬಂತೆ, ಹೊಸದುರ್ಗ ಸರ್ಕಲ್ಲಿಗೆ ಹೊಸದುರ್ಗ ಹಿರಿಯೂರು ಮತ್ತು ಹೊಳಲ್‌ಕೆರೆ ತಾಲ್ಲೂಕುಗಳು ಸೇರಿದ್ದವು. ಕೊನೆ ಪಕ್ಷ ವಾರಕ್ಕೆ ಎರಡು ಮೂರು ದಿವಸವಾದರೂ ಟೂರ್ ಮಾಡಬೇಕಾಗಿತ್ತು. ದಿನಭತ್ಯ ಎಂಟಾಣೆ. ಆದರೂ, ಹೋದಕಡೆ ಯಾರಿಗೂ ಹೊರೆಯಾಗಬಾರದೆಂದು ಭಾವಿಸಿ ನಾನೊಬ್ಬ ಅಡುಗೆಯವನ್ನಿಟ್ಟುಕೊಂಡು ಪ್ರವಾಸಕ್ಕೆ ಜೊತೆಯಲ್ಲೇ ಕರಕೊಂಡು ಹೋಗ್ತಿದ್ದೆ. ನನಗಿದ್ದವ ಮುಸ್ಲಿಮ್ ಸೈಯದುಸಾಬಿ ಜವಾನ; ಅಡಿಗೆಗಾಗಿ ಬೇರೊಬ್ಬನನ್ನು ಕರ್‍ಕೊಂಡು ಹೋಗ್ತಿದ್ದೆ. ಯಾವಾಗಲೂ ಶಾಸ್ತ್ರ ಹೇಳೋಕೆ, ಬದನೆಕಾಯಿ ತಿನ್ನೋಕೆ ಎಂಬಂತೆ ನಾನು ವ್ಯವಹಾರ ಮಾಡಿದೆನೆನ್ನಿಸುವುದಲ್ಲವೆ? ಆಗ ಅಡಿಗೆಯವನಿಗೆ-ಊಟ ಹಾಕಿ ತಿಂಗಳಿಗೆ ಐದು ರೂಪಾಯಿ ಸಂಬಳ ಕೊಡುತ್ತಿದ್ದೆ.

''ಸಹಕಾರವೊಂದು ಬಾಳಬಟ್ಟೆ. ಸಹಕಾರ ದ್ವೇಷಾಸೂಯೆಗೆ ಶೋಷಣೆಗೆ ಹಿಂಸೆಗೆ ಇನ್ನಾವ ಅನಿಷ್ಠಗಳಿಗೆ ಎಡೆಗೊಡದು'' ಎಂದು ಈಗಿನ ಸಹಕಾರ ತತ್ವದ ಮುಂದಾಳುಗಳು ಹೇಳುತ್ತಾರೆ. ಭಾರತದಲ್ಲಿನ ನಿರುದ್ಯೋಗ ಹಣದುಬ್ಬರ, ಅಸಮಾನತೆ ಶೋಷಣೆಗಳನ್ನು ಗಮನಿಸಿ ಹೇಳುವುದಾದರೆ ಸಹಕಾರ ಆಂದೋಲನ ಸಮರ್ಪಕ ದಾರಿಯಲ್ಲಿ ನಡೆದೇ ಇಲ್ಲವೆಂದು ಹೇಳಬೇಕು. ಹೀಗಾದ್ರೆ ಅರ್ಧ ಶತಮಾನದ ಹಿಂದೆ ನಮ್ಮ ಜನರಲ್ಲಿದ್ದ ಮೌಢ್ಯವೆಷ್ಟು. ಅಜ್ಞಾನವೆಷ್ಟು ಎಂದು ಊಹಿಸಬಹುದಲ್ಲವೆ? ಅದರ ಹಿನ್ನಲೆಯಲ್ಲಿ ಸಹಕಾರದ ಆಂದೋಲನವನ್ನು ಗಮನಿಸಬೇಕು.

ಮೇಲಿಂದ ಪ್ರತಿಯೊಂದು ಗ್ರಾಮದಲ್ಲಿ ಇಂತಿಷ್ಟು ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂಬ ಹುಕುಂ ಬಂತು. ಸರಿ. ಡಿ.ಸಿ. ಯವರು ಅಮಾಲ್ದಾರ್‍ರಿಗೆ ಹೇಳಿ ಕೈ ತೊಳೆದುಕೊಂಡರು. ಅಮಾಲ್ದಾರ್‍ರು ಒಂದಿಷ್ಟು ಗ್ರಾಮಗಳನ್ನು ಆಯ್ಕೊಂಡು ಪಟೇಲ ಶ್ಯಾನುಭೋಗರನ್ನೋ ಅಥವಾ ಜಬರ್‌ದಸ್ತಾದ ಮನುಷ್ಯನನ್ನೊ ಕರೆದು ಒಂದು ಸಂಘ ರಚಿಸು ಅಂತ ಹೇಳಿ ಪಾಪ ಪರಿಹಾರ ಮಾಡಿಕೊಂಡರು. ಅವರುಗಳು ಸಂಘ ಸ್ಥಾಪಿಸಿ ಅಧ್ಯಕ್ಷರು-ಸೆಕ್ರೆಟರಿಯವರೂ ಅವರೆ ಆಗಿ ಕ್ಯಾಷು-ಗೀಷು ತಮ್ಮಲ್ಲೆ ಇಟ್ಕೊಂಡ್ರು. ಸಾಲ ಗೀಲ ಬಡವನಿಗೆ ಕೊಟ್ರೆ ಆತನ ಆಸ್ತಿಯನ್ನು ಲಪಟಾಯಿಸಲು ಸಜ್ಜಿತರಾದರು. ಇನ್ನು ಸೊಸೈಟಿ ಇನ್‌ಸ್ಪೆಕ್ಟರುಗಳೊ

ಇವರಿಗೆ ಶಾಮೀಲಾಗೋರು, ಇಲ್ಲ, ಪ್ರತಿಭಟಿಸಿ ಆ ಪುಢಾರಿಗಳನ್ನು ಎದುರುಹಾಕ್ಕೊಂಡು ನೆರಳು ನೀರಿಲ್ಲದ ಕಡೆ ವರ್ಗ ಮಾಡಿಸಿಕೊಂಡು ಹೋಗುವರು. ಸಹಕಾರ ಆಂದೋಲನ ಹೀಗೆ ಜನಸಾಮಾನ್ಯರಿಗೆ ವರವಾಗದೆ ಶೂಲವಾಗಿತ್ತು. ಸಂತೆಗೆ ಮೂರುಮೊಳ ಎಂದಾದರೆ ಯಾವ ಕಾಯಕದಲ್ಲೂ ಪೂರ್ಣ ಯಶಸ್ಸು ಸಿಗದು, ಇಂತಹ ಯೋಜನೆಗಳು ನಮ್ಮ ಜನಕ್ಕೆ ಒಳಿತಾಗಬೇಕು ಎಂಬ ತ್ರಿಕರಣ ಪೂರ್ಣ ಶುದ್ಧಿಯಿಂದ ಜಾರಿಗೆ ತರದೆ ಹೋದರೆ ಹೀಗೇನೆ ಆಗೋದು. ಅಪರಿಪೂರ್ಣತೆಯಿಂದ ಮಾಡಿದ ಕೆಲಸ, ಶ್ರಮಕ್ಕೆ ತಕ್ಕಷ್ಟು ಪ್ರತಿಫಲ ಕೊಡೋದಿಲ್ಲ. ಬೆಳಿಗ್ಗೆ ಎದ್ದು ಹಳ್ಳಿಗೆ ಹೋಗಿ ಸಹಕಾರ ಸಂಘದ ಅಧ್ಯಕ್ಷನಾಗಿದ್ದ ಪಟೇಲನನ್ನೋ, ಸೆಕ್ರೆಟರಿ, ಶಾನುಭೋಗನನ್ನೋ ಅಥವಾ ಗ್ರಾಮದ ಮುಖಂಡನನ್ನೋ ಭೇಟಿ ಮಾಡಬೇಕಾಗಿತ್ತು. ಅವರು ಸಿಕ್ಕಿದ್ರೆ ಲೆಕ್ಕ ಪತ್ರ ನೋಡಿ ಅವರಿಗೊಂದು ಮಾರ್ಗದರ್ಶನ ಮಾಡೋದು, ಇಲ್ದಿದ್ರೆ ಬಂದ ದಾರಿಗೆ ಸುಂಕ ಇಲ್ಲ ಎಂಬಂತೆ ''ಓ ಲಕ್ಷ್ಮಣಾ'' ಅಂತ... ಹಿಂದಿರುಗೋದು. ಹಳ್ಳಿ ಜನ ಕೂಡ ಪಾಕಡಾಗಳೆ. ಸೊಸೈಟಿ ಇನ್‌ಸ್ಪೆಕ್ಟರ್ ಅಂದರೆ ದುಡ್ಡಿನ ಸಹವಾಸ ಅಲ್ಲವೇ, ತಲೆ ಮರೆಸಿಕೊಳ್ಳೋಕೆ ಒಳ್ಳೆ ಯೋಜನೆ ಹಾಕ್ತಿದ್ದರು. ಒಂದು ಸಾರಿ ಹಿರಿಯೂರಿನ ಹತ್ತಿರವಿರುವ ಹಳ್ಳಿಯೊಂದರ ಸಹಕಾರಿ ಸಂಘವೊಂದಕ್ಕೆ ಭೇಟಿ ಕೊಡಲು ಹೋದೆ. ಹೈವೇ ತನಕ ಬಸ್ಸಿನಲ್ಲಿ ಹೋಗಿ ಅಲ್ಲಿಂದ ಒಂದು ಮೈಲಿ ದೂರದಲ್ಲಿರುವ ಹಳ್ಳಿಗೆ ನಡೆದದ್ದಾಯಿತು. ದಾರಿಯಲ್ಲಿ ಒಂದಿಬ್ಬರು ಮಾತಾಡಿ ಕೊಳ್ಳುತ್ತಾ ಬರ್ತಿದ್ದರು. ''ಏನಪ್ಪಾ ಊರ್‍ನಾಗೆ ಪಟೇಲ್ ರುದ್ರಪ್ನೋರು ಅವ್ರ'' ''ಯಾಕ್ ಸ್ವಾಮಿ'' ''ನಾನು ಸೊಸೈಟಿ ಇನ್‌ಸ್ಪೆಕ್ಟರ್ ಅವರನ್ನ ನೋಡಬೇಕಾಗಿತ್ತು'' ''ಅಂಗ ಬುದ್ಧಿ, ಈ ದಾರೇಗೇ ಹೋಗಿ, ಆ ಅಳ್ಳೀಮರ ಇಲ್ವ, ಅಲ್ಲೇ ಅವರ ಮನೆ....'' ಎಂದು ಹೇಳಿ ಬರಬರನೆ ಹೆಜ್ಜೆ ಹಾಕಿದರು. ನಾನು ಬೆವರು ಒರೆಸಿಕೊಳ್ಳುತ್ತಾ ಅಳ್ಳಿಮರದ ಅರಳಿಕಟ್ಟೆ ಹತ್ತಿರ ಬಂದೆ. ಅಲ್ಲಿದ್ದವರನ್ನು 'ಪಟೇಲ್ ರುದ್ರಪ್ಪನೋರ್‍ನ ಕರೆಯಪ್ಪ....' ಎನ್ನಲು ಆಗ ಆತ ''ಆ ರೋಡ್ ತವ ನಿಮ್ಮಕಂಟ ಮಾತನಾಡುತ್ತಿದ್ರಲ್ಲ ಅವರೇ ರುದ್ರಪ್ಪನೋರು ಬುದ್ಧಿ.... ''ಎಂದ. ನನಗೆ ಕೈ ಕಾಲುಗಳು ಶಕ್ತಿ ಕಳೆದುಕೊಂಡಂತಾದವು. ಒಂದು ಚೊಂಬು ನೀರು ಈಸಕೊಂಡು ಕುಡಿದು ಉಸ್ಸಪ್ಪಾ ಅಂತ ಹಿಂದಕ್ಕೆ ಹೊರಟೆ.

ಬಾಗೂರು ಗ್ರಾಮ ಹೊಸದುರ್ಗಕ್ಕೆ ಐದಾರು ಮೈಲಿ ಇದೆ. ಅಲ್ಲಿ ಲೇವಾದೇವಿ ಸಹಕಾರ ಸಂಘ ಒಂದು ಕೆಲಸ ಮಾಡುತ್ತಿತ್ತು. ಈ ಗ್ರಾಮದಲ್ಲಿ ಕುರುಬರೇ ಹೆಚ್ಚು.

ಸಹಕಾರ ಸಂಘಕ್ಕೆ ಶಾನುಭೋಗನೇ ಕಾರ್ಯದರ್ಶಿ, ಪಟೇಲ ಕುರುಬರ ಜಾತಿಗೆ ಸೇರಿದ ವ್ಯಕ್ತಿ. ಈತನೇ ಸಂಘಕ್ಕೆ ಪ್ರೆಸಿಡೆಂಟ್, ಆದರೆ ಶ್ಯಾನುಭೋಗರು ಆಡಿಸುವ ಸೂತ್ರದ ಗೊಂಬೆ ಈತ. ನಿಸ್ಸಾರ್ ಅಹಮದ್ ಹೇಳುವಂತೆ ಈತ 'ಶ್ಯಾನುಭೋಗರು ನೀಡಿದ್ದಕ್ಕೆ ಹೆಬ್ಬೆಟ್ಟು ಇಡೋನು'. ಅವನೇ ಏನು ಊರಿನೋರೆಲ್ಲಾ ಅಂಥೋರೆ. ಹುಸಿನಗೆಯ ಕೃತ್ರಿಮ ವಿನಯದ ಶ್ಯಾನುಭೋಗನ ಕಪಟಕ್ಕೆ ನಾನು ಒಳಗಾಗದೆ ಆತನಿಂದ ಕಷ್ಟಪಟ್ಟು ಲೆಕ್ಕಪತ್ರ ಪಡೆದುಕೊಂಡದ್ದಾಯ್ತು. ಭಾರೀ ಧಗಾಕೋರತನ ನಡೆದಿತ್ತು. ಹಿಂದೀನೋರು ಒಂದೆರಡು ಸೂಚನೆ ಕೊಟ್ಟಿದ್ದರೂ ಈತ ಪಾಲಿಸಿರಲಿಲ್ಲ. ಇದನ್ನೆಲ್ಲಾ ನಾನು ಮೇಲಿನೋರಿಗೆ ಬರೆದು ಹಾಕಿದೆ. ಶ್ಯಾನುಭೋಗ ನನ್ಮೇಲೆ ಕೆಂಡಕಾರಿದ. ಪಟೇಲನ ಕೈಲಿ ನನ್ಮೇಲೆ ಮೂಗರ್ಜಿ ಬರೆಸಿ ಹಾಕಿದ. ಕೊಡಲಿಯ ಕಾವು ಮರಕ್ಕೆ ತಾನೆ ಶತ್ರು. ಸರ್ಕಾರದ ಸೌಲಭ್ಯಗಳನ್ನು ತನ್ನ ಹಳ್ಳಿಯವರಿಗೆ ಉಪಯೋಗಿಸಿಕೊಳ್ಳದಷ್ಟು ದಡ್ಡತನ ಆ ಪಟೇಲನಿಗಿತ್ತು.

ಮತ್ತೊಂದು ಸಹಕಾರ ಸಂಘದ ಕಥೆ ಕೂಡ ಹೀಗೆ ಇದೆ. ಹಿರಿಯೂರು ತಾಲ್ಲೂಕು ಮದಕೆರೆ ನಾಯಕನ ಕೋಟೆ ಸಹಕಾರ ಸಂಘ ನೋಡಲು ಹೋದೆ. ಆಗ ನಾನು ಹಿರಿಯೂರು ತಾಲ್ಲೂಕು ಮರಡಿಹಳ್ಳಿಯಲ್ಲಿ ಕ್ಯಾಂಪ್ ಮಾಡಿದ್ದೆ. ಅಲ್ಲಿಂದ ಮದಕರೆ ನಾಯಕನ ಕೋಟೆ 3-4 ಮೈಲಿ. ಮರಡಿಹಳ್ಳಿ ಸಹಕಾರ ಸಂಘದ ಸೆಕ್ರೆಟರಿ ಹಾಗೂ ಅಧ್ಯಕ್ಷರಾದ ಸೀತಾರಾಮರೆಡ್ಡಿ ಮತ್ತು ರಾಮರೆಡ್ಡಿ ನನ್ನ ಜೊತೆ ಮದಕೆರೆ ಕೋಟೆಗೆ ಹೊರಟರು. ಸ್ಥಳೀಯ ಶಾನುಭೋಗನೆ ಅಲ್ಲಿನ ಸಂಘಕ್ಕೂ ಸೆಕ್ರೆಟರಿ. ಆತ ಒಂದು ಸಣ್ಣ ರೂಮಿನೊಳಗೆ ಕೂತು ಬಟ್ಟೆ ಹೊಲೀತಿದ್ದ. ನಾವು ಹೋಗಿ ಲೆಕ್ಕದ ಪುಸ್ತಕ ಕೇಳಿದರೂ ಜಪ್ಪಯ್ಯ ಅಂದ್ರೂ ಆತ ಜಾಗ ಬಿಡಲಿಲ್ಲ. ಕೊನೆಗೆ ಬಲವಂತದಿಂದ ಕ್ಯಾಷ್ ಬುಕ್ ತರಿಸಿ ನೋಡಿದೆ. ಎರಡು ಸಾವಿರ ರೂಪಾಯಿ ಕ್ಯಾಷ್ ಖೋತ ಬಿದ್ದಿದೆ. ಇದರ ಮೇಲೆ, ಆತ ''ಯಾಕ್‌ಸ್ವಾಮಿ ನೀವು ಬಂದ್ರಿ. ಒಂದು ಮಾತು ಹೇಳಿ ಕಳ್ಸಿದ್ರೆ ನಾನು ಹಿರಯೂರಿಗೆ ಪುಸ್ತಕ ತರ್ತಿದ್ದೆ.'' ಅಂತ ಉಪಚಾರದ ಮಾತನ್ನಾಡಿದ. ಇನ್ನೂ ಕೆಲವು ಪುಸ್ತಕಗಳನ್ನು ನೋಡಿದೆ. ಎಲ್ಲಾ ಅವ್ಯವಸ್ಥೆಯೆ, ರೆಸಲ್ಯೂಷನ್ ಬರೆದಿದ್ರು. ಡೈರೆಕ್ಟರ್‌ಗಳೊಬ್ಬರೂ ರುಜು ಹಾಕಿರಲಿಲ್ಲ. ಹಿಂದಿನೋರು 'ನಡವಳಿಕೆ ಪುಸ್ತಕಾನ' ಹಿರಿಯೂರಿನಲ್ಲಿ ನೋಡಿದ್ದಿರಬಹುದೆಂದೂ, ಅಲ್ಲಿಯೇ ಬರೆದೂ ಸಹ ಕೊಟ್ಟಿರಬಹುದೆಂದೂ ತಿಳಿಯಬಹುದಾಗಿತ್ತು. ನನಗೆ ಸಿಟ್ಟು ನೆತ್ತಿಗೇರಿತು.

ಸಾರ್ವಜನಿಕ ಹಣ ಈ ರೀತಿ ದುರುಪಯೋಗವಾದರೆ ಹೇಗೆ ತಾನೆ ಸುಮ್ಮನಿರೋದು. ನಿಮ್ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸ್ತೇನೆ ಅಂತ ಕೂಗಾಡಿದೆ. ಊರಿನ ಒಂದಿಬ್ರು ಬಂದರು. 'ಹದಿನೈದು ದಿನ ಟೈಮ್ ಕೊಡಿ' ಎಂದರು. ಸರಿ, ಅಂದ್ಕೊಂಡು ಬಂದೆ. ಹದಿನೈದು ದಿನದ ನಂತರ ಊರಿನ ರಸ್ತೆಗೆ ಹೋಗ್ತೀನಿ, ನನಗಾಗಿ ಒರಗುದಿಂಬು ಹಾಸಿಗೆ ರೆಡಿ ಮಾಡಿದ್ದ ಕಮಾನು ಗಾಡಿ ಸಿದ್ಧವಾಗಿತ್ತು. ನಾನು ಬಿಗುಮಾನದಿಂದಲೇ ಸೈಕಲ್ ನೂಕುತ್ತಾ ಗಾಡಿ ಹಿಂದೆ ಊರಿಗೆ ಹೋದೆ. ಊಟೋಪಚಾರ ಏನೂ ಬ್ಯಾಡ ಅಂತ ಲೆಕ್ಕ ನೋಡಿದೆ. ಕ್ಯಾಷ್ ಬುಕ್ ನೋಡಿದೆ. ಖರ್ಚಾಗಿರುವುದಕ್ಕೆಲ್ಲಾ ರಸೀತಿ ಸೃಷ್ಟಿಯಾಗಿದೆ. ನಡುವಳಿಕೆ ಪುಸ್ತಕಕ್ಕೆ ಎಲ್ಲಾ ಡೈರೆಕ್ಟರೂ ಸಹಿ ಹಾಕಿದ್ದಾರೆ. ನಾನು ಇಂಗು ತಿಂದ ಮಂಗನಂತಾದೆ. ಏನು ಕಾನೂನು ಕ್ರಮ ಜರುಗಿಸೋದು? ಪಾಪಕಾರ್ಯ ಮಾಡೋನಿಗಿಂತ ಕೇಳೋಕೋದೋನಿಗೇ ಹೆಚ್ಚಿನ ಶಿಕ್ಷೆ ಆಗಬೇಕಾಗಿತ್ತಂತೆ ಅಂದುಕೊಂಡು ಹಿರಿಯೂರಿಗೆ ಹಿಂದಿರುಗಿದೆ.

ಹೊಸದುರ್ಗ ಸರ್ಕಲ್‌ನಲ್ಲಿ ಒಟ್ಟು ಮುವತ್ತೆಂಟು ಸಹಕಾರ ಸಂಘಗಳಿದ್ದವು. ಒಂದು ವರ್ಷದಲ್ಲಿ ಇವುಗಳ ತಳಬುಡವನ್ನೆಲ್ಲಾ ಶೋಧಿಸಿದ್ದಾಯಿತು. ಕೇವಲ ಐದಾರು ಸಹಕಾರ ಸಂಘಗಳು ಉಸಿರಾಡುತ್ತಿದ್ದವು. ಇನ್ನು ಮಿಕ್ಕವು ಪೇಪರಿನಾಗೆ ಮಾತ್ರ ಬದುಕಿದ್ದವು. ಇಲಾಖೆಯವರು ಕೂಡ ಅತ್ತಕಡೆ ತಲೆ ಕೆಡಸಿಕೊಳ್ಳುತ್ತಿರಲಿಲ್ಲ. ನಾನೇನಾದರೂ ಕೆಲವು ಸೆಕ್ರಟರಿಗಳ ಊರಿಗೆ ಹೋಗಿ ಲೆಕ್ಕದ ಪುಸ್ತಕ ಕೇಳಿದರೆ ಹಣೆ ಹಣೆ ಚಚ್ಚಿಕೊಂಡು 'ಅಯ್ಯೋಸ್ವಾಮಿ ನೀವ್ಯಾಕೆ ದಣದು ಬಂದ್ರಿ? ಹೇಳಿ ಕಳಿಸಿದ್ರೆ ಲೆಕ್ಕದ ಪುಸ್ತಕಾನ ಕಳಿಸುತ್ತಿರಲಿಲ್ಲವೆ ದ್ಯಾವ್ರು' ಎನ್ನುತ್ತಿದ್ದರು. ಲೆಕ್ಕಗಳನ್ನು ಬರೆದು ಮನೇಲಿ ಇದ್ದವರ ಕೈಲಿ ಪ್ರೋಸಿಡಿಂಗ್ಸ್‌ಗೆ ರುಜು ಪಡೆದುಕೊಳ್ಳುತ್ತಿದ್ದರು. ಯಾವುದಕ್ಕೂ ನಿಯಮವಿಲ್ಲ, ಶಿಸ್ತಿಲ್ಲ. ನಾನಂತೂ ಒಬ್ಬಂಟಿಗ. ಹಗಲಿರುಳು ಅಲೆದಾಡೋದೆ ಉದ್ಯೋಗ. ನನ್ನ ವೇಗಕ್ಕೆ ಇವರನ್ನು ತರೋದು ಸಾಧ್ಯವೆ. ಹೊಳಲ್‌ಕೆರೆ ಅಥವಾ ಹಿರಿಯೂರಿನಲ್ಲಿ ತಳವೂರಿ ಆ ಸುತ್ತಿನ ಸಹಕಾರ ಸಂಘಗಳನ್ನು ನೋಡಿದೆನು. ಹಾಗೆಯೇ ಹೊಳಲ್‌ಕೆರೆಯಿಂದ ನಾಲ್ಕೈದು ಮೈಲಿ ದೂರದಲ್ಲಿರುವ ಹಳ್ಳಿಯೊಂದಕ್ಕೆ (ಮದ್ದೇರು) ಬೈಸಿಕಲ್ ತುಳಿದು ಕೊಂಡು ಹೊರಟೆ, ದಿಬ್ಬ ಸಿಕ್ಕಿತು. ಸೈಕಲ್ ತಳ್ಳುತ್ತ ದೇಕುತ್ತಿದ್ದೆ. ಎರಡು ಹ್ಯಾಂಡ್ಸ್‌ಗಳ ಮೇಲೂ ಫೈಲ್‌ಗಳ ಜೊತೆ ಊಟದ ಸಾಮಾನಿನ ಚೀಲ, ಹಿಂದೆ ಕ್ಯಾರಿಯರ್‌ಗೆ ನನ್ನ ಪುಟ್ಟ ಹಾಸಿಗೆ. ಹನ್ನೆರಡು

ಗಂಟೆಯ ರಣಬಿಸಿಲು. ಬಸ್ ರೂಟಾದ ಕಾರಣ ಧೂಳಿನ ಸ್ನಾನ. ಏದುಸಿರು ಬಿಡುತ್ತಾ ಮಧ್ದೇರಿನಲ್ಲಿ... ''ಆ ನನ್ಮಗ ಪಟೇಲ್ ಕಲ್ಲಪ್ಪ ಸಿಗ್ತಾನ.... '' ಎಂದುಕೊಂಡು ಹೆಜ್ಜೆ ಹಾಕಿದ್ದೆ. ಹಿಂದೆ ಬರ್‍ರ್ರೆಂದು ಮೋಟಾರ್ ಸೈಕಲ್ಲೊಂದು ನನ್ನ ಹತ್ತಿರ ಬಂದು ನಿಂತಿತು. ಆಶ್ಚರ್ಯದಿಂದ ನೋಡಿದೆ ಹೊಸದುರ್ಗದ ಡಾ|| ನರಸಿಂಹಯ್ಯ ಅಯ್ಯಂಗಾರ್ ಹಾಗೂ ಸಬ್‌ರ್ವಸರ್ಿ ವಿಜಯಧ್ವಜರಾವ್ ಚಿತ್ರದುರ್ಗಕ್ಕೆ ಹೊಳ್ಟಿದ್ದರು. ನನ್ನ ಅವತಾರ ನೋಡಿ ನಗ್ತಾ ಏನ್ ಮಲ್ಲಪ್ಪ ನೀನು ಬೇಗ ಸತ್ತೋಯ್ತಿ ಕಣೋ. ಯಾಕೋ ಒಂದು ಗಾಡಿ ಕಟ್ಟಿಸಿಕೊಂಡು ಬರಬಾರದಾಗಿತ್ತ.... ಈ ಬಿಸಿಲ್ನಾಗೆ ಸೈಕಲ್ ತುಳಿದರೆ ಏನ್ ಗತಿಯಪ್ಪ... ಎಂದಾಗ, ನಗುತ್ತಾ ಅವರನ್ನು ಸಮಾಧಾನ ಮಾಡಿ ಮುಂದೆ ಹೊರಟೆ. ಅವರು ಮುಂದೆ ಹೊರಟು ಹೋದರು. ಪಾಪ! ಅವರಿಗೇನು ಗೊತ್ತು ನನಗೆ ಬರುತ್ತಿದ್ದ ಭತ್ಯ ಎಂಟಾಣೆ ಮಾತ್ರ ಅಂತ. ಇನ್ನು ಹಳ್ಳಿಯೋರು ನನಗೆ ಗಾಡಿ ಕಟ್ಟಾಕೆ ನಾನೇನು ದೊಡ್ಡ ಅಮಲ್ದಾರನೆ?

ಶ್ರೀ ರಾಮಾಯಣ ದರ್ಶನಂನಲ್ಲಿ ಒಂದು ಮಾತು ಬರುತ್ತದೆ. ''ಹಿರಿಯರಿಗೆ ಹಿರಿಯ ಕೋಟಲೆ ಹಿರಿಮೆ. ಕಿರುಕುಳದ ಕಿರುಕುಳವೇ ಪಿರಿದು'' ಮಹಾನ್ ವ್ಯಕ್ತಿಗಳಿಗೆ ಬರುವ ಕಷ್ಟ ಕೂಡ ಅಧಿಕ, ಅವರಿಗೆ ಕಿರುಕುಳ ಕೊಡುವವರ ಸಂಖ್ಯೆ ಕೂಡ ಅಧಿಕ. ನನ್ನ ಬದುಕಿನಲ್ಲಿ ವ್ಯಕ್ತಿಗಿಂತ ನಾನು ಸಾಧಿಸಬೇಕಾದ ಕೆಲಸಕ್ಕೆ ಹೆಚ್ಚಿನ ಕಿರುಕುಳ ಕೊಡಲಾಯಿತು. ನಮ್ಮ ಹಿರಿಯ ಅಧಿಕಾರಿಗಳು, ಶಾಂತಿ ಕಾಪಾಡುವ ಹೊಣೆ ಹೊತ್ತ ಪೊಲೀಸಿನವರು ಶೋಷಣೆ ಮಾಡುವವರ ಪರವಾಗಿ ವಕಾಲತ್ತು ವಹಿಸಿದ್ದರು. ಹೊಸದುರ್ಗದಲ್ಲಿದ್ದ ಒಂದೆರಡು ವರ್ಷ ನಾನಂತೂ ಇವರುಗಳ ಜೊತೆ ಸಾಕಷ್ಟು ಹೆಣಗಿದೆ. ಕೆಲವೊಮ್ಮೆ 'ಗಾಳಿಯನ್ನು ಗುದ್ದಿದರೆ ಮೈ ನೋಯೋದೊಂದೆ ಫಲ' ಎನ್ನುವಂತಾಯಿತು. ಭೂಪಾಳಂ ನಂಜುಂಡಯ್ಯ ಶೆಟ್ಟಿ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಅಯ್ಯರ್ ಜೊತೆ ನಡೆಸಿದ ಹೋರಾಟ ನನಗೀಗಲೂ ಆಶ್ಚರ್ಯ ತರುತ್ತದೆ. ಆ ಹೋರಾಟ ನಂದಲ್ಲ. ನನ್ನ ಧ್ಯೇಯೋದ್ದೇಶಗಳಿಗೆ ಯಾವುದೋ ಒಳ್ಳೆಯ ಶಕ್ತಿ ನೆರವಾಗಿದ್ದಿರಬೇಕು.

ನಾನು ಹೊಸದುರ್ಗಕ್ಕೆ ಹೋದ್ದು ಹೊಸದು. ಟೌನ್ ಕೋ‌ಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗ್ ನಡೆಯಿತು. ಅದರ ಅಧ್ಯಕ್ಷತೆಯನ್ನು ಭೂಪಾಳಂ ನಂಜುಂಡಯ್ಯಶೆಟ್ಟೀನೆ ವಹಿಸಿದ್ದರು. ಹೊಸದುರ್ಗ ತಾಲ್ಲೂಕಿಗಷ್ಟೆ ಅಲ್ಲ. ಇಡೀ ಚಿತ್ರದುರ್ಗ ಜಿಲ್ಲೆಯಲ್ಲೆ ತಮ್ಮ ಶ್ರಿಮಂತಿಕೆಗೂ ಹಾಗೂ

ಅಟ್ಟಹಾಸಕ್ಕೂ ಪ್ರಸಿದ್ಧರಾಗಿದ್ದರು. ಹಳ್ಳಿಯ ಪಟೇಲ, ಶಾನುಭೋಗರೇಕೆ ಜಿಲ್ಲೆಯ ಧಣಿ ಜಿಲ್ಲಾಧಿಕಾರಿ ಹಾಗೂ ಸಂಸ್ಥಾನದ ದೀವಾನರೂ ಕೂಡ ಅವರ ಮಾತು ತೆಗೀತಿರಲಿಲ್ಲ. ಆರಡಿ ಎತ್ತರ ಎಣ್ಣೆಗೆಂಪು. ಕಿವೀಲಿ ಸಾಕಷ್ಟು ತೂಕದ ಕಡಕಗಳು, ಎಂಟು ಬೆರಳಿಗೆ ವೈವಿಧ್ಯಮಯವಾದ ಉಂಗುರಗಳು, ನವುರಾದ ಆದರೆ ಚಾಣಾಕ್ಷತನದ ಮಾತು ಎಲ್ಲರನ್ನು ಮುಗ್ಧಗೊಳಿಸುತ್ತಿತ್ತು, ಇಲ್ಲ ಮೋಸಗೊಳಿಸುತ್ತಿತ್ತು. ಅವರು ಸಭೆಯಲ್ಲಿ ಆಡುತ್ತಿದ್ದ ಮಾತುಗಳನ್ನು ಕೇಳಿದರೆ ಯಾರಿಗಾದ್ರು ಬಹಳಷ್ಟು ಗೌರವ ಮೂಡುತ್ತಿತ್ತು. ಅಲ್ಲಮ ಪ್ರಭುಗಳು ಹೇಳುವಂತೆ ''ಒಳ್ಳೆಯ ಬೇವಿನ ಹಣ್ಣು ತಂದು ಮೆಲ್ಲನೆ ಚುಂಬಿಸಿದರೆ ಇನಿದಹುದೆ.'' ಮಾತಿನಿಂದಲೇ ವ್ಯಕ್ತಿಯ ಗುಣ ಸ್ವಭಾವವನ್ನು ಅರಿಯುವಷ್ಟು ಜಗತ್ತು ಸರಳವಾಗಿದ್ದರೆ ''ಆಳು ನೋಡಿದರೆ ಅಂದ, ಬಾಳು ನೋಡಿದರೆ ಬಾಯ್ಬಡಕೊಳ್ಳಬೇಕು'' ಎಂಬ ಗಾದೆ ಎಲ್ಲಿ ಹುಟ್ಟುತ್ತಿತ್ತು. ನಾನೇನೋ ಈ ಹುದ್ದೆಯಿಂದ ಬಡವರಿಗೊಂದಿಷ್ಟು ಸಹಾಯ ಮಾಡಬೇಕು ಅಂತಿದ್ದೆ. ಆದರೆ ಅವರು ಈ ಸಂಘದ ಅಧ್ಯಕ್ಷಗಿರಿಯಿಂದ ಒಂದಿಷ್ಟು ಆಸ್ತಿ ಮಾಡಬೇಕು ಅಂತಿದ್ರು. ಬಡವನಿಗೆ ಮನೆಯ ಮೇಲೊ ಅಥವಾ ಜಮೀನಿನ ಮೇಲೋ ಸಾಲ ಕೊಡೋದು. ಆತ ಸಾಲ ಸರಿಯಾಗಿ ಕಟ್ಟದ ಹಾಗೆ ಮಾಡಿ, ಡಿಕ್ರಿ ತಂದು ಹರಾಜು ಮಾಡಿ ತನ್ನ ಹೆಸರಿಗೆ ಮಾಡಿಕೊಳ್ಳೋದು. ಹರಾಜಿನಲ್ಲಿ ನಿಂತ ಮೇಲೆ ಮೇಲಿನವರಿಗೆ ಬರೆದು ಅಪ್ಪಣೆ ತರಿಸಿಕೊಳ್ಳೋದು. ಡಿಕ್ರಿ ಮೊಬಲಗುಗಳನ್ನು ಸಂಘಕ್ಕೆ ಕಟ್ಟಿ ಸ್ವತ್ತನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳುವುದು ಅವರ ಕ್ರಮ ಆಗಿತ್ತು. ಇದರಿಂದ ಬಡವ ಮತ್ತಷ್ಟು ನಿರ್ಗತಿಕನಾಗುತ್ತಿದ್ದ. ಯಾರಾದ್ರೂ ಅಲ್ಲಿ ಇಲ್ಲಿ ಒಂದು ಚೂರು ಪ್ರತಿಭಟಿಸಿದರೆ ಪೊಲೀಸ್ನೋರ ಕೈನಿಂದಲೊ ಅಥವಾ ಬೇರೆಯವರ ಅಧಿಕಾರಿಗಳಿಂದಲೊ ಮಟ್ಟ ಹಾಕಿಸುತ್ತಿದ್ದರು ಶೆಟ್ಟರು. ಎಷ್ಟೊಕಡೆ ಸೊಸೈಟಿಗಳು ಸಾಲ ಕೊಡುವ ನೆಪದಲ್ಲಿ ಬಡವನ ಅಷ್ಟಿಷ್ಟು ಆಸ್ತೀನ ಶ್ರೀಮಂತರಿಗೆ ರವಾನಿಸುವ ವ್ಯವಹಾರ ಸಂಸ್ಥೆಯಾಗಿದ್ದವು. ಇಂಥವರ ಕೈಯಲ್ಲಿ ಒಟ್ಟಾರೆ ಹಾವು ಹೊಡೆದು ಹದ್ದಿಗೆ ಹಾಕ್ತಾರೆ ಅಂತಾರಲ್ಲ, ಹಾಗಿತ್ತು. ನಾನು ಬಂದ ಹೊಸದರಲ್ಲೆ ಬಡ ಬ್ರಾಹ್ಮಣನಿಗೆ ಸಂಬಂಧಿಸಿದ ಮನೆಯೊಂದನ್ನು ಲಪಟಾಯಿಸಲು ಶ್ರೀ ನಂಜುಂಡಯ್ಯನವರು ಪ್ಲಾನ್ ಹಾಕಿದರು. ನೋಟೀಸ್ ಕೊಟ್ಟ ಶಾಸ್ತ್ರ ಮಾಡಿ. ಡಿಕ್ರಿ ತಂದು ಹರಾಜಿಗೆ ವ್ಯವಸ್ಥೆ ಮಾಡಿದರು. ನಾನು ಮೀಟಿಂಗ್‌ನಲ್ಲಿ ಇದೆಲ್ಲಾ ಬೇಡ, ಆತ ಈಗಲೂ ಪೂರ್ಣಹಣ ಜಮಾ ಮಾಡಿದರೆ ಅವನ ಆಸ್ತಿ ಅವನಿಗೆ ಕೊಡೋಣವೆಂತೆಂದೆ. ಸಾಹುಕಾರರು ಕೆಕ್ಕರಿಸಿ ನನ್ನ ನೋಡುತ್ತ 'ನೀವು ಸುಮ್ಮನಿರಿ

ನಿಮಗೆ ಗೊತ್ತಾಗಕ್ಕಿಲ್ಲ' ಎಂದು ಗುಡುಗಿದರು. ಹಾಗೆಯೆ ಮೇಲಕ್ಕೆ ಕಳುಹಿಸಿ ಡಿಕ್ರಿ ಪಡೆದು ಹರಾಜಿಗೆ ಅಪ್ಪಣೆ ಪಡೆದರು. ನನ್ನದೋ ಹಠದ ಸ್ವಭಾವ. ಅದಕ್ಕಿಂತ ಮಿಗಿಲಾಗಿ ಯಾವುದಾದ್ರು ಅನ್ಯಾಯ ನಡೆದರೆ ಪ್ರತಿಭಟಿಸುವ ಆವೇಶ. ಸರಿ ಇದನ್ನ ಕೈಗೆತ್ತಿಕೊಂಡೆ. ನಮ್ಮ ಆಫೀಸಿಗೆ ಒಂದು ಡಿ.ಓ. ಲೆಟರ್ ಬರೆದು ಸಾಹುಕಾರರ ಸಂಚನ್ನು ವಿವರಿಸಿ ಬಡವರಿಗೆ ರಕ್ಷಣೆ ಬೇಕೆಂದು ಕೋರಿದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಎಂ.ಎಸ್.ಸೂರಪ್ಪ ಅವರು ಶ್ರೀಘ್ರವೇ ಮೊದಲಿನ ಆಜ್ಞೆಗೆ ತಡೆ ಕೊಟ್ಟರು. ಇಲ್ಲಿಂದ ನಂಜುಂಡಯ್ಯನವರು ನನ್ನನ್ನು ಪ್ರತಿಸ್ಪರ್ಧಿಯಾಗಿ ತೆಗೆದುಕೊಂಡರು. ಮೊದಮೊದಲು ರಾಯಭಾರಕ್ಕೆ ಸೆಕ್ರೆಟರಿ ಗಸಿಜ್ಞಾನಿ ಚಂದ್ರಪ್ಪನವರನ್ನು ನನ್ನ ಹತ್ತಿರ ಕಳುಹಿಸಿ, 'ಸ್ವಾಮಿ ಅವರ ಸಹವಾಸ ಕಷ್ಟ. ನಾಗರಹಾವಿನಂತಹ ಮನುಷ್ಯ. ಎಂತಹದಕ್ಕೂ ಹೇಸೋದಿಲ್ಲ' ಅಂತ ಬೆದರಿಸಿದರು. ಇನ್ನೊಬ್ಬರನ್ನ ಕಳುಹಿಸಿ ವ್ಯವಹಾರ ಕುದುರಿಸಲು ನೋಡಿದರು. ನಾನು ಜಗ್ಗದಿರುವುದನ್ನು ಕಂಡು ತಮ್ಮ ಚೇಲ ಪೊಲೀಸ್ ಇನ್‌ಸ್ಪೆಕ್ಟರ್ ಅಯ್ಯರ್ ಸಹಾಯ ಕೇಳಿದರು. ಈತನ ಬಗ್ಗೆ ಒಂದೆರಡು ಮಾತು ಹೇಳಬೇಕು. ಆಗ ಭಾರಿ ರಾಷ್ಟ್ರೀಯ ಚಳುವಳಿ ಕಾಲ. ಹೊಸದುರ್ಗ ಪ್ರಾಂತ್ಯದಲ್ಲಿ ಯಾರು ಯಾರು ಕಾಂಗ್ರೆಸ್ಸಿನೋರೊ, ಅವರಿಗೆ ಹಾಗು ಅದರ ಮನೆಯವರಿಗೆ ಕಿರುಕುಳ ಕೊಡೋದು ಬೇಕಾದ ಹೆಣ್ಣುಮಕ್ಕಳನ್ನು ಕರೆಸಿ ತಮ್ಮ ಮನೆಯಲ್ಲಿಟ್ಟುಕೊಳ್ಳೋದು ಆತನ ಪರಿಪಾಠವಾಗಿತ್ತು. ಕುರುಬ ಜನಾಂಗಕ್ಕೆ ಸೇರಿದ ಹೆಣ್ಣುಮಗಳೊಬ್ಬಳು ಇವನ ಅಕ್ರಮ ಬಂಧನದಲ್ಲಿ ಕಣ್ಣೀರು ಸುರಿಸುತ್ತಾ ಇದ್ದುದು ಅಧಿಕಾರಿ ವಲಯದಲ್ಲಿ ಮಾತಿಗೆ ವಿಷಯವಾಗಿತ್ತು. ಯಾವಾಗಲೊ ಒಮ್ಮೆ ನಾನು ಒಂದೆರಡು ಮಾತು ಅಂದಿರಬಹುದು. ನಂಜುಂಡಯ್ಯನವರ ಕುಮ್ಮಕ್ಕು ಕೊಟ್ಟ ಮೇಲೆ ನನ್ನ ಪಳಗಿಸಲು ಪೊಲೀಸ್ ಇನ್‌ಸ್ಪೆಕ್ಟರ್ ಅಯ್ಯರ್ ಮುಂದಾದರು. ಯಾವುದೇ ಹಳ್ಳಿಗೆ ಹೋಗಲಿ, ನನ್ನ ಹಿಂದೆ ಮಫ್ತಿಯಲ್ಲಿ ಸಿ.ಐ.ಡಿ.ಗಳು. ಹೇಗಾದರೂ ನಾನು ಕಾಂಗ್ರೆಸ್‌ನೋನು ಎಂದು ಸಾಧಿಸಿ ಕೆಲಸ ಕಳೆದುಬಿಟ್ಟರೆ ಅವರಿಗೆ ಮಹತ್ಕಾರ್ಯ ಸಾಧಿಸಿದ ತೃಪ್ತಿ. ನಂಜುಂಡಯ್ಯ ಮತ್ತು ಅಯ್ಯರ್ ಇಷ್ಟಕ್ಕೆ ನನ್ನ ಬಿಡಲಿಲ್ಲ. ಬಾಗೂರ ಚಾಣಕ್ಯ ಶ್ಯಾನುಭೋಗ ಮತ್ತು ಪಟೇಲರಿಂದ ನನ್ನ ಮೇಲೆ ಹಿರಿಯ ಅಧಿಕಾರಿಗಳಿಗೆ ಅರ್ಜಿ ಬರೆಸಿದರು. ಇದೇ ಸಮಯದಲ್ಲಿ ಕೌನ್ಸಿಲರ್ ಆಗಿದ್ದ ಎಸ್.ಮಾಧೂರಾಯರು ಜಿಲ್ಲಾಧಿಕಾರಿ ನವನೀತಂನಾಯಿಡು ಜೊತೆ ಹೊಸದುರ್ಗಕ್ಕೆ ಬಂದಿದ್ದರು. ಮೂಗರ್ಜಿಯಿಂದ ಜಿಲ್ಲಾಧಿಕಾರಿಗಳು ನನ್ನ ವಿಷಯದಲ್ಲಿ ತಲೆ ಕೆಡಿಸಿಕೊಂಡಿದ್ದರು. ಪೋಲೀಸ್ ಇನ್‌ಸ್ಪೆಕ್ಟರ್ ಅಯ್ಯರ್ ಮತ್ತು

ನಂಜುಂಡಯ್ಯ ಈ ಆಪ್ತರು ನಾನು ಅತಿಥಿಗಳ ಹತ್ತಿರ ಹೋಗದಂತೆ ನೋಡಿಕೊಂಡರು. ನನಗೊಂದು ರೀತಿಯ ಸರ್ಪಗಾವಲು. ನಂಜುಂಡಯ್ಯನವರ ಮನೆಯಲ್ಲಿ ಅವರ ಮಕ್ಕಳೂ ಸಹ ನೈತಿಕ ಪ್ರಜ್ಞೆ ಬಗ್ಗೆ ಯೋಚಿಸಿದವರಲ್ಲ. ತಂದೆಯೆ ಹಾಗಾದ ಮೇಲೆ ಮಕ್ಕಳ ಬಗ್ಗೆ ಏಕೆ ಹೇಳಬೇಕು. ಅಯ್ಯರ್ ವಿಚಾರವಂತೂ ದುರ್ಗದಲ್ಲೆ ಪ್ರಸಿದ್ಧವಾಗಿತ್ತು. ಇಂತಹವರಿಂದ ನಾನು ಉಪದೇಶ ಕೇಳಬೇಕಾಗಿತ್ತು. ಅವರಿಗೆ ಅನುಗುಣವಾಗಿ ನಡೆಯಬೇಕು. ಇಲ್ಲ, ಪ್ರಾಣ ಅರ್ಪಿಸಬೇಕಾಗಿತ್ತು. ಒಂದೊಂದು ಸಾರಿ ಯಾಕಾದರೂ ಇಂತಹ ಹೇಸಿಗೆ ಕೆಲಸಕ್ಕೆ ಬಂದೆನೋ ಎಂದು ಜಿಗುಪ್ಸೆಪಡುತ್ತಿದ್ದೆ. ಆದರೆ ಆ ಸಮಯದಲ್ಲಿ ತಹಶೀಲ್ದಾರ್ ನಾರಾಯಣಸ್ವಾಮಿ ಹಾಗೂ ಬಾಗೂರು 'ಕೈಗಾರಿಕಾ ಸೆಂಟರ್‌ನ' ಮ್ಯಾನೇಜರ್ ಶ್ರೀ ಪುಟ್ಟರಾಜ ಅರಸು 'ಕೆಚ್ಚೆದೆಯಿಂದ ಅನ್ಯಾಯಗಳನ್ನೆಲ್ಲ ಮೆಟ್ಟಿ ನಿಲ್ಲಲು ಸಿದ್ಧನಾಗು, ಇಂತಹ ನೂರಾರು ಕೋಟಲೆಗಳನ್ನು ಸಹಿಸಿಕೊಂಡು ಮುನ್ನುಗ್ಗಿದರೆ ಜೀವನ' ಎಂದೆನ್ನುತ್ತಿದ್ದರು. ಡಿ.ಸಿ.ಯವರನ್ನ ನೋಡಿ ವಿಷಯ ಹೇಳೆಂದೂ ಅವರು ಪ್ರಚೋದಿಸಿದರು. ಒಂದಿನ ಚಿತ್ರದುರ್ಗಕ್ಕೆ ಹೋಗಿ ಬೆಳಿಗ್ಗೇನೆ ಡಿ.ಸಿ. ಬಂಗ್ಲೆಗೆ ಹೋದೆ. ಅವರು ಬೆಳಗಿನ ಸಮಯದಲ್ಲಿ ವಾಕಿಂಗ್ ಮಾಡ್ತಿದ್ದರು. ಅವರ ಜೊತೆಯಲ್ಲೆ ನಡೆದು ಹೋಗಿ ಎಲ್ಲಾ ವಿಷಯ ಹೇಳಿದೆ. ಗೋಮುಖ ವ್ಯಾಘ್ರಗಳ ಕೈಲಿ ಹೇಗೆ ಅವರು ಸಿಕ್ಕಿಹಾಕಿಕೊಂಡಿರುವರೆಂಬ ಬಗ್ಗೆ ವಿವರಿಸಿದೆ. ಆನಂತರ 'ಮಲ್ಲಪ್ಪ ನೀವು ಚಿಂತೆ ಮಾಡಬೇಡಿ, ನಾನಿದ್ದೇನೆ. ನೀವು ಹೋಗಿ' ಎಂದು ಡಿ.ಸಿ.ಹೇಳಿದರು. ಯಾರೂ ಯಾರನ್ನೂ ಕೂಡ ಕೊಲ್ಲೋದಿಕ್ಕೆ ಅಥವಾ ಕಾಯೋದಿಕ್ಕೆ ಆಗೋದಿಲ್ಲ. ಅದೆಲ್ಲಾ ವಿಧಿಯ ನಿಗೂಢ ಎನಿಸಿರುವ ಕರ್ಮಶಾಲೆಯಲ್ಲಿ ಹೆಣೆಯಲ್ಪಡುತ್ತದೇನೋ, ಮನುಷ್ಯನಿಗೆ ತಾತ್ಕಾಲಿಕವಾಗಿ ಇವೆಲ್ಲಾ ಅಗೋಚರವಾಗಿರುತ್ತದೆ.

ಕೆಲಸ ಮಾಡುವವನಿಗೆ ನಿರಾಸೆ ತಾತ್ಕಾಲಿಕ ಅನ್ನೋದು ಈ ಕಾಲದಲ್ಲಿ ನನಗೆ ಅನುಭವವಾಯಿತು, ಕಿರುಕುಳದ ನಡುವೆ ಒಂದಿಷ್ಟು ಕೆಲಸ ಮಾಡಿದ ನನ್ನನ್ನು ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಆಗಿದ್ದ ಮೇಖರಿ ಸಾಹೇಬರು ಶ್ಲಾಘಿಸಿದರು. ಆಗ ನಮ್ಮ ಡೈರಿಗಳು ಅಸಿಸ್ಟೆಂಟ್ ರಿಜಿಸ್ಟ್ರಾರ್ ಮೂಲಕ ಮೇಲಿನವರೆಗೆ ಹೋಗ್ತಿತ್ತು. 1936ನೆಯ ಇಸವಿ ಇರಬಹುದು. ಹೊಸದುರ್ಗ ಸರ್ಕಲ್‌ನಲ್ಲಿ ಮೂರು ತಾಲ್ಲೂಕುಗಳನ್ನೆಲ್ಲಾ ಸುತ್ತಿ ಸೊಸೈಟಿಗಳ ಬಗ್ಗೆ ರಿಪೋರ್ಟ್ ತಯಾರಿಸಿ ಕಳಿಸಿದ್ದೆ. ಯಾವುದೊ ತಿಂಗಳ ಡೈರಿ ಅದರಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು,

ಅದು ಮಾಡಿಲ್ಲ ಇದು ಮಾಡಿಲ್ಲ ಅಂತ ರಿಮಾರ್ಕ್, ರಿಜಿಸ್ಟ್ರಾರ್ ಮೇಕ್ರಿಯವರು ಷುರುವಿನಿಂದ ಕೊನೆಯವರೆಗೂ ಓದಿನೋಡಿ ಅಲ್ಲಲ್ಲೆ ಗುರ್ತಾಕಿ. "Inspector's work is most staisfactory, He should keep up this work in future also" ಎಂದು ಬರೆದಿದ್ದರು. ಇದು ನನಗೆ ತುಂಬಾ ಖುಷಿ ಕೊಟ್ಟಿತು. ಉತ್ಸಾಹ ಮೂಡಿಸಿತು. ಮೇಖರಿ ಸಾಹೇಬರಿಗೆ ವರ್ಗವಾದಾಗ ಬೆಂಗಳೂರಿನಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಾಟಾಗಿತ್ತು. ನಾನೂ ಹೋಗಿದ್ದೆ. ಎಲ್ಲೋ ಮೂಲೆಯಲ್ಲಿ ನಿಂತಿದ್ದೆ. ನನ್ನ ಹತ್ತಿರಕ್ಕೆ ತಾವೇ ಖುದ್ದು ಬಂದು ಆಲಂಗಿಸಿ ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಮೇಖರಿ ಸಾಹೇಬರವರು. ಇದು ನನಗೆ ಜಂಭಕ್ಕೆ ಕಾರಣವಾಗಲಿಲ್ಲ. ಇವರು ರೆವಿನ್ಯೂ ಕಮಿಷನರಾಗಿದ್ದ ಕಾಲ. ಆಗ ಪ್ರೊಬೇಷನರುಗಳನ್ನು ತೆಗೆದುಕೊಳ್ಳಲಾಗಿತ್ತು. ದುರಾದೃಷ್ಟವಶಾತ್ ನಾನು - ಅರ್ಜಿ ಹಾಕದಿದ್ದುದಕ್ಕಾಗಿ- ತುಂಬಾ ವ್ಯಾಕುಲ ವ್ಯಕ್ತಪಡಿಸಿದರೆಂದು ಕೇಳಿದೆ. ಏನೇ ಆಗಲಿ ನಾನನುಸರಿಸಿದ ಮಾರ್ಗದಲ್ಲಿ ಸತ್ಯವಿದೆಯೆಂದು ನನಗೆ ಮನವರಿಕೆಯಾಯಿತು.

''ನೆನೆ-ನೆನೆ ಆ ದಿನವ ಓ ಭಾರತ; ಬಾಂಧವ ನೆನೆಯೋ ಆ ದಿನವ'' ಎನ್ನುವ ಕವಿವಾಣಿಯಂತೆ ಅದೊಂದು ಉತ್ಸಾಹ ಪೂರ್ಣದ ಕಾಲ. ಸ್ವಾತಂತ್ರ್ಯ ಸಂಗ್ರಾಮ ಜನತೆಯನ್ನೆಲ್ಲಾ ಒಂದಾಗಿಸಿ ಗಾಂಧೀಜಿಯವರ ಅದ್ಭುತ ಸಂಘಟನಾ ಶಕ್ತಿಗೆ ಪ್ರತಿನಿತ್ಯವೂ ಹೊಸತನವೆನ್ನಿಸುತ್ತಿತ್ತು. ಬಿ.ಎಂ.ಶ್ರೀ.ಯವರು 'ಕಿವಿಗೊಟ್ಟು ಕೇಳಿ ಎದೆಗೊಟ್ಟು ಕೇಳಿ' ಎನ್ನುತ್ತ ಕರ್ನಾಟಕದಾದ್ಯಂತ ಸಂಚರಿಸಿ ಜನಜಾಗೃತಿಯನ್ನುಂಟು ಮಾಡುತ್ತಿದ್ದರು. ''ದೇವಮಾನವರೆಲ್ಲಾ ಕಂಡ ಕನಸೇ.... ಬಾರಾ.... ಮನಸಿನೊಳು. ನೆಲೆಸು'' ಎಂದು ಹಾಡುತ್ತಿದ್ದ ದ.ರಾ.ಬೇಂದ್ರೆ ಒಮ್ಮೊಮ್ಮೆ, ''ಹಲಕೆಲವು ಹುಳಗಳನೀ, ಕುನ್ನಿಗಳನೀ, ಕುರಿಗಳನೀ ಗಂಡುತನಕೇನೋ ಸೊನ್ನೆ'' ಎಂದು ನಾಡಿನ ಜನತೆಯನ್ನು ಬಡಿದೆಬ್ಬಿಸಿದ್ದುಂಟು. ಮಾಸ್ತಿಯವರು ಸರ್ಕಾರದ ಸೇವೆಯಲ್ಲಿದ್ದರೂ ''ಬನ್ನಿ ಅಣ್ಣಂದಿರ ಬನ್ನಿ ತಮ್ಮಂದಿರ... ಬನ್ನಿ ಸೋದರಿಯರೆ ಎಲ್ಲರೂ ಆಸೆ ಇಟ್ಟುಕೊಳ್ಳಿ ಚೆನ್ನಮಾಡಿ ಬಾಳ'' ಎಂದು ಆಶಿಸಿದ್ದರು. ''ನೂರು ದೇವರುಗಳ ನೂಕಾಚೆ ದೂರ. ಭಾರತಾಂಬೆಯ ನಾವು ಪೂಜಿಸುವ ಬಾರ'' ಎಂದು ಕುವೆಂಪು ಕರೆ ಕೊಟ್ಟಿದ್ದರು. ಗಾಂಧೀಜಿ ನಮ್ಮಗಳ ಮನ ಗೆದ್ದು ಎಷ್ಟೋ ವರ್ಷಗಳಾಗಿತ್ತು. ಅವರ ವ್ಯಕ್ತಿತ್ವವನ್ನು ವರ್ಣಿಸದಿದ್ದವರೆ ಇಲ್ಲ. ಬೆಳಗಾವಿ ಕಾಂಗ್ರೆಸ್ ಅಧಿವೇಶನ ನಡೆದು ಒಂದು ದಶಕ

ಕಳೆದಿದ್ದರೂ ನಮ್ಮ ಸುತ್ತಮುತ್ತಲಲ್ಲಿ ಅದಕ್ಕೆ ರೆಕ್ಕೆ ಪುಕ್ಕ ಹುಟ್ಟಿ ಯಾವುದೊ ಮಹತ್ತರ ಘಟನೆಯೊಂದು ಜರುಗಿದಂತೆ ಭಾಸವಾಗುತ್ತಿತ್ತು. ಅಲ್ಲಿಗೆ ಹೋಗಿ ಬಂದವರ ಮಾತನ್ನು ಜನ ದಿಗ್ಮೂಢರಾಗಿ ಕುಳಿತು ಕೇಳುತ್ತಿದ್ದರು. ಗಾಂಧೀಜಿಯ ಪ್ರತಿದಿನದ ಬದುಕು ದಿನಪತ್ರಿಕೆಗೆ ಪ್ರಮುಖ ಸುದ್ದಿಯಾಗಿತ್ತು. ಕೆಲವರಂತೂ ಅವರಲ್ಲಿ 'ಹರಿಯ-ಹಿರಿಯಾಳಿನವರು-ಗಾಂಧೀ ಮಹಾತ್ಮ' ಎಂದು ಅವರಲ್ಲಿ ದೈವತ್ವವನ್ನು ಕಾಣುತ್ತಿದ್ದರು. ನಾನಾದರೋ ಹೈಸ್ಕೂಲಿನಲ್ಲಿದ್ದಾಗಲೇ ಗಾಂಧಿ ದರ್ಶನ ಪಡೆದು ಅವರ ಮೋಡಿಗೆ ಒಳಗಾಗಿದ್ದೆ. ಹೇಗೆ ವಿದ್ಯಾಭ್ಯಾಸ ನಿಲ್ಲಿಸದೆ ಅದನ್ನು ಮುಗಿಸಿದೆನೊ ಗೊತ್ತಿಲ್ಲ. ವಿದ್ಯಾರ್ಥಿ ದೆಸೆಯಿಂದಲೂ ಖಾದಿಯಂತೂ ನನ್ನ ದಿನನಿತ್ಯದ ಉಡುಪಾಯಿತು. ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿದ ಮೇಲೆ ತಳಮಳ ಪ್ರಾರಂಭವಾಯಿತು. ದೇಶದ ಯುವಕರೆಲ್ಲಾ ಸ್ವಾತಂತ್ರ್ಯ ಸಂಗ್ರಾಮದ ಉರಿಯಲ್ಲಿರಬೇಕಾದರೆ ನಾನೊಬ್ಬ ದೂರದಿಂದ ಅವರ ಸೊಬಗು ನೋಡಿ ಆನಂದಿಸಲೆ ಅಥವಾ ನಾನು ಉರಿಯಲ್ಲಿ ಸಿಲುಕಿ ಈಗ ಮಾಡುತ್ತಿರುವ ಕೆಲಸದಿಂದ ಹಿಂದೆ ಸರಿಯಲೆ ಎಂಬ ದ್ವಂದ್ವದಲ್ಲಿ ಸಿಲುಕಿದೆ. ಈ ಹೊತ್ತಿಗೆ ನನ್ನ ಸೋದರ ಮಾವ ನರಸಯ್ಯ ಕೆಲಸ ಬಿಟ್ಟು ವಿಶ್ರಾಂತಿಗೆ ಹವಣಿಸುತ್ತಿದ್ದರು. ಬಡತನದ ಬವಣೆಯಲ್ಲಿದ್ದರು, ವಿದ್ಯಾಭ್ಯಾಸಕ್ಕೆ ಅವರಲ್ಲಿ ಮಾಡಿಕೊಂಡಿದ್ದ ಸಾಲ ಹೆಚ್ಚಿತ್ತು. ''ತಕ್ಕೊಂಡ ಸಾಲ ತೀರಿಸದೆ ಒಂದು ಪಕ್ಷ ಸತ್ತರೆ ಆ ಸಾಲ ಉರಿಯೋ ಪಂಜಾಗಿ ಹೆಗಲ ಮೇಲೆ ತಕಥೈ ತಕಥೈ ಅಂತ ಕುಣಿತದೆ'' ಎಂದು ನನ್ನ ತಾಯಿ ಹೇಳುತ್ತಿದ್ದ ಮಾತು ಆಗಾಗ ನನ್ನ ನೆನಪಿಗೆ ಬರುತ್ತಿತ್ತು. ನನ್ನಕ್ಕನಿಗೇನಾದರೂ ಮಾಡುವಂತಹ ಅವಕಾಶ ದೊರಕಿರಲಿಲ್ಲ. ಇವೆಲ್ಲಕ್ಕಿಂತ ಟಿ.ಮರಿಯಪ್ಪನವರು ಮಾಡಿದಂತಹ ಹಿಂದುಳಿದ ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕೆ ಏನೊಂದೂ ಕೆಲಸ ನಾನೂ ಮಾಡಿರಲಿಲ್ಲ. ನಾನು ದುಡಿದು ಸಾಲ ತೀರಿಸೊತನಕ ಮದುವೆ ಮಾಡಿಕೊಳ್ಳಬಾರದೆಂದು ತೀರ್ಮಾನಿಸಿದೆ. ನಾನು ಸ್ವಾತಂತ್ರ್ಯ ಹೋರಾಟಕ್ಕೆ ನೇರವಾಗಿ ಹೋಗದೆ ಇದ್ದರೂ ಹೋರಾಟಗಾರರ ಸಂಬಂಧ ಕಳಕೊಳ್ಳೋಕೆ ನನ್ನಿಂದ ಆಗಲಿಲ್ಲ. ಯಾರಾದರೂ ಸ್ವಾತಂತ್ರ್ಯ ಹೋರಾಟಗಾರರು ಬಂದರೆ ಅವರ ಯೋಗಕ್ಷೇಮ ನೋಡಿಕೊಳ್ಳೋದು ನನಗೊಂದು ರೀತಿಯ ಖುಷಿಯಾಗಿತ್ತು. ಈ ಕಾಲದಲ್ಲಿ ನನ್ನ ಗಮನ ಸೆಳೆದೋರಂದ್ರೆ ದುಮ್ಮಿಯನಂಜಪ್ಪ ಎಂಬೋರು. ಒಂದು ದೊಣ್ಣೆ ಹಿಡಿದು, ಒಂದು ತುಂಡು ಪಂಚೆ ಉಟ್ಟು ಹೆಗಲ ಮೇಲೆ ಒಂದು ಕರಿ ಕಂಬಳಿ ಹಾಕ್ಕೊಂಡು ಹಳ್ಳಿಯಿಂದ ಹಳ್ಳಿಗೆ ಪಯಣಿಸುತ್ತ ಸ್ವಾತಂತ್ರ್ಯ ದೀವಿಗೆಯನ್ನು ಹಿಡಿದು ಹೊರಟಿದ್ದ ಆ ಮಹಾನುಭಾವನ ಪ್ರಭಾವಕ್ಕೆ ಯಾರು

ತಾನೆ ಒಳಗಾಗೋದಿಲ್ಲ. ಹಳ್ಳಿಯೋರ ಜೊತೇನೆ ಊಟ. ಸ್ವಾತಂತ್ರ್ಯ ಸಂಗ್ರಾಮ ಹಾಗೂ ಗಾಂಧೀಜಿಯವರ ಬಗ್ಗೆ ಮಾತು. ಅಸ್ಪೃಶ್ಯತೆಯ ನಿವಾರಣೆಗೆ ಕಾರ್ಯತಃ ಉಪದೇಶ... ಅವರ ಕಾಯಕ ಆಗಿತ್ತು. ಹೊಸದುರ್ಗ ಸರ್ಕಲ್ಲಿನಲ್ಲಿ ಅವರದೇ ಮಾತಾಗಿತ್ತು. ಅವರ ಬಗ್ಗೆ ಮೆಚ್ಚಿಗೆ ಮಾತನಾಡಿದ ನಾನು ಅದನ್ನ ಅವರಿಗೂ ಸಹ ಸೂಚಿಸಿದ್ದೆ. ಇದು ಪೊಲೀಸ್ ಇನ್‌ಸ್ಪೆಕ್ಟರ್ ಅಯ್ಯರ್‌ಗೆ ತಿಳಿದು ನನ್ನನ್ನು ಸರ್ಕಾರಿ ವಿರೋಧಿ ಲಿಸ್ಟ್‌ಗೆ ಸೇರಿಸಿದರು.

ಒಂದು ಸಾರಿ ಮಿತ್ರರೊಬ್ಬರನ್ನ ಊರಿಗೆ ಕಳಿಸಲು ರೈಲು ನಿಲ್ದಾಣಕ್ಕೆ ಬಂದಿದ್ದೆ ಅದೇ ರೈಲಿನಲ್ಲಿ ಸೀತಾರಾಮ್ ಎಂಬ ಸ್ವಾತಂತ್ರ್ಯ ಹೋರಾಟಗಾರರು ಪ್ರಯಾಣ ಮಾಡುತ್ತಿದ್ದರು. ಅವರು ವಾರ್ಧಕ್ಕೆ ತೆರಳಿ ಅಲ್ಲಿಯೇ ಸೇವಾಕಾರ್ಯವನ್ನು ಕೈಗೊಂಡಿದ್ದರು. ಅನಿರೀಕ್ಷಿತವಾಗಿ ನನ್ನ ನೋಡಿ 'ಅಯ್ಯೋ ಮಲ್ಲಪ್ಪ' ಅಂತ ಬಾಚಿ ತಬ್ಬಿಕೊಂಡುಬಿಟ್ಟರು. ಆಮೇಲೆ ನನಗೆ ಜ್ಞಾಪಕ ಬಂತು. ಮೈಸೂರಿನಲ್ಲಿ ಎರಡು ವರ್ಷ ಜೊತೇಲಿ ಓದಿದ್ದು ಅಂತ, ಅಪರೂಪದ ಮಿತ್ರನಿಗೆ ಒಂದಿಷ್ಟಾದರೂ ಹಣ್ಣುಹಂಪಲು ಕೊಡಿಸಬೇಡವೇ? ಉನ್ನತ ಆದರ್ಶಗಳಿಗೆ ಜೀವನವನ್ನೇ ಮೀಸಲಾಗಿರಿಸಿರುವ ಆ ಮಿತ್ರನಿಗೆ ಸಹೃದಯತೆಯನ್ನಾದರೂ ತೋರಿಸಬೇಡವೇ? ಆದರೆ ನನ್ನ ಹಿಂಭಾಗದಲ್ಲಿ ಮಫ್ತಿಯಲ್ಲಿದ್ದ ಪೊಲೀಸ್ನೋರಿಗೆ ಇದು ಒಳ್ಳೆ ನ್ಯೂಸ್ ಆಯಿತು. ನಾನು ಗುಪ್ತವಾಗಿ ಕ್ರಾಂತಿಕಾರಿಗಳಿಗೆ ಸಹಾಯ ಮಾಡ್ತಿದ್ದೇನೆ ಎಂದು ನಿರ್ಣಯಕ್ಕೆ ಬರಲು ಸಹಾಯವಾಯಿತು. ಅಯ್ಯರ್ ಮತ್ತು ಸೊಸೈಟಿ ಮುಖಂಡರು ನನ್ನನ್ನು ಕೆಲಸದಿಂದಲೇ ತೆಗಿಸಿಬಿಡಬೇಕೆಂಬ ಮಟ್ಟಕ್ಕೆ ಬಂದರು. ಆದರೆ ಮೇಲಿನವರು ಇವರ ಮಾತನ್ನು ನಂಬಲಿಲ್ಲ. ಮುಂದೆ ದೋಸೆ ಮಗುಚಿ ಬಿತ್ತು. ಕಾಂಗ್ರೆಸ್ ಸರ್ಕಾರವೆ ಅಧಿಕಾರಕ್ಕೆ ಬಂತು. ಈ ಅಧಿಕಾರಿಗಳು ನಂತರ ತಾವೇ ದೇಶ ರಕ್ಷಕರೆಂಬಂತೆ ನಟಿಸಿ ಅನೇಕ ಯೋಜನೆಗಳನ್ನು ಹಾಕಿ ನುಂಗಣ್ಣಗಳಾದರು. ಅದಕ್ಕೆ ನಮ್ಮಲ್ಲಿ ಪ್ರಗತಿ ಗಗನಕುಸುಮವಾಗಿದೆ. ಇನ್ನು ನಂಜಪ್ಪ ಸೀತಾರಾಂರಂತಹ ನೈಜ ಹೋರಾಟಗಾರರು ಅಧಿಕಾರದ ಆಸೆ ತೊರೆದು ಹಿಂದೆ ಸರಿದರು. ಕಾಯ್ದುಕೊಂಡು ಸ್ವಾರ್ಥಪರರು, ಸ್ವಾತಂತ್ರ ಹೋರಾಟದ ಬಗ್ಗೆ ಸದಭಿಪ್ರಾಯವಿಲ್ಲದವರು ಮುಂದಾಗಿ ಅಧಿಕಾರ ಸೂತ್ರ ಹಿಡಿದು, ಅಧಿಕಾರಿಗಳು ರೂಪಿಸಿದ ಜಾಲವನ್ನು ಬೆಂಬಲಿಸಿ ತಮ್ಮ ಬೇಳೆ ಬೇಯಿಸಿಕೊಂಡರು.

ಹೊಸದುರ್ಗ ಬಿಡುವ ಮುಂಚಿನ ಒಂದೆರಡು ವೈಯಕ್ತಿಕ ವಿಚಾರ ಹೇಳದಿದ್ದರೆ

ತಪ್ಪಾಗುತ್ತದೆ. ಮನೋವಿಕಾರಗಳಿಗೆ ಒಳಗಾಗದೆ ಇದ್ದವರು ಯಾರಿದ್ದಾರೆ. ನಮ್ಮಲ್ಲಿ ರಾವಣ, ಕೀಚಕ, ದುಶ್ಯಾಸನರಿಗೆ ಸ್ವಲ್ಪವು ಬೆಲೆ ಇಲ್ಲ. ಇದನ್ನ ಚಿಕ್ಕಂದಿನಿಂದಲೂ ನಮ್ಮ ಹಳ್ಳಿಯಲ್ಲಿ ಎಲ್ಲರೂ ಹೇಳುತ್ತಿದ್ದರು 'ಆಚಾರಕ್ಕೆ ಅರಸನಾಗು, ನೀತಿಗೆ ಪ್ರಭುವಾಗು' ಎನ್ನುವ ಮಾತನ್ನು ನಮ್ಮ ಜಾನಪದದಲ್ಲಿ ನಮ್ಮ ಹಳ್ಳಿಯ ಹೆಂಗಸು ಬೇಕಾದಷ್ಟು ಸಾರಿ ಹಾಡುತ್ತಿರುತ್ತಾಳೆ. ''ಭೂಮಿ ನಿನ್ನದಲ್ಲ. ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ''..... ಅಂತ ವಚನಕಾರರು ಸಾರಿದ್ದುಂಟು. ಇವೆಲ್ಲಕ್ಕಿಂತ ಮನೆಯ ವಾತಾವರಣ ಬಹಳ ಪ್ರಮುಖವಾದುದು. ಹಳ್ಳಿಯ ಬದುಕಿನಲ್ಲಿ ಲೈಂಗಿಕ ವಿಚಾರ ಪ್ರಮುಖ ಸಂಗತಿಯಲ್ಲದಿದ್ದರೂ ಬೀದಿ ಪ್ರದರ್ಶನವಾಗದೆ ಮುಚ್ಚಟ್ಟೆಯಾಗಿರುತ್ತಿತ್ತು. ನನ್ನ ತಾಯಿ ಗಂಡನನ್ನ ಕಳೆದುಕೊಂಡು ತಾನೇನೊ ಪಾಪ ಮಾಡಿದ್ದೇನೆ; ಅದಕ್ಕೆ ಹೀಗಾಯಿತು ಎಂಬ ಪ್ರಜ್ಞೆಯಿಂದ ಒಂದು ರೀತಿ ಅಪ್ರಸಿದ್ಧ ಬದುಕನ್ನ ಬದುಕಿದವರು. ಇಂಥವರ ಕೈಯಲ್ಲಿ ಬೆಳೆದ ನನಗೆ ಅಂತಹ ವಿಚಾರಗಳಲ್ಲಿ ಒಂದು ರೀತಿಯ ಮುಜುಗರ, ಆಕೆಯ ನಂತರ ಅಕ್ಕ ನನ್ನ ಹೊಣೆ ಹೊತ್ತಳು. ಸ್ತ್ರೀ ಸಂಬಂಧ ಕೂಡ ನನಗೆ ಬಹಳ ದಿನ 'ಅಮ್ಮ' 'ಅಕ್ಕ' ತರಹವೇ ಮುಂದುವರೆಯಿತು. ಸಾಲ ತೀರದೆ ಮದುವೆಯಾಗಕೂಡದೆಂಬ ನನ್ನ ಹಠಕ್ಕೆ ಇವು ಪೋಷಕವಾಗಿಯೇ ನಿಂತಿದ್ದವು. ಆದರೆ ಬೇರೆಯವರು ಬಿಡಬೇಕೆ. ಆ ಕಾಲದಲ್ಲಿ ಗಂಡುಗಳು ಇಪ್ಪತ್ತರೊಳಗೆ ಮದುವೆ ಆಗಬೇಕಾಗಿತ್ತು. ಇಪ್ಪತ್ತೆಂಟು-ಮೂವತ್ತು ವರ್ಷವಾದರೂ ನಾನಿನ್ನೂ ಮದುವೆಯಾಗದಿದ್ದುದು ಮೇಷ್ಟ್ರು ರಾಮಣ್ಣನಂತೋರಿಗೆ ಆಶ್ಚರ್ಯವಲ್ಲವೆ? ಹೊಸ ದುರ್ಗದಲ್ಲಿದ್ದಷ್ಟು ಕಾಲ ರಾಮಣ್ಣ ಮತ್ತು ನನ್ನ ಸಂಬಂಧ ಗುರು ಶಿಷ್ಯರ ಸಂಬಂಧವೆನ್ನಬೇಕು. ಇವರು ಮೇಷ್ಟ್ರು ಆಗಿದ್ದು, ಗಣಿತದಲ್ಲಿ ಬಹಳ ಬುದ್ಧಿವಂತರು. ನನಗೆ ಸೊಸೈಟಿಯ ಅನೇಕ ಲೆಕ್ಕಗಳನ್ನು ಹೇಳಿಕೊಡುತ್ತಿದ್ದರು. ಅವರಿಂದಲೇ ನಾನು ಬ್ಯಾಲೆನ್ಸ್ ಶೀಟ್ ಮಾಡೋದು ಕಲಿತದ್ದು. ಒಂದು ದಿನ ರಾಮಣ್ಣನೋರು ಬಂದು ಅದು ಇದು ಮಾತನಾಡುತ್ತ; ''ಸ್ವಾಮಿ ಎಷ್ಟು ದಿನ ಅಂತ ಕೈ ಬಿಸಿ ಮಾಡಿಕೊಳ್ತೀರಿ, ಮದುವೆ ಆಗಿಬಿಡಿ'' ಅಂದ್ರು; ನಾನು ''ಇಲ್ಲ ಇನ್ನೊಂದೆರಡು ವರ್ಷದಲ್ಲಿ ಸಾಲ ತೀರಿಸಿಬಿಟ್ಟು ಮದುವೆಯಾಗ್ತೀನಿ'' ಅಂದೆ. ''ನೋಡಿ ಈ ದೇಹ ಉಪ್ಪು, ಹುಳಿ, ಖಾರ ತಿಂದದ್ದು. ಇಲ್ಲಿ ಒಬ್ಬ ಸತ್ ಗೃಹಿಣಿ ಹೆಣ್ಮಗಳಿದ್ದಾಳೆ. ಇಪ್ಪತ್ತೆರಡು ವರ್ಷ ಇರಬೇಕು. ರಾತ್ರಿ ನಿಮ್ಮ ಜೊತೆಗೆ ಕಳಿಸ್ತೀನಿ.'' ಎಂದರು. ಒಂದು ಕ್ಷಣ ನಾನು ಅವಕ್ಕಾದೆ. ರಾಮಣ್ಣನಿಗೆ ನನ್ನ ಬಗ್ಗೆ ಈ ಅಭಿಪ್ರಾಯ ಬರಲು ಏನು ಕಾರಣವೋ, ನನ್ನ ನಡತೇಲೇನೂ ತಪ್ಪಿಲ್ಲವಲ್ಲ,

ಎಂದ್ಕೊಂಡು ''ಅಯ್ಯೋ ರಾಮಣ್ಣ ಇಷ್ಟೇನಾ ನೀವು ನನ್ನ ಅರ್ಥ ಮಾಡಿಕೊಂಡಿರೋದು. ನಮ್ಮವ್ವ ನನ್ನಕ್ಕನಿಗೆ ಇದಕ್ಕಿಂತ ಕೇಡು ಮಾಡಲು ಹೇಗೆ ಸಾಧ್ಯ, ದಯವಿಟ್ಟು ಆ ಮಾತು ಮತ್ತೊಮ್ಮೆ ಆಡಬೇಡಿ'' ಅಂದೆ. ಅವರು 'ನಾನು ಸುಮ್ಮನೆ ಹೇಳಿದೆ. ನೀವು ಅಷ್ಟು ಸೂಕ್ಷ್ಮವಾದರೆ ಬಿಡಿ' ಎಂದು ತೇಲಿಸಿ ಬಿಟ್ಟರು. ಅಡುಗೆ ಮಾಡಲು ವಯಸ್ಸಾದ ಗೂರಪ್ಪ ನನ್ನ ಜೊತೆಗೆ ಇದ್ದ. ಒಂದು ಸಾರಿ ಆತ ಕೂಡ ಮನೇಲಿ ಇರಲಿಲ್ಲ, ಸಂಜೆ ಸುಮಾರು ಆರು ಘಂಟೆಯ ಸಮಯವಿರಬೇಕು. ಎಲ್ಲೊ ಡ್ಯೂಟಿಗೆ ಹೋಗಿದ್ದ ನಾನು ಆಗ ತಾನೆ ಬಂದು ಪೇಪರ್ ಓದುತ್ತಾ ಕುಳಿತಿದ್ದೆ. ಹಾಲಿನಾಕೆ ಕಟ್ಟುಮಸ್ತಾದ ಯುವತಿ ಬಂದಳು. ನಿತ್ಯದಂತೆ ಅಡುಗೆ ಕೋಣೆಗೆ ಹೋಗಿ ಹಾಲು ಹಾಕಿಸಿಕೊಂಡು ಬಂದೆ. ''ಮನೇಲಿ ಗೂರಪ್ಪ ಯಾರೂ ಇಲ್ವಾ ಬುದ್ದಿ'' ''ಇಲ್ಲಮ್ಮ ಎಲ್ಲೋ ಹೋಗಿದ್ದಾನೆ'' ''ಬೈಗಿನಿಂದ ಸಂಜೆಯ ತನಕ ತಿರುಗಿಕೊಂಡು ಬಂದಿದ್ದೀರಾ.....ವಸಿ ಕಾಫಿ ಕಾಸಿ ಕೊಡ್ಲ'' ''ಇಲ್ಲಮ್ಮ ಈಗ ಹೋಟೆಲ್‌ನಾಗೆ ಕುಡಿದು ಬಂದಿದ್ದೀನಿ.......'' ಹೀಗೆ ಏನೋ ಮಾತಿಗೆ ಶುರು ಮಾಡಿದಳು. ಇವಳನ್ನ ಹೇಗೆ ಆಚೆಗೆ ಕಳಿಸೋದು ಅನ್ನೋದೆ ಸಮಸ್ಯೆಯಾಯಿತು. ಒಂದೆರಡು ಕ್ಷಣದಲ್ಲಿ ಬಾಗಿಲು ಹಾಕಿದಳು. ಅವಳ ಹಾವ ಭಾವ ನೋಡಿ ನನಗೆ ದಿಗ್ಭ್ರಮೆಯಾಯಿತು, ನೋಡಿದರೆ ಮದುವೆಯಾಗಿರುವ ಲಕ್ಷಣ; ತಮ್ಮ ತಾಯಿ ಊರು ಮುಂತಾದ ಏನೋ ವಿಚಾರದ ಮಾತುಕತೆ. ಖಂಡಿತವಾಗಿ ಹೇಳಿ ಆಕೇನ ಆಚೇಗೆ ಕಳಿಸೋಣ ಎನ್ನ ಬೇಕಾದ್ರೆ ಬಾಗಿಲಲ್ಲಿ ಮಿತ್ರ ಅಮಲ್ದಾರ್ ನಾರಾಯಣಸ್ವಾಮಿ ಕೂಗಿದ ಶಬ್ದ 'ಬದುಕಿದೆಯೆ ಬಡ ಜೀವ' ಎಂದು ಆಚೆ ಕಡೆಗೆ ದಿಢೀರನೆ ಹೋದೆ. ಆಮೇಲೆ ಊರಿನಲ್ಲಿರೋದಿಲ್ಲ ಅಂತ ಹೇಳಿ ಅವಳಿಂದ ಹಾಲು ತಕೊಳ್ಳದ್ನ ನಿಲ್ಲಿಸಿದೆ ಅನ್ನಿ.

ಇನ್ನೊಂದು ಘಟನೆ. ಒಂದಿನ ನೆಗಡಿ ಕೆಮ್ಮಾಗಿ ಮಲಗಿದ್ದೆ. ಹಾಗೆಯೇ ನನ್ನನ್ನು ನೋಡಲು ಬಂದ ಪಟೇಲ್ ನಿಂಗೇಗೌಡ್ರು ನನ್ನ ಶುಶ್ರೂಷೆಗೆ ಒಬ್ಬರನ್ನ ಕಳಿಸುವುದಾಗಿ ಹೇಳಿ ಹೋದರು. 'ಸುಮ್ನೆ ನಿಮಗೆ ಯಾಕ್ ತೊಂದ್ರೆ' 'ಒಬ್ಬರಿಗೊಬ್ಬರು ಆಗದೆ ಏನು ಸ್ವಾಮಿ ಮನುಷ್ಯ ಮರಕ್ಕಾಗ್ತಾನ' ಅಂತ ದಬಾಯಿಸಿ ಕೊಂಡು ಹೊರಟೇ ಬಿಟ್ಟರು. ಸುಮಾರು ಒಂದು ಘಂಟೆ ನಂತರ ಹದಿನಾರು ಹದಿನೇಳು ವರ್ಷದ ಹುಡುಗಿಯೊಬ್ಬಳು ನನ್ಮುಂದೆ ನಿಂತಿದ್ದಾಳೆ. ತಲೆ ಸಿಡೀತಿದ್ರು ನೋಡ್ತೇನೆ, ಒಳ್ಳೆ ಬೆತ್ತರ್ ಸೀರೆ ಉಟ್ಟು, ಕಾಸಿನ ಸರ, ಅಡ್ಡಿಕೆ, ಜಡೆಬಿಲ್ಲೆ ಜುಮುಕಿ ಡಾಬುಗಳನ್ನು ಹಾಕಿಕೊಂಡ ಹೆಣ್ಮಗಳೊಬ್ಬಳು ನೆಲ ಕೆರೆಯುತ್ತಾ

ನಿಂತಿದ್ದಾಳೆ. ನನಗೊಂದು ರೀತಿಯ ಆಶ್ಚರ್ಯ. 'ಯಾರಮ್ಮ ನೀನು' ಎಂದೆ. ಮುಗ್ಧಳಾಗಿ 'ಪಟೇಲ್ ನಿಂಗೇಗೌಡ್ರ ಮಗಳು. ನಿಮ್ಗೆ ಸೇವೆ ಮಾಡಲಿಕ್ಕೆ ಕಳಿಸವ್ರೆ' ಎಂದಳು. 'ಓ ನಮ್ಮ ನಿಂಗೇಗೌಡ್ರ ಮಗಳು, ಈಗ ತಾನೇ ಹಾಲು ಬಿಸಿ ಮಾಡಿಕೊಂಡು ಕುಡಿದಿದ್ದೀನಿ.....ಈಗಿನ್ನೇನು ಬ್ಯಾಡ, ನೀನು ಹಾಗೆ ಹೋಗ್ತಾ.....ರಾಮಣ್ಣನನನ್ನು ಕಳಿಸಿ ಬಿಡು' ಎಂದು ಹೇಳಿ ಅವಳನ್ನ ಸಾಗು ಹಾಕಿದೆ. ಪಾಪ ಕೆಲಸದಲ್ಲಿರೋ ಯುವಕ ಸಿಕ್ಕಿದ್ರೆ ಹೆಣ್ಣೆತ್ತ ಯಾವ ತಂದೆ ಬೇಡ ಅಂತಾರೆ. ನನಗೆ 'Bayar Taylor' ಮಾತೊಂದು ಹಿಡಿಸಿತು.

'Fame is what you have taken
Character is what you have to give.'

## ಅರಸೀಕೆರೆ

ಸರ್ಕಾರಿ ಚಾಕರಿಗೆ ಅಂಟಿಕೊಂಡ ಮೇಲೆ ಒಂದು ಕೆರೆ ನೀರು ಕುಡಿಯಲು ಸಾಧ್ಯವೆ? ಆದರೆ ಒಬ್ಬೊಬ್ಬರ ಅನುಭವ ಮಾತ್ರ ಬೇರೆ. ಹೊಸದುರ್ಗ ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆ ನನ್ನನ್ನು ಚೆನ್ನಾಗಿ ತರಬೇತಿ ಮಾಡಿತು. ನನಗೂ ಅಮಲ್ದಾರ್ ನಾರಯಣಸ್ವಾಮಿ ಅವರಿಗೂ ಒಟ್ಟಿಗೇ ಅಲ್ಲಿಂದ ವರ್ಗವಾಯಿತು. ಪುರಸಭೆಯವರು ಅದ್ದೂರಿ ಬೀಳ್ಕೊಡುಗೆ ಸಮಾರಂಭ ಇಟ್ಟುಕೊಂಡಿದ್ದರು. ನಾನು ಇದೇ ಕಾರ್ಯಕ್ರಮಕ್ಕಾಗಿ ಮತ್ತೋಡು ಗ್ರಾಮಕ್ಕೆ ಹೋಗಿದ್ದೆ. ಹೊಸದುರ್ಗದಿಂದ ಅರಸೀಕೆರೆಗೆ ನನಗೆ ವರ್ಗವಾಗಿತ್ತು. ನಮ ಜಿಲ್ಲೆಗೆ ಹೊಂದಿಕೊಂಡಿರುವ ಹಾಸನ ಜಿಲ್ಲೆಯನ್ನು ನಾನು ಮೊದಲಿನಿಂದಲೂ ಬಲ್ಲೆ. ಅದರಲ್ಲೂ ನಮ್ಮ ಕಡೆ ಅದು "ಕಳ್ಳರಸೀಕೆರೆ" ಎಂದು ಸಾಕಷ್ಟು ಹೆಸರು ಪಡೆದಿದೆ. ರೈಲ್ವೆ ಜಂಕ್ಷನ್‌ನಿಂದಾಗಿ ಜನ ಸಾಂದ್ರತೆ ಹೆಚ್ಚು. ಹೀಗಾಗಿ ಪುಂಡು ಪೋಕರಿಗಳಿಗೆ ಹೆಚ್ಚಿನ ಅವಕಾಶ. ಹೊಯ್ಸಳ ದೊರೆ ಬಲ್ಲಾಳನ ರಾಣಿ ಇಲ್ಲಿ ಕೆರೆ ಕಟ್ಟಿಸಿದ್ದಳೆಂದೂ ಆದರಿಂದಾಗಿ "ಅರಸಿಯಕೆರೆ" ಎಂಬ ಹೆಸರು ಬಂತೆಂದೂ ಊರಿನವರ ಹೇಳಿಕೆ. ನನ್ನ ಬದುಕಿಗಂತೂ ತಂಪೆರೆದ ತಾಣವದು. ನನ್ನ ಬರಡು ಬದುಕಿಗೆ ಕಾಯಕಲ್ಪ ಒದಗಿಸಿದ ಸ್ಥಳವದು-ಅಂದರೆ ನಾನು ಈ ಸಮಯದಲ್ಲಿ ಗೃಹಸ್ಥನಾದೆ. ಇಲ್ಲಿ ನನ್ನ ವೃತ್ತಿ ಜೀವನವೂ ಸಹ ವೈವಿಧ್ಯಮಯ ದಿಕ್ಕಿನಲ್ಲಿ ಸಾಗಿತು. ಅನೇಕ ಅನುಭವಗಳು ಇಲ್ಲಿ ನನ್ನದಾದವು.

'ಅನುಭವ ಪರಿ ನೂರ್ವರಿಗೆ ನೂರು ಪರಿ' ಎನ್ನುವ ಡಿವಿಜಿ ಮಾತಿನಂತೆ ನನ್ನ ಉತ್ಸಾಹ ಕೂಡ ಕೆಲವೊಮ್ಮೆ ನನಗೆ ತೊಂದರೆ ಕೊಟ್ಟಿದೆ. ಅರಸೀಕೆರೆಗೆ ಬಂದ ಹೊಸತು. ಅನೇಕ ವಾಣಿಜ್ಯೋದ್ಯಮಿಗಳ ಪರಿಚಯವಾಯಿತು. ಯಥಾ ಪ್ರಕಾರ ಸಹಕಾರ ಸಂಘಗಳು ಚಿರನಿದ್ರೆಯಲ್ಲಿದ್ದವು. ಇವುಗಳ ಜಾಗೃತಿಯ ಜೊತೆಗೆ ರೈತರನ್ನು ಎಚ್ಚರಿಸಬೇಕಾಗಿತ್ತು. ತನ್ನ ಅಜ್ಞಾನದಿಂದಾಗಿ ರೈತ ವರ್ಷದಲ್ಲಾದ ಗೆಯ್ಮೆಯನ್ನು ಇತರರಿಗೆ ಕೊಟ್ಟುಬಿಡುತ್ತಿದ್ದನು. ತಾನು ತನ್ನ ಮನೆಯವರು ಚಿಂದಿ ಉಟ್ಟು ಅಂಬಲಿ ಉಂಡರೂ ಮಂಡಿ ವರ್ತಕರು ಕಾರು ಕೊಳ್ಳುವಂತೆ ಮಾಡುತ್ತಿದ್ದರು. ಇದರ ಬಗ್ಗೆ ನನಗೆ ಯಾವಾಗಲೂ ಚಿಂತೆ. ಇದನ್ನು ಒಂದು ಸಾರಿ ಚಿಕ್ಕ ತಿರುಪತಿಯಲ್ಲಿ ನಡೆದ ಜಾತ್ರೆ ಸಂದರ್ಭದಲ್ಲಿ ಹಂಚಿಕೊಳ್ಳುವ ಸಂದರ್ಭ ಒದಗಿತು. ಅದೊಂದು ಆ ಸುತ್ತಿಗೆ ಬಹುದೊಡ್ಡ ದನಗಳ ಜಾತ್ರೆ. ಉತ್ತಮ ರಾಸುಗಳಿಗೆ ಬಹುಮಾನ ಕೊಡುವ ಸಮಾರಂಭಕ್ಕೆ ಆಗಿನ ಹಾಸನ ಜಿಲ್ಲಾಧಿಕಾರಿ ಶ್ರೀ ರಾಮಯ್ಯನವರು ಆಗಮಿಸಿದ್ದರು. ಕೊನೆಯಲ್ಲಿ ನನಗೊಂದು ಐದು ನಿಮಿಷ ಮಾತನಾಡಲು ಅವಕಾಶ ದೊರೆಯಿತು. ಕಮಿಷನ್ ಏಜೆಂಟ್‌ಗಳಿಂದ ಕಾಯಿಕೊಬ್ಬರಿ ಮಾರುವ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ನಮ್ಮ ಗ್ರಾಮ ಬದುಕಿನ ಉದಾಹರಣೆಯೊಂದಿಗೆ ವಿವರಿಸಿದೆ. ಇದಕ್ಕೆಲ್ಲಾ ರಾಂಬಾಣ-ನಿಯಂತ್ರಣದ ಮಾರುಕಟ್ಟೆ (ರೆಗ್ಯುಲೇಟೆಡ್ ಮಾರ್ಕೆಟ್ಟು) ಮತ್ತು ಕಾಯಿ ಕೊಬ್ಬರಿ ಮಾರಾಟ ಸಹಕಾರ ಸಂಘ. ಇವು ಕೂಡಲೆ ಆಗಬೇಕಾದ್ದನ್ನು ವಿವರಿಸಿದೆ. ಸಾಮಾನ್ಯವಾಗಿ ಚುಚ್ಚು ಮಾತನ್ನಾಡುವ ವಿರೋಧ ಪಕ್ಷದ ಸದಸ್ಯ ಹಾಗೂ ಮೂದಲಿಸಿ ಬರೆಯುವ ಪತ್ರಕರ್ತ ಬಹುಬೇಗ ಪ್ರಸಿದ್ಧರಾಗಿಬಿಡುತ್ತಾರೆ. ವರ್ತಕರು ಕಮಿಷನ್ ಏಜೆಂಟ್‌ರುಗಳನ್ನು ನಾನು ತರಾಟೆಗೆ ತೆಗೆದುಕೊಂಡೆ. ಸರಿ ಅದೇ ಅಭಿಪ್ರಾಯ ಹೊಂದಿದ್ದ ರೈತ ಸಮೂಹಕ್ಕೆ ಹಿಡಿಸಿ, ಅತಿಹೆಚ್ಚು ಚಪ್ಪಾಳೆ ತಟ್ಟುವುದರ ಮೂಲಕ ''ಒನ್ಸ್ ಮೋರ್'' ಅಂತ ಹಲವು ಸಾರಿ ಕೂಗುವುದರ ಮೂಲಕ ನನ್ನ ಕೈಲಿ ಅರ್ಧ ಗಂಟೆಗೂ ಹೆಚ್ಚು ಮಾತನಾಡಿಸಿದರು. ಏಜೆಂಟುಗಳು ವರ್ತಕರು 'ಯಾವನೋ ಮಾತಿನ ಮಲ್ಲ ಬಂದವ್ನೆ' ಎಂದು ಅಸೂಯೆ ತೋರುವಷ್ಟು ಈ ಪ್ರಸಂಗ ಮುಂದುವರೆಯಿತು. ನನ್ನನ್ನು ಕಂಡರೆ ಅವರಿಗೆಲ್ಲ ಅಷ್ಟಕಷ್ಟೇ ಆಯಿತು.

ನಮ್ಮಲ್ಲಿ ಧಾನಿಗಿರುವಷ್ಟು ಮಹತ್ವ ತನ್ನ ಆದಾಯವನ್ನು ಸದುಪಯೋಗ ಪಡಿಸಿಕೊಂಡು ಕೊಂಚ ಸಮಾಜಸೇವೆ ಮಾಡಿದವರಿಗೆ ಬೆಲೆ ಇಲ್ಲ. ಆತನನ್ನು

ಜಿಪುಣ, ಲೋಭಿ, ಕಂಜೂಸ್ ಮುಂತಾಗಿ ಕರೆಯುತ್ತೇವೆ. 'ಕೊಡುವವನ ಧರ್ಮಕ್ಕೆ ಕಡೆಯೇನು ಮೊದಲೇನು?' ಎಂದು ದಾನದ ಶ್ರೇಷ್ಠತೆಯನ್ನು ಹಾಡಿ ಹೊಗಳಿದ್ದಾರೆ. ಆದರೆ ವಿವೇಚನೆ ಇಲ್ಲದೆ ಮಾಡಿದ ದಾನಧರ್ಮವನ್ನು "ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಎರೆವರೆ?" ಎಂದು ಸರ್ವಜ್ಞ ಕವಿ ಟೀಕಿಸುತ್ತಾನೆ. ಕಷ್ಟಪಟ್ಟು ದುಡಿದು ತಾನು ಕೊಡುವ ಹಣ ಸಮರ್ಪಕವಾಗಿ ಖರ್ಚಾಗುತ್ತದೆಂಬ ವಿಶ್ವಾಸವಿಟ್ಟು ದಾನ ಮಾಡಿದರೆ ಅದು ಸಾರ್ಥಕವಾಗುತ್ತದೆ. ಅಂತಹ ಕೆಲಸ ಮಾಡಿರುವವರು ಕೆ.ವೆಂಕಟ ಸ್ವಾಮಿ ಅವರು. ಶ್ರೀಮಂತರು, ನೂರಾರು ವ್ಯವಹಾರಗಳನ್ನು ಸಮರ್ಪಕವಾಗಿ ನಿರ್ವಹಿಸಬಲ್ಲ ಕುಶಲಿಗಳು. ವೆಂಕಟಸ್ವಾಮಿಗಳು ಬಳ್ಳಾರಿ ಜಿಲ್ಲೆಯ ಚಿಕ್ಕಜೋಗಿಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಮಾಡಿರುವುದು ಎಲ್ಲರಿಗೂ ತಿಳಿದ ವಿಷಯ. ಎಷ್ಟು ಚೆನ್ನಾಗಿ ಖರ್ಚು ಮಾಡಬಲ್ಲರೋ ಅಷ್ಟೆ ಚೆನ್ನಾಗಿ ಕೂಡಿಡಲೂ ಬಲ್ಲರು. ಅವರೊಡನಾದ ನನ್ನ ಸ್ವಂತ ಅನುಭವದಿಂದ ಅವರ ವ್ಯವಹಾರ ಜ್ಞಾನ ತಿಳಿಯುವಂತಾಯಿತು. ಆಗ ನಾವು ಸಾಮಾನ್ಯವಾಗಿ "ಇಪ್ಪತ್ತೆಂಟು ರಮ್ಮಿ' ಆಡುತ್ತಿದ್ದೆವು. ಮೂರು ನಾಲ್ಕು ದಿನ ಬೇಲೂರು ಕಡೆ ಸರ್ಕೀಟ್ ಹೋಗಿ ಬಂದ ನಾನು ವೆಂಕಟಸ್ವಾಮಿ ಅವರ ಟೇಬಲ್ಲಿನಲ್ಲಿ ಕುಳಿತೆ. ಕೊನೆಗೆ ಅವರೆ ನನಗೆ ಐದು ಕಾಸು ಕೊಡಬೇಕಾಯಿತು. ಎರಡು ಕಾಸುಕೊಟ್ಟು ಮೂರು ಕಾಸು "ಕ್ವಿಟ್ಸ್" ಎಂದಾಗ ನಾನು 'ಅದೆಲ್ಲಾ ಆಗೊಲ್ಲ, ಇಸ್ಪೀಟ್‌ನಲ್ಲಿ ಸಾಲ ಹೇಳಬಾರದು' ಎಂದೆ. ಅವರು ಸಣ್ಣ ನೋಟ್ ಬುಕ್ ತೆಗೆದು ಐದಾರು ದಿನಗಳ ಹಿಂದೆ ನಾನು ಕೊಡಬೇಕಾಗಿದ್ದ ಇಸ್ಪೀಟ್ ಸಾಲದ ಮೂರು ಕಾಸಿನ ಗುರುತು ತೋರಿಸಿದರು. ಆ ಲೆಕ್ಕಾಚಾರದ ಮೂರ್ತಿಯನ್ನು ಕಂಡು ದಂಗಾದೆ. "ಭಲೆ ಭಲೆ... ವೆಂಕಟಸ್ವಾಮಿ, ಇದಕ್ಕೇ ನೀನು ಲಕ್‌ಪತಿ ಆಗಿರೋದು' ಎಂದು ಮನಸ್ಸಿನಲ್ಲೆ ಅಭಿನಂದಿಸಿದೆ.

ಸಹಕಾರ ಆಂದೋಳನದಲ್ಲಿ ನನಗೆ ದೊರಕಿದ ಶೀಘ್ರ ಜಯ ನೆನೆಸಿಕೊಂಡಾಗ ಆಶ್ಚರ್ಯವಾಗುತ್ತದೆ. ಭಾರತದಲ್ಲೆ ಸಹಕಾರ ಆಂದೋಳನ ತೀವ್ರವಾಗದಿರುವ ಸಂದರ್ಭದಲ್ಲಿ ಪುಟ್ಟಹಳ್ಳಿಯ ಸೊಸೈಟಿಯೊಂದು ತನ್ನ ಗುರಿ ಸಾಧಿಸಿತೆಂದರೆ ನಿಜಕ್ಕೂ ದೊಡ್ಡ ಸಂಗತಿಯಲ್ಲವೆ? ಇದನ್ನು ಬೇಲೂರು ತಾಲ್ಲೂಕಿನ ಚೇಲ್ನಹಳ್ಳಿ ಸಾಧಿಸಿತು. ಈ ಚೇಲ್ನಹಳ್ಳಿ ಸಹಕಾರ ಸಂಘದ ಮುಖ್ಯಸ್ಥರು ವೀರಭದ್ರಪ್ಪ ಎಂಬುವರು, ಇವರ ಗುರು ಸೂರಪ್ಪ ಎಂಬುವರು, ನನಗೆ ತುಂಬಾ ಬೇಕಾದವರು. ಎಪ್ಪತ್ತೈದು ವರ್ಷ ವಯಸ್ಸಿನ ಸೂರಪ್ಪ ಬ್ರಾಹ್ಮಣನಾಗಿದ್ದರೂ ಜಾತಿಗೀತಿನ

ಲೆಕ್ಕಿಸಿದವರಲ್ಲ. ಆ ಕಾಲದಲ್ಲಿ ಬೀದಿಯಲ್ಲೆ ಹೆರಿಗೆ ನೋವುಣ್ಣುತ್ತಿದ್ದ ತಬ್ಬಲಿ ಹರಿಜನ ಹುಡುಗಿಯೊಬ್ಬಳಿಗೆ ತನ್ನ ಮನೆಯಲ್ಲೇ ಬಾಣಂತನ ಮಾಡಿಸಿದವನೀತ. ಇಂಥ ವ್ಯಕ್ತಿಯ ಬಗ್ಗೆ ಆ ಸುತ್ತೆಲ್ಲ ಗೌರವ ಭಾವನೆ ಇತ್ತು. ಸೂರಪ್ಪನೋರು ಒಂದಿನ ನನ್ನನ್ನು ವೀರಭದ್ರಪ್ಪನ ಹತ್ತಿರ ಕರೆದುಕೊಂಡು ಹೋದರು. ಆತ ಅಂಥ ಕಲಿತವನಲ್ಲ, ಆದರೆ ಧಾರಾಳ, ಉತ್ತಮ ಸ್ವಭಾವದ ವ್ಯಕ್ತಿ. ಗುಂಡಾಮಂಡ್ಯಾವುದನ್ನೂ ಅರಿಯದವ. ''ನೀವೇಳಿದ್ಮೇಲೆ ಬಿಡಿ ಸ್ವಾಮಿ. ನಾನು ಇಲ್ಲಾ ಅನ್ನೋದಿಲ್ಲ'' ಎಂದು ಸೂರಪ್ಪನವರಿಗೆ ಆಶ್ವಾಸನೆ ನೀಡಿದ. ಸೆಕ್ರಟರಿಯಾಗಿ ವೀರಭದ್ರಪ್ಪ ಮಾತಿನಂತೆ ನಡೆದುಕೊಂಡು ಕಾಲ ಕಾಲಕ್ಕೆ ಲೆಕ್ಕಪತ್ರವನ್ನು ನನ್ನಿಂದ ತಪಾಸಣೆ ಮಾಡಿಸಿಕೊಂಡು, ಕೊಟ್ಟ ಸಾಲವನ್ನು ಸರಿಯಾಗಿ ವಸೂಲಿ ಮಾಡಿದ. ಆ ಹಳ್ಳಿ ಸೊಸೈಟಿಯನ್ನು ಮುಂದಕ್ಕೆ ತಂದ. ನಾನು ಸಂಘದ ಸರಿಯಾದ ಲೆಕ್ಕ ಪತ್ರಗಳನ್ನು ಆ ವರ್ಷದ ಸಹಕಾರ ಸಮ್ಮೇಳನಕ್ಕೆ ಕಳುಹಿಸಿದೆ. ಚೇಲ್ನಹಳ್ಳಿ ಸಹಕಾರ ಸಂಘವು ಆ ವರ್ಷ ರಾಜ್ಯದ ಅತ್ಯುತ್ತಮ ಹಳ್ಳಿಯ ಲೇವಾದೇವಿ ಸಹಕಾರ ಸಂಘವೆಂದು ಘೋಷಿಸಲ್ಪಟ್ಟು ಗುರಾಣಿಯೊಂದನ್ನು ಬಹುಮಾನವಾಗಿ ಪಡೆಯಿತು. ನನಗೆ ಉಪನಿಷತ್ತಿನ ವಾಕ್ಯವೊಂದು ನೆನಪಿಗೆ ಬರುತ್ತದೆ 'ಕುರ್ವನ್ನೇವೇಹ ಕರ್ಮಾಣಿ ಜಿಜೀವೇಚ್ಚತಂ ಸಮಂ' ಅಂದರೆ ''ಕರ್ಮ ಮಾಡುತ್ತಾ ಇಹದಲ್ಲಿ ನೂರು ವರ್ಷ ಬದುಕೋಣ'' ಅಂತ. ಇಂತಹ ಕೆಲಸ ನಡೆಯುತ್ತಿದ್ದರೆ ನಿಜಕ್ಕೂ ಆಸಕ್ತಿ ಹೆಚ್ಚುವುದಲ್ಲವೆ?

''ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ'' ಎನ್ನುತ್ತಾರೆ ದಾಸರು. ಆದರೆ ಕಷ್ಟಗಳ ಸುರಿಮಳೆಯ ನಡುವೆ ಕೂಡ ಗೊಮ್ಮಟನಂತೆ ನೈತಿಕ ಮೌಲ್ಯಗಳನ್ನು ಇಟ್ಟುಕೊಳ್ಳಲು ಸಾಧ್ಯವೆ? ಇಷ್ಟವಿರಲಿ. ಇಲ್ಲದಿರಲಿ, ಒಂದೊಂದು ಸಾರಿ ತಪ್ಪು ಹೆಜ್ಜೆ ಹಾಕಬೇಕಾಗುತ್ತದೆ. ಅಂತಹ ಸ್ಥಿತಿ ಕೆಂಕೆರೆ ಗ್ರಾಮದ ಮಲ್ಲವ್ವನಿಗೆ ಒದಗಿತು. ನಾನು ಸರ್ಕ್ಯೂಟ್ ಹೋದಾಗ ತಿಪಟೂರು ತಾಲ್ಲೂಕಿನ ಸೆರಗಿನಲ್ಲಿದ್ದ ಕೆಂಕೆರೆ ಗ್ರಾಮಕ್ಕೆ ಭೇಟಿ ಕೊಟ್ಟೆ. ಸೊಸೈಟಿಗೆ ಹೋಗಿ ಲೆಕ್ಕಪತ್ರ ತನಿಖೆ ಮಾಡುತ್ತಿದ್ದಾಗ ಈಕೆಯ ಗಂಡ ಪೌತಿ. ಆತ ತೆಗೆದುಕೊಂಡ ಸಾಲ ಹಾಗೆಯೇ ಉಳಿದಿತ್ತು. ಅದನ್ನು ವಿಚಾರಿಸಲೆಂದು ಆಕೆಯ ಮನೆ ಹತ್ತಿರ ನಾನು ಮತ್ತು ಸೆಕ್ರೆಟರಿ ನರಸಿಂಹಮೂರ್ತಿ ಹೋದೆವು. ನಾನು ಇಂತಹವರೆಂದು ತಿಳಿದ ತಕ್ಷಣ ತನ್ನ ಎರಡು ಮಕ್ಕಳನ್ನು ಕಾಲು ಮೇಲೆ ಹಾಕಿ ''ಸ್ವಾಮಿ, ಬಡವಿ ಗಂಡ ಸತ್ತ ಮುಂಡೆ - ಕಾಪಾಡಿ, ನಿಮ್ಮ ತಂಗಿ ಅಂತ ತಿಳ್ಕೊಳ್ಳಿ-'' ಎಂದು ಗಳಗಳನೆ

ಅತ್ತುಬಿಟ್ಟಳು. ಸಾಲ ತಕ್ಕೊಂಡವರು ಸತ್ತಿದ್ದರೂ ಸೊಸೈಟಿ ಸಾಲ ಹನುಮಂತನ ಬಾಲ ಬೆಳೆದಂತೆ ಬೆಳೆದಿತ್ತು. ಸಮಾಧಾನ ಮಾಡಿ ''ಅಸಲೊಂದನ್ನು ಮಾತ್ರ ತೀರಿಸಮ್ಮ, ಬಡ್ಡಿ ಬೇಕಾದರೆ ಬಿಡೋಣ'' ಎಂದು ಹೇಳಿ ಹಿಂತಿರುಗಿದೆ. ಇದಾದ ಒಂದ ವಾರದ ನಂತರ ನನ್ನ ಮನೆಗೆ ಮಲ್ಲವ್ವ ಒಬ್ಬಳೆ ಬಂದಳು. ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡರೂ ಕಟ್ಟುಮಸ್ತಾದ ಹೆಂಗಸು. ಈಕೆ ಒಬ್ಬಳೆ ಬಂದದ್ದನ್ನು ಕಂಡು ನನಗೆ ಆಶ್ಚರ್ಯವಾದರೂ ಅದನ್ನು ಅದುಮಿಕೊಳ್ಳುತ್ತಾ ''ಯಾಕವ್ವ, ಒಬ್ಬಳೆ ಬಂದೆ, ಅಂದೇ ಹೇಳಿದ್ನಲ್ಲ, ಸ್ವಲ್ಪ ಸ್ವಲ್ಪನೆ ಕಟ್ಟಿ ಅಸಲು ಮಾತ್ರ ತೀರಿಸು'' ಎಂದೆ. ಆಕೆ ಮಾತನಾಡದೆ ಹೆಬ್ಬೆರಳಿನಿಂದ ನೆಲ ಕೆರೆಯುತ್ತಾ ನಿಂತಳು. ಮತ್ತೆ 'ನೀನೊಬ್ಬಳೆ ಏಕೆ ಬಂದೆ. ಅವರೆಲ್ಲಾ ಎಲ್ಲಿ?' ಎಂದು ಕೆದಕಿದೆ, ಆತನಕ ಮೌನವಾಗಿದ್ದ ಆಕೆ ದುಃಖದ ಕೋಡಿ ಬಿರಿಯುವಂತೆ ಅಳುತ್ತಾ ''ಅವರೆಲ್ಲಾ ಅಲ್ಲೇ ನಿಂತವ್ರೆ - ಸಾಹೇಬ್ರ ಹತ್ತಿರ ನೀನೆ ಹೋಗಿ ಕೇಳಿಕೋ ಎಂದ್ರು'' ಅಂದಳು. ನನಗೊಂದು ರೀತಿ ಷಾಕ್ ಹೊಡೆದ ಹಾಗೆ ಆಯ್ತು. ಈತ ಇನ್ನೂ ಮದುವೆಯಾಗದೆ ಇರೋ ಹೈದ ಅಂತ ಆ ತಲೆ ಹಿಡುಕರು ಭಾವಿಸಿದ್ದರೇನೋ; ಆಕೇನ ಸಮಾಧಾನ ಮಾಡಿ 'ನೀನೋಗಮ್ಮ ನಿಧಾನವಾಗಿ ಸಾಲ ತೀರಿಸು. ನಿನ್ನ ಜಮೀನು ಏನೂ ಆಗೋಲ್ಲ'' ಅಂತ ಸಂತೈಸಿ ಕಳುಹಿಸಿದೆ. ಆಕೆ ಆನಂತರ ಅಸಲು ತೀರಿಸಿ-ಬಾಕಿ-ಬೇಬಾಕು ಮಾಡಿಸಿಕೊಂಡಳು.

ನಾನು ಇದೇ ತರಹ ಅರಸೀಕೆರೆ ಸರ್ಕಲ್ಲಿನಲ್ಲಿರುವಾಗ ನಮ್ಮ ಇಲಾಖೆಯ ರಿಜಿಸ್ಟ್ರಾರ್ ಅಬ್ದುಲ್‌ಹಕ್ ಸಾಹೇಬರ ಸವಾರಿ ದಯಮಾಡಿಸಿತು. ಇದು ನನಗೆ ಮೊದಲ ಅನುಭವ. ಬಾಣಾವಾರದಲ್ಲಿ ಅವರು ಒಂದೆರಡು ದಿನ ಕ್ಯಾಂಪ್ ಮಾಡಿದರು. ಕಿತ್ತಳೆ, ದ್ರಾಕ್ಷಿ, ರಸಬಾಳೆ ಮುಂತಾದ್ದನ್ನೆಲ್ಲಾ ಸಪ್ಲೈ ಮಾಡಿ ನನ್ನ ಅತಿಥಿ ಸೇವೆ ಮಾಡಿದೆ. ತಮ್ಮ ಪ್ರೋಗ್ರಾಂನ ಇದ್ದಕ್ಕಿದ್ದ ಹಾಗೆ ಬದಲಾಯಿಸಿ ಹತ್ತು ಹನ್ನೆರಡು ಮೈಲಿ ಫಾಸಲೆ ದೂರದಲ್ಲಿರುವ ಕಣ್ಣಕಟ್ಟೆಗೆ ಹೋಗೋಣ ಅಂತ ರಾತ್ರಿ ಏಳು ಗಂಟೆಗೆ ಹೇಳಿ ಅಲ್ಲಿಗೆ ಸುದ್ದಿ ಕಳಿಸಿ ಎಂದರು. 'ಏನು ಮಾಡೋದು':- ದಟ್ಟವಾದ ಕಾಡು ದಾರಿ - ಹುಲಿ ಚಿರತೆಗಳ ಆವಾಸಸ್ಥಾನವೆಂತ ಸಹಗುಬಾಲು. ರಾತ್ರೀ ಹೊತ್ತು ಹೋಗೋಕೆ ಅಲ್ಲಿರೋರೆಲ್ಲಾ ಹೆದರುತ್ತಿದ್ದರು. ವಿಧಿಯಿಲ್ಲ - ನಾನೇ ಹೋಗೋಣ ಅಂತ ಸೈಕಲ್ ಹೊರಗೆ ಎಳೆದೆ. ಅಸಾಧ್ಯವಾದ ಮಳೆ. ನನಗೂ ಹೋಗಲಿಕ್ಕಾಗಲಿಲ್ಲ. ಕೊನೆಗೆ ಅವರಿಗೆ ಬೆಳಗಿನ ಜಾವವೆ ಸುದ್ದಿ ಮುಟ್ಟಿಸಿದೆ. ಬೆಳಿಗ್ಗೇನೆ ಪ್ರವಾಸ ಹೊರಟೆವು. ರಾತ್ರಿಯ ಮಳೆ ಕಾರಣ ಮಧ್ಯ

ದಾರಿಯಲ್ಲಿ ಮರ ಬಿದ್ದಿದ್ದು, ನಾವು ಪ್ರವಾಸ ಮುಂದುವರಿಸಲಾಗದೆ ಕಾರನ್ನು ಹಿಂದುರಿಗಿಸಿದೆವು. ಬೇಲೂರಿಗೆ ಪ್ರಯಾಣ ಮಾಡಿದೆವು. ಕ್ಯಾಂಪ್ ಸೇರಿದ ಸಾಹೇಬರು ಊಟ ಮಾಡಿ ದೇವಸ್ಥಾನ ನೋಡಲು ಹೊರಟರು. ಕ್ಯಾಂಪ್‌ನ ಗುಮಾಸ್ತ 'ಮಲ್ಲಪ್ಪನೋರೆ ಸಾಹೇಬರಿಗೆ ಪರಮಾಯಿಸಿ ಫ್ಯೂಬರಿ ಕಾಫಿ ಬೀಜ ಬೇಕಂತೆ, ದುಡ್ಡು ಕೊಡ್ತಾರಂತೆ' ಅಂದ. 'ಸರಿ' ಅಂದುಕೊಂಡು ಒಂದು ಸಿಮೆಂಟ್ ಚೀಲ ಕಾಫೀ ಬೀಜಾನ ದುಡ್ಡುಕೊಟ್ಟು ತಂದು ಕೊಟ್ಟೆ. ಸಂಜೆ ಕಾರು ಹೊರಟಿತು, ಗುಮಾಸ್ತೆಗೆ ನಾನು "ಸರ್ ಕಾಫಿ ಬೀಜದ ಬಿಲ್ಲು" ಎಂದು ಕೈಗೆ ಕೊಟ್ಟರೆ 'ಥ್ಯಾಂಕ್ಸು' ಎಂದು ಹೇಳುತ್ತಾ ಬಿಲ್ಲುಕೊಟ್ಟ ನನ್ನ ಕೈ ಕುಲುಕಿದ ಆ ಮಹಾರಾಯ; ಬಿಲ್ಲನ್ನು ಜೇಬಿಗೆ ಇಳಿಬಿಟ್ಟ. ಆ ಬಿಲ್ಲು ಆಗಿನ ಕಾಲಕ್ಕೆ 25 ರೂ.ಗಳು ನನ್ನ ಸಂಬಳ 40 ರೂ.ಗಳು. ಪ್ರಾಮಾಣಿಕ ವ್ಯಕ್ತಿಯೊಬ್ಬ ಈ ಮೂಗುಬ್ಬಸನ ಹೇಗೆ ಅನುಭವಿಸುತ್ತಾನೆ? ನಮ್ಮ ಮಂತ್ರಿಗಳು, ಜಿಲ್ಲೆಯ ಅನೇಕ ಅಧಿಕಾರಿಗಳು, ತಾಲ್ಲೂಕಿಗೆ, ಹೋಬಳಿಗೆ, ಗ್ರಾಮಕ್ಕೆ ಹೋಗುತ್ತಿರುತ್ತಾರೆ. ಪಗಡದಸ್ತಾಗಿ ಅಲ್ಲಿ ಹೊಡೆದು ಬರುತ್ತಾರೆ. ತಹಶೀಲ್ದಾರರು, ರೆವಿನ್ಯೂ ಇನ್ಸ್‌ಪೆಕ್ಟರುಗಳು, ವಿಲೇಜ್ ಅಕೌಂಟೆಂಟ್‌ರುಗಳು ಇದನ್ನೆಲ್ಲಾ ಹೇಗೆ ಮಾಡುತ್ತಾರೆಂದು ಯೋಚಿಸುವುದಿಲ್ಲ. ತಾನು ತಿಂದು ನಮ್ಮ ಹೊಟ್ಟೆಗೆ ಹೇಗೆ ಹಾಕುತ್ತಾರೆಂಬ ಕಲ್ಪನೆ ಇರುವುದಿಲ್ಲ. ಆದರೂ ಇವರು ದೊಡ್ಡ ಆದರ್ಶವನ್ನ ಹೇಳ್ತಾರೆ. ನಾನು ಎರಡು ತಿಂಗಳು ಸಮಯ ತಗೊಂಡು ಕ್ಯಾಂಪ್ ಖರ್ಚು ವೆಚ್ಚದ ಆ ಸಾಲಾನ ತೀರಿಸಿದೆ ಅನ್ನಿ.

ಈ ಮಧ್ಯ ಒಬ್ಬನೇ ಅಣ್ಣ ತೀರಿ ಹೋದನೆಂಬ ವಿಚಾರ ಹೊತ್ತ ಟೆಲಿಗ್ರಾಂ ಬಂತು. ಉಟ್ಟ ಪಂಚೆಯಲ್ಲೇ ಟ್ಯಾಕ್ಸಿ ಮಾಡಿಕೊಂಡು ಹೊರಟೆ. ಮಧ್ಯ ದಾರಿಯಲ್ಲೆ ಟ್ಯಾಕ್ಸಿ ಕೆಟ್ಟು ಕಂಗಾಲಾದಾಗ ಆ ಮಾರ್ಗ ಬೆಂಗಳೂರಿಗೆ ಹೋಗುತ್ತಿದ್ದ ಆ ಕಾಲದ ಹಿರಿಯ ರಾಜಕಾರಣಿ ವಿ.ವೆಂಕಂಟಪ್ಪನವರು ತಮ್ಮ ಕಾರಿನಲ್ಲಿ ನನ್ನನ್ನು ಕೂರಿಸಿಕೊಂಡು ತುಮಕೂರಿಗೆ ತಂದು ಬಿಟ್ಟರು. ಇದ್ದ ಒಬ್ಬ ಅಣ್ಣನನ್ನೂ ನುಂಗಿಕೊಂಡ ವಿಧಿಯನ್ನು ಹಳಿಯುತ್ತಾ ಅಕ್ಕನ ಮನೆಗೆ ಹೋದೆ. ಗತಿಸಿದ ಅಣ್ಣನಿಗೆ ಮಕ್ಕಳಿರಲಿಲ್ಲ. ನನಗೂ ಆಗ ಮುವತ್ತು, ಮೂವತ್ತೆರಡು ವರ್ಷ ಆಗಿತ್ತು, ನನ್ನ ತೌರಿನ ಕುಡಿ ಹೀಗೆ ಮುರುಟಿ ಹೋಗ್ತದಲ್ಲಾ ಎಂಬ ಪರಿತಾಪ ನನ್ನ ಅಕ್ಕನದು "ಮದುವೆ ಮಾಡಿಕೊ ಮಗ" ಎಂದು ದುಂಬಾಲು ಬಿದ್ದಳು. ಆ ಕಾಲದಲ್ಲಿ ನನ್ನಾಗೆ ಬಿ.ಎ. ಪಾಸು ಮಾಡಿದವರು ಅಪರೂಪ, ಅವರಿಗೆ ಹೆಚ್ಚು

ಮರ್ಯಾದೆ. ಇಂಥ ಸಂದರ್ಭದಲ್ಲಿ ಇಬ್ಬರು ಹಿತೈಷಿಗಳು ನನ್ನ ಮದುವೆ ಜವಾಬ್ದಾರಿ ಹೊತ್ತರು. ನನ್ನಕ್ಕ - ನರಸಯ್ಯ. ನನಗೆ ಸಣ್ಣ ವಯಸ್ಸಿನಿಂದ ಆರ್ಥಿಕ ಸಹಾಯ ಮಾಡಿದ ನರಸಯ್ಯನವರು ತನ್ನ ಅಣ್ಣನ ಮಗಳನ್ನು ಕೊಡಿಸಲು ನಿಶ್ಚಯಿಸಿದರು. ನಮ್ಮಕ್ಕನೇ ಮುಂದಾಗಿ ಅವರ ಮನೆಗೆ ಹಿರಿಯರನ್ನು ಕಳುಹಿಸಿ ''ನನ್ನ ತಮ್ಮನಿಗೆ ಹೆಣ್ಣು ಕೊಡಿ'' ಅಂದಳು. ಕುಟುಂಬಗಳ ನಡುವಿನ ಹಳೆಯ ವೈರ ಕೆಲಸ ಮಾಡಿರಬೇಕು. ಮತ್ತೊಂದು ವಾರ ನಮ್ಮಕ್ಕನ ಮನೆಗೆ ಬಂದರೆ ಆಕೆಯು 'ಮಗ - ಅವರ ಹುಡುಗೀನೆ ನೀನು ಮದುವೆಯಾಗು - ಕಂಡಿದ್ದು, ಕೇಳಿದ್ದು - ಸಂಬಂಧ ಬೇರೆ ನಮಗೆ ಸರಿಹೋಗ್ತದೆ - ನಾನು ಮದುವೆಗೆ ಬರದಿದ್ದರೆ ಅವರ ಹೆಣ್ಣು ಕೊಡ್ತಾರಂತೆ. ಹಂಗಂತ ಈಗ ಮುದ್ದಪ್ಪ ಬಂದು ಹೇಳೋದ' ಎಂದಳು. ನನ್ನನ್ನು ಚಿಕ್ಕಂದಿನಿಂದ ಸಾಕಿ, ಸಲಹಿದ ನನ್ನಕ್ಕನೇ ಮದುವೆಗೆ ಬಾರದೆ ಹೋದರೆ ನಾನ್ಯಾಕೆ ಮದುವೆ ಮಾಡಿಕೋಬೇಕು ಎಂದು 'ನೀನು ಸುಮ್ಮಿರು ಹೆಣ್ಣುಕೊಡೋರು ಅವರಲ್ಲದಿದ್ದರೆ ಇನ್ನೊಬ್ಬರಾಗ್ತಾರೆ' ಎಂದೆ. ನೆಮ್ಮದಿಯಿಂದ ಅರಸೀಕೆರೆ ಸೇರಿದರೂ ಬಿಡದೆ ನಮ್ಮಕ್ಕ ಪುನಃ ನನ್ನನ್ನ ಕರಸಿಕೊಂಡಳು. ತುಮಕೂರಿಗೆ ಒಂಬತ್ತು ಮೈಲಿ ದೂರದಲ್ಲಿರುವ ದೊಡ್ಡೇರಿ ಎಂಬ ಹಳ್ಳಿಯಿಂದ ಒಂದೇ ತಾಯಿಯ ಇಬ್ಬರು ಹೆಣ್ಣುಮಕ್ಕಳನ್ನ ಕರೆಸಿ ನೀನು ಯಾರನ್ನಾದರೂ ಇಷ್ಟಪಡು ಎಂದಳು. ಕೊನೆಗೂ ಹಿರಿಯಾಕೆ ಹದಿನಾರು ವರ್ಷದ ರಂಗಮ್ಮನೇ ಇರಲೆಂದೆ. ನಮ್ಮಕ್ಕನ ಸಂತೋಷಕ್ಕೆ ಪಾರವೇ ಇಲ್ಲ. ಬಹುಶಃ ಲೋಕದ ಹೆಣ್ಣುಮಕ್ಕಳು ಸುಖ ಕಾಣೋದು ತೌರುಮನೆಯಲ್ಲಿ ಹಾಲುಕ್ಕಿದಾಗ ಎಂದುಕೊಳ್ಳುತ್ತೇನೆ. ನನಗೆ ಸಕಾಲದಲ್ಲಿ ಹಣ ಕೊಟ್ಟು ವಿದ್ಯಾವಂತನಾಗಿ ಮಾಡಿ ಈ ಉತ್ತಮ ಸ್ಥಿತಿಗೆ ಕಾರಣರಾದ ನರಸಯ್ಯನವರ ಮಾತನ್ನು ನೆರವೇರಿಸಲಾಗಲಿಲ್ಲ ಎಂಬ ಕೊರಗು ನನ್ನಲ್ಲಿ ಉಳಿದೇ ಉಳೀತು. ಮದುವೆ ಇನ್ನೊಂದೆರಡು ತಿಂಗಳು ಇರಬೇಕಾದರೆ ನಮ್ಮಕ್ಕ ಅರಸೀಕೆರೆಗೆ ಬಂದಳು. ಆಗ ನನಗೆ ಆಗಾಗ ಒಂದೊಂದು ಸಿಗರೇಟ್ ದಂಹೊಡೆವ ಚಟ ಇತ್ತು. ಬೆಳಿಗ್ಗೆ ಏನೋ ಮಾತನಾಡುತ್ತ ಸಿಗರೇಟ್ ಹಚ್ಚಿದೆ. ಅದನ್ನು ನೋಡಿದ ನಮ್ಮಕ್ಕ ''ಏನಪ್ಪ ನನ್ನ ಮುಂದೆ ಹಿಂಗೆ ಸಿಗರೇಟ್ ಹತ್ತಿಸೋದ'' ಅಂದು ಬಿಟ್ಟಳು. ನನಗೆ ಕಪಾಳಕ್ಕೆ ಹೊಡೆದ ಹಾಗಾಯ್ತು. ನನ್ನ ಜಬರೆಲ್ಲಾ ಬರ್‍ರನೆ ಇಳಿದು ಹೋಯ್ತು. ಆ ಹೊತ್ತಿಗಾಗಲೇ ಆಕೆಗೆ 57-58 ವರ್ಷ. ಹೆತ್ತತಾಯಿ ಸತ್ತಿದ್ರೂನ ನನ್ನ ತಬ್ಬಲಿ ಮಾಡದೆ ಕಾಪಾಡಿದ ಆ ಮಹಾತಾಯಿ ಹತ್ರ ನನ್ನ ಅಲ್ಪತನ ತೋರಿಸಿಕೊಂಡೆನಲ್ಲ ಎಂಬ ಕೊರಗು ನನ್ನಲ್ಲಿ ಉಳಿಯಿತು.

ಮದುವೆ ಸಮೀಪಿಸಿತು. ನಮ್ಮಲ್ಲಿ ಮದುವೆ ಮುಂಚೆ ಹೆಣ್ಣು ಗಂಡು ಯಾವಾವ ಕಂಕಣಕ್ಕೆ ಸೇರಿದವರು. ಹತ್ತಿ ಕಂಕಣದವರೆ, ಉಣ್ಣೆ ಕಂಕಣದವರೆ - ಯಾವ ಒಳಪಂಗಡಕ್ಕೆ ಸೇರಿದವರು. ಆನೆ ಕುರುಬರೆ - ಜಾಣ ಕುರುಬರೇ ಗೌಡಕುರುಬರೇ ಅಥವಾ ಇಪ್ಪತ್ತೈದು ಮೂವತ್ತು ಇತರ ಪಣಕ್ಕೆ ಸೇರಿದ ಕುರುಬರೆ ಎಂಬ ಜಾತಿ ಕಟ್ಟು ಸೂತ್ರಗಳನ್ನೆಲ್ಲಾ ನೋಡುತ್ತಾರೆ. ನಮ್ಮಕ್ಕ ''ಈ ದೊಡ್ಡಾಕೆ ರಂಗಮ್ಮನನ್ನು ಮದುವೆಯಾಗಪ್ಪ'' ಎಂದಾಗ ಆ ಜಾತಿ ಸೂತ್ರದ ಕಟ್ಟು ಪಾಡುಗಳೆಲ್ಲ ಗಾಳಿಗೆ ತೂರಿ ಹೋದುವು. ಲಗ್ನ ಕೂಡ ಕುಲದ ಕಟ್ಟುಪಾಡುಗಳಿಲ್ಲದೆ ಸರಳವಾಗಿ 30-12-39ರಂದು ಜರುಗಿತು. ನಮ್ಮಕ್ಕನ ಮಧ್ಯಸ್ಥಿಕೆಯ ಮೂಲಕ ನಾನು ಗೃಹಸ್ಥನಾದರೂ ಅದರ ಪೂರ್ಣ ಸವಿಯನ್ನನುಭವಿಸಿದ್ದೇನೆ. ನನ್ನಾಕೆ ಜಿ.ಎಸ್.ಶಿವರುದ್ರಪ್ಪನವರು ಹೇಳಿದಂತೆ ''ಮನೆ ಮನೆಯಲಿ ದೀಪ ಮೂಡಿಸಿ - ಹೊತ್ತಿಗೆ ಹೊತ್ತಿಗೆ ಅನ್ನ ಉಣಿಸಿದ್ದಾಳೆ''. ನಮ್ಮ ದಾಂಪತ್ಯದ ಬದುಕು ಮಿಂಚಿನಂತಲ್ಲದೆ 'ನಂದಾದೀಪ'ದಂತಾಗಿದ್ದು ನನ್ನ ಪುಣ್ಯವೆಂದೇ ಹೇಳಬೇಕು.

ಈಗ ನನ್ನ ಹಿಂದಿನ ದಾಂಪತ್ಯ ಜೀವನ ನೆನದಾಗೆಲ್ಲಾ ಆಶ್ಚರ್ಯವಾಗುತ್ತದೆ. ನಮ್ಮಿಬ್ಬರ ಮನೋಭಾವದಲ್ಲಿ ಇಷ್ಟೊಂದು ವ್ಯತ್ಯಾಸವಿದ್ದರೂ ಬದುಕಿನ ರಥ ಸುಸೂತ್ರವಾಗಿ ಹರಿದಿದೆ. ಆದರೂ ಬಿ.ಎ. ಪಾಸು ಮಾಡಿದ ಹುಡುಗರಿಗಿರುವಂತೆ ನನಗೂ ಭಾವಿಪತ್ನಿಯ ಬಗ್ಗೆ ಏನೆಲ್ಲಾ ಕಲ್ಪನೆಗಳಿದ್ದವು. ಅವೆಲ್ಲ ಮರಳಿನ ಗೋಪುರದಂತೆ ಕುಸಿದು ನಿರಕ್ಷರಕುಕ್ಷಿಯನ್ನು ನನ್ನ ಕೊರಳಿಗೆ ಕಟ್ಟಿತು ಆ ವಿಧಿ. ಆದರೆ ನಾನು ಸೋಲೊಪ್ಪುವನೆ? ಛಾಲೆಂಜ್ ತಕೊಂಡೆ. ಎಲ್ಲರಿಗೂ ಮೇಷ್ಟು ಆಗುವ ಪುಣ್ಯ ನನ್ನ ತಾಯ ಹರಕೆಯಂತೆ ನನ್ನ ಹಣೇಲಿ ಬರೀಲಿಲ್ಲ. ನನ್ನ ಹೆಂಡ್ತಿಗೆ ನಾನ್ಯಾಕೆ ಮೇಷ್ಟು ಆಗ ಬಾರದು ಅಂದುಕೊಂಡು ಬೆಂಗಳೂರಿನಲ್ಲಿ ಸಂಸಾರ ಹೂಡಿದ ಹೊಸತರಲ್ಲಿ ಸ್ಲೇಟು ಪುಸ್ತಕ ತಂದು ಪ್ರಾರಂಭಸಿದೆ. ಆಕೆ ಕೂಡ ಕಷ್ಟಪಟ್ಟು ಒಂದೆರಡು ದಿನ ನನ್ನ ಜೊತೆ ಕೂತು ಅಕ್ಷರ ತಿದ್ದಲು ನೋಡಿದಳು. ಆದರೆ ಬಹಳ ದಿನ ಸಾಗಲಿಲ್ಲ. 'ಹೋಗ್ರಿ ತಿದ್ದೋದು ಬರೆಯೋದು ನಿಮಗೆ ಇರಲಿ. ನಾನ್ಯಾವ ದಿವಾನಗಿರಿ ಮಾಡಬೇಕು.... ಮುಸುರೆ ತಿಕ್ಕಿದರೆ ಸಾಕು' ಎಂದು ಅಡುಗೆ ಮನೆಗೆ ಹೋದಳು. ನನ್ನ ಹಣೆಬರ, ಅವ್ವನ ಆಸೆಯಂತೆ ಮೇಷ್ಟು ಆಗಲು ಈ ಲೊಕ ಬಿಡಲಿಲ್ಲ. ಹೋಗ್ಲಿ ಹೆಂಡತಿ ಕರುಣೆಸ್ತಾಳೆ ಅಂದ್ರೆ ಅಲ್ಲೂ ಅದೃಷ್ಟ ಡೊಂಕು ಆಯ್ತು. ಆದ್ರೆ ಎರಡು ವಿಷಯದಲ್ಲಿ ನಾನು ಗೆದ್ದೆನೆಂದು ಹೇಳಬೇಕು.

ಒಂದು 'ರಂಗಮ್ಮ ಮಲ್ಲಪ್ಪ' ಎಂದು ಸೊಟ್ಟಗೊ ನೆಟ್ಟಗೊ ರುಜ ಮಾಡೋದನ್ನ, ಗಡಿಯಾರದಲ್ಲಿ ಗಂಟೆ ನೋಡೋದನ್ನ ಕಲಿಸಿದ್ದು.

ಇಷ್ಟಾದರೂ ನನ್ನ ಹೆಂಡತಿಗೆ ನಾಗರಿಕತೆ ಕಲಿಸೋ ಪ್ರಯತ್ನ ಬಿಡಲಿಲ್ಲ, ಆಗಾಗ್ಗೆ ಪುರಾಣದ ಕಥೆಗಳನ್ನು ಹೇಳೋದು. ಆಕೆಗೆ ಬೇಡದಿದ್ರೂ ಬೆಂಗಳೂರಿನ ವಿಚಾರ ಹೇಳೋದನ್ನ ಮೊದಲು ಮಾಡಿ ಹಳ್ಳಿಯಲ್ಲಿದದ್ದಕ್ಕಿಂತ ಬೇರೆ ಮಾಡಲು ಪ್ರಯತ್ನಿಸಿದೆ. ಹಾಗೆ ಒಂದು ದಿನ 'ಸತಿ ಸಾವಿತ್ರಿ' ಕಥೆ ಹೇಳ್ತಿರಬೇಕಾದ್ರೆ 'ನೀವೂ ಸಾಕು - ನಿಮ್ಮ ಕತೇನೂ ಸಾಕು, ನಿಮ್ಮ ಮುಂದೆ ಬಂದು ಕುಂತ್ರೆ ಅಲ್ಲಿ ಒಳಗೆ ಕೆಲಸ ಮಾಡುವವರ್‍ಯಾರು?' ಅಂತ ಎದ್ದು ಹೋದಳು. ಈಕೇನ ಮೇಲೆತ್ತಬೇಕು ಅಂತ ನಾನು ಪ್ರಯತ್ನಿಸಿದರೂ ಈಕೆ ಸಹಕರಿಸುವುದಿಲ್ಲ ಎಂಬ ಪುರುಷ ಅಹಂಕಾರ ನನ್ನಲ್ಲಿ ತಲೆ ಎತ್ತಿತು. ಚೆನ್ನಾಗಿ ಆಕೆ ಮೇಲೆ ರೇಗಿ ಮನೆ ಬಿಟ್ಟು ಹೊರಟೆ. ಚಾಮರಾಜಪೇಟೆ ಮೂಲಕ ಮೈಸೂರುರಸ್ತೆಗೆ ಬಂದು ಗೊತ್ತು ಗುರಿ ಇಲ್ಲದವನಂತೆ ಎಲ್ಲಿಗೋ ಹೋಗ್ತಿದ್ದೆ. ಮನಸ್ಸು ಸ್ನೇಹಿತರ ಜೋಡಿಗಳನ್ನು ತೂಗಿ ನೋಡುತ್ತಿತ್ತು. ಅಷ್ಟು ಹೊತ್ತಿಗೆ ಸರಿಯಾಗಿ ಮೈಸೂರಿಗೆ ಹೋಗೋ ಮಹಾರಾಜರ ಕಾರುಗಳ ಮೆರವಣಿಗೆ ಬಂತು. ಕಾರ್ ಕಾರಿನಲ್ಲಿರುವವರೆಲ್ಲರೂ ಅಳ್ತಿದ್ದರು. ವಿಚಾರಿಸಿದರೆ ನಾಲ್ವಡಿ ಕೃಷ್ಣರಾಜಒಡೆಯರು ಆ ದಿನವಷ್ಟೇ ಸತ್ತದ್ದು ಅವರ ಶವನ್ನು ಹೊತ್ತು ಮುಂಚೂಣಿಯ ದೊಡ್ಡ ಕಾರು ಮುಂದೆ ಸಾಗುತ್ತಿತ್ತು. ಯಾವತ್ತೇನು ಶಾಶ್ವತವೆಂತ ನಿಟ್ಟುಸುರು ಬಿಟ್ಟೆ. ಮೊದಲೇ ಬೇಸರದಿಂದ ನಾನು ಆ ದುಃಖದ ವಾತಾವರಣದಲ್ಲಿ ಮತ್ತಷ್ಟು ಕುಗ್ಗಿ ಹೋದೆ. ಕೃಷ್ಣರಾಜಒಡೆಯರವರ ಹಿರಿಮೆ ನಾನು ವಿದ್ಯಾರ್ಥಿ ದೆಸೆಯಿಂದ ಬಲ್ಲವನು. ಆತ ಕರ್ಮಯೋಗಿ, ಹಿಂದುಳಿದವರ ಹಾಗೂ ಬಡವರ ಬಗ್ಗೆ ಅವರಿಗೆ ನಿರ್ವ್ಯಾಜ ಪ್ರೇಮ. ಅವರು ಉತ್ತಮ ಸಾಂಸ್ಕೃತಿಕ ಅಭಿರುಚಿ ಉಳ್ಳವರು. ಯಾವುದೊ ಕ್ಷುಲ್ಲಕ ಕಾರಣದಿಂದಾಗಿ ಸಾಂಸಾರಿಕ ಸುಖವನ್ನು ತ್ಯಜಿಸಿ ರಾಜರ್ಷಿಯಾದವರು. ಅವರ ಬದುಕು ನನ್ನ ಕಣ್ತೆರೆಸಿತು. ನೆಮ್ಮದಿಯ ಬದುಕಿಗೆ ಅಪೂರ್ವಜ್ಞಾನ ಬೇಡ. ಸಹೃದಯತೆ ಸಾಕು. ಅದು ನನ್ನಾಕೆಯ ಹತ್ತಿರ ಬಹಳಷ್ಟಿದೆ ಎಂದು ಭಾವಿಸಿ ಗೊತ್ತು ಗುರಿಯಿಲ್ಲದೆ ಎಲ್ಲಿಗೊ ಹೊರಟ ನಾನು ಮನೆಗೆ ಹಿಂದಿರುಗಿದೆ. ಬಾಗಿಲ ಬಳಿ ಕಣ್ಣೀರು ಸುರಿಸುತ್ತಾ ನಿಂತಿದ್ದ ನನ್ನಾಕೆಯನ್ನು ಸಮಾಧಾನ ಮಾಡಿ ಒಳಗೆ ಕರೆದುಕೊಂಡು ಹೋದೆ. ಕೋಳಿ ತನ್ನ ಮರಿಗಳನ್ನೆಲ್ಲಾ ಅವುಚಿಕೊಂಡು ರಕ್ಷಿಸಿ ಬೆಳಸುವಂತೆ ನನ್ನಾಕೆ ನನ್ನನ್ನೂ ಮತ್ತು ನನ್ನ ಮಕ್ಕಳನ್ನ ಕಾಪಾಡಿದ್ದಾಳೆ. ಹೆಂಡ

ಕುಡುಕ ರತ್ನ ಹೇಳುವಂತೆ. ''ಕಷ್ಟ ಸುಕ ಏನ್ ಬಂದ್ರೂನು ನಿಂಗೆ ನಾನೆ ನಂಗೆ ನೀನೆ ಮುಳುಗೋನ್ ಬೆನ್ನಿನ ಬೆಂಡಿದ್ದಂಗೆ''

## ಚನ್ನರಾಯಪಟ್ಟಣ

ಬೆಂಗಳೂರಿನಲ್ಲಿ ಹೆಚ್ಚು ದಿನವಿರದೆ ಚನ್ನರಾಯಪಟ್ಟನಕ್ಕೆ ಬಂದೆ. ಇಲ್ಲಿ ಬಾಡಿಗೆ ಮನೆ ಸಿಕ್ಕೋದೆ ಕಷ್ಟ. ಬ್ರಾಹ್ಮಣ ಕೇರಿಯಲ್ಲಿ ಒಂದು ಹಳೆ ಮನೆ ಅನೇಕ ದಿನಗಳ ನಂತರ ಸಿಕ್ಕಿತು. ಹೇಗೋ ನಾನಂತು ಅಲ್ಲಿ ಬಿಡಾರ ಮಾಡಿದೆ. ಚನ್ನರಾಯಪಟ್ಟಣ ಈಗಿನಷ್ಟು ಆಗ ಮುಂದುವರೆದಿರಲಿಲ್ಲ. ಆದರೂ ಪಶುಸಂಗೋಪಣಾ ಇಲಾಖೆಯ ಡಾ|| ರುದ್ರಯ್ಯ. ಜಮೀನು ಅಡಮಾನ್ ಬ್ಯಾಂಕಿನ ಯಂ.ತಮ್ಮಯ್ಯ ಸರ್ಕಾರಿ ಆಸ್ಪತ್ರೆಯ ಡಾ|| ಆರ್.ಶ್ರೀನಿವಾಸ ಅಯ್ಯಂಗಾರ್ ಅವರುಗಳ ಚಟುವಟಿಕೆಯ ಸ್ಥಳವಾಗಿತ್ತು. ಕರ್ನಾಟಕ ಸಂಘವೊಂದು ಸ್ಥಾಪನೆಯಾಗಿದ್ದು, ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ಜರುಗುತ್ತಿದ್ದವು. ಇದರ ಆಶ್ರಯದಲ್ಲಿಯೇ ಒಂದು ಸಾರಿ ಕನ್ನಡದ ಕಣ್ವರಾದ ಬಿ.ಎಂ.ಶ್ರೀಯವರು ಕರ್ನಾಟಕದ ಏಕೀಕರಣದ ಅವಶ್ಯಕತೆಯನ್ನು ಕುರಿತು ಮಾತನಾಡಿದರು. ಅಷ್ಟು ಹೊತ್ತಿಗಾಗಲೆ ಶ್ರೀ ಅವರು ತಮ್ಮ ಭಾಷಣಗಳಿಂದಾಗಿ ನಾಡಿನಲ್ಲೆಲ್ಲಾ ಪ್ರಸಿದ್ಧರಾಗಿದ್ದರು. ಅಂದು ಮೂರು ಗಂಟೆ ಕಾಲ ಮಾತನಾಡಿದ ಶ್ರೀ ಅವರು ಚನ್ನರಾಯಪಟ್ಟಣದ ಜನದ ಹೃದಯವನ್ನು ಗೆದ್ದರು. ಅಂತಹ ಹಳ್ಳಿ ಮಕ್ಕಳಲ್ಲಿಯೂ ಭಾಷಾಭಿಮಾನ ಮೂಡಿತೆಂದರೆ ಶ್ರೀ ಅವರು ಭಾಷಣ ಹೇಗಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆಗ ಚನ್ನರಾಯಪಟ್ಟಣದಲ್ಲಿ 31 ಸಹಕಾರ ಸಂಘಗಳಿದ್ದವು, ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದ ಚಂದ್ರಮೌಳೇಶ್ವರ ಸಂಘಕ್ಕೆ ಸ್ವಂತ ಕಟ್ಟಡವಿತ್ತು. ವೆಂಕಟರಮಣಯ್ಯ ಅದರ ಕಾರ್ಯದರ್ಶಿ. ಚೆನ್ನಾಗಿ ಕೆಲಸವನ್ನೇನೋ ಮಾಡುತ್ತಿದ್ದರು. ಮಧ್ಯಮ ವರ್ಗದವರಿಗೆ ಒಂದಿಷ್ಟು ಹಣಕಾಸಿನ ಸೌಲಭ್ಯನ ಈ ಸಂಘದವರು ಕೊಡುತ್ತಿದ್ದರು. ಆದರೆ ಕಡು ಬಡವರಿಗೆ ಏನೂ ಮಾಡುತ್ತಿರಲಿಲ್ಲವೆಂದು ಹೇಳಬೇಕು. ನಾನು ಕೆಲವು ತಿಂಗಳುಗಳ ಕಾಲ ತಾಲ್ಲೂಕನ್ನೆಲ್ಲಾ ಸುತ್ತಿ, ಮಲಗಿದ ಸಂಘಗಳನ್ನು ಜಾಗೃತಗೊಳಿಸಿ, ವಾರ್ಷಿಕ ಮೀಟಿಂಗ್‌ಗಳನ್ನು ವ್ಯವಸ್ಥೆ ಮಾಡಿದೆ. ನನ್ನ ಉದ್ಯೋಗವಲ್ಲದಿದ್ದರೂ ಹಳ್ಳಿಗಳಲ್ಲಿ ಒಂದಿಷ್ಟು ಅರಿವು ಮೂಡಿಸೋಣ ಅಂತ ಪ್ರಯತ್ನ ಸಹ ಮಾಡ್ತಿದ್ದೆ. ಅಂತಹ ಸಂದರ್ಭದಲ್ಲಿ ಆದ ಒಂದು ಅನುಭವ. ನುಗ್ಗೇಹಳ್ಳಿಗೆ 3-4 ಮೈಲಿನ

ದೂರದಲ್ಲಿರುವ ಅಗ್ರಹಾರ ಎಂಬ ಗ್ರಾಮಕ್ಕೆ ಭೇಟಿಕೊಟ್ಟೆ. ಅಲ್ಲಿನ ಪ್ರೈಮರಿ ಸ್ಕೂಲಿನ ಮುಖ್ಯೋಪಾಧ್ಯಾಯರೆ ನಮ್ಮ ಸಂಘದ ಸೆಕ್ರೆಟರಿ, ಸುಮಾರು 30-31 ಜನ ಅದರ ಮೆಂಬರುಗಳು, ಊರನೋರನ್ನೆಲ್ಲ ಕರೆಸಿದ್ದರು. ಅವರೆಲ್ಲಾ ಸಂಘಕ್ಕೆ ಮೆಂಬರ್ ಆದರೆ ಎಷ್ಟೋ ಪ್ರಯೋಜನ ಅಂತ ತಿಳಿಯ ಹೇಳಿದೆ. ಬಹಳಷ್ಟು ಜನ ಒಪ್ಪಿಕೊಂಡರು. ಮೀಟಿಂಗು ಮುಗಿಯಿತು. ಹಾಗೆ ಕಿಟಕಿಯಿಂದ ನೋಡಿದರೆ ಒಳ್ಳೆಯ ಕಟ್ಟಡ ಕಾಣಿಸ್ತಿತ್ತು. ಗ್ರಾಮಸ್ಥರನ್ನ, ''ಅದ್ಯಾವ ಕಟ್ಟಡ'' ಅಂತ ವಿಚಾರಿಸಿದೆ. ಅದು 'ಮಾರಮ್ಮನ ಗುಡಿ ಬುದ್ಧಿ' ಎಂದರು. ನಾನು ಕುಳಿತಿದ್ದ ಸ್ಕೂಲು ಶಿಥಿಲವಾಗಿ ಮುರಿದು ಬೀಳೋ ಸ್ಥಿತಿಯಲ್ಲಿತ್ತು. ನನಗೊಂದು ತರಹ ಸ್ಫೂರ್ತಿ ಬಂತು, ನಮ್ಮ ಸಂಘದ ಮಾತನ್ನು ಮರೆತು. ''ನೋಡಿ ಜ್ಞಾನವೇ ಜೀವನ, ಅಜ್ಞಾನವೇ ಮರಣ'' ಅಂತ ಹಿರಿಯರು ಹೇಳ್ತಾರೆ - ದೇವರ ಗುಡಿ ಕಟ್ಟದಿದ್ರೆ ಚಿಂತೆಯಿಲ್ಲ, ಸ್ಕೂಲ್ ಕಟ್ಟಿ. ಇವು ಜ್ಞಾನ ದೇಗುಲಗಳು. ನಿಮ್ಮ ಮಕ್ಕಳು ಮರಿಗಳೆಲ್ಲಾ ಉದ್ಧಾರವಾಗ್ತವೆ,'' ಅಂತ ಕೊರೆತ ಶುರು ಮಾಡಿದೆ. ಊರಿನ ಪಟೇಲ ಎದ್ದು, ''ಸ್ವಾಮಿ, ತಪ್ಪಾಯ್ತು ಅನ್ನಿ, ಮಾರಮ್ಮನ ಸವಾಸ ಒಳ್ಳೇದಲ್ಲ. ರಾತ್ರೀನೆ ವಾಂತಿಭೇದಿ ಶುರುವಾಗ್ತದೆ'' ಅಂದ. ಎಲ್ಲರೂ ತಲೆಗೊಂದು ಮಾತನಾಡಿ ಎದ್ದು ಹೋದ್ರು. ''ಇದೇನಪ್ಪ ಹಜರತ್ ನಮಾಜ್ ಮಾಡಕೆ ಹೋಗಿ ಮಸೀದೀನೆ ಮೇಲೆ ಕೆಡವಿಕೊಂಡ ಅನ್ನೋ ಹಾಗೆ ಆಯ್ತಲ್ಲ'' - ಅಂದುಕೊಂಡೆ ಮೇಷ್ಟ್ರು ವಿನಃ ಒಂದು ಹಿಳ್ಳೆ ಇಲ್ದಂಗೆ ಎಲ್ರೂ ಎದ್ದೋದ್ರಲ್ಲ ಅಂತ ಪೆಚ್ಚಾದೆ. ಮುಖ್ಯೋಪಾಧ್ಯಾಯರ ಮುಖ ನೋಡಿದರೆ ಹಾಳು ಸುರಿಯುತ್ತಿತ್ತು. ಆಗ ನಾನೆ, ''ನೀವು ಹೋಗಿ ಮೇಷ್ಟ್ರೆ ಈ ಲಾಟೀನ್ ಇಲ್ಲೇ ಇರ್ಲಿ. ಒಂದು ಚೊಂಬು ನೀರು ಕಳಿಸಿ. ನನ್ನ ಹತ್ತಿರ ಬುತ್ತಿ ಇದೆ'' ಎಂದೆ. ಅವರು ''ಬೇಡಾ ಸಾ ಆ ಅಮ್ಮ ಒಳ್ಳೇವಳಲ್ಲ, ನಮ್ಮ ಮನೆಗೆ ಬನ್ನಿ'' ಎಂದರು. ಅವರ ಭೀತಿಗೆ ಮನದಲ್ಲೇ ನಕ್ಕು, ''ಬಿಡಿ ಮೇಷ್ಟ್ರೆ ಇಂತಹವರ ಸಹವಾಸ ಬಹಳ ನೋಡಿದ್ದೇನೆ. ನೀವು ಯೋಚನೆ ಮಾಡಬೇಡಿ, ಬೆಳಿಗ್ಗೆ ಬನ್ನಿ'' ಎಂದೆ. ಅವರನ್ನ ಕಳಿಸಿ, ಬುತ್ತಿ ಉಂಡು ಕಾಲ್ಮಣೆಗಳನ್ನು ಮಂಚ ಮಾಡಿಕೊಂಡು ಮಲಗಿದೆ, ಅಂಗಾತನಾಗಿ ಮಲಗಿದ್ರೆ ಅಲ್ಲಲ್ಲೆ ಹೆಂಚುಗಳಿಲ್ಲದೆ ಮುಗಿಲಲ್ಲಿ ನಕ್ಷತ್ರಗಳು ಮಿಂಚುತ್ತಿದ್ದವು. ಸ್ಕೂಲಿನ ಸಂದಿಗೊಂದಿಯಲ್ಲಿ ಅನೇಕ ಬಗೆಯ ಪ್ರಾಣಿಗಳಿದ್ದವೇನೋ, ಇದ್ಯಾವುದನ್ನು ಹಚ್ಚಿಕೊಳ್ಳದೆ ಕಣ್ಣು ಮುಚ್ಚಿದೆ. ನಿಶ್ಚಿಂತೆಯ ನಿದ್ದೆ! ಬೆಳಿಗ್ಗೆ ಕಣ್ಣು ಬಿಡ್ತಿದ್ರೆ ಹೈಕಳುಗಳು ಕಿಟಕಿ ಎಟಕಿಸಿಕೊಂಡು ಅಚ್ಚರಿಯಿಂದ ನನ್ನನ್ನು ನೋಡ್ತಿದ್ದಾರೆ. ಅವರುಗಳ ತಲೆ ಮೇಲೆ ಕುಳುವಾಡಿ ಹೆಂಗಸೊಬ್ಬಳ ಮುಖ

ಕಾಣಬಂತು, ನಾನು ಆ ಕಡೆ ಮುಖ ತಿರುಗಿಸಿದೆ. 'ಅಯ್ಯವ್ವ' ಎಂದು ಚಿಟ್ಟನೆ ಚೀರುತ್ತ ಊರೊಳಕ್ಕೆ ಓಡಿ ಹೋದ್ಲು. ಪ್ರಾಯಶಃ ನಾನು ಉಸಿರಾಡ್ತಿದ್ದುದೇ ಅವರಿಗೆ ಆಶ್ಚರ್ಯ ತಂದಿರಬೇಕು. ಆ ನಂತರ ಮುಖ್ಯೋಪಾಧ್ಯಾಯರು ಹಾಗೂ ಊರಿನ ಮುಖಂಡರು ಓಡಿ ಬಂದರು. ನಾನು ನಗುನಗುತಾ "ನೋಡಿ ನಾನೂ ಕೂಡ ನಿಮ್ಮ ತರಹ ಹಳ್ಳಿಯಿಂದ್ಲೇ ಬಂದವನು. ನಿಮ್ಮ ಮಾರಮ್ಮನ ತರಹ ನಮ್ಮವ್ವ ಕೂಡ ಕಾಯಿಲೆ ಬಿದ್ದು ಹೊನ್ನೇನಹಳ್ಳಿಯ ಕುಚ್ಚಂಗಮ್ಮನನ್ನೆ ನಂಬಿ ಡಾಕ್ಟರಲ್ಲಿಗೆ ಹೋಗದೆ ತೀರಿಕೊಂಡರು, ನೀವು ಕೂಡ ಹಾಗಾಗ್ಬೇಡಿ..... ಪರೀಕ್ಷೆ, ವಿಮರ್ಶೆ, ವಿಚಾರ ಮಾಡೋ ಸ್ವಭಾವ ಬೆಳೆಸಿಕೊಳ್ಳಿ. ಇಲ್ದಿದ್ರೆ ಬಹಳ ಕಷ್ಟ ಅನುಭವಿಸಬೇಕ್ತಾದೆ' ಅಂತ ಹೇಳಿ 'ನಾನು ಮುಂದಿನ ಸಲ ಬರಬೇಕಾದ್ರೆ ಈ ಸ್ಕೂಲ್ ಕಟ್ಟಡ ಪೂರ್ಣ ರಿಪೇರಿ ಆಗಿರಬೇಕು; ಅಂದೆ. ಒಂದೆರಡು ಸಾರಿ ಅಲ್ಲಿಗೆ ಹೋದ್ಮೇಲೆ ಸ್ಕೂಲ್ ಕಟ್ಟಡ ಒಂದು ದಾರಿಗೆ ಬಂತು ಅನ್ನಿ; ನಮ್ಮ ಗ್ರಾಮಸ್ಥರಲ್ಲಿ ಅರ್ಧ ಶತಮಾನದ ಹಿಂದೆ ಎಂತಹ ಅಜ್ಞಾನ ತಾಂಡವಾಡುತ್ತಿತ್ತೆಂದು ಊಹಿಸಬಹುದಲ್ಲವೆ.......

ಚನ್ನರಾಯಪಟ್ಟಣದಲ್ಲಿರಬೇಕಾದ್ರೆ ನಾನು ಕಾಯಿಲೆ ಮಲಗಿದೆ. ಪ್ರಾಯಶಃ ನಮ್ಮ ಮನೆಯ ಸುತ್ತಮುತ್ತಲಿನ ಗಲೀಜಿನಿಂದಾಗಿ ಹಾಗೂ ಎಡಬಿಡದ ಪ್ರವಾಸದಿಂದಾಗಿ ನನ್ನ ಆರೋಗ್ಯ ಕೈಕೊಟ್ಟಿತ್ತು. ಡಾಕ್ಟರರಿಂದ ಔಷಧಿ ತೆಗೆದುಕೊಂಡರೂ ಗುಣವಾಗಲಿಲ್ಲ. ನಮ್ಮ ಇಲಾಖೆಗೆ ರಜಕ್ಕಾಗಿ ಬರೆದರೂ ಉತ್ತರವಿಲ್ಲ. ಅದು ಮಂಜೂರಾಗಲೀ ಬಿಡಲಿ ನಾನು ಉಳಿದರೆ ಸಾಕೆಂದು ತುಮಕೂರಿಗೆ ಸಂಸಾರ ಸಮೇತ ಬಂದು ನಮ್ಮಕ್ಕನ ಮನೆಯಲ್ಲಿ ಠಿಕಾಣಿ ಹಾಕಿದೆ. ದೊಡ್ಡಾಸ್ಪತ್ರೆಯಲ್ಲಿ ಔಷಧಿ ತಕ್ಕೊಂಡರೂ ಗುಣವಾಗಲಿಲ್ಲ. ನಮ್ಮಕ್ಕ ನಮ್ಮವ್ವನ ಪರಂಪರೆ ಮುಂದುವರೆಸಿ ಕಣಿ ಕೇಳಿದರು. ದೇವರ ಪ್ರಸಾದ ತಂದರು. ಅವಳಿಗೆ ಉಭಯಸಂಕಟ. ಮದುವೆಯಾಗಿ ಎರಡು ವರ್ಷ ಕಳೆದರೂ ನನ್ನ ತಮ್ಮನಿಗೆ ಮಕ್ಕಳಾಗಲಿಲ್ಲವಲ್ಲ ಎಂಬ ಕೊರಗು ಆಕೆಯದು. ಇನ್ನು ನನ್ನ ತಮ್ಮ ಹೀಗೆ ಗಳಿಗೆ ಗಳಿಗೆಗೂ ಕಾಯಿಲೆ ಬೀಳ್ತಾನಲ್ಲಾ ಎಂಬ ಚಿಂತೆ ಬೇರೆ. ನಾನು ಮಕ್ಕಳ ಸುದ್ದಿ ಎತ್ತಿದಾಗೆಲ್ಲ "ಬಿಡಕ್ಕ ಅವು ಒಂದ್ಸಾರಿ ಶುರುವಾದರೆ ನಿಲ್ಲೋದೆ ಇಲ್ಲ" ಅಂತ ಹಾಸ್ಯ ಮಾಡ್ತಿದ್ದೆ. ಅದು ಮುಂದೆ ನಿಜವೇ ಆಯ್ತನ್ನಿ. ಆದ್ರೆ ಕಾಯಿಲೆ ವಿಚಾರ ಮಾತ್ರ ನನ್ನನ್ನು ತೀವ್ರ ಚಿಂತೆಗೆ ಗುರಿ ಮಾಡಿತು. ಅಸಾಧ್ಯ ಜ್ವರ. ಉಸಿರಾಡಲೂ ತೊಂದರೆ. ಆಸ್ಪತ್ರೆ ಡಾಕ್ಟ್ರೆಲ್ಲ ನನ್ನ ಕೈ ಬಿಟ್ರು. ತೇಲ್ಗಣ್ಣು ಮೇಲ್ಗಣ್ಣಾಗಿ

ಈಗಲೊ-ಆಗಲೋ ಪ್ರಾಣ ಪಕ್ಷಿ ಹಾರುತ್ತೇಂತ ಎಲ್ಲರೂ ಗೋಳಿಡುತ್ತಿದ್ದರು. ಪೂಜೆ ಹಾಕಬೇಕೆಂದರು. ನಾನೊಪ್ಪಲಿಲ್ಲ. ನನ್ನಕ್ಕನ ಮಗ ಚಿಕ್ಕಹನುಮಯ್ಯ, ಗೋವಿಂದಪ್ಪ ಎಂಬ ಪಂಡಿತರನ್ನ ಕರಕೊಂಡು ಬಂದು ಕೊನೆ ಪ್ರಯತ್ನ ಮಾಡಿದ. ನಾಡಿಯನ್ನು ಹಿಡಿದು ಹೊಟ್ಟೆಯನ್ನು ಹಿಸುಕಿ, ದೇಹವನ್ನೆಲ್ಲಾ ಒಂದ್ಸಾರಿ ಪರೀಕ್ಷೆ ಮಾಡಿದ. 'ನೀವೇನು ಹೆದರಿಕೋಬೇಡಿ., ಇದನ್ನೆಲ್ಲಾ ನಾನು ಗುಣ ಮಾಡ್ತೇನೆ' ಅಂತ ಹೇಳಿ ಜೇನು ತುಪ್ಪದಲ್ಲಿ ತಿನ್ನಿಸುವಂತೆ ಮೂರು ತರಹ ಪುಡಿ ಕೊಟ್ಟ. 'ಆ ದೊಡ್ಡ ಡಾಕ್ಟರ್ ಕೈಲಿ ಆಗದೆ ಇರೋದು ಇವನು ಕಿಸಿತಾನ' ಅಂತ ನನ್ನ ಅಭಿಪ್ರಾಯ ಆದ್ರೂ ನೋಡೋಣ ಅಂತ ತಕ್ಕೊಂಡೆ. ಒಂದೇ ದಿನದಲ್ಲಿ ಗುಣಮುಖನಾದೆ. ನಂತರ ದಿನಗಳೆದಂತೆ ಓಡಾಡುವ ಶಕ್ತಿ ಬಂತು. ಪಂಡಿತರೆ ಲೇಹ ಮಾಡಿಕೊಟ್ಟರು. ಮುಂದೆಂದೂ ನನಗೆ ಆ ತರಹ ಕಾಯಲೆ ಬರಲಿಲ್ಲ. ನನಗೆ ಗೋವಿಂದಪ್ಪನೋರು ಏನು ಕೊಟ್ರು ಅಂತ ತಿಳೀಲಿಲ್ಲ. ಅವರು ಕೂಡ ಅದನ್ನು ಬರೆದಿಡಲಿಲ್ಲ. ನಮ್ಮ ಜನವೋ, ಆಳುತ್ತಿದ್ದ ವಿದೇಶೀಯರದೇ ಎಲ್ಲಕ್ಕೂ ಶ್ರೇಷ್ಠ ಎಂದು ನಂಬಿ ಅದನ್ನು ರೂಢಿಸಿಕೊಂಡು ಬಂದು, ನಮ್ಮಲ್ಲಿದ್ದಂಥ ಬಂಗಾರಾನ ತಿಪ್ಪೆಗೆ ಎಸೆದ್ರು. ಅಲೋಪತಿ ಬೇಡ ಅಂತಲ್ಲ. ಇದರಲ್ಲಿ ಗುಣವಾಗದ ಕಾಯಿಲೆಯನ್ನು ಭಾರತೀಯ ವೈದ್ಯಕೀಯ ಪದ್ಧತಿಯಿಂದ ವಾಸಿ ಮಾಡಿಕೊಳ್ಳಬಹುದಲ್ಲವೆ? ಎರಡು ತಿಂಗಳ ನಂತರ ಚನ್ನರಾಯಪಟ್ಟಣಕ್ಕೆ ಹೋದೆ. ಮೂರ್ನಾಲ್ಕು ತಿಂಗಳಿಂದ ಸಂಬಳವಿರಲಿಲ್ಲ. ಬಡವಿ ನಮ್ಮಕ್ಕನಿಗೆ ನಾನು ನಾಲ್ಕು ತಿಂಗಳಿಂದ ಕೊಟ್ಟ ಕಷ್ಟ ಹೇಳತೀರದು. ಎರರಿಗೆ ಉಪಕಾರ ಮಾಡುವುದರಲ್ಲಿ ತೃಪ್ತಿ ಕಾಣುವವರಲ್ಲಿ ಅವರೊಬ್ಬರು. ಶಿವರಾಮಕಾರಂತರ 'ಮರಳಿ ಮಣ್ಣಿಗೆ'ಯ ಗೌರಮ್ಮಜ್ಜಿ ತರಹ ನಮ್ಮಕ್ಕ ನನಗಾಗಿ ಜೀವ ತೇದಳು. ರಜೆಯ ನಂತರ ನಾನು ಮತ್ತೊಮ್ಮೆ ಎಲ್ಲ ಸಹಕಾರ ಸಂಘಗಳನ್ನು ಸುತ್ತಿದೆ. ಅವೆಲ್ಲ ಒಂದಿಷ್ಟಾದರೂ ಕೆಲಸ ಮಾಡುವಂತೆ ಪ್ರಯತ್ನಿಸಿದೆ. ಇಷ್ಟು ಹೊತ್ತಿಗೆ ನಮ್ಮಿಲಾಖೆಯವರಿಗೆ 'ಇವನಿಗೆ ಚನ್ನರಾಯಪಟ್ಟಣ ಸಾಕು' ಎನಿಸಿರಬೇಕು. ನನ್ನನ್ನು ನಮ್ಮ ಜಿಲ್ಲೆಯ ಚಿಕ್ಕನಾಯಕನಹಳ್ಳಿಗೆ ಎತ್ತಂಗಡಿ ಮಾಡಿದರು. ಊರಿಗೇನೋ ಹತ್ತಿರ ಎಂದು ನನಗೊಂದು ರೀತಿ ಖುಷಿಯಾಯ್ತು. ನನ್ನ ವರ್ಗದ ಸುದ್ದಿ ಕೇಳಿದ ಅಪ್ಪೇನಹಳ್ಳಿ ಕಲ್ಲಪ್ಪ ಗೌಡರು ಮತ್ತಿತರ ರೈತರು ಅದ್ದೂರಿ ಬೀಳ್ಕೊಡಿಗೆ ಸಮಾರಂಭ ಇಟ್ಟುಕೊಂಡರು. ನಾನು ಬೇಡವೆಂದರೂ ಕೇಳದೆ ಭಾಜಾ ಭಜಂತ್ರಿ ಜೊತೆ ಮೆರವಣಿಗೆ ಮಾಡಿಸಿ ನಾನು ಕುಬ್ಜನಾಗುವಂತೆ ಮಾಡಿದರು. ನನ್ನ ಮೇಲೆ ತಮ್ಮ ಅಸಾಧಾರಣ ಪ್ರೀತಿ ವಾತ್ಸಲ್ಯದ ಮಳೆಗರೆದರು.

ನಮ್ಮ ಜನ ಯಾವಾಗಲೂ ಅಷ್ಟೆ. ಒಂದಿಷ್ಟು ದುಡಿದರೂ ದೊಡ್ಡದನ್ನಾಗಿ ಪರಿವರ್ತಿಸುವ ಉದಾರ ಹೃದಯಿಗಳು.

## ಚಿಕ್ಕನಾಯಕನಹಳ್ಳಿ

'ಯಾರು ನಮಗೆ ಸರಿ ಹೇಳಿರೋ
ನಮ್ಮ ಊರೇ ಭೂಮಿಗೆ ಚಂದ ಕಾಣಿರೋ....."

ಎಂಬ ಬೀರಪ್ಪ ಪ್ರಾರ್ಥನೆಯೊಂದುಂಟು. ಇದರ ಅರ್ಥ ಸಾಮಾನ್ಯವಾಗಿ ನಮ್ಮೂರಿನಲ್ಲಿ ನಮ್ಮವರು ನಿಮ್ಮವರು ಇರುತ್ತಾರೆ. ಸಮಾನ ಸ್ಕಂಧರಿರುತ್ತಾರೆಂದು; ಚಿಕ್ಕನಾಯಕನಹಳ್ಳಿಯಲ್ಲಿದ್ದಷ್ಟು ದಿನ ನನಗಿದೇ ಭಾವನೆ ಇತ್ತು. ಪ್ರಾಯಶಃ ನನ್ನ ವೃತ್ತಿಜೀವನದಲ್ಲಿ ಅನುಭವಿಸಿದಷ್ಟು ಸಂತೃಪ್ತಿ ಹಾಗೂ ಸಮಾಧಾನಗಳೆರಡೂ ನನ್ನ ಪಾಲಿಗೆ ಇಲ್ಲಿ ಸಂದವು. ನನ್ನ ಆಲೋಚನೆಗಳನ್ನೆಲ್ಲಾ ಕಾರ್ಯಗತ ಮಾಡಲು ಸಾಕಷ್ಟು ಅವಕಾಶ ದೊರೆಯಿತು. ನಮ್ಮ ಜಿಲ್ಲೆಯ ಮತ್ತೊಂದು ಮೂಲೆಯಾದ ಚಿಕ್ಕನಾಯಕನಹಳ್ಳಿ ಜಿಲ್ಲೆಯಲ್ಲೇ ಏಕೆ, ಇಡೀ ರಾಜ್ಯದಲ್ಲೆ 'ಚಿಕ್ಕನಾಯಕನಹಳ್ಳಿ ಚಿಪ್ಪು' ಎಂಬ ನುಡಿಗಟ್ಟಿಗೆ ಪ್ರಸಿದ್ಧಿಯಾಗಿದೆ. ಊರಿಗಂತೂ ಸಾಕಷ್ಟು ಸಮೃದ್ಧವಾದ ಐತಿಹಾಸಿಕ ಹಿನ್ನೆಲೆಯುಂಟು. ತಾಲ್ಲೂಕಿನ ಶೆಟ್ಟಿಕೆರೆಯಲ್ಲಿ ಹೊಯ್ಸಳರ ಕಾಲದ ಯೋಗನಾಥ ಮಾಧವ ದೇವಾಲಯವಿದೆ. ಹಾಗಲವಾಡಿ ಪಾಳೆಯಗಾರರು ಮೂಲತಃ ಇಲ್ಲಿಯವರೆಂದು ಹೇಳಬೇಕು. ಆ ಪಾಳೆಯಗಾರರ ದೊರೆ ಸಾಲನಾಯಕನ ಚಿಕ್ಕ ತಮ್ಮನ ಹೆಸರಿನಲ್ಲಿ ಚಿಕ್ಕನಾಯಕನ ಹಳ್ಳಿಯನ್ನು ಕಟ್ಟಲಾಗಿದೆ. ಆಧುನಿಕ ಕಾಲದಲ್ಲೂ ಪ್ರಸಿದ್ಧ ಸಾಹಿತಿಗಳ, ಸಮಾಜ ಸೇವಕರ, ವಾಣಿಜ್ಯೋದ್ಯಮಿಗಳ ತಾಣವದು. ಕನ್ನಡದ ಆಚಾರ್ಯರೂ ನನಗೆ ಗುರುಗಳೂ ಆದ ತೀ.ನಂ.ಶ್ರೀಯವರ ಸ್ವಂತ ಊರು ಈ ತಾಲ್ಲೂಕಿನ ತೀರ್ಥಪುರ. ಕರ್ನಾಟಕದ ರಂಗಭೂಮಿಯ ಅನರ್ಘ್ಯರತ್ನವೆಂದು ಖ್ಯಾತರಾಗಿದ್ದ ಸಿ.ಬಿ.ಮಲ್ಲಪ್ಪನವರು, ಚಲನಚಿತ್ರ ನಟರಾಗಿದ್ದ ಸಿ.ಬಿ.ಈಶ್ವರಪ್ಪನವರು ಇದೇ ಊರಿನವರು. ನನ್ನ ಬಾಲ್ಯಸ್ನೇಹಿತನೂ, ದೇಶೀಯ ವಿದ್ಯಾಪೀಠದ ಸಂಸ್ಥಾಪಕನೂ, ಸ್ವಾತಂತ್ರ್ಯ ಹೋರಾಟಗಾರನೂ, ಗಾಂಧಿ ಸಾಹಿತ್ಯದಲ್ಲಿ ಅದ್ವಿತೀಯನೂ ಆದ ಜಿ.ವಿ.ನಾರಾಯಣಮೂರ್ತಿಯ ಸ್ಥಳವೂ ಇದೇ ಆಗಿತ್ತು. ಹೀಗಾಗಿ ಚನ್ನರಾಯಪಟ್ಟಣವನ್ನು ಬಿಟ್ಟು ಚಿಕ್ಕನಾಯಕನಹಳ್ಳಿಗೆ ಬರುವ ಸಂದರ್ಭ ನನಗೆ ಬಹಳ ದಿನ ಗೂಡುಬಿಟ್ಟ ಮರಿಯೊಂದು ಮತ್ತೊಮ್ಮೆ ಗೂಡನ್ನು

ಸೇರಿದಂತಾಗಿತ್ತು. ನಾನು ಅಲ್ಲಿಗೆ ಬರುವ ವಿಚಾರ ತಿಳಿದು ಬಸ್ ನಿಲ್ದಾಣಕ್ಕೆ ಸ್ಥಳೀಯ ಕೋಆಪರೇಟೀವ್ ಸೊಸೈಟಿಯ ಕಾರ್ಯದರ್ಶಿ ಮುದ್ದಪ್ಪನವರೇ ಬಂದು ಸ್ವಾಗತಿಸಿದರು. ನಾವು ಸುಮ್ಮನೆ ನಿಂತಿದ್ದಷ್ಟೆ. ಜನಗಳೇ ನಮ್ಮ ಸಾಮಾನನ್ನು ಹೊತ್ತು ಸರಿಯಾದ ಸ್ಥಳಕ್ಕೆ ಮುಟ್ಟಿಸಿದರು. ಅನಂತರ ಬ್ರಾಹ್ಮಣ ಕೇರಿಯಲ್ಲೊಂದು ಮನೆ ದೊರೆಯಿತು. ಇಷ್ಟು ಹೊತ್ತಿಗಾಗಲೇ ಬಂದು ನನ್ನ ಜವಾಬ್ದಾರಿ ಹೊತ್ತಿದ್ದ ನನ್ನ ಮಿತ್ರ ಜಿ.ವಿ.ನಾ.

ಮಾರನೇ ದಿನ ನಾನು ತಾಲ್ಲೂಕು ಅಮಲ್ದಾರ್ ಕಛೇರಿಗೆ ಭೇಟಿ ಕೊಟ್ಟೆ. ಇನ್ನೂ ಅಮಲ್ದಾರ್ ಬಂದಿರಲಿಲ್ಲ. ಅವರ ನಿರೀಕ್ಷೆಯಲ್ಲೇ ಕುಳಿತೆ. ಹತ್ತು-ಹದಿನೈದು ನಿಮಿಷಗಳ ನಂತರ ಒಬ್ಬ ವ್ಯಕ್ತಿ ಕೈಯಲ್ಲೊಂದು ಸಿಗರೇಟ್ ಪ್ಯಾಕ್ ಹಿಡಿದುಕೊಂಡು ಧುಮ ಧುಮ ಅಂತ ಬಂದರು. ಸಿಗರೇಟ್ ಪ್ಯಾಕನ್ನು ಟೇಬಲ್ ಮೇಲೆ ಎಸೆದು ಜೇಬಿನಲ್ಲಿದ್ದ ಬೀಡಿಕಟ್ಟಿನಿಂದ ಒಂದನ್ನು ಹಚ್ಚಿ ಹೊಗೆ ಬಿಡಲಾರಂಭಿಸಿದರು. ಆತನ ಮುಖ, ಬಟ್ಟೆ, ಕೂದಲುಗಳನ್ನು ನೋಡಿದರೆ ಅವು ನೀರು ಕಂಡು ಎಷ್ಟೋ ದಿನ ಆಗಿದೆ ಅನ್ನಿಸುತ್ತಿತ್ತು. ಆತ ನನ್ನ ಕಡೆ ನೋಡಲೇ ಇಲ್ಲ. ನಾನೇ ಇವರು ಅಮಲ್ದಾರ್ ಇರಬೇಕೆಂದು ಭಾವಿಸಿ 'ನಾನು ಹೊಸದಾಗಿ ಬಂದಿರುವ ಸೊಸೈಟಿ ಇನ್ಸ್‌ಪೆಕ್ಟರ್' ಎಂದು ಪರಿಚಯ ಹೇಳಿಕೊಂಡೆ. ಆತ 'ಹರಶಿವ' ಎನ್ನಲಿಲ್ಲ. ಆಫೀಸಿನ ಹೆಡ್‌ಕ್ಲರ್ಕ್‌ನಿಂದ ಇವರು ಬಷೀರುದ್ದೀನ್ ಅಹ್ಮದ್ ಎಂದು ತಿಳಿದು ಮನೆಗೆ ಹಿಂದಿರುಗಿದೆ.

ಚಿಕ್ಕನಾಯಕನಹಳ್ಳಿಯ ಬಗ್ಗೆ ನಾನಾಗಲೇ ಸಾಕಷ್ಟು ಹೇಳಿದ್ದೇನೆ. ಈಗ ವೈಯಕ್ತಿಕವಾಗಿ ಹೇಳುವುದಾದರೆ ಇಲ್ಲಿ ನನ್ನ ಪತ್ನಿ ಸೇರಿದಂತೆ ನಮ್ಮ ಬಹುದಿನದ ಬಯಕೆ ನೆರವೇರಿತು. ಇಲ್ಲಿಗೆ ಬಂದ ನಂತರ ಅಂದರೆ 14-10-1942ರಲ್ಲಿ ನನ್ನ ಹಿರಿಯ ಮಗ ನಂಜರಾಜನ ಜನನವಾಯಿತು. ಮೊದಲನೆಯ ಹೆರಿಗೆಯೆಂದು ನನಗೆ ಭಯ. ಆದರೆ ಹೂವಿನ ಸರ ಎತ್ತಿದಂತೆ ಆಗಗೊಳಿಸಿದರು ಜಿ.ವಿ.ನಾರಾಯಣಮೂರ್ತಿಯ 70 ವರ್ಷದ ವೃದ್ಧ ತಾಯಿ. ಆಕೆ ಮಡಿ ಹೆಂಗಸು, ಶೂದ್ರರನ್ನು ನೋಡಿದರೆ ಸ್ನಾನ ಮಾಡಬೇಕಾದ ಸಂದರ್ಭದಲ್ಲಿ ಆ ಮಹಾತಾಯಿ ಬಂದು ನನ್ನ ಹೆಂಡತಿಗೆ ಹೆರಿಗೆ ಮಾಡಿದ್ದು ನಿಜಕ್ಕೂ ಆಕೆಗೆ ಮಾನವೀಯತೆಯ ಬಗ್ಗೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಸರ್ವಜ್ಞ ಹೇಳುವಂತೆ ಅವರು 'ಜಾತಿ ಸೂತಕವಳಿದು ಭ್ರಾಂತಿಗುಣವನಳಿದಿದ್ದಾರೆ. 'ಇವರಿಗೆ ಸಹಾಯಕವಾಗಿ ನಿಂತವರು ಮುದ್ದಲಿಂಗಯ್ಯನವರ ತಾಯಿ ಹಾಗೂ

ತಂಗಿ. ಹೆರಿಗೆಯಾದ ಸುಮಾರು 15-20 ದಿನಗಳ ನಂತರ ದೊಡ್ಡ ಗಂಡಾಂತರ ಸಂಭವಿಸಿತು. ಬಲಗಡೆ ಎದೆ ಮೊಲೆಯ ಕಣ್ಣಿನ ಮೇಲೆ ದೊಡ್ಡ ಬಾವು ಕಾಣಿಸಿಕೊಂಡಿತು. ಅದಕ್ಕೆ ಮೂಗು ಮುಸುಡಿ ಏನೂ ಇದ್ದಿಲ್ಲ. ಡಾ|| ಸುಬ್ರಹ್ಮಣ್ಯಂ ಬಂದು ನೋಡಿ ಪೋಟ್ಲೇಸು ಕಟ್ಟಿ ಅಂದರು. ಅದರಿಂದ ಕೂಡ ಏನೂ ಅದು ಜಗ್ಗಲಿಲ್ಲ. ಏನು ಮಾಡಲೂ ತೋಚದೆ ಹೋಯಿತು. ಕೆಲವರು 'ನಂಜುಂಡೇಶ್ವರನಿಗೆ ಹರಕೆ ಕಟ್ಟಿಕೊಳ್ಳಿ ಎಂದರೆ, ಇನ್ನು ಕೆಲವರು 'ನಾಗಪ್ಪನಿಗೆ ಹರಸಿಕೊಳ್ಳಿ' ಎಂದರು. ಆಗ ನಾನು ಗಾಂಧೀಜಿಯಂತೆ ಪ್ರಯೋಗ ನಡೆಸಲು ಶುರು ಮಾಡಿದೆ; ನಮ್ಮ ತಾಯಿ ಆಗಾಗ ಹೇಳುತ್ತಿದ್ದ, ಈ ಸಂದರ್ಭದಲ್ಲಿ ಮಾಡುತ್ತಿದ್ದ ಔಷಧ ಕ್ರಿಯೆಯನ್ನು ಪ್ರಾರಂಭಿಸಿದೆ. ಮನೆ ಹಿಂದೆ ಬೆಳೆದಿದ್ದ ಮುಳ್ಳರವೆ ಸೊಪ್ಪು ತಂದು ಅಷ್ಟು ಸಾವೆ ಅಕ್ಕಿ ಜೊತೆ ಬೇಯಿಸಿದೆ. ಬೆಂದಿದ್ದನ್ನು ನುಣ್ಣಗೆ ಅರೆದು ಮೊಸರು ಹಾಕಿ ಬಿಲ್ಲೆ ರೀತಿ ಅಗಲಮಾಡಿ ಮೂರು ದಿನ ಕಟ್ಟಿದೆ. ನಂತರ ಕೀವು ಕೆಟ್ಟರಕ್ತ ಗಾಯ ಒಡಕೊಂಡು ಈಚೆಗೆ ಬಂದವು. ಕಾಲ ಕ್ರಮೇಣ ಗಾಯ ವಾಸಿಯಾಯ್ತು. ಆದರೆ ಎದೆ ಹಾಲು ಮಾತ್ರ ಇಂಗಿಹೋಯ್ತು.

ಚಿಕ್ಕನಾಯಕನಹಳ್ಳಿ ಕಂಬಳಿಗೆ ಪ್ರಸಿದ್ಧವಾದ ಸ್ಥಳ. ಇಲ್ಲಿನ ಪಾಳೇಗಾರನಿಂದ ಮೈಸೂರರಸರೇ ಹಿಂದೆ ಕಂಬಳಿ ತರಿಸಿಕೊಳ್ಳುತ್ತಿದ್ದರೆಂದರೆ ಅದರ ಪ್ರಸಿದ್ಧಿ ಹೇಳಬೇಕೆ? ಪ್ರತಿ ಕುರುಬರ ಮನೆಯಲ್ಲೂ ಒಂದೆರಡು ಮಗ್ಗಗಳಿದ್ದವು. ಕಂಬಳಿ ನೇಯ್ಗೆಗಾರರು ಗಣನೀಯ ಸಂಖ್ಯೆಯಲ್ಲಿದ್ದರು. ಇವರ ಕಂಬಳಿಗಳನ್ನು ಮಧ್ಯಸ್ಥಿಕೆದಾರರು, ಆರಕ್ಕೆ ಮೂರರಂತೆ ತಕ್ಕೊಂಡು ಹೋಗಿ ಯಥೇಚ್ಛ ಲಾಭಗಳಿಸುತ್ತಿದ್ದರು. ಇಲ್ಲಿನ ಕುರುಬರಲ್ಲಿ ಮೂರು ಮಠಗಳಿದ್ದವು. ಮೂರು ಮಠದವರದೂ ಮೂರು ದಿಕ್ಕು. ಮಧ್ಯಸ್ಥಿಕೆದಾರರನ್ನು ಮಟ್ಟ ಹಾಕಬೇಕೆಂದು ನಿರ್ಧರಿಸಿ ಮೂರು ಮಠಗಳ ಯಜಮಾನರನ್ನೂ ಹಾಗೂ ಇತರೆ ಮುಖ್ಯಸ್ಥರನ್ನೂ ಶ್ರೀ ರೇವಣಸಿದ್ದೇಶ್ವರ ಮಠದಲ್ಲಿ ಕಲೆ ಹಾಕಿದೆ. ಕಂಬಳಿ ನೇಕಾರರಿಗೆ ವ್ಯಾಪಾರಸ್ಥರಿಂದ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಒಂದು ಕಂಬಳಿ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ವ್ಯವಸ್ಥೆ ಮಾಡಿಕೊಳ್ಳುವಂತೆ ತಿಳಿಸಿದೆ. ನೇಕಾರರೆಲ್ಲ ಅದರ ಪ್ರಯೋಜನ ತಿಳಿದು ಸಂತೋಷಪಟ್ಟು ಉತ್ಸಾಹ ತೋರಿಸಿದರು. ನಾನೇ ಅದಕ್ಕೆ ಬೈಲಾ ತಯಾರಿಸಿಕೊಟ್ಟೆ. ಹೀಗೆ ಕಂಬಳಿ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಜನ್ಮ ತಳೆಯಿತು. ಮೂರು ಮಠಗಳಿಗೂ ಸೇರಿದ ಕುರುಬರನ್ನು ಕಲೆ ಹಾಕಿ ಸೊಸೈಟಿ ಬೇಗ ಕಾರ್ಯಾರಂಭ ಮಾಡಲು ಶ್ರಮಿಸಿದವರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಹಾಗೂ ಕುರುಬ

ಜನಾಂಗದ ಮುಖಂಡರೂ ಆದ ದಿವಂಗತ ಚೌಡಪ್ಪನವರು ಪ್ರಮುಖರು. ಹನ್ನೆರಡು ಜನರ ಕಾರ್ಯ ನಿರ್ವಾಹಕ ಸಮಿತಿ ರಚಿತವಾಯಿತು. ಇದರ ಪ್ರಥಮ ಅಧ್ಯಕ್ಷರಾಗಿ ಕಂ|| ಮುದ್ದಪ್ಪ ಹಾಗೂ ಕಾಯದರ್ಶಿಯಾಗಿ ಮೇ|| ಗಂಗಯ್ಯ ಅವರು ಸರ್ವಾನುಮತದಿಂದ ಆಯ್ಕೆಯಾದರು. ಆಗ ಆಫೀಸಿನ ಜವಾನರಾಗಿದ್ದ ಪುಟ್ಟಬಾಲಯ್ಯ ಎಂಬ ಹುಡುಗ ಈಗ ಚಿಕ್ಕನಾಯ್ಕನಹಳ್ಳಿಯ ಅನೇಕ ಸಂಘಸಂಸ್ಥೆಗಳಲ್ಲಿ ಉತ್ತಮ ಸೇವೆ ಮಾಡುತ್ತಿದ್ದಾನೆ. ಈ ಸಂಘದ ಪ್ರಾರಂಭೋತ್ಸವವನ್ನು ರಾಜ್ಯದ ಹಿಂದುಳಿದ ವರ್ಗಗಳ ಧುರೀಣರೂ ಕುರುಬ ಜನಾಂಗದ ಮುಖಂಡರೂ ಆಗಿದ್ದ ನೀಲಗಿರಿ ಸಂಜೀವಯ್ಯನವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ತುಮಕೂರು ನಗರ ಸಭೆಯ ಉಪಾಧ್ಯಕ್ಷ ಬಿ.ಮಲ್ಲಪ್ಪನವರು ಆಗಮಿಸಿದ್ದರು. ಈ ಸಂಘ ಬಹುಬೇಗ ಅಭಿವೃದ್ಧಿ ಸಾಧಿಸಿತು. ಈ ಸಂಘವು ಎರಡನೇ ಮಹಾಯುದ್ಧದ ಕಾಲದಲ್ಲಿ ಈಸ್ಟರ್ನ್ ಕಮ್ಯಾಂಡ್ ಮತ್ತು ಅವರ ಅನುಯಾಯಿಗಳಿಗೆ ಅಂದರೆ ಯುದ್ಧ ಮಾಡುತ್ತಿರುವ ಸಿಪಾಯಿಗಳಿಗೆ ಸುಮಾರು 25-30 ಸಾವಿರ ಬ್ಯಾರೆಕ್ ಬ್ಲಾಂಕೆಟ್‌ಗಳನ್ನು ಸರಬರಾಜು ಮಾಡಿತು. ಸಹಕಾರ ಸಂಘಗಳ ಚರಿತ್ರೆಯಲ್ಲಿಯೇ ಪ್ರಥಮ ಬಾರಿಗೆ ಕೈಗಾರಿಕಾ ಸಂಘವೊಂದು ಮಿತ್ರರಾಷ್ಟ್ರಗಳಿಗೆ ಅವಶ್ಯಕ ವಸ್ತುಗಳನ್ನು ಸರಬರಾಜು ಮಾಡಿದ ಬಗ್ಗೆ ರಾಜ್ಯ ಸರ್ಕಾರವು ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆದು ಅಭಿನಂದಿಸಿತು. ಅವರು ಅದನ್ನು ನಮಗೆ ರವಾನಿಸಿದರು. ನಮ್ಮ ಸಂತೋಷಕ್ಕೆ ಪಾರ ಉಂಟೆ? ಹತ್ತು ವರ್ಷ ಕಾಪಾಡಿ ರಕ್ಷಿಸಿದ ತೆಂಗಿನ ಮರ ಫಲ ಕೊಟ್ಟಾಗ ಅದರ ಎಳನೀರು ಕುಡಿದ ಸಜ್ಜನನೊಬ್ಬ ಬೆಳೆಗಾರನಿಗೆ ಅಭಿನಂದಿಸಿದರೆ ಆತ ಹಿಗ್ಗಿ ಈರೆಕಾಯಾಗುವುದಿಲ್ಲವೆ? ಆದರೆ ಇಂದು ಈ ಸಂಘದ ಸ್ಥಿತಿ ಹೇಳಿಕೊಳ್ಳುವಂತಿಲ್ಲ. ಏನೇ ಆಗಲಿ ಚಿಕ್ಕನಾಯ್ಕನಹಳ್ಳಿಯ ನನ್ನ ಸರ್ವಿಸ್ಸು ಮರೆಯಲಾಗದಂತಹುದೆಂದೇ ಹೇಳಬೇಕು.

ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರನ್ನು ಬಿಟ್ಟರೆ ದೇವಾಂಗದವರು ಬರುತ್ತಾರೆ. ಇವರೆಲ್ಲಾ ಸಾಮಾನ್ಯವಾಗಿ ಹತ್ತಿ ಕೈ ಮಗ್ಗಗಳನ್ನೇ ಅವಲಂಭಿಸಿ ಜೀವನ ನಡೆಸುತ್ತಿದ್ದರು. ಎರಡನೇ ಯುದ್ಧದ ಪರಿಣಾಮ ಇವರಿಗೆ ಬಟ್ಟೆ ನೇಯಲು ದಾರವೇ ಸಿಕ್ಕುತ್ತಿರಲಿಲ್ಲ. ಇವರ ಸ್ಥಿತಿ ಚಿಂತಾಜನಕವಾಗಿತ್ತು. ಈ ಬಗ್ಗೆ ಪರಿಹಾರವೇನು ಎಂದು ನಾನು, ಮಿತ್ರ ಜಿ.ವಿ.ನಾರಾಯಣಮೂರ್ತಿ ಯೋಚಿಸಿದೆವು. ತಕ್ಷಣವೇ ಸ್ಥಳೀಯ ಮರಗೆಲಸದವರನ್ನು ಬರಮಾಡಿಕೊಂಡು

ಸುಮಾರು 40-45 ಚರಕಗಳನ್ನು ತಯಾರಿಸಿದೆವು. ಅಷ್ಟೇ ಷೇರುದಾರರುಗಳನ್ನು ಹುಡುಕಿ ನೂಲು ತಯಾರು ಮಾಡುವವರ ಸಹಕಾರ ಸಂಘವೊಂದನ್ನು ಏರ್ಪಾಡು ಮಾಡಿದೆವು. ಪ್ರತಿಯೊಬ್ಬ ಷೇರುದಾರರಿಗೂ ಚರಕ ಕೊಟ್ಟು ಹತ್ತಿ ಒದಗಿಸಿ ನೂಲು ತೆಗೆಯುವಂತೆ ಹೇಳಿದೆವು ನನ್ನ ಮನೆಯಲ್ಲಿ ನನ್ನ ಮಡದಿ ಸಹ ಚರಕ ಪಡೆದು ನೂಲು ತೆಗೆದು ಸಂಘಕ್ಕೆ ಕೊಟ್ಟು ಆರಾಣೆನೊ ಅಥವಾ ಎಂಟಾಣೆನೋ ಸಂಪಾದನೆ ಮಾಡುತ್ತಿದ್ದಳು. ಕೆಲವರು ನೇರವಾಗಿ ನೇಯ್ಗೆಯವರಿಗೆ ನೂಲನ್ನು ಕೊಟ್ಟು ಸಂಪಾದನೆ ಮಾಡುತ್ತಿದ್ದರು. ಇದರಿಂದಾಗಿ ಹತ್ತಿದಾರದ ಬೆಲೆ ಎಷ್ಟೋ ಕಡಿಮೆಯಾಯಿತು. ಅಲ್ಲದೆ ಉಪವಾಸದಿಂದ ನರಳಬೇಕಾಗಿದ್ದ ನೇಯ್ಗೆ ಕುಟುಂಬಕ್ಕೆ ಎಷ್ಟೋ ಸಹಾಯವಾಯಿತು. ಇದರ ಅಧ್ಯಕ್ಷನಾಗಿ ಜಿ.ವಿ.ನಾರಾಯಣಮೂರ್ತಿ ಇದ್ದ. ದೊಡ್ಡ ಪ್ರಮಾಣದಲ್ಲಿದ್ದರೆ ಇದೊಂದು ಉತ್ತಮ ಗೃಹ ಕೈಗಾರಿಕೆಯಾಗುವುದರಲ್ಲಿ ಸಂಶಯವಿರಲಿಲ್ಲ.

ಒಂದು ದಿನ ನಾನು ಮತ್ತು ಜಿವಿನಾ ಇಬ್ಬರೂ ಆದಿ ಕರ್ನಾಟಕರ ಕೇರಿಗೆ ಹೋಗಿ ಮನೆ ಮನೆಗೂ ಭೇಟಿ ಕೊಟ್ಟೆವು. ಅವರಲ್ಲಿ ಅನೇಕರು ಚರ್ಮದ ಮೆಟ್ಟುಗಳನ್ನು ತಯಾರಿಸುತ್ತಿದ್ದರು. ಒಳ್ಳೆಯ ಹದ ಮಾಡಿದ ಚರ್ಮ ಅವರಿಗೆ ದೊರಕುತ್ತಿರಲಿಲ್ಲ. ತಯಾರು ಮಾಡಿದ ತಮ್ಮ ಸರಕುಗಳಿಗೆ ಗಿರಾಕಿ ಹುಡುಕುವುದೆ ಅವರಿಗೆ ಕಷ್ಟವಾಗಿತ್ತು. ಈ ಅನಾನುಕೂಲಗಳ ನಿವಾರಣೆಗೆ ಚಪ್ಪಲಿ ತಯಾರಕರ ಹಾಗೂ ಮಾರಾಟಗಾರರ ಸಹಕಾರ ಸಂಘವೊಂದನ್ನು ಯಾಕೆ ಪ್ರಾರಂಭಿಸಬಾರದೆಂದು ಯೋಚಿಸಿ ಷುರು ಮಾಡಿಯೇ ಬಿಟ್ಟೆವು. ಅವರಲ್ಲಿ ಸ್ವಲ್ಪ ವಿದ್ಯಾವಂತನಾದ ಕದರಪ್ಪ ಎಂಬುವನನ್ನು ಅಧ್ಯಕ್ಷನನ್ನಾಗಿಯೂ, ಚಿಕ್ಕಸಿದ್ದಯ್ಯ ಎಂಬಾತನನ್ನು ಸೆಕ್ರೆಟರಿಯನ್ನಾಗಿಯೂ ನೇಮಿಸಿದೆವು. ಗ್ರಾಮ ಚಾವಡಿಯಲ್ಲಿ ಪುರಸಭೆಯವರಿಂದ ಒಂದು ಕೊಠಡಿ ಸಹ ಪಡೆದು ಮಾರಾಟ ಮಳಿಗೆ ಪ್ರಾರಂಭಿಸಿದೆವು. ಬೆಂಗಳೂರು ಚರ್ಮದ ಗಡಂಗ್ ಒಂದರಿಂದ ಹದ ಮಾಡಿದ ಚರ್ಮವನ್ನು ನಾನೇ ಹೊತ್ತು ತಂದೆ. ಅದನ್ನೆಲ್ಲಾ ಅವರಿಗೆ ಹಂಚಿದೆ. ಮಾಲುಗಳೇನೋ ತಯಾರಾದವು. ದುರಾದೃಷ್ಟವಶಾತ್ ಊರಿಗೆ ಪ್ಲೇಗ್ ಬಂತು. ಊರು ಖಾಲಿ ಮಾಡಲಾಯಿತು. ತಯಾರಾದ ಮಾಲುಗಳನ್ನು ಎಲ್ಲಿಡಬೇಕೆಂಬ ಪ್ರಶ್ನೆ ಉದ್ಭವವಾಯಿತು, ಸಂಘದ ಪದಾಧಿಕಾರಿಗಳು ಕೈ ಎತ್ತಿದರು. ನಾನು ಸಂಸಾರವನ್ನು ತುಮಕೂರಿಗೆ ಕಳುಹಿಸಿ ಊರ ಹೊರಗಡೆ ಕೆರೆಯ ಅಂಗಳದಲ್ಲಿದ್ದ ಅಡಮಾನ ಸಂಘದ ಆಫೀಸಿಗೆ ನಮ್ಮ ಆಫೀಸಿನ ರೆಕಾರ್ಡ್ ಸಮೇತ ಹೋದೆ.

ಅಲ್ಲಿಗೆ ತಯಾರಾದ ಚಪ್ಪಲಿಗಳು ಬಂದವು. ಒಂದಾರು ತಿಂಗಳು ನನ್ನ ಜೊತೆಲೇ ಅವು ವಾಸ ಮಾಡಿದವು. ಪ್ಲೇಗ್ ಗಲಾಟೆ ನಿಂತ ನಂತರ ಚಾವಡಿಯ ಕೊಠಡಿಗೆ ಸಾಗಿಸಿ ಅವುಗಳ ವಿಲೇವಾರಿ ಮಾಡಲಾಯಿತು. ಆ ಕಾಲದಲ್ಲಿ ಆದಿ ಕರ್ನಾಟಕ ಸಹಕಾರ ಸಂಘ ವಿನೂತನವಾಗಿದ್ದು ಎಲ್ಲರ ಆಸಕ್ತಿ ಕೆರಳಿಸಿತು. ಈ ರೀತಿ ನಾನು ಮತ್ತು ಜವಿನಾ ಸಹಕಾರ ಸಂಘಗಳನ್ನು ಹುಟ್ಟು ಹಾಕುತ್ತಿದ್ದುದನ್ನು ಗಮನಿಸಿದ ಕೆಲವರು ನಾಟಕ ಮುಂತಾದೆಡೆ ''ಇನ್ನಾವ ಕಸುಬಿನ ಸಹಕಾರ ಸಂಘ ಬತ್ತದೊ'' ಎಂದು ಉಲ್ಲೇಖಿಸುತ್ತಿದ್ದರು. ಮತ್ತೊಂದು ವರ್ಗ 'ಈ ಅಸಂಘಟಿತರನ್ನು ಶೋಷಿಸುತ್ತಿದ್ದ ವರ್ಗ ನನ್ನನ್ನು ಕಮ್ಯುನಿಸ್ಟ್' ಎಂದು ಕರೆಯುತ್ತಿದ್ದರು. 'ಕುರುಬರನ್ನು ಸೇರಿಸಿಕೊಂಡು ಈ ಮಲ್ಲಪ್ಪ ಏನೋ ಮಾಡ್ತಾ ಅವ್ನೆ' ಅಂತ ಮೇಲಕ್ಕೆ ಬೇನಾಮೆ ಅರ್ಜಿ ಬರೆದು ಹಾಕಿದರು. ವಿಚಾರಣೆಗೆ ಬಂದವರು ಆದ ಕೆಲಸ ನೋಡಿ 'ಇವರು ನಮ್ಮ ಇಲಾಖೆ ಕೆಲಸ ಮಾಡ್ತಿದ್ದಾರೆ. ಕಮುನಿಸ್ಟ್ ಅಲ್ಲ' ಅಂದ್ರು. ನಾನು ಕೂಡ ಇದಾವುವನ್ನೂ ಹಚ್ಚಿಕೊಳ್ಳದೆ ಇತರೆ ಸಹಕಾರ ಸಂಘಗಳಿಗೂ ಭೇಟಿ ಇತ್ತೆ. ಅವುಗಳ ಲೆಕ್ಕ ಪತ್ರ ತನಿಖೆ ಮಾಡಿ ವಾರ್ಷಿಕ ಸಭೆಗಳನ್ನು ಜರುಗಿಸುವುದು ನನ್ನ ಕೆಲಸವಾಯಿತು. ಅವುಗಳಲ್ಲಿ ಅನೇಕ ಸಹಕಾರ ಸಂಘಗಳು ಅತಿಯಾದ ಸಾಲ ಕೊಟ್ಟು ಅದನ್ನು ವಸೂಲಿ ಮಾಡದೆ ಚಿರನಿದ್ರೆಯಲ್ಲಿದ್ದವು. ಹಂದನಕೆರೆ, ಮತ್ತಿಘಟ್ಟ, ಹುಳಿಯಾರ್, ಕಂದೀಕೆರೆ ಸಹಕಾರ ಸಂಘಗಳು ಬಾಗಿಲು ಮುಚ್ಚಿಕೊಂಡಿದ್ದವು. ಮತ್ತಿಗಟ್ಟ, ಕಂದೀಕೆರೆ ತಮಡೀಹಳ್ಳಿ ಸಂಘಗಳು ಅಪೆಕ್ಸ್ ಬ್ಯಾಂಕಿನಿಂದ ಲಕ್ಷಾಂತರ ರೂಪಾಯಿ ಸಾಲ ತಂದು ವಿತರಣೆ ಮಾಡಿ ವಸೂಲಿ ಮಾಡಲಾಗದೆ ತಟಸ್ಥವಾಗಿದ್ದವು. ಇದಕ್ಕೆ ಕಾರಣ ಎರಡನೇ ಮಹಾಯುದ್ಧದ ನಂತರ ಬೆಲೆಗಳಲ್ಲಾದ ಭಾರೀ ಅಲ್ಲೋಲ ಕಲ್ಲೋಲ ಜಮೀನನ್ನು ಕೇಳುವವರೇ ಇಲ್ಲ. ಹಳ್ಳಿಗೆ ಹೋದರೆ ಜನ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದರು. ಅಪೆಕ್ಸ್‌ಬ್ಯಾಂಕ್‌ನವರು ಈ ಸಂದರ್ಭದಲ್ಲಿ ರೈತನ ಜಮೀನಿನ ಮೇಲೆ ಡಿಕ್ರಿ ತಂದು ಹರಾಜುಮಾಡಲು ಪ್ರಯತ್ನಿಸುತ್ತಿದ್ದರು. ರೈತರ ಸ್ಥಿತಿ ಕತ್ತರಿಯ ನಡುವೆ ಸಿಕ್ಕಿದ ಅಡಿಕೆಯಂತಾಗಿತ್ತು. ಆಮೇಲೆ ನಾನು ಅಂದಿನ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ಮುನಿನಂಜಪ್ಪರವರನ್ನು ಕಂಡು ಪರಿಸ್ಥಿತಿಯನ್ನು ವಿವರಿಸಿದೆ. ಅವರು ಸಾಲ ಪಡೆದ ಪ್ರತಿಯೊಂದು ಸಹಕಾರ ಸಂಘಕ್ಕೂ ಭೇಟಿಕೊಟ್ಟು ಅಲ್ಲಿಯೇ ಪರಿಹಾರೋಪಾಯವನ್ನು ಸೂಚಿಸುತ್ತಿದ್ದರು. ಆದರೂ ಪ್ರಕೃತಿ ದೇವತೆ ಕೈ ಬಿಟ್ಟರೆ ರೈತರನ್ನು ರಕ್ಷಿಸಲು ಯಾರೂ ಮುಂದೆ ಬರಲಾರರೆಂದು ನನಗನ್ನಿಸಿತು.

ಒಂದು ದಿನ ಆಗಿನ ಜಿಲ್ಲಾ ಬೋರ್ಡ್ ಅಧ್ಯಕ್ಷ ಎನ್.ಚನ್ನಪ್ಪ ಇವರು ಚಿಕ್ಕನಾಯಕನಹಳ್ಳಿಗೆ ಬಂದಾಗ, ಕಂಬಳಿ ಮಾರ್ಕೆಟಿಂಗ್ ಸಂಘ ಮೆಟ್ಟು ತಯಾರಕರ ಸಂಘ ಮತ್ತು ನೂಲು ತಯಾರಕರ ಸಂಘ ಇವುಗಳಿಗೆ ಭೇಟಿ ಕೊಟ್ಟರು. ಬಡ ಬಗ್ಗರಿಗೆ ಉದ್ಯೋಗವಕಾಶ ಕಲ್ಪಿಸಿಕೊಡುತ್ತಿರುವ ಹಾಗೂ ಅವರ ಆರ್ಥಿಕಾಭಿವೃದ್ಧಿಗಾಗಿ ದುಡಿಯುವ ಈ ಕಸಬುದಾರರ ಸಂಘಗಳು, ರಾಜ್ಯದ ಇತರರಿಗೆ ಮಾದರಿಯಾಗಿವೆಯೆಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಜಿಲ್ಲಾ ಬೋರ್ಡಿನಿಂದ ತಲಾ ರೂ. 250-00 ಗಳನ್ನು ಈ ಸಂಘಗಳಿಗೆ ಗ್ರಾಂಟು ಮಂಜೂರು ಮಾಡಿದರು.

ಇಲ್ಲಿ ನಾನು ಸೊಸೈಟಿ ಇನ್ಸ್‌ಪೆಕ್ಟರ್ ಕೆಲಸದ ಜೊತೆ ತಾಲ್ಲೂಕು ಅಡಮಾನ ಬ್ಯಾಂಕಿನ ದರಖಾಸ್ತು ಅರ್ಜಿಗಳನ್ನು ವಿಲೇವಾರಿ ಮಾಡುವ ಹೊಣೆಕೂಡ ಹೊತ್ತಿದ್ದೆ. ಈ ಸಂಘದಲ್ಲಿ ನುರಿತ ಗುಮಾಸ್ತರು ಕೂಡ ಇದ್ದರು. ಅವರ ಹೆಸರು ಶ್ಯಾನುಭೋಗ್ ಎಂದು. ಸಾಮಾನ್ಯವಾಗಿ ಅಮಲ್ದಾರರು ಇದರ ಎಕ್ಸ್-ಅಫಿಷಿಯೊ ಅಧ್ಯಕ್ಷರಾಗಿರುತ್ತಿದ್ದರು. ಒಂದಿಬ್ಬರು ಪಟೇಲರು, ಶ್ಯಾನುಭೋಗರು ಹಾಗೂ ಸಬ್‌ರಿಜಿಸ್ಟ್ರಾರ್‌ರವರು ಇದರ ಸದ್ಯಸರು. ಆಗಿನ್ನು ನಾಮಕರಣದ ಸದಸ್ಯರೇ ಇರುತ್ತಿದ್ದರು. ತಿಂಗಳಿಗೆ ಒಂದಾವರ್ತಿ ಮಾತ್ರ ಸಭೆ ಸೇರುತ್ತಿತ್ತು. ನಾನು ಹೋದ ಹೊಸತರಲ್ಲಿ ಸಭೆ ಸೇರಿತು. ಸಭೆ ಪ್ರಾರಂಭವಾಗುವುದಕ್ಕೆ ಐದು ನಿಮಿಷಗಳ ಮುಂಚೆ ಸಬ್‌ರಿಜಿಸ್ಟ್ರಾರ್ ಸೆಕ್ರೆಟರಿಯವರೂ ಗುಮಾಸ್ತರೂ ''ಹೊರಡಿ, ಹೊರಡಿ'' ಎಂದವಸರಪಡಿಸಿದರು. ''ಎಲ್ಲಿಗೆ'' ಎಂದೆ. ಅಮಲ್ದಾರ್-ಸಾಹೇಬರ ಮನೆಯಲ್ಲಿಯೇ ಯಾವಾಗಲೂ ಈ ಸಭೆ ನಡೆಯುವುದು ಎಂದರು. ನಾನು ಎಲ್ಲ ಸದಸ್ಯರಿಗೂ ಬೈಲಾದಲ್ಲಿದ್ದ ನಿಯಮಗಳನ್ನು ತಿಳಿಯಹೇಳಿ ಕಛೇರಿಯ ಆವರಣದಲ್ಲಿಯೇ ಇದು ನಡೆಯತಕ್ಕದ್ದೆಂದು ಹೇಳಿದೆ. ಅವರೆಲ್ಲ ಒಪ್ಪಿದರು. ನಿರ್ಣಯವನ್ನು ಗುಮಾಸ್ತರ ಕೈಲಿ ಅಮಲ್ದಾರ್‌ರವರಿಗೆ ಕಳುಹಿಸಿದರು. ಆತ ಸಭೆಗೆ ಬರುವುದಿರಲಿ ತುಚ್ಛವಾಗಿ ನಮ್ಮನ್ನು ಬೈದು ಕಳುಹಿಸಿದ. ಹಿರಿಯ ಸದಸ್ಯರೊಬ್ಬರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮಿನಿಟ್‌ಗಳನ್ನು ಗುರುತು ಹಾಕಿಸಿದೆ. ಅಮಲ್ದಾರ್ ಬಷೀರುದ್ದೀನ್ ತುಂಬಾ ದುರಹಂಕಾರಿ. ಲಂಚಕೋರ. ಮುಂದೆ ನನ್ನ ದಿನನಿತ್ಯ ಕೆಲಸದ ಬಗ್ಗೆಯೂ ತುಂಬಾ ತೊಂದರೆ ಕೊಡಲು ಬಂದ. ಈಚೆಗೇನೋ ಆತ ಬೆಂಗಳೂರಿನಲ್ಲಿ ರೆಂಟ್ ಕಂಟ್ರೋಲ್ ಆಫೀಸಿನಲ್ಲಿ ಲಂಚ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದು

ಜೈಲುವಾಸ ಅನುಭವಿಸಿ ದುರ್ಮರಣಕ್ಕೀಡಾದನೆಂದು ಕೇಳಿದೆ. ಕೈ ಬಾಯಿ ಕಚ್ಚೆ ಭದ್ರವಿಲ್ಲದ ಮನುಷ್ಯನಿಗೆ ಹೀಗಾಗುವುದು ಸಹಜ. ಸರ್ಕಾರ ನಮಗೆ ಕೊಡೋ ಸಂಬಳ ಜೀವನ ನಿರ್ವಹಣೆಗೆ ಸಾಕಾಗುತ್ತದೆ. ಆದರೆ ದುಶ್ಚಟಗಳಿಗೆ ದುಡ್ಡು ಹೊಂದಿಸಬೇಕಾದರೆ ಅಡ್ಡದಾರಿ ಹಿಡಿಲೇಬೇಕು ಅಲ್ಲವೆ?

ನಾನಿಲ್ಲಿರಬೇಕಾದ್ರೆ ಚಿಕ್ಕನಾಯಕನಹಳ್ಳಿ ಪುರಸಭೆಯ ಚುನಾವಣೆ ಬಂತು. ಅಲ್ಲೊಂದು ವಿಭಾಗದ ಪೋಲಿಂಗ್ ಸ್ಟೇಷನ್‌ಗೆ ಪ್ರಿಸೈಡಿಂಗ್ ಆಫೀಸರ್ ಆಗಿ ನನ್ನನ್ನು ನೇಮಿಸಿದರು. ಇದ್ದಕ್ಕಿದ್ದ ಹಾಗೆ ಬ್ರಾಹ್ಮಣ, ದೇವಾಂಗ, ವೈಶ್ಯ ಉಮೇದುವಾರರು ಒಂದಾಗಿ ಈ ಸೊಸೈಟಿ ಇನ್ಸ್‌ಪೆಕ್ಟರ್ ಕುರುಬರ ಅಭ್ಯರ್ಥಿಗಳಿಗೆ ಸಹಾಯ ಮಾಡುತ್ತಾನೆ ಅಂತ ಗುಲ್ಲೆಬ್ಬಿಸಿದರು. ನನಗೆ ಒಂದು ಕ್ಷಣ ಬೇಸರ ಬಂದು ''ಊರಕ್ಕಿ ಊರುಬೇಳೆ ಉಂಡೋಗೆ ಮಾರವ್ವ'' ಎಂದುಕೊಂಡು ಯಾಕೆ ಬೇಕು ಈ ಬೇವಾರ್ಸಿ ಕೆಲಸ ಎನ್ನಿಸಿತು. ಬೇಡಾಂತ ಈಗಲೇ ಬರೆದುಕೊಡಲೇ ಅನ್ನಿಸಿತು. ಹಾಗೇ ಹೊರಟು ಹೋದರೆ ಅವರ ಅನುಮಾನ ನನ್ನಲ್ಲೂ ಇದೆ ಎನ್ನುವುದಾಗುತ್ತದೆ. ಅಂದ್ಕೊಂಡ್ರೆ ಅಂದ್ಕೊಳ್ಳಿ ಅಂತ ಮೌನವಹಿಸಿದೆ. ಪ್ರಚಾರದ ನಂತರ ಮತದಾನ ನಡೆಯಿತು. ಯಾವುದನ್ನು ಹಚ್ಚಿಕೊಳ್ಳದೆ ನನ್ನ ಕರ್ತವ್ಯ ನಿರ್ವಹಿಸಿದೆ. ಫಲಿತಾಂಶ ಬಂತು. ನನ್ನ ಕೆಲಸದ ನಂತರ ವೋಟಿಂಗ್ ಎಲ್ಲಾ ಆದ ಮೇಲೆ ಮನೆಗೆ ಹೋಗುತ್ತಿದ್ದರೆ, ಮಿತ್ರ ಮಂಡಲಿಯ ಸದಸ್ಯರು ಬಂದು ತಾವಾಡಿದ ಮಾತಿಗೆ ಕ್ಷಮೆ ಕೇಳಿದರು. ನಕ್ಕು ಹೆಜ್ಜೆ ಹಾಕಿದೆ. ಕುರುಬ ಅಭ್ಯರ್ಥಿ ಗೆದ್ದಿದ್ದರೆ ಇದೇ ಜನ ಏನಂತಿದ್ದರು? ನನ್ನ ಜನಾಂಗದ ಹಿಂದುಳಿದವನ ಬಗ್ಗೆ ನನ್ನಲ್ಲಿ ಸಹಾನುಭೂತಿ ಇದೆಯೇ ಹೊರತು ಅಪಾತ್ರನಿಗೆ ಸ್ಥಾನ ಕೊಡಿಸಬೇಕೆಂಬ ದುರಾಗ್ರಹವಿದ್ದಿರಲಿಲ್ಲ. ನನ್ನ ಸ್ನೇಹಿತರು, ಮಿತ್ರ ಮಂಡಲಿ ಟೀಕೆ ಮಾಡುತ್ತಿದ್ದರೆ ನೀನೇಕೆ ಮಾತನಾಡುತ್ತಿರಲಿಲ್ಲ ಎನ್ನುತ್ತಿದ್ದರು. ನಾನಂತು ಸುಮ್ಮನೆ ಮುಗುಳ್ನಗೆ ನಗುತ್ತಿದ್ದೆ. ಮನಸ್ಸು ಮಾತ್ರ ಎಸ್.ವಿ.ಪರಮೇಶ್ವರಭಟ್ಟರ ಮಾತೊಂದನ್ನು ನೆನೆಸಿಕೊಳ್ಳುತ್ತಿತ್ತು.-

''ಮಳೆಗಾಲದೊಳು ನೀ ಹಾಡುವುದಿಲ್ಲವೆ? ಕೇಳಿತು ಪಿಕವನು ಶುಕ
ಕಪ್ಪೆಗಳು ವಟಗುಟ್ಟುವೆಡೆಯೊಳ್ ಮೌನವೇ ಲೇಸೆಂದು ಹೇಳಿತು ಪಿಕ''

ಆಗ ಕಂಟ್ರೋಲ್ ಕಾಲ. ದುಡ್ಡಿದ್ದರೂ ದಿನನಿತ್ಯದ ವಸ್ತುಗಳು ಸಿಕ್ಕುತ್ತಿರಲಿಲ್ಲ. ಕಂಬಳಿ ನೇಕಾರರ ಸಹಕಾರ ಸಂಘಕ್ಕೆ ಸರ್ಕಾರ ತನ್ನ ಸದಸ್ಯರಿಗೆ ಹಂಚುವುದಕ್ಕಾಗಿ

ಅಗತ್ಯ ವಸ್ತುಗಳನ್ನು ಕೊಡುತ್ತಿತ್ತು. ಒಂದು ದಿನ ಸಹಕಾರ ಸಂಘಗಳಿಗೆ ಭೇಟಿ ಕೊಟ್ಟು ಮಧ್ಯಾಹ್ನ ಮನೆಗೆ ಬಂದರೆ ಟೇಬಲ್ ಮೇಲೆ ಒಂದು ಪೊಟ್ಟಣ ಕುಳಿತಿತ್ತು. ಹೆಂಡತಿಯನ್ನು ವಿಚಾರಿಸಿದೆ. 'ಗಂಗಯ್ಯನವರು ಕಳಿಸಿದರು' ಎಂದಳು. ನೋಡಿದರೆ ಸಕ್ಕರೆ. 'ನಿನಗೇನೂ ಗೊತ್ತಾಗೋದಿಲ್ಲ' ಎಂದಾಕೆನ ಬೈದು ಜವಾನ ಪುಟ್ಟಬಾಲಯ್ಯನನ್ನು ಕರೆದು ಅದನ್ನು ಹಿಂದಕ್ಕೆ ಕಳುಹಿಸಿದೆ, ಗಂಗಯ್ಯ ಒಂದೆರಡು ದಿನ ಕಾಣಿಸಿಕೊಳ್ಳಲೇ ಇಲ್ಲ. ನಾನೇ ಹುಡುಕಿಕೊಂಡು ಹೋಗಿ 'ಇನ್ನು ಮೇಲೆ ಇಂಥ ಕೆಲಸ ಮಾಡಬೇಡ, ನಮ್ಮ ಕಾರ್ಡಿಗೆ ಕೊಡೋ ಸಕ್ಕರೆ ನಮಗೆ ಸಾಕಾಗ್ತದೆ' ಅಂತ ಹೇಳಿ ಬಂದೆ.

ಕುರುಬರ ಕೇರೀಲಿ ಆಗ ಹೊಸದಾಗಿ ರೇವಣಸಿದ್ದೇಶ್ವರ ಮಠ ಕಟ್ಟಲಾಗಿತ್ತು. ನಮ್ಮ ಕಂಬಳಿ ನೇಕಾರರ ಆಫೀಸ್ ಕೂಡ ಅಲ್ಲೇ ನಡೆಯುತ್ತಿತ್ತು. ಪ್ರತ್ಯೇಕ ಸ್ಕೂಲ್ ಕಟ್ಟಡ ಏಕೆ ನಿರ್ಮಿಸಬಾರದೆಂದುಕೊಂಡೆ. ಹೊರಗಡೆ ವಿಶಾಲವಾದ ಸ್ಥಳವೊಂದಿತ್ತು. ನಾನು ಅಲ್ಪಸ್ವಲ್ಪ ಸಂಗ್ರಹಿಸಿದರೂ ಕಟ್ಟಡಕ್ಕೆ ಆಗುವಷ್ಟು ಹಣ ಸಂಗ್ರಹಿಸಲು ಸಾಧ್ಯವೇ ಅಂತ ಏನಾದರೂ ಮಾಡಬೇಕೆಂದುಕೊಂಡೆ. ಆಗ ಊರಿನಲ್ಲಿದ್ದ ಅಭಿನವ ಭಕ್ತಶಿರೋಮಣಿ ಶ್ರೀ ಸಿ.ಬಿ.ಮಲ್ಲಪ್ಪನವರಿಂದ ಸಹಾಯಧನ ನಾಟಕವಾಡಿಸೋಣ ಅಂತ ನಿರ್ಧರಿಸಿದೆ. ಸಿ.ಬಿ.ಮಲ್ಲಪ್ಪನವರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾದ್ದೇನಿಲ್ಲ, ಕನ್ನಡ ರಂಗಭೂಮಿಯಲ್ಲಿ ಭಕ್ತಿರಸದ ಹೊಳೆ ಹರಿಸಿದ ಮಹಾನುಭಾವರು ಅವರು. ಅವರ 'ಭಕ್ತ ಕುಂಬಾರ' 'ಭಕ್ತ ಕಬೀರ' 'ತುಳಸೀದಾಸ' 'ಸತ್ಯ ಹರಿಶ್ಚಂದ್ರ' ಮುಂತಾದ ನಾಟಕಗಳನ್ನು ನೋಡಿದ ಜನ ಅವರನ್ನೆಂದೂ ಮರೆಯುವುದಿಲ್ಲ. ತಮಿಳುನಾಡಿನ ಜನರೇ ಈ ಕನ್ನಡದ ವರನಟನ ಅಭಿನಯ ನೋಡಿ ಮೂಕರಾಗಿ 'ಅಭಿನವ ಭಕ್ತಶಿರೋಮಣಿ' ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಅರಮನೆ ಗುರುಮನೆಗಳೆರಡರ ಸನ್ಮಾನ ಆಶೀರ್ವಾದಗಳನ್ನು ಪಡೆದ ಶ್ರೀಯುತರು 1923ರಿಂದ 1953ರವರೆಗೆ 'ಚಂದ್ರ ಮೌಳೇಶ್ವರ ನಾಟಕ ಸಭಾ' ಎಂಬ ನಾಟಕ ಕಂಪನಿಯನ್ನು ನಡೆಸಿ ಅನೇಕ ನಟರ ಬೆಳವಣಿಗೆಗೆ ಕಾರಣರಾಗಿದ್ದಾರೆ. ನಾನು ಹೋಗಿ ಅವರನ್ನು ಕೇಳಿದ ತಕ್ಷಣ 'ಅಯ್ಯೋ ದೇವರೆ, ನಮ್ಮೂರಾಗೆ ಇಸ್ಕೂಲ್ ಕಟ್ಟಾಕೆ ಇಷ್ಟೊಂದು ಕೇಳಬೇಕೆ? ಆಯ್ತು ಬಿಡಿ. 'ಭಿಕ್ಷವ ತಂದಾತಂ ಭಿಕ್ಷವಿಕ್ಕಿ ಉಣ್ಣಬೇಕು' ಅಂತಾರೆ ಹಿರಿಯರು. ಅಂಥದ್ದರಲ್ಲಿ ನನ್ನ ಕೈಲಾದ್ದನ್ನ ಸಂತೋಷದಿಂದ ಮಾಡ್ತೀನಿ' ಎಂದರು. ಭಕ್ತ ಘೋರಕುಂಬಾರ ನಾಟಕದ ವ್ಯವಸ್ಥೆ ಮಾಡಿ ಟಿಕೆಟ್‌ಗಳನ್ನೆಲ್ಲಾ ಮುದ್ರಿಸಿದೆ. ನಾನು

20 ರೂ. ಕೊಟ್ಟು 2 ಟಿಕೆಟ್ ಪಡೆದೆ. ಸರಿ, ಎಲ್ಲ ಡೈರೆಕ್ಟರ್‌ಗಳೂ 3-4 ಟಿಕೆಟ್‌ಗಳನ್ನ ಪಡೆದರು. ಕಷ್ಟಪಟ್ಟು ಎಲ್ಲ ಟಿಕೆಟ್‌ಗಳನ್ನೂ ಮಾರಿದ್ದಾಯ್ತು. ನಾಟಕ ಚೆನ್ನಾಗಿ ನಡೆಯಿತು. ಅದರಿಂದ 5-6 ಸಾವಿರ ರೂಪಾಯಿ ಬಂತು. ಅದರಿಂದ ಕಟ್ಟಡಕ್ಕೆ ಕಲ್ಲು, ಸಿಮೆಂಟ್, ಇಟ್ಟಿಗೆ ವಗೈರೆ ಜಮಾಯಿಸಲಾಯಿತು.

ನಾನು ಈ ರೀತಿ ಕೆಲಸ ಮಾಡುತ್ತಿದ್ದು, ನೀಟಾಗಿ ಡ್ರಸ್ ಮಾಡಿಕೊಂಡು ಚಟುವಟಿಕೆಯಲ್ಲಿದ್ದುದನ್ನು ಕಂಡ ಕೆಲವು ಯುವಕರು ಸೊಸೈಟಿ ಇನ್ಸ್‌ಪೆಕ್ಟರ್ ಹುದ್ದೆಗೆ ಭಾರೀ ಸಂಬಳ ಇದೆ ಎಂದು ಭಾವಿಸಿ ನನ್ನ ಹತ್ತಿರ ಬಂದು 'ತಾವು ಕೂಡ ಸೊಸೈಟಿ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಜಿ ಹಾಕಬೇಕೆಂದಿದ್ದೇವೆ. ಎಷ್ಟು ಸಂಬಳ?' ಅಂತ ವಿಚಾರಿಸಿದರು. ನಾನು ಆಗ ತೆಗೆದುಕೊಳ್ಳುತ್ತಿದ್ದ ಐವತ್ತೋ ಐವತ್ತೈದನ್ನೋ ಹೇಳಿದೆ. ಆಗ ಅವರು ಹರಳೆಣ್ಣೆ ಕುಡಿದ ಮುಖ ಮಾಡಿಕೊಂಡರು. ಅಥವಾ ಸೊಸೈಟಿ ಇನ್ಸ್‌ಪೆಕ್ಟರ್ ಕೆಲಸ ಅಂದರೆ ಊರದನ ಕಾಯೋ ದೊಡ್ಡ ಬೋರೇಗೌಡನಂತೆ ಎನಿಸಿರಬೇಕು. ಮಾತನಾಡದೆ ಹೊರಟು ಹೋದರು. ಏನಾದರೂ ಸಂಘಟನೆ ಅಥವಾ ಸಾರ್ವಜನಿಕ ಕೆಲಸ ಮಾಡಲಿಕ್ಕೆ ಹಣ ಅಥವಾ ಅಧಿಕಾರವೊಂದೇ ಮುಖ್ಯವಲ್ಲ. ರತ್ನ ಹೇಳೋ ಹಾಗೆ ಅವನು ''ನರಮನುಸ್ನಾಂತ ಉಟ್ಕೋನು, ಪಕದೋರ್ ಕಷ್ಟಕ್ಕೆ ಆಗೋನು ಬೇಕು'' ಅಷ್ಟೆ.

ಮನುಷ್ಯನಿಗೆ ಒಂದೊಂದು ಸಾರಿ ಮಾತ್ರವೇಕೆ-ಬಹುತೇಕ ಸಾರಿ ಅತಿಯಾದ ಆತ್ಮವಿಶ್ವಾಸ ಅಹಂಕಾರವಾಗಿ ಪರಿವರ್ತಿತವಾಗುತ್ತದೆ. ಆತ ಅಹಂಕಾರದ ಅಮಲಿನಲ್ಲಿ ತನ್ನ ಧ್ಯೇಯೋದ್ದೇಶಗಳನ್ನು ಮರೆಯುತ್ತಾನೆ. ತಾನೇ ಸರ್ವಜ್ಞನೆಂದು ಭಾವಿಸುತ್ತಾನೆ. ಇಂಗ್ಲೀಷ್‌ನಲ್ಲಿರುವ 'Pride went before Ambition follows him' ಎಂಬ ಮಾತು ನಿಜವೆನ್ನಿಸುತ್ತದೆ. ಅದಾದುದು ಹೀಗೆ. ಮೊದಲಿನಿಂದಲೂ ಕೂಡ ನಾನು ವಿಚಾರವಂತನೆಂಬ ಒಣಹೆಮ್ಮೆ. ನನಗೆ ಗೊತ್ತಿಲ್ಲದೆಯೇ ನಾನು ಮೂಢನಾಗಿದ್ದೆ. ಅದು ನಮ್ಮಕ್ಕನ ಸಾವಿನ ಸಂದರ್ಭದಲ್ಲಿ ಗೋಚರಿಸಿತು. ಚಿಕ್ಕನಾಯಕನಹಳ್ಳಿಯಲ್ಲಿರಬೇಕಾದರೆ ಅಕ್ಕನ ಖಾಯಿಲೆ ಸುದ್ದಿ ಹೊತ್ತ ತಂತಿ ಬಂತು. ಕುಟುಂಬ ಸಮೇತ ಹೋದೆ. ಅಕ್ಕನ ಸ್ಥಿತಿ ಚಿಂತಾಜನಕವಾಗಿತ್ತು. ಇನ್ನೇನು ಜೀವ ಹೋಗ್ತಿದೆ ಅನ್ನೇಕಾದ್ರೆ ದಿನಬಳಕೆಯ ವಸ್ತು ಅಲ್ಲಿರಬಾರದೆಂದು ಮನೆಯವರಿಗೆ ಅದನ್ನು ತೆಗೆಯಲು ಹೇಳಿದೆ. ಹಾಗೆಯೇ ಆಕೆನ ಜಗುಲಿಗೆ ಸಾಗಿಸಲು ಯೋಚಿಸಿದೆ. ಅಂತಹ ಸಂದರ್ಭದಲ್ಲೂ ಆಕೆ ತುಂಬಿದ ಸ್ವರದಲ್ಲಿ ''ಯಾಕಪ್ಪಾ ಈ ಗಲಾಟೆ'' ಎಂದಳು. ಒಂದೆರಡು

ಕ್ಷಣದಲ್ಲಿ ಪ್ರಾಣಪಕ್ಷಿ ಹಾರಿ ಹೋಯಿತು. ನಿಶ್ಶಬ್ದವಾಗಿ ಸಾಯಲು ಕೂಡ ನನ್ನಕ್ಕನಿಗೆ ಬಿಡದೆ ಸಂಪ್ರದಾಯ ಶರಣನಾದೆ. ತಾಯಿಯನ್ನು ಕಳೆದುಕೊಂಡ ಮೇಲೆ, ಖಾಯಿಲೆ ಬಿದ್ದ ಮೇಲೆ ಆಕೆ ನನ್ನನ್ನು ನೋಡಿಕೊಂಡ ಪರಿ, ವಂಶದ ಕುಡಿ ಮುರುಟಿ ಹೋಗ್ತದಲ್ಲ ಎಂಬ ಕಾಳಜಿಯೊಡನೆ ಆಕೆ ನನಗೆ ನಡೆಸಿದ ಮದುವೆ, ಇವೆಲ್ಲ ನನಗೆ ಆಗ ಮರತೇ ಹೋಗಿತ್ತು. ಅಲ್ಲದೆ ಮೊದಲಿನಿಂದಲೂ ಸಂಪ್ರದಾಯ ಟೀಕಿಸುತ್ತಿದ್ದ ನನ್ನ ವಿಚಾರ ಪ್ರಜ್ಞೆ ಎಲ್ಲಿ ಹೋಗಿತ್ತು? 'ನಿಜವಾಗಿಯೂ ತಾನೊಬ್ಬ ಶಾಶ್ವತ ವಿಚಾರವಾದಿ' ಎಂದು ಹೇಳಿಕೊಳ್ಳುವವನು ಠಕ್ಕ. ಪೆರಿಯಾರ್ ಹೇಳುವಂತೆ ದಿನ ದಿನ ಅಂತರಂಗ ಪರೀಕ್ಷಕನಿಂದ ಮಾತ್ರ ಆ ದಾರಿಯಲ್ಲಿ ನಡೆಯಲು ಸಾಧ್ಯ.

ಇಷ್ಟು ಹೊತ್ತಿಗಾಗಲೇ ನನಗೆ ದಾವಣಗೆರೆಗೆ ವರ್ಗವಾಗಿತ್ತು. ಊರಿನವರೆಲ್ಲಾ ಬೆಂಗಳೂರಿಗೆ ಹೋಗಿ ನನ್ನ ವರ್ಗ ತಡೆಯಲು ಪ್ರಯತ್ನಿಸಿದರು. ಆದರೆ ನಾನು ಮಾತ್ರ ಗಂಟು ಮೂಟೆ ಕಟ್ಟಿದ್ದೆ. ಆಗ ನನಗೊಂದು ಬೀಳ್ಕೊಡುಗೆ ಸಮಾರಂಭ, ಅದರಲ್ಲಿ ಭಾಗವಹಿಸಿ ಮಾತನಾಡಿದ ಸಿ.ಬಿ.ಮಲ್ಲಪ್ಪನವರು 'ಈ ವಯ್ಯ ನನ್ನೆಸ್ರು ಇಟ್ಕಂಡ್ ನಮ್ಮೂರಾಗೆ ಏನೇನೋ ಮಾಡ್ಬಿಟ್ಟು ನನ್ನೆಸ್ರಿಗೆ ಕೀರ್ತಿ ತಂದುಕೊಟ್ರು,' ಎಂದರು. ಚಿಕ್ಕನಾಯಕನಹಳ್ಳಿ ನನಗೆ ಕೇವಲ ಪ್ರಯೋಗಸ್ಥಳ ಮಾತ್ರವಾಗಿರದೆ ಫಲಕಂಡ ಸ್ಥಳವೂ ಆಗಿತ್ತು.

## ದಾವಣಗೆರೆ

ಚಿತ್ರದುರ್ಗ ಜಿಲ್ಲೆಯಲ್ಲೇ ದಾವಣಗೆರೆ ವಾಣಿಜ್ಯೋದ್ಯಮಕ್ಕಾಗಿ ಪ್ರಸಿದ್ಧವಾಗಿರುವ ಸ್ಥಳ. ಸ್ಥಳೀಯ ಐತಿಹ್ಯದ ಪ್ರಕಾರ 'ದಾವಣಗೆರೆ' ಎಂಬ ಹೆಸರು ಊರಿನತ್ತಿರದಲ್ಲಿಯೇ ಇದ್ದ ದಾವಣಕೆರೆ ಎಂಬುದರಿಂದ ಬಂದದ್ದಂತೆ. ದಾವಣಕೆರೆ ಒಂದಾನೊಂದು ಕಾಲದಲ್ಲಿ ದನಕರುಗಳ ಮಾರಾಟದ ಸ್ಥಳವಾಗಿತ್ತು. ಈಗಲೂ ಜಾತ್ರೆಗಳಲ್ಲಿ ಎತ್ತುಗಳ ಸಾಲಿಗೆ 'ದಾವಣಿ' ಎಂದು ಕರೆಯುತ್ತಾರೆ. ಕೆರೆಯ ಹತ್ತಿರದಲ್ಲಿದ್ದ ಹಳ್ಳಿಗೆ ''ದಾವಣಕೆರೆ'' ಎಂದು ಹೆಸರಾಯಿತು. ಕ್ರಮೇಣ ದಾವಣಗೆರೆ ಎಂದು ಪ್ರಸಿದ್ಧವಾಯಿತು. ಚಿಕ್ಕನಾಯಕನಹಳ್ಳಿಯಿಂದ 1945ರ ಜನವರಿಯಲ್ಲಿ ದಾವಣಗೆರೆಗೆ ಹೋದೆ. ಆಗ ಕಂಟ್ರೋಲ್‌ಗಳ ಕಾಲ. ದಿನನಿತ್ಯದ ಎಲ್ಲಾ ವಸ್ತುಗಳನ್ನು ಸೊಸೈಟಿಯಿಂದಲೇ ಪಡೆಯಬೇಕು. ಹೀಗಾಗಿ ಎಲ್ಲೆಲ್ಲೂ ದಿನನಿತ್ಯ ಬಳಕೆದಾರರ ಸಹಕಾರ ಸಂಘಗಳೇ ಹೆಚ್ಚು. ದಾವಣಗೆರೆ

ನಗರವೊಂದರಲ್ಲೇ ಸುಮಾರು ಹನ್ನೆರಡು ಈ ಸಹಕಾರ ಸಂಘಗಳಿದ್ದವು. ಇದರ ಜೊತೆ ದಾವಣಗೆರೆ ತಾಲ್ಲೂಕಿನಲ್ಲಿ ಸುಮಾರು 81ಕ್ಕೂ ಹೆಚ್ಚಿನ ಸಹಕಾರ ಸಂಘಗಳಿದ್ದವು. ನಮ್ಮ ಆಫೀಸಿಗೆ ಒಂದು ಕೊಠಡಿಯನ್ನು ಪಡೆದುಕೊಳ್ಳಲು ದೊಡ್ಡ ಹೋರಾಟವನ್ನೇ ನಡೆಸಬೇಕಾಯಿತು. 'ಇದೆಂಥ ಆಫೀಸು' 'ನಮ್ಮ ಪಕ್ಕದಲ್ಲಿರೋದು ಬೇಡ' ಅಂತ ಎಲ್ಲರೂ ಆಚೆಗೆ ನೂಕುವವರೇ. ಸಾಮಾನ್ಯವಾಗಿ ಸರ್ಕಾರಿ ನೌಕರರು ಕೆಲಸಕ್ಕೆ ಸೇರಿಕೊಂಡ ಮೇಲೆ ತಮ್ಮ ಆಫೀಸೊಂದೇ ಸೇವಾನಿರತ ಅವಶ್ಯಕ ಆಫೀಸೆಂದು ಭಾವಿಸಿ ಇತರರನ್ನು ದ್ವೇಷಿಸುತ್ತಾರೆ. ಎಲ್ಲರೂ ಕೂಡ ಸಾರ್ವಜನಿಕರ ಸೇವೆಗೆ ನಿಯಮಿತವಾದವರೆಂದು ಏಕೆ ಭಾವಿಸಿಕೊಳ್ಳುವುದಿಲ್ಲವೋ ತಿಳಿಯದು. ನಾನಂತೂ ಕಷ್ಟಪಟ್ಟು ಇಲಾಖೆಗೆ ರೆವಿನ್ಯೂ ಸಬ್ ಡಿವಿಷನ್ ಆಫೀಸು ಬದಿಯಲ್ಲಿಯೇ ಕಛೇರಿ ಪ್ರಾರಂಭಿಸಿದೆ. ಅದೇ ತಾನೇ ಬೆಂಗಳೂರಿನಲ್ಲಿ ಜರುಗಿದ ರಾಜ್ಯಮಟ್ಟದ ಸಹಕಾರ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಈ ಆಂದೋಳನ ಪರಿಣಾಮಕಾರಿಯಾಗಿ ಜರುಗಬೇಕಾದರೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನನ್ನ ಹಿಂದಿನ ಅನುಭವಗಳನ್ನು ಉಲ್ಲೇಖಿಸಿ ಮಾತನಾಡಿದ್ದೆ. ಇದು ಬಹಳ ಉತ್ತಮ ಪರಿಣಾಮ ಬೀರಿ ಇಲಾಖೆಯ ಮುಖ್ಯಸ್ಥರ ಗಮನ ಸೆಳೆಯಿತು. ಇದೇ ಸಂದರ್ಭದಲ್ಲಿ ನನ್ನ ಹೆಸರನ್ನು ಅಮಲ್ದಾರ್ ಹುದ್ದೆಗೆ ಶಿಫಾರಸು ಸಹ ಮಾಡಲಾಯಿತು. ನಾನು ಕೂಡ ಎಲ್ಲಾ ಇಲಾಖಾ ಪರೀಕ್ಷೆಗಳನ್ನೂ ಪಾಸು ಮಾಡಿದ್ದೆ. ಅದರ ಜೊತೆಗೆ ನನ್ನ ಈವರೆಗಿನ ಕೆಲಸ ಕಾರ್ಯಗಳನ್ನು ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಮೆಚ್ಚಿದ್ದರು.

ನಾನಿಲ್ಲಿರಬೇಕಾದರೆ ಮನುಷ್ಯನ ನೈಜಸ್ವಭಾವ ತಿಳಿಯುವಂತಾಯಿತು ಅಧಿಕಾರ ಅಂತಸ್ತುಗಳಿಲ್ಲದಿದ್ದರೆ ನಮ್ಮೊಡನೆ ಇರೋ ಜನ ಬಹಳ ಸರಳವಾಗಿ ಕಾಣುತ್ತಾರೆ. ಅವು ದೊರಕಿದ ತಕ್ಷಣ ನಮಗೆ ಕೈಗೆಟುಕದವರಾಗಿಬಿಡುತ್ತಾರೆ. ಅಧಿಕಾರ ಸೂತ್ರಗಳ ಮದದಿಂದಾಗಿ ಭ್ರಮಾಲೋಕದಲ್ಲಿ ವಿಹರಿಸುತ್ತಾರೆ. ಅದು ಹೋದ ತಕ್ಷಣ ಏನೋ ಕಳೆದುಕೊಂಡವರಂತೆ ಕುಸಿಯುತ್ತಾರೆ. ಆದರೆ ನಿಜವಾದ ಕೆಲಸಗಾರ ಆತ್ಮೋದ್ಧಾರ, ಸಮಾಜಾಭ್ಯುದಯ ಮತ್ತು ಲೋಕ ಸಂಗ್ರಹ ಸಾಧನೆಗೆ ಸೇವೆಯೊಂದೇ ರಾಜಮಾರ್ಗವೆಂದು ಭಾವಿಸುತ್ತಾನೆ. ಇಷ್ಟೊಂದು ನಾನು ಮಾತನಾಡಿದ್ದು ಅಲ್ಲಿದ್ದ ನನ್ನ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ತಮ್ಮಯ್ಯ ಅವರ ಸಂಬಂಧ ವಿಶ್ಲೇಷಿಸಲು. ಇವರು ನಾನು ಚನ್ನರಾಯಪಟ್ಟಣದಲ್ಲಿದ್ದಾಗ ಅಡಮಾನ್ ಬ್ಯಾಂಕಿನ ಇನ್‌ಸ್ಪೆಕ್ಟರಾಗಿದ್ದು, ನನಗೆ ತೀರಾ ಆಪ್ತಮಿತ್ರರಾಗಿದ್ದರು.

ನಾನಿಲ್ಲಿಗೆ ಬಂದಾಗ ಅವರು ನನಗೆ ಅಧಿಕಾರಿಯಾಗಿ ಬಣ್ಣ ಬದಲಾಯಿಸಿದ್ದರು. ಬಂದ ಹೊಸತರಲ್ಲಿ ಪರಿಚಯವೇ ಇಲ್ಲದವರಂತೆ ಗುಮ್ಮನೆ ಕುಳಿತಿದ್ದರು. 'ಸರಿ ನನಗೇನು ಇವರು ಮಾತನಾಡಿಸಿ ಆದರಿಸದಿದ್ದರೆ, ನನ್ನ ಕೆಲಸ ಅಷ್ಟು ಮಾಡಿಕೊಂಡು ಹೋದರೆ ಸಾಕು' ಎಂದು ನಾನು ಉದಾಸೀನ ಮಾಡಿದೆ. ನನ್ನ ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆಯ ಜೊತೆ ಅಡಮಾನ್ ಸಂಘದ ದರಖಾಸ್ತು ವಿಲೇವಾರಿ ಇನ್‌ಸ್ಪೆಕ್ಟರ್ ಕೆಲಸ ಕೂಡ ಮಾಡಬೇಕಾಗಿತ್ತು. ಅಸಿಸ್ಟೆಂಟ್ ರಿಜಿಸ್ಟ್ರಾರ್ ತಮ್ಮಯ್ಯನ ಜೊತೆ ಪ್ರವಾಸ ಹೋದಾಗ ಜನ ನನ್ನ ಬಳಿ ಬರುತ್ತಿದ್ದರು. ಸಂಪರ್ಕ ಹೆಚ್ಚಾದ್ದರಿಂದಲೋ ಏನೋ ನಾನು ಜನತೆಗೆ ಬೇಕಾದವನಾಗಿರಬಹುದು ಜನತೆಯ ಕಷ್ಟವನ್ನು ಆದಷ್ಟು ಮಟ್ಟಿಗೆ ನಿವಾರಿಸುವುದೇ ನನ್ನ ಜೀವಿತದ ಬಹು ಮಟ್ಟಿನ ಗುರಿಯಾಗಿತ್ತು. ಇದು ಅವರ ಅಸಮಾಧಾನಕ್ಕೆ ಕಾರಣವಾಯಿತು. ನಿಜ, ಡಿ.ವಿ.ಜಿ. ಹೇಳುವಂತೆ ಜನ 'ಮನೆಯೊಳೋ, ಮರದೊಳೋ, ಸಭೆಯೊಳೋ, ಸಂತೆಯೊಳೋ, ಕೊನೆಗೆ ಕಾಡೊಳೋ, ಮಸಣದೊಳೋ, ಮತ್ತೆಲ್ಲೋ'' ಗಣನೆಗೇರಲೆಂದು ಹಾತೊರೆಯುವರು. ಇನ್ನು ನನ್ನ ಟಿ.ಎ. ಬಿಲ್ ಕಳುಹಿಸಿದರೆ ಅರ್ಧಕ್ಕರ್ಧ ಹೊಡೆದು ಹಾಕುತ್ತಿದ್ದರು. ನಾನು ಟಿ.ಎ. ಬಿಲ್‌ನ ಬೋಗಸ್ ಮಾಡೋದಿಲ್ಲ ಅಂತ ಹೇಳಿದೆ. ಪ್ರಯೋಜನವಾಗಲಿಲ್ಲ, ಹಾಗಾದರೆ ಇಲಾಖೆಯಿಂದ ಟಿ.ಎ.ನೇ ತಕ್ಕೊಳ್ಳಬಾರದೆಂದು ನಿರ್ಧರಿಸಿದೆ. ಹಾಗೆಯೇ ಬರೆದೂ ಹಾಕಿದೆ, ರಿಜಿಸ್ಟ್ರಾರ್‌ರವರಿಗೂ ಈ ಸಂಬಂಧ ವಿಶದವಾಗಿ ರಿಪೋರ್ಟು ಕಳುಹಿಸಿ ಕೊಟ್ಟೆ. ನಮ್ಮ ಕುಟುಂಬದವರು ಇದರಿಂದ ಕಷ್ಟ ಅನುಭವಿಸಿದರು. ಬರೋ 60 ರೂಪಾಯಿ ಸಂಬಳದಲ್ಲೇ ಅದೂ ದಾವಣಗೆರೆ ನಗರದಲ್ಲಿ ಸಂಸಾರ ನಡೆಸಿಕೊಂಡು ಹೋಗಬೇಕಾಯಿತು. ಇಡೀ ತಾಲೂಕನ್ನು ಸುತ್ತಬೇಕಾಯಿತು. ತುಪ್ಪ, ಹಾಲು, ಮೊಸರುಗಳು ನಮಗೆ ಅಪರೂಪವೆನಿಸತೊಡಗಿದವು. ಹೀಗಿತ್ತು ತಮ್ಮಯ್ಯನವರ ದರ್ಬಾರು.

ಇದೇ ಸಂದರ್ಭದಲ್ಲಿಯೇ ನಮ್ಮ ಇಲಾಖೆಯ ರಿಜಿಸ್ಟ್ರಾರ್ ವೆಂಕಟೇಅರಸ್ ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರೊಡನೆ ಒಂದು ಸಾಯಂಕಾಲ ಅಡಮಾನದ ಸಂಘದ ಆಫೀಸಿಗೆ ಬಂದು ತನಿಖೆ ಪ್ರಾರಂಭಿಸಿದರು. ಇದಾದ ನಂತರ ಅಡಮಾನದ ಬ್ಯಾಂಕಿನ ಡೈರೆಕ್ಟರ್‌ಗಳು ಅವರ ಗೌರವಾರ್ಥ ಒಂದು ಟೀ ಪಾರ್ಟಿ ಇಟ್ಟಿದ್ದರು. ಈ ಸಂಘ ಆ ವರ್ಷ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ್ದಕ್ಕಾಗಿ ರಾಜ್ಯ ಕೋ ಆಪರೇಟೀವ್ ಯೂನಿಯನ್ ಮತ್ತು ಅಡಮಾನ್ ಬ್ಯಾಂಕ್, ಬೆಂಗಳೂರು

ಇವರು ಇದಕ್ಕೆ 'ಗುರಾಣಿ' ಒಂದನ್ನ ಬಹುಮಾನವಾಗಿ ಕೊಟ್ಟಿದ್ದರು. ಈ ಬಹುಮಾನ ಬಂದದ್ದಕ್ಕೆ ಇ೯ IIರವರೇ ಕಾರಣರೆಂದು ಡೈರೆಕ್ಟರುಗಳು ನನ್ನ ಬಗ್ಗೆ ಒಳ್ಳೆ ಮಾತನ್ನು ಆಡಿದರು. ನನ್ನ ಸೇವೆಯನ್ನು ಶ್ಲಾಘಿಸಿದರು. ಅರಸಿನವರು ತಾಳ್ಮೆಗೆಟ್ಟು ಇದಕ್ಕೆ ಕಾರಣ ಅವರಲ್ಲ, ಅವನಿಗೆ ಸರ್ಕಾರಿ ಸಂಬಳ ಕೊಡುತ್ತಿದೆಯೆಂದರು. ಅಂತು ಇದೆಲ್ಲಾ ಆಗುವಾಗ್ಗೆ ರಾತ್ರಿ ಒಂಬತ್ತರ ಮೇಲೆ ಆಗಿತ್ತು. ರಿಜಿಸ್ಟ್ರಾರ್ ಅರಸಿನವರು ಇದ್ದಕ್ಕಿದ್ದಂತೆ ಬಹಳ ಸಿಟ್ಟಿನಿಂದ ನನ್ನ ಆಫೀಸು ಇನ್‌ಸ್ಪೆಕ್ಷನ್ ಮಾಡಲಾಗುತ್ತದೆಂದೂ, ಆಫೀಸ್ ಬಾಗಿಲು ತೆಗೆದು ರೆಡಿಯಾಗಿರುವಂತೆಯೂ ಆಜ್ಞಾಪಿಸಿದರು. ನಾನು ಓಡಿ ಹೋಗಿ ಎಲ್ಲಾ ರೆಡಿ ಮಾಡಿದೆ. ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರುಗಳನ್ನು ಆಫೀಸಿಗೆ ಬರಮಾಡಿಕೊಂಡೆ. ತನಿಖೆಯ ವೇಳೆ ಈ ಮೊದಲೇ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ನನ್ನ ಮೇಲೆ ಚಾಡಿ ಕ್ಷುದ್ರಗಳೇಳಿದ್ದರಿಂದಲೋ ಏನೋ ನನ್ನನ್ನು ಉದ್ದೇಶಿಸಿ ಉರಿದು ಬಿದ್ದು ಇದ್ದಕ್ಕಿದ್ದಂತೆ ''ಫೂಲ್ ವಗೈರೆ'' ಎಂದು ಬೈದರು. ಅಜ್ಞಾತವಾಸದಲ್ಲಿದ್ದ ಭೀಮ, ಅಣ್ಣನ ಆಜ್ಞೆಯ ಗೆರೆಯನ್ನು ದಾಟಿ ದ್ರೌಪದಿಯ ಪಕ್ಷ ಸೇರಿದ್ದನ್ನು ಕುಮಾರವ್ಯಾಸ ಬಹುಚನ್ನಾಗಿ ವರ್ಣಿಸುತ್ತಾನೆ. 'ಭೀಮ ಕಷ್ಟವೆಸಗಿದನು ಹಾ ಎಂದರಾದೊಡೆ ಮುಸುಡನು ಅಮರಾದ್ರಿಯಲಿ ತೇವೆನು ದೇವ ಸಂತತಿಯ' ತಕ್ಷಣವೇ ನಾನು ಒಂದು ಚೂರು ಕಾಗದ ತೆಗೆದುಕೊಂಡು ರಾಜೀನಾಮೆ ಬರೆದೆ.

To,

The Registrar of Co-Operative Socities, Bangalore

Camp: Davanagere

Sir,

I am herein submitting my Resignation for the Post of Inspector of Co-Operative Socities. I am very much thankful to the Co-Operative Department, for having given me food and shelter all these 13 years.

Thanking you

Your's faithfully

**N.Mallappa**

ನಾನು ಮೇಲ್ಕಂಡ ರಾಜಿನಾಮೆಯನ್ನು ಬರೆಯುವಾಗಲೆ ಅಕಸ್ಮಾತ್ ಒಂದೆರಡು ಕಣ್ಣೀರಿನ ಹನಿಗಳು ಮೇಲ್ಕಂಡ ಪತ್ರದ ಮೇಲೆ ಬಿದ್ದವು. ಚಿಂತೆಯಿಲ್ಲವೆಂದು ಅದನ್ನೇ ತೆಗೆದುಕೊಂಡು ಪ್ರವಾಸಿ ಮಂದಿರಕ್ಕೆ ಹೋದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ತಮ್ಮಯ್ಯ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಆಫೀಸರ್ ನಾಗಯ್ಯ ಕೂತಿದ್ದರು. ಸೀದ ರಿಜಿಸ್ಟ್ರಾರ್ ಇಳಿದುಕೊಂಡಿದ್ದ ಕೊಠಡಿಗೆ ನುಗ್ಗಿದೆ. ರಾಜೀನಾಮೆಯನ್ನು ಅವರಿಗೆ ಕೊಟ್ಟೆ. ಅದನ್ನವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ಸಲ್ಲಿಸುವಂತೆ ಹೇಳಿದರು. ಅಲ್ಲಿಂದ ವರಾಂಡಕ್ಕೆ ಬಂದು ಅವರಿಗೆ ಅದನ್ನು ಕೊಟ್ಟು 'ನೋಡ್ರಿ-ಹತ್ತು ಕುರಿ, ಒಂದು ಟಗರು ಸಾಕಿ ನಾನು ಜೀವನ ಮಾಡ್ತಿನಿ. ನನ್ನ ಮೇಲೆ ನಿಷ್ಕಾರಣವಾಗಿ ಜಿದ್ದು ಸಾಧಿಸಿದ ನಿಮ್ಮನ್ನ ಆಮೇಲೆ ನೋಡಿಕೊಳ್ಳುತ್ತೇನೆ' ಎಂದೇಳಿ ಹೊರಗೆ ಬಂದೆ. ಹೆಂಡಕುಡುಕ ರತ್ನ ಹೇಳೋ ಮಾತು ಆಗ ನಿಜ ಅನ್ನಿಸಿತು. ''ತಾಪೇದಾರ್ರು ಮೇಲ್ನೋರ ಎದ್ರು ಯಿಂಗ ಅನ್ನಬಾರ್ದು ಗೊತ್ತು. ಆದ್ರೂ ನರಮನ್ಸಾನ್ .ಸೈಸೋಕೆ ಮಿತಿ ಅಳತೆ ಐತೆ.........'' ಕೆಲವೇ ದಿನಗಳ ಹಿಂದೆ ಸರ್ಕಾರಕ್ಕೆ ಅಮಲ್ದಾರ್ ಹುದ್ದೆಗೆ ಶಿಫಾರಸು ಮಾಡಿದ್ದ ರಿಜಿಸ್ಟ್ರಾರ್ ಅವರು ಇಂದು ಹೇಗೆ ಮಾತನಾಡಿದರು-ಎಂದು ಯೋಚಿಸಿಕೊಂಡು ಮನೆಗೆ ಬಂದೆ. ಒಂದು ಮಾತು ನಿಜ. ಆತ್ಮಭಿಮಾನಿಯ ಇರುವಿಕೆಗೆ ಹೂಗೊಂಚಲುಗಳಿಗೆ ಇರುವಂತೆ-ಎರಡು ಮಾರ್ಗ,-ಎಲ್ಲ ಜನರ ತಲೆಯ ಮೇಲಿರುವುದು ಅಥವಾ ವನದಲ್ಲಿ ಜೀರ್ಣವಾಗಿ ಬಿಡುವುದು. ಬೆಳಗಿನಿಂದ ನಾನು ಮನೆಗೆ ಬರದಿದ್ದನ್ನು ಕಂಡು ಹೆಂಡತಿ ಗಾಬರಿಯಾಗಿರುತ್ತಾಳೆಂದು ಭಾವಿಸಿ ಜಾಗೃತನಾದೆ. ಮನೆಯಲ್ಲಿ ನಿಶ್ಚಿಂತೆಯಿಂದ ಮಲಗಿದ್ದ ಮಕ್ಕಳನ್ನು ನೋಡಿದೆ. ಆಗ ಒಂದು ಕ್ಷಣ ನಾನು ದುಡುಕಿದೆನೇನೋ-ಅನ್ನಿಸಿತು. ಆದರೆ, ನಂತರ ಆತ್ಮಗೌರವ ನಾಶವಾದ ಮೇಲೆ ಬದುಕಿ ಏನು ಪ್ರಯೋಜನ ಅನ್ನಿಸಿತು. ಹೆಂಡತಿಗೆ ಇದ್ದ ವಿಷಯ ಹೇಳಿದೆ. ಆಕೆ ಅಳುವುದಕ್ಕೆ ಶುರು ಮಾಡಿಬಿಟ್ಟಳು. ಪಿತ್ರಾರ್ಜಿತವಾದ ಆಸ್ತಿ ಏನೂ ಇರಲಿಲ್ಲ. ಆದರೆ ಬದುಕಿಯೇ ತೀರುತ್ತೇನೆಂಬ ಅದಮ್ಯ ವಿಶ್ವಾಸ ನನ್ನಲ್ಲಿತ್ತು. ತುಮಕೂರಿಗೆ ಹೋಗಿ ಜೀವನಕ್ಕೊಂದು ಏರ್ಪಾಟು ಮಾಡಿಕೊಳ್ಳೋಣ. ಈ ಗುಲಾಮ ಚಾಕರಿನೇ ಬೇಡ. ಉಳಿಕೆ ಕಾಲವನ್ನು ವಿದ್ಯಾಸಂಸ್ಥೆ ಹಾಗೂ ಹಾಸ್ಟೆಲ್ ಕಟ್ಟೋಕೆ ಉಪಯೋಗಿಸಿಕೊಳ್ಳೋಣ ಅಂತ ಯೋಚಿಸಿ ಹೆಂಡತಿಗೆ 'ನೀನೇನು ಹೆದರಿಕೋ ಬೇಡ. ಅರೆ ಬಂಡೆ ಮೇಲಿದ್ದಾದರೂ ನಿಮ್ಮನ್ನು ಸಾಕುತ್ತೇನೆ, ದೇವರಿದ್ದಾನೆ ಎಂದು ಸಮಾಧಾನ ಮಾಡಿದ್ದಾಯಿತು. ಆ ರಾತ್ರಿ ನಿದ್ದೆ ಮಾಡಲಿಲ್ಲ. ನನ್ನ ಮನಸ್ಸಿನಲ್ಲಿ ಅಳುಕಿತ್ತು. ಮನಸ್ಸು ಆ ರಾತ್ರಿ ಹೀಗೆ ಪ್ರಾರ್ಥಿಸಿತು.

ಬೆಳಕಾಗದಿರಲಯ್ಯ ಭಗವಂತ - ಬೆಳಕಾಗದಿರಲಿ; ಮತ್ತೆ ಬೆಳಕಾಗಿ ತೆರೆಯದಿರಲಯ್ಯ ಈ ಮುಚ್ಚಿದ ರಣರಂಗ; ಹೋರಾಡಿ ಸಾಕಾಗಿ ಹೋಗಿದೆ. ನನಗೆ ಇರುಳಿರಲಿ: ಬೆಳಗ್ಗೆ ಈ ಸುದ್ದಿ ನಗರದಲೆಲ್ಲಾ ಹರಡಿತು. ಪ್ರಸಿದ್ಧ ಕೈಗಾರಿಕೋದ್ಯಮಿಯೊಬ್ಬರು ನನ್ನ ಮನೆಗೆ ಬಂದು 'ಸ್ವಾಮಿ ಅಲ್ಲಿಗಿಂತ ಒಂದು ಪಟ್ಟು ಜಾಸ್ತಿ ಕೊಡ್ತೀನಿ, ನಮ್ಮ ಫ್ಯಾಕ್ಟರಿಗೆ ಆಡಳಿತಗಾರರಾಗಿ ಬನ್ನಿ' ಎಂದು ಆಹ್ವಾನಿಸಿದರು. ಅವರ ಆಹ್ವಾನವನ್ನು ವಿನಯದಿಂದಲೇ ನಿರಾಕರಿಸಿ ಸ್ವತಂತ್ರವಾಗಿ ಬದುಕೋಣ ಅಂತಿದ್ದೇನೆ ಎಂದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ತಮ್ಮಯ್ಯನೋರಿಗೆ ಈಗ ಒಳ್ಳೆ ಪೀಕಲಾಟಕ್ಕೆ ಇಟ್ಟು ಕೊಂಡಿತು. ಆತ ಮೇಲಕ್ಕೆ ನನ್ನ ರಾಜಿನಾಮೆ ಕಳಿಸಿದ್ದರೆ ಸರ್ಕಾರ ''ಯಾಕೆ ಈತ ಗುಡ್ ವರ್ಕರ್-ಅಲ್ಲವೇ'' ಅಂತ ಕೇಳುತ್ತಿತ್ತು. ನನಗೆ ಬೇರೆಯವರ ಮೂಲಕ ಸಂಧಾನಕ್ಕೆ ಕಳುಹಿಸಿದರು. ಮುನ್ಸೀಫರಾದ ಕೆಂಪಯ್ಯ, ಮ್ಯಾಜಿಸ್ಟ್ರೇಟ್ ಬಿ.ನಾರಾಯಣಸ್ವಾಮಿ, ಅಡ್ವೋಕೇಟ್‌ಗಳಾದ ತಿಮ್ಮಣ್ಣ, ದೊಡ್ಡ ಬಸಪ್ಪ ಮುಂತಾದವರು ನಮ್ಮ ಮನೆಗೆ ಬಂದು 'ನೀವು ಕಹಾಯ ಗಹಾಯ ರಾಜಿನಾಮೆ ವಾಪಸ್ ತಗೋಬೇಕು' ಅಂತ ಗಂಟು ಬಿದ್ದರು. ನಾನೇನು ಹೇಳಿದರೂ ಕೇಳೋ ಸ್ಥಿತೀಲಿ ಅವರಿರಲಿಲ್ಲ. ಕೊನೆಗೂ ನಾನು ಸೋತು ರಾಜಿನಾಮೆ ವಾಪಸ್ ಪಡೆವ ಪತ್ರಕ್ಕೆ ರುಜು ಹಾಕಿದೆ. ಇಲ್ಲಿ ಸೋಲು ಗೆಲವು ಮುಖ್ಯ ಅಲ್ಲ. ಹಿರಿಯ ಅಧಿಕಾರಿಗಳು ಕೆಳಗಿನವರ ಮೇಲೆ ಎಷ್ಟು ದೌರ್ಜನ್ಯ ಮಾಡ್ತಾರೆ ಅನ್ನೋದು ಮುಖ್ಯ. ಪ್ರಾಯಶಃ ನಮ್ಮ ಹಿರಿಯ ಅಧಿಕಾರಿಗಳು ಈ ಗುಣವೊಂದನ್ನು ಬಿಟ್ಟು ಬೇರೆ ಯಾವ ಗುಣಾನ ಬ್ರಿಟಿಷರಿಂದ ಕಲಿಯಲಿಲ್ಲವೇನೋ ಅನ್ನಿಸುತ್ತದೆ.

ಭಗವಾನ್ ಬುದ್ಧ ಒಂದು ಸಲ ಹೇಳಿದ. 'ಸೃಷ್ಟಿಯ ಎಲ್ಲಾ ವಸ್ತುಗಳೂ ಒಂದಲ್ಲ ಒಂದು ದಿನ ಸಾಯ್ತಾವೆ ಅಂತ. ಪ್ರಾಯಶಃ ಆತನ ಕಾಲಕ್ಕೆ ಅಡಮಾನ ಬ್ಯಾಂಕುಗಳು ಒಂದು ಸಾಲ ತೀರೋಕ್ಕಿಂತ ಮುಂಚೆ ಮತ್ತೊಂದು ಸಾಲನ ಬಡವರಿಗೆ ಕೊಡ್ತಿರಲಿಲ್ಲ ಅನ್ನಿಸುತ್ತೆ. ಅದಿದ್ದಿದ್ರೆ ಆತ ಯಾವುದು ನಶಿಸಿದರೂ ಬಡವರ ಸೊಸೈಟಿ ಸಾಲ ಮಾತ್ರ ನಶಿಸುವುದಿಲ್ಲವೆಂದು ಹೇಳ್ತಿದ್ದನೋ. ನಾನು ದಾವಣಗೆರೆಯಲ್ಲಿದ್ದಾಗ ಬೆಂಗಳೂರಿನಲ್ಲಿರುವ, ಕೇಂದ್ರ ಅಡಮಾನ ಬ್ಯಾಂಕು, ರಾಜ್ಯದ ಅಡಮಾನ ಸಂಘಗಳ ಮೂಲಕ ರೈತರಿಗೆ ಸಾಲ ಕೊಡಿಸೋ ಅವಕಾಶ ಬಂತು. ಅದಕ್ಕಾಗಿ ತಾಲ್ಲೂಕಿನಿಂದೆಲ್ಲ ಯಥೇಚ್ಛವಾದ ಅರ್ಜಿಗಳು ಬಂದವು. ನಾನು ಪ್ರತಿಯೊಂದು ಗ್ರಾಮಕ್ಕೂ ಭೇಟಿಕೊಟ್ಟೆ. ಅಲ್ಲೇ ಅರ್ಜಿ ವಿಲೇವಾರಿ

ಮಾಡುತ್ತಿದ್ದೆ. ನನ್ನ ಜೊತೆ ಅಡಮಾನ ಸಂಘದ ಡೈರೆಕ್ಟರ್‌ಗಳಾದ ಕಂದಗಲ್ ಪಟೇಲ್ ಪಿ.ಚನ್ನಬಸವೇಗೌಡ ಮುಂದೆ ಕೇಂದ್ರದ ಉಪಮಂತ್ರಿಯಾಗಿದ್ದ ಕೊಂಡಜ್ಜಿ ಬಸಪ್ಪ ಮೊದಲಾದವರು ಬರುತ್ತಿದ್ದರು. ಹಳ್ಳಿಗಳಿಗೆ ಹೋದಾಗ ಜನ ತೋರಿಸುತ್ತಿದ್ದ ಪ್ರೀತಿ ವಿಶ್ವಾಸ ನಿಜಕ್ಕೂ ಮರೆಯಲಿಕ್ಕಾಗೋದಿಲ್ಲ. ಅವರೇನೇ ಕೊಟ್ಟರೂ ನಾನು ಬೇಡ ಎನ್ನುತ್ತಿದ್ದೆ. ಆಗ ಕೊಂಡಜ್ಜಿ ಬಸಪ್ಪನವರು 'ಏನು ಮಲ್ಲಪ್ಪನೋರೆ ನೀವು ಹೀಗಾದರೆ ಮಕ್ಕಳ ಗತಿ ಏನು ಅನ್ನುತ್ತಿದ್ದರು. ಆಗ ನಾನು ರೈತರಿಗೆ ನಾವು ಬಿಟ್ಟಿ ಹಣ ಕೊಡುತ್ತಿಲ್ಲ. ಸಾಲ ಹಂಚುತ್ತಿದ್ದೇವೆ. ಈ ಸಾಲದ ಹಣದಿಂದ ನಮ್ಮ ಮಕ್ಕಳ ಉದ್ಧಾರ ಆಗಬೇಕಾಗಿಲ್ಲ ಎನ್ನುವುದು ನನ್ನ ಉತ್ತರ. ಬೆಳಿಗ್ಗೆ ಒಂದಿಷ್ಟು ತಿಂದು ಮಧ್ಯಾಹ್ನ ಬುತ್ತಿ ಕೂಡ ತಕ್ಕೊಂಡು ಹೋಗುತ್ತಿದ್ದೆ. ನಾವು ಸರ್ಕಾರಿ ನೌಕರರು ಹಳ್ಳಿಗಳಿಗೆ ಹೋದರೆ ರೈತರ ಕಷ್ಟ ಹೇಳತೀರದು. ಅವರು ದಿನ ಬೆಲ್ಲದ ಕಾಫೀನೋ, ಟೀನೊ ಕುಡಿಯುತ್ತಿದ್ದರು. ನಮಗೆ ಸಕ್ಕರೆ ಕಾಫೀನೋ ಅಥವಾ ಟೀನೋ ಕೊಡಬೇಕಾದರೆ ಅವರ ಪರದಾಟ ಹೇಳತೀರದು. ನಾವು ಬೆಲ್ಲದ ಕಾಫಿ ಕುಡಿದರೂ ಕೊಡೋಕೆ ಅವರಿಗೆ ಸಂಕೋಚ, ಆದರೆ ಯಾರಾದರೂ ಆಗ್ರಹಪಡಿಸಿದರೆ ದೊಡ್ಡಸ್ತಿಕೆ ತೋರಿಸಿಕೊಳ್ಳದೆ ಕೈತೊಳೆದುಕೊಳ್ಳುತ್ತಿದ್ದೆ. ಇಂತಹ ಸಂದರ್ಭದಲ್ಲಿ ಆದ ಒಂದು ಮಧುರ ಅನುಭವ; ನಮ್ಮ ಜನರ ಸಂಸ್ಕಾರದ ಬಗೆಗೆ ಉನ್ನತಾಭಿಪ್ರಾಯ ಮೂಡಿಸಿದೆ. ಒಂದು ಮಧ್ಯಾಹ್ನ ಹಳ್ಳಿಯಲ್ಲಿ ಎಲ್ಲಾ ಕೆಲಸ ಮುಗಿದಿತ್ತು. ನಗರಕ್ಕೆ ಹಿಂದಿರುಗೋಣಾಂತ ಬೈಸಿಕಲ್ ಹತ್ತಿದರೆ ಊರಿನ ಹಿರಿಯರೊಬ್ಬರು ಸಾತ್ವಿಕರು, 'ದೇವ್ರು ನಮ್ಮ ಮನೆ ಪ್ರಸಾದ ಸ್ವೀಕರಿಸಿಯೇ ಹೋಗಬೇಕೆಂದು' ಹಟ ಹಿಡಿದರು. ಹಾಗೇ ಹೊರಟು ಹೋದರೆ ಅವರು ನೊಂದುಕೊಳ್ಳುತ್ತಾರೆಂದು ಅವರ ಮನೆಗೆ ಹೋದೆ. ` ಮನೆ ನೋಡಿದರೆ ಸಾಕಷ್ಟು ಚೆನ್ನಾಗಿ ಬದುಕಿದವರೆಂದು ಊಹಿಸಬಹುದಾಗಿತ್ತು. 'ಬನ್ನಿ, ಬನ್ನಿ' ಅಂತ ಅವರ ಧರ್ಮಪತ್ನಿ ಅವರೂ ಸಹ ಉಪಚರಿಸಿ ಕಾಲು ತೊಳೆಯಲು ನೀರು ಕೊಟ್ಟರು. ಸೀದಾ ದೇವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಶಿವಪೂಜೆಗೆ ಬೇಕಾಗುವ ಬಿಲ್ವಪತ್ರೆ ವಿಭೂತಿಗಟ್ಟಿ ಮೊದಲಾದವನ್ನು ಇಟ್ಟಿದ್ದರು ''ದೇವ್ರು ಮೊದಲು ಶಿವಪೂಜೆ ಆಗಲಿ ಎಂದರು. ನನಗೋ ತಲೆ ಗಿರ್ರೆಂದು ತಿರುಗಿದಂತಾಯಿತು. ನನ್ನ ಹೆಸರು ನೋಡಿ ಅವರು ತಪ್ಪಾಗಿ ಭಾವಿಸಿದ್ದರು. ನಾನು ಪಶ್ಚಾತ್ತಾಪದ ಧ್ವನಿಯಲ್ಲಿ 'ನಾವು ಕುರುಬರು, ನಿಮಗೆ ತಿಳಿಸದೇ ಅಪಚಾರ ಮಾಡಿಬಿಟ್ಟೆ' ಎಂದೆ. ಆಗ ಆ ಹಿರಿಯರು ''ಎಲ್ಲಾದರೂ ಉಂಟೇ ದೇವ್ರು. ಗುಣಕ್ಕೆ ಮತ್ಸರ ಉಂಟೇ?

ಶಿವಶರಣ ಅಂದರೆ ಲಿಂಗಧಾರಣೆ ಮಾಡಿಕೊಳ್ಳೋದು ಮಾತ್ರವಲ್ಲ. 'ಕಾಯಕವೇ ಕೈಲಾಸ' ಅಂತ ದುಡಿಯೋರು ಶಿವಶರಣರು. "ನೂರಾಳ್ಗಳ ರಣದಿ ಗೆದ್ದವನಿಗಿಂತ ತನ್ನಂ ತಾ ಗೆದ್ದವನೆ ಜೀವಿತದೊಳುತ್ತಮನು" ಎನ್ನುವಂತೆ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡೋನೆ ಶರಣ. ನೀವು ಶರಣಮಾತ್ರವಲ್ಲ ಶಿವಸ್ವಾಮಿ" ಎಂದ್ಹೇಳಿ ಅಡುಗೆ ಕೋಣೆಗೆ ಕರ್ಕೊಂಡು ಹೋದರು. ನನ್ನ ಜೊತೆ ಊಟಕ್ಕೆ ಕುಳಿತು ತಮ್ಮನಿಗೆ ಊಟ ಮಾಡಿಸುವಂತೆ ಉಪಚಾರ ಮಾಡಿ ತಿನ್ನಿಸಿದರು. ಊಟವಾದ ಅನಂತರ ವರಾಂಡದಲ್ಲಿ ಕುಳಿತರೆ, ಒಂದು ತಟ್ಟೆ ತುಂಬ ವಿವಿಧ ಬಗೆಯ ಹಣ್ಣುಗಳು. ಒಂದು ಸಿಗರೇಟು ಪ್ಯಾಕು ಬಂತು. ಒಂದು ಸಿಗರೇಟ್ ಹತ್ತಿಸಿದ ಶಾಸ್ತ್ರ ಮಾಡಿ ಮಕ್ಕಳಿಗೆ ಹಣ್ಣು ಕೊಟ್ಟು ಸಿಗರೇಟ್ ಪ್ಯಾಕನ್ನು ಅಲ್ಲೇ ಬಿಟ್ಟು ಅಲ್ಲಿಂದ ಹೊರಟೆ. ಈಗಲೂ ಆ ಮಹಾನ್ ಸತಿಪತಿಗಳು ಮಾಡಿದ ಅಂದಿನ ಅತಿಥಿ ಸತ್ಕಾರ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ನಮ್ಮಲ್ಲಿ ಎಷ್ಟೇ ಒಡಕಿದ್ದರೂ ಯಾವುದೋ ಹಂತದಲ್ಲಿ ನಾವು ಒಂದಾಗುತ್ತೇವೆ. ಮಾಸ್ತಿಯವರ "ಚಿಕವೀರ ರಾಜೇಂದ್ರ" ಕಾದಂಬರಿಯಲ್ಲಿ ಬರುವ ರಾಣಿ ಗೌರಮ್ಮ ಬ್ರಿಟಿಷ್ ಅಧಿಕಾರಿಗಳಿಗೆ ಮಾಡೋ ಸತ್ಕಾರ ಕೂಡ ಉನ್ನತ ಸಂಸ್ಕಾರದ ಪ್ರತೀಕವಾಗಿದೆ.

ನನಗೆ ಮೊದಲಿನಿಂದಲೂ ಕೂಡ ಬಡ ವಿದ್ಯಾರ್ಥಿಗಳ ಅನುಕೂಲಕ್ಕೆ ಏನಾದರೂ ಮಾಡಬೇಕೆನಿಸುತ್ತಿತ್ತು. ಹಿಂದುಳಿದವರಲ್ಲಿ ಜ್ಞಾನ ಪ್ರಸಾರವೊಂದಾದರೆ ಇತರ ಸಮಸ್ಯೆಗಳು ತಾವಾಗಿಯೇ ಬಗೆಹರಿಯುತ್ತವೆ. ಏನಾದರೂ ಮಾಡಿ ಇಲ್ಲೊಂದು ಹಿಂದುಳಿದ ಜನಾಂಗದ ವಸತಿಗೃಹ ಮಾಡೋಣವೆಂದು ನಿರ್ಧರಿಸಿದೆ. ಇದಕ್ಕೆ ಪೂರ್ವ ಭಾವಿಯಾಗಿ ಸಬ್‌ಡಿವಿಜನ್ ಆಫೀಸರ್ ಆಗಿದ್ದ ಬಿ.ಬೀರಪ್ಪನವರು ಪ್ರತಿಯೊಂದು ಹಿಂದುಳಿದ ಕೋಮಿಗೂ ಆಯಕಟ್ಟಿನ ಪ್ರದೇಶದಲ್ಲಿ ಒಂದೊಂದು ನಿವೇಶನ ಮಂಜೂರು ಮಾಡಿ ಜೊತೆಗೆ ಕುರುಬರ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಹತ್ತು ಸಾವಿರ ಮೊಬಲಗನ್ನು ಸಹ ಸಂಗ್ರಹಿಸಿ ಅದನ್ನು ಅಧ್ಯಕ್ಷ ಭರಮಜ್ಜನ ಹೆಸರಿನಲ್ಲಿಟ್ಟಿದ್ದರು. ಇದು ನನಗೆ ಗೊತ್ತಿದ್ದ ವಿಚಾರವಾಗಿತ್ತು. ಸದಸ್ಯರ ಸಭೆ ಸೇರಿಸಿ, ಕೆಲಸ ಮುಂದುವರೆಸುವಂತೆ ಹೇಳಿದರೆ ಅಧ್ಯಕ್ಷರು 'ಅದು ತಮ್ಮ ಸ್ವಂತ ಹಣ'ವೆಂದು ಹಠ ಹಿಡಿದರು. ನಂತರ ನಾನು ಮತ್ತು ಜೋಗಪ್ಪಗಳ ಸಿದ್ದಪ್ಪ ಎಂಬುವರು ಅವರಿಗೆ ತಿಳಿಹೇಳಿ ಅವರಿಂದ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಿಸಿ, ಆ ಹಣ ಪಡೆದು ಆಗ ತಾನೇ ಎಲ್.ಎಲ್.ಬಿ. ಮಾಡಿಕೊಂಡು ಬಂದಿದ್ದ ಜನಾಂಗದ ಗುರುಗಳಾದ

ಚನ್ನಯ್ಯ ಒಡೆಯರ್ ಅವರನ್ನು ಮೀಟಿಂಗು ಮಾಡಿ ಅಧ್ಯಕ್ಷರನ್ನಾಗಿ ಮಾಡಿದೆವು. ಪ್ರಾರಂಭದ ವಿಧಿಗಳನ್ನು ಮುಗಿಸಿ ಕಟ್ಟಡವನ್ನು ಪ್ರಾರಂಭಿಸಿದೆವು. ದಾನಿಗಳಿಂದ ನಿಧಿ ಸಂಗ್ರಹಕ್ಕೆ ಹೊರಟೆವು.

'ಹೆತ್ತವಳಿಗೆ ಅದರ ಕಷ್ಟ ಗೊತ್ತು. ಬಂಜೆಗೇನು ಗೊತ್ತಾಗಬೇಕು' ಅನ್ನುವಂತೆ ರೈತರಿಗೆ ಮಾತ್ರ ಅವರ ಕಷ್ಟ ಗೊತ್ತಾಗ್ತದೆ. ಅವರುಗಳಿಗೆ ಸಕಾಲದಲ್ಲಿ ಸೀಮೆಗೊಬ್ಬರ, ವ್ಯವಸಾಯ ಉಪಕರಣ, ಬಿತ್ತನೆಬೀಜ ಮತ್ತಿತರ ವಸ್ತುಗಳು ದೊರಕುತ್ತಿರಲಿಲ್ಲ. ಇದಕ್ಕೆ ರೈತರು ದುಬಾರಿ ಬೆಲೆ ಕೊಟ್ಟು ವರ್ತಕರಿಂದ ಕೊಳ್ಳಬೇಕಾಗಿತ್ತು. ಈ ಉದ್ದೇಶಕ್ಕಾಗಿ ಹೆಚ್.ಸಿದ್ಧವೀರಪ್ಪನವರ ಅಧ್ಯಕ್ಷತೆಯಲ್ಲಿ ರೈತರಿಗೆ ತಾಲ್ಲೂಕು ವ್ಯವಸಾಯೋತ್ಪನ್ನ ಸಂಘವೊಂದು ಪ್ರಾರಂಭವಾಯಿತು. ಆಗ ಇದು ಕಾಮಧೇನು ಕಲ್ಪವೃಕ್ಷವಾಯಿತು.

ಈ ಕಾಲದಲ್ಲಿ ನನ್ನ ವೃತ್ತಿಗೆ ಸಂಬಂಧಪಟ್ಟ ಒಂದೆರಡು ಘಟನೆ ಹೇಳಿದರೆ ಆ ಕಾಲದ ಸಾರ್ವಜನಿಕ ಬದುಕನ್ನು ಚಿತ್ರಿಸಿದಂತಾಗುತ್ತದೆ. ದಾವಣಗೆರೆ ನಗರದಲ್ಲಿ 'ಹೋಟೆಲ್ ಪೀಪಲ್ಸ್ ಕೋ-ಆಪರೇಟಿವ್ ಸೊಸೈಟಿ'ಯೊಂದರ ಲೆಕ್ಕ ಪತ್ರಗಳನ್ನು ನೋಡಿ ತಪಾಸಣೆ ಮಾಡಿಕೊಟ್ಟೆ. ಇದಾದ ಮೂರು ದಿನದ ನಂತರ ನಮ್ಮ ಆಫೀಸ್ ಜವಾನ ಪೋಸ್ಟ್ ಜೊತೆ ನನ್ನ ಹೆಸರಿರುವ ಬೇರೆ ಕವರು ತಂದು ಕೊಟ್ಟ. ಒಡೆದು ನೋಡಿದರೆ ಅದರಲ್ಲಿ ಇಪ್ಪತ್ತೈದು ರೂಪಾಯಿಗಳು! ಜವಾನನ್ನು ಕೇಳಿದರೆ ಆ ಕೋ-ಆಫರೇಟಿವ್ ಸೊಸೈಟಿ ಅಧ್ಯಕ್ಷರು - ಹೆಸರು ಮರೆತಿದ್ದೇನೆ. (ಪ್ರಾಯಶಃ ಮಧ್ವಾಚಾರ್ಯ ಎಂದಿರಬೇಕು) ಕೊಟ್ಟರು.'' ಎಂದ. ಬೇರೆ ಕವರು ತೆಗೆದು ಅವರ ಹೆಸರು ಬರೆದು ಅದನ್ನು ವಾಪಸ್ಸು ಕಳುಹಿಸಿಕೊಟ್ಟೆ. ತೆಗೆದುಕೊಂಡ ಅವರು ಮುಗುಳ್ನಗೆ ನಕ್ಕು 'ನಿಮ್ಮ ಇನ್ಸ್‌ಪೆಕ್ಟರಿಗೆ ಎಲ್ಲೋ ಹುಚ್ಚು' ಎಂದರಂತೆ.

ಹದಡಿ ಕಾಲನಿಯಲ್ಲಿ 'ಕಾರ್ಮಿಕರ ಕೋ-ಆಪರೇಟಿವ್ ಸೊಸೈಟಿ' ಇತ್ತು. ಒಂದು ರಾತ್ರಿ ದಿಢೀರನೆ ಹೋಗಿ ಚೆಕ್ ಮಾಡಿದಾಗ ಕೆಲವಾರು ಅಕ್ಕಿ. ಸಕ್ಕರೆ, ಮೂಟೆಗಳು ಮತ್ತು ಸೀಮೆ ಎಣ್ಣೆ ಡಬ್ಬಗಳು ಕಡಿಮೆ ಇದ್ದವು. ಅಲ್ಲಿಯ ಫುಡ್ ಇನ್ಸ್‌ಪೆಕ್ಟರ್ ರಾಮಯ್ಯ. ನನ್ನ ಕಾಲೇಜಿನ ಸಹಪಾಠಿ. ಅಲ್ಲಿ ಭಾರಿ ಗೋಲ್ ಮಾಲ್ ನಡೆದಿತ್ತು. ಕಾರ್ಯದರ್ಶಿಯವರನ್ನು ಕೇಳಿದರೆ ಹಾರಿಕೆ ಉತ್ತರವನ್ನು ಕೊಡಲು ಪ್ರಯತ್ನಿಸಿದರು. ಅದನ್ನೆಲ್ಲ ರೆಕಾರ್ಡ್ ಮಾಡಿ ಮುಂದಿನ ಕ್ರಮಕ್ಕೆ ಸೂಚಿಸಿ ಮನೆಗೆ ಹಿಂತಿರುಗಿದೆ. ಮರು ಸಂಜೆಗೆ ನನ್ನ ಪರಿಚಯಸ್ಥರೊಡನೆ ಆ

ಕಾರ್ಯದರ್ಶಿ ಮನೆಗೆ ಬಂದ. ಜೇಬಿನಲ್ಲಿ ಕಾಣುವಂತೆ ನಾಲ್ಕಾರು ನೂರು ರೂಪಾಯಿ ನೋಟು ಇಟ್ಟುಕೊಂಡು ಬಂದಿದ್ದಾನೆ. ಆ ಮಾತು ಈ ಮಾತು ಆಡುತ್ತ ನನ್ನ ಪರಿಚಯಸ್ಥರು 'ಬಡವ ಈತ, ಈ ಸಾರಿ, ಕ್ಷಮಿಸಿ, ನೀವು ಹೇಳಿದ ಹಾಗೆ ಕೇಳುತ್ತಾನೆ' ಎಂದರು. ನನಗೆ ರೇಗಿ ಹೋಗಿತ್ತು 'ನನ್ನನ್ನ ಕೊಂಡ್ಕೊಳ್ಳೋಕೆ ಬಂದಿದ್ದೀರಾ' ಅಂತ ಕೂಗಾಡಿ ಹಾಗೇ ಕಳುಹಿಸಿದೆ. ಆ ನಂತರ ಕಮಿಟಿ ಸದಸ್ಯರನ್ನೆಲ್ಲ ಕಲೆ ಹಾಕಿ ''ಹೀಗಾದರೆ ನೀವು ಸೊಸೈಟಿ ಕಳ್ಕೋತಿರಾ ಬಡ ಕಾರ್ಮಿಕರಿಗೆ ಅನ್ಯಾಯ ಮಾಡಿದರೆ ನಿಮಗೆ ಒಳ್ಳೇದಾಗೋಲ್ಲ.'' ಅಂತ ಹೇಳಿದೆ; ಅವರೆಲ್ಲಾ ಕಾರ್ಯದರ್ಶಿಗೆ ಛೀಮಾರಿ ಹಾಕಿದರು. ಸಕ್ಕರೆ-ಅಕ್ಕಿ ಮೂಟೇಗಳೇನೋ ಬಂದವು. ಆದರೆ ಸೀಮೆ ಎಣ್ಣೆ ಡಬ್ಬಗಳು ಮಾತ್ರ ದಕ್ಕಲಿಲ್ಲ. ಮುಂದೆ ನಾನಿರೋ ತನಕ ಅಂತಹುದೇನೂ ನಡೆಯಲಿಲ್ಲ.

ಮತ್ತೊಂದು ಘಟನೆ ಎಂದರೆ ಒಂದು ಸಂಜೆ ಯಾವುದೋ ಕಾರಣಕ್ಕಾಗಿ ಒಂದು ಸಂತೋಷ ಕೂಟವನ್ನು ವರ್ತಕ ಮಿತ್ರರೊಬ್ಬರು ಏರ್ಪಡಿಸಿದ್ದರು. ಮಿತ್ರ ಲಕ್ಷ್ಮಯ್ಯನ ಜೊತೆ ನಾನು ಹೋಗಬೇಕಾಯಿತು. ಸುಮಾರು 20-30 ಜನ ನಗರದ ಗಣ್ಯ ಅಧಿಕಾರಿಗಳು ಭಾಗವಹಿಸಿದ್ದಿರಬೇಕು. ಸುಮಾರು 8-30ಕ್ಕೆ ಪಾನಗೋಷ್ಠಿ ಆರಂಭವಾಯಿತು ಆಮೇಲೆ ಅವರಾಟನ ನೋಡೋಕ್ಕಂತೂ ಎರಡು ಕಣ್ಣೂ ಸಾಲದಾದವು. ಬೇಡ ಅಂದ್ರೂ ಕೇಳದೆ ಮಿತ್ರರೊಬ್ಬರು ಮೂಗು ಹಿಡಿದರು. ಬಾಯಿಗೆ ಒಂದಿಷ್ಟು ಸುರಿದರು. ಮೆಣಸಿನಕಾಯಿ ರಸವನ್ನೇ ಕುಡಿದಂತಾಯಿತು. ಕಣ್ಣಲ್ಲಿ ನೀರು ಘಳ ಘಳ ಸುರಿದೋ, ವಾಂತಿ ಬರೋ ಸೂಚನೆ. ನನ್ನ ಅವಸ್ಥೆ ನೋಡಿ 'ಇದೆಲ್ಲೋ ಕಾಡಿನಿಂದ ಈಗ ತಾನೇ ತಪ್ಪಿಸಿಕೊಂಡು ಬಂದ ಹಾಗಿದೆ' ಅನ್ನೋ ತರಹ ನನ್ನನ್ನು ಅಲ್ಲಿಯ ಜನ ನೋಡಿದರು, ನಂತರ ಉಂಡು ಮನೆಗೆ ಬಂದಾಗ ಹೆಂಡತಿ ಮಾತನಾಡಿಸಿದರೆ ಸಿಡಿಮಿಡಿಗೊಂಡೆ. ಹಾಗೂ ಎತ್ತೆತ್ತಲೊ ಮಾತನಾಡಿದೆನಂತೆ. ಬೆಳಿಗ್ಗೆ ಎದ್ದು ಹೆಂಡ್ತಿಗೆ ಎಲ್ಲ ವಿಚಾರ ಹೇಳಿದೆ. ಒಂದು ಗುಟುಕಿಗೆ ಇಷ್ಟು ಅವಾಂತರವಾದರೆ ಬಾಟಲಿಗಟ್ಟಲೆ ಸೇವನೆ ಮಾಡುವವರ ಗತಿ ಏನು? ಅವರ ಹೆಂಡ್ತಿ ಮಕ್ಕಳ ಗತಿ ಏನು? ಅಂದುಕೊಂಡೆ.

ಚಿತ್ರದುರ್ಗಕ್ಕೆ ಹೋದಾಗ ನಮ್ಮವರೇ ಆದ ಆಗ ತಾನೇ ಪ್ರೋಬೇಷನರಿ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ಎಸ್.ನಂಜುಂಡಯ್ಯನವರು' 'ಏನ್ರಿ, ನಾನು. ಪ್ರೋಬೇಷನರ್ ಆಗಿ ಸೆಲೆಕ್ಟ್ ಆದರೂ ನಿಮ್ಮಿಂದ ಒಂದು ಅಭಿನಂದನೆಪತ್ರ

ಬೇಡ್ವೇನ್ರಿ' ಎಂದು 'ಛೀ' ಗುಟ್ಟಿದ್ದರು. 'ಅತ್ತು ಕರೆದು ನಮಸ್ಕಾರ ಹಾಕಿಸಿಕೊಳ್ಳುವ ಪದ್ಧತಿ ನಿಮಗೇಕೆ ಸ್ವಾಮಿ' ಅಂತ ಹೇಳಿ ಬಂದೆ. ಇಷ್ಟು ಹೊತ್ತಿಗೆ ನನ್ನ ಬಳಿ ಟ್ರೈನಿಂಗ್ ಪಡೆಯಲು ಹೊಸದಾಗಿ ಇನ್ಸ್‌ಪೆಕ್ಟರ್ ಹುದ್ದೆಗೆ ಸೇರಿದ ಶಿವಲಿಂಗಯ್ಯ ಮತ್ತು ದಾಸ್ ಎಂಬ ತರುಣರಿಬ್ಬರು ಬಂದರು.

ನಾನು ಆಗಲೇ ದಾವಣೆಗೆರೆಗೆ ಬಂದು ಎರಡು ವರ್ಷ ಆಗುತ್ತಾ ಬಂದಿತ್ತು, ಇನ್ನು ಯಾವ ಊರಿಗೋ ಅಂದುಕೊಳ್ಳುತ್ತಿದ್ದೆ. ನನ್ನ ಮಡದಿ ಒಂದು ದಿನ 'ಹಿರೇ ಮೈಲಾರಕ್ಕೆ ಹೋಗಿ ಬರೋಣಾ ಅದು ನಮ್ಮ ಮಂದೇವ್ರು' ಅಂತ ಒತ್ತಾಯ ಮಾಡಿದ್ದಳು. ಒಂದು ಭಾನುವಾರ ಆರು ವರ್ಷದ ನಂಜರಾಜ ನಾಲ್ಕು ವರ್ಷದ ಶಂಕರನನ್ನು ಕರೆದು ಕೊಂಡು ಮಡದಿಯೊಡನೆ ಅಲ್ಲಿಗೆ ಹೊರಟೆ. ಜೊತೆಗೆ ಜವಾನ ಕೆಂಪಯ್ಯ ಕೂಡ ಬಂದಿದ್ದ, ನಾನು ಯಾವತ್ತೂ ದೇವರ ಗುಡಿಗೆ ಹೋದೋನಲ್ಲ. ಗುಂಡರಗೋವಿ ತರಹ ಒಬ್ಬನೇ ಬೆಳೆದೋನು. ಮನೆಯಲ್ಲಿ ಯಾರಾದರೂ ಹೋದರೆ ಬೇಡ ಅಂದವನೂ ಅಲ್ಲ. ಹಾಗೆಯೇ ಯಾರಾದರೂ ಕರೆದರೆ ಬರೋದಿಲ್ಲ ಅಂತ ಹಟ ಹಿಡಿದೋನೂ ಅಲ್ಲ. ಅಲ್ಲಿಗೆ ಹೋದ ನಾವು ಮೊದಲು ಗುಡಿಗೆ ಹೋಗಿ ಪೂಜೆ ಮಾಡಿಸಿದೆವು. ಅಷ್ಟು ಹೊತ್ತಿಗೆ ಗುರು ಕಾಡಪ್ಪಒಡೆಯರ್ ಅವರು ಅಲ್ಲಿಗೆ ಬಂದು ನಮ್ಮಿಬ್ಬರಿಗೂ ಪಾದ ಪೂಜೆ ಮಾಡಿಸಿ, ಅಂದ್ರು 'ದುಡ್ಡಿಲ್ಲ ಕಾಸಿಲ್ಲ, ಯಾಕಾಗಬಾರದು' ಅಂತ 'ಹೂಂ' ಅಂದೆ; ಅವರೇ ಒಂದು ಮಣೆ ಮತ್ತು ಬೋಗುಣಿ ತಂದು ತಮ್ಮ ಎರಡು ಪಾದಾನೂ ಇಟ್ಟರು. ಚಂಬು ನೀರು ತರಿಸಿ ''ಕಾಲು ತೊಳೆಯಿರಿ'' ಎಂದರು. ಕಾಲು ತೊಳೆದ ನೀರನ್ನು ನಮ್ಮ ಮೇಲೂ, ಮಕ್ಕಳ ಮೇಲೂ ಪ್ರೋಕ್ಷಿಸಿಕೊಳ್ರಿ ಅಂದ್ರು. ಎಲ್ಲ ಮುಗೀತು ಅಂದುಕೊಂಡಿದ್ದರೆ-'ಕಾಣಿಕೆ ಕೊಡಿ' ಅಂದ್ರು. ನಾನು ಒಳ್ಳೆ ಪೀಕಲಾಟಕ್ ಬಂತಲ್ಲ ಅಂತ ತುಸು ದಿಗಿಲುಗೊಂಡೆ. ದಾವಣಗೆರೆಗೆ ವಾಪಸ್ ಹೋಗಲು ಮಾತ್ರ ಬಸ್ಸ್ ಛಾರ್ಜ್ ನನ್ನಲ್ಲಿ ಉಳಿದಿತ್ತು. ಒಂದೆರಡು ಚಣದ ನನ್ನ ಚಡಪಡಿಕೇನ ಅಲ್ಲೇ ನಿಂತಿದ್ದ ಜವಾನ ಕೆಂಪಯ್ಯ ಗಮನಿಸಿ ಚಕ್ಕನೆ ತನ್ನ ಜೇಬಿನಲ್ಲಿದ್ದ ಹತ್ತು ರೂಪಾಯಿ ನೋಟು ತೆಗೆದು ಗುರುಗಳ ಪಾದದ ಮೇಲೆ ಇಳಿಬಿಟ್ಟ. ಆಗ ಗುರುಗಳು ''ನೀವಿನ್ನು ಹೊರಡಿ'' ಎಂದರು. ಅಂತೂ ನನ್ನ ಮೊದಲ ಹಾಗೂ ಕೊನೆಯ ಪಾದಪೂಜೆ ಬಹಳ ಚೆನ್ನಾಗಿತ್ತು. ಊರಿಗೆ ಬಂದ ನಂತರ ಕೆಂಪಯ್ಯನಿಗೆ ಹತ್ತು ರೂಪಾಯಿ ಕೊಟ್ಟೆ.

ಮೈಲಾರದಿಂದ ಬಂದು ವಾರ ಆಗಿರಬಹುದು. ಒಂದು ಬೆಳಗಿನ ಜಾವ ಸೊಗಸಾದ ನಿದ್ದೆ. ಆಗ ಕನಸೊಂದು ಬಿತ್ತು. ನಾನು ನನ್ನ ಕಿರಿಯ ಮಗ ಶಂಕ್ರಿಯ ಕೈ ಹಿಡಿದಿದ್ದೇನೆ. ಮಡದಿ ದೊಡ್ಡ ಮಗ ರಾಜನ ಕೈ ಹಿಡಿದಿದ್ದ ಆಕೆ ಮೇಲೊಂದು ಗಂಟು. ಎಲ್ಲೋ ವಲಸೆ ಪ್ರಯಾಣ ಮಾಡುತ್ತಿದ್ದೇವೆ. 'ಇಂದಿನ ಕನಸು ನಾಳೆಯ ಮನಸ್ಸು' ಎನ್ನುವ ಮಾತು ನಿಜವಿರಬೇಕು. ಇದಾದ ಹದಿನೈದು ದಿನಕ್ಕೆ ಸರಿಯಾಗಿ ನನಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾಯಿತು.

ದಾವಣಗೆರೆ ಬಿಡಬೇಕಾದರೆ ನನಗೆ ಸ್ವಲ್ಪ ನೋವಾಯಿತು; ಕಾರಣವಿಷ್ಟೆ. ನಾನು ಸಂಕಲ್ಪಿಸಿದ್ದ ಹಾಸ್ಟೆಲ್ ಕಟ್ಟಡದ ಕೆಲಸ ಇನ್ನೂ ಮುಗೀದೆ ನಡೆಯುತ್ತಲೇ ಇತ್ತು. ಆದರೂ ನಾನು ಮುಂದಿನ ಊರಿಗೆ ಹೋಗಲೇ ಬೇಕಾಯ್ತು. ದಾವಣಗೆರೆ ಕರ್ನಾಟಕದಲ್ಲೇ ಅತ್ಯಂತ ಮಹತ್ವಪೂರ್ಣ ಸ್ಥಳವಾಗಿ ಇಂದು ಪರಿಗಣಿತವಾಗಿದೆ. ಇದಕ್ಕೆ ಇಲ್ಲಿನ ವಾಣಿಜ್ಯೋದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳು ಕಾರಣವೆನ್ನಬೇಕು. ಈ ತರಹದ ಶಿಕ್ಷಣ ಸಂಸ್ಥೆಗಳ ಬೆಳೆವಣಿಗೆಗೆ ಅಲ್ಲಿನ ದಾನಿಗಳು ಕಾರಣಕರ್ತರಾಗಿದ್ದಾರೆ. ಅಂದಿನ ಕಾಲಕ್ಕೆ ಮದ್ದೂರಾಯಪ್ಪ ಎಂಬುವವರು ಕಾಲೇಜುಗಳ ನಿರ್ಮಾಣಕ್ಕೆ ಒಂದೆರಡು ಲಕ್ಷ ರೂಪಾಯಿಗಳನ್ನು ದಾನ ನೀಡಿದ್ದರು. ಇನ್ನು ಈ ನಗರ ಇಡೀ ರಾಜ್ಯದಲ್ಲಿ ಪ್ರಸಿದ್ಧಿಯಾಗುವಂತೆ ದುಡಿದವರು, -ಅಲ್ಲಿನ ನಾಯಕರುಗಳು ಹೆಚ್.ಸಿದ್ಧವೀರಪ್ಪ, ಕೊಂಡಜ್ಜಿ ಬಸಪ್ಪ ಗಾಂಜಿ ವೀರಪ್ಪ ಮತ್ತಿತರ ಮಹನೀಯರುಗಳು ವೈಯಕ್ತಿಕವಾಗಿ ತಮ್ಮ ತಮ್ಮಗಳಲ್ಲೇ ಭಿನ್ನಾಭಿಪ್ರಾಯವಿದ್ದರೂ ಸಾರ್ವಜನಿಕ ಹಿತದೃಷ್ಟಿ ಬಂದಾಗೆಲ್ಲಾ ಅವರು ಒಂದಾಗಿ ಬಿಡುತ್ತಿದ್ದರು. ನನ್ನ ಕೆಲಸ ಕಾರ್ಯಗಳಲ್ಲೂ ಈ ಮಹನೀಯರು ಸಹಕರಿಸಿ ಉಪಕರಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಪರಿಸ್ಥಿತಿ ಗಮನಿಸಿ ಅನೇಕರು ದಾವಣಗೆರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರೆ ಉತ್ತಮ ಎನ್ನುತ್ತಾರೆ. ಪ್ರಾಯಶಃ ನಾಲ್ಕು ದಶಕಗಳ ಹಿಂದೆ ಅಲ್ಲಿನ ನಾಯಕರುಗಳು ಇದಕ್ಕಾಗಿ ಆ ನಗರವನ್ನು ಅಣಿಗೊಳಿಸಿದ್ದುಂಟು. ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ಸಂಗಮ ಸ್ಥಾನದಂತಿರುವ ತುಂಗಾನದಿಯ ವರಪ್ರಸಾದವಾದ ಚಿತ್ರದುರ್ಗ ಜಿಲ್ಲೆ ಇದಕ್ಕೆ ಉತ್ತಮ ತಾಣವೆಂದರೆ ತಪ್ಪಿಲ್ಲ.

1947ರ ಕೊನೆಯ ಹೊತ್ತಿಗೆ ಚಿಕ್ಕಬಳ್ಳಾಪುರಕ್ಕೆ ಬಂದೆ. ಇಷ್ಟು ಹೊತ್ತಿಗೆ ನಾನು

ಅಮಲ್ದಾರ್ ಹುದ್ದೆಗೆ ಆಯ್ಕೆಯಾಗಿದ್ದು ಆರ್ಡರ್‌ಗಾಗಿ ಕಾಯುತ್ತಿದ್ದೆ. ಇಲ್ಲಿ ನಮಗೆ ಜಯಮ್ಮ ಎಂಬ ಹೆಣ್ಣು ಮಗು ಜನಿಸಿತು. ಚಿಕ್ಕಬಳ್ಳಾಪುರ ತಾಲ್ಲೋಕಿನ ಅಮಲ್ದಾರ್ ಆಫೀಸಿನಲ್ಲೆ ನನ್ನನ್ನು ತರಬೇತು ಮಾಡುವಂತೆ ಕೋಲಾರದ ಡಿ.ಸಿ.ಯವರಿಗೆ ಸರ್ಕಾರ ಆದೇಶಿಸಿತು. ಅಂತೂ ಕೊನೆಗೆ ನಾನು ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆಗೆ ವಿದಾಯ ಹೇಳಿದೆ.

ಸೊಸೈಟಿ ಇನ್‌ಸ್ಪೆಕ್ಟರ್ ಆಗಿ 12-13 ವರ್ಷದ ಗೇಯ್ಮೆ ನನ್ನದು. ವಿದ್ಯಾರ್ಥಿದೆಸೆಯಿಂದಲೂ ಗಾಂಧಿ ವಿಚಾರದಲ್ಲಿ ಆಸಕ್ತಿ ಇದ್ದ ನನಗೆ ಸಹಕಾರ ಆಂದೋಳನ ಹೊಸದಾಗಿ ಏನೂ ಕಾಣಲಿಲ್ಲ. ಕೆಲಸಕ್ಕೇನೋ ಬಹು ಬೇಗ ಒಗ್ಗಿಕೊಂಡೆ. ಒಂದಿಷ್ಟು ದುಡಿದದ್ದುಂಟು. ಈಗಿನ ಪರಿಸ್ಥಿತಿಯಲ್ಲಿ ಅದನ್ನೆಲ್ಲ ನೆನೆದರೆ ಸಹಕಾರ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಏನೂ ಕಾಣಿಸಿಲ್ಲವೆಂದು ಹೇಳಬಹುದು. ಬ್ರಿಟೀಷ್ ಸರ್ಕಾರದ ಕೆಲವು ಹಿರಿಯ ವ್ಯಕ್ತಿಗಳು ತುಂಬ ಸದುದ್ದೇಶದಿಂದ ಈ ಯೋಜನೆಯನ್ನು ರೂಢಿಗೆ ತಂದರು. ಆದರೆ ಅವರು ಈ ಯೋಜನೆ ಹೇಗೆ ಕಾರ್ಯಗತವಾಗುತ್ತದೆ, ಎಂಬುದನ್ನು ವೀಕ್ಷಿಸಲಿಲ್ಲ. ಹೀಗಾಗಿ ಸಹಕಾರ ತತ್ವದ ಪ್ರಯೋಜನ ಕೆಲವರಿಗೆ ಮಾತ್ರ ಆದಂತಾಯಿತು. ಹೊಸದುರ್ಗದಲ್ಲಿ ಆದಂತೆ ಕೆಲವೆಡೆ ಶೋಷಣೆಗೆ ದಾರಿಯಾಯಿತು. ಆಧುನಿಕ ಕಾಲದಲ್ಲಿ ಅಂದರೆ ಸ್ವಾತಂತ್ರ್ಯನಂತರ ಸಹಕಾರ ಆಂದೋಳನ ಕ್ಷೇತ್ರ ವಿಶಾಲ ವಾಯಿತು. ಎಲ್ಲಾ ಜನ ಬಂದರು. ಮಧ್ಯಮ ವರ್ಗದವರು ಕೂಡ ತೀವ್ರವಾಗಿ ಭಾಗವಹಿಸಲಾರಂಭಿಸಿದರು. ಆದರೆ ಆಡಳಿತ ಸೂತ್ರಗಳೆಲ್ಲ ಮತ್ತೊಮ್ಮೆ ಪಟ್ಟಭದ್ರ ಹಿತಾಸಕ್ತರುಗಳ ಕೈಯಲ್ಲಿಯೇ ಉಳಿಯಿತು. ಮುಂದಿನ ವಿಶಾಲ ಅವಕಾಶಕ್ಕೆ ಇದನ್ನು ಬಳಸಿಕೊಳ್ಳಬಹುದಾದ ವೇದಿಕೆಯೆಂದು ರಾಜಕಾರಣಿಗಳು ಭಾವಿಸ ತೊಡಗಿದರು. ಒಂದು ರೀತಿ ವ್ಯಾಪಕ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಇತ್ತೀಚೆಗೆ ನಾನು ಪತ್ರಿಕೆಯಲ್ಲಿ 'ರಾಜ್ಯದ ಏಳೆಂಟು ಡಿ.ಸಿ.ಸಿ. ಬ್ಯಾಂಕ್‌ಗಳು ರೈತರಿಗೆ ಸಾಲ ಕೊಡುವ ಮಟ್ಟದಲ್ಲಿಲ್ಲ' ಎಂಬ ಸುದ್ದಿ ಓದಿದೆ. ನಿಜಕ್ಕೂ ಸಹಕಾರ ಆಂದೋಳನದ ಅವನತಿಯ ಸೂಚನೆಯಿದು. ರೈತರಿಗೆ ಸಾಲ ಕೊಟ್ಟಷ್ಟೇ ಸುಲಭವಾಗಿ ವಸೂಲಿ ಮಾಡಬೇಕು. ಇದರಲ್ಲಿ ನಿಷ್ಪಕ್ಷಪಾತವಾಗಿ ದೊಡ್ಡ ರೈತರಿಂದ ಸಾಲ ವಸೂಲಿ ಮಾಡಬೇಕು. ಹಾಗೆಯೇ ಅನವಶ್ಯಕ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು, ಸಿಬ್ಬಂದಿ ವೆಚ್ಚ ಹೆಚ್ಚಿಸಿ ಅದನ್ನು ರೈತರ ತಲೆಮೇಲೆ ಹಾಕಬಾರದು. ಸಹಕಾರ ಕ್ಷೇತ್ರ ಬಲಗೊಂಡಂತೆಲ್ಲ ಬಂಡವಾಳಶಾಹಿಗಳು ಹಿಂದೆ

ಸರಿಯುತ್ತಾರೆ. ಜನತೆಯಲ್ಲಿ ಸಾಮೂಹಿಕ ಜವಾಬ್ದಾರಿ ಹೆಚ್ಚಿ 'ಕೂಡಿ ಬಾಳೋಣ' ಎಂಬ ಪ್ರಜ್ಞೆ ಬರುತ್ತದೆ. ಇದು ಕೇವಲ ಆರ್ಥಿಕಾಭಿವೃದ್ಧಿಗೆ ಮಾತ್ರ ಸಹಾಯಕವಾಗದೆ ಮನುಜ ಕುಲದ ಉದ್ಧಾರಕ್ಕೆ ಕೂಡ ಸಹಾಯಕವಾಗುತ್ತದೆ. ಸಹಕಾರ ತತ್ವದಿಂದಲೇ ಪಾಶ್ಚಾತ್ಯ ರಾಷ್ಟಗಳು ಸಮೃದ್ಧ ಪ್ರಗತಿಯನ್ನು ಸಾಧಿಸಿರುವುದು. ಎಲ್ಲಿಯ ತನಕ ಸಹಕಾರ ಆಂದೋಳನ ಯಶಸ್ವಿಯಾಗುವುದಿಲ್ಲವೊ ಅಲ್ಲಿಯ ತನಕ ಸ್ವಾವಲಂಬನೆ, ಬಡತನ ನಿವಾರಣೆ, ನಿರುದ್ಯೋಗ ಪರಿಹಾರ ಎಂಬುವು ಕನಸಿನ ಮಾತಾಗುತ್ತವೆ. ಆಧುನಿಕ ಕಾಲದಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಪ್ರಜಾ ಪ್ರಭುತ್ವ ಮಾದರಿ ಸರ್ಕಾರವೊಂದೇ ಶ್ರೇಷ್ಠವೆಂಬ ಭಾವನೆ ಬಂದಿರುವ ಹಾಗೆ ಸಹಕಾರ ಆಂದೋಳನ ಮಾತ್ರ ದೇಶವನ್ನು ಪ್ರಗತಿಯತ್ತ ಕೊಂಡಯ್ಯಬಲ್ಲದೆಂದು ಭಾವಿಸಬೇಕಾಗಿದೆ.

# ಅಮಲ್ದಾರ್

## ಪಾವಗಡ

ಪಾವಗಡಕ್ಕೆ ಅಮಲ್ದಾರನಾಗಿ ಹೋಗುವ ಮುನ್ನ ಚಿಕ್ಕಬಳ್ಳಾಪುರದಲ್ಲಿದ್ದಾಗ ಒಂದು ಸಣ್ಣ ಗ್ರಾಮಕ್ಕೆ ಹೋಗಿದ್ದೆ. ಅದೊಂದು ಶುಕ್ರವಾರ 1948 ಜನವರಿ 30 ಬರುವುದು ಸಂಜೆ 7-30 ಆಗಿತ್ತು. ಬಸ್ ಸ್ಟ್ಯಾಂಡ್‌ನಲ್ಲಿ ಇಳಿದೊಡನೆ ನನ್ನ ಮಿತ್ರರೂ ಹಾಗೂ ನಿಷ್ಠಾವಂತ ಅಧಿಕಾರಿಗಳಾಗಿದ್ದ ಊರಿನ ಸಬ್‌ರಿಜಿಸ್ಟ್ರಾರ್ ವೆಂಕಟಪ್ಪನವರು ದುಃಖದಿಂದ ನನ್ನನ್ನು ತಬ್ಬಿಕೊಂಡು ''ಎಲ್ಲಾ ಆಗಿಹೋಯ್ತು ಮಲ್ಲಪ್ಪ, ಯಾರು ಅಹಿಂಸಾ ತತ್ವವನ್ನು ಪ್ರಪಂಚಕ್ಕೆ ತೋರಿಸಿಕೊಟ್ಟರೋ ಅವರನ್ನ ನಾವು ಕೊಲೆ ಮಾಡಿಬಿಟ್ಟೆವು'' ಎಂದರು. ಒಂದು ಕ್ಷಣ ನಾನು ದಿಗ್ಭ್ರಮೆಗೊಂಡೆ. ಅಂದಿನ ಸಂಜೆ 5-17ರಲ್ಲಿ ನಾಥೂರಾಮ್ ಗೋಡ್ಸೆ ಗಾಂಧೀಜಿಯವರನ್ನು ಗುಂಡಿಕ್ಕಿ ಕೊಂದಿದ್ದ. ನನಗೆ ಆಕಾಶವೇ ಕಳಚಿಬಿದ್ದಂತಾಗಿತ್ತು. ಗದ್ಗದಿತರಾಗಿ ಮಾತನಾಡಿದ ನೆಹರು ಮತ್ತು ಪಟೇಲರ ಭಾಷಣವನ್ನು ಆಕಾಶವಾಣಿ ಪ್ರಚಾರ ಮಾಡಿತು. ನನಗೆ ಈ ಸಾವು ಎಳೆತನದಲ್ಲಿನ ತಾಯಿಯ ಸಾವಿಗಿಂತ ಹೆಚ್ಚಿನ ಪರಿಣಾಮ ಬೀರಿತು. ಹಾಗೆ ನೋಡಿದರೆ ಮಾನವನ ಇತಿಹಾಸದಲ್ಲಿ ಸಾಕ್ರಟಿಸ್ ಏಸು, ಬಸವಣ್ಣ ಅವರುಗಳನ್ನ ನಾವು ಇದೇ ರೀತಿ ಕೊಂದಿದ್ದೇವೆ. ಗಾಂಧಿ ವಿಚಾರನ ಎಲ್ಲ ಕಾಲಕ್ಕೂ ಎಲ್ಲವನ್ನ ಒಪ್ಪಿಕೊಳ್ಳದೇ ಹೋಗಬಹುದು. ಆದರೆ ಅವರು ತಮ್ಮ ವಿಚಾರಧಾರೆಯನ್ನ ಮಂಡಿಸಲಿಕ್ಕೆ ಅವಕಾಶ ಕೊಡೋದಿಲ್ಲ ಅನ್ನೋ ನಾವು ಪ್ರಾಣಿ ಕುಲದಿಂದ ಹೇಗೆ ಪ್ರತ್ಯೇಕ ಆಗುತ್ತೇವೆ? ಕೊಲೆ ಎಲ್ಲಕ್ಕೂ ಮದ್ದು ಅಂತ ಹೋದ್ರೆ ವಿಚಾರವಂತಿಕೆ ಪಾಚಿಗಟ್ಟಿದ ನೀರಾಗಿ ಬಿಡಬಹುದು. ಗಾಂಧಿ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿದ್ದ ವ್ಯಕ್ತಿಯಾಗಿರಲಿಲ್ಲ, ಅವರ ವಿಚಾರ ತರಂಗಗಳು ಪ್ರಪಂಚಾದ್ಯಂತ ಪ್ರಸರಿಸಿದವು. ಈ ವ್ಯಕ್ತಿಯ ನಂತರ ಮನುಷ್ಯ ಸ್ವಾತಂತ್ರ್ಯದ ಬಗ್ಗೆ ಹೊಸ ವ್ಯಾಖ್ಯಾನವೊಂದನ್ನು ತನ್ನ ಪಟ್ಟಿಗೆ ಸೇರಿಸಿಕೊಂಡ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಗಾಂಧಿಗಳು ಹುಟ್ಟಿಕೊಂಡರೆಂದರೆ ಅವರ ವಿಚಾರದ ಜೀವಂತಿಕೆಯನ್ನು ತಿಳಿಯಬಹುದು. ಗಾಂಧೀಜಿ, ಬುದ್ಧ, ಏಸುವಿನ ನಂತರ ಪ್ರಪಂಚ ಕಂಡಂತಹ ಮಹಾ ಅಹಿಂಸಾವಾದಿ ಮಾತ್ರವಲ್ಲ ಅದನ್ನು ತಮ್ಮ ಬದುಕಿನಲ್ಲಿ ಪ್ರಯೋಗಿಸಿ ಯಶಸ್ವಿಯಾದವರು ಕೂಡ ಹೌದು. ದಾರ್ಶನಿಕರೊಬ್ಬರು ಹೇಳುವಂತೆ,

ಮುಂದಿನ ಜನಾಂಗ, ಮಾಂಸ ರಕ್ತದಿಂದ ತುಂಬಿದ ಈ ವ್ಯಕ್ತಿ ಭೂಮಿಯ ಮೇಲೆ ತಿರುಗಾಡುತ್ತಿದ್ದನೆಂದರೆ ನಂಬುವುದು ಕಷ್ಟ. ಗಾಂಧೀಜಿಯನ್ನು ನಾವು ಅವತಾರ ಪುರುಷರನ್ನಾಗಿ ಮಾಡ ಬೇಕಾಗಿಲ್ಲ. ವೈವಿಧ್ಯಮಯವಾದ ಈ ದೇಶದಲ್ಲಿ ಗಾಂಧಿ ವಿಚಾರವನ್ನು ಅನುಸರಿಸುವುದರ ಮೂಲಕ ಈ ದೇಶದ ಐಕ್ಯತೆಯನ್ನು ಕಾಪಾಡಬೇಕಷ್ಟೆ.

ಪಾವಗಡ ನಮ್ಮ ರಾಜ್ಯದ ಮೂಲೆಯೊಂದರಲ್ಲಿದೆ. ಆಂಧ್ರಪ್ರದೇಶದ ಮಡಕಶಿರಾವನ್ನು ದಾಟಿ ಹೋದರೆ ಪಾವಗಡ ಸಿಗುತ್ತದೆ. ಹೆಸರಿಗೆ ತುಮಕೂರು ಜಿಲ್ಲೆಗೆ ಸೇರಿದ್ದರೂ ಅಲ್ಲಿನ ಬಹುತೇಕ ಜನರೆಲ್ಲ ಮಾತನಾಡುವುದು ತೆಲುಗು, ನಾನು ಹಳ್ಳಿಗೆ ಹೋದಾಗ 'ಅಂದರೂ ಬಾಗುಂಡಾರ' 'ಅದಂತ ಸದ್ಯಾನಿಕಿ ಅಯಲೇದಪ್ಪ' ಅಂತ ಹರುಕು ಮುರುಕು ತೆಲುಗಿನಲ್ಲಿ ಮಾತನಾಡಿದರ ಅವರಿಗೆ ಖುಷಿಯೋ ಖುಷಿ, ಪಾವಗಡದಲ್ಲಿ ಸುಂದರವಾದ ಬೆಟ್ಟವಿದೆ. ಅಲ್ಲಿ 'ಪಾವು' (ಹಾವು)ಗಳು ಹೆಚ್ಚಿದ್ದ ಕಾರಣ ಅದಕ್ಕೆ ಪಾವಗಡ ಎಂಬ ಹೆಸರು ಬಂದಿದೆ. ರತ್ನಗಿರಿ ಎಂಬುದು ಇಲ್ಲಿನ ಪ್ರಸಿದ್ಧ ಇತಿಹಾಸದ ಸ್ಥಳ. ಇಲ್ಲಿನ ಪಾಳೇಗಾರರು ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ಪ್ರಾಮುಖ್ಯತೆ ಹೊಂದಿದ್ದರೆಂದು ಹೇಳುತ್ತಾರೆ. ಮೊದಲಿಗೆ ನಾನೊಬ್ಬನೇ ಹೋಗಿ ಪಾವಗಡದಲ್ಲಿ ಅಮಲ್ದಾರ್ ಹುದ್ದೆಯ ಛಾರ್ಜ್ ತಕ್ಕೊಂಡೆ. ಅಮಲ್ದಾರರಿಗೆ ಮೀಸಲಾಗಿದ್ದ ಮಾಳಿಗೆ ಮನೆ ಹೊಕ್ಕು ನೋಡಿದರೆ 3-4 ಹಸುಗಳಿದ್ದವು. ಅವು ಹಿಂದಿನವರಿಗೆ ಗಂಗ ಸಾಗರದ ಪಟೇಲ್ ಸಂಜೀವರೆಡ್ಡಿಯವರು ಕಳಿಸಿದ್ದವು. ನಮ್ಮೂರಿನಲ್ಲಿದ್ದಷ್ಟು ದಿನ ಅಮಲ್ದಾರ್ ಮತ್ತು ಅವರ ಮನೆ ಮಕ್ಕಳು ಹಾಲಿಲ್ಲದೆ ಬಳಲ ಬಾರದೆಂದು ಆ ಊರಿನವರು ಈ ರೀತಿ ಸಂಪ್ರದಾಯವನ್ನು ಜಾರಿಗೆ ತಂದಿದ್ದರು. ಹಾಗೇನೇ ವೈ.ಎನ್.ಹೊಸಕೋಟೆಯಿಂದ ಅಮಲ್ದಾರ್ ಅವರಿಗೆ ಸಣ್ಣಕ್ಕಿ ಬರುತ್ತಿತ್ತು. ನಾನು ಸಂಸಾರ ಕರಕೊಂಡು ಬಂದ ಮೇಲೆ ಇನ್ನೆರಡು ಹೊಸ ಹಸುಗಳನ್ನು ತಂದು ಕೊಡಲಿಕ್ಕೆ ಸಂಜೀವರೆಡ್ಡಿಯವರು ಮುಂದಾದರು. ಅವರ ಆಹ್ವಾನವನ್ನು ವಿನಯದಿಂದಲೇ ತಿರಸ್ಕರಿಸಿ ನಮ್ಮ ಉಪಯೋಗಕ್ಕೆ ಒಂದು ಹಸುವನ್ನು ಕೊಂಡುಕೊಂಡೆ. ಫುಡ್ ಶಿರಸ್ತೆದಾರರ ಮೂಲಕ ಕಾರ್ಡು ಮಾಡಿಸಿ ದಿನಸಿ ತರೋಕೆ ವ್ಯವಸ್ಥೆ ಮಾಡಿಕೊಂಡೆ. ಇದು ಕೆಲವರಿಗೆ ಆಶ್ಚರ್ಯ ಉಂಟುಮಾಡಿರಬೇಕು. ಏನೇ ಇರಲಿ ಅದು ನನಗೆ ಮುಂದೆ ಸಮರ್ಪಕವಾಗಿ ಕೆಲಸ ಮಾಡಲು ಸಹಾಯಕವಾಯಿತು.

''ನಮ್‌ಸಾಯಬ್ರು ಗೈರ್ ಮಾಮೂಲ್ ಮಾಡ್ತವ್ರೆ ಕಣ್ರವ್ವ'' ಎಂದು ಮನೆಯಲ್ಲಿ ನಮ್ಮೋಳ್ಗೆ - ಜವಾನ್ರೆಲ್ಲಾ ಒಬ್ಬರಾಗುತ್ಲು ಒಬ್ಬರು ಮೆತ್ತಗೆ ಸನ ಗೇಳ್ದರಂತೆ, ಆಮೇಲಿಂದ ನನ್ನ ಹೆಂಡತಿ ತಿಳಿಸಿದಳು.

ಸಾಮಾನ್ಯವಾಗಿ ರೆವಿನ್ಯೂ ಆಫೀಸರ್‌ಗಳೆಂದರೆ ಧರೆಗಿಳಿದ ದೇವತೆಗಳೆಂದು ಜನ ಇನ್ನೂ ಭಾವಿಸುತ್ತಿದ್ರು. ಪ್ರಾಯಶಃ ನಿರಕ್ಷರಕುಕ್ಷಿ ರೈತ ಇವರ ಹತ್ತಿರ ಹೆಚ್ಚಿಗೆ ವ್ಯವಹರಿಸೋ ಕಾರಣಕ್ಕಾಗಿ ಇವರು ತಮ್ಮನ್ನ ಅಳತೆಗೆ ಮೀರಿ ಭಾವಿಸಿ ಕೊಂಡಿರುತ್ತಾರೆ. ನಮ್ಮ ಪಾಳ್ಯಕ್ಕೆ ನನ್ನ ಚಿಕ್ಕಂದಿನಲ್ಲಿ ಬರುತ್ತಿದ್ದ ಶೇಕಧಾರ್ರು ಶ್ಯಾನುಭೋಗರುಗಳು ಯಾಕೆ ಹೀಗಾಡ್ತಾರೆ ಅಂದುಕೊಳ್ಳುತ್ತಿದ್ದೆ, ಅವಕಾಶವಿದ್ದಾಗ ಒಂದಿಷ್ಟು ಜನತೆಗೆ ಒಳಿತು ಮಾಡಬೇಕೆಂಬುದು ನಮ್ಮ ಗುರಿಯಾಗಬೇಕು.

ನಮ್ಮ ಹಳ್ಳಿ ಜನ ಎಂಥ ಮುಗ್ಧರು. ಅವರಲ್ಲಿ ಒಳಗೊಂದು ಹೊರಗೊಂದು ತಟವಟ ಇರೋದಿಲ್ಲಾ. ಹಾಗೇನೇ ಸಮಯಾ-ಸಮಯ ಎಂಬ ಕಲ್ಪನೆ ಕೂಡ ಇರೋದಿಲ್ಲಾ ಎಂಬ ವಿಚಾರ ಆಗ ಮಂಗಳವಾಡದಲ್ಲಿ ನಡೆದ ಜಮಾ ಬಂಧ್ಧಿಯಿಂದ ಗೊತ್ತಾಯ್ತು. ನಾನು ಜಮಾಬಂದಿ ಸಂಬಂಧವಾಗಿ ಬಾಕಿ ವಸೂಲಿ ಮುಂತಾದ ವಿಚಾರವನ್ನು ಕುರಿತು ಬೆಳಿಗ್ಗೇನೆ ಮಾತನಾಡಿದ್ದೆ. ಅದೇ ಸಾಯಂಕಾಲ ತಾಲ್ಲೂಕು ಜಮಾ ಬಂದಿ ನಡೆಯುತ್ತಿತ್ತು. ಸಾವಿರಾರುಜನ ಜಮಾಯಿಸಿದ್ದರು. ಆ ಊರಿನ ತೋಟಿಗೂ ಹಾಗೂ ರೈತನೊಬ್ಬನಿಗೂ ಮಿರಾಸೆ ಕೊಡೋ ವಿಚಾರದಲ್ಲಿ ಮಾತು ನಡೆದಿತ್ತು. ಪಟೇಲರು. ಶ್ಯಾನುಭೋಗರು, ಶೇಕದಾರ್ರು ಹಾಗೂ ಛೇರ್ಮನ್ನು ಹಾಜರಿದ್ದು ಅವರಿಬ್ಬರೂ ಒಂದು ತೀರ್ಮಾನಕ್ಕೆ ಬರಲು ಒತ್ತಾಯಿಸುತ್ತಿದ್ದರು. ಪ್ರಾಯಶಃ ಅವರೆಲ್ಲಾ ಆ ರೈತನ ಪರ ಮಾತನಾಡಿರಬೇಕು. ಆಗ ತೋಟಿಗೆ ಸಿಟ್ಟು ಹೆಚ್ಚಾಗಿ ನನ್ನ ಬಳಿ ಬಂದು 'ನೋಡಿ ಸ್ವಾಮಿ ಅವರೆಲ್ಲ ನಾನೊಬ್ಬ ಹಂಡೆ ಕುರುಬ ಅಂತ ತಿಳ್ಕೊಂಡ್ ಆ ಕುರುಬನ್ಗೇಳೋ ಮಾತೆ ನಂಗೂ ಹೇಳ್ತವ್ರೆ ನೀವೆ ನೋಡಿ' ಎಂದ. ಅವನ ಆ ಮಾತನ್ನು ಕೇಳಿ ತಕ್ಷಣ, ಪಟೇಲ್-ಶ್ಯಾನುಭೋಗರು ''ಹಿಡ್ಕಳ್ರೋ ಅವನ್ನ ಎಲ್ದೇರ್‍ರೋ'' ಅಂತ ಕೆಂಡ ಕಾರಿದರು. ಅವರು ನನ್ನ ಜಾತಿ ವಿಚಾರ ತಿಳಿದಿದ್ದ ಕಾರಣ ಅವನ್ನ ಹಂಗೆ ಗದರಿಸಿ ಸುಮ್ಮನಿರಿಸಕ್ಕೋದರು. ನಾನೇ ನಗುನಗುತ್ತಾ ತಡೆದೆ. ಇದ್ದ ವಿಚಾರವನ್ನು ಇಬ್ಬರಿಂದಲೂ ಕೇಳಿ ಇಬ್ಬರಿಗೂ ಸಮಾಧಾನ ಆಗೋ ಸೂತ್ರ ಹೇಳಿ ವ್ಯಾಜ್ಯ ಬಗೆಹರಿಸಿದೆ.

ನನ್ನ ಹೆಡ್‌ಕ್ವಾರ್ಟರ್ಸ್‌ಗೆ ಬಂದ ಅರ್ಜಿಗಳನ್ನು ಪ್ರವಾಸದ ಜೊತೆ ತಕ್ಕೊಂಡು ಹೋಗಿ ಅವನ್ನ ಪರಿಶೀಲಿಸಿ ಸ್ಥಳದಲ್ಲೆ ಗ್ರಾಮಸ್ಥರು, ಶ್ಯಾನುಭೋಗ, ಶೇಕ್‌ದಾರರುಗಳನ್ನು ವಿಚಾರಿಸಿ ವಿಲೇವಾರಿ ಮಾಡುತ್ತಿದ್ದೆ. ಇದರಿಂದ ಶೇಕ್‌ದಾರ್ ಗುಮಾಸ್ತರ ಕೈಚಳಕ ತೋರಿಸೋಕೆ ಆಗುತ್ತಿರಲಿಲ್ಲ. ನಾನು ಪಾವಗಡಕ್ಕೆ ಬಂದಾಗ ವಿವಿಧ ವಿಚಾರಗಳನ್ನು ಕುರಿತು ತೀರ್ಮಾನ ಆಗದ ಒಂದು ಸಂದೂಕದ ತುಂಬಾ ರಿಕಾರ್ಡುಗಳು ಅಮಲ್ದಾರರ ಸ್ವಂತ ಕಟ್ಟಿನಲ್ಲಿದ್ದವು. ಹೋದ ವರ್ಷ ಜಿಲ್ಲಾಧಿಕಾರಿಯವರು ತನಿಖೆಗೆ ಬಂದಿದ್ದಾಗ ಇದರ ವಿಲೇವಾರಿಗೆ ಗಮನ ಹರಿಸುವಂತೆ ಹಿಂದಿನವರಿಗೆ ಹುಕುಂ ಮಾಡಿದ್ದರು. ಪ್ರಾಯಶಃ ಅರ್ಜಿದಾರರು ಯಾರೂ ತಾಲ್ಲೂಕು ಕಛೇರಿ ಯಾತ್ರೆ ಕೈಗೊಂಡಿರಲಿಲ್ಲವಾದ ಕಾರಣ ಅವು ಗಾಢ ವಿಶ್ರಾಂತಿಯಲ್ಲಿದ್ದವು. ನಾನು ಬಂದ ಮೂರು ತಿಂಗಳಿಗೆಲ್ಲ ಅವಕ್ಕೆ ಗತಿ ಕಾಣಿಸಿ ಮೇಲಿನವರಿಗೆ ತಿಳಿಸಿದೆ. ಡೆಪ್ಯುಟಿ ಕಮೀಷನರ್‌ರವರಿಂದ ವಿಷಯ ತಿಳಿದ ರೆವಿನ್ಯೂ ಕಮಿಷನರ್ ಕೂಡ ಕೆಲಸ ತೃಪ್ತಿಕರವಾಗಿದೆಯೆಂದು ಷರಾ ಬರೆದ ನೆನಪು.

ಸಾಮಾನ್ಯವಾಗಿ ಹಳ್ಳಿಯಲ್ಲಿರೋ ರೈತರೆಲ್ಲ ಬಹಳ ಒಳ್ಳೆಯವರೇ. ಅವರಿಗೆ ಸರ್ಕಾರದ ಅಧಿಕಾರಿಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ತಿಳಿಯೋದಿಲ್ಲ, ರಾಜಕೀಯ ಅಂತ ಹಾಗೆ ಹೀಗೆ ತಿರುಗಾಡಿದವರು ಹೊಸದಾಗಿ ಬಂದಂಥವರನ್ನ ರೇಗಿಸಿ ಅವರು 'ಎದ್ದು ಹೋಗೋದು ಬಿದ್ದು ಹೋಗಲಿ' ಅನ್ನೋ ತರಹ ಮಾಡ್ತಾರೆ. ಇನ್ನು ಕೆಲವರು ಅಧಿಕಾರಿಗಳಿಗೆ ಕಿರುಕುಳ ಕೊಟ್ಟು ಅವರು ಶತಾಯ ಗತಾಯ ಊರು ಬಿಡೋ ಹಾಗೆ ಮಾಡ್ತಾರೆ. ಇಲ್ಲ ಅಧಿಕಾರಿಗಳ ಜೊತೆ ಸೇರಿಕೊಂಡು ಸಾಮಾನ್ಯರನ್ನ ಸುಲಿಗೆ ಮಾಡ್ತಾರೆ. ಆದರೆ ಅಧಿಕಾರಿಗಳನ್ನು ಒಲಿಸಿಕೊಂಡು ಊರಿನ ಹಿತ ಸಾಧಿಸೋಕೆ ಪ್ರಯತ್ನಿಸೋದು ಜಾಣರ ಲಕ್ಷಣವಲ್ಲವೆ? ಆಗಿನ ಪಾವಗಡದ ಒಂದು ಘಟನೆ ಜ್ಞಾಪಿಸಿಕೊಂಡರೆ ಅಧಿಕಾರಿ ಹಾಗೂ ರಾಜಕೀಯ ವ್ಯಕ್ತಿಗಳ ನಡುವೆ ಕಂದಕ ಹೇಗಿತ್ತೆಂದು ತಿಳಿಯಬಹುದು. ಸ್ವಾತಂತ್ರ್ಯದ ನಂತರವಷ್ಟೇ ಬಂದಿದ್ದ ಸರ್ಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ಅಭಿವೃದ್ಧಿ ಮಂಡಲಿ ನೇಮಕ ಮಾಡಿತ್ತು. ಅದೇ ರೀತ್ಯಾ ಪಾವಗಡದಲ್ಲಿ ಅಭಿವೃದ್ಧಿ ಮಂಡಲಿಗೆ ಪೋತಗಾನಹಳ್ಳಿ ರಾಮರಾಯರು ಅಧ್ಯಕ್ಷರಾಗಿದ್ದರು, ಅವರು ಬಿ.ಎಸ್‌ಸಿ., ಅಗ್ರಿಕಲ್ಚರ್ ಪಧವೀದರರು. ಅಭಿವೃದ್ಧಿ ಮಂಡಳಿ ಎಂದರೆ ಸರ್ವಸ್ವ ಅಂದುಕೊಂಡು ತಾಲ್ಲೂಕಿನ ಎಲ್ಲಾ ಅಧಿಕಾರಿಗಳೂ ಇವರ ಕೈಕೆಳಗೆ ಕೆಲಸ ಮಾಡಬೇಕೆಂದು ಅವರು ಭಾವಿಸಿದ್ದಂತೆ ತೋರುತ್ತಿತ್ತು.

ನಾನು ಒಂದು ದಿನ ಸೂಚ್ಯವಾಗಿ, ಇದೊಂದು ಸಲಹಾ ಮಂಡಳಿ ಮಾತ್ರ. ನಾವಿಬ್ಬರೂ ಸೇರಿ ತಾಲ್ಲೂಕು ಅಭಿವೃದ್ಧಿಗೆ ಶ್ರಮಿಸೋಣ ಅಂತ ಹೇಳಿದೆ. ಆ ಪುಣ್ಯಾತ್ಮ ಕೇಳಲಿಲ್ಲ. ಒಂದು ಮಿಟೀಂಗ್‌ನಲ್ಲಿ ಅಧ್ಯಕ್ಷರಿಗೆ, ಅಮಲ್ದಾರರಿಗೆ ಒಂದು ಕಡೆ ಕುರ್ಚಿ ಹಾಕಿದ್ದರೆ ಅಮಲ್ದಾರ್ ಕುರ್ಚಿನ ಬೇರೆ ಹಾಕಿಸಿ 'ಈತ ನನ್ನ ಸಮ ಕೂರಲು ಅರ್ಹನೆ?' ಅನ್ನೋ ತರಹ ತೋರಿಸಿದರು. ಎಲ್ಲಿ ಕುಳಿತರೂ ಅಷ್ಟೆ. ಶಾಶ್ವತವಲ್ಲದ ಈ ಕುರ್ಚಿಗೇಕೆ ಹೋರಾಟ ಎಂದು ನಾನು ಸುಮ್ಮನಾದೆ. ವೈ.ಎನ್.ಹೊಸಕೋಟೆಯಲ್ಲಿ ಪ್ರವಾಸ ಮಾಡುತ್ತಿರಬೇಕಾದರೆ ಶೇಕ್‌ದಾರ್ರೊಬ್ಬರು ''ನಾನು ಪೋತಗಾನ ಹಳ್ಳಿ ರೈತರಿಂದ ಸರ್ಕಾರಕ್ಕೆ ಬರಬೇಕಾದ ಆಹಾರ ಸಂಗ್ರಹಿಸಲಿಕ್ಕೆ ರಾಮರಾಯರು ಬಿಡುತ್ತಿಲ್ಲ'' ಎಂದು ಮುದ್ದಾಂ ಬರೆದು ಕಳುಹಿಸಿದರು. ನಾನು ದಿಢೀರನೆ ಅಲ್ಲಿಗೆ ಹೋದೆ. ರಾಮರಾಯರು ಶೇಕ್‌ದಾರ್ರ ಮೇಲೆ ಉಗ್ರಾವತಾರ ತಾಳಿದ್ದರೆ! ನಾನು ರಾಮರಾಯರ ಬಳಿ ಹೋಗಿ ''ರೈತರಿಂದ ಈಗ ನಾವು ಧಾನ್ಯ ಸಂಗ್ರಹಣೆ ಮಾಡಲೇಬೇಕು, ಅದರಲ್ಲೂ ಕೂಡ, ಸಂಬಂಧಪಟ್ಟ ರೈತ ಸಣ್ಣ ರೈತನಲ್ಲವೆಂದೂ ಅವರ ಮನೆಗೆ ಅವಶ್ಯಕವಿರುವಷ್ಟನ್ನು ಬಿಟ್ಟು ಉಳಿದದ್ದನ್ನ ತೆಗೆದುಕೊಳ್ಳುತ್ತೇವೆ. ತಾವು ಅಡ್ಡಬರಬಾರದೆಂದೂ'' ವಿನಂತಿಸಿದೆ, ಆಗ ರಾಮರಾಯರು ತಾವು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೆಂದೂ, ತಾವು ಹೇಳಿದರೆ ಅಲ್ಲಿಗೆ ಮುಗಿಯಿತೆಂದೂ ನುಡಿದರು. ಆಗ ನಾನು 'ನೀವು ತಾಲ್ಲೂಕು ಮಂಡಳಿ ಅಧ್ಯಕ್ಷರಾಗಿದ್ದರೂ, ಕಂಟ್ರೋಲ್ ನಿಯಮಾನುಸಾರ ನಾವು ಅವರಿಂದ ವಸೂಲಿ ಮಾಡಲೇಬೇಕಾಗಿದೆ, ಕ್ಷಮಿಸಿ' ಎಂದೆ. ಆಗ ಅವರು 'ಇಲ್ಲ, ನಿಮ್ಮ ಸಿಬ್ಬಂದಿಯವರು ದೊಡ್ಡ ದೊಡ್ಡ ಕೊಳಗಾನೇ ತಂದು ಅಳತೆ ಮಾಡ್ತಿದ್ದಾರೆ. ಮಿಕ್ಕದ್ದನ್ನೆಲ್ಲ ಅವರು ತಿನ್ನುತ್ತಾರೆ' ಅಂತ ದೂರಿದರು. ಇಷ್ಟು ಹೊತ್ತಿಗೆ ಈ ಪ್ರಕರಣ ನೋಡಲು ಊರಿನೋರೆಲ್ಲ ಜಾತ್ರೆ ಸೇರಿದರು. ರಾಮರಾಯರು ಇನ್ನೂ ಜೋರಾದರು. ಯಾವಾಗಲೂ ನಗುಮುಖದಿಂದ ಇರುತ್ತಿದ್ದ ರಾಯರು ಗಡುಸಾದರು. ಇದು ಅವರಿಗೆ ಅಭಿಮಾನದ ಪ್ರಶ್ನೆಯಾಯಿತು. ಏನೇನೋ ಕೂಗಾಡಿದರು. ಎಲ್ಲಕ್ಕೂ ನನ್ನ ಮೌನವೇ ಉತ್ತರವಾಯಿತು. ಅಲ್ಲಿ ಶಾನುಭೋಗರು ಪ್ರಾಯಶಃ ರಾಮರಾಯರ ಸಂಬಂಧಿ ಇರಬೇಕು. ನನ್ನ ತಾಳ್ಮೆ ಹಾಗೂ ರಾಯರು ದೊಡ್ಡ ರೈತನ ಪರವಾಗಿ ತೋರಿದ ಗಡುಸುತನ ಕುರಿತು ಒಂದು ಲಾವಣಿ ಸಹ ಬರೆದಿದ್ದರು. ರಾಯರು ರಾಜ್ಯದ ಆಡಳಿತ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು. ಒಟ್ಟಿನಲ್ಲಿ ಬೇರೆ ಮಾರ್ಗವಿಲ್ಲದೆ ರಾಮರಾಯರು ಕಂಟ್ರೋಲ್ ಧಾನ್ಯ

ಸಂಗ್ರಹಣೆಗೆ ಅಡ್ಡಿ ಮಾಡುತ್ತಿದ್ದಾರೆಂದು ಪೊಲೀಸರಿಗೆ ದೂರುಕೊಟ್ಟು, ಅಳತೆ ಉಪಕರಣಗಳನ್ನ ಹಾಗೂ ರಾಗೀನ ಅಮಾನತ್ತಿನಲ್ಲಿಡಿಸಿ ಪಾವಗಡಕ್ಕೆ ಬಂದೆ. ಬೆಳಿಗ್ಗೆ ಡೆಪ್ಯೂಟಿ ಕಮೀಷನರ್ ತಿಪ್ಪೇರುದ್ರಯ್ಯನವರು ಕೊರಟಗೆರೆ ಬಳಿಯಿದ್ದ ತುಂಬಾಡಿಗೆ ಬರಲಿದ್ದರು. ನಾನು ಪೊಲೀಸ್ ಇನ್ಸ್‌ಪೆಕ್ಟರ್ ಆರಾಧ್ಯರ ಜೊತೆ ಹೋಗಿ ಅವರನ್ನ ಕಂಡು ಪೋತಗಾನಹಳ್ಳಿಯಲ್ಲಿ ನಡೆದ ವಿಚಾರವನ್ನೆಲ್ಲಾ ಹೇಳಿದೆ. ಅವರು ತಕ್ಷಣ ರಾಯರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಆಜ್ಞೆ ಮಾಡಿದರು. ಈ ವಿಚಾರ ರಾಜ್ಯದಲ್ಲೆಲ್ಲಾ ಪ್ರಸಾರವಾಯಿತು. ಆಡಳಿತ ಪಕ್ಷದ ಕಾರ್ಯಕಾರಿ ಸಮಿತಿ ಇದಕ್ಕಾಗಿ ತುರ್ತು ಸಭೆ ಸೇರಿ ಸಾಮಾನ್ಯ ಅಧಿಕಾರಿಯೊಬ್ಬ ತಮ್ಮ ಸದಸ್ಯರೊಬ್ಬರ ಬಗ್ಗೆ ಅವಹೇಳನವಾಗಿ ನಡೆದುಕೊಂಡ ವಿಚಾರ ಚರ್ಚಿಸಿ ರಾಜ್ಯ ಲಂಚ ನಿರೋಧ ಸಮಿತಿಯ ಅಧ್ಯಕ್ಷರಾದ ಹೆಂಜಾರಪ್ಪನವರು ತಕ್ಷಣ ಅಲ್ಲಿಗೆ ಭೇಟಿ ಕೊಟ್ಟು ತನಿಖೆ ಮಾಡಿ ನನ್ನ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿತು, ಗೊತ್ತಾದ ದಿನ ಹೆಂಜಾರಪ್ಪನವರು ಸ್ಥಳಕ್ಕೆ ಭೇಟಿ ಕೊಟ್ಟರು. ಆಗ ನಾನು ನಾಗಲ್ಮಡಿಕೆಯಲ್ಲಿ ಪ್ರವಾಸದಲ್ಲಿದ್ದೆ. ಒಬ್ಬಾಳು ರಾತ್ರಿ ಸುದ್ದಿ ತಂದ. ಬಂದಿದ್ದ ಹೆಂಜಾರಪ್ಪನವರು ಆಮೂಲಾಗ್ರವಾಗಿ ತನಿಖೆ ನಡೆಸಿದರು. ಛೇರ್ಮನ್‌ರು, ಶಾನುಭೋಗರು, ಪಟೇಲರು, ರಾಮರಾಯರ ತಮ್ಮಂದಿರು ಸಾಕ್ಷ್ಯ ಕೊಟ್ಟರು. ಅವರಿಗೆ ರಾಯರಾಯರದೇ ತಪ್ಪೆಂದು ಮನವರಿಕೆ ಆಯಿತೇನೋ, ವಿಷಯ ತಿಳಿದ ಕಾರ್ಯಕಾರಿ ಸಮಿತಿಯವರು ತುಟಿಪಿಟಕ್ ಅನ್ನದೇ ಸುಮ್ಮನಾದರು.

ಈ ಮಧ್ಯ ಮಧುಗಿರಿಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ಮುಂದೆ ಅಳತೆ ಮತ್ತು ತೂಕದ ಇಲಾಖೆಯವರಿಂದ ಅಳತೆ ಉಪಕರಣಗಳೆಲ್ಲ ಸರಿಯಾಗಿದ್ದವೆಂದೂ ಕೊಳಗ ಇನ್ನೂ ಒಂದು ಚಟಾಕು ಕಡಿಮೆ ಇದೆ ಎಂದೂ ಅಭಿಪ್ರಾಯ ಬಂತು, ಪಾಪ, ರಾಮರಾಯರ ಸ್ಥಿತಿ ಚಿಂತಾಜನಕವಾಯಿತು. ಹೀಗಿರುವಲ್ಲಿ ಅಂದಿನ ಆಹಾರ ಇಲಾಖೆಯ ಮಂತ್ರಿಗಳಾಗಿದ್ದ ಟಿ.ಮರಿಯಪ್ಪನವರು ಜಿಲ್ಲಾಧಿಕಾರಿಯವರ ಮುಂದೆ ಪದೇ ಪದೇ 'ಈ ಕೇಸನ್ನು ವಾಪಸ್ಸು ತಕ್ಕೊಳೋ ವ್ಯವಸ್ಥೆ ಮಾಡಿ' ಅನ್ನುತ್ತಿದ್ದರು. ಆದರೆ ಡೆಪ್ಯೂಟಿ ಕಮೀಷನರ್ ತಿಪ್ಪೇರುದ್ರಯ್ಯನವರು 'ನೀವೇ ಈ ರೀತಿ ಆರ್ಡರ್ ಮಾಡಿ ಬಿಡಿ' ಅನ್ನುತ್ತಿದ್ದರು. ಒಂದು ದಿನ ಬೆಳಿಗ್ಗೆ ಶಾಸಕರಾಗಿದ್ದ ನನ್ನ ಕಾಲೇಜಿನ ಸಹಪಾಠಿ ಮಾಲಿ ಮರಿಯಪ್ಪನವರು ರಾಮರಾಯರೊಂದಿಗೆ ಮನೆಗೆ ಬಂದು ಇಬ್ಬರೂ

ವಿಷಗಳಿಗೆಯಲ್ಲಿ ನಡೆದದ್ದನ್ನ ಮರೆತುಬಿಡಬೇಕೆಂತಲೂ ರಾಮರಾಯರ ಮೇಲಿನ ಕೇಸನ್ನು ವಾಪಸ್ ಪಡೆಯುವಂತೆಯೂ ಹೇಳಿದರು. ಹಿಂದೆ ನಡೆದದ್ದಕ್ಕೆ ರಾಮರಾಯರು ಪಶ್ಚಾತ್ತಾಪ ವ್ಯಕ್ತಪಡಿಸಿದರು. ನನಗೂ ಕೂಡ ಈ ಹೇಸಿಗೆ ಮುಗಿದು ನೆಮ್ಮದಿಯಿಂದ ಕೆಲಸ ಮಾಡಲು ಅವಕಾಶ ಬೇಕಾಗಿತ್ತು. ಆ ಮೇಲೆ ಡೆಪ್ಯುಟಿ ಕಮೀಷನರ್ ಅವರಿಗೆ ರಾಮರಾಯರ ಮೇಲೆ ಹಾಕಿರುವ ಕೇಸನ್ನ ವಾಪಸ್ ತಕ್ಕೊಂಡರೆ, ನನ್ನದೇನೂ ಅಭ್ಯಂತರವಿಲ್ಲವೆಂದು ಹೇಳಿದೆ. ಮುಂದೆ ರಾಮರಾಯರು ನನ್ನ ಪರಮ ಮಿತ್ರರಲ್ಲಿ ಒಬ್ಬರಾಗಿ ಉಳಿದರು.

ಸಾಮಾನ್ಯವಾಗಿ ನಾನು ಯಾವ ಹಳ್ಳಿಗೆ ಹೋದರೂ, ಅಲ್ಲಿನ ಹರಿಜನ ಕೇರಿಗೆ ಭೇಟಿ ಕೊಡುವುದು ವಾಡಿಕೆ. ಸರ್ಕಾರ ಅವರಿಗೆ ಮನೆ ಕಟ್ಟಲು ಅವಕಾಶ ನೀಡಿ ಅದಕ್ಕಾಗಿ ಕೊಡುತ್ತಿದ್ದ ಗ್ರ್ಯಾಂಟ್ಸ್‌ನ್ನು ಅಲ್ಲಲ್ಲೇ ಮಂಜೂರು ಮಾಡುತ್ತಿದ್ದೆ. ನಾಗಲ್ಮಡಿಕೆ ಹೋಬಳಿ ಇಂಟುರಾಯನ ಹಳ್ಳಿಗೆ ಹೋಗಿದ್ದೆ. ಹರಿಜನರ ಒಂದೆರಡು ಗುಡಿಸಲು ಒಳಹೊಕ್ಕು ನೋಡಿದೆ. ಅಲ್ಲಿ ಜನ ಹೇಗೆ ಬದುಕುತ್ತಾರೆ ಅನ್ನೋದೆ ಸಮಸ್ಯೆಯಾಗಿ ಕಂಡಿತು. ಅವರಿಗೆ ನಿವೇಶನ ಕೊಡಿಸೋಣವೆಂದರೆ 'ಜಮೀನು ಅಕ್ವಿಸಿಷನ್ ರೆಕಾರ್ಡ್' ಮೂಲೆಗೆ ಬಿದ್ದಿತ್ತು. ಆಗ ನಾನು ಜಮೀನ್ದಾರರನ್ನ ಕರೆಸಿ ಅವರ ಒಪ್ಪಿಗೆ ಪಡೆದು ನಿವೇಶನಗಳನ್ನ ಹರಿಜನರಿಗೆ ಹಂಚಿದೆ. ಗ್ರ್ಯಾಂಟು ಮಂಜೂರುಮಾಡಿದೆ. ಷೆಡ್ಯೂಲ್‌ಕ್ಯಾಸ್ಟ್ ಹೌಸಿಂಗ್ ಗ್ರ್ಯಾಂಟ್ಸ್' ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇನೆಂಬ ತೃಪ್ತಿ ನನಗುಂಟಾಯಿತು.

ಒಂದು ದಿನ ವೈ.ಎನ್.ಹೊಸಕೋಟೆ ಶೇಕದಾರರ ದಫ್ತರ ಚೆಕ್ಕು ಮಾಡುತ್ತಿದ್ದೆ. ಯಾವುದೋ ರಿಕಾರ್ಡ್‌ನಲ್ಲಿ ಸಂಬಂಧಪಟ್ಟ ಸ್ಥಳ ತನಿಖೆಯಾಗಬೇಕಾಗಿತ್ತು. ಆ ಹಳ್ಳಿಗೆ ಸೈಕಲ್ ಮೇಲೆ ಹೋಗಿ ತನಿಖೆ ಮುಗಿಸಿ ವಾಪಸ್ಸು ಆಗುತ್ತಿದ್ದೆ. ಚಪ್ಪೆ ರೋಗದಿಂದ ಅಲ್ಲಿ ದನ ಸಾಯುತ್ತಿದ್ದವು. ಹಳ್ಳಿ ಬಿಟ್ಟು ಹೊರಗೆ ಸ್ವಲ್ಪ ದೂರದಲ್ಲಿ ಹೊಂಗೆ ಮರಗಳ ಗುಂಪಿನ ಮಧ್ಯದ ಹಳ್ಳದಲ್ಲಿ ಅದೇ ದಿನ ಬೆಳಿಗ್ಗೆ ಸತ್ತುಹೋಗಿದ್ದ ಹೋರಿ ಕರುವೊಂದನ್ನು 3-4 ಹರಿಜನರು ಕುಯ್ದು ಹಳೆ ಚಾಪೆ ಮೇಲೆ ಹಂಚಿಕೆ ಹಾಕುತ್ತಿದ್ದರು. ಇದನ್ನು ನೋಡಿದಾಗ ನನಗೆ ಕೋಪ ದುಃಖ ಒಮ್ಮೆಗೆ ನುಗ್ಗಿ ಬಂದು ಅವರನ್ನೆಲ್ಲಾ ಬೈದೆ, ಅವರ ಪೈಕಿ ಮುದುಕನೊಬ್ಬ ಎದ್ದು ಬಂದ. ''ಈರಿಗುದಿ, ದೊಮ್ಮೆ, ಕಳ್ಳುಪಚ್ಚಿ ಮಾತ್ರ ಹುರಿಯೋಕ್ ತಕ್ಕೊಂಡು-ಮಿಕ್ಕದ್ನೆಲ್ಲಾ

ಬಿಸಾಕ್ತೀವಿ, ತಮ್ಮ ಪಾದೆಲ್ಲು'' ಅಂದ. ''ಸತ್ತದ್ದನ್ನ ಅದರಲ್ಲೂ ಕೆಟ್ಟ ಸಾಂಕ್ರಾಮಿಕ ಕಾಯಿಲೆಯಿಂದ ಹೋದ್ದ ಮಾಂಸ ತಿನ್ನಬಾರದಪ್ಪ. ಬೇಕಾದರೆ ಚಮ್ಮ ತೆಗೆದು ಗುಂಡಿ ಮಾಡಿ ಹೂತ್ಬಿಡಬೇಕು. ಕೆಟ್ಟ ರೋಗದಿಂದ ಸತ್ತದ್ದನ್ನು ತಿಂದರೆ ನಿಮಗೂ ಬರಬಾರದ ಕಾಯಿಲೆ ಕಸಾಲೆ ಬರುತ್ತದೆ'' ಎಂದು ನಾನು ಬುದ್ಧಿ ಹೇಳಿ ಅದನ್ನೆಲ್ಲಾ ಹೂಣಿಸಿದೆ.

ನಾನು ಪಾವಗಡದಲ್ಲಿರುವ ಸಂದರ್ಭದಲ್ಲಿ ನನ್ನ ಮೂರನೆಯ ಮಗ ಕುಮಾರನ ಜನನವಾಯಿತು (18-1-1950).

1950ನೇ ಸೆಪ್ಟೆಂಬರ್ ತಿಂಗಳ ಆದಿಭಾಗವಿರಬಹುದು, ಅಲ್ಲಿಯ ತನಕ ಮಳೆಯೇ ಬಂದಿರಲಿಲ್ಲವೆಂದು ಹೇಳಬೇಕು. ಒಂದು ರಾತ್ರಿ ಭಾರಿ ಮಳೆಬಂತು, ನಾಗಲ ಮಡಿಕೆ ಮೇಜರ್ ಕೆರೆ ಮಧ್ಯಭಾಗದ ಏರಿಯಲ್ಲಿ ಮಾಳೆ ಬಿದ್ದು ಒಡೆದು ಹೋಗುವ ಅಪಾಯಕರ ಸ್ಥಿತಿಯಲ್ಲಿದೆಯೆಂದು ರಿಪೋರ್ಟ್ ಬಂತು. ಬೆಳಿಗ್ಗೆಯೇ ಸಿಬ್ಬಂದಿಯವರೊಂದಿಗೆ ಅಲ್ಲಿಗೆ ಹೋಗಿ, ಸದರಿ ಮಾಳೆ ಮುಚ್ಚಲು ತಕ್ಕ ಬಂದೋಬಸ್ತು ಮಾಡಿ ಮಧ್ಯಾಹ್ನ ವಾಪಸ್ಸು ಬಂದೆ. ಗುಂಡಾರ್ಲಹಳ್ಳಿ ಕೆರೆಯ ಏರಿಯ ಎಡಭಾಗ ಕೊರೆತಕ್ಕೆ ಸಿಕ್ಕಿ ಅಪಾಯದ ಸ್ಥಿತಿಯಲ್ಲಿದೆಯೆಂಬ ಸುದ್ದಿ ಬಂತು. ಎಲ್ಲಾ ಸಿಬ್ಬಂದಿಯವರನ್ನ ಕರೆಕೊಂಡು ಲಾರಿಯಲ್ಲಿ ಸ್ಥಳಕ್ಕೆ ಹೊರಟೆ. ಊರಿನಲ್ಲಿರುವ ಆಂಜನೇಯ ದೇವಸ್ಥಾನದ ಬಳಿ ಇಳಿದೆವು. ಅಮಾವಾಸ್ಯೆ ಕತ್ತಲು. ಸುಮಾರು ರಾತ್ರಿ 9-10 ಗಂಟೆ ಸಮಯವಾಗಿರಬೇಕು. ಊರವರು ಕೆರೆಯ ಹಿಂಭಾಗಕ್ಕೆ ಬರಲು ಹೆದರಿದರು. ಆದಿಮೂರ್ತಿ ಎಂಬುವರು ಸಬ್ಓವರ್ಸ್ಸಿಯರ್. ನಾನು ಅವರು ಕೆರೆಯ ಕೆಳಭಾಗಕ್ಕೆ ಹೋದೆವು. ನಾನು ಮತ್ತು ಆದಿಮೂರ್ತಿಯವರೇ ಚಮ್ಮಟಿಕೆ, ಹಾರೆ, ಪಿಕಾಸಿ ತೆಗೆದುಕೊಂಡು ಕೋಡಿಯ ಮುಂಭಾಗದ ಕಲ್ಲು ತೆಗೆದು ಅಪಾಯ ತಪ್ಪಿಸಬೇಕೆಂದು ನಿರ್ಧರಿಸಿದೆವು, ಒಂದಿಬ್ಬರು ಕುಳವಾಡಿಗಳು ಮಾತ್ರ ನಮ್ಮನ್ನು ಹಿಂಬಾಲಿಸಿದ್ದರು, ರೈತರು ಬರಲಿಲ್ಲ. ಕೋಡಿಯಬಳಿ ಹೋಗಿ ಹಿಂದಿರುಗಿ ನೋಡಿದಾಗ ಆ ಕುಳವಾಡಿಗಳಿಬ್ಬರೂ ನಾಪತ್ತೆ. ನಾವಿಬ್ಬರೂ ಕೋಡಿಯ ಬಳಿ ಹೋಗಿ ಒಂದು ಚಪ್ಪಡಿ ಒಡೆದು ನೀರು ನುಗ್ಗಲು ವ್ಯವಸ್ಥೆ ಮಾಡಬೇಕಂತ ಬಗ್ಗಿದೆವು. ಆದರೆ ಚಪ್ಪಡಿನ ಒಡೆಯೋಕೆ ನಮ್ಮಿಬ್ಬರಿಗೆ ಸಾಧ್ಯ ಆಗಲಿಲ್ಲ. ಅಮಲ್ದಾರರೇ ಮುಂದೆ ಹೋದ್ರೆ ಶ್ಯಾನುಭೋಗ್, ಪಟೇಲರು ಜನ ತಾವಾಗಿಯೇ ಬರುತ್ತಾರೆಂದು ನನ್ನೆಣಿಕೆ. ಆದರೆ ಪ್ರಾಣದ ಪ್ರಶ್ನೆ ಬಂದಾಗ ಇಂತಹ ಲೌಕಿಕ ಅಂತಸ್ತು ಗಣನೆಗೆಲ್ಲಿ

ಬರುತ್ತದೆ? ನಾವು ಬಂದ್ರೆ ಊರಿನವರು ಬರ್ತಾರೆ ಅನ್ನೋ ಆಸೆ ನಿರಾಸೆಯಾಯಿತು. ''ದೇವರು ಮಾಡಿಸಿದ್ದಾಗಲಿ'' ಎಂದು ನಾವು ಆಂಜನೇಯನ ಗುಡಿಯ ಒಳಿ ಹಿಂತಿರುಗಿ ಬರಬೇಕಾದರೆ ಭರ್ತಿಕೆರೆ ''ಢಮಾರ್'' ಅಂದಿತು. ನಾನು ಮತ್ತು ಆದಿಮೂರ್ತಿ ಕೋಡಿಯ ಮೇಲಿದ್ದಿದ್ದರೆ ಕೊಚ್ಚಿ ಹೋಗುತ್ತಿದ್ದೆವು. ಪರಮಾತ್ಮನೇ ನಮ್ಮನ್ನ ಕಾಪಾಡಬೇಕಿತ್ತು. ಈಗಲೂ ನನ್ನ ಆ ಹುಚ್ಚು ಸಾಹಸಕ್ಕೆ ನಗುತ್ತೇನೆ.

1949 ನವೆಂಬರ್ ತಿಂಗಳ ಅಂತ್ಯದಲ್ಲಿ ನಾಗಲ್ಮಡಿಕೆ ಹೋಬಳಿಯ ಹುಜೂರ್ ಜಮಾಬಂದಿ ನಡೆದದ್ದು ಜ್ಞಾಪಕ, ಅದಕ್ಕಾಗಿ ಖುದ್ದಾಗಿ ಡೆಪ್ಯೂಟಿ ಕಮೀಷನರ್ ತಿಪ್ಪೇರುದ್ರಯ್ಯನವರೇ ಬಂದಿದ್ದರು. ಸಾಯಂಕಾಲ ಕೆಲಸ ಮುಗಿದು ಪ್ರವಾಸಿ ಮಂದಿರಕ್ಕೆ ಬರುವ ಸಮಯದಲ್ಲಿ ಡಿ.ಸಿ. ಪಾವಗಡ ಬೆಟ್ಟ ಹತ್ತೋಣ' ಎಂದರು. ನನಗೂ ಉತ್ಸಾಹ, ಸರಿ ಇಬ್ಬರೂ ಬೆಟ್ಟ ಹತ್ತಲು ಶುರು ಮಾಡಿದೆವು. ತಿಪ್ಪೇರುಧ್ರಯ್ಯನವರ ಬಗ್ಗೆ ಒಂದೆರಡು ಮಾತು, ಪ್ರಾಯಶಃ ಎಷ್ಟೋ ಡೆಪ್ಯೂಟಿ ಕಮೀಷನರ್‌ಗಳು ನಮ್ಮ ಕಡೆ ಆಗಿ ಹೋಗಿದ್ದಾರೆ. ಆದರೆ ತಿಪ್ಪೇರುದ್ರಯ್ಯನವರಂತಹ ಮನುಷ್ಯ ಬಂದಿಲ್ಲವೆಂದು ಇನ್ನೂ ಸಾಮಾನ್ಯ ಜನ ಮಾತನಾಡುವುದು ರೂಢಿ. ಖಡಾಖಂಡಿತದ ಮನುಷ್ಯ. ನೇರ. ನಡೆ. ಸ್ವಲ್ಪ ಒರಟಾದರು ಮಲ್ಲಿಗೆ ಹೂವಿನಂತಹ ಮನಸ್ಸುಳ್ಳವ. ಬಡವರ ಕಷ್ಟ ನಿಷ್ಠುರಗಳನ್ನೆಲ್ಲ ಬಗೆಹರಿಸಲು ದಿನವೆಲ್ಲ ದುಡಿಯುವ ವ್ಯಕ್ತಿ. ನಿವೃತ್ತರಾದ ಮೇಲೂ ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯ ಮಾಡಿದ್ದಾರೆ. ಅವರದೊಂದು ಪದ್ಧತಿ. ಎಲ್ಲೂ ಕೂಡ ತಮ್ಮ ಹೆಸರು ದಾಖಲೆಯಾಗಬಾರದೆಂದು. ಈಗೆಲ್ಲೋ ಬೆಂಗಳೂರಿನಲ್ಲಿದ್ದಾರೆಂದು ಮಿತ್ರರು ಹೇಳುತ್ತಿದ್ದರು. ನಮ್ಮ ಸರ್ಕಾರದ ದಕ್ಷರಾದಂತಹ ವ್ಯಕ್ತಿಗಳು ನಿವೃತ್ತರಾದ ಕ್ಷಣಕ್ಕೆ ಮನೆಗೆ ಕಳುಹಿಸಿದರೆ ಜನತೆಗೆ ಅವರಿಂದ್ಕಾಗುತ್ತಿದ್ದ ಸೇವೆಯನ್ನು ಮೊಟಕುಪಡಿಸಿದಂತೆಯೆ. ಅಂತು ಮಾತನಾಡುತ್ತಾ ಬೆಟ್ಟ ಹತ್ತುತ್ತಿದ್ದೆವು. ತಿಪ್ಪೇರುದ್ರಯ್ಯನವರು ಏನು ಮಲ್ಲಪ್ಪನೋರೇ, ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ' ಓದಿದ್ದೀರಾ ಎಂದರು. 'ಹೌದು ಓದಿದ್ದೇನೆ ಸಾರ್' ಎಂದೆ. 'ಹೇಳಿ ನೋಡೋಣ' 'ಬಾಯಿಗೆ ಬರೋ ಹಾಗೆ ಅಷ್ಟು ಪರಿಚಿತವಾಗಿಲ್ಲ' ಅಂದೆ. ಅವರು ಶುರುಮಾಡಿದರು. ಒಂಭೈನೂರಕ್ಕೂ ಹೆಚ್ಚಿರುವ ಆ ಪದ್ಯಗಳನ್ನೆಲ್ಲಾ ಆ ಮನುಷ್ಯ ಅರೆದು ಕುಡಿದಿದ್ದಾರೆ ಎನಿಸಿತು. ಮಧ್ಯ ಮಧ್ಯೆ 'ಕಲ್ಲಾಗು ಕಷ್ಟಗಳ ಮಳೆಯ ನಿಧಿ ಸುರಿಯೆ.' 'ಬೆಲ್ಲ

ಸಕ್ಕರೆಯಾಗು ದೀನ ದುರ್ಬಲರಿಗೆ' ಎಂಬುದಕ್ಕೆ ವ್ಯಾಖ್ಯಾನ, ಬೆಟ್ಟ ಹತ್ತಿ ಅದೇ ರಾತ್ರಿ ಹತ್ತು ಗಂಟೆಗೆ ಇಳಿದೆವು. ಪ್ರಾಯಶಃ ತೀವ್ರವಾದ ವ್ಯಾಸಂಗಾಸಕ್ತಿ ಇದ್ದದ್ದರಿಂದಲೋ ಏನೋ ತಿಪ್ಪೇರುದ್ರಯ್ಯನವರಲ್ಲಿ ಮಾನವೀಯತೆ ಹೆಚ್ಚಿತ್ತು.

ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿ. ಹೇಳುವಂತೆ ಅವರಿಗೆ ಜೀವನವೆ ಪರಮಗುರು, ಮಿಕ್ಕ ಗುರುಗಳೂ ಬೇಕು. ನನಗೆ 'ಸಜ್ಜನ ಸಂಗವದು ಹೆಜ್ಜೇನು ಸವಿದಂತೆ' ನುಡಿಗಟ್ಟಿನ ಅರ್ಥವಾಯಿತು. ಬೆಳಿಗ್ಗೆ ಆಫೀಸ್‌ಗೆ ಹೋದರೆ. ನಮ್ಮ ಆಫೀಸ್‌ನವರು ಏನ್ಸಾರ್ ನಾವು ಇಷ್ಟು ದಿನದ ತನಕ ನಿಮ್ಮನ್ನ ಬೆಟ್ಟ ಹತ್ತೋಕೆ ಬಿಟ್ಟಿರಲಿಲ್ಲ. ನೀವು ಹೀಗೆ ಮಾಡೋದೆ - ಯಾಕೆ ಹತ್ತೋಕೆ ಹೋದಿರಿ ಬೆಟ್ಟನ ಅಂದರು. ನಾನು ಗಲಿಬಿಲಿಗೊಂಡು 'ಯಾಕ್ರಪ್ಪಾ?' ಅಂದೆ. 'ಸಾರ್, ಆ ಬೆಟ್ಟ ಹತ್ತೋರೆಲ್ಲಾ ಇಲ್ಲಿಂದ ವರ್ಗ ಆಗೋಗ್ತಾರೆ' ಎಂದರು. ಸರಿ ಹೆಣ ಹೊರೋಕ್ಕೆ ಹಿಂದಾದ್ರೇನೂ ಮುಂದಾದ್ರೇನೂ - ಸರ್ಕಾರಿ ಚಾಕರಿ ಮಾಡೋಕೆ ಎಲ್ಲಾದರೂ ಒಂದೆ' ಎಂದೆ. ಕಾಕತಾಳೀಯವೆಂಬಂತೆ ಇದಾದ ಕೆಲವೇ ದಿನಗಳಲ್ಲಿ ನನಗೆ ಅಲ್ಲಿಂದ ಮಧುಗಿರಿಗೆ ವರ್ಗವಾಯಿತು.

## ಮಧುಗಿರಿ

ಪಾವಗಡದಿಂದ ವರ್ಗವಾದ ಏಳೆಂಟು ದಿನಗಳಿಗೆ ಸರಿಯಾಗಿ ಮಧುಗಿರಿಗೆ ಬಂದೆ. ಪ್ರವಾಸ ಮಂದಿರದಲ್ಲಿ ತಂಗಿ ಅಮಲ್ದಾರರಿಗೆ ಹೇಳಿ ಕಳುಹಿಸಿದರೆ, ಅವರು ಡೆಪ್ಯೂಟಿ ಕಮೀಷನರನ್ನ ನೋಡಲು ಹೋಗಿದ್ದರು. ತಾಲ್ಲೂಕು ಸಿಬ್ಬಂದಿಯವರೆಲ್ಲ ಬಂದರು, ಆ ಹೊತ್ತಿಗೆ ಅಲ್ಲಿನ ಪುರಸಭೆಯ ಅಧ್ಯಕ್ಷರಾದ ಟಿ.ಎಸ್.ಶಿವಣ್ಣ, ಅವರು ಬಂದು ತನ್ನ ಪರಿಚಯ ಮಾಡಿಕೊಂಡರು. 'ನಾನು ಮನೆ ಹುಡುಕಬೇಕಾಗಿದೆ ಅಂದಾಗ ತಮ್ಮ ಕಾರಿನಲ್ಲೆ ಬರುವಂತೆ ಆಹ್ವಾನಿಸಿದರು. ವಿನಯದಿಂದಲೇ ಅವರ ಆಹ್ವಾನ ತಿರಸ್ಕರಿಸಿದೆ. ಅವರ ಎದುರು ಪಾರ್ಟಿ ನಂಜುಂಡಯ್ಯನವರು ಸಹ ಶಿವಣ್ಣ ಅತ್ತ ಹೋಗುತ್ತಲೇ ನನ್ನಲ್ಲಿಗೆ ಬಂದು 'ಈ ಶಿವಣ್ಣನ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ ಆತ 'ಪಾಕಡ ಆಸಾಮಿ' ಅಂದರು. ಅದು ಇದು ಮಾತನ್ನಾಡುತ್ತ ನನ್ನ ಬಗ್ಗೆ ಸ್ಥಳೀಯ ಪತ್ರಿಕೆಯೊಂದರಲ್ಲಿ ''ಪಾವಗಡದಿಂದ ಭಾರಿ ಗಡವ ಒಂದು ಬರುತ್ತಿದೆ ಎಂಬ ಸುದ್ದಿ ಬಂದಿತ್ತು'' ಎಂದರು. ನಾನು 'ಹೋಗಲಿ ಬಿಡಿ ಬರೋದಕ್ಕಿಂತ ಮುಂಚೆನೆ ಸುದ್ದಿ ಮಾಡಿದ್ದೀನಲ್ಲ' ಅಂತ ತೇಲಿಸಿ ಬಿಟ್ಟೆ; ಆದರೆ ಮನಸ್ನಲ್ಲೇ ವಾರೆವ್ಹಾ

ಅಂದುಕೊಂಡೆ - ಮನೆಯ ಸಾಮಾನು ಸಾಗಿಸಲು ಲಾರಿ ಕಳುಹಿಸುವುದಾಗಿ ಶಿವಣ್ಣನವರು ಹೇಳಿದ್ದರು. ಅಂತಹ ತೊಂದರೆ ಅವರಿಗೆ ಬೇಡವೆಂದು ನಿರಾಕರಿಸಿದೆ. ಮಾರನೆಯ ದಿನ ಛಾರ್ಜ್ ತಕೊಂಡೆ. ಅದಾದ 3-4 ದಿನಗಳ ನಂತರ ಎಸ್.ಎಲ್.ವಿ. ಬಸ್‌ನಲ್ಲಿ ಸಾಮಾನು ಸಾಗಿಸಿದೆ.

ನಾನು ಬಂದ 3-4 ತಿಂಗಳ ನಂತರ ಊರಿನ ಹಿರಿಯರೊಬ್ಬರು ಹೇಳಿದರು. ಇದು ಮೊದಲು "ಮದ್ದಗಿರಿ" ಎಂಬ ಹೆಸರು ಪಡೆದುಕೊಂಡಿತ್ತಂತೆ. ಮಾಸ್ತಿಯವರು ಸಬ್ ಡಿವಿಜನ್ ಆಫೀಸರ್ ಆಗಿದ್ದಾಗ ಇದನ್ನು 'ಮಧುಗಿರಿ' ಎಂದು ಬದಲಾಯಿಸಿದರಂತೆ. ಆಗಲೂ ಬೆಟ್ಟದಲ್ಲಿ ಯಥೇಚ್ಛವಾದ ಜೇನುತುಪ್ಪ ಸಿಗುತ್ತಿದ್ದುದೇನೋ ನಿಜ. ಹಾಗೇನೇ ಕತ್ತೆಕಿರುಬ. ತೋಳಗಳು ಗಣನೀಯ ಸಂಖ್ಯೆಯಲ್ಲೇ ಇದ್ದವು. ರಾತ್ರಿ ಹೊತ್ತು ಅವುಗಳ ಕಿರಿಚಾಟ ಮನೆಗೆ ಕೇಳಿಸಿ ಮಲಗಿದ್ದ ಮಕ್ಕಳು ಬೆಚ್ಚು ಬೀಳುವಂತೆ ಆಗುತ್ತಿತ್ತು.

ಮಧುಗಿರಿಯ ದೊಡ್ಡ ಬೆಟ್ಟದ ತಳದಲ್ಲಿ ತಾಲ್ಲೂಕು ಆಫೀಸು. ಪ್ರಾಯಶಃ 1950ರ ಸೆಪ್ಟೆಂಬರ್ ತಿಂಗಳ ಕೊನೆ ಇರಬಹುದು - ನಾನು ಮಧುಗಿರಿಗೆ ಹೋದದ್ದು, ಮಳೆ ಎಂಬ ಸುದ್ದಿಯೆ ಇಲ್ಲ. ದನಕರುಗಳಿಗೆ ಮೇವಿಲ್ಲ. ಇಂಥ ಭೀಕರ ಕ್ಷಾಮದಲ್ಲಿ ನಾನು ತಾಲ್ಲೂಕಿನ ಧಣಿಯಾಗಿ ಹೋಗಿದ್ದೆ. ಆಗ ತುಮಕೂರಿನ ಡೆಪ್ಯೂಟಿ ಕಮೀಷನರ್ ಅಬೂಬಕರ್ ಸಾಹೇಬರು ಒಂದೆರಡು ಸಾರಿ ಮಧುಗಿರಿಗೆ ಬಂದಿದ್ದರು. ಯಾಕೋ ನನ್ನ ಮೇಲೆ 'ಗುರ್' ಅಂತಿದ್ದರು. ಪ್ರಾಯಶಃ ಯಾರೋ ರಾಜಕಾರಣಿಗಳು ಅವರ ಕಿವಿ ಊದಿರಬೇಕೆಂದು ಸುಮ್ಮನಾದೆ. ಹಳ್ಳಿಯವರ ಸಹಾಯ ಪಡೆದು ಊರಿನ ಸಣ್ಣ ಪುಟ್ಟ ಕೆರೆಗಳ ಕೆಲಸ ಮಾಡಬೇಕೂಂತ ಒಂದು ಸರ್ಕ್ಯುಲರ್ ಬಂದಿತ್ತು. ಅದರಂತೆ ಆ ತಾಲ್ಲೂಕಿನಲ್ಲಿ ಒಂದಿಷ್ಟು ಕೆಲಸ ಮಾಡಿಸಿದ್ದೆ. ಅದೇ ಸಮಯದಲ್ಲಿ ರೆವಿನ್ಯೂ ಮಂತ್ರಿ ಹೆಚ್.ಸಿದ್ದಯ್ಯನೋರು ಮಧುಗಿರಿ ತಾಲ್ಲೂಕು ಪ್ರವಾಸ ಕೈಗೊಂಡಿದ್ದರು. ಸಿದ್ದಯ್ಯನೋರು ಅಂದ್ರೆ ಹಳೆಯ ಕಾಲದ ತತ್ವನಿಷ್ಠ ರಾಜಕಾರಣಿ. ಜನತೆಗೆ ಉಪಕಾರ ಮಾಡೋಕಾಗಿಯೇ ಅಧಿಕಾರ ಸ್ಥಾನ ಎಂಬ ಪ್ರಜ್ಞೆಯುಳ್ಳ ಅಪರೂಪದ ವ್ಯಕ್ತಿ. ಆಗ ದಾರಿಯಲ್ಲಿ ಅವರು ಚೋಳೇನಹಳ್ಳಿ ಮೇಜರ್ ಟ್ಯಾಂಕಿನ ಕೆಲಸ ಪರಿಶೀಲಿಸಿ ತುಂಬಾ ಮೆಚ್ಚುಗೆ ಮಾತನಾಡಿದರು. ಅವರು ಡಿ.ಸಿ.ಯವರಿಗೆ ತಿಳಿಸಿದರು, ತಾವು ಚೆಳ್ಳಕೆರೆಯಿಂದ ಪಾವಗಡಕ್ಕೆ ಒಂದುದಿನ ಪ್ರಯಾಣ

ಮಾಡುತ್ತಿದ್ದಾಗ ಒಂದು ಹಳ್ಳಿಯ ಹತ್ತಿರ ಕಾರು ನಿಲ್ಲಿಸಿದರಂತೆ. ಸುಮಾರು ಫಾಸಲೇಲ್ಲಿ ನೀರಾವರಿ ಬಾವಿಯಿಂದ ಸಮೃದ್ಧ ಬೆಳೆ ಬೆಳೆದಿತ್ತಂತೆ. ಅಲ್ಲಿದ್ದ ಮಗ್ಧ ರೈತರನನ್ನ ವಿಚಾರಿಸಲು 'ಆ ಪುಣ್ಯಾತ್ಮ ಅಮಲ್ದಾರ್ ಮಲ್ಲಪ್ಪ 'ಸ್ಥಳದಲ್ಲೇ' ಈ ಭಾವೀನ ಮಂಜೂರು ಮಾಡಿಕೊಟ್ರು. ಅವರ ಹೊಟ್ಟೆ ತಣ್ಣಗಿರಲಿ, ಅವರೆಂಡ್ರು ಮಕ್ಳು ಸುಖವಾಗಿರಲಿ ಎಂದನಂತೆ, ಈ ವಿಷಯದ ಬಗ್ಗೆ ತಾವು ಬೆಂಗಳೂರಲ್ಲಿ ಕಳೆದ ಡೆ।। ಕಮೀಷನರ್‌ಗಳ ಮೀಟಿಂಗಿನಲ್ಲಿ ತಿಳಿಸಿದ್ದನ್ನೂ ಜ್ಞಾಪಿಸಿದರು. ಈ ಮಾತು ಕೇಳುತ್ತಲೇ ಅಲ್ಲಿದ್ದ ಡೆಪ್ಯುಟಿ ಕಮೀಷನರ್‌ರು ತಕ್ಷಣ 'ಹೌದೌದು ಸರ್ ಇವರು ತುಂಬ ಒಳ್ಳೆ ವರ್ಕರ್' ಎಂದರು. ಆಗ ನಾನು 'ಇದು ಪ್ರಪಂಚ' ಅಂದುಕೊಂಡು ಮನಸ್ಸಿನಲ್ಲೆ ನಕ್ಕೆ.

ನನಗೆ ದಿನನಿತ್ಯದ ಬಿಸಿಲಿನ ಝಳಕ್ಕೆ ಮೈಮೇಲೆಲ್ಲ ಬೊಕ್ಕೆಗಳು ಬಂದವು. ಇದರ ಜೊತೆ ಅನೇಕ ಸಣ್ಣ ಪುಟ್ಟ ಕಾಯಿಲೆಗಳು ಸಾಲುಗಟ್ಟಿದವು. ಇದನ್ನು ತೋರಿಸಲು ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಗೆ ಹೋದೆ, ಮನೆಯಲ್ಲಿ ಸಂಜೆ ಬತ್ತೀನಿ ಅಂತ ಹೇಳಿ ಹೋಗಿದ್ದೆ. ಆದರೆ ಅಲ್ಲಿ ಏಳೆಂಟು ದಿನ ಒಳರೋಗಿಯಾಗಿರಬೇಕೆಂದರು. ಸರಿ ಅಂತ ನಾಲ್ಕೈದು ದಿನ ಇದ್ದೆ. ದಿನನಿತ್ಯದಂತೆ ಒಂದು ದಿನ ಬೆಳಿಗ್ಗ ಪತ್ರಿಕೆ ತೆಗೀತೀನಿ. 'ಮಧುಗಿರಿ ತಾಲ್ಲೂಕು ಗೊಂದಿಹಳ್ಳಿಯಲ್ಲಿ ಹಸಿವಿನಿಂದ ಮರಣ' ಎಂಬ ಸುದ್ದಿ ಬಂದಿದೆ. ಯಾರೋ ನನ್ನೆದೆ ಹಿಚುಕಿದಂತಾಯಿತು. ತಾಲ್ಲೂಕಿನಲ್ಲಿ ಜನ ಸಾಯ್ತಿದ್ರೆ ನಾನಿಲ್ಲಿ ಬಂದು ಆರಾಮಾಗಿ ಆಸ್ಪತ್ರೆಯಲ್ಲಿ ಇಲಾಜಿಗೆ ಸೇರಿದ್ದೇನಲ್ಲ ಅಂತ ಕಣ್ಣಲ್ಲಿ ನೀರು ಬಂತು. ಸರಿ, 'ದೊಡ್ಡ ಡಾಕ್ಟರನ್ನು ಕಂಡು 'ಡಿಸ್ಚಾರ್ಜ್ ಮಾಡಿ' ಅಂತ ಬೇಡಿಕೊಂಡೆ. ಅವರು ಒಂದೆರಡು ದಿನ ಇರಿ ಅಂತ ಹೇಳಿದರೂ ಕೇಳದೆ ಸಂಜೆನೇ ಮಧುಗಿರಿಗೆ ಧಾವಿಸಿದೆ. ಆರೇಳು ದಿನದಿಂದ ಮುಖ ಕಾಣದ ನನ್ನ ಮಕ್ಕಳು ನನ್ನನ್ನು ನೋಡುತ್ತ ಹರ್ಷದಿಂದ ಕುಣದಾಡಿದರು. ಹೆಂಡ್ತಿ ಮುಖ ಅರಳಿತು. ಫುಡ್ ಇನ್ಸ್‌ಪೆಕ್ಟರಿಗೆ ಹೇಳಿ ಕಳುಹಿಸಿದೆ. ನಾನು ಮತ್ತು ಅವರು ಒಂದು ವೆಹಿಕಲ್ ಮಾಡಿಕೊಂಡು ಆಡಿಟ್ ಗೀಡಿಟ್ ಆಮೇಲಿಂದ ನೋಡ್ಕೊಳ್ಳೋಣ ಅಂತ ಆರೇಳು ಮೂಟೆ ರಾಗಿ, ಜೋಳದ ಜೊತೆ ಗೊಂದಿಹಳ್ಳಿಗೆ ಹೊರಟೆವು. ನೋಡಿದರೆ ಹಸಿವಿನಿಂದ ಜನ ಕಂಗಾಲಾಗಿದ್ದರು. ಅಷ್ಟೇ ಅಲ್ಲ, ಇನ್ನೇನೂ ಸಿಕ್ಕದೆ ಕೆಲವರು ಕಡ್ಲೆಕಾಯಿ ಒಂದನ್ನೇ ಒಂದಷ್ಟು ತಿಂದಿದ್ದ ಕಾರಣಕ್ಕಾಗಿ ವಾಂತಿ ಬೇಧಿ ಶುರುವಾಗಿತ್ತು. ತಂದಿದ್ದ ದಿನಸೀನ ಅತಿ ಬಡ ಕುಟುಂಬದವರಿಗೆ ಅಷ್ಟಿಷ್ಟು

ಹಂಚಿದೆ. ನಾಳೆಯಿಂದಲೇ ನಾಲ್ಕರು ಕಾಮಗಾರಿ ಪ್ರಾರಂಭ ಮಾಡೋಕೆ ಆಜ್ಞೆ ಮಾಡಿದೆ. ಆ ಕೆಲಸದ ಭರದಲ್ಲಿ ನನ್ನ ಪುಣ್ಯಕ್ಕೆ ಮೈಕೈ ಬೆನ್ನು ಬೊಕ್ಕೆ ಎಲ್ಲಿ ಓಡಿಹೋಯ್ತೋ, ಸರ್ವಜ್ಞ ಹೇಳಿದ ಮಾತು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬಂತು. 'ಹಸನಾಗಿ ಬದುಕುವೊಡೆ, ಕುಶಲನೆಂದೆನಿಸುವೊಡೆ ಪಶುಪತಿ ಪದವ ಪಡೆಯುವೊಡೆ, ಹಸಿದವರಿಗಶನವಿಕ್ಕು'.

ಮಧುಗಿರಿಯಲ್ಲಿ ಆ ಕಾಲದ ಭೀಕರ ಕ್ಷಾಮಕ್ಕೆ ತಕ್ಕಂತೆ ಕಾರ್ಯಪ್ರವೃತ್ತರಾಗಲು ಸಹಾಯ ಮಾಡಿದರು, ಅಂದಿನ ಡೆಪ್ಯೂಟಿ ಕಮೀಷನರ್ ಬಿ.ಟಿ.ಕೆಂಪಣ್ಣನವರು. ಕಾಮಗಾರಿ ಕೆಲಸದ ಜೊತೆ ತಕಾವಿ ಸಾಲ ಕೊಡೋ ವ್ಯವಸ್ಥೆ ಕೂಡ ಮಾಡಿಸಿದರು. ಈ ಸಾಲನ ಅಮಲ್ದಾರರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಕೊಡಬೇಕಾಗಿತ್ತು. ವಸೂಲಿಗೆ ಕೂಡ ಅವರೇ ಹೋಣೆಗಾರರಾಗಿದ್ದರು. ತಿಪಟೂರು ಪಾವಗಡ, ಕುಣಿಗಲ್ ಮುಂತಾದೆಡೆ 7-8 ಸಾವಿರ ರೂಪಾಯಿಗಳ ಸಾಲ ಕೊಟ್ಟರೆ ನಾನು 4-5 ಲಕ್ಷ ರೂಪಾಯಿ ತಕಾವಿ ಸಾಲ ನೀಡಿದೆ. ಡೆಪ್ಯೂಟಿ ಕಮೀಷನರ್ ಕೆಂಪಣ್ಣ ಅವರು ಒಂದಿಷ್ಟೂ ಬೇಸರಗೊಳ್ಳದೆ ಅಷ್ಟೂ ಹಣವನ್ನೂ ಕೊಟ್ಟರು. ದೊಡ್ಡ ದೊಡ್ಡ ರೈತರು ಅಂದರೆ ಸಾವಿರಾರು ರೂಪಾಯಿ ಕಂದಾಯ ಕೊಡೋರು ಕೂಡ 200-300 ರೂಪಾಯಿ ಸಾಲಕ್ಕೆ ನನ್ನ ಹತ್ತಿರ ಬಂದು ಗೋಗರೆಯೋದನ್ನ ಕಂಡರೆ ಎದೆ ಬಡಿಯುತ್ತಿತ್ತು. ಕಾಮಗಾರೀ ಕೆಲಸ ನಡೆದೇ ಇತ್ತು. ಗೋಕಟ್ಟೆ ನಿರ್ಮಿಸೋದು ದನಕರುಗಳಿಗೆ ಮೇವು ಒದಗಿಸೋದು ಹಳ್ಳಿಯ ಸಣ್ಣ ಪುಟ್ಟ ರಸ್ತೆ ರಿಪೇರಿ ಮಾಡಿಸೋದು ನಮ್ಮ ಕೆಲಸವಾಯ್ತು. ಕೂಲಿಗೆ ಹಣದ ಬದಲು ರೆಡ್ ಕ್ರಾಸ್ ಸಂಸ್ಥೆಯವರು ಕೊಟ್ಟಿದ್ದ ಅಮೇರಿಕದ ಗೋಧಿಯನ್ನೇ ಕೊಡುತ್ತಿದ್ದೆವು. ಶೇಖದಾರು, ಫುಡ್ ಶಿರಸ್ತೇದಾರರು, ವಿ.ಪಿ. ಅಧಿಕಾರಿಗಳ ಜೊತೆ ಪ್ರತಿ ಹಳ್ಳಿಗೂ ಭೇಟಿ ಕೊಡುತ್ತಿದ್ದೆ. ಅಲ್ಲಿ ಸಾಲವೋ ಅಥವಾ ಕಾಮಗಾರೀ ಕೆಲಸವೋ ಮಂಜೂರು ಮಾಡುತ್ತಿದ್ದೆ. ನನ್ನ ಸ್ವಂತ ಜವಾಬ್ದಾರಿ ಮೇಲೆ ಲಕ್ಷಾಂತರ ರೂಪಾಯಿ, ಅಲ್ಲಲ್ಲೇ ಸಾಲ ಮಂಜೂರು ಮಾಡಿದರೂ ಆ ತಾಲ್ಲೂಕಿನಲ್ಲಿ ಒಂದು ಕಾಸೂ ಧೋಕಾ ಬಾಕಿಯಾಗದೆ ಇದ್ದದ್ದು ನನ್ನ ಅದೃಷ್ಟವೆಂದು ಹೇಳಬೇಕು. ಪುಣ್ಯ ಪಾಪಗಳೆಂಬ ತಿಣ್ಣ ಭೇದಗಳಿಂದ ನುಣ್ಣನೆ ಜಗವು ನಡೆಯುತ್ತಿಹುದು' ಎಂಬ ನಂಬಿಕೆ ಇರುವ ಜನ ಎಂದೂ ಸಮಯ ಸಾಧಕರಾಗುವುದಿಲ್ಲ. ಮಾರಾಯ ಡಿ.ಸಿ.ಯವರು ಸರ್ಕಾರದಿಂದ ಮೀಸಲಾಗಿ ತನಗೆ ಕೊಟ್ಟಿದ್ದ ವೆಹಿಕಲ್ಲನ್ನು ನನಗೆ ಬಿಟ್ಟುಕೊಟ್ಟು - ತಾನು ತನ್ನ

ಸ್ವಂತ ಕಾರಿನಲ್ಲಿ ಸರ್ಕೀಟು ಮಾಡುತ್ತಿದ್ದರು. ಒಟ್ಟಿನಲ್ಲಿ ಸಹಾಯ ಉಲ್ಲೇಖನಾರ್ಹವೆಂದೇ ಹೇಳಬೇಕು.

1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆಯಿತಲ್ಲದೆ - ಮಧುಗಿರಿ ತಾಲ್ಲೂಕಿನಲ್ಲಿ ಅದರ ಮೇಲುಸ್ತುವಾರಿ ನನ್ನದು. ಚುನಾವಣೆಗೆ ಅವಶ್ಯಕವಿದ್ದಷ್ಟನ್ನು ಖರ್ಚು ಮಾಡಿದ ಮೇಲೆ 7-8 ಸಾವಿರ ರೂಪಾಯಿಗಳು ಮಿಕ್ಕವು. ಆ ಹಣವನ್ನು ತಾಲ್ಲೂಕಿಗಾಗಿ ಬಳಸುವ ಸೌಭಾಗ್ಯ ನನಗೊದಗಿತು. ನಮ್ಮ ತಾಲೂಕು ಆಫೀಸಿಗೆ ಅಂಟಿಕೊಂಡಂತೆ ಶ್ರೀ ರಾಮ ದೇವಾಲಯವಿದೆ. ನಮ್ಮ ಆಫೀಸಿಗೆ ಬರೋರೆಲ್ಲ ಸಾಮಾನ್ಯವಾಗಿ ಅಲ್ಲೇ ತಂಗುತ್ತಿದ್ದರು. ಅದು ಶಿಥಿಲವಾಗಿತ್ತು. ದೇವಸ್ಥಾನಕ್ಕೆ ಸುಣ್ಣ ಬಣ್ಣ ರಿಪೇರಿ ಮಾಡಿಸಿ ಲೈಟ್ ಕೊಡಿಸಿದೆ. ಇದಕ್ಕೆ 3-4 ಸಾವಿರ ಖರ್ಚಾಯಿತು. ಆಮೇಲೆ ನಮ್ಮಲ್ಲಿಗೆ ಬರಗಾಲ ಪ್ರವಾಸದ ಅಧ್ಯಯನ ಕೈಗೊಂಡ ಕೇಂದ್ರ ಸರಕಾರದ 10-15 ಜನರ ನಿಯೋಗವೊಂದಕ್ಕೆ ಕೆಲವು ದಿನ ಈ ಹಣದಲ್ಲಿ ಅತಿಥಿ ಸತ್ಕಾರ ಮಾಡಲಾಯಿತು. ಇದು ತಾಲ್ಲೂಕಿಗೆ ತುಂಬ ಅನುಕೂಲವೇ ಆಯಿತು. ಇದೇ ಸಂದರ್ಭದಲ್ಲಿ ಮಧುಗಿರಿಗೆ ಪ್ರಧಾನಿ ನೆಹರು ಹಾಗೂ ಆಗಿನ ರಾಜ್ಯಪಾಲ ಜಯಚಾಮರಾಜೇಂದ್ರ ಒಡೆಯರ್ ಸಹ ಭೇಟಿ ಕೊಟ್ಟಿದ್ದರು.

ನಾನು ಆಯಾ ಹಳ್ಳೀಲೇ ತಕಾವಿ ಸಾಲ ಮಂಜೂರು ಮಾಡುತ್ತಿದ್ದೆನಷ್ಟೆ. ಆದರೆ ಅವರುಗಳು ಚೆಕ್ಕನ್ನ ತಾಲ್ಲೂಕು ಆಫೀಸಿನಿಂದ ಪಡೆಯಬೇಕಾಗಿತ್ತು. ನಾನಲ್ಲಿಗೆ ಬಂದಾಗಿನಿಂದ ಆಫೀಸಿನ ನಮ್ಮವರು ಕೆಲವರಿಗೆ ಏನೋ ನಷ್ಟವಾದಂತೆ ಅನುಭವ. ಒಬ್ಬ ಹೆಡ್‌ಗುಮಾಸ್ತ (ಹೆಸರು ಬೇಡ) ರೈತರನ್ನ ಸತಾಯಿಸ್ತಾನೆ ಅನ್ನೋ ಸಮಾಚಾರ ಬಂತು. ಸಜ್ಜನರಾದ ಶಾಸಕ ಮಾಲಿ ಮರಿಯಪ್ಪನೋರೇ ಇದನ್ನ ನನ್ನ ಹತ್ತಿರ ಒಮ್ಮೆ ಪ್ರಸ್ತಾಪಿಸಿದರು. ಒಂದೆರಡು ಸಾರಿ ಸೂಚನೆ ಕೊಟ್ಟರೂ ಆತ ತಿದ್ದಿಕೊಳ್ಳುವ ಲಕ್ಷಣ ಕಾಣಲಿಲ್ಲ. ಆಗ ಆತನನ್ನ 'ಯಿಂದ', 'ಗೆ' ಮಾಡೊ - ಜನರಲ್ ಸೆಕ್ಷನ್ನಿಗೆ - ಎತ್ತಾಕಿದೆ. ಅಲ್ಲಿಗೆ ಸರಿ ಹೋಯಿತು.

ಒಂದು ದಿನ ಮಿಡಿಗೇಶಿಯಲ್ಲಿ ಹುಜೂರ್ ಜಮಾಬಂದಿಗೆ ಬಂದಿದ್ದ ಶಾನುಭೋಗರನ್ನ ಕುರಿತು ಎ.ಸಿ. ಆಗಿದ್ದ ವೇಣುಗೋಪಾಲ್‌ನಾಯ್ಡು ಅವರು ಕಾನೂನುಬದ್ಧವಾಗಿ ಕೆಲಸ ನಿರ್ವಹಿಸದಿದ್ದ ಕಾರಣ ಸ್ವಲ್ಪ ಕಟುವಾಗಿ ನುಡಿದರು. ನಾಯ್ಡು ಅವರು ಸರ್ಕಾರಿ ನೌಕರಿಗೆ ಸೇರಿದ್ದ ಹೊಸತು. ಆ ಶ್ಯಾನುಭೋಗರು ದಫ್ತರನ್ನೆಲ್ಲ ನಮ್ಮ ಮುಂದೆ ಒಗೆದು 'ನೀವೇನು ಮಾಡ್ಕೊಳ್ತಿರೊ ಮಾಡ್ಕೊಳ್ಳಿ'

ಅಂತ ಹೇಳೋದ. ಆಗ ಏನ್ ಮಾಡನ್ರಿ ಇದಕ್ಕೆ ಅಂತ ಎ.ಸಿ.ಯವರು ನನ್ನನ್ನು ಕೇಳಿದರು. ನಾಯ್ಡು ಅವರಿಗೆ ಸುಮ್ಮನಿರುವಂತೆ ಹೇಳಿ ಆ ಶ್ಯಾನುಭೋಗರಿಗೆ ಸರ್ಕಾರಿ ಚಾಕರಿ ಎಂದರೆ ನಿಮಗೆ ಬೇಕಿದ್ದಾಗ ಬೇಕು, ಬೇಡದಿದ್ದಾಗ ಬೇಡ ಅನ್ನೋ ಕೆಲಸವೇನ್ರಿ ಅಂತ ಜಬರದಸ್ತು ಮಾಡಿ, ಶೇಕ್‌ದಾರರಿಗೆ ಅವರ ರಿಕಾರ್ಡುಗಳು ವಿಶಿಷ್ಟವನ್ನು ವಹಿಸಿ - ಅವರುಗಳ ಶ್ಯಾನುಭೋಗ್ಯೆ ಹಕ್ಕು ಸಾಪ್‌ಸೀದ ಬಿಡುಗಡೆ ಬಗ್ಗೆ ರಿಕಾರ್ಡು ಮಾಡಲು ಹುಕುಂ ಮಾಡಿದೆ. ಆಗ ಆ ಶ್ಯಾನುಭೋಗರುಗಳು ಉಳ್ಳಗೆ ಮತ್ತೆ ಕೆಲಸ ಶುರುಮಾಡಿದರು. ಜಮಾ ಬಂದಿ ಮುಗಿಬೇಕಾದ್ರೆ ರಾತ್ರಿ 9-30 ಆಯ್ತು. ಊಟ ಏನು ಮಾಡದೆ ಈಗಲೇ ಮಧುಗಿರಿಗೆ ಹೋಗೋಣ ಅಂತ ನಾಯ್ಡು ಅವರು ಇರಸು ಮುರಸಿನಿಂದ ಹಟ ಹಿಡಿದರು. ಆಗಲಿ ಅಂತ ಆ ರಾತ್ರೀಲಿ ಸೈಕಲ್ ಹತ್ತಿ ಕೆಲವು ಕಡೆ ತಳ್ಳಂಡು ಮಾತಾಡ್ತಾ 11-30ಕ್ಕೆ ಮಧುಗಿರಿಗೆ ಬಂದೆವು.

ಒಂದು ಸಾರಿ ಶ್ರಾವಣಗೊಂಡನ ಹಳ್ಳಿ ಹತ್ತಿರ ಇರುವ ಕಲಿದೇವರಪುರಕ್ಕೆ ಹೋಗಿದ್ದೆ. ಈ ಊರಿನೋರು ಒಬ್ಬರು ಪದ್ಮನಾಭಯ್ಯ ಎಂಬುವರು ಹೈಕೋರ್ಟಿನ ಜಡ್ಜ್ ಹಾಗೂ ಲೋಕ ಸೇವಾ ನಿಗಮದ ಅಧ್ಯಕ್ಷರಾಗಿದ್ದರು. ಊರಿನಲ್ಲಿ ಶ್ರೀಮಂತರಿದ್ದಷ್ಟೇ ಬಡವರೂ ಇದ್ದರು. ನಾನು ಅಲ್ಲಿಗೆ ಹೋದ ತಕ್ಷಣ ಊರಿನ ಕೆಲವರು ಬಂದು ಊರಿನ ಶ್ರೀಮಂತರನ್ನ ಕುರಿತು 'ನೋಡಿ ಸ್ವಾಮಿ, ಊರೊಟ್ಟಿನ ಪಂಚಾಯ್ತಿ ಹಾಲ್ ಕಟ್ಟಲಿಕ್ಕೆ ಕಲ್ಲು, ಇಟ್ಟಿಗೆ, ಮರ ಹೊಡೆಸಿದ್ರೆ ಅದನ್ನಿವರು ಮಡಕ್ಕೊಂಡವ್ರೆ' ಎಂದು ದೂರಿದರು. ಆಮೇಲೆ ನಾನು ಕೆಲವು ದೊಡ್ಡ ಕುಳಗಳನ್ನ ಕರೆಸಿ, 'ನೀವು ಹೀಗೆಲ್ಲ ಮಾಡಿದರೆ ಮುಂದೆ ಪರಿಣಾಮ ನೆಟ್ಟಗಾಗೊಕಿಲ್ಲ' ಎಂದು ಬೆದರಿಸಿ ಕಟ್ಟಡ ಮುಂದುವರೆಸಲು ಅನುವು ಮಾಡಿದೆ. ಪೂರ್ಣವಾದ ಕಟ್ಟಡದ ಪ್ರಾರಂಭೋತ್ಸವವನ್ನು ಕೆ.ಎಸ್.ಧರಣೇಂದ್ರಯ್ಯ ಅವರ ಅಧ್ಯಕ್ಷತೆಯಲ್ಲಿ ನಾನೇ ನೆರವೇರಿಸಿದೆ.

ಒಂದು ದಿನ ಬೆಳಿಗ್ಗೆ ಆಫೀಸಿಗೆ ಹೋಗಬೇಕೆಂದು ಹೊರಟರೆ ಸೋದರ ಮಾವ ನರಸಯ್ಯನೋರು ಬಾಗಿಲಿನಲ್ಲಿ ಕಾಣಿಸಿಕೊಂಡರು. ನನ್ನ ವಿದ್ಯಾಭ್ಯಾಸ ಕಾಲದಲ್ಲಿ ಸಹಾಯ ಮಾಡಿದ ಅವರು ನನಗೆ ದೈವ ಸ್ವರೂಪಿಗಳು. ಮದುವೆ ಮಾತಿನಿಂದಾಗಿ ನನ್ನ ಜೊತೆ ಅವರು ಮಾತು ಬಿಟ್ಟಿದ್ದರು. ಈಗ ಬಾಗಿಲು ಬಳಿ ಅವರನ್ನ ಕಂಡು ಸಂತೋಷವಾಯಿತು. ಒಳಕ್ಕೆ ಕರಕೊಂಡು ಹೋದೆ.

ಊಟವಾದ ಮೇಲೆ, ತಾವು ತುಮಕೂರಿನ ಹೊನ್ನೇನಹಳ್ಳಿ ಗ್ರಾಮದ ಗಂಗಾಧರೇಶ್ವರ ಸ್ವಾಮಿ ಗದ್ದೆನ ಭೋಗ್ಯಕ್ಕೆ ಹಾಕಿಸಿಕೊಳ್ಳಲು ಒಂದ್ 600 ರೂಪಾಯಿ ಕೊಡಬೇಕೆಂದು ಕೇಳಿದರು. ಅಷ್ಟು ಹೊತ್ತಿಗೆ ಅವರು ತಮ್ಮ ಅಣ್ಣನ ಮಗನೊಬ್ಬನಿಗೆ ಎಲ್ಲವನ್ನು ವಹಿಸಿದ್ದರು. ಆಗ ನನ್ನಲ್ಲಿ 750 ರೂ ಇತ್ತು. ಅವರಿಗೆ 600 ಕೊಟ್ಟೆ. ಭಕ್ತ ಕೊಟ್ಟ ಪ್ರಸಾದವನ್ನು ಪ್ರೀತಿಯಿಂದ ದೈವ ಪಡೆದರೆ ಆ ಭಕ್ತನಿಗೆ ಆಗುವ ಸಂತೋಷ ಅಷ್ಟಿಷ್ಟಲ್ಲ!

ದೊಡ್ಡೇರಿ ಹೋಬಳಿ ಜಮಾಬಂದಿ ನಡೀಬೇಕಾಗಿತ್ತು. ಹಿಂದಿನ ರಾತ್ರೀನೆ ನಾನಲ್ಲಿಗೆ ಹೋಗಿದ್ದೆ. ಬೆಳಿಗ್ಗೆ ಎದ್ದು 2 1/2 ಮೈಲಿ ದೂರದಲ್ಲಿರುವ ಹಳ್ಳಿಗೆ ಹೋಗಿ ಸ್ಥಳ ತನಿಖೆ ಮುಗಿಸಿಕೊಂಡು ಬರುತ್ತಿದ್ದೆ. ಆಗ ಕಟ್ಟುಮಸ್ತಾದ ರೈತನೊಬ್ಬ ಆರು ಹೊಡೀತಿದ್ದ. ಆಗ ನನಗೆ ನಾನೇಕೆ ಸ್ವಲ್ಪ ಹೊತ್ತು ಆರು ಹೊಡಿಬಾರದು ಎನ್ನಿಸಿತು. ಸರಿ-ಅವನ ಕೈಯಿಂದ ಮೇಣಿ ಪಡೆದು ಆರು ಹೊಡೆಯಲು ಶುರು ಮಾಡಿದೆ. ಮೊದಮೊದಲು ಎತ್ತುಗಳು ಸ್ವಲ್ಪ ಕೊಸರಾಡಿದವು. ನಂತರ ಸಲೀಸಾಗಿ ಹೋದವು. ಒಂದು ಸಾಲು ಕೂಡಿಸಿ ಹೊಸ ಸಾಲು ಹೊಡೆದೆ. ಹಿಂದೆ ನಾನು ಇಂಟರ್‌ಮೀಡಿಯೇಟ್‌ನವರೆವಿಗೂ ಓದುತ್ತಿದ್ದಾಗ ಆರು ಹೊಡೆಯುತ್ತಿದ್ದುದ್ದುಂಟು. ಉಳುಮೆಯಲ್ಲಿ ಅಂಕು ಡೊಂಕುಗಳಿಲ್ಲದಿದ್ದನ್ನು ಕಂಡು ರೈತನಿಗೆ ಆಶ್ಚರ್ಯವೊ ಆಶ್ಚರ್ಯ. ಗೆರೆಗೆರೆಗೂ ಗೇಕು ಗರಿಕೆಗಳು ಕಿತ್ತಾಕಲ್ಪಟ್ಟಿದ್ದವು. ರೈತನ ಜೊತೆ ಮಾತನಾಡುತ್ತ ಆರೋಡಿತಿದ್ರೆ ಸಮಯ ಹೋದದ್ದೇ ಗೊತ್ತಾಗಲಿಲ್ಲ. ಹಿಂದಿನಿಂದ ಬಂದ ಶೇಕ್‌ದಾರನಿಂದಾಗಿ ರೈತನಿಗೆ ನಾನಾರೆಂಬುದು ಗೊತ್ತಾಯಿತು. ಅವರಿಗೆಲ್ಲಾ ಪರಮಾಶ್ಚರ್ಯ. ನಮ್ಮ ತಾತ, ಕೋಟೆ ಮಲ್ಲಯ್ಯ-ಅಲೆಮಾರಿಯಾಗಿ ಊರೂರು ತಿರುಗುತ್ತಾ ಕುರಿ ಕಾಯ್ತಿದ್ದರಂತೆ. ನಮ್ಮಪ್ಪ ಬಂಡಿ ನಂಜಪ್ಪ ವ್ಯವಸಾಯದಲ್ಲಿ ನಿಸ್ಸೀಮರಂತೆ. ಅಂತು ನಮ್ಮಪ್ಪ ಮಾಡುತ್ತಿದ್ದ ಕುಲಕಸುಬು ನನ್ನ ಕೈ ಬಿಟ್ಟಿಲ್ಲವೆಂಬೋದು ಖಚಿತ್ತೀಟಾಯಿತು. ವ್ಯವಸಾಯ ಅಂದರೆ ಮನೆ ಮಕ್ಕಳೆಲ್ಲ ಸಾಯಬೇಕು. ನಾನೂ ಚಿಕ್ಕಂದಿನಲ್ಲಿ ಸಾಕಷ್ಟು ಹೆಣಗಿ ಇದನ್ನ ಮೈಗೂಡಿಸಿಕೊಂಡಿದ್ದೆ. ಭೂಮಿತಾಯಿ ಚೆನ್ನಾಗಿ ನನಗೆ ಒಲಿದಿದ್ದಳೆಂದೇ ಹೇಳಬೇಕು. ಒಟ್ನಲ್ಲಿ ಆದಿನ ಪರಮಾನಂದ ನನಗುಂಟಾಯ್ತು. ಸಂತೃಪ್ತಿಯೂ ಆಯ್ತು.

ಸಾಮಾನ್ಯವಾಗಿ ಜನ ಬಗ್ಗಿದರೆ ಸವಾರಿ ಮಾಡುತ್ತಾರೆ. ಎದ್ದು ನಿಂತರೆ ಕಾಲು ಹಿಡಿಯುತ್ತಾರೆ. ಇಂತಹ ನಮಕ್ ಹರಾಮ್ ಜನಗಳಿಂದ ಯಾರೂ

ಉದ್ಧಾರವಾಗೋದಿಲ್ಲ. ತಮ್ಮ ಸ್ವಾರ್ಥಕ್ಕೆ ಬೇಕಾದಂತೆ ಕತೆ ಹುಟ್ಟಿಸುವುದು ಅವರ ಜಾಯಮಾನ. ಹೇಗಾದರೂ ಮಾಡಿ ತಮಗೆ ಲಾಭ ಮಾಡಿಕೊಳ್ಳುವುದು ಅವರ ಗುರಿ. ಇಂಥವರ ಪೈಕಿ ಮೊದಲನೆಯ ದಿನ ನಾನು ಮಧುಗಿರಿಗೆ ಬಂದಾಗ ನನ್ನ ಕಂಡಿದ್ದ ಸಾಹುಕಾರ ನಂಜುಂಡಪ್ಪನೋರು ಪ್ರಮುಖರು. ಹೊಸದಾಗಿ ಆಫೀಸರನ್ನ ಒಂದಲ್ಲ ಒಂದು ರೀತಿ ಹೆದರಿಸಿ - ಅಂಕೆಯಲ್ಲಿಟ್ಟುಕೊಳ್ಳೋದು ಅವರಲ್ಲಿ ರೂಢಿಯಂತೆ. ಸ್ಟೇಟ್ ಆಫೀಸರುಗಳು, ಮಿನಿಸ್ಟರುಗಳು, ತಮ್ಮ ಸ್ನೇಹಿತರೆಂದು ಹೇಳಿಕೊಂಡು ಬೇಳೆ ಬೇಯಿಸಿಕೊಳ್ಳುವುದೇ ಕಸುಬು. ಅವರು ಮಧುಗಿರಿಯಲ್ಲಿ ನಾಲ್ಕಾರು ಗೋಡೌನ್‌ಗಳನ್ನು ಕಟ್ಟಿ ಸರ್ಕಾರಕ್ಕೆ ಮಾಹೆಯಾನ 1000 ರೂ. ಗಳಂತೆ ಬಾಡಿಗಿಗೆ ಕೊಟ್ಟಿದ್ದರು. ನಾನು ಮಧುಗಿರಿಗೆ ಹೋದ ತಕ್ಷಣ ತಾವು ಬೆಳೆಯುತ್ತಿದ್ದ ದ್ರಾಕ್ಷಿನ ಕೊಟ್ಟು ಕಳುಹಿಸಿದರು. ''ಇದೆಲ್ಲ ಬೇಡ'' ಅಂತ ಖಂಡಿತವಾಗಿ ಹೇಳಿ ಕಳುಹಿಸಿದೆ. ಇದಾದ ಸ್ವಲ್ಪ ದಿನದಲ್ಲಿಯೇ ಅವರ ಮಗಳ ಹೆಸರಿನಲ್ಲಿ ನೀರಾವರಿ ಬಾವಿಯೊಂದಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿದ್ದರು. ರಿಕಾರ್ಡನ್ನು ಶೇಕದಾರ ಹುಲಿಯಪ್ಪನವರು ತಂದು ನನ್ನ ಮುಂದಿರಿಸಿ ಸಾಹುಕಾರ್ರ ಮಗಳದು ಸಾರ್ ಅನ್ನುತ್ತ ಹಲ್ಲು ಗಿಂಜಿದರು. ಅದನ್ನು ನೋಡ್ತಾನೆ ನನಗೆ ರೇಗಿ ಹೋಯ್ತು. 'ಯಾಕ್ರಿ ಈ ರಿಕಾರ್ಡು, ಸುಮ್ಮನೆ ಹೋಗ್ರಿ' ಅಂದೆ. ಆಕೆ ಮದುವೆಯಾಗಿ ಗಂಡನ ಮನೆಯಲ್ಲೆಲ್ಲೋ ಯಾವುದೋ ಊರ್ನಲ್ಲಿ ಇದ್ದಿರಬೇಕು. ಆಕೆಗೆ ಸರ್ಕಾರದ ಸಾಲ ಮಂಜೂರು ಮಾಡಿಸಬೇಕಂತೆ. ಬಡರೈತನಿಗೊಬ್ಬನಿಗೆ ಕೊಟ್ಟರೆ-ಒಂದು ಸಂಸಾರ ಉದ್ಧಾರವಾಗ್ತದೆ. ಆ ಭಾವಿನ ಅರ್ಹ ಬಡ ರೈತನೊಬ್ಬನಿಗೆ ಮಂಜೂರು ಮಾಡಿದೆ. ನಂಜುಂಡಪ್ಪನವರಿಗೆ ಇದರಿಂದ ಎಂಗೆಂಗೋ ಆಗಿ ಹೋಯ್ತು. ನನ್ನ ಮೇಲೆ ಆರೋಪದ ಪಟ್ಟಿಯನ್ನೇ ತಯಾರು ಮಾಡಿದರು. 'ಜಾತಿ ವಾದಿ' 'ಲಂಚಕೋರ' ಇತ್ಯಾದಿ ಎಲ್ಲ ಸೇರಿಸಿ ಒಂದರ್ಜಿ ಬರೆದು ಡೆಪ್ಯೂಟಿ ಕಮೀಷನರ್, ರೆವಿನ್ಯೂ ಕಮೀಷನರ್, ಅಂಟಿಕರಪ್ಷನ್ ಡೈರೆಕ್ಟರ್ ಮತ್ತು ಮುಖ್ಯಮಂತ್ರಿಗಳಿಗೆ ತಮ್ಮ ಸ್ವಂತ ಹೆಸರಿನಲ್ಲಿ ಕಳುಹಿಸಿದರು. ಡೆಪ್ಯೂಟಿ ಕಮೀಷನರಿಂದ ನನಗೊಂದು ಕಾಪಿ ಬಂತು. ಅದನ್ನೋದಿ ನನಗೆ ಅಡಿಯಿಂದ ಮುಡಿಯವರೆಗೂ ಸಿಟ್ಟು ಬಂತು. ಮರುದಿನವೇ 250 ರೂ.ಗೆ ಗೋಡೌನ್ ಒಂದು ನೋಡಿ, ನಂಜುಂಡಪ್ಪನವರ ಗೋಡೌನ್ ಖಾಲಿ ಮಾಡಿಸಿದೆ. ಸರ್ಕಾರಕ್ಕೆ ಈ ಸಂಬಂಧವಾಗಿ 750 ರೂ. ಗಳನ್ನ ಉಳಿಸಿರುವುದಾಗಿ ಜಿಲ್ಲಾಧಿಕಾರಿಗಳಿಗೆ ಎಲ್ಲ ವಿಷಯ ತಿಳಿಸಿ ಡಿ.ಓ.ಲೆಟರ್ ಬರೆದೆ. ಸಾಹುಕಾರ ನಂಜುಂಡಪ್ಪನವರು ಇದೆ ವೇಳೆ ದೂರರ್ಜಿಯೊಂದನ್ನು ಹಿಡಕೊಂಡು ಡೆಪ್ಯುಟಿ ಕಮೀಷನರ್ ಬಳಿಗೆ

ಬಂದರು. ನನಗೆ ಗೋಡೌನ್ ಖಾಲಿ ಮಾಡಿಸಲು ಅಧಿಕಾರವಿಲ್ಲವೆಂದೂ, ಸಾಧಿಸಿ ಅಮಲ್ದಾರ್ ದುರುದ್ದೇಶದಿಂದ ಹಾಗೆ ಮಾಡಿದ್ದಾರೆಂದು ದೂರಿದರು. ಡಿ.ಸಿ. ಕೆಂಪಣ್ಣ ಅವರಿಗೆ ಎಲ್ಲಾ ವಿಷಯ ಗೊತ್ತಿತ್ತು. ಅವರು ಕೋಪದಿಂದ 'ರೀ ಸಾಹುಕಾರ್ರೆ ನಮ್ಮ ಅಮಲ್ದಾರರ ಮೇಲೆ ಸುಳ್ಳು ಆರೋಪ ಮಾಡಿ ಅರ್ಜಿ ಬರೆದು ನನ್ನ ಹತ್ತಿರ ಬಂದಿದ್ದೀರ? ನಿಮ್ಮ ಆಟ ಎಲ್ಲಾ ಇಲ್ಲಿ ನಡೆಯೋದಿಲ್ಲ. ಈಗಲೇ ನಿಮ್ಮನ್ನ ಅರೆಸ್ಟ್ ಮಾಡಿಸಿಬಿಡ್ತೀನಿ' ಎಂದು ಗುಡುಗಿದರು. ತಮ್ಮ ಕುಯುಕ್ತಿ ಬುದ್ಧಿ ಇವರ ಬಳಿ ಸಾಗೋದಿಲ್ಲ ಅಂತ ತಿಳಿದು ಇನ್ನೇನು ಗತಿ ಅಂತ ಬಾಲ ಮುದುರಿಕೊಂಡು ಹೊರಟು ಬಂದರು. ಆನಂತರ ಶಾಸಕರಾದ ಮಾಲಿ ಮರಿಯಪ್ಪನವರನ್ನ ಹಿಡಿದರು. ಮರುದಿನ ಬೆಳಿಗ್ಗೆ ಮಾಲಿ ಮರಿಯಪ್ಪನವರು ಕಾಂಗ್ರೆಸ್ ಮುಂದಾಳು ನಂಜಯ್ಯಶೆಟ್ಟರು, ತಾಲ್ಲೂಕು ಬೋರ್ಡ್ ಅಧ್ಯಕ್ಷ ಗೋವಿಂದಶೆಟ್ಟರು ಮತ್ತು ಸಬ್ ಡಿವಿಷನ್ ಆಫೀಸರ್ ಶೇಷಾದ್ರಿ ಮುಂತಾದವರ ಜೊತೆ ಇವರು ನನ್ನ ಆಫೀಸಿಗೆ ಬಂದರು. ಸಾಹುಕಾರ ನಂಜುಂಡಪ್ಪನವರು ಬಂದ್ ಬಂದೋರೆ 'ಕ್ಷಮಿಸಿ' ಅಂತ ಕಾಲು ಹಿಡಿಯೋಕೆ ಬಂದರು. ಇಂಥವರು ಸಮಯ ಬಂದರೆ ಕತ್ತೆ ಕಾಲು ಬೇಕಾದರೂ ಹಿಡೀತಾರೆ. ಸ್ವಾರ್ಥ ಮನೋಭಾವ ಮೂಲವಾದ ಪಶ್ಚಾತ್ತಾಪ, ಶಾಶ್ವತವೂ ಅಲ್ಲ ಗ್ಯಾರಂಟಿಯೂ ಇಲ್ಲ. ಮುಂದೆ ನಾನು ವರ್ಗವಾದಾಗ ಜಿಲ್ಲಾಧಿಕಾರಿ ಕೆಂಪಣ್ಣನವರು ಮಧುಗಿರಿ ಸಾರ್ವಜನಿಕ ಸಭೆಯಲ್ಲಿ ಈ ವಿಷಯ ಹೇಳಿ ದುಷ್ಟ ಶಕ್ತಿಗಳು ಸಮುದಾಯದ ಹಿತವನ್ನು ಹೀಗೆ ಹಾಳು ಮಾಡ್ತಾರೆ ಎಂದು ವಿವರಿಸಿದರಂತೆ.

ಪ್ರಪಂಚದಲ್ಲಿ ಎಲ್ಲ ದುರ್ಜನರೇ ಇರೋದಿಲ್ಲ, ಸಜ್ಜನರು ಕೂಡ ಇರುತ್ತಾರೆ. ಸಜ್ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಇರಬಹುದು. ಪರರ ಕಷ್ಟವನ್ನು ತಮ್ಮ ಕಷ್ಟ ಅಂತ ಭಾವಿಸಿಕೊಳ್ಳೋ ವ್ಯಕ್ತಿಯನ್ನು ಎಲ್ಲ ಕಾಲಕ್ಕೂ ನೆನೆಸಿಕೊಳ್ಳಬೇಕು. ಈ ಕಾಲದಲ್ಲಿ ಅಂಥ ವ್ಯಕ್ತಿಗಳೊಬ್ಬರು, ನನ್ನ ಗಮನಕ್ಕೆ ಬಂದರು, ನಾನು ಮಧುಗಿರಿಗೆ ಬಂದ 10-11 ತಿಂಗಳಲ್ಲಿ ಪ್ಲೇಗು ರೋಗ ಕಾಣಿಸಿಕೊಂಡಿತು. ಜನ ಶಮನಕ್ಕಾಗಿ ಅದ್ದೂರಿಯಾಗಿ ದಂಡಿನ ಮಾರಮ್ಮನ ಉತ್ಸವ ನಡೆಸಿದರು. ಪ್ರತಿ ಬೀದಿ ಮನೆ ಮನೆಯಲ್ಲೂ ಕುರಿ. ಕೋಳಿಗಳು ಆಹುತಿಯಾದವು. ಕೊನೆಗೆ ಅಮ್ಮನಿಗೆ ಕೋಣ ಸಹ ಕೊಡಲಾಯಿತು. ಇದರಿಂದ ಪ್ಲೇಗ್ ಜಾಸ್ತಿಯಾಯಿತೇ ಹೊರತು ಕಡಿಮೆ ಯಾಗಲಿಲ್ಲ. ನಾಲ್ಕಾರು ಜನ ಸತ್ತರು. ಜನ ಊರು ಖಾಲಿ ಮಾಡಿ ಹೊರಗಡೆ ಷೆಡ್ ಹಾಕಿಕೊಂಡರು. ಆದರೆ ಕನ್ನಿಕಾಪರಮೇಶ್ವರಿ ದೇವಸ್ಥಾನದ ಹತ್ತಿರ

ವಯಸ್ಸಾದ ಶೆಟ್ಟರ ಮನೆಯೊಂದಿತ್ತು. ಅವರು ಅಲ್ಲೇ ಇದ್ದರು. ಆ ರಾತ್ರಿ ವೃದ್ಧ ಶೆಟ್ಟಿ ಸತ್ತು ಹೋದ. ಆ ಮನೆಯಲ್ಲಿ ಮುದುಕಿ ವಿನಃ ಯಾರೊಬ್ಬರೂ ಇಲ್ಲ. ಪ್ಲೇಗ್ ಆಗಿ ಸತ್ತೋರ್ನ ಹೊರಲು ಯಾರೂ ಮುಂದೆ ಬರುತ್ತಿಲ್ಲ. ಪುರಸಭಾ ಅಧ್ಯಕ್ಷರಾದ ಟಿ.ಎಸ್.ಶಿವಣ್ಣ, ಸಬ್‌ಡಿವಿಷನ್ ಆಫೀಸರ್ ವೇಣುಗೋಪಾಲ್ ನಾಯ್ಡು ಮತ್ತು ನಾನು ಯೋಚಿಸತೊಡಗಿದೆವು. ಸರಿ, ನಾನು ಮತ್ತು ಶಿವಣ್ಣ ಇಬ್ಬರೂ ಒಂದು ಗಾಡಿ ತಕ್ಕೊಂಡು ಅವರ ಮನೆಗೆ ಹೋದೆವು. ನಮ್ಮ ಹಿಂದೆ ಜಾಡಿಮಾಲಿಗಳಿದ್ದರೂ, ಹೆಣ ಮುಟ್ಟಲು ಹೆದರುತ್ತಿದ್ದರು. ಸತ್ತು ಒಂದು ದಿನವಾಗಿದ್ದ ಕಾರಣ ಹೆಣ ನೋಡಲು ಭೀಕರವಾಗಿತ್ತು. ಆ ಮನೆಯಲ್ಲಿ ಅಲ್ಲಲ್ಲೇ ಇಲಿಗಳು ಸತ್ತುಬಿದ್ದಿದ್ದವು. ಬೀದಿಗಳಲ್ಲಿ ಜನಗಳೇ ಇಲ್ಲ. ಒಟ್ಟಾರೆ ಊರೇ ಸ್ಮಶಾನವೇನೋ ಅನ್ನುವಂತೆ ಗಂಭೀರವಾಗಿತ್ತು. ಶಿವಣ್ಣ ಮತ್ತು ನಾನು ಇಬ್ಬರೇ ಹೆಣವನ್ನು ಎತ್ತಿ ಗಾಡಿ ಮೇಲೆ ಹಾಕಿದೆವು. ಜಾಡಮಾಲಿಗಳು ನಂತರ ಗಾಡಿನ ಸ್ಮಶಾನಕ್ಕೆ ಎಳೆಕೊಂಡು ಹೋಗಲು ನಮ್ಮ ಜತೆ ಬಂದರು. ಅಲ್ಲೊಂದು ಚಿತೆ ತಯಾರುಮಾಡಿಸಿ ಹೆಣಾನ ಸ್ವತಃ ಇಳಿಸಿ ಸುಡಿಸಿದೆವು. ಇದೆಲ್ಲ ಆಗಿ ಮನೆಗೆ ಬರಬೇಕಾದರೆ ಸಂಜೆ 5 ಗಂಟೆ ಆಯಿತು. ನನಗೆ ತಲೆ ಸುತ್ತು. ವಾಂತಿ ವಿಪರೀತ. ಜ್ವರವೂ ಬಂತು. ನಾನು ಪ್ಲೇಗಿನ ಇನಾಕ್ಯುಲೇಷನ್ ಹಾಕಸಿಕೊಂಡಿರಲಿಲ್ಲ. ನನಗೂ ಪ್ಲೇಗು ತಗುಲಿಬಿಟ್ಟಿತೋ, ಏನೋ ಅಂದು ಕೊಂಡೆ. ಮನೇಲಿ ಯಾರಿಗೂ ತಿಳಿಸಲಿಲ್ಲ, ತಕ್ಷಣ ಡಾಕ್ಟರಿಗೆ ಹೇಳಿ ಕಳುಹಿಸಿದೆ. ಪರೀಕ್ಷಿಸಿದ ಡಾಕ್ಟರ್ ಪ್ಲೇಗ್ ತಗುಲಿಲ್ಲವೆಂದು ಹೇಳಿ ವಿಶ್ರಾಂತಿಗೆ ಗುಳಿಗೆ ಕೊಟ್ಟರು. ಬೆಳಿಗ್ಗೆ ಆರಾಮಾಯ್ತು.

ಕೇಂದ್ರ ಸರ್ಕಾರ ಮಧುಗಿರಿಯನ್ನು ''ರಾಯಲ್ ಸೀಮೆ ಬೆಲ್ಟ್'' ಎಂದು ಪರಿಗಣಿಸಿ, ಇಲ್ಲಿಗೆ ಆಗ್ಗಾಗೆ ಕಾಣಿಸಿಕೊಳ್ಳೋ ಬರಗಾಲದ ಅಧ್ಯಯನ ಮಾಡೋಕೆ ಸಮಿತಿಯೊಂದನ್ನು ಕಳುಹಿಸಿತು. ಅದಕ್ಕೆ ಕೇಂದ್ರ ಸರ್ಕಾರದ ವ್ಯವಸಾಯಾಭಿವೃದ್ಧಿ ಇಲಾಖಾ ಕಾರ್ಯದರ್ಶಿ ದಾತಾರಸಿಂಗ್ ಮುಖ್ಯಸ್ಥರಾಗಿದ್ದರು. ಮಧುಗಿರಿಗೆ ಭೇಟಿ ಕೊಟ್ಟು ಆ ನಿಯೋಗದವರು ಪ್ರತಿಯೊಂದು ಅಲ್ಲಿನ ಹಳ್ಳಿಗೂ ಖುದ್ದಾಗಿ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿ ವೀಕ್ಷಿಸಿದರು. ಕೆರೆಯಲ್ಲಿ ನೀರಿಲ್ಲದೆ ಬೆಳೆಗಳಿಲ್ಲದೆ ರೈತರು ಪಡೋ ಕಷ್ಟ ನೋಡಿದರು. ನೀರಾವರಿಗೆ ವಿದ್ಯುಚ್ಛಕ್ತಿ ಉಪಯೋಗಿಸೋ ವಿಚಾರವನ್ನು ಸಾಕಷ್ಟು ಚರ್ಚಿಸಿ, ಇದಕ್ಕಾಗಿ ಇಂಡಿಯಾ ಸರ್ಕಾರದಿಂದ ಫಂಡ್ಸ್ ಕೊಡಿಸುವುದಾಗಿ ಹೇಳಿದರು. ನಾನಾಗಲೇ ಈ ಹೊತ್ತಿಗೆ ಕೈಗೊಂಡ ಕ್ರಮಗಳನ್ನ

ಅವರಿಗೆ ತೋರಿಸಿದೆ. ಏತದ ಭಾವಿ, ಇರೋಭಾವಿಯಲ್ಲೇ ಹೂಳು ತೆಗೆಸಿ ನೀರು ಹೊಡೆಸೋದು ಮುಂತಾದವುಗಳನ್ನು ನಾನು ಮಾಡಿದ್ದೆ. ಹಾಗೇ ಒಂದೆರಡು ಆಯಿಲ್ ಪಂಪ್‌ಸೆಟ್‌ಗಳನ್ನು ಸಹ ಆತ ನೋಡಿದ. ನಾನು ಮಾಡಿದ್ದ ಕೆಲಸಗಳ ಬಗ್ಗೆ ಪ್ರಶ್ನೆಗಳ ಸುರಿಮಳೇನೇ ಸುರಿಸಿದ. ಆಮೇಲೆ ಆತ ಚೀಫ್ ಇಂಜಿನಿಯರ್ ಕಡೆ ತಿರುಗಿ ''ದಿಸ್ ಅಮಲ್ದಾರ್ ನೋಸ್ ಮಚ್ ಮೋರ್ ಆಫ್ ದಿ ಯೂಸಸ್ ಆಫ್ ಎಲೆಕ್ಟ್ರಿಸಿಟಿ ಫಾರ್ ಅಗ್ರಿಕಲ್ಚರ್ ಪರ್ಪಸ್ ದ್ಯಾನ್ ದಿ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರ್ ಹಿಮ್‌ಸೆಲ್ಫ್'' ಎಂದ.

ಸಾಮಾನ್ಯವಾಗಿ ಜನ ರಾಜರ ದೃಷ್ಟಿ ಬೀಳಬಾರದೆಂದು ಹೇಳ್ತಾರೆ ನನಗೂ ಹಾಗಾಯ್ತು, ದಾತಾರಸಿಂಗನ ಕೃಪಾಕಟಾಕ್ಷಕ್ಕೆ ಒಳಗಾದ ನಾನು ಮಧುಗಿರಿ ಬಿಡಬೇಕಾಯ್ತು, ಸೆಂಟ್ರಲ್ ಸರ್ಕಾರದ ದೆಹಲಿಗೆ ಹೋದ ಆ ಪುಣ್ಯಾತ್ಮ ಲಿಫ್ಟ್ ಇರಿಗೇಷನ್ ಜಾರಿಗೊಳಿಸಲು ಇವರನ್ನ ಕೊಟ್ಟರೇ ನಾವು ಕೇಂದ್ರ ಸರ್ಕಾರದ ಫಂಡ್ಸ್ ಕೊಡೋದು ಎಂದ. ಸರ್ಕಾರ ನನ್ನನ್ನು ವಿದ್ಯುಚ್ಛಕ್ತಿ ಇಲಾಖೆಗೆ ಒಗೆಯಿತು. ಸ್ಪೆಷಲ್ ಅಮಲ್ದಾರ್ ಫಾರ್ ಲಿಫ್ಟ್ ಇರಿಗೇಷನ್ ಎಂದು ನನಗಾಗಿ ಹೊಸ ಹುದ್ದೆ ಸೃಷ್ಟಿಯಾಯಿತು. ಇಂಥ ಸಂದರ್ಭದಲ್ಲಿ ಇವರನ್ನ ಬಿಡೋಕೆ ಆಗೋದಿಲ್ಲ ಎಂದು ಜಿಲ್ಲಾಧಿಕಾರಿ ಕೆಂಪಣ್ಣನವರು ಹಠ ಹಿಡಿದರು. ಆದರೂ ಸರ್ಕಾರ 1952ರ ಮಧ್ಯಭಾಗದಲ್ಲಿ ನನ್ನನ್ನು ಬೆಂಗಳೂರಿಗೆ ವರ್ಗ ಮಾಡಿತು. ಅಂತಹ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲೂ ಜನ ಬೀಳ್ಕೊಡುಗೆ ಸಮಾರಂಭ ಇಟ್ಟುಕೊಳ್ಳಲು ಮುಂದಾದರು. ನಾನು ಬೇಡ ಬೇಡವೆಂದು ಅದನ್ನೆಲ್ಲಾ ತಡೆದೆ. ಗಂಜಲುಗುಂಟೆ ಹಳ್ಳಿಯ ಜನ ನನ್ನ ಮಾತು ಕೇಳದೆ, ಮಾಲಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಇದನ್ನ ನಡೆಸೇ ಬಿಟ್ಟರು. ಸಮಾರಂಭ ಇನ್ನೇನು ಮುಗಿಬೇಕು ಆಕಾಶಕ್ಕೆ ತೂತು ಬಿದ್ದಿದೆಯೋ ಅನ್ನೋ ಹಾಗೆ ಮಳೆ ಸುರಿಯಿತು. ಮಧುಗಿರಗೆ ಬರಲಿಕ್ಕಾಗದೆ ಊರಿನ ಹನುಮಂತರಾಯನ ಗುಡಿಯಲ್ಲಿರಬೇಕಾಯಿತು. ಹಿಡಿದ ಮಳೆ ತಾಲ್ಲೂಕಿನ ಎಲ್ಲಾ ಕೆರೆ ಕೋಡಿ ಬೀಳೋತನಕ ನಿಲ್ಲಲಿಲ್ಲ. ನನಗೆ ಮಧುಗಿರಿಯಲ್ಲಿದ್ದ ಕಾಲ ನೆನಸಿಕೊಂಡರೆ ವಿಚಿತ್ರ ಅನ್ನಿಸುವುದು. ನಾನು ಹೊರಡಬೇಕಾದ್ರೆ ಬಂದ ಮಳೆ ಕಳೆದ ಸಾಲಿನಲ್ಲೆ ಬಿದ್ದಿದ್ದರೆ ಎಷ್ಟು ಚೆನ್ನಿರುತ್ತಿತ್ತು. ಹೊಟ್ಟೆಯ ಸಮಸ್ಯೆಯೊಂದು ಬಗೆಹರಿದಿದ್ದರೆ ತಾಲ್ಲೂಕನ್ನು ಇನ್ನಾವ ರೀತಿಯಲ್ಲಾದ್ರೂ ಮುಂದುವರೆಸಬಹುದಿತ್ತು. ಮಳೆ ಬಂದು ಬರಗಾಲ ಬಂದಿಲ್ಲದಿದ್ದರೆ ನನಗಾರೀತಿ ದುಡೀಲಿಕ್ಕೆ ಎಲ್ಲಿ ಅವಕಾಶವಿರುತ್ತಿತ್ತು. ಬರಗಾಲದ

ಕಾಮಗಾರಿಗಳಿಗೆ ತಕಾವಿ ಲೋನ್ ವಿಲೇವಾರಿಗೆ ಡಿ.ಸಿ.ಯವರು ಲಕ್ಷಾಂತರ ಹಣ ಮಂಜೂರು ಮಾಡಿದ್ದೆಲ್ಲಾ ಒಂದೂ ಲೋಪವಿಲ್ಲದೆ ಖರ್ಚು ಮಾಡಲಾಗಿತ್ತು. ದೇವರು ಒಂದೊಂದ್ಸಾರಿ ಮನುಷ್ಯ ಹೇಗೆ ಅವಕಾಶ ಬಳಸಿಕೊಳ್ತಾನೆ ಅಂತ ನೋಡ್ತುವನೇನೋ. ಕೊಟ್ಟ ಅವಕಾಶನ ಸ್ವಾರ್ಥಕ್ಕೆ ಬಳಸಿಕೊಳ್ತಾನೋ ಅಥವಾ ಜನಹಿತಕ್ಕೆ ಬಳಸಿಕೊಳ್ತಾನೋ ಎಂದು ಪರೀಕ್ಷೆ ಮಾಡ್ತಾನೆ. ಈ ಪರೀಕ್ಷೇಲಿ ದುಡಿಮೆಗಾರನದೇ ಗೆಲುವು ಅಲ್ಲವೇ? ಜಿಲ್ಲೆಯ ಎಷ್ಟೋ ತಾಲ್ಲೂಕುಗಳಲ್ಲಿ ಬರಗಾಲ ಪರಿಹಾರಕ್ಕಾಗಿ ಒದಗಿಸಿದ ಅಲ್ಪ ಸ್ವಲ್ಪ ಹಣ ದುರ್ವಿನಿಯೋಗವಾಗಿದೆಯೆಂತ - ಅಂಟಿ ಕರಪ್ಷನ್ ತನಿಖೆಗಳಾಗುತ್ತಿದ್ದರೆ, ಈ ತಾಲ್ಲೂಕಿನಲ್ಲಿ - ಜನ ಯಾವಾಗಲೂ ನೆನಸಿಕೊಳ್ಳುವಂತ ಕೆಲಸಗಳಾಗಿ ಎಲ್ಲವೂ ಸಮರ್ಪಕವಾಗಿ ನಡೆದದ್ದು ನನ್ನ ಅದೃಷ್ಟವೆಂದೇ ಹೇಳಬೇಕು.

## ಹರಿಹರ

ಮಧುಗಿರಿಯಿಂದ ಬೆಂಗಳೂರಿಗೆ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗೆ ಎರವಲು ಸೇವೆಗೆ ಹೋದೆ. ನಾನು ಛಾರ್ಜ್ ತಕ್ಕೊಂಡ ನಂತರವೇ ಶ್ರಿ ದಾತಾರಸಿಂಗ್ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಹಣ ಕಳುಹಿಸಿದ್ದು. ಆಗ ಚಾಂಡಿ ಎಂಬುವರು 'ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರ್' ಅತ್ಯಂತ ಮೃದು ಸ್ವಭಾವದವರು. ನಾನು ಈ ಇಲಾಖೆಗೆ ಬರಬೇಕಾದರೆ ಡ್ಯೂಟಿ ಅಲೋಯನ್ಸ್ ಮತ್ತಿತರ ಸೌಲಭ್ಯಗಳು ದೊರೆಯುತ್ತವೆಂಬ ಭರವಸೆ ಕೊಡಲಾಗಿತ್ತು. ಮೇಲಾಗಿ ಬೆಂಗಳೂರಿನಲ್ಲಿ ಬಾಡಿಗೆ ಮನೆ ಹುಡುಕೋದು ದೊಡ್ಡ ಸಾಹಸವೇ ಅನ್ನಬೇಕು, ನಮ್ಮ ಸಂಸಾರನ ಎಷ್ಟು ದಿನ ಮಧುಗಿರೀಲಿ ಬಿಡೋಕಾಗ್ತದೆ. ನನ್ನ ಹುಟ್ಟೂರು ಅರಳೀಮರದ ಪಾಳ್ಯಕ್ಕೆ ತಂದುಬಿಟ್ಟೆ. ಈ ಕೆಲಸಕ್ಕೆ ಸೇರಿಕೊಂಡ ಮೇಲೆ ನಾನು ಇಡೀ ರಾಜ್ಯ ಸುತ್ತಬೇಕಾಯಿತು. ನನಗೂ ಮತ್ತು ಸೂಪರಿಂಟೆಂಡೆಂಟ್ ಎಂಜಿನಿಯರ್ ಅವರಿಗೂ ಸೇರಿದಂತೆ ಒಂದೇ ವಾಹನ. ನಾನು ರಾಜ್ಯದ ಯಾವುದೋ ಒಂದು ಮೂಲೇಲಿದ್ರೆ ವಿ.ಐ.ಪಿ. ಬಂದಿದ್ದಾರಂತ ಗಾಡಿ ತರಿಸ್ಕೊಂಡು ನಾನು ಬಸ್ ಕಾಯುವಂತೆ ಮಾಡ್ತಿದ್ರು. ಇದರ ಜೊತೆ ಅಲ್ಲಿಗೆ 3-4 ತಿಂಗಳಾದರೂ ಜಿ.ಒ. ಆಗಿಲ್ಲ ಅಂತ ಸಂಬಳ ಬರಲಿಲ್ಲ. ನನಗೆ ಹೋಗಲಿ ಜವಾನನಿಗೂ ಸಂಬಳ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೇಗೆ ಕೆಲಸ ಮಾಡಬೇಕು ಅಂತ ನಿರ್ಧರಿಸಿ, 'ನನ್ನನ್ನ ಪೂರ್ವದ ಇಲಾಖೆಗೆ ಕಳುಹಿಸಿಬಿಡಿ' ಎಂದು ತಗಾದೆ ಮಾಡಿದೆ. ಇದಾದನಂತರ

ಆಗಿನ ಇಲಾಖಾ ಮಂತ್ರಿ ಸಿದ್ಧವೀರಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ''ಮಲ್ಲಪ್ಪನೋರು ಪುನಃ ಅವರ ಸ್ವಂತ ಇಲಾಖೆಗೆ ಹೋಗೋದು ಬೇಡ. ನಾವು ವರ್ಷ ಪ್ರಯತ್ನಿಸಿದರೂ 8-10 ಸಾವಿರ ರೂಪಾಯಿನ ವಿದ್ಯುಚ್ಛಕ್ತಿ ಪಂಪ್‌ಸೆಟ್‌ಗಳಿಗೆ ಅಡ್ವಾನ್ಸ್ ಆಗಿ ಸಂಗ್ರಹ ಮಾಡಲಿಕ್ಕಾಗಲಿಲ್ಲ. ಇವರು ತುಮಕೂರು ಜಿಲ್ಲೆಯೊಂದರಲ್ಲೇ ಕೆಲವೇ ದಿನಗಳಲ್ಲಿ ಲಕ್ಷಕ್ಕೂ ಮೇಲ್ಪಟ್ಟು ಸಂಗ್ರಹಿಸಿದ್ದಾರೆ.'' ಎಂದು ಹೇಳಿದರಂತೆ. ಚೀಫ್ ಇಂಜಿನಿಯರ್ ಚಾಂಡಿ ಅವರು 'ನೀವು ಮನಸ್ಸು ಬದಲಾಯಿಸಿ ನಿಮಗೆ ಫ್ರೀ ಕ್ವಾರ್ಟರ್ಸ್ ಕೊಡ್ತೇನೆ' ಎಂದರು. ನಾನು ಯಾರ ಮಾತೂ ಕೇಳದೆ ಸರ್ಕಾರಕ್ಕೆ ಬರೆದು ಹಾಕಿ ರಜದ ಮೇಲೆ ತುಮಕೂರಿಗೆ ಬಂದೆ.

ನನ್ನ ಸಂಸಾರನ ಅರಳಿಮರದ ಪಾಳ್ಯದಲ್ಲಿ ಬಿಟ್ಟಿದ್ದೆನಷ್ಟೆ. ನಮ್ಮ ತಾಯಿ ಕಷ್ಟಪಟ್ಟು ಕಟ್ಟಿಸಿದ ಮನೆ ಶಿಥಿಲವಾಗಿ ಬೀಳೋ ಸ್ಥಿತಿಯಲ್ಲಿತ್ತು. ಸಂಬಳ ಬೇರೆ 7-8 ತಿಂಗಳಿಂದ ಬಂದಿರಲಿಲ್ಲ. ನನ್ನ ತಾಯಿ, ಅಣ್ಣ, ಅಕ್ಕ ಇದ್ದ ಮನೇನ ಉಳಿಸಿ ಕೊಳ್ಳಬೇಕೆಂಬ ಮನಸ್ಸು ಬಂತು. ರಿಪೇರಿ ಮಾಡಿಸಲು ನಿರ್ಧರಿಸಿ ಕೆಲಸ ಪ್ರಾರಂಭಿಸಿದೆ. ಇನ್‌ಷೂರೆನ್ಸ್ ಪಾಲಿಸಿನ ಒತ್ತೆ ಇಟ್ಟರೆ, ಇಲಾಖೇರು ಕೇವಲ 250 ರೂ. ಕೊಟ್ಟರು. ನಾನು ಮಧುಗಿರೀಲಿದ್ದಾಗ ಅಂದರೆ ಎರಡು ವರ್ಷದ ಕೆಳಗೆ ನನ್ನ ಸೋದರಮಾವ ನರಸಯ್ಯನೋರು ನನ್ನಿಂದ ಒಂದಿಷ್ಟು ಹಣನ ಇಸ್ಕೊಂಡು ಹೋಗಿದ್ರಷ್ಟೆ. ಇಂಥ ಪರಿಸ್ಥಿತಿಯಲ್ಲಿದ್ದ ನಾನು ಹಿಂದೆ ಮುಂದೆ ನೋಡ್ದೆ ತಕ್ಕೊಂಡದ್ದನ್ನ ಹಿಂದಿರುಗಿಸುವಂತೆ ಅವರನ್ನು ಒತ್ತಾಯ ಮಾಡಿದೆ. ಒಂದೆರಡು ಸಾರಿ ಜೋರಾಗಿ ಮಾತನಾಡಿದೆ. ಜಗಳ ಆಡಿದೆ. ನಿಸ್ಸಹಾಯಕರಾದ ಅವರು ಎಲ್ಲಕ್ಕೂ ಮೌನವೇ ಉತ್ತರವೆಂಬಂತಿದ್ದರು. ಇದ್ದಕ್ಕಿದ್ದಂತೆ ಒಂದು ದಿನ 'ನನಗ್ಯಾಕೆ ಇಂಥ ಬುದ್ಧಿ ಬಂತು' ಅನ್ನಿಸಿತು. ಹೈಸ್ಕೂಲ್‌ನಿಂದ ಕಾಲೇಜಿನವರೆಗೆ ನನ್ನ ವಿದ್ಯಾಭ್ಯಾಸದ ಕಾಲದಲ್ಲಿ ಸಹಾಯ ಮಾಡಿದ ಆ ಮಹಾತ್ಮನನ್ನು ನಾನು ಎಷ್ಟು ಬೇಗ ಮರೆತೆ. ನಾನು ಕೆಲಸಕ್ಕೆ ಸೇರಿಕೊಂಡಮೇಲೆ ಅವರಿಗೆ ಹಣ ವಾಪಸ್ ಮಾಡಿದ್ದೆನೂ ನಿಜ. 'ನರಸಯ್ಯನೋರು ಮೇಸ್ತ್ರಿಯಾಗಿದ್ದು ಇವನು ನಮ್ಮ ಹುಡ್ಗ. ಓದಿ ಮುಂದಕ್ಕೆ ಬರಲಿ' ಎಂದು ಕೊಟ್ಟಂತ ಹಣ ಎಂತಹ ಮೌಲ್ಯ ಉಳಿಸಿಕೊಂಡಿದೆ. ಅವರು ಸಹಾಯ ಕೊಡದೇ ಇದ್ದರೆ. ಈಗ ಪಾಳ್ಯದಲ್ಲಿರೋ ಅನೇಕರ ತರಹ ನಾನು ಇರುತ್ತಿದ್ದೆ. 'ಒಪ್ಪಿತ್ತಿಗಿಟ್ಟೋನ್ನ ಮುಪ್ಪಿನ ತನ್ಕ ನೆನೀ' ಅಂತಾರೆ ಹಿರಿಯರು. ನಾನಾದರೋ ನನ್ನ ಜೀವನದುದ್ಧಾರಕ್ಕೇ ನೆರವಾದವರನ್ನು

ಇಷ್ಟು ಬೇಗ ಮರೆತ್ನಲ್ಲ ಅಂದು ನೊಂದ್ಕೊಂಡೆ' ಮತ್ತೊಮ್ಮೆ ಅವರನ್ನ ಒತ್ತಾಯ ಮಾಡದೆ ಹೇಗೋ ಮನೆ ಕೆಲಸ ಮುಗಿಸಿದೆ.

ನಾನು ರಜೆಯಲ್ಲಿ ತುಮಕೂರಿನಲ್ಲಿದ್ದಾಗ ನನ್ನ ಬಗ್ಗೆ ಸಾಕಷ್ಟು ವಿಚಾರ ಅಠಾರ ಕಛೇರಿ ವಲಯದಲ್ಲಿ ನಡೆದಿತ್ತು. ನನಗೆ ಇದಾವುದೂ ಗೊತ್ತಿರಲಿಲ್ಲ. ಮಂತ್ರಿಗಳಾದ ಹೆಚ್.ಸಿದ್ದವೀರಪ್ಪನವರು ತಮ್ಮ ವರ್ಚಸ್ಸನ್ನೆಲ್ಲಾ ಉಪಯೋಗಿಸಿ ನನ್ನನ್ನ ತಮ್ಮ ತಾಲ್ಲೂಕು ಹರಿಹರಕ್ಕೆ ವರ್ಗ ಮಾಡಿಸಿಕೊಂಡಿದ್ದರು. ಅದಕ್ಕೇ ಕೆ.ಇ.ಬಿ.ಯಿಂದ ನಾನು ನಿರ್ಗಮಿಸಲು ನನಗೆ ಸಹಾಯ ಮಾಡಿದ್ದು ಇವರು ಎಂದು ಮನಸ್ಸಿನಲ್ಲೆ ಘುರುಗಿದೆ. ಖಂಡಿತ ನನಗಲ್ಲಿಗೆ ಹೋಗಲು ಇಷ್ಟವಿರಲಿಲ್ಲ. ಹರಿಹರ ಕೊಂಡಜ್ಜಿ ಬಸಪ್ಪನೋರ ತಾಲ್ಲೂಕು ಕೂಡ ಆಗಿತ್ತು. ಗಾಂಜಿವೀರಪ್ಪನವರ ಶಿಷ್ಯರನೇಕರು ಅಲ್ಲಿದ್ದರು. ಈ ಮೂವರದೂ ಒಂದೊಂದು ದಿಕ್ಕು. "ಎತ್ತು ಏರಿಗೆಳೀತು ಅಂದ್ರೆ ಕೋಣ ನೀರಿಗೆಳೀತು" ಅಂತಾರಲ್ಲ ಹಾಗೆ ಮೂವರಿಗೂ ಹಣಾಹಣಿ ರಾಜಕೀಯ ಯುದ್ಧ ಇದ್ದೇ ಇತ್ತು. ರಾಘವಾಂಕ ಕವಿ ಹೇಳುವಂತೆ "ಕೋಣವೆರಡು ಹೋರೆ. ಗಿಡುವಿಂಗೆ ಮಿತ್ತು" ಎಂಬಂತೆ ನನ್ನ ಸ್ಥಿತಿ ಆಗ್ತಾದೇನೋ ಅಂದುಕೊಂಡಿದ್ದೆ. ಆದರೆ ನಾನು ಹೋದ 7-8 ದಿನಗಳಲ್ಲಿ ಕೊಂಡಜ್ಜಿ ಬಸಪ್ಪನೋರು ಬಂದು ನನ್ನ ನೋಡಿ, "ನಿಮ್ಮನ್ನ ಇಲ್ಲಿಗೆ ವರ್ಗ ಮಾಡಿಸಿ ಕೊಂಡೋನು ಸಿದ್ಧವೀರಪ್ಪ. ನಿಮ್ಮ ವಿಚಾರಕ್ಕಾದ್ರೆ ನಾವೆಲ್ಲ ಸಹಕರಿಸ್ತೇವೆ" ಅಂತ ಹೇಳಿದರು. ಪಾಪ ಅವರು ಅದರಂತೆ ನಡೆದುಕೊಂಡರೂ ಹೌದು.

ನಾನು ಹರಿಹರಕ್ಕೆ ಒಬ್ಬನೆ ಬಂದಿದ್ದೆ, ನನ್ನ ಹೆಂಡ್ತಿ ಮೂರನೆ ಮಗಳ ಬಾಣಂತನದಲ್ಲಿದ್ದಳು. ಅಲ್ಲಿ ಅಮಲ್ದಾರ್ ಮನೆ ಅಂದ್ರೆ ದೊಡ್ಡಪಾಳು ದೇಗುಲ ದಂತಿದ್ದ ಹಳೆ ಸರ್ಕಾರಿ ಕಟ್ಟಡ, ಹಳೇ ಕಾಲದ ಮನೆ. ಕುಂಬಾರರ ಹೆಂಚು ಹೊದಿಸಿದ್ದರು. ಆ ಮನೇಲಿ ನಾನೊಬ್ಬನೇ ಝಂಡ ಹೂಡಿದೆ. ಸ್ವಂತ ಅಡುಗೆ ಶುರು ಮಾಡಿದೆ. ಒಂದಿಬ್ಬರು ಜವಾನರು ಜೊತೆಯಲ್ಲಿ ಮಲಗಲು ಬರುತ್ತಿದ್ದರು. 3-4 ದಿನದ ನಂತರ ಒಂದು ರಾತ್ರಿ ರೂಮಿನಿಂದ ವರಾಂಡಕ್ಕೆ ಬರುತ್ತೇನೆ. ಜವಾನರೇ ಪತ್ತೆ ಇಲ್ಲ. ಕೂಗಿದೆ. ನೀನೆ ಎಂಬುವರಿಲ್ಲ. ಎಲ್ಲಿ ಹೋದರು ಅಂತ ಗೊಂದಲಕ್ಕೆ ಬಿದ್ದೆ. ಬೆಳಿಗ್ಗೆ ವಿಚಾರಿಸಿದರೆ ನಡುಗುತ್ತಾ ಸ್ವಾಮಿ, ನಮ್ಮ ಮನೆಗೆ ಹೋಗಿ ಮಲಗಿದ್ದೋ ಅಂದ್ರು. 'ಯಾಕೋ ಹೀಗೆ ಮಾಡಿದ್ರಿ' ಎಂದೆ 'ಸ್ವಾಮಿ

ಅಂದೇ ನಾವು ಹೇಳಿದೆವು ಬೇಡ ಅಂತ. ಇದು ದೆವ್ವದ ಮನೆ ಬುದ್ಧಿ' ಅಂದ್ರು. 'ಸರಿ ಇನ್ನು ನೀವು ಬರಬೇಡಿ. ನನಗೇನೂ ಭಯವಿಲ್ಲ' ಅಂತ ಹೇಳಿದೆ. ನನಗಿಂತ ಹಿಂದಿದ್ದ ಅಮಲ್ದಾರ್ ಜಿನದತ್ತರಾಯರು ಅಧಿಕರಕ್ತ ಒತ್ತಡದಿಂದ ಆ ಮನೇಲೇ ಸತ್ತು ಹೋಗಿದ್ರು. ಅವರು ಪಿಶಾಚಿಯಾಗಿದ್ದಾರೆಂದು ಜನರ ನಂಬಿಕೆ. ಅಲ್ಲಿಂದ ಈಚೆಗೆ ನನ್ನ ಸಂಸಾರ ಬರೋತನಕ ನನ್ನ ಹತ್ತಿರ ಯಾವ ಪಿಶಾಚಿ ಕೂಡ ಅತ್ತ ಸುಳಿಯಲಿಲ್ಲ.

ಹರಿಹರ, ಚಿತ್ರದುರ್ಗ ಜಿಲ್ಲೆಯಲ್ಲೇ ಪ್ರಮುಖ ತಾಲ್ಲೂಕು ಮತ್ತು ನಾಗರಿಕತೆಗೆ ಪಕ್ಕಾಗಿ ಬೆಳೆಯುತ್ತಿರುವ ಸ್ಥಳ. ಇದು ಪೂರ್ವದಲ್ಲಿ ಗುಹಾಸುರನ ರಾಜಧಾನಿಯಾಗಿತ್ತಂತೆ. ಕಂಟಕಪ್ರಾಯನಾದ ಅವನನ್ನು ಹರಿಹರರಿಬ್ಬರು ಒಂದೇ ರೂಪ ಧರಿಸಿ ಸಂಹರಿಸಿದರಂತೆ. ತುಂಗಭದ್ರೆ ಹರಿದು ಸಂಗಮ ಕ್ಷೇತ್ರವಾದ ಕೂಡಲೂರಿನಲ್ಲಿ ಹರಿಹರರು ಅವತರಿಸಿ ಗುಹಾಸುರನನ್ನು ಸಂಹಾರ ಮಾಡಿದರು. ಅಲ್ಲಿರುವ ಹರಿಹರೇಶ್ವರ ದೇವಾಲಯ ಹೊಯ್ಸಳರ ಕಾಲಕ್ಕೆ ಸೇರುತ್ತದೆ. ಈ ಕತೆಯಿಂದಾಗಿ ಅದಕ್ಕೆ 'ಹರಿಹರ' ಎಂಬ ಹೆಸರು ಬಂದಿದೆಯಂತೆ. ಯಥೇಚ್ಛವಾದ ಸಂಖ್ಯೆಯಲ್ಲಿ ಮುಸ್ಲಿಮರೂ ಇದ್ದಾರೆ. ಆಗಾಗ ಹಿಂದು ಮುಸ್ಲಿಂ ಗಲಾಟೆ ಇದ್ದೇ ಇರುತ್ತದೆ.

1954ರ ಸೆಪ್ಟೆಂಬರ್ ತಿಂಗಳಿರಬೇಕು. 'ಭರ್ರ್ರೋ' ಎಂದು ಮಳೆ ಸುರಿಯುತ್ತಿತ್ತು. ಹರಿಹರ-ಬಳ್ಳಾರಿ ರೋಡಿನ ಹರಿಹರದ ಗಡಿ ಉಕ್ಕಡದ ಹತ್ತಿರ ತುಂಗಾನದಿ ಉಕ್ಕುಕ್ಕಿ ಬರುತ್ತಿದೆ. ಅದೇ ಮಾರ್ಗವಾಗಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಅರ್ಜೆಂಟಾಗಿ ಬೆಂಗಳೂರಿಗೆ ಹೋಗಬೇಕಾಗಿತ್ತು. ಸುಮಾರು ರಾತ್ರಿ 8-30ಕ್ಕೆ ಅವರು ಬಳ್ಳಾರಿಯಿಂದ ಬಂದರು. ನದಿ ದಾಟಿಯೇ ಹೋಗಲೇಬೇಕು. ಕತ್ತಲೋ ಕತ್ತಲು. ಮುಖ್ಯಮಂತ್ರಿಗಳು ಚಡಪಡಿಸುತ್ತಿದ್ದರು. ನಾನೇ ಹೇಗೋ ಧೈರ್ಯವಹಿಸಿ ಮುಂದಾದೆ. ತಕ್ಷಣವೇ ಒಂದು ಜೋಡಿ ಎತ್ತುಗಳನ್ನು ಗಾಡಿಗೆ ಕಟ್ಟಲಾಯಿತು. ನನ್ನ ಮಾತಿನಂತೆ ಮುಖ್ಯಮಂತ್ರಿಗಳು ಹಾಗು ಅವರ ಪರಿವಾರದವರು ಗಾಡಿಯ ಮೇಲೆ ನಿಂತರು. ಎತ್ತುಗಳು ಆ ಹೊಳೇನ ಈಜಿ ಅವರನ್ನು ಆಚೆ ದಡಕ್ಕೆ ಮುಟ್ಟಿಸಿದವು ಅದನ್ನೆಲ್ಲಾ ನಿಭಾಯಿಸಿದ್ದು ತುಂಗೆಯ ದಡದಲ್ಲಿ ನೆಲೆಸಿದ್ದ 8-10 ಮುಸ್ಲಿಂ ಕುಟುಂಬದವರು. ಅವರುಗಳು ಮಾಡಿದ ಸಾಹಸ ಕೆಲ್ಸ ಮುಖ್ಯಮಂತ್ರಿಗಳಿಗೆ ಮೆಚ್ಚಿಗೆಯಾಯಿತು. ಅವರುಗಳ

ಪ್ರಾರ್ಥನೆಯಂತೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಅವರು ಮಸೀದಿ ಕಟ್ಟಿಕಳ್ಳೋಕೆ ಏಳೆಂಟು ಸಾವಿರ ರೂಪಾಯಿ ಗ್ರಾಂಟು ಮಂಜೂರು ಮಾಡಿದರು. ಆ ಮಸೀದಿನ ಅಲ್ಲಿ ನಾನಿದ್ದಾಗಲೆ ಕಟ್ಟಿದರು.

ದಿನ ಆಫೀಸಿಗೆ ಹೋಗಬೇಕಾದರೆ ಕಛೇರಿ ಪಕ್ಕದ ಮರದ ಹತ್ತಿರ ಹೆಂಗಸೊಬ್ಬಳು ಯಾರನ್ನೋ ಕಾಯುತ್ತಿದ್ದ ಹಾಗೆ ಕಾಣಿಸಿತು. ದಿನವೂ ಆಕೆ ಅಲ್ಲಿಯೇ ಯಾರಿಗಾಗಿಯೋ ಕಾಯುತ್ತಿದ್ದಾಳೆಂದು ಮಾರನೆಯ ದಿನ ಆಕೆಗೆ ಹೇಳಿ ಕಳುಹಿಸಿದೆ. ಆ ಮೇಲೆ ವಿಚಾರಿಸಿದರೆ ಆಕೆಯ ಕರುಣಾಜನಕ ಸ್ಥಿತಿ ತಿಳಿಯಿತು. ಆಕೆ ಹರಿಜನಳು. ಅದೇ ಪಂಗಡದ ವಿದ್ಯಾವಂತನೊಬ್ಬ ಈಕೆಗೆ 'ಹರಿಜನರ ಕಟ್ಟಡ ನಿಧಿ' ಯಿಂದ ಹಣ ಕೊಡಿಸುವುದಾಗಿ ಹೇಳಿ ಕರೆತಂದು ಆಕೆಯ ಹತ್ತಿರ ಎರಡು ಸಾರಿ ಹೆಬ್ಬೆಟ್ಟು ಒತ್ತಿಸಿಕೊಂಡು ಹೋಗಿದ್ದನಂತೆ. ಇದರ ಸಂಬಂಧಪಟ್ಟ ಫೈಲು ತರಿಸಿ ನೋಡಿದೆ. ಆಕೆಗೆ ಈಗಾಗಲೇ ಎರಡು ಸಾರಿ ಹಣ ಕೊಡಲಾಗಿತ್ತು ಉಳಿದಿದ್ದು 125 ರೂಪಾಯಿ ಮಾತ್ರ. ಗುಮಾಸ್ತನನ್ನ ಚೆನ್ನಾಗಿ ತರಾಟೆಗೆ ತೆಗೆದುಕೊಂಡು ಮೋಸಮಾಡಿದ ಆ ವ್ಯಕ್ತಿಯನ್ನು ಹುಡುಕಿಸಿದೆ, ಸಿಗಲಿಲ್ಲ, ಸರಿಯೆಂದು ಉಳಿದ 125 ರೂಪಾಯಿಯನ್ನು ಆಕೆಗೆ ಕೊಡಿಸಿ ಒಂದು ದಿನ ಅವರ ಹಳ್ಳಿಗೆ ಹೋದೆ. ಪಟೇಲ ಶ್ಯಾನುಭೋಗರನ್ನು ಕಂಡು ''ಈ ವಿಧವೆಗೆ ದಗಲ್ ಬಾಜಿ ಮಾಡಿದ ವ್ಯಕ್ತಿನ ಸುಮ್ಮನೆ ಬಿಡೋದಿಲ್ಲ'' ಅಂತ ಕೂಗಾಡಿದೆ. ಆಮೇಲೆ ಅವರುಗಳು 'ನೀವು ದೇವರಾಗಿ ಸ್ವಾಮಿ, ನಾವು ಆಕೆಗೆ ಗುಡಿಸಲು ಕಟ್ಟಿಕೊಡ್ತೀವಿ' ಅಂದರು. ಒಂದು ವಾರದಲ್ಲಿ ಗುಡಿಸಲು ಕಟ್ಟಿಕೊಟ್ಟರು.

ನಂಜಪ್ಪ ಎಂಬುವವರು ತಾಲ್ಲೂಕಿನ ಪಟೇಲರುಗಳಲ್ಲೆಲ್ಲಾ ಮುಂದಾಳು. ಆದರೆ ವರ್ಷದ ಕೊನೆಯಾದರೂ ಅವರ ಸ್ವಂತ ಊರಿನ ಕಂದಾಯದ ಕಿಸ್ತು ಹಣನ ತಂದಿರಲಿಲ್ಲ. ಒಂದೆರಡು ಸಾರಿ ಹೇಳಿದರೆ ಉಡಾಫೆ ಹೊಡೆದರು. ಅವರನ್ನ ಆಫೀಸಿಗೆ ಕರೆಸಿ ಕೇಳಿದರೆ ''ಫಲಾನ್ ಪಿಸ್ತಾನ್'' ಮಾತನಾಡಿದರು. ಸಾರ್ವಜನಿಕ ಕಛೇರಿಯಲ್ಲಿ ಅಸಭ್ಯವಾಗಿ ವರ್ತಿಸಿದರೆಂದು ಪೋಲೀಸ್ ಇನ್ಸ್‌ಪೆಕ್ಟರಲ್ ಕೃಷ್ಣಸ್ವಾಮಿಗೆ ದೂರು ಕೊಟ್ಟೆ. ರಾತ್ರಿ ಅವರನ್ನು ಅರೆಸ್ಟ್ ಮಾಡಿದರು. 'ಕಾಪಾಡಿ' ಎಂದು ಊರಿನೋರೆಲ್ಲಾ ಬಂದರು. 'ಆಫೀಸ್‌ನಲ್ಲಿ ದುರ್ವರ್ತನೆ, ದುಂಡಾವರ್ತಿ ಮಾಡೋಕ್ಕೆ ಬಂದರೆ ನಡೆಯೊಲ್ಲ' ಅಂತ ಹೇಳಿ ಕಳುಹಿಸಿದೆ.

ನಾನು ಹೋದ ಮೊದಲಿಗೆ ರಿಲೀಫ್ ಕೆಲಸ ನೋಡಿದೆ. ಬಹಳಷ್ಟು ಸಮರ್ಪಕವಾಗಿ ನಡೆದಿರಲಿಲ್ಲ. ಹಳೆಯದಕ್ಕೆಲ್ಲಾ ಒಂದು ರೂಪು ಕೊಟ್ಟು ವಿಶೇಷವಾಗಿ ಹಿಂದುಳಿದವರು ಇರೋ ಜಾಗದಲ್ಲಿ ಕಾಮಗಾರಿ ಕೆಲಸ ಪ್ರಾರಂಭಿಸಿದೆ. ಹೀಗೆ ಹಳ್ಳಿಯೊಂದಕ್ಕೆ ಭೇಟಿಕೊಟ್ಟು ಸಂಜೆ ಬರುತ್ತೇನೆ, ಒಬ್ಬ ಹಿಂದುಳಿದವರ ಪೈಕಿ ಹುಡುಗ ನಮ್ಮ ಮನೆ ಹತ್ತಿರ ನಿಂತಿದ್ದಾನೆ. ವಿಚಾರಿಸಿದರೆ 'ನಾನು ಬಡವ ಸಾರ್. ನನಗೆ ಎಂ.ಬಿ.ಬಿ.ಎಸ್.ಗೆ ಸೀಟು ತಮ್ಮ ಸಹಾಯದಿಂದಲೇ ಸಿಕ್ಕಿದೆ. ತಾವು ನಮ್ಮ ಎರಡು ಎಕರೆ ಜಮೀನು ಮೇಲೆ ಸಾಲ ಕೊಟ್ಟರೆ ಫೀಜು ಕಟ್ಟುತ್ತೇನೆ ನಾಳೆ ಕೊನೆ ದಿನ ಎಂದು ಅಳುತ್ತಾ ನಿಂತ. ಅಲ್ಲೋ ಮಾರಾಯ, ಸರ್ಕಾರಿ ಸಾಲ ಅಂದ್ರೆ ಅಷ್ಟು ಸುಲಭವೆ, ಮೇಲಿನಿಂದ ಬರಬೇಕಲ್ಲಪ್ಪ ಅಂದೆ 'ನೀವು ನನ್ನ ಭಾಗದ ದೇವರು, ಕಾಪಾಡಬೇಕು' ಎಂದು ಗೋಗರೆದ. ಸರಿ ಬಟ್ಟೆ ಬಿಚ್ಚದೆ ಸೈಕಲ್ಲನ್ನ ಹಾಗೇ ರಸ್ತೆಗೆ ತಕ್ಕೊಂಡು ಅವನೂರಿಗೆ ಹೊರಟೆ. ಅವನ ಜಮೀನೆಲ್ಲಾ ನೋಡಿ ಶ್ಯಾನುಭೋಗರಿಂದ ವಿವರ ಪಡೆದು ರಾತ್ರಿ ಬಂದೆ. ಆಫೀಸಿಗೆ ಹೋದ ತಕ್ಷಣ ಸಂಬಂಧಪಟ್ಟವರನ್ನ ಕರೆಸಿ ಆತನ ರಿಕಾರ್ಡಿನ ಎಲ್ಲಾ ಕರ್ಮಾದಿಗಳನ್ನ ಮಾಡಿಸಿ 12 ಗಂಟೆ ಒಳಗೆ ಹಣ ಕೂಡಿಸಿದೆ. ಆತನ ಹೆಸರು ರಾಜಪ್ಪ ಎಂದು. ಇಂದು ಆತ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪ್ರಾಧ್ಯಾಪಕರು. ನನ್ನ ಸರ್ವಿಸಿನ ಕೊನೆಯ ಭಾಗ ಮೈಸೂರಿನಲ್ಲಿರಬೇಕಾದರೆ, ಆತನೇ ಈ ವಿಚಾರ ಜ್ಞಾಪಿಸಿದ.

ಇಷ್ಟು ಹೊತ್ತಿಗೆ ಏಕೀಕರಣದ ಚಳುವಳಿ ಬಿರುಸಾಗಿತ್ತು. ಬೆಳಗಾವಿ ಕಾಂಗ್ರೆಸ್ ಅಧಿವೇಶನದಿಂದ ಏಕೀಕರಣದ ಬಗ್ಗೆ ಆಶ್ವಾಸನೆ ಕೊಡುತ್ತಾ ಬಂದಿದ್ದ ಕಾಂಗ್ರೆಸ್ ಅಧಿಕಾರ ಸಿಕ್ಕಿದೊಡನೆಯೇ ತನ್ನ ಮಾಮೂಲು 'ಹಾವು ಸಾಯಬಾರದು' ನೀತಿಯನ್ನು ಮುಂದುವರೆಸಿತು. ಧಾರ್ ಸಮಿತಿಯ ಅಭಿಪ್ರಾಯಕ್ಕೆ ರಾಜ್ಯದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಪ್ರತಿಭಟನೆ ಕಂಡು ಬಂತು. ಆಂಧ್ರ, ತಮಿಳುನಾಡುಗಳಲ್ಲಿ ಈ ಚಳುವಳಿ ಉಗ್ರರೂಪ ತಾಳಿತು. ಇಲ್ಲೂ ನಿಜಲಿಂಗಪ್ಪನವರು, ದೊಡ್ಡ ಮೇಟಿ ಅಂದಾನಪ್ಪನವರು ಹೊಡೆದಾಡ್ತಿದ್ದರು. ಇನ್ನು ಕುವೆಂಪು ಬೇಂದ್ರೆ, ಗೊರೂರು, ಅ.ನ.ಕೃ. ಅವರ ಕನಸು ಮನಸುಗಳಲ್ಲಿಯೂ ಇದೇ ಇತ್ತು. ಇದೇ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಪಾತ್ರದ ವಿಷಯ ಪ್ರತ್ಯೇಕವಾಗಿ ಹೇಳಬೇಕಾಗಿದೆ. ಅವರು ಅಧಿಕಾರದಲ್ಲಿದ್ದುದರಿಂದ ಅವರು ಏಕೀಕರಣ ಬೇಡ ಅನ್ನುವವರ ವಿರುದ್ಧ

ಹೋರಾಡಬೇಕಿತ್ತು. ಹಾಗೆಯೇ ಹೊರನಾಡುಗಳಿಗೆ ಭೇಟಿ ಕೊಟ್ಟು 'ನೀವಿಲ್ಲಿಗೆ ಬಂದ್ರೆ ಯಾವುದೇ ತೊಂದರೆಯಾಗುವುದಿಲ್ಲ' ಅಂತ ಹೇಳಬೇಕಾಗಿತ್ತು. ಹರಿಹರದಲ್ಲಿ ಹೊರನಾಡು ಕನ್ನಡಿಗರ ಮುಂದಾಳುಗಳು ಆಗಾಗ್ಗೆ ಸೇರುತ್ತಿದ್ದರು. ಹೊರನಾಡಿಗೆ ಭೇಟಿ ಕೊಟ್ಟಿದ್ದ ಮುಖ್ಯಮಂತ್ರಿಗಳು ಹರಿಹರಕ್ಕೆ ಬಂದರು. ಜಿಲ್ಲಾಧಿಕಾರಿಗಳು ಆಣತಿಯಂತೆ ನಾನು ನಾಡಿನ ಎಲ್ಲಾ ಪತ್ರಿಕೆಗಳನ್ನು ಸಂಗ್ರಹಿಸಿ ಕೊಟ್ಟೆ. ಹೊರನಾಡಿನ ಜನರ ಮನಗೆಲ್ಲುವಲ್ಲಿ ಮುಖ್ಯಮಂತ್ರಿಗಳು ಯಶಸ್ವಿಯಾಗಿದ್ದಾರೆಂದು ಪತ್ರಿಕೆಗಳು ಸಾರಿದ್ದವು. ಇದೊಂದು ರೀತಿ ಹನುಮಂತಯ್ಯನವರ ವೈಯಕ್ತಿಕ ದಿಗ್ವಿಜಯ ಕೂಡ ಆಗಿತ್ತು. ಇದೇ ಸಂದರ್ಭದಲ್ಲಿರಬೇಕು ಯಾವುದೋ ಹಿಂದುಳಿದವರ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ಮಾಜಿ ಮಂತ್ರಿಗಳಾದ ಟಿ.ಮರಿಯಪ್ಪನೋರು ಹಾಗೂ ಎಂ.ಪಿ.ಎಲ್.ಶಾಸ್ತ್ರಿಗಳು ಬಂದಿದ್ದರು. ಶಾಸ್ತ್ರಿಗಳು ಪುರಸಭೆಯ ಪ್ರೌಢಶಾಲಾ ಮಕ್ಕಳನ್ನು ಕುರಿತು ಒಂದು ಗಂಟೆ ಕಾಲ ಮಾತನಾಡಿದರು. ಸಂಸ್ಕೃತ ಶ್ಲೋಕಾದಿಗಳನ್ನು ಹೇಳುತ್ತಾ ಪುಟ್ಟ ಪುಟ್ಟ ಉಪಕಥೆಗಳನ್ನು ಹೆಣೆಯುತ್ತಾ ಶಾಸ್ತ್ರಿಗಳು ಮಾತಾಡುತ್ತಿದ್ದರೆ ಸಮಯ ಹೋಗುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ.

ಹರಿಹರದಲ್ಲಿ ಪ್ರಾರಂಭದಲ್ಲಿ ಒಂದೆರಡು ತಿಂಗಳು ನಾನೊಬ್ಬನೇ ಇದ್ದೆ. ನನ್ನ ಹೆಂಡತಿ ಹೆರಿಗೆಗೆಂದು ತುಮಕೂರಿನಲ್ಲೇ ಇದ್ದಳು. ಆಕೆ ಬಂದ ತಕ್ಷಣ ಗಾಳಿ ಸೋಂಕಿನ ಮನೆಯೆಂದು ಜವಾನರಿಂದ ತಿಳಿದು ಮನೆ ಬದಲಾಯಿಸಬೇಕೆಂಬ ವರಾತ ಶುರು ಮಾಡಿದಳು. ವಿಶ್ವೇಶ್ವರಯ್ಯನೋರ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರ ಬಿ.ಬೀರಪ್ಪನೋರನ್ನ ಕೈಗಾರಿಕಾ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿದರು. ನನ್ನ ಮೇಲೆ ಬೀರಪ್ಪನೋರ ದೃಷ್ಟಿ ಬಿತ್ತು. ಆ ಯೋಜನೆಯನ್ನು ತುಮಕೂರು ಜಿಲ್ಲೆಯಲ್ಲಿ ಕಾರ್ಯಗತ ಮಾಡಲು ಸೂಪರಿಂಟೆಂಡೆಂಟ್ ಆಗಿದ್ದ ಬೀರಪ್ಪನವರು ನನ್ನನ್ನು ಅಪೇಕ್ಷಿಸಿದರು. ನಾನೊಬ್ಬನೇ ಹರಿಹರದಲ್ಲಿದ್ದಾಗ ಒಂದೊಂದು ಸಿಗರೇಟ್ ದಂ ಹೊಡಿತಿದ್ದೆ. ಹೆಂಡತಿ ಬಂದ ಮೇಲೆ ಇದು ಆಕೆಗೆ ತಿಳಿದರೆ ಮಾತಾಡೋಕೆ ವಿಷಯ ಸಿಕ್ಕುವುದರಲ್ಲಿ ಸಂಶಯವಿಲ್ಲವೆಂದು ಅದಕ್ಕೆ ಎಳ್ಳು ನೀರು ಬಿಟ್ಟೆ.

# ತುಮಕೂರು ಗ್ರಾಮಾಂತರ ಕೈಗಾರಿಕಾ ಇಲಾಖೆ

ದೇವರ ದಾಸಿಮಯ್ಯ ತನ್ನ ಕಾಲದ ಬೂಟಾಟಿಕೆ ಭಕ್ತಿ ಕುರಿತು ಒಂದೆಡೆ ಹೀಗೆ ಹೇಳುತ್ತಾನೆ, 'ಹರಿವ ಗೋಣಿಯಲೊಬ್ಬ ಕಳವೆಯ ತುಂಬಿದ, ಇರುಳೆಲ್ಲ ನಡೆದನಾ ಸುಂಕಕ್ಕಂಜಿ, ಕಳವೆಯಲ್ಲ ಹೋಗಿ ಬರಿ ಗೋಣಿ ಉಳಿದಿತ್ತು. ಅಳಿಮನದವನ ಭಕ್ತಿ ಇಂತಾಯಿತ್ತು ಕಾಣಾ ರಾಮನಾಥ' ಯಾವುದೇ ದೊಡ್ಡ ಯೋಜನೆಯಾಗಲೀ ಅದನ್ನು ಹಾಕಿಕೊಟ್ಟವರ ಘನತೆ ಮೇಲೆ ನಿಲ್ಲುವುದಿಲ್ಲ. ಅದನ್ನು ಕೈಗೊಂಡವರು ಹೇಗೆ ನಡೆಸುತ್ತಾರೆ ಎಂಬುದರ ಮೇಲೆ ಅದರ ಯಶಸ್ಸು ನಿಂತಿದೆ. ಸರ್ ಎಂ.ವಿಶ್ವೇಶ್ವರಯ್ಯನವರು ಅಂದು ನಮ್ಮ ಸರ್ಕಾರಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಒದಗಿಸಿಕೊಡಲು ಹಾಕಿ ಕೊಟ್ಟ ಯೋಜನೆಯ ಫಲವೇ ಈ ಗ್ರಾಮಾಂತರ ಕೈಗಾರಿಕಾ ಇಲಾಖೆ. ಶ್ರೀ ಬೀರಪ್ಪನವರು ಇದರ ನಿರ್ದೇಶಕರಾಗಿದ್ದರು. ಈ ಇಲಾಖೆಗೆ ನಾನು ಸೂಪರಿಂಟೆಂಡೆಂಟ್ ಆಗಿ ತುಮಕೂರಿಗೆ 1955ರ ಆದಿ ಭಾಗದಲ್ಲಿ ಬಂದೆ. ಗ್ರಾಮಗಳಲ್ಲಿನ ಜನರಿಗೆ ವರ್ಷ ಕಾಲ ಉದ್ಯೋಗ ಇರುವುದಿಲ್ಲ. ಸಕಾಲದಲ್ಲಿ ಮಳೆ ಬೆಳೆ ಆಗೋದು ಕಷ್ಟ. ಅಂತಹ ಸಂದರ್ಭದಲ್ಲಿ ಅಲ್ಲಿನ ಜನ ನಗರಕ್ಕೆ ವಲಸೆ ಬರುವರು. ಇದರಿಂದಾಗೋ ಕೆಡಕು ಒಂದೇ ಎರಡೆ? ಇದನ್ನೆಲ್ಲ ಪರಿಶೀಲಿಸಿದ ಸರ್.ಎಂ.ವಿ. ಅವರು ನಮ್ಮ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಗಮನಿಸಿ, ಯೋಜನೆಯೊಂದನ್ನು ತಯಾರಿಸಿ ಕೊಟ್ಟರು. ಪ್ರಾಯಶಃ ಯಾರೋ ಒಬ್ಬ ಮಂತ್ರಿ ವಿಶ್ವೇಶ್ವರಯ್ಯನವರ ಮೇಲಿನ ಗೌರವಕ್ಕಾಗಿಯೋ ಅಥವಾ ಜನತೆಗೆ ಒಳಿತಾಗಬೇಕೆಂಬ ಉದ್ದೇಶದಿಂದಲೋ ಈ ಯೋಜನೆಗೆ 'ಅಸ್ತು' ಎಂದರು. ಇಲಾಖೆ ಪ್ರಾರಂಭವಾಯ್ತು. ಆದರೆ ಇತರ ಮಂತ್ರಿ ಮಹೋದಯರು ಹೀಗಿರಬೇಕಲ್ಲ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹತ್ತು ಜನ ಸೇರಿ ಒಂದು ಕೆಲಸ ಮಾಡರು. ಹತ್ತು ಜನ ಸೇರಿ ಆ ಕೆಲಸ ಕೆಡಿಸುವುದರಲ್ಲಿ ಎತ್ತಿದ ಕೈ ಒಂದಿಬ್ಬರು ಮಂತ್ರಿಗಳಿಗೆ ಇದು ಹಳೇ ಕಾಲದ ವಿಚಾರ ಎನಿಸಿತು. ಇನ್ನು ಅಧಿಕಾರಿಗಳ ವಿಚಾರ ಬಿಡಿ, ಮೇಲಿನಿಂದ ಕುಳಿತು ತಿದಿ ಒತ್ತಿದರೆ ಆಗೋದಿಲ್ಲ. ತೂಕಡಿಸಿ ಬಿಡ್ತಾರೆ. ನಾನಿಲ್ಲಿ ಇಲಾಖಾ ಸೂಪರಿಂಟೆಂಡೆಂಟ್ ಆಗಿದ್ದಾಗ ಮಂತ್ರಿ ಹೆಚ್.ಎಂ.ಚನ್ನಬಸಪ್ಪನೋರು ತುಮಕೂರು ಜಿಲ್ಲೆಗೆ ಭೇಟಿ ಕೊಟ್ಟಿದ್ದರು. ನಾನವರನ್ನು ಇಲಾಖೆಯ ಸಮಸ್ತ ರಿಕಾರ್ಡಿನೊಂದಿಗೆ ಹೋಗಿ ಕಂಡೆ. ಜಿಲ್ಲೇಲ್ಲಿ

ಆದ ಆ ತನಕದ ಪ್ರಗತಿಯನ್ನು ಅಂಕಿ ಅಂಶದ ಜೊತೆ ವಿವರಿಸಿದೆ. ಆದರೆ ಅವರು ತಲೆಗೆ ಹಚ್ಚಿಕೊಂಡಂತೆ ಕಾಣಲಿಲ್ಲ. 'ಬಿಡಿ ಅದೆಲ್ಲಾ' ಅಂದು ಬಿಟ್ಟರು, ನಮ್ಮ ಇಲಾಖಾ ನಿರ್ದೇಶಕರಾದ ಬೀಸಪ್ಪನವರಿಗೆ ಈ ವಿಚಾರ ಹೇಳಿದಾಗ ಬಹಳ ನೊಂದುಕೊಂಡಂತೆ ಕಂಡರು. 'ಅಯ್ಯೋ ಈ ಇಳಿ ವಯಸ್ಸಿನಲ್ಲಿ ವಿಶ್ವೇಶ್ವರಯ್ಯನೋರು, ನಾವು ಎಲ್ಲಿಗೆ ಕರೆದ್ರೂ ಬರ್ತಿದ್ರಲ್ಲಾ, ಒಬ್ಬ ಮಂತ್ರಿಗೆ ಹಿಡಿಸಿದ್ದು, ಮತ್ತೊಬ್ಬರಿಗೆ ಆಗೋದಿಲ್ಲ. ಹೀಗಾದರೆ ಮುಂದೆ ನಾವು ಹೇಗೆ ಪ್ರಗತಿ ಸಾಧಿಸೋದು' ಎಂದರು. ಹೀಗಿರಬೇಕಾದರೆ, ಸಣ್ಣ ಕೈಗಾರಿಕಾ ಸಚಿವರಾದ ಮಹಮ್ಮದ್ ಅಲಿ ಅವರು ಉತ್ತರಕರ್ನಾಟಕ ಪ್ರವಾಸದ ಮಧ್ಯೆ ತುಮಕೂರಿಗೆ ಬಂದಿದ್ದರು. ಪ್ರವಾಸಿ ಮಂದಿರದಲ್ಲಿ ಇಳಕೊಂಡಿದ್ದ ಅವರನ್ನ ನಾನು ಹೋಗಿ ಕಂಡೆ. ಇಷ್ಟು ಹೊತ್ತಿಗೆ ಆಗಲೇ ಇಲಾಖೆ ಸಾಕಷ್ಟು ಕೆಲಸ ಮಾಡಿತ್ತು. ಒಳ್ಳೆಯ ಯೋಜನೆ ಆಸಕ್ತ ಜನರಿಲ್ಲದೆ ಹೊರಟು ಹೋಗುತ್ತಿದೆಯಲ್ಲ ಎಂಬ ಕೊರಗು ನನ್ನದು. ಇದೇ ಯೋಚನೆಯಲ್ಲಿ ನಾನು ಶ್ರೀ ಮಹಮ್ಮದ್ ಅಲಿ ಅವರನ್ನು ಮಂತ್ರಿಗಳೆಂದು ವಿಶೇಷ ರಿವಾಜು ತೋರಿಸದೆ ಇದರ ಪ್ರಗತಿಗೆ ಏನೆಲ್ಲ ಕ್ರಮ ತಕ್ಕೊಳ್ಳಬೇಕು ಅಂತ ಹೇಳಿದೆ. ಇದಾದ ಒಂದ ವಾರದ ನಂತರ ಮಂತ್ರಿಗಳ ಆಪ್ತಕಾರ್ಯದರ್ಶಿಗಳಿಂದ ಒಂದು ಪತ್ರ ಬಂತು. ಪರವಾಗಿಲ್ಲ ಯಾರಾದರೂ ಹೇಳಿದರೆ ಯೋಚಿಸೋ ಅಷ್ಟು ನಮ್ಮ ಆಳೋ ವ್ಯಕ್ತಿಗಳು ಮುಂದುವರೆಯುತ್ತಿದ್ದಾರಲ್ಲಾ ಎಂದು ಸಂತೋಷ ಆಯ್ತು. ಒಡೆದು ನೋಡಿದ್ರೆ ಅದೊಂದು ಎಚ್ಚರಿಕೆ ಪತ್ರ. ಸರ್ಕಾರಿ ಅಧಿಕಾರಿಯಾಗಿ ನೀವು ಮಂತ್ರಿಗಳ ಹತ್ತಿರ ಸರಿಯಾಗಿ ನಡೆದುಕೊಳ್ಳಲಿಲ್ಲ, ನಿಮ್ಮ ಮೇಲೆ ಸೂಕ್ತ ಕ್ರಮವನ್ನೇಕೆ ಕೈಗೊಳ್ಳಬಾರದು? ಎಂಬ ಒಕ್ಕಣೆ. ಸರ್ಕಾರಿ ಚಾಕರಿಗೆ ಸೇರಿಕೊಂಡು ಬಿಟ್ಟರೆ ಮೈ ಮಾನ ಮಾರಿಕೊಂಡ ಹಾಗೇನು? ಇವರುಗಳಿಗೇ ಇಷ್ಟೊಂದು ಡೊಗ್ಗು ಸಲಾಮು ಹೊಡಿಬೇಕಾದರೆ ಆ ಇಂಗ್ಲೇಂಡ್ ಜನ ಏನಾಗಿದ್ದರು? ಇದೆಲ್ಲಾ ನನಗೊಂದೂ ಅರ್ಥವಾಗಲಿಲ್ಲ. ನಾನು ಸುಮ್ಮನೇ ಆದೆ. ಪ್ರಾಯಶಃ ಬೀರಪ್ಪನವರು ಹಾಗೂ ಮಾಲಿ ಮರಿಯಪ್ಪನವರು ಅವರಿಗೆ ಹೇಳಿರಬೇಕು. ಇದಾದ ಮೇಲೆ ಅವರು ತುಮಕೂರು ಜಿಲ್ಲೆ ಪ್ರವಾಸ ಕೈಗೊಂಡರು. ಕೆಲಸ ಆಗಿರೋ ರೀತಿ ಕಂಡು ಖುಷಿಯಾಗಿ 'ನೀವು ಡೆಡಿಕೇಟೆಡ್ ವರ್ಕರ್' ಎಂದರು. ನನಗೆ ಅದರ ಬಗ್ಗೆ ಹೆಮ್ಮೆ ಏನೂ ಅನ್ನಿಸಲಿಲ್ಲ. ಇದು ಮಂತ್ರಿಗಳ ಪಾಡಾದರೆ, ಇನ್ನು 'ಅಧಿಕಾರಿಗಳ ವಿಚಾರ ಮತ್ತೊಂದು ತರಹ. ಇದೆಲ್ಲಾ ನನ್ನ ಇಲಾಖಾ ಕೆಲಸ, ಜಿಲ್ಲಾಧಿಕಾರಿಗಳ ಅಧೀನಕ್ಕೆ ಬರುತ್ತಿತ್ತು. ಯಾವುದೋ ಹಳೇ ಕಾಲದ ಯೋಜನೆ ಎಂದು ಕಿರಿಯ

ಅಧಿಕಾರಿಗಳು ಭಾವಿಸಿದ್ದರು. ಬೆಂಗಳೂರಿನಲ್ಲಿ ನಾಳೇ ಈ ಸಂಬಂಧವಾಗಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಲಿತ್ತು. ಇನ್‌ಛಾರ್ಜ್ ಜಿಲ್ಲಾಧಿಕಾರಿ ರಾಘವೇಂದ್ರಾ ಚಾರ್, ಅಲ್ಲಿಗೆ ಹೋಗಲಿದ್ದರು. ನಾನು ಬೆಳಿಗ್ಗೆ 11 ಗಂಟೆಗೆ ಅವರ ಕಛೇರಿಗೆ ಅಂಕಿ ಅಂಶಗಳನ್ನೊತ್ತು ಹೋದರೆ ಸಂದರ್ಶನದ ಭಾಗ್ಯನೇ ದೊರೆಯಲಿಲ್ಲ, ಸಾಹೇಬರು ಎಲ್ಲ ಫೈಲ್‌ಗಳನ್ನೂ ನನ್ನ ಕಡೆ ಕೊಡಿ ಅಂದವರೆ ಎಂದು ಅವರ ಆಪ್ತ ಗುಮಾಸ್ತೆ ಅದನ್ನು ತಕ್ಕೊಂಡು ನನ್ನ ಕಳುಹಿಸಿಕೊಟ್ಟ' ಇದಾದ ಎರಡು ದಿನದಲ್ಲಿ ಜಿಲ್ಲಾಧಿಕಾರಿಗಳಿಂದ ನನಗೆ ಬುಲಾವ್ ಬಂತು. ಪ್ರಾಯಶಃ ಬೆಂಗಳೂರಿನ ಪ್ರವಾಸದ ಫಲ ಇರಬೇಕೆಂದುಕೊಂಡರೆ, ಹೋದ ತಕ್ಷಣ ಜಿಲ್ಲಾಧಿಕಾರಿಗಳು ನನ್ನ ಕೈ ಹಿಡಿದುಕೊಂಡು 'ನೀವು ಚೆನ್ನಾಗಿ ಕೆಲಸ ಮಾಡಿದ್ದೀರ. ತುಮಕೂರು ಜಿಲ್ಲೆ ಈ ಯೋಜನೆ ಕಾರ್ಯಗತ ಮಾಡೋದರಲ್ಲಿ ರಾಜ್ಯಕ್ಕೇ ಮೊಲನೆಯದು. ಇದು ನಮಗೆಲ್ಲಾ ಕ್ರೆಡಿಟ್' ಎಂದರು, ನಾನು ಏನೂ ಮಾತಾಡಲಿಲ್ಲ, ಫೈಲುಗಳ ರಾಶಿಗೆ ಹೋಗ್ತಿರುವ ಯೋಜನೆಗೆ ಪುನಶ್ಚೇತನ ಕೊಡೋಕ್ಕಂತೂ ಇಂತಹ ಆಫೀಸರಿಂದ ಆಗಲಿಕ್ಕಿಲ್ಲ ಎಂದುಕೊಂಡೆ.

ನಮ್ಮ ಆಫೀಸು ಆಗ ಗಾಂಧಿನಗರದಲ್ಲಿ ರಾಮಚಂದ್ರರಾಯರ ಕಟ್ಟಡದಲ್ಲಿತ್ತು. ಅದರ ಹಿಂಭಾಗದ ಬಾಡಿಗೆ ಮನೇಲಿ ನಾನಿದ್ದೆ. ಹೊಸ ಆಫೀಸು. ಜನಗಳನ್ನ ತಯಾರು ಮಾಡಬೇಕಾಗಿತ್ತು. ಹೋಬಳಿಗೊಬ್ಬ ಇನ್ಸ್‌ಪೆಕ್ಟರ್‌ನ ನೇಮಿಸಬೇಕಾಗಿತ್ತು. ಜಿಲ್ಲೇನೆಲ್ಲ ಸುತ್ತಿ ಷೇರು ಬಂಡವಾಳ ಸಂಗ್ರಹಿಸುವ ಹೊಣೆ ಕೂಡ ಇತ್ತು. ಈ ಯೋಜನೇನ ಸಹಕಾರ ತತ್ವದ ಮೇಲೆ ಕಟ್ಟಬೇಕೆಂಬುದು ವಿಶ್ವೇಶ್ವರಯ್ಯನವರ ಸಂಕಲ್ಪ. ಇಂಥ ಸಂದರ್ಭದಲ್ಲಿ ಇದ್ದ ಒಂದಿಬ್ಬರು ಅಧಿಕಾರಿಗಳಿಂದ ಸಮರ್ಪಕವಾಗಿ ಕೆಲಸ ಮಾಡಿಸಬೇಕಾದರೆ ಅವರನ್ನ ಜಾಲಾಡಿಸದೆ ವಿಧಿ ಇರಲಿಲ್ಲ. ಈ ಸನ್ನಿವೇಶದಲ್ಲಿ ತುಮಕೂರಿನ ಕಸಬಾ ಗ್ರೂಪ್‌ನ ಇನ್ಸ್‌ಪೆಕ್ಟರ್ ಸಿ.ರುದ್ರಯ್ಯನನ್ನು ಕಸಬಾ ಸಂಘದವರು ಅಮಾನತ್ತಿನಲ್ಲಿಟ್ಟರು. ನನ್ನ ಮೇಲೆ ಆತ ಕಿತಾಪತಿ ತೆಗೆದ. ಆಫೀಸ್‌ಗೆ ಫರ್ನೀಚರ್ ಕೊಳ್ಳಬೇಕಾದರೆ ಗೋಲ್‌ಮಾಲ್ ನಡೆದಿದೆ ಎಂದು ನನ್ನ ಮೇಲೆ ಗೂಬೆ ಕೂರಿಸಿ ಅರ್ಜಿಯೊಂದು ಬಂತು. ಅದೃಷ್ಟವಶಾತ್ ಅದನ್ನೆಲ್ಲಾ ಜಿಲ್ಲಾಧಿಕಾರಿ ರಾಜನ್ ಅವರೇ ಪರಿಶೀಲಿಸಿ ಮಂಜೂರು ಮಾಡಿದ್ದರು. ಕಳ್ಳ ಮನಸ್ಸಿನವನು ಆರೋಪಕ್ಕೆ ಹೆದರಬೇಕು. ಆತ್ಮ ಸಾಕ್ಷಿಯ ಬೆಳಕಿನಲ್ಲಿ ನಡೆಯುವವನಿಗೆ ಅದರ ಗೋಜು ಏಕೆ? ಆದರೆ ಮನುಷ್ಯನ ಸ್ವಭಾವ - ಹೇಗೆಂದರೆ, ಶಕ್ತಿಯಿಂದಾಗದ್ದನ್ನು ಯುಕ್ತಿಯಿಂದ ಮಾಡಲಿಕ್ಕೆ

ಹೋಗ್ತಾನೆ. ಒಂದು ಸಾರಿ ತಿಪಟೂರಿಗೆ ಹೋದ್ರೆ, ಒಬ್ಬ ಸೂಪರ್‌ವೈಸರ್ 7-8 ಜನ ಇನ್ಸ್‌ಪೆಕ್ಟರ್‌ಗಳನ್ನ ಕರಕೊಂಡು ಬಂದು ಅವರುಗಳಿಂದ ಏಳೆಂಟು ಕೊಬ್ರಿ, ಅಷ್ಟು ತೆಂಗಿನಕಾಯಿ, ಅವರೇಕಾಯಿ, ಹತ್ತಾರು ಕೋಳಿಮೊಟ್ಟೆಗಳನ್ನು ಕೊಡ್ಸಲಿಕ್ಕೆ ಬಂದ. ಆ ಇನ್ಸ್‌ಪೆಕ್ಟರ್‌ಗಳು ಕೃತಕ ವಿನಯದಿಂದ 'ಸ್ವಾಮೇರು ಇದನ್ನ ಒಪ್ಪಿಸ್ಕೋಬೇಕು ನಾವುಗಳೇ ಇದನ್ನೆಲ್ಲಾ ಬೆಳೆದಿದ್ದು ವಗೈರೆ ಎನ್ನತೊಡಗಿದರು. ನನಗಾಶ್ಚರ್ಯ! ಹಾಗೆ ಒಪ್ಪಿಸಿಕೊಳ್ಳಲು ನಾನೇನು ಆಧುನಿಕ ರಾಜನಲ್ಲ ಅಥವಾ ಮಠದ ಸ್ವಾಮಿ ಕೂಡ ಅಲ್ಲ ಎಂದು ಅವರುಗಳನ್ನ ಸಾಕಷ್ಟು ಛೀಗುಟ್ಟಿದೆ. ಏನೇ ಆಗಲಿ ನಾನು ಕಾಯ ವಾಚ ಕೈಗೊಂಡ ಕೆಲಸ ವ್ಯರ್ಥವಾಗಲಿಲ್ಲ. ನನ್ನ ಸಹೋದ್ಯೋಗಿಗಳ ಸಹಕಾರದಿಂದ ತುಮಕೂರು ಜಿಲ್ಲೆ ಈ ಯೋಜನಾನ್ವಯ ಸಂಗ್ರಹಿಸಿದ ಷೇರು ಬುಡವಾಳ ಇಡೀ ರಾಜ್ಯದಲ್ಲೇ ಮೊದಲನೆದಾಗಿತ್ತು. ಆಗ ತಾನೇ ಸ್ಥಾಪಿತವಾಗಿದ್ದ ಕೈಗಾರಿಕಾ ಬ್ಯಾಂಕ್‌ನಿಂದ ಸಾಲ ಮಂಜೂರು ಮಾಡಿಸಬೇಕಾಗಿತ್ತು. ಆ ಬ್ಯಾಂಕ್‌ನವರಿಗೆ ವಿವಿಧ ಮಾಹಿತಿಗಳನ್ನು ಒದಗಿಸಿ, ಸಾಲ ಮಂಜೂರು ಮಾಡಿಸಬೇಕಾದರೆ ತೇನಸಿಂಗನ ಸಾಹಸವೇ ಆಯ್ತು. ಹೀಗಾದರೂ ಕೈಗಾರಿಕಾ ಬ್ಯಾಂಕ್‌ನಿಂದ ಮಂಜೂರಾದ ಸಾಲ ಕೂಡ ರಾಜ್ಯದಲ್ಲಿ ತುಮಕೂರು ಜಿಲ್ಲೆಗೆ ಪ್ರಥಮಸ್ಥಾನ ದೊರಕಿತು. ಇದರ ಬಾಹ್ಯರೂಪ ಎನ್ನುವಂತೆ ಆಗ ಪ್ರಾರಂಭವಾದ ಗೃಹ ಕೈಗಾರಿಕಾಗಳೆಂದರೆ ಕರಕುಶಲ ಬೋರ್ಡ್‌ನವರ ಸಹಕಾರ ಪಡೆದು ಮುಸಲ್ಮಾನರಿಗಾಗಿ ಸಾತಘಟ್ಟದಲ್ಲಿ ಪ್ರಾರಂಭವಾದ 'ಪಾತ್ರೆಪರಟುಗಳ ಸಹಕಾರ ಸಂಘ' ಬಂಜಾಲಿಗರ ತಂಡದವರಿಗಾಗಿ ಶಿರಾ ಹತ್ತಿರ ಚಾಪೆ ಹೆಣೆಯುವ ಸಹಕಾರ ಸಂಘಗಳು ಪ್ರಮುಖವಾದುವು. ಇದೇ ತರಹ ನಾಗವಲ್ಲಿ, ಕುಣಿಗಲ್ ಸಮೀಪದಲ್ಲಿ ವ್ಯವಸಾಯಮುಟ್ಟುಗಳನ್ನು ತಯಾರಿಸೋ ಸಂಘಗಳು ಪ್ರಾರಂಭವಾದುವು. ಆದರೆ ಈ ಯೋಜನೆಯ ಪ್ರಯೋಜನವನ್ನು ನಮ್ಮ ಜನ ಅರಿಯಲಿಲ್ಲ. ಹಸುವಿನ ಕೆಚ್ಚಲನ್ನು ಕೊಯ್ದರೆ ಹಾಲು ಬರದು. ರಕ್ತ ಬರ್ತದೆ ಎಂಬ ಕಲ್ಪನೆ ಇವರಿಗಿಲ್ಲ. ಇದನ್ನ ನಮ್ಮ ಜನರ ಅಜ್ಞಾನ ಅಥವಾ ಸ್ವಾರ್ಥ ಅನ್ನೋಣವೇ ಒಂದೂ ತಿಳಿಯದು. ಸಾತಘಟ್ಟದ ಗೃಹ ಕೈಗಾರಿಕಾ ಘಟಕದ ಕತೆ ಇದು. ಇಲ್ಲಿನವರು ಸಾಲ ಸೋಲ ಮಾಡಿ, ಅಷ್ಟಿಷ್ಟು ಹಿತ್ತಾಳೆ, ತಾಮ್ರ, ಲೋಹಗಳನ್ನು ತಂದು ಪಾತ್ರೆ ಮಾಡುತ್ತಿದ್ದರು. ಇದರ ಜೊತೆಗೆ ಊರೂರು ತಿರುಗಿ, ಪಾತ್ರೆ ಮಾಡೋದು, ಕಲಾಯಿ ಮಾಡೋದು ಇವರ ಕಸುಬಾಗಿತ್ತು. ಇವರಿಗೆ ಪ್ರತ್ಯೇಕ ಸಹಕಾರ ಸಂಘವನ್ನು ಸ್ಥಾಪಿಸಿ ನೋಂದಾವಣಿ ಮಾಡಿಸಿ ಕರಕುಶಲ ಕೈಗಾರಿಕಾ ಬೋರ್ಡಿನಿಂದ 40,000 ರೂಪಾಯಿಗಳ ಗ್ರಾಂಟ್ಸ್ ತಂದು

ಆ ಹಣಕ್ಕೆ ಒಟ್ಟಾರೆ ಕಚ್ಚಾಮಾಲು ತಂದಿಟ್ಟೆ. ಕುಶಲಕರ್ಮಿಗಳಿಗೆ ಸ್ವಲ್ಪ ಸ್ವಲ್ಪ ಕಚ್ಚಾಮಾಲು ಒದಗಿಸಿ. ನೀವು ಸರಕು ತಯಾರಿಸಿರಿ, ಅದಕ್ಕೆ ಮಾರುಕಟ್ಟೆ ವ್ಯವಸ್ಥೆ ಮಾಡೋಣ ಅಂದೆ. ಒಂದಷ್ಟು ದಿನ ಬಿಟ್ಟು ಹೋದರೆ ಆ ಸಹಕಾರ ಸಂಘದ ಮುಂದಾಳುಗಳು ತಮ್ಮಷ್ಟಕ್ಕೆ ತಾವೇ ಉಳಿದ ಕಚ್ಚಾಮಾಲುಗಳನ್ನು ಹಂಚಿಕೊಂಡು ಮಾಲು ತಯಾರಿಸಿ ಮಾರಿಕೊಂಡಿದ್ದರು. ಸಂಘಕ್ಕೆ ಕೊಡಬೇಕಾಗಿದ್ದ ಮೂಲ ಹಣದ ಸಹ ಕೊಟ್ಟಿರಲಿಲ್ಲ. ಸಹಕಾರ ಸಂಘಗಳ ನಿಯಮಾನುಸಾರ ಅವರ ಮೇಲೆ ಕ್ರಮ ಜರುಗಿಸಿ ವಸೂಲಿ ಮಾಡೋಣವೆ? ಆ ಮಾತು ಬೇರೆ. ಆದರೆ ನಮ್ಮ ಮೂಲ ಉದ್ದೇಶ ಬಡ ಕಲಾಯಿ ಸಾಬಿಗೆ ನೆರವಾಗುವ ನಮ್ಮ ಆಸೆ ನೆರವೇರಲಿಲ್ಲ. ಇಂಥ ಯೋಜನೆಗಳ ಸಾರ್ಥಕತೆ ಬಗ್ಗೆ ಗೂಬೆ ಕಣ್ಣಿನಿಂದ ನೋಡುತ್ತಾ ಕೂತಿರುತ್ತಾರೆ, ಬಂಡವಾಳಶಾಹಿಗಳು. ಪಟ್ಟಭದ್ರ ಹಿತಾಸಕ್ತರು, ನೋಡಿ ನಾವಾಗಲೇ ಹೇಳಲಿಲ್ಲವೆ ಎಂದು ಗುಲ್ಲೆಬ್ಬಿಸುತ್ತಾರೆ, ಹೀಗಾಗಿ ಇಂಥ ಯೋಜನೆಗಳೆಲ್ಲ ಅತ್ತ ಸಾಯದೆ ಇತ್ತ ಬದುಕದೆ ಬರಿ ಅರೆಜೀವಾವಸ್ಥೆಯಲ್ಲೇ ಕಣ್ಮರೆಯಾಗಿ ಸಾಯುತ್ತವೆ, ಹೀಗಾದಾಗ ಉದ್ಧಾರದ ಹಾದಿ ಯಾವುದು ಎಂಬ ಅರಿವೇ ಆಗುವುದಿಲ್ಲ.

ನನ್ನ ಬದುಕಿನಲ್ಲಿ ಇಷ್ಟೊತ್ತಿಗಾಗಲೇ ಒಂದಿಷ್ಟು ಪಾಠಗಳು ನನ್ನದಾಗಿದ್ದವು, ಸಾವು ಕುರಿತು ಸಾಕಷ್ಟು ಪರಿಚಯ ಆಗಿತ್ತು. ಆದರೆ, ಧೃತರಾಷ್ಟ್ರನ ಸಂಕಟ ನನ್ನದಾಗಿರಲಿಲ್ಲ. ತಾಯಿ-ಅಣ್ಣನ ಸಾವೇ ಬೇರೆಯಾದರೆ ಸ್ವಂತ ಕರುಳ ಕುಡಿಯ ಸಾವೇ ಬೇರೆ ಎಂದು ನನಗಾಗಲೇ ಗೊತ್ತಾದದ್ದು. ಅಷ್ಟು ಟೂರಿಗೆ ಹೋಗಿ ಮನೆಗೆ ಬಂದರೆ ನನ್ನ ಏಳೆಂಟು ವರ್ಷದ ಮಗಳು ಜಯಮ್ಮ ಹೊಟ್ಟೆ ನೋವಿನಿಂದ ನರಳುತ್ತಿದ್ದಳು. ಡಾಕ್ಟರನ್ನು ಕರೆಸಿ ಪರೀಕ್ಷಿಸಿದಾಗ 'ಗಾಬರಿಯಾಗಲಿಕ್ಕೆ ಅಂಥದ್ದೇನಿಲ್ಲ' ಎಂದು ಆಶ್ವಾಸನೆ ಇತ್ತರು, ರಾತ್ರಿ ಎಲ್ಲಾ ನಿದ್ದೆ ಮಾಡಲಿಲ್ಲ. ಮಗು ಹತ್ತಿರಾನೇ ಕುಳಿತೆ, ಬೆಳಿಗ್ಗೆ ಆಫೀಸಿಗೆ ರಜೆ ಹಾಕೋಣ ಅಂದರೆ ತಿಪಟೂರಿಗೆ ಅರ್ಜೆಂಟ್ ಹೋಗಲೇಬೇಕಾಗಿತ್ತು. ಮಗಳು ನೋವಿನಲ್ಲೂ ನನ್ನ ಕೈ ಹಿಡಿದು, 'ಅಪ್ಪಾಜಿ, ನನ್ನ ಬಿಟ್ಟು ಹೋಗಬೇಡಿ' ಎನ್ನುತ್ತಿದ್ದಳು. ಮಕ್ಕಳು, ಹೆಂಡತಿ ಏನೂ ಮಾತನಾಡದೆ ಮೌನವಾಗಿದ್ದರು. ಇಲ್ಲ ಪುಟ್ಟ ಈಗ ಬಂದ್ಬಿಟ್ಟೆ. 'ಒಂದೀಟು ನಿದ್ದೆ ಮಾಡು' ಎಂದು ಕೈ ಬಿಡಿಸಿಕೊಂಡು ತಿಪಟೂರಿಗೆ ಹೋದೆ. ಕೆಲ್ಸ ಮುಗಿಯೋದು ರಾತ್ರಿ ಆಯ್ತು. ಅಲ್ಲೇ ಉಳಿದೆ. ಊಟ ಸೇರದು. ಹಾಸಿಗೇಲಿ ಹೊರಳಾಡಿದರೂ ನಿದ್ದೆ ಬಾರದು. 'ಕಣ್ಣರಿಯದಿದ್ದರೂ ಕರುಳರಿಯದೆ' ಎಂಬ

ಮಾತು ಸುಳ್ಳಾಗಲಿಲ್ಲ. ಬೆಳಿಗ್ಗೆ ಮನೆಗೆ ಬಂದರೆ ಎಲ್ಲರೂ ಆಕಾಶ ತಲೆ ಮೇಲೆ ಕಳಚಿಬಿದ್ದಿರೋ ಹಾಗೆ ಕುಳಿತಿದ್ದಾರೆ. ನಾನು ಹೋದಮೇಲೆ ಡಾಕ್ಟರು ಮತ್ತೆ ಬಂದೇ ಇರಲಿಲ್ಲ. ಮನೇಲಿ ಗಂಡು ಎಂಬೋರು ದಿಕ್ಕಿರಲಿಲ್ಲ. ನನ್ನ ಹೆಂಡತಿ ಮೂಲೆ ಸೇರಿದ್ದಳು. ಹೋದವನೇ ಬಟ್ಟೆ ಬಿಚ್ಚಿ ಮಗಳ ಹಾಸಿಗೆ ಹತ್ತಿರ ಕುಳಿತೆ ಕಷ್ಟಪಟ್ಟು ಉಸಿರಾಡುತ್ತಿದ್ದ ಆಕೆಯನ್ನು ನೋಡಲಿಕ್ಕಾಗಲಿಲ್ಲ. ನನಗೆ ಗೊತ್ತಿರೋ ಒಂದಿಷ್ಟು ಔಷಧಿ ಮಾಡಿದೆ. ಆಸ್ಪತ್ರೆಗೆ ಸೇರಿಸೋಣ ಅಂತಿರಬೇಕಾದರೆ 'ನೋಡಪ್ಪಾಜಿ. ಯಾರೋ ಕಾಲೆಳಿತಿರೋದು' ಎನ್ನುವ ಕೀರಲು ಧ್ವನಿ. ಇದಾದ ಒಂದೆರಡು ಕ್ಷಣಗಳಲ್ಲಿ ಆಕೆ ಈ ಲೋಕವನ್ನೇ ತ್ಯಜಿಸಿದಳು. ಈಗಲೂ ಕೂಡ ನನ್ನ ಮಗಳನ್ನು ನಾನೇ ಕೈಯಾರೆ ಕೊಂದೆ ಅನ್ನಿಸುವುದು, ಯಾವುದೋ ಡಾಕ್ಟರಿಗೆ ಮಗಳ ಜವಾಬ್ದಾರಿ ವಹಿಸಿ ಹೋಗೋದು ಮುರ್ಖತನ ಅಲ್ಲವೇ? ಅಂದು ತಿಪಟೂರಿಗೆ ಹೋಗದೆ ಇದ್ದರೆ ನನ್ನ ಮಗಳನ್ನ ಉಳಿಸಿಕೊಳ್ಳಬಹುದಾಗಿತ್ತೇನೋ, ಕುಮಾರ ಅಳುತ್ತಾ 'ಅಪ್ಪಾಜಿ ಅಕ್ಕ ಹೊರಟು ಹೋದಳು' ಅಂದಾಗಂತೂ ನನಗೆ ಸಾವಿರ ಚೇಳು ಕುಟುಕಿದಂತಾಯಿತು. ನನ್ನ ಹೆಂಡತಿ ಇದಾದ ಎಷ್ಟೋ ದಿನಗಳ ನಂತರ ಕೂಡ ನಿಮ್ಮನ್ನ ನಾನು ಕಟ್ಕೊಂಡು ಅಳಬೇಕು, ಆಫೀಸ್ ಒಂದಿದ್ರೆ, ನಿಮಗೆ ಹೆಂಡ್ತಿ ಮಕ್ಕಳು ಯಾರೂ ಬೇಡ. ಆವತ್ತೇ ಬಡಕೊಂಡೆ ಅವಳ ಜಾತಕದಲ್ಲಿ ಆಪತ್ತಿದೆ. ಶಾಂತಿ ಮಾಡಿಸಿ ಎಂದು, ನನ್ನ ಮಾತು ಎಲ್ಲಿ ಕೇಳ್ತೀರ' ಅಂದಳು. ಈ ಮಗು ಹುಟ್ಟಿದಾಗ ನಾವು ಚಿಕ್ಕಬಳ್ಳಾಪುರದಲ್ಲಿದ್ದೆವು. ಈಕೆಯ ಜಾತಕ ಬರೆದ ಬ್ರಾಹ್ಮಣ 'ಈಕೆಗೆ ಗಂಡಾಂತರವೊಂದಿದೆ' ಅಂದಿದ್ದ. ಎಲ್ಲ ಜ್ಯೋತಿಷಗಳೂ ಅಷ್ಟೇ ತಾನೇ? ಗಂಡಾಂತರ ಇಲ್ಲ ಶುಭಯೋಗ, ಶಾಂತಿ ಮಾಡಿಸಿದರಾಗಲಿ ಅಥವಾ ತಿಪಟೂರಿಗೆ ಹೋಗದಿದ್ದರಾಗಲೀ ನನ್ನ ಮಗಳು ಉಳಿಯುತ್ತಿದ್ದಳು ಅನ್ನೋದು ಕೇವಲ ಭ್ರಾಂತಿ. ಶಾಂತಿ ಮಾಡಿಸಿದ್ದರೆ ಹೆಂಡತಿಗೆ ಸಮಾಧಾನ ಆಗುತ್ತಿತ್ತು, ನಾನು ಹೋಗದೆ ಇದ್ದಿದ್ದರೆ ನನ್ನಲ್ಲಿ ಈ ಪಾಪಪ್ರಜ್ಞೆ ಇರುತ್ತಿರಲಿಲ್ಲವೇನೋ ಅಂದರೆ ಆಗೋ ಕೆಲಸಾನ ತಡೆಯೋಕಂತೂ ಸಾಧ್ಯವಿಲ್ಲ. ಅಂಥ ಶಕ್ತಿ ಇದ್ದಿದ್ರೆ, ನನ್ನ ಕಣ್ಣೆದುರಲ್ಲೇ ಆದ ಭಾವನ ಸಾವನ್ನು ನಾನೇಕೆ ತಡೀಲಿಲ್ಲ? ಕಾಯಿಲೆಯಿಂದ ನರಳುತ್ತಿದ್ದ ಭಾವನನ್ನು ಜನರಲ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಹೋಗಿ ಡಿ.ಎಂ.ಒ ಮತ್ತು ಆರ್.ಎಂ.ಒ.ರನ್ನು ಕಂಡು ರೋಗಿ ಬಗ್ಗೆ ಹೇಳಿ ಬಂದೆ. ಚಿಕಿತ್ಸೆ ನಡೀತಿತ್ತು. ಒಂದು ಸಂಜೆ ನನ್ನ ಭಾಮೈದ ಅಳುತ್ತಾ ಮನೆಗೆ ಬಂದ. ಗಾಬರಿಯಿಂದ ವಿಚಾರಿಸಿದರೆ ಆತನ್ನ, ಹೆಣದ ಮನೆಗೆ ಸಾಗಿಸಿದ್ದಾರೆ - ಎಂದ. ಏನಾಗಿಹೋಯ್ತೋ ಅಂತ ಗಾಬರಿಯಿಂದ ಒಂದೇ

ಉಸುರಿಗೆ ಆಸ್ಪತ್ರೆಗೆ ಹೋಗಿ - ಹಿಂದೆ ಮಲಗಿದ್ದ ನಮ್ಮ ಭಾವನ ಹಾಸಿಗೆ ನೋಡಿದೆ, ಯಾರೋ ಬೇರೊಬ್ಬರು ಇದ್ದರು. ಡ್ಯೂಟಿ ಮೇಲಿದ್ದ ಡಾಕ್ಟರನ್ನ ವಿಚಾರಿಸಿದರೆ ಆತ ಒರಟಾಗಿ ಉತ್ತರಿಸಿದ. ನಾನು ನೇರವಾಗಿ ಡಿ.ಎಂ.ಒ. ಹತ್ತಿರ ಹೋದೆ. ಅವರಿಗೆ ಆಶ್ಚರ್ಯ. ನನ್ನ ಪರಿಚಯದವರು. ಅವರು 'ಬನ್ನಿ ಮಲ್ಲಪ್ಪ' ಎಂದು ನಮ್ಮ ರೋಗಿ ಭಾವನ್ನ ತಪಾಸಣೆ ಮಾಡಲು ಅವರೇ ಹೊರಟರು. ಹೆಣದ ಕೊಠಡಿ ಪಕ್ಕದಲ್ಲಿ ನಮ್ಮ ಭಾವ ನಿಸ್ಸಹಾಯಕನಾಗಿ ಮಲಗಿದ್ದರು. ಡಿ.ಎಂ.ಒ. ಮಾತನಾಡದೆ ರೋಗಿನ ತೆಗೆಸಿಕೊಂಡು ಬಂದು ಹೊಸ ಚಿಕಿತ್ಸೆ ಪ್ರಾರಂಭಿಸಿದರು. ಇದಾದ 3-4 ದಿನಕ್ಕೆ ನಮ್ಮ ಭಾವ ತೀರಿಕೊಂಡರು. ಅಂತು ನಮ್ಮ ಮನೆತನದ ಹಿರೀ ತಲೆ ಹೋಯಿತು. ನನ್ನ ಭಾವನನ್ನು ಹೆಣದ ಕೊಠಡಿಗೆ ಹಾಕಲಿಕ್ಕೆ ಹೋದವರು, ಹಿಂದುಳಿದ ಜಾತಿಗೆ ಸೇರಿದ ಡಾಕ್ಟರು ಅಂತ ಆಮೇಲೆ ಗೊತ್ತಾಯಿತು. ರೋಗಿಯ ಪಕ್ಕದಲ್ಲಿದ್ದ ನಮ್ಮ ಹಳ್ಳಿ ಜನರನ್ನ ಕಂಡು ಅವರಿಗೆ ಅಸಹ್ಯ ಬಂದಿರಬೇಕು ಪಾಪ, ಆದರೆ ಅವರು ಬಂದ ಪರಿಸರವನ್ನು ಮರೆತು ಬಿಟ್ಟಿದ್ದರು. ಹಿಂದುಳಿದ ಜಾತಿಗೆ ಸೇರಿದವರು ಮೇಲೆ ಬರಲಿಕ್ಕೆ ಯಾವುದೇ ಸೌಲಭ್ಯ ಕೇಳಲಿ, ತಪ್ಪಿಲ್ಲ. ಅದನ್ನು ಉಪಯೋಗಿಸಿಕೊಂಡು, ಮೇಲೆ ಬಂದ ಮೇಲೆ ತಮ್ಮ ಹಳೇ ಪರಿಸರಾನ ಮರೆಯದೆ ಒಟ್ಟು ಹಿತಕ್ಕೆ ದುಡೀಬೇಕು. ಹಸು ಏನೆಲ್ಲ ತಿಂದರೂ ನಮಗೆ ಕ್ಷೀರ ತಾನೇ ಕೊಡೋದು 'ಇಂಥ ಡಾಕ್ಟರ್‌ಗಳಿಗೆ ಪರಮಾತ್ಮನೇ ಬುದ್ಧಿ ಕೊಡಬೇಕು ಇಲ್ಲ ಜನ ಕಲಿಸಬೇಕು.' ಎಂದುಕೊಂಡೆ. ನಾನು ಹೇಳಬೇಕೆಂದುಕೊಂಡಿದ್ದ ನನ್ನ ಮಗಳ ಸಾವನ್ನ ನಾನಿದ್ದರೂ ನಿಲ್ಲಿಸಕ್ಕಾಗ್ತಿರಲಿಲ್ಲ. ಏಕೆಂದರೆ ನಾನಿದ್ದರೂ ನಮ್ಮ ಭಾವ ಸತ್ತೇ ಸತ್ತರು.

ನಾನು ತುಮಕೂರಿಗೆ ಬಂದಿದ್ದೇ ನಮ್ಮ ಹುಡುಗರಿಗೊಂದು ಹಾಸ್ಟೆಲ್ ನಿರ್ಮಿಸೋಣ ಎಂದು. ಇಲ್ಲಿಗೆ ಬರಮಾಡಿಕೊಂಡ ಹಿರಿಯರಾದ ಬೀರಪ್ಪನವರ ಹೃದಯದಲ್ಲೂ ಇದೇ ಆಸೆ ಇತ್ತು, ನಮ್ಮ ಜನಾಂಗದ ಗುರುಗಳಾದ ಸಿರಿಯಪ್ಪ ಒಡೆಯರ್ ಜೊತೆ ಸೇರಿ ಸೋಮೇಶ್ವರ ಬಡಾವಣೆಯಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ಹಾಸ್ಟೆಲ್ ಪ್ರಾರಂಭ ಮಾಡಿದ್ದೆವು. ಇದೇ ಸಂದರ್ಭದಲ್ಲಿ ಲಾಯರ್ ಹನುಮಂತಪ್ಪನವರು ನಗರಸಭಾಧ್ಯಕ್ಷರಾಗಿದ್ದರು. ಕಟ್ಟಡದ ಸಹಾಯಾರ್ಥಕ್ಕಾಗಿ ಮಂತ್ರಿ ನಾಗಣ್ಣಗೌಡರ ಅಧ್ಯಕ್ಷತೆಯಲ್ಲಿ ಟಿಪ್ಪುಸುಲ್ತಾನ್ ನಾಟಕ ಆಡಿಸಿದರು. ಖರ್ಚು ವೆಚ್ಚ ಎಲ್ಲ ಕಳೆದು 550 ಉಳೀತು. ನಾನು

ಸರ್ಕಾರಿ ನೌಕರನಾದ್ದರಿಂದ ನೇರವಾಗಿ ಭಾಗವಹಿಸದೆ ತೆರೆಯ ಮರೆಯಲ್ಲಿ ಉಳಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಡ್ವೋಕೇಟ್ ಎ.ಬಿ.ಮರಿಯಪ್ಪನೋರ ಅಧ್ಯಕ್ಷತೆಯಲ್ಲಿ ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘ ಆರಂಭಿಸಲು ನಿರ್ಧರಿಸಿದೆ, ಗುರು ಸಿರಿಯಪ್ಪ ಒಡೆಯರು ಅದರ ಪ್ರಥಮ ಗೌರವ ಕಾರ್ಯದರ್ಶಿ ಆಗಿದ್ದರು. ಶ್ರೀಯುತ ಮರಿಯಪ್ಪನವರು ಬೆಂಗಳೂರಿನಲ್ಲಿ ವಾಸವಾಗಿದ್ದರು. ಅಧಿಕೃತವಾಗಲ್ಲದಿದ್ದರೂ ಸಂಘದ ಎಲ್ಲ ಹೊಣೆ ಹೊತ್ತು ಕೆಲಸ ನಿರ್ವಹಿಸುತ್ತಿದ್ದ. ಸಿರಿಯಪ್ಪ ಒಡೆಯರ್ ನಾನೂ ಬೇರೆಯವರೊಂದಿಗೆ ಪಾವಗಡ, ಶಿರಾ, ಚಿಕ್ಕ ನಾಯಕನಹಳ್ಳಿ ಮುಂತಾದೆಡೆ ಸುತ್ತಿ ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದ ಬಗೆಗೆ ನಮ್ಮವರಿಗೆ ತಿಳಿಯ ಹೇಳಿದೆವು. ಇಷ್ಟು ಹೊತ್ತಿಗೆ ಆಗಲೇ ಅಂದರೆ, ದಿ|| ಬಿ.ಮಲ್ಲಪ್ಪನವರು ನಗರಸಭೆಯ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ, ತುಮಕೂರಿನಲ್ಲಿ ಪ್ರತಿಯೊಂದು ಕೋಮಿಗೂ ವಸತಿಗೃಹ ಸ್ಥಾಪಿಸಲು ಆಯಕಟ್ಟಿನ ಸ್ಥಳಗಳಲ್ಲಿ ನಿವೇಶನ ಕೊಡಲಾಗಿತ್ತು. ನಮಗೆ ಬಿ.ಹೆಚ್.ರಸ್ತೆಯಲ್ಲಿ ಮಂಜೂರಾಗಿತ್ತು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದಾಗಲೂ ಚೆನ್ನಾದ ಹೆಸರು ಪಡೆದಿತ್ತು. ಮಹಾರಾಷ್ಟ್ರ ಕೋಮಿನವರ ದಿವಂಗತ ವೆಂಕಟರಾವ್ ಅವರ ಕಟ್ಟಡ ಅರ್ಧವಾಗಿ ನಿಂತಿತ್ತು. ಫ್ಲೋರಿಂಗು, ಗಾರೆ ಇರಲಿಲ್ಲ. ಸರಿಯಾದ ಬಾಗಿಲುಗಳಿರಲಿಲ್ಲ. 500 ರೂ. ಬಾಡಿಗೆ ಗೊತ್ತುಮಾಡಿ ನಮ್ಮ ವಿದ್ಯಾರ್ಥಿನಿಲಯವನ್ನು ಅಲ್ಲಿಗೆ ಸ್ಥಳಾಂತರಿಸಿದೆವು. ತಿಂಗಳ-ತಿಂಗಳ ಬಾಡಿಗೆ ಹಿಡಿದು ಅರ್ಧಾಂತದ ಈ ಕಟ್ಟಡವನ್ನು ಏಷ್ಟೋ ಪೂರೈಸಿದೆವು. ಇದರ ಪಕ್ಕದ ನಿವೇಶನದಲ್ಲಿ ನಮ್ಮ ಕಟ್ಟಡ ತಲೆ ಎತ್ತಬೇಕಾಗಿತ್ತು. ಏನಾದರೂ ಮಾಡಿ ಈ ಕಟ್ಟಡವೊಂದನ್ನು ನನ್ನ ಜೀವಿತದ ಅವಧಿಯಲ್ಲಿ ಮುಗಿಸಬೇಕೆಂದುಕೊಂಡು ಭಿಕ್ಷಾ ಕರಡಿಗೆ ಹಿಡಿದುಕೊಂಡು ಹೊರಟೆ. ಎಲ್ಲೆಲ್ಲಿ ನಮ್ಮವರು-ಹಿತೈಶಿಗಳು, ದಾನಿಗಳಿದ್ದಾರೋ ಅವರು ಮನೆಗೆ ಲಗ್ಗೆ ಹಾಕಿದೆ. ಅವರುಗಳ ಕೈಲಿ ಕೆಲವೊಮ್ಮೆ 'ಛೀ ಥೂ' ಎನ್ನಿಸಿಕೊಂಡೆ. ಕೆಲವರು ಕಂಬಳಿ ಕೊಟ್ಟರು, ಕಾಳು ಕೊಟ್ಟರು. ಇಟ್ಟಿಗೆ ಕೊಟ್ಟರು, ಕಲ್ಲು ಕೊಟ್ಟರು, ಬೇಡ ಅನ್ಲಿಲ್ಲ. ಇವರ ಕಷ್ಟ ಎಂಥಹುದೆಂದು ಅವರು ಆಶ್ಚರ್ಯ ಪಟ್ಟರು. ನಾವು ಹಿಂದೆ ಸರಿಯಲಿಲ್ಲ. ಇಂಥ ಸಂದರ್ಭದಲ್ಲಿ ಶಿರಾದಲ್ಲಾದ ಅನುಭವ ಹೇಳಿದ್ರೆ ಸೊಗಸೆನಿಸುತ್ತದೆ. ಕೆಲವು ವ್ಯಕ್ತಿಗಳು ತಮ್ಮ ಮನದಲ್ಲಿದ್ದ ಆಸೇನ ಯಾರಾದರೂ ನೆರವೇರಿಸದಿದ್ರೆ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆಂದು ನೋಡಬಹುದಷ್ಟೆ. ಶಿರಾದಲ್ಲಿನ ಸೂಗೂರಜ್ಜನೋರು

ನಮ್ಮವರಲ್ಲಿ ಸ್ವಲ್ಪ ಉಳ್ಳವರೆನ್ನಬೇಕು. ನನಗೆ ಅವರನ್ನ ಶಿರಾದ ಕಾಂಗ್ರೆಸ್ ಎಸ್.ಸಿದ್ದಪ್ಪನವರು ಪರಿಚಯ ಮಾಡಿಸಿದರು. ನಮ್ಮ ಸಂಘದ ಧ್ಯೇಯೋದ್ದೇಶಗಳನ್ನೆಲ್ಲ ತಿಳಿಸಿ. ''ಈಗ ನಾವು ಬಾಡಿಗೆ ಕಟ್ಟಡದಲ್ಲಿ ಹಾಸ್ಟೆಲ್ ನಡೆಸುತ್ತಿದ್ದೇವೆ. ಇದು ಇಷ್ಟಕ್ಕೇ ನಿಲ್ಲೋದಿಲ್ಲ. ಸ್ವಂತ ಕಟ್ಟಡ ಕಟ್ಟಿ ಎಲ್ಲಾ ಹಿಂದುಳಿದ ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನಕಾರಿ ಮಾಡ್ತೀವಿ'' ಅಂದೆ. ಜಗಲೀಲೆ ನಿಂತಿದ್ದ ಅವರು ನಮ್ಮನ್ನು ಕೂತುಕೊಳ್ಳಿ ಅನ್ನಲಿಲ್ಲ. ನಾವೇ ಕುಳಿತೆವು. ಅವರು ''ನೋಡಿಸ್ವಾಮಿ, ಹಿಂದಿನೋರೆಲ್ಲ ತಕ್ಕೊಂಡು ಹಿಂಗೇ ಅಂದು ಹೋದ್ರು'' ಅಂತಿರುವಾಗಲೇ ನಾನು ಮಧ್ಯ ಮಾತನಾಡಲು ಹೋದೆ. ಆಗ ಅವರು ಏನೋ ನಿರ್ಧರಿಸಿಕೊಂಡಂತೆ, 'ಕೋಣೆಯಲ್ಲಿದ್ದ ಮಗನನ್ನ ಕರೆದು ತಿಜೋರಿಯಿಂದ 500 ತಾರಲಾ' ಎಂದು ಹೇಳಿ ಆ ಹಣಾನ ನಮ್ಮ ಕೈಲಿ ಇಡುತ್ತಾ, ನೋಡಿ ಸ್ವಾಮಿ ಇಲ್ಲಿ ಕುಂತಿದೀರಾ ಮುಂದಿನ ಸಾರ್ತಿ ಬರಬೇಕಾದರೆ ಹಜಾರದಾಗ ಕಂಬಳಿ ಮೇಲೆ ಕುತ್ಕೋಬೇಕು-ಮರೀಬೇಡಿ' ಎಂದ್ರು. ಮುಂದಿನ ಸಾರಿ ಅವರ ಹತ್ತಿರಕ್ಕೆ ಹೋಗೋ ಅಷ್ಟೊತ್ತಿಗೆ ಪ್ರಗತಿಯಾಗಿತ್ತು. ಹಾಲು ಕೊಟ್ಟು 750 ರೂ. ಕೊಟ್ಟರು ಆ ಪುಣ್ಯಾತ್ಮ. ಒಟ್ಟಿನಲ್ಲಿ, ನಮ್ಮ ಜನಾಂಗದಲ್ಲಿ ಹಣ ಸಂಗ್ರಹಿಸಬೇಕಾದರೆ ಬಹಳ ಕಷ್ಟ. ವ್ಯಾಪಾರವನ್ನಾಗಲಿ ಅಥವಾ ವ್ಯವಸಾಯವನ್ನಾಗಲೀ ದೊಡ್ಡ ಪ್ರಮಾಣದಲ್ಲಿ ಮಾಡೋದಿಲ್ಲ. ಬಡತನ, ಅದಕ್ಕಿಂತ ಹೆಚ್ಚಾಗಿ ಅಜ್ಞಾನ ಬಳುವಳಿಯಾಗಿ ಅವರಿಗೆ ಬಂದವುಗಳು. ಕೆಲವು ಜನಾಂಗದಲ್ಲಿ ಬಡತನವಿದ್ದರೂ ಇಂಥ ಕಾರ್ಯದ ಉದ್ದೇಶದ ಹಿನ್ನೆಲೆ ಅರಿತು ಮುಂದಾಳುಗಳಿಗೆ ಬೆಂಬಲ ಕೊಟ್ಟು ನೈತಿಕ ಶಕ್ತಿ ತುಂಬುವರು. ಇನ್ನೂ ವಾಣಿಜ್ಯೋದ್ಯಮ ಪಂಗಡದವರಿಗೆ ವರ್ತಕ ಸಮೂಹ ಬೆನ್ನೆಲುಬಾಗಿ ನಿಲ್ಲುವುದು ಗೊತ್ತೇ ಇದೆ, ವ್ಯವಸಾಯ ಆಸರಸೆಯಾಗಿಟ್ಟುಕೊಂಡ ಪ್ರಮುಖ ಜನಾಂಗದವರ ಮುಖಂಡರುಗಳ ನೆರವಿನಿಂದ ಇದನ್ನ ಮಾಡುವರು. ಕಂಬಳಿ ನೇಯೋದು. ಕೂಲಿನಾಲಿಯಿಂದ ತನ್ನ ಸಂಸಾರ ಸಾಗಿಸೋದೆ ಕಷ್ಟವಾಗಿರಬೇಕಾದರೆ ಇಂಥಾದ್ದಕ್ಕೆಲ್ಲ ನಮ್ಮವರು ಎಲ್ಲಿ ಹೊಂದಿಸ್ತಾರೆ. ಆದರ ನಮ್ಮವರು ಕೃಪಣತನ ತೋರಲಿಲ್ಲ. ಮುಂದೆ ನಿಂತವರನ್ನ ಕೈ ಬಿಡಲಿಲ್ಲ. ಆತುಕೊಂಡರು. 9-5-1959ರಲ್ಲಿ ಆಗಿನ ಹಣಕಾಸಿನ ಮಂತ್ರಿ ನಮ್ಮೆಲ್ಲರ ಭಾಗ್ಯದಾತರಾದ ಟಿ.ಮರಿಯಪ್ಪನೋರು, ಕೊಲ್ಲೂರು ಮಲ್ಲಪ್ಪನೋರ ಅಧ್ಯಕ್ಷತೆಯಲ್ಲಿ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದರು. ಬರಗೂರು ಮೇಸ್ಟರು ದಿವಂಗತ ನೀಲಪ್ಪನವರು

ಪಟ್ನಾಯಕನ ಹಳ್ಳಿ ಬೀರಲಿಂಗಣ್ಣನೋರು ವೀರಗಾನಹಳ್ಳಿ ಎಲ್. ಚೌಡಪ್ಪನೋರು ಮೊದಮೊದಲಿಗೆ 1500 ರೂ.ಗಳನ್ನ ಕೊಡುವುದರ ಮೂಲಕ ನಮ್ಮನ್ನು ಆಶೀರ್ವದಿಸಿದರು. ಮೊದಲಿಗೆ ಒಂದು ಭರ್ಜರಿ ಬಾವಿ ತೋಡಿಸಿದೆವು. ಸಿರಿಯಪ್ಪ ಒಡೆಯರು ಹಗಲಿರುಳು ಕಟ್ಟಡದ ಉಸ್ತುವಾರಿ ನೋಡಿಕೊಂಡರು. ಸರ್ಕಾರದೋರು 75,000 ರೂ.ಗಳ ಸಹಾಯಧನ ನೀಡಿದರು. ಬಂದೋಬಸ್ತಾದ ಕಲ್ಲುಕಟ್ಟಡ. ಆಯ್ತು ಅನೇಕ ಜನ ಕಣ್ಣರಳಿಸಿ 'ಇದು ಇವರ ಕಟ್ಟಡವೇ' ಎನ್ನುವ ಹಾಗಿದೆ. ಮಣ್ಣು, ಕಲ್ಲು, ಇಟ್ಟಿಗೆಗಳೆಲ್ಲ ಜಡವಸ್ತುಗಳೆ, ಆದರೆ ತ್ಯಾಗ, ಪ್ರೀತಿ ಪ್ರೇಮಗಳ ಧಾರೆಯನ್ನೆರೆದು ಮನುಷ್ಯ ಅವನ್ನೆಲ್ಲ ಚಿನ್ಮಯ ಮೂರ್ತಿಗಳನ್ನಾಗಿ ಮಾಡುತ್ತಾನೆ. ಪಂಪನ ಬನವಾಸಿ, ಬಸವಣ್ಣನ ಕೂಡಲಸಂಗಮ, ಕನಕನ ಕಾಗಿನೆಲೆ, ವಿಶ್ವೇಶ್ವರಯ್ಯನವರ ಕನ್ನಂಬಾಡಿ ಇಂದು ಜಡ ವಸ್ತುಗಳಾಗುತ್ತವೆಯೆ? ನನ್ನವರ ಬೆವರು, ಆಸೆ, ಪ್ರೀತಿ, ಐಕ್ಯತೆಯ ಪ್ರತಿಬಿಂಬವಾಗಿರುವ ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘ ನನ್ನ ಪಾಲಿಗಂತೂ ತಾಯಿ ಮಡಿಲೆಂದೇ ಹೇಳಬೇಕು. ಎಲ್ಲರೂ ಅಂದುಕೊಂಡಿದ್ದರು ಇವರ ಜೀವಿತದಲ್ಲಿ ಆಗೋದಿಲ್ಲವೆಂದು. ನನ್ನ ಹಿರಿಯರ ಹರಕೆಯೋ, ನನ್ನ ಆಸೆ ನೆರವೇರಿ ನಾನೊಬ್ಬ ಮನುಷ್ಯನಾದೆ. ಹಿರಿಯರಿಗೆ ತೆತ್ತಿಗನಾದೆ.

ಮಧುಗಿರಿಯಲ್ಲಿದ್ದಾಗ ಆದಂತೆ ಇಲ್ಲೂ ಮೈಮೇಲೆ ಬೊಕ್ಕೆಗಳಾದವು. ಹೊಟ್ಟೆಯಲ್ಲಿ ಕಡಿತ, ಆಸ್ಪತ್ರೆಯ ಔಷಧೋಪಚಾರಗಳಿಗೆ ಅದು ಬಗ್ಗಲಿಲ್ಲ, ನನ್ನಾಕೆ 'ಶಿವಗಂಗೆಗೆ ಹೋಗೋಣ' ಎಂದಳು. ಸರಿ - ಮಕ್ಕಳ ಸಮೇತ ಹೊರಟೆ. ಗುರುಗಳ ಆಶ್ರಮದಲ್ಲಿ ತಂಗಿದ್ದು, ಬೆಳಿಗ್ಗೆ ನಾನೂ ಮಕ್ಕಳು - ರಾಜ, ಶಂಕರ ಬೆಟ್ಟ ಹತ್ತಿರ ಇಳಿದೆವು. ಕಲ್ಯಾಣಿಯ ಸ್ನಾನ, ಬುಡದಲ್ಲಿ ಮಳೆಗಾಲದ ಮಳೆಯಿಂದ ಒದ್ದೆಯಾದ ಬಟ್ಟೆಗಳು ಬೆಟ್ಟದ ನೆತ್ತಿಗೆ ಹೋಗುವಷ್ಟರಲ್ಲಿ ಆರಿದವು. ಬೆಟ್ಟದ ಮೇಲಿನ ಕುಂಬಿ ಹತ್ತಿರ ನಿಂತು ಈಕಡೆ ಬೆಂಗಳೂರು, ಆಕಡೆ ತುಮಕೂರು, ಮಾಗಡಿಯನ್ನು ನೋಡ್ತಾ ಉಲ್ಲಾಸಗೊಂಡೆವು. ಇತ್ತೀಚೆಗೆ ನನ್ನ ಮಗ ರಾಜ 'ತನ್ನ ಗಾಡಿನ, ಸರ್ವೀಸಿಗೆ ಬಿಡಬೇಕು' ಅಂತಿದ್ದ. ಹಾಗಾದರೆ ಮನುಷ್ಯ ಎಂಬ ಗಾಡೀನ ಎಲ್ಲಿ ಸರ್ವೀಸಿಗೆ ಬಿಡೋದು? ಆಗ ನನಗೆ ಶಿವಗಂಗೆಯಲ್ಲಿ ಹೊಳೀತು, ಸುಳಿಗಾಳಿ, ಎಳೆಬಿಸಿಲು, ಸುರಸುರನೆ ಹೊಯ್ಯುವ ಸೋನೆ ಮಳೆಗಳ ಉಗ್ರಾಣ ಪ್ರಕೃತಿಯ ಕಾರ್ಯಾಗಾರಕ್ಕೆ ಸಹಜ ಚಿಕಿತ್ಸೆಗಾಗಿ ಬಿಟ್ಟರೆ ಸಾಕಲ್ಲವೆ ಎಂದು.

# ತುಮಕೂರು-2

## (ಅಸಿಸ್ಟೆಂಟ್ ಕಮೀಷನರ್)

''ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ'' ಎನ್ನುತ್ತಾರೆ-ದೇವರ ದಾಸಿಮಯ್ಯನವರು. ಆದರೆ ಇಳೆ ನನ್ನ ಹತ್ತಿರಾನೇ ಇರಬೇಕೆಂದು ಕೆಲವರು ವಾದಹೂಡುವರು, ಯುದ್ಧಮಾಡುವರು. ಅದನ್ನು ಹಂಚಿಕೊಂಡು ಬೆಳೆ ಬೆಳೆದು ಎರಡೂ ''ಶಿವನ ದಾನ'' ಅನ್ನುವುದಿಲ್ಲ. ಹಾಗೆ ಅನ್ನದಿದ್ದಾಗ ಬಲವಂತವಾಗಿ ಅನ್ನಿಸಬೇಕಾಗುತ್ತದೆ. ಇಳೆಯನ್ನು ಇಲ್ಲದವರಿಗೆ ಹಂಚ ಬೇಕಾಗುತ್ತದೆ. ಅಂತಹ ಕೆಲಸ ಮಾಡೋ ಹೊಣೆಗಾರಿಕೆ ನನಗೀ ಸಂದರ್ಭದಲ್ಲಿ ಸಿಕ್ಕಿತು. ಗ್ರಾಮಾಂತರ ಕೈಗಾರಿಕಾ ಇಲಾಖೆ ಸೂಪರಿಂಟೆಂಡೆಂಟ್ ನಂತರ ನನಗೆ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ಬಡ್ತಿ ಸಿಕ್ಕಿತು. ಮೊದಲಿಗೆ ಚಿಕ್ಕಮಗಳೂರು ಜಿಲ್ಲೆಗೇ ಹಾಕಿದರು. ಆಮೇಲೆ ನಮ್ಮ ಜಿಲ್ಲೆಯ ನಾಯಕರುಗಳ ಅಹವಾಲುಗಳ ಮೇಲೆ ದರಖಾಸ್ತು ವಿಲೇವಾರಿ ಅಸಿಸ್ಟೆಂಟ್ ಕಮೀಷನರಾಗಿ ನಮ್ಮ ಜಿಲ್ಲೆಗೆ ಹಾಕಿದರು. ಮನುಷ್ಯ ಧರ್ಮವಾಗಿ ಲೋಕಹಿತವನ್ನು ಮರೆಯದೆ, ಮಾಡಬೇಕಾದ ಕೆಲಸವೇ ಕರ್ತವ್ಯ. ಇದನ್ನೇ ಬಸವಣ್ಣನವರು 'ಕಾಯಕವೇ ಕೈಲಾಸ' ಅಂದಿದ್ದಾರೆ. ಧೀರ ನೆಲ್ಸನ್ 'England Expects every man to do his duty' ಎನ್ನುತ್ತಾ ಒಂದು ದೇಶದ ಅಭಿವೃದ್ಧಿಯ ರಹಸ್ಯವನ್ನು ಹೊರ ಹೊಮ್ಮಿಸುತ್ತಾನೆ. ನಾನೇಕೆ ಈ ಮಾತು ಹೇಳುವೆನೆಂದರೆ ಜಮೀನು ಹಂಚಿಕೆ ಭೂ ಸಂಧಾರಣೆ ಮುಂತಾದ ವಿಚಾರಗಳು ಬೇಗ ಬೇಗ ಆಗಬೇಕು. ಸಾಮಾನ್ಯರು ಅದರ ಪ್ರಯೋಜನ ಪಡೆಯಬೇಕು. ಸರ್ಕಾರ ವ್ಯವಸಾಯ ಯೋಗ್ಯವಾದ ಭೂಮೀನ ರೈತರ ಸುಬರ್ಧಿಗೆ ಕೊಡಬೇಕು. ಅದು ಪಾಳು ಬಿದ್ದಿರಬಾರದು. ಅದನ್ನೆಲ್ಲ ರೈತ ಮಕ್ಕಳಿಗೆ ಹಂಚಿದರೆ ಜನಜೀವನ ಮಟ್ಟ ಎಷ್ಟೋ ಸುಧಾರಿಸುತ್ತದೆ ಎಂದು ಅಂದಿನ ಕಂದಾಯ ಮಂತ್ರಿ ಕಡಿದಾಳು ಮಂಜಪ್ಪನವರು ಭಾವಿಸಿದ್ದರು. ಇದಕ್ಕಾಗಿ ವಿಶೇಷ ಯೋಜನೆಯೊಂದನ್ನು ತಯಾರಿಸಿ ಸಚಿವಸಂಪುಟದ ಒಪ್ಪಿಗೆ ಪಡೆದರು. ಇತರೆ ಕೆಲಸದ ನಡುವೆ ತಾಲ್ಲೂಕು ಕಛೇರಿಗೆ ಇದನ್ನು ವಹಿಸಿದರೆ ಇದರ ವಿಲೇವಾರಿಗೆ ಹತ್ತಾರು ವರ್ಷ ಬೇಕಾಗುತ್ತದೆ ಅಂತ ಭಾವಿಸಿದ ಕಡಿದಾಳ್ ಮಂಜಪ್ಪನವರು ಎರಡೆರಡು ಜಿಲ್ಲೆನ ಸೇರಿಸಿ ಒಂದೊಂದು ಯೂನಿಟ್ ಮಾಡಿ ಅದಕ್ಕೊಬ್ಬ ಅಸಿಸ್ಟೆಂಟ್ ಕಮೀಷನರನ್ನು ನೇಮಿಸಿದರು. ಅವರಿಗೆ ಬೇಕಾದ ಸಿಬ್ಬಂದಿಯನ್ನು ನೇಮಿಸಿ 'ತುರ್ತಾಗಿ ಕೆಲಸ

ಮಾಡಿ ಅಂದರು. ನಾನು ಚಿತ್ರದುರ್ಗ, ತುಮಕೂರು ಯೂನಿಟ್‌ಗೆ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಕಗೊಂಡೆ. ಜಮೀನು ವಿಲೇ ಮಾಡಲು ಸರ್ಕಾರದವರು ಅನೇಕ ವಿಧೇಯಕಗಳನ್ನು ಸೂಚಿಸಿದ್ದರು, ಹರಿಜನ-ಗಿರಿಜನ, ಸೈನ್ಯಗಳಲ್ಲಿ ನಿವೃತ್ತಿಯಾದವರಿಗೆ, ರಾಜಕೀಯ ಸಂತ್ರಸ್ತರಿಗೆ ಅಗ್ರಸ್ಥಾನ ಕೊಡಬೇಕಾಗಿತ್ತು. ಇನ್ನುಳಿಕೆ ಜಮೀನರನ್ನು ಭೂರಹಿತರಾದವರಿಗೆ ಆದ್ಯತೆ ಮೇರೆಗೆ ಹಂಚಬೇಕಾಗಿತ್ತು. ಅಸಿಸ್ಟತೆಂಟ್ ಕಮೀಷನರು ಪ್ರತಿಯೊಂದು ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ನಡೆಸಿ ಜಮೀನು ಹಂಚ ಬೇಕಾಗಿತ್ತು. ನಾನು ದರಖಾಸ್ತು ಅರ್ಜಿಗಳನ್ನು ಮೊದಲೇ ಪಡೆಯುತ್ತಿದ್ದೆ. ಎಲ್ಲ ವಿವರಗಳನ್ನು ತಾಲ್ಲೂಕು ಆಫೀಸು ದಾಖಲೆಯೊಂದಿಗೆ ತಾಳೆ ನೋಡಿ ಅನಂತರ ಆಯಾ ಗ್ರಾಮಗಳ ದರಖಾಸ್ತು ಜಮೀನುಗಳನ್ನು ಅಜಮಾಯಿಷಿ ಮಾಡಿ, ಊರೂರಲ್ಲಿ 'ಟಾಂ ಟಾಂ' ಹೊಡಿಸಿ ಜನರನ್ನು ಒಂದೆಡೆ ಕಲೆ ಹಾಕಿ ದರಖಾಸ್ತುದಾರರ ಅರ್ಹತೆ-ಅನರ್ಹತೆಯ ಬಗ್ಗೆ ಸಾಬೀತು ಮಾಡಿಕೊಂಡ ನಂತರವೇ ಮಂಜೂರು ಮಾಡುತ್ತಿದ್ದೆ. ಮಂಜೂರಾದ ಜಮೀನುಗಳನ್ನು ನನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಮೋಜಿಣಿದಾರರುಗಳು ಆಗಲೇ ಅಳತೆ ಮಾಡಿ ಕೊಡುತ್ತಿದ್ದರು. ಅಳತೆ ಮಾಡಿದೊಡನೆಯೇ ಸಾಗುವಳಿ ಚೀಟಿಗಳನ್ನು ತಕ್ಷಣವೇ ಕೊಡುವ ವ್ಯವಸ್ಥೆ ಮಾಡಿದ್ದೆ. ಹೀಗೆ ನಾನು ಒಂದ್ಸಾರಿ ಅತ್ತ ಹೋದರೆ ಯಾವುದೂ ಬಾಕಿ ಉಳಿಯುತ್ತಿರಲಿಲ್ಲ. ಮತ್ತೆ ರೈತ ಯಾವುದಕ್ಕೂ ತಾಲ್ಲೂಕು ಆಫೀಸಿಗೆ ಯಾತ್ರೆ ಕೈಗೊಳ್ಳಬಾರದೆಂಬುದೇ ನನ್ನ ಉದ್ದೇಶ. ಇದರಿಂದ ನನ್ನ ಆಫೀಸಿನ ಗುಮಾಸ್ತರು ಮತ್ತೆ ಶೇಕದಾರರು ಇತರೆ ಸಿಬ್ಬಂದಿಯವರು ಮೋಜಿಣಿದಾರರು ನನಗೆ ಹಿಡಿ ಶಾಪ ಹಾಕಿರಬಹುದು. ಆದರೆ ನನಗೆ ಕೆಲಸ ಮಾಡಿದ ಸಂತೃಪ್ತಿ ದೊರಕುತ್ತಿತ್ತು. ಇದಕ್ಕಾಗಿ ನೇಮಕಕೊಂಡ ನನಗೆ ಪ್ರಾರಂಭದಲ್ಲಿ ವಾಹನ ಸೌಲಭ್ಯವೇನಿರಲಿಲ್ಲ. ಆದರೂ ಜಿಲ್ಲಾಧಿಕಾರಿಗಳು ಯಾವುದಾದರೊಂದು ವಾಹನ ಆಗಾಗ ಒದಗಿಸುತ್ತಿದ್ದರು. ಇಲ್ಲ ಬಸ್‌ನಲ್ಲಿ ಪ್ರಯಾಣ ಮಾಡುವುದಿದ್ದೇ ಇತ್ತು. ಈ ಸಂದರ್ಭದಲ್ಲಿ ನನಗಾದ ಅನುಭವಗಳು ಅಪರೂಪವೆನಿಸುವಂಥವು. ಹಿಂದೆ, ನನ್ನ ಮನೆಯದೇ ಹೆಚ್ಚಿನ ಬಡತನ ಅಂದುಕೊಂಡಿದ್ದ ನನಗೆ ನಮ್ಮ ಹಳ್ಳಿಯ ಹಟ್ಟಿಗಳಲ್ಲಿ ದರಿದ್ರ ದೇವತೆ ಠಿಕಾಣಿ ಹೂಡಿದ್ದಾಳೆನ್ನಿಸಿತು. ಒಂದು ದಿನ ಬಿ.ಡಿ.ಒ. ಅವರ ಜೀಪಿನಲ್ಲಿ ಗುಬ್ಬಿ ತಾಲ್ಲೂಕಿನ ಒಳ ಹಳ್ಳಿಗೆ ಹೋಗಿ ಮಾಹಿತಿ ಸಂಗ್ರಹಿಸಿದೆ. ಈಗ ಹರಿಜನ ಹಟ್ಟಿಗೆ ಹೋದರೆ ಯಾರೂ ಇರಲಿಕ್ಕಿಲ್ಲವೆಂದು ಸಂಜೆ ಏಳು ಗಂಟೆ ನಂತರ ಊರಿನ ಎಡಗೈ ಹರಿಜನರ ಕೇರಿಗೆ ಹೋದೆ. ಪಕ್ಕ ಪಕ್ಕದಲ್ಲೇ ಗುಡಿಸಲು. ನಡುವೆ ಇರುವುದನ್ನು ರಸ್ತೆ

ಅನ್ನೋದಕ್ಕಿಂತ ಸಂದಿ ಎಂದರೆ ಹೆಚ್ಚು ಸಮಂಜಸ ಎನ್ನಿಸಬಹುದು. ಬಚ್ಚಲು ನೀರು ಮನೆಯ ಮುಂದೆ ಹರಿದು ತಗ್ಗು ಪ್ರದೇಶದಲ್ಲಿ ನಿಂತಿದ್ದು, ಮೂಗಿಗೆ ಗಪ್ಪನೆ ವಾಸನೆ ಹೊಡಿಯುತ್ತಿತ್ತು, ಪ್ರತಿಯೊಂದು ಗುಡಿಸಲಿನ ಮೇಲೂ ನೆಲ್ಲು ಹುಲ್ಲು ಹೊದಿಸಿದ್ದರು. ಗುಡಿಸಲಿನ ಬಾಗಿಲು ತನ್ನ ಬಣ್ಣ ಕಳಕೊಂಡು ಕಪ್ಪಗೆ ತಿರುಗಿತ್ತು. ಒಂದು ಗುಡಿಸಲ ಹತ್ತಿರ ನಿಂತು ಕೂಗಿದರೆ 'ಯಾವನಯ್ಯ ಅವನು, ಈ ಹೊತ್ನಾಗೆ ಬಂದು ಕೂಗೋನು' ಎಂದು ವಟಗುಟ್ಟುತ್ತಾ ಬಾಗಿಲು ತೆಗೆಯುವ ಹೆಂಗಸಿನ ಅಸಹನೆಯ ಸ್ವರ, ''ಬಾಮ್ಮ ಇಲ್ಲಿ, ಯಜಮಾನನೆಲ್ಲಿ? ನಾವು ಜಮೀನು ಕೊಡೋಕೆ ಬಂದಿದ್ದೇವೆ'' ಎನ್ನುತ್ತಾ ಒಳಗೆ ನುಗ್ಗಿದೆ. ಗಂಡಸು ಕೋಡೊಲೆ ಮುಂದೆ ಮುದುರಿ ಕೂತು ಬೀಡಿ ಸೇದುತ್ತಿದ್ದ. ನನ್ನ ನೋಡಿ ಎದ್ದು ಬಂದು 'ಸ್ವಾಮಿ, ತಾವು ಇಷ್ಟು ದೂರ ಬರಬೇಕಾಗಿತ್ತ' ಎನ್ನುತ್ತ ಹರುಕು ಚಾಪೆಯೊಂದನ್ನ ಹಾಸಿದ. ನಾನು ನನ್ನ ದಫ್ತರುಗಳನ್ನೆಲ್ಲ ಅದರ ಮೇಲೆ ಒಗೆದು, ಹಾಗೇ ಕುಕ್ಕರಿಸಿದೆ, 15 x 20ರ ವಿಸ್ತೀರ್ಣದಲ್ಲಿ ಮೂಲೆಗೊಂದು ತಡಿಕೆ ನಿಲ್ಲಿಸಿಕೊಂಡು ಅಡುಗೆ ಕೋಣೆ ಮಾಡಿಕೊಂಡಿದ್ದರು. ಅಲ್ಲಿ ನಾಲ್ಕು ಸಾಲು ಮಡಿಕೆಗಳಿದ್ದವು. ಅವೇ ಅವರ ಬ್ಯಾಂಕು ಹಾಗೂ ಉಗ್ರಾಣ, ನನ್ನ ಮುಂದೆ ಗೊಂತಿಗೆ ಎರಡು ಮೇಕೆ ಮರಿಗಳನ್ನ ಬಿಗಿಯಲಾಗಿತ್ತು. ಪಕ್ಕದಲ್ಲೆ ರಾಗಿ ಬೀಸೋ ಕಲ್ಲು, ನನ್ನ ಚಾಪೆ ಪಕ್ಕದಲ್ಲಿದ್ದ ಜೋಳಿಗೆಯಲ್ಲಿ ಮಗುವೊಂದು ಮಲಗಿತ್ತು. ಮೇಲೆ ತಲೆಯೆತ್ತಿ ನೋಡಿದರೆ ಗರಿಯ ತುದಿಗೆ ಸಾಲಾಗಿ ಕುಂತ ಸೊಳ್ಳೆಗಳು. ಒಲೆಯ ಮೇಲೆ ದಾರಕ್ಕೆ ಕಟ್ಟಿ ನೇತು ಹಾಕಲ್ಪಟ್ಟ ಬಾಡಿನ ತುಂಡುಗಳು. ನನ್ನ ಮುಂದೆ ಎಣ್ಣೆ ಆಗಿ ಹೋಗಿ ಉರಿಯಲು ಹೋರಾಡುತ್ತಿದ್ದ ದೀಪದ ಬುಡ್ಡಿ. ಇವೆಲ್ಲಾ ನೋಡ್ತಾ ಕುಳಿತರೆ ಏನೂ ಬರೆಯಲು ಆಗದೆ ಮುಂದೆ ಕತ್ತಲಲ್ಲೇ ಕುಳಿತುಕೊಳ್ಳಬೇಕಾಗುವುದೆಂದು ಮನೆಯ ಯಜಮಾನನಿಂದ ನನಗೆ ಬೇಕಾದ ವಿವರಗಳನ್ನ ಪಡೆದು 'ಬೆಳಿಗ್ಗ ಬಂದು ಚಾವಡಿ ಹತ್ತಿರ ನನ್ನನ್ನು ಕಾಣು' ಎನ್ನುತ್ತಾ ರಿಕ್ತ ಮನಸ್ಸಿನಿಂದ ಹಿಂದಿರುಗಿದೆ. ಇದು ಕೇವಲ ಒಂದು ಗುಡಿಸಲಿನ ಕಥೆಯಲ್ಲ. ಇಡೀ ಹಟ್ಟಿಯ ಕಥೆಯಾಗಿತ್ತು.

ಸುಮಾರು ಎರಡು ತಿಂಗಳು ಗುಬ್ಬಿ ತಾಲ್ಲೂಕಿನ ಮಣ್ಣೇಮಾರಿ ಕಾವಲು ಜಮೀನು ಎರಡು ಸಾವಿರ ಎಕರೆಗಳಷ್ಟು, ಹಾಗಲವಾಡಿ, ಚೇಳೂರು, ಗುಬ್ಬಿ ಕಸಬಾ ಮುಂತಾದ ಕಡೆಯ ಇತರೆ ಜಮೀನು ವಿಲೇವಾರಿ ಮಾಡಿದ್ದಾಯಿತು. ಹೀಗೆ ಚೇಳೂರು ಹೋಬಳಿ ಒಂದು ಹಳ್ಳಿಯಲ್ಲಿ ಜಮೀನು ಹಂಚುತ್ತಾ

ಕುಳಿತಿರಬೇಕಾದರೆ ರಾತ್ರಿಯಾಯಿತು. ಗುಬ್ಬಿಗೆ ಹೋಗಲು ವಾಹನ ಸೌಕರ್ಯವಿಲ್ಲ. ಅದೇ ಹಳ್ಳಿಯಲ್ಲಿ ಉಳಿದೆ. ಊಟದ ವ್ಯವಸ್ಥೆ ಏನೋ ಆಯಿತು. ಊರು ಮುಂದೆ ಇದ್ದ ಈಶ್ವರನ ಗುಡಿಯೇ ನಮಗೆ ಮಲಗುವ ತಾಣವಾಯಿತು. ಈಚಲು ಚಾಪೆ ಮೇಲೆ ಗೌಡರು ಕಳುಹಿಸಿದ ತಟ್ಟನ್ನು ಹಾಸಿಕೊಂಡು ಮಲಗಲು ಪ್ರಾರಂಭಿಸಿದರೆ ವಿ.ಪಿ. ಜವಾನ ಗಾಬರಿಯಾಗಿ ''ಸಾಹೇಬ್ರು ಇಲ್ಲಿ ಮಲಕ್ಕೋಬಾರದು'' ಎಂದು ಕೀರಲು ಧ್ವನಿದಲ್ಲಿ ಹೇಳಿದ. ನನ್ನ ಜೊತೆಯಲ್ಲಿದ್ದ ಗುಮಾಸ್ತರಿಗೆ ಪ್ರಾಣ ಸಂಕಟ. ನನ್ನನ್ನು ಬಿಟ್ಟು ಗೌಡರ ಮನೆಗೆ ಹೋಗಲೊಲ್ಲರು. ಇಲ್ಲಿ ಮಲಗಲಾರರು. ಅವರ ಮೂಗುಬ್ಬಸವನ್ನು ಅರಿತು ಅವರನ್ನು ಜವಾನನ ಜೊತೆ ಕಳುಹಿಸಿ ಲಾಟೀನು ಸಣ್ಣಗೆ ಮಾಡಿ ಮಲಗಿದೆ. ನಂತರ, ಬೆಳಿಗ್ಗೆ ಬಸ್ಸಿನಲ್ಲಿ ಬರುತ್ತಿರಬೇಕಾದರೆ ನಮ್ಮ ಗುಮಾಸ್ತರು 'ಸರ್' ತಾವೊಬ್ಬರೇ ಹೇಗೆ ಮಲಗಿದ್ದಿರಿ, ಆ ಗುಡಿಯಲ್ಲಿ ಘಟ ಸರ್ಪಇದೆಯಂತೆ' ಎಂದು ಅದ್ಭುತವಾಗಿ ವರ್ಣಿಸಿದರು. ''ಅಯ್ಯೋ ಈ ನಾಗಪ್ಪನಿಗೆ ಶಿವನಗುಡಿಯಲ್ಲಿ ಏನು ಕೆಲಸ, ಕಲ್ಲು ಲಿಂಗವನ್ನು ಯಾರು ಹೊತ್ತು ಹೋಗುತ್ತಾರೆ? ನಾರಾಯಣನ ಗುಡಿಯಾದರೆ ಒಡವೆಯಾದರೂ ಸಿಕ್ಕಬಹುದು'' ಎಂದು ಹಾಸ್ಯವಾಗಿ ಹೇಳಿದೆ.

ಒಂದು ಸಾರಿ ಶಿರಾ ತಾಲ್ಲೂಕು, ದೊಡ್ಡ ಅಗ್ರಹಾರಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್, ಗುಮಾಸ್ತರು, ಸರ್ವೇಯರ್‌ರೊಡನೆ ಹೋದೆ. ಊರಿನ ಪಟೇಲರು - ಶ್ಯಾನುಭೋಗರೇ, ಭಾರೀ ಔತಣ ವ್ಯವಸ್ಥೆ ಮಾಡಿದ್ದರು. ದರಖಾಸ್ತು ಜಮೀನು ನೋಡಿ ಬಂದು ದರಖಾಸ್ತು ಅರ್ಜಿ ನೋಡಿದರೆ ಬಡವರ ಹಾಗೂ ನಿಮ್ನ ವರ್ಗದ ಒಂದು ಅರ್ಜಿಯೂ ಇಲ್ಲ. ರೆವಿನ್ಯೂ ಇನ್ಸ್‌ಪೆಕ್ಟರ್ ಹಾಗೂ ಪಟೇಲರ ಹಾವಭಾವ ನೋಡಿದರೆ ಏನೋ ಸಂಚು ನಡೆದಿದೆ ಎಂಬ ಸುಳಿವು ಸಿಕ್ಕಿತು. ಆಗ ಹಳ್ಳಿಯ ಸ್ಕೂಲಿನಲ್ಲಿ ಇಳಕೊಂಡಿದ್ದೆ, ಇದರ ತಳ ಶೋಧಿಸೋಣ ಅಂತ ನಿರ್ಧರಿಸಿದೆ, ಬೆಳಿಗ್ಗೆ ಮನೆಯಿಂದ ಹೋಗುತ್ತಾ ತಿಂದ ತಿಂಡಿನೇ ಸಾಕೆಂದು ಅವರುಗಳಿಗೆ 'ಇವತ್ತು ನನ್ನ ಉಪವಾಸ-ಏನೂ ಬೇಡ' ಅಂದುಬಿಟ್ಟೆ. ಅವರೆಷ್ಟೇ ಬಲವಂತ ಮಾಡಿದರೂ ಬಗ್ಗದೆ, ರಾತ್ರಿ ಕಳೆದು ಬೆಳಿಗ್ಗೆ ಸ್ವಲ್ಪ ಹಾಲು ಕುಡಿದು ಹರಿಜನ ಹಟ್ಟಿ ಹತ್ತಿರ ಹೋದೆ. ಅಲ್ಲಿನ ಹಟ್ಟಿ ಜನಗಳಿಗೆ ಜಮೀನು ಹಂಚುವ ವಿಚಾರವೇ ತಿಳಿದಿರಲಿಲ್ಲ. ಹಟ್ಟಿಯಲ್ಲಿ ಅವರನ್ನೆಲ್ಲ ಸೇರಿಸಿ, ಅವರಲ್ಲಿ ಸುತರಾಂ ಜಮೀನೇನೂ ಇಲ್ಲದವರಿಂದ ಅರ್ಜಿ ಬರೆಸಿಕೊಂಡು ಅಲ್ಲೇ ಜಮೀನು ಮಂಜೂರು ಮಾಡಿ ಸರ್ವೇಯರ್‌ರಿಂದ ಅಳತೆ ಮಾಡಿಸಿ, ಸಾಗುವಳಿ ಚೀಟಿ

ಕೊಡಿಸಿದೆ. ಅಷ್ಟು ಹೊತ್ತಿಗೆ ಸಂಜೆ ಆಗಿತ್ತು. ನನ್ನ ಹಸಿವು ಎಲ್ಲಿ ಓಡಿಹೋಗಿತ್ತೋ ನನಗೆ ಗೊತ್ತಿಲ್ಲ. ಕೊನೆಗೂ ಮೇಲಿನ ವರ್ಗದವರಿಗೆ ಜಮೀನು ಕೊಡದೆ ನ್ಯಾಯವಾಗಿ ದೊರಕಬೇಕಾದೋರಿಗೆ ಅದನ್ನ ಕೊಟ್ಟು ಸಂಜೆ ಸಿರಾಕ್ಕೆ ಹಿಂದಿರುಗಿದೆ. ಜಿಲ್ಲೆಯ ಇತರ ತಾಲ್ಲೂಕುಗಳಾದ ಪಾವಗಡ, ಕೊರಟಗೆರೆ, ಮಧುಗಿರಿ, ಕುಣಿಗಲ್ ಭಾಗಗಳಿಗೆ ಹೋಗಿ ತಾಲ್ಲೂಕು ಕಛೇರಿಯಲ್ಲಿ ಸುಸ್ತಿ ಬಿದ್ದಿದ್ದ ದರಖಾಸ್ತು ಅರ್ಜಿಗಳನ್ನ ವಿಲೇವಾರಿ ಮಾಡುತ್ತಿದ್ದೆ. ಕಂದಾಯ ಮಂತ್ರಿ ಕಡಿದಾಳು ಮಂಜಪ್ಪನವರು ತುಮಕೂರು ಮಾರ್ಗವಾಗಿ ಹೋಗುವಾಗ್ಗೆ, ಬರುವಾಗ್ಗೆ ದರಖಾಸ್ತು ವಿಲೇ ಆಗುತ್ತಿದ್ದುದರ ಬಗ್ಗೆ ವಿಚಾರಿಸುತ್ತಿದ್ದರು. ಟಿ.ಬಿ.ಯಲ್ಲಿ ಇಳಕೊಂಡು ನನಗೆ ಹೇಳಿ ಕಳುಹಿಸುತ್ತಿದ್ದರು. ಯಾವ ತಾಲ್ಲೂಕಿನಲ್ಲಿ ಏನೇನು ಪ್ರಗತಿ ಎಂಬುದನ್ನು ಪ್ರಶ್ನಿಸಿ ತಿಳಕೋತಿದ್ದರು. ಆ ಸಂಬಂಧ ಪಟ್ಟಂತೆ ನಾನೇನೇ ಕೇಳಲಿ, ಮೇಲೆ ಕೆಳಗೆ ನೋಡದೆ ಒಪ್ಪಿಗೆ ಕೊಟ್ಟು ಬಿಡುವರು, ತಾವು ಶಾಸನ ಸಭೇಲಿ ವ್ಯವಸಾಯಯೋಗ್ಯ ಭೂಮಿನ ಸಾಧ್ಯವಾದಷ್ಟು ಬೇಗ ನಿರ್ಗತಿಕ ರೈತರಿಗೆ ಕೊಡಿಸುವುದಾಗಿ ವಾಗ್ದಾನ ಮಾಡಿದ್ದರು. ಭೂಮಿ ಪಡೆದ ರೈತ ಅದನ್ನ ಚೆನ್ನಾಗಿ ಉತ್ತು ಬೇಸಾಯ ಮಾಡ್ತಾನೆಂದೂ ಇದರಿಂದ ರಾಜ್ಯದ ಆಹಾರ ಉತ್ಪಾದನೆಗೆ ಸಹಾಯಕವಾಗ್ತದೆಂದೂ, ಅವರು ಪದೇ ಪದೇ ಹೇಳ್ತಿದ್ರು. ಶಾಸನ ಸಭೆಗಳಲ್ಲಾಗಲೀ ಅಥವಾ ಜನತೆಗಾಗಲೀ ಕೊಟ್ಟ ಯಾವುದೇ ಆಶ್ವಾಸನೆಗಳನ್ನು ಹೀಗೆ ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತರಾಗುವ ಮಂತ್ರಿಗಳು ಎಷ್ಟು ಜನ ಇದ್ದಾರೆ? ಕಡಿದಾಳು ಮಂಜಪ್ಪನವರು ವಿಶೇಷ ಅರ್ಹತೆಯ ಅಪರೂಪದ ರಾಜಕಾರಣಿ. ಪ್ರಾಯಶಃ ಕಡಿದಾಳ್ ಅವರನ್ನ ಕೇವಲ ರಾಜಕಾರಣಿ ಅಂದರೆ ತಪ್ಪಾಗುವುದೇನೋ, ಅವರೊಬ್ಬ ಹಿರಿಯ ಮುತ್ಸದ್ದಿ, ಸಮಾಜ ಸೇವಕರು - ಅಪೂರ್ವ ನಾಯಕರು. ಕೇವಲ ರಾಜಕಾರಣದಲ್ಲಿ ಮಾತ್ರ ಆಸಕ್ತರಾಗದೆ ಸಾಹಿತ್ಯದ ಹಾಗೂ ಸಾಮಾಜಿಕ ಬದಲಾವಣೆ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕಡಿದಾಳ್ ಅವರು ರೆವಿನ್ಯೂ ಇಲಾಖೆಯನ್ನು ಪುನರ್‌ರಚಿಸಿದರು. ಗ್ರಾಮದಲ್ಲಿದ್ದ ಪಟ್ಟಭದ್ರ ಹಿತಾಸಕ್ತರ ಪ್ರಭಾವವನ್ನು ಕಡಿಮೆ ಮಾಡಿ, ಎಲ್ಲರಿಗೂ ಸಮಾನ ಅವಕಾಶ ದೊರೆಯುವಂತೆ ಮಾಡಲು ಹೆಣಗಿದರು. ರಾಜಕಾರಣದಿಂದ ನಿವೃತ್ತರಾದ ಮೇಲೂ ಅಭಾವ ವೈರಾಗ್ಯವನ್ನು ತಾಳಿ, ಸನ್ಯಾಸ ಸ್ವೀಕರಿಸಿದವರಲ್ಲ. ತತ್ಸಂಬಂಧ ಹೋರಾಟದ ಮುಂಚೂಣಿಯಲ್ಲಿರುವರು. ಜನತೆಯ ಬದುಕನ್ನು ಸಮರ್ಪಕ ದಾರೀಲಿ ನಡೆಸಬೇಕೆಂಬ ಹಂಬಲವುಳ್ಳ ಚಿಂತಕರಾಗಿಯೇ ಅವರುಳಿದಿದ್ದಾರೆ. ಕಡಿದಾಳ್ ಅವರ ಪ್ರಾಮಾಣಿಕತೆ,

ಸೇವಾನಿಸ್ಪೃಹತೆ, ದಕ್ಷತೆಯ ಬಗ್ಗೆ ನಾಡಿನ ಪ್ರಬುದ್ಧ ಜನತೆಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಒಂದು ವಿಚಾರ ಇಲ್ಲಿ ಉಲ್ಲೇಖಾರ್ಹ ಎನಿಸುತ್ತದೆ. ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದವರು, ಅದರಲ್ಲೂ ಕಂದಾಯ ಮಂತ್ರಿಗಳಾಗಿದ್ದವರು. ಸ್ವಲ್ಪಕಾಲ ಮುಖ್ಯಮಂತ್ರಿಗಳಾಗಿದ್ದವರು, ರಾಜಕಾರಣದಿಂದ ನಿವೃತ್ತರಾದ ಮೇಲೆ ಜೀವನ ನಿರ್ವಹಣೆಗೆ ಈಗಲೂ ಕೋರ್ಟಿಗೆ ಹೋಗುತ್ತಿದ್ದಾರೆಂದರೆ ಅವರ ವ್ಯಕ್ತಿತ್ವದ ಬಗ್ಗೆ ಪ್ರತ್ಯೇಕ ವ್ಯಾಖ್ಯಾನ ಬೇಕೆ?

ಗುಬ್ಬಿ ತಾಲ್ಲೂಕಿನಲ್ಲಿ ಇನ್ನೂ ಕ್ಯಾಂಪ್ ಮಾಡಿದ್ದೆ. ವಿಲೇವಾರಿ ಆಗಬೇಕಾದ ದರಖಾಸ್ತು ಅರ್ಜಿಗಳಿದ್ದವು. ಇದೇ ಸಂದರ್ಭದಲ್ಲಿ ನಿಟ್ಟೂರಿನಲ್ಲಿ ಹರಿಜನ ಸಮ್ಮೇಳನವೊಂದು ಜರುಗಲಿತ್ತು, ಆ ಸಮ್ಮೇಳನವನ್ನು ಅಂದಿನ ಕ್ಯಾಬಿನೆಟ್ ದರ್ಜೆಯ ಮಂತ್ರಿ ಎನ್..ರಾಚಯ್ಯನವರು ಉದ್ಘಾಟಿಸಲಿದ್ದರು. ರಾಜ್ಯಸಚಿವರಾದ ಬಿ.ಬಸವಲಿಂಗಪ್ಪನವರು ಅಧ್ಯಕ್ಷತೆ ವಹಿಸಲಿದ್ದರು. ಜಿಲ್ಲಾಧಿಕಾರಿ ನಜೀರುದ್ದೀನ್ ಅಹಮದ್ ಅವರು ನನ್ನನ್ನು ಕರೆದು 'ನೋಡಿ ಮಲ್ಲಪ್ಪನೋರೆ, ಕಂದಾಯ ಮಂತ್ರಿಗಳು ತುಮಕೂರು ನಗರಕ್ಕೆ ಇವತ್ತು ಬರ್ತಾರೆ, ನಾನು ಇಲ್ಲೇ ಇರಬೇಕು ನೀವು ಆ ಸಮ್ಮೇಳನಕ್ಕೆ ಹೋಗ್ಬಿಡಿ'' ಎಂದರು, 'ಸರಿ' ಎಂದು ಸಮ್ಮೇಳನಕ್ಕೆ ಹೋದೆ. ಸಮಯಕ್ಕೆ ಸರಿಯಾಗಿ ಸಚಿವದ್ವಯರು ಆಗಮಿಸಿದರು, ಸ್ವಾಗತಿಸಿದೆ. ಟೀ ಸಮಯದಲ್ಲಿ ಯಾರೋ ನನ್ನನ್ನು ದರಖಾಸ್ತಿಗೆ ನೇಮಿಸಲ್ಪಟ್ಟ ವಿಶೇಷ ಅಸಿಸ್ಟೆಂಟ್ ಕಮೀಷನರ್ ಅಂತ ಪರಿಚಯ ಮಾಡಿಕೊಟ್ಟರು. ಯಾಕೋ ರಾಚಯ್ಯನೋರು ತಾಳ್ಮೆ ಕಳಕೊಂಡು ನನ್ನನ್ನು ವಾಚಾಮಗೋಚರವಾಗಿ ಇಂಗ್ಲೀಷ್‌ನಲ್ಲಿ ಬೈದರು. ದಾರಿಯಲ್ಲಿ ಹೋಗ್ತಿದ್ದ ಹುಡುಗ ಮಲಗಿದ್ದ ಸರ್ಪಕ್ಕೆ ಕಲ್ಲು ಹೊಡೆದು ಗಾಯ ಮಾಡಿದಂತಾಗಿತ್ತು ನನ್ನ ಸ್ಥಿತಿ, 'ಯಾಕಪ್ಪಾ ದೇವರೆ. ಈ ಮಂತ್ರಿಗಳಿಗೆ ನನ್ನ ಮುಖ ನೋಡಿದರೆ ಕೆರಳೋ ಬುದ್ಧಿ ಬರ್ತದಲ್ಲಾ' ಅನ್ನಿಸಿತು. ರಾಚಯ್ಯನವರು ಸಮ್ಮೇಳನ ಉದ್ಘಾಟನೆ ಮಾಡುತ್ತಾ ನನ್ನನ್ನು ಸಾಕಷ್ಟು ಬೈದರು, ಪ್ರಾಯಶಃ ಅದನ್ನೆಲ್ಲಾ ಉಲ್ಲೇಖಿಸಿದರೆ ರಾಚಯ್ಯನವರು ಎಷ್ಟು ಸಣ್ಣವರು ಅಂತ ಅನ್ನಿಸಬಹುದು, ಅಲ್ಲಿನ ಮುಖಂಡರಿಗೆ 'ಇವರ ಮೇಲೆ ನೀವೊಂದು ಅರ್ಜಿ ಬರದುಕೊಡಿ ಗತಿಕಾಣಿಸ್ತೀನಿ' ಎಂದು ಕೂಗಾಡಿದರು. ಇಡೀ ತಾಲ್ಲೂಕಿನ ಹರಿಜನ ಮುಖಂಡರೇ ಅಲ್ಲಿ ಸೇರಿದ್ದರು. ಎಲ್ಲರೂ ಒಕ್ಕೊರಲಿನಿಂದ 'ಸ್ವಾಮಿ, ಅವರು ಹಾಗಲ್ಲ. ನಮ್ಮ ಕೇರಿಗೆ, ಹಟ್ಟೀಗೆ, ಗುಡಿಸಲಿಗೆ ಬಂದು ಜಮೀನು

ಕೊಟ್ಟವ್ರೆ' ಅಂದರೂ ಮಂತ್ರಿಗಳು 'ನಿಮಗೇನು ತಿಳಿಯಾಕಿಲ್ಲ ಸುಮ್ಕಿರಿ' ಅಂತ ಇನ್ನೂ ರೇಗಿದರು. ಯಾರು ತಿಳಿಯ ಹೇಳಲು ಹೋದರೂ ಧುಮಗುಟ್ಟುತ್ತಿದ್ದರು. ಮಂತ್ರಿಗಳಿಬ್ಬರೂ ಬೆಂಗಳೂರಿಗೆ ವಾಪಸ್ಸಾದರು. ನಾನೂ ಸಹ ಗುಬ್ಬಿಗೆ ಹಿಂದಿರುಗಿದೆ. ಮಾರನೇ ದಿನ ಪ್ರವಾಸಿ ಮಂದಿರದಲ್ಲಿದ್ದು ದೂರೊಂದನ್ನ ತಯಾರು ಮಾಡಿದೆ. ದೂರಿನ ಜೊತೆ ರಾಜೀನಾಮೆ ಸಹ ಬರೆದೆ 'ಸರ್ಕಾರದೋರು ನನಗೆ ಮಂತ್ರಿ ರಾಚಯ್ಯನೊರ ಮೇಲೆ ಸ್ಥಳಿಯ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹಾಕಲು ಅವಕಾಶ ಕೊಡಬೇಕು. ಹಾಗಿಲ್ಲದಿದ್ದಲ್ಲಿ ಈ ದೂರಿನ ಜೊತೆಯಲ್ಲಿರುವ ನನ್ನ ರಾಜೀನಾಮೆ ಒಪ್ಪಿಕೊಳ್ಳಬೇಕು' ಎಂದು ಜಿಲ್ಲಾಧಿಕಾರಿಗಳಿಗೆ ಲಿಖಿತ ಸಮೇತ ತಿಳಿಸಿದೆ. ಡಿ.ಸಿ.ಯವರನ್ನ ಕಂಡು ವಿವರಿಸಿದೆ. ನಿಮ್ಮ ಕೆಲಸ ನೋಡಿ ತುಮಕೂರಲ್ಲಿ ರೆವಿನ್ಯೂ ಮಂತ್ರಿಗಳು ಅಭಿನಂದಿಸುತ್ತಿದ್ದಾಗ ಇದೇ ಸಂದರ್ಭದಲ್ಲಿ ಮತ್ತೊಬ್ಬ ಮಂತ್ರಿ ನಿಮ್ಮನ್ನು ಈರೀತಿ ಅವಹೇಳನ ಮಾಡಿದ್ದು ಖಂಡನೀಯ ಎಂದರು. ಡಿ.ಸಿ.ಯವರು ನನ್ನ ರಾಜೀನಾಮೆ ಸಹಿತ ಈ ತನಕ ಆದ ದರಖಾಸ್ತು ವಿಲೇವಾರಿ ಅರ್ಜಿಗಳ ಸಂಖ್ಯೆ, ಅದರಲ್ಲಿ ಹರಿಜನ, ಗಿರಿಜನ, ಇತರೆ ಪಂಗಡದವರಿಗೆ ಆದ ಅನುಕೂಲಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಕಳಿಸಿದ್ದರು. ಮುಖ್ಯ ಕಾರ್ಯದರ್ಶಿ ಇದರ ಮಹತ್ವ ಅರಿತು ತಮ್ಮ ಟಿಪ್ಪಣಿಯೊಂದಿಗೆ ಕ್ಯಾಬಿನೆಟ್ ಮುಂದೆ ಇಟ್ಟರು. ರಾಚಯ್ಯನವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿಗೆ ದುರ್ಬಲ ವರ್ಗಗಳಿಗೆ ಜಮೀನು ಸಂದಾಯವಾಗಿತ್ತು. ಪ್ರಾಯಶಃ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ರಾಚಯ್ಯನವರು ಕಕ್ಕಾಬಿಕ್ಕಿಯಾಗಿರಬೇಕು. ಇಲ್ಲ 'ಶಿರಾದ ಶಾಸಕರಾದ ಮುಕ್ಕಣ್ಣಪ್ಪನೋರು ಇವರ ಮೇಲೆ ಅನೇಕ ದೂರುಗಳನ್ನು ಹೇಳಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.' ಎಂದು ಹೇಳಿ ಬಚಾವಾಗಲು ನೋಡಿದರು. ಶಾಸಕ ಮುಕ್ಕಣ್ಣಪ್ಪನೋರ ವಿಚಾರನ ಹೆಚ್ಚು ಹೇಳಬೇಕಾಗಿಲ್ಲ. ಗುಬ್ಬಿ ತಾಲ್ಲೂಕಿನ ಗ್ರಾಮದ ಪರಮಾಯಿಷಿ ಎರೆ ಜಮೀನನ್ನು ಯಾರಿಗೋ ಕೊಡಿಸುವುದಾಗಿ ಅವರು ಮಾತು ಕೊಟ್ಟಿದ್ದರಂತೆ. ಇವರ ಸಂಬಂಧವಾಗಿ ನನ್ನ ಮೇಲೆ ಒತ್ತಾಯ ಹೇರಲು ಯತ್ನಿಸಿ ವಿಫಲರಾದರು. ಅದರ ಜೊತೆಗೆ ನನ್ನ ಸ್ನೇಹಿತರಾದ ಮಾಲಿ ಮರಿಯಪ್ಪನವರ ಹತ್ತಿರ ನಾನು ವಿಶ್ವಾಸದಿಂದಿರುವುದು ಅವರಿಗೆ ಕಣ್ಣುರಿ. ಇದರ ಜೊತೆ ನಾನು ಆಳಲಕಟ್ಟದ ಆ ಬಂಗಾರದಂಥ ಭೂಮಿಯನ್ನು ನಿರ್ಗತಿಕ ಹರಿಜನರಿಗೆ ಹಂಚಿಬಿಟ್ಟಿದ್ದೆ. ಈ ಹೊಟ್ಟೆ ಉರಿಯನ್ನು ಮುಚ್ಚಿ, ಪ್ರತ್ಯಕ್ಷವಾಗಿ ರಾಚಯ್ಯನೋರ ಹತ್ತಿರ ಅವರು ತೋಡಿಕೊಂಡಿರಬೇಕು.

ಅದೆಲ್ಲ ಸರಿ, ಹಳೇ ಕಾಲದ ರಾಜ ಮಹಾರಾಜರಂತೆ ನಮ್ಮ ಮಂತ್ರಿ ಮಹೋದಯರು ಕೂಡ ಹೀಗೆ ಹಿತ್ತಾಳೆ ಕಿವಿಗಳಾದರೆ ಏನು ಮಾಡುವುದು? ಬಹಮನಿ ಸುಲ್ತಾನರ ಕಾಲದ ಮಂತ್ರಿ ಮಹಮದ್ ಗವಾನ್ ತುಂಬಾ ಪ್ರಾಮಾಣಿಕ ಹಾಗೂ ದೇಶದ ಹಿತಚಿಂತಕ. ಸುಲ್ತಾನ್ ನಿಜಾಮುದ್ದೀನ್ ಯಾರ್ದೋ ಮಾತು ಕೇಳ್ಕೊಂಡು ಆತನಿಗೆ ಘಾಸಿ ಶಿಕ್ಷೆ ವಿಧಿಸಿ ಆನಂತರ ಪಶ್ಚಾತ್ತಾಪ ಪಡುತ್ತಾನೆ. ನಾವು ಚರಿತ್ರೆಯಿಂದ ಕಲಿತ ಪಾಠವಾದರೂ ಏನು? ಚಂಚಲ ಬುದ್ಧಿಯ ಸ್ವತಂತ್ರ ವ್ಯಕ್ತಿತ್ವವಿರದ ರಾಜನಿಗಿಂತ ನಮ್ಮವರೇ ಆಡಳಿತ ಸೂತ್ರ ಹಿಡಿದರೆ ಪ್ರಯೋಜನ ಹೆಚ್ಚೆಂದು ಭಾವಿಸಿ ಪ್ರಜಾಪ್ರಭುತ್ವ ಮಾದರಿ ಅನುಸರಿಸಿದ್ದು. ಆದರೆ ಯೋಚನಾಶೀಲರಲ್ಲದ ಆಧುನಿಕ ಆಡಳಿತಗಾರರು ಅವರುಗಳಷ್ಟೇ ಅರ್ಥ ಹೀನವಾಗುತ್ತಿದ್ದಾರೆ. ಕ್ಯಾಬಿನೆಟ್ ಸಭೆಯಲ್ಲಾದ ವಿಚಾರವನ್ನು ಕಡಿದಾಳ್ ಅವರು ನನಗೆ ಹೇಳಿದರು. ಹೀಗೆ ನನ್ನ ಎರಡನೇ ರಾಜೀನಾಮೆ ಪತ್ರ ಕೂಡ 'ಟುಸ್' ಎಂದು ನಿರರ್ಥಕವಾಯಿತು. ಮಂತ್ರಿ ರಾಚಯ್ಯನವರು ಆಮೇಲೆ ಒಂದು ದಫ ಬರಬೇಕೆಂದು ನನಗೆ ಹೇಳಿ ಕಳಿಸಿದ್ದುಂಟು, ನಾನು ಹೋಗದೆ ಬಸವನ ಹುಳುವಿನಂತೆ ನನ್ನ ವೃತ್ತದಲ್ಲೇ ತಿರುಗಲಾರಂಭಿಸಿದೆ.

ಇದಾದ ಒಂದೆರಡು ತಿಂಗಳ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಯಾಂಪ್ ಮಾಡಿದ್ದೆ. ಅಲ್ಲಿ ನಾಲ್ಕೈದು ತಿಂಗಳಿದ್ದು, ಚಳ್ಳಕೆರೆ ಮತ್ತಿತರ ಸ್ಥಳಗಳಲ್ಲಿ ಸುಮಾರು 50-60 ಸಾವಿರ ಎಕರೆ ಜಮೀನನ್ನು ವಿಲೇವಾರಿ ಮಾಡಿದೆ. ಇದರಲ್ಲಿ ರಿಲೀಸ್ ಆಗಿದ್ದ ಅಮೃತಮಹಲ್ ಕಾವಲುಗಳೇ ಜಾಸ್ತಿ. ಆಗ ಎಂ.ಕೆ.ವೆಂಕಟೇಶನ್ ಅವರು ಚಿತ್ರದುರ್ಗದ ಜಿಲ್ಲಾಧಿಕಾರಿಗಳಾಗಿದ್ದರು. ಚಿಕ್ಕವಯಸ್ಸಿನಲ್ಲೇ ಐ.ಎ.ಎಸ್. ಪಡೆದುಕೊಂಡಿದ್ದರು. ನಿಸ್ಪೃಹರೂ, ದಕ್ಷರೂ, ಬಡವರ ಬಗ್ಗೆ ಅನುಕಂಪವುಳ್ಳವರೂ ಆಗಿದ್ದರು. ನನಗೊಂದು ಜೀಪು ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಮಂತ್ರಿಗಳೇ ಡಿ.ಓ. ಲೆಟರ್ ಬರೆದಿದ್ದರು. ವೆಂಕಟೇಶನ್ ಈ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸಿ ತಮ್ಮ ಎಲ್ಲಾ ಬೆಂಬಲ ಕೊಡುವುದಾಗಿ ಹೇಳಿದ್ದರು. ಚಳ್ಳಕೆರೆಗೆ ಸಮೀಪದಲ್ಲಿ ಚವುಳಗೆರೆ ಅಮೃತ ಮಹಲ್ ಜಮೀನಿಗೆ ಸೇರಿದ್ದ ಹತ್ತು ಸಾವಿರ ಎಕರೆ ಜಮೀನು ವಿಲೇ ಮಾಡಬೇಕಾಗಿತ್ತು. ಹಿಂದೆ ಕೆಲವು ಜನ ದೊಡ್ಡ ರೈತರಿಗೆ ಅನುಭವಿಸಲು ಕಾವಲನ್ನು ಊರ್ಜಿತಪಡಿಸಲು, ಹುರಳಿ ಗುತ್ತಿಗೆ ಆಧಾರದ ಮೇಲೆ ಅಬ್ರುತಮಹಲ್ ಕಾವಲಿನವರು ತಾಕೀತು ಮಾಡಿಕೊಟ್ಟಿದ್ದರಂತೆ. ಅವೆಲ್ಲದರ ಪ್ರತಿನಿಧಿಯಾಗಿ ಒಬ್ಬ ಭಾರೀ ಗೊಲ್ಲಗೌಡ,

ನಾನು ಕಾವಲಿಗೆ ಹೋಗುವ ಮುನ್ನಾ ದಿನ ಬಂದು ನಾನು ಜಮೀನು ಹಂಚಲು ಬರಕೂಡದೆಂದೂ, ಬಂದರೆ ಭಾರೀ ಅನಾಹುತ ಆಗುವುದೆಂದೂ ತಿಳಿಸಿದ್ದ. ನಾನೇನು ಹೆದರಿಕೊಳ್ಳಲಿಲ್ಲ. ಜಿಲ್ಲಾಧಿಕಾರಿ ವೆಂಕಟೇಶನ್‌ರವರಿಗೆ ತಿಳಿಸಿದೆ. ಅವರು 'ನೀವು ಹೋಗಿ. ನಿಮ್ಮಕೆಲಸ ಮಾಡಿ, ನಾನೆಲ್ಲ ಏರ್ಪಾಡು ಮಾಡ್ತೀನಿ' ಅಂದರು. ಬೆಳಿಗ್ಗೆ ಸ್ಥಳಕ್ಕೆ ಹೋದೆ. ಸುತ್ತಮುತ್ತ ಜಮೀನು ಇಲ್ಲದ ಸಾವಿರಾರು ಜನ ಸೇರಿದ್ದರು. ನಾಲ್ಕಾರು ದಿನ ಅಲ್ಲೇ ಇದ್ದು ಚಳ್ಳಕೆರೆ ತಾಲ್ಲೂಕಿನಲ್ಲಿ ಜಮೀನು ಇಲ್ಲದವರಿಗೆಲ್ಲಾ ಹಂಚಿದೆ. ಆ ಕಾವಲು ಜಮೀನು ಹಂಗಾಮಿ ಅನುಭವದಲ್ಲಿದ್ದ ದೊಡ್ಡ ದೊಡ್ಡ ರೈತರು ಆ ಸಂದರ್ಭದಲ್ಲಿ ತಲೆತಪ್ಪಿಸಿಕೊಂಡಿದ್ದರು. ಆದರೆ ಅವರೆಲ್ಲಾ ಹೈಕೋರ್ಟಿಗೆ ಅಪೀಲು ಹಾಕಿದ್ದರು. ಮುಂದೆ ನ್ಯಾಯಾಲಯ ಆ ಅಪೀಲನ್ನ ರದ್ದುಪಡಿಸಿ ನಾನು ಮಾಡಿದ್ದ ಆಜ್ಞೆಯನ್ನೇ ಎತ್ತಿಹಿಡಿಯಿತು. ಜಮೀನು ಪಡೆದ ಎಷ್ಟೋ ಜನ ನನ್ನ ಹತ್ತಿರ ಬಂದು ಸಂತೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೆಂಕಟೇಶನ್ ಅವರ ನೆರವು ವಿಚಕ್ಷಣತೆ ಉಲ್ಲೇಖಾರ್ಹ.

ಚಳ್ಳಕೆರೆ ತಾಲ್ಲೂಕಿಗೆ ಸೇರಿದ ತಳಕಿನ ಒಳಪ್ರದೇಶವೊಂದಕ್ಕೆ ಭೇಟಿ ಕೊಡುವ ಕಾರ್ಯಕ್ರಮವಿತ್ತು. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನನ್ನ ಜೀಪ್ ಎಲ್ಲಿಗೋ ಹೋಗಿತ್ತು. ನಾನು ಖಾಸಗಿ ಬಸ್‌ಒಂದರಲ್ಲಿ ಸಂಜೆ ಹೋದೆ. ಆ ಬಸ್ಸಿನ ಮಾಲೀಕರ ಸ್ಥಳವೂ ಅದೇ. ರಾತ್ರಿ ಸ್ಕೂಲಿನಲ್ಲಿ ಮಲಗಿ, ಬೆಳಿಗ್ಗೆ ಜಮೀನು ನೋಡಿ 8-10 ಅರ್ಹ ವ್ಯಕ್ತಿಗಳಿಗೆ ಅದನ್ನ ಮಂಜೂರು ಮಾಡಿ ಚಳ್ಳಕೆರೆಗೆ ಹಿಂದಿರುಗಿದೆ. ಕೆಲವೇ ದಿನಗಳಲ್ಲಿ ಬೇನಾಮಿ ಅರ್ಜಿಯೊಂದು ಮಂತ್ರಿಗಳಿಗೆ ಹೋಯಿತು. ಹಳ್ಳಿಯ ಬಸ್ ಮಾಲೀಕನ ಮಾತಿನಂತೆ ಬೇಕಾದವರಿಗೆ ಅಸಿಸ್ಟೆಂಟ್ ಕಮೀಷನರ್ ಜಮೀನು ಮಂಜೂರು ಮಾಡಿದ್ದಾರೆಂದು ಅವರ ದೂರು. ಮತ್ತೊಂದು ಸನ್ನಿವೇಶ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಆಯಾಯಾ ಹಳ್ಳಿಗೆ ಭೇಟಿ ಕೊಟ್ಟು ಭೂಮಿ ಇಲ್ಲದ ಹರಿಜನ ಹಾಗೂ ಇತರ ನಿರ್ಗತಿಕ ಕೂಲಿ ಜನರಿಗೆ ಮಂಜೂರು ಮಾಡಿದೆ. ಸ್ಥಳೀಯ ಶಾಸಕರಾದ ರಂಗಪ್ಪನವರು ಮಂತ್ರಿಗಳಿಗೆ ಕಾಗದ ಬರೆದು ಅಸಿಸ್ಟೆಂಟ್ ಕಮೀಷನರ್ ಅವರು ಯಾರು ಯಾರಿಗೋ ಜಮೀನು ಕೊಡ್ತಾರಂತೆ, ನನ್ನ ಹತ್ತಿರನೇ ಬಂದಿಲ್ಲ ಅಂತ ದೂರಿದರು, ನಾನಂತೂ ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಹಿರಿಯೂರು ತಾಲ್ಲೂಕಿನ ಆಸು ಪಾಸು ಸುತ್ತಿ ಜಮೀನು ಹಂಚುತ್ತಿರಬೇಕಾದರೆ, ಬೆಂಗಳೂರಿನಿಂದ ಬಂದ ಮಿತ್ರರೊಬ್ಬರು

ಅಂದು ''ಡೆಕ್ಕನ್ ಹೆರಾಲ್ಡ್'' ನಲ್ಲಿ ಪ್ರಕಟವಾದ ಸುದ್ದಿಯತ್ತ ನನ್ನ ಗಮನ ಸೆಳೆದರು. ವಿಧಾನಸಭೆ ವಿಧಾನ ಪರಿಷತ್ತುಗಳ ಜಂಟಿ ಅಧಿವೇಶನದಲ್ಲಿ ತಮ್ಮ ಖಾತೆಯ ಬಗ್ಗೆ ಮಾತನಾಡುತ್ತ ಕಂದಾಯ ಸಚಿವ ಕಡಿದಾಳು ಮಂಜಪ್ಪನವರು ಕೇವಲ ಕೆಲವೇ ತಿಂಗಳುಗಳಲ್ಲಿ ತುಮಕೂರು ಚಿತ್ರದುರ್ಗ ಜಿಲ್ಲಾ ದರಖಾಸ್ತು ಅಸಿಸ್ಟೆಂಟ್ ಕಮೀಷನರ್ ಸಾವಿರಾರು ಎಕರೆ ಜಮೀನನ್ನು ರೈತರಿಗೆ ಹಂಚಿದ್ದಾರೆಂದು ಹೆಮ್ಮೆಯಿಂದ ಹೇಳಿದ್ದರು. ಇದಕ್ಕಿಂತ ನನಗೆ ಸಂತೋಷ ಕೊಡೋ ವಿಚಾರ ಬೇರೇನಿದೆ? ಕೈ ಕೆಳಗೆ ದುಡಿಯಬೇಕಾಗಿ ಬಂದಾಗ ಕೃಪಣತೆಯಿಲ್ಲದೇ ಸತ್ಯವನ್ನಷ್ಟೇ ಗುರುತಿಸುವ ಮೇಲಾಧಿಕಾರಿಯನ್ನು ಮಾತ್ರ ಕರುಣಿಸೆಂದು ತಾನೇ ಎಲ್ಲರೂ ಪ್ರಾರ್ಥಿಸೋದು.

ಹಿರಿಯೂರು ಕ್ಯಾಂಫ್ ಮುಗಿಸಿಕೊಂಡು ಬಂದರೆ ಜಿಲ್ಲಾಧಿಕಾರಿ ಎಸ್.ನಂಜುಂಡಯ್ಯನೋರು ಹೇಳಿ ಕಳಿಸಿದರು. ಮಾರ್ಕೋನಹಳ್ಳಿ ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡಿದ್ದ ಡಿವಿಜನಲ್ ಕಮೀಷನರ್ ಶೇಷಗಿರಿರಾಯರನ್ನ ನೋಡುವಂತೆ ನನಗೆ ಹೇಳಿದರು. ನಾನು ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ದರಖಾಸ್ತು ವಿಲೇವಾರಿ ಬಗ್ಗೆ ಆದ ಪ್ರಗತಿಯೊಡನೆ ಹೋಗಿ ನೋಡಿದರೆ ಅವರು 'ಗುರ್' ಅನ್ನುತ್ತಿದ್ದರು. ನಾನು ಜಮೀನು ಕೊಡುವಾಗ್ಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಲಿಲ್ಲ ಎಂಬುದು ಆರೋಪ, ಆದರೆ ನಿಜವಾದ ಕಾರಣ ಈ ಮನುಷ್ಯ ತನಗೆ ಬೇಕಾದ ಸರ್ವೇಯರ್, ಗುಮಾಸ್ತರು ಇನ್ನೂ ಇತರೆ ಸೌಲಭ್ಯಗಳಿಗೆ 'ನನ್ನ ಹತ್ತಿರ ಒಂದು ಹಲ್ಲು ಗಿಂಜಲಿಲ್ಲವಲ್ಲ' ಎಂಬುದು. ಮಂತ್ರಿಗಳೇ ನೇರವಾಗಿ ಈತನಿಗೆ ಸವಲತ್ತು ಕೊಟ್ಟು ಕೆಲಸ ಮಾಡಿಸಿಬಿಟ್ಟರೆ ನಾವೇಕೆ ಇರಬೇಕೆಂಬುದು ಅವರ ಆತಂಕವಿರಬೇಕು. ಅದಕ್ಕೆ ನಾನೇನು ಮಾಡಲಿಕ್ಕಾಗುತ್ತದೆ? ಶೇಷಗಿರಿರಾಯರು ಜಿಲ್ಲೆಯ ರೆವಿನ್ಯೂ ಆಫೀಸರ್ ಸಭೆಯಲ್ಲಿ ಇದನ್ನ ಪ್ರಸ್ತಾಪಿಸಿದರು. ಅಲ್ಲಿ ಬಂದಿದ್ದ ಎಲ್ಲರೂ ಸಹ ಇಲ್ಲ, ಇಲ್ಲ ಇವರು ಆಯಾ ಸ್ಥಳಕ್ಕೆ ಭೇಟಿ ಕೊಟ್ಟು ಮಂಜೂರು ಮಾಡ್ತಾರೆ'' ಎಂದರು ಪಾಪ. ಆಗ ಶೇಷಗಿರಿರಾಯರ ಮುಖ 'ಇಷ್ಟು' ಆಯ್ತು.

ಈ ಸಂದರ್ಭದಲ್ಲೇ ಹಾಸ್ಟೆಲ್ ಕಟ್ಟಡ ಕುಂಟುತ್ತಾ, ತೆವಳುತ್ತಾ ಸಾಗುತ್ತಿತ್ತು. ಮಧ್ಯದಲ್ಲಿ ಅನೇಕ ಅಡ್ಡಿ ಆತಂಕಗಳು. ಜವಾಬ್ದಾರಿ ಹೊತ್ತವರೇ ಅತ್ತಿತ್ತ ತಪ್ಪು ಹೆಜ್ಜೆ ಹಾಕುತ್ತಿದ್ದರು. ಸಂಶಯ ದೃಷ್ಟಿಯಿಂದ ನೋಡುತ್ತಿದ್ದ ನಾಲ್ಕರು ಜನ

ನೂರಾರು ಮಾತನ್ನಾಡಿದರು. ನಾವು ಸಂಗ್ರಹಿಸಿದ ಹಣ ಮುಗಿಯುತ್ತಾ ಬಂತು. ಕಟ್ಟಡದ ಕಿಟಕಿ-ಬಾಗಿಲುಗಳಿಗೆ ಮರ ಬೇಕಾಗಿತ್ತು. ನಮ್ಮವರೇ ಆದ ಜಿಲ್ಲಾಧಿಕಾರಿ ಎಸ್.ನಂಜುಂಡಯ್ಯನವರನ್ನು ಕಂಡು, ಹಣ ಸಂಗ್ರಹಿಸೋಕೆ ಸಮಯವಿಲ್ಲ. ತಮ್ಮವರಾದ ತರಿಕೆರೆ ಗೋವಿಂದಪ್ಪನೋರಿಗೆ ಹೇಳಿ ಈಗ ಮರ ಕೊಡ್ಸಿ, ಮುಂದೆ ಖಂಡಿತ ಹಣ ಕೊಡುತ್ತೇನೆ, ಎಂದೆ. ಖಂಡಿತವಾಗಿ ಆಗೋಲ್ಲ ಎಂದುಬಿಟ್ಟರು. ತುಮಕೂರು ಕಸಬ ಹೆಬ್ಬಾಕ ಕೆರೆಯ ಅಂಗಳದಲ್ಲಿ ನಮ್ಮ ಹಾಸ್ಟೆಲ್‌ಗೆ ಹತ್ತು ಎಕರೆ ಜಮೀನು ಕೊಡಬಹುದೆಂದು ಶಿಫಾರಸು ಹೋಗಿತ್ತು. ಡಿವಿಜನಲ್ ಕಮೀಷನರ್ ಶೇಷಗಿರಿರಾಯರಿಗೆ ಅದರಲ್ಲಿ ನಾಲ್ಕು ಎಕರೆ ಕೊಡಬಹುದೆಂದು ಜಿಲ್ಲಾಧಿಕಾರಿಗಳು ಪುನಃ ಶಿಫಾರಸು ಮಾಡಿದ್ದಾರೆಂದು ತಿಳಿದು ಬಂತು. ಈ ವಿಧಿಗಳು ಒಂದಲ್ಲ ಒಂದು ರೀತಿ ಪಾಲನೆಯಲ್ಲಿ ತಡವಾಗಿ, ಸರ್ಕಾರ ಕೆರೆ ಅಂಗಳವನ್ನೇ ಯಾರಿಗೂ ಕೊಡಬಾರದೆಂದು ಘೋಷಿಸಿತು. ಆದಾಗ್ಯೂ ಸಾರ್ವಜನಿಕ ಸಂಸ್ಥೆಗಳಿಗೆ ಸರ್ಕಾರ ಜಮೀನು ಕೊಡುವ ಮನಸ್ಸು ಮಾಡಿದೆ. ನಮ್ಮ ಹಿಂದಿನ ರಾಜರುಗಳು ಅನೇಕ ಶೈಕ್ಷಣಿಕ ಮಠಗಳಿಗೆ ದತ್ತಿ ಕೊಟ್ಟ ಸನ್ನಿವೇಶಗಳನ್ನು ನಾವು ಇತಿಹಾಸದಲ್ಲಿ ಕಾಣಬಹುದು. 'ಬಳ್ಳಿಗಾವಿಯ ಕೋಡಿ ಮಠಕ್ಕೆ ಹೊಯ್ಸಳರು. ಚಾಲುಕ್ಯರಿಬ್ಬರೂ ದತ್ತಿ ಕೊಟ್ಟಿಲ್ಲವೆ? ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಘ'ಕ್ಕೆ ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಶೆಟ್ಟಿಕೆರೆ ಹೋಬಳಿ ದಾಸಗೆರೆ ಪಾಳ್ಯದಲ್ಲಿ 16 ಎಕರೆ ಮಂಜೂರು ಮಾಡ್ಸಿದೆ. ಈಗ ಆ ಪ್ರದೇಶದಲ್ಲಿ ಮುನ್ನೂರು ತೆಂಗಿನ ಗಿಡಗಳಿವೆ. ಸಾವಿರಾರು ರೂಪಾಯಿಗಳ ಆಸ್ತಿ. ಗೋಡೆಗೆರೆ ಮಠದವರು ಒಂದು ಅರ್ಜಿಯನ್ನು ಕಳಿಸಿದ್ದರು. ಅವರ ಶೈಕ್ಷಣಿಕ ಚಟುವಟಿಕೆ ಗಮನಿಸಿ, ಹತ್ತು ಎಕರೆ ಮಂಜೂರು ಮಾಡಿದೆ. ಪೊಲೀಸರ ಗುಂಡಿಗೆ ಬಲಿಯಾದ ಇಂಜನಿಯರಿಂಗ್ ವಿದ್ಯಾರ್ಥಿ ಗಂಗಪ್ಪನ ಕುಟುಂಬಕ್ಕೆ ಆರು ಎಕರೆ ಮಂಜೂರು ಮಾಡಿದೆ. ಇದನ್ನೆಲ್ಲಾ ಏಕೆ ಪಟ್ಟಿ ಮಾಡುತ್ತಿದ್ದೇನೆಂದರೆ ಅವಕಾಶವಿದ್ದಾಗ ಹಿಂದೂ ಮುಂದೂ ನೋಡದೆ ಸತ್ಕಾರ್ಯಕ್ಕೆ ಸಹಾಯ ಮಾಡಬೇಕೆಂಬುದಕ್ಕಾಗಿ.

# ಖಾದಿ ಗ್ರಾಮೋದ್ಯೋಗ ಮಂಡಳಿ:

ನಾನು ತುಮಕೂರು ಬಿಟ್ಟು ಖಾದಿ ಗ್ರಾಮೋಧ್ಯೋಗ ಮಂಡಳಿಗೆ ಹೋಗಬೇಕಾದರೆ ಕಾಂಗ್ರೆಸ್‌ನ ಮುಖಂಡರೂ, ಲೋಕಸಭಾ ಸದಸ್ಯರೂ ಆಗಿದ್ದ ಬಿ.ಸಿ.ನಂಜುಂಡಯ್ಯನವರು ಒಂದು ಸಮಾರಂಭದಲ್ಲಿ 'ಆ ಖಾದಿ ಬೋರ್ಡ್‌ಗೆ ತಳನೂ ಇಲ್ಲ, ಬುಡನೂ ಇಲ್ಲ, ಇಂತಹವರಿಗೆ ಆ ಜಾಗ ಅಲ್ಲ' ಎಂದಿದ್ದರು. ನನಗೂ ಕೂಡ ಅದರ ಯೋಗ್ಯತೆ ತಿಳಿದಿತ್ತು. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಆಡಳಿತ ಸೂತ್ರಗಳನ್ನ ಹಿಡಿದು, ಇನ್ನೂ ಗಾಂಧಿ, ಖಾದಿ, ಗ್ರಾಮೋದ್ಯೋಗ ಅಂತ ಬಡಿದುಕೊಳ್ಳುತ್ತಿದ್ದ ಮುದಿಯರಿಗೆ ಇಂತಹ ಬೋರ್ಡನ್ನು ರಚಿಸಿ ಅವರ ಕಣ್ಣಿಗೆ ಮಣ್ಣೆರಚುತ್ತಿದ್ದರು. ಆ ಸಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ಹೆಚ್.ಸಿದ್ಧವೀರಪ್ಪನೋರು ಸೋತಿದ್ದರು. ಕಾಂಗ್ರೆಸ್ ಧುರೀಣರಾದ ಅವರಿಗೆ ಈ ಬೋರ್ಡ್‌ನ ಛೇರ್ಮನ್‌ಷಿಪ್ ಕೊಡಲಾಗಿತ್ತು. ಅವರ ಆಗ್ರಹದ ಮೇಲೆಯೇ ನಾನು ಅಲ್ಲಿಗೆ ಹೋದದ್ದು. ಖಾದಿ ಬೋರ್ಡ್‌ನಲ್ಲೂ, ಸಿಬ್ಬಂದಿಯವರ ವಿಚಾರನೂ ಕೂಡ ಅಷ್ಟೇ. ಬಂದೋನು ಬಂದ. ಹೋದೋನು, ಹೋದ. ಬಹುತೇಕ ನೌಕರರು, ಹಂಗಾಮಿ ನೌಕರರು; ಇನ್ನು ಅವರಿಗೆ ಕೊಡುತ್ತಿದ್ದ ಸಂಬಳ ಬಹಳ ಕಡಿಮೆ. ಅವರನ್ನು ಎರಡನೆಯ ದರ್ಜೆ ಸರ್ಕಾರಿ ನೌಕರರೆಂದು ಸರ್ಕಾರ ಪರಿಗಣಿಸಿತ್ತು.

ಖಾದಿ ಬೋರ್ಡ್ ಅನೇಕ ಗೃಹ ಕೈಗಾರಿಕೆಗೆ ಸಾಲ ಕೊಡುತ್ತಿತ್ತು. ದೊಡ್ಡವ್ಯಕ್ತಿಗಳೂ, ರಾಜಕೀಯ ಧುರೀಣರೂ, ಮಠದ ಸ್ವಾಮಿಗಳೂ - ಇದರಿಂದ ಸಾಲ ಪಡೆದು, ಸಾಮಾನ್ಯವಾಗಿ ಅವರಲ್ಲಿ ಹಲವರು ಯಾವುದೇ ಕೆಲಸ ಮಾಡದೆ ಅದನ್ನೆಲ್ಲಾ ನುಂಗಿ ಹಾಕಿದ್ದರು. ಯಾರ ಮೇಲೂ ಕ್ರಮ ಜರುಗಿಸೋ ಹಾಗಿಲ್ಲ. ಒಬ್ಬರು ಅಧ್ಯಕ್ಷರಿಗೆ ಬೇಕಾದರೆ ಮತ್ತೊಬ್ಬರು ಮುಖ್ಯಮಂತ್ರಿಗಳಿಗೆ ಬೇಕಾದವರಾಗಿದ್ದರು. ಯಾವುದಾದರೂ ಸಣ್ಣ ವಿಚಾರದಲ್ಲೂ ಕೂಡ ಬೋರ್ಡ್‌ನ ಸದಸ್ಯರಲ್ಲೇ ಭಿನ್ನಾಭಿಪ್ರಾಯವಿರುತ್ತಿತ್ತು. ನಾನು ಅಲ್ಲಿಗೆ ಹೋದ ಕ್ಷಣದಲ್ಲೇ ನಮ್ಮ ಆಫೀಸನ್ನು ಬೆಂಗಳೂರು ಕೋಟೆ ಪಕ್ಕದ ಒಕ್ಕಲಿಗ ವಿದ್ಯಾರ್ಥಿ ನಿಲಯದ ಮುಂಭಾಗದ ಕಟ್ಟಡಕ್ಕೆ ಬದಲಾಯಿಸಿತು. ಬಾಡಿಗೆ ತಿಂಗಳಿಗೆ ರೂ. 5000; ಮೀಟಿಂಗ್‌ನಲ್ಲಿ ಬೋರ್ಡ್‌ನ ಛೇರ್ಮನ್‌ರಿಗೂ ಇತರೆ ಸದಸ್ಯರಾದ ವಿ.ಟಿ.ಮಾಗಡಿ, ಸಿದ್ದೇಗೌಡ್ರು, ರಾಯಚೂರಿನ ಬಿ.ಹೆಚ್.ಇನಾಂದಾರ್

ಇವರುಗಳಿಗೆ ಹಣಾಹಣಿ ಜಗಳವಾಯಿತು. ಕೆಲವೊಮ್ಮೆ ನಾನಂತೂ ಹಲ್ಲಿನ ನಡುವಿನ ನಾಲಿಗೆಯಂತೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಒದ್ದಾಡುತ್ತಿದ್ದೆ. 'ಇವರು ಸಿದ್ದವೀರಪ್ಪನವರ ಪರ' ಅಂತ ಕೆಲವರು ಮಾತನಾಡುತ್ತಿದ್ದರು. ಅಂತೂ ಮಾಗಡಿ ಆಗ ಜೋರಾಗಿ ಗಲಾಟೆ ಮಾಡುತ್ತಿದ್ದರು.

ಬನಿಯಾದ ಪಿಷ್ಟಗಳಿಂದ ಕೂಡಿದ ಆಹಾರದ ಅಕ್ಕಿಯನ್ನು ಒದಗಿಸುವುದಕ್ಕಾಗಿ ಕೊಟ್ಟಣದ ಅಕ್ಕಿ ಇಂಡಸ್ಟ್ರಿಗಾಗಿ ಭಾರೀ ಮೊಬಲಗನ್ನು ನಿಗದಿ ಪಡಿಸಲ್ಪಟ್ಟಿತ್ತು. ಆ ಕಾಲದಲ್ಲಿ ಪದ್ಮಮ್ಮ ಎಂಬುವವರು ಸುಮಾರು 25-30 ಜನಗಳಿಗೆ ಕೆಲಸ ಕೊಟ್ಟು ಇದನ್ನು ಯೋಗ್ಯ ರೀತಿಯಲ್ಲಿ ನಡೆಸುತ್ತಿದ್ದರು. ಇದನ್ನು ವಿಸ್ತರಿಸುವ ಯೋಜನೆ ಮಾಡಲಾಯ್ತು. ಇದಕ್ಕಾಗಿ ಅರ್ಜಿಗಳನ್ನು ಕರೆವೆವು. ಬಿ.ಎ., ಎಂ.ಎ., ಪಾಸು ಮಾಡಿದ ಅಭ್ಯರ್ಥಿಗಳೇ ಇದಕ್ಕೆ ಬಂದರು. ಕೈಗಾರಿಕಾ ಅಭಿವೃದ್ಧಿ ಅಧಿಕಾರಿ ಜಯರಾಂ ಅವರ ಸಹಾಯ ಪಡೆದು 8-10 ಜನರಿಗೆ ಸಾಲ ಕೊಡಲಾಯ್ತು. ಅವರಿಗೆ ಪ್ರತಿ ತಿಂಗಳೂ ರಿಪೋರ್ಟ್ ಕಳುಹಿಸಬೇಕೆಂದು ತಾಕೀತು ಮಾಡಲಾಗಿತ್ತು. ಒಂದೆರಡು ತಿಂಗಳ ನಂತರ ಅಧಿಕಾರಿ-ಆಯಾಯ ಅಂಗಡಿಗಳ ಬೋರ್ಡುಗಳೇ ನಾಪತ್ತೆಯೆಂದೂ-ಕೆಲ ಅಂಗಡಿಗಳಿಗೆ ಬೀಗ ಮುದ್ರೆಯೆಂದೂ ರಿಪೋರ್ಟು ಕಳುಹಿಸಿದರು. ಹೀಗೆ ವಿದ್ಯಾವಂತರೆನಿಸಿಕೊಂಡವರೇ 'ಸಿಕ್ಕೋರಿಗೆ ಸೀರುಂಡೆ' ಎಂಬಂತೆ ನಡೆದರೆ ಯಾರಿಗೆ ಬುದ್ಧಿ ಹೇಳೋದು.

ಒಂದು ದಿನ ಚಾಮರಾಜಪೇಟೆ ಮೊದಲನೆಯ ರೋಡಿನಲ್ಲಿದ್ದ 'ಆಯಿಲ್ ಗಾಣ' ದ ಡಿಪೋಕ್ಕೆ ಭೇಟಿಕೊಟ್ಟೆ, ರಾಜಕೀಯ ಸಂತ್ರಸ್ಥರಾಗಿದ್ದ ಸತ್ಯನಾರಾಯಣ ಶೆಟ್ಟಿ ಎಂಬುವವರು ಅದರ ಮ್ಯಾನೇಜರ್. "ಕ್ಯಾಷ್ ಬುಕ್" ನೋಡಿದರೆ ಭಾರೀ ದಗಾ ನಡೆದಿತ್ತು. ವಿಚಾರಿಸಿದರೆ ನಾನು ಬರೀ ಮ್ಯಾನೇಜರ್ ಮಾತ್ರ, ಹೊರಗಡೆಯ ಕೆಲಸ ಮಾತ್ರ ನೋಡ್ಕೋಳ್ತೇನೆ. ನನಗೆ ಕ್ಯಾಷ್ ಗೀಷ್ ಜವಾಬ್ದಾರಿ ಇಲ್ಲ, ಇದೆಲ್ಲಾ ಪಾರಪತ್ತೆದಾರಿಕೆ ನನಗೆ ಬೇಕಾಗಿಲ್ಲ, ಬೇಕಾದರೆ ಈಗಲೇ ಬಿಟ್ಟು ಹೋಗಿಬಿಡ್ತೇನೆ ಅಂತ ಎಗರಾಡಿದರು.

ಒಂದು ದಿನ ಆಫೀಸ್‌ನಲ್ಲಿರಬೇಕಾದರೆ ನಮ್ಮ ಪಾಳ್ಯದ ವೆಂಕಟರಮಣಯ್ಯ ಅಲ್ಲಿಗೆ ಬಂದ. 'ಯಾಕೋ ಮಾರಾಯ' ಅಂದ್ರೆ ಗಳಗಳನೆ ಅತ್ತುಬಿಟ್ಟ. ಪಂಚಮ ಬೋರ್ಡಿನಲ್ಲಿ ಜವಾನನಾಗಿದ್ದ. ಆತ ಐದು ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರ್ಕೊಂಡು ಹನ್ನೊಂದು ರೂಪಾಯಿಗೆ ಬರೋ ವೇಳೆಗೆ ನಿವೃತ್ತನಾಗಿದ್ದ. ನಿವೃತ್ತಿ

ವೇತನ, ಗ್ರಾಚ್ಯೂಟಿ ಕೇಳಿದರೆ ಪಂಚಮ ಬೋರ್ಡ್‌ನವರಿಗೆ ಅದೆಲ್ಲಾ ಸಿಕ್ಕೋದಿಲ್ಲ ಅಂದ್ರು, ಸರ್ಕಾರದೋರು. ಆತ ಮಕ್ಕಳೊಂದಿಗ 'ಮಲ್ಲಪ್ಪ, ನಾನು ಕಾಡ ಹೆಣ-ಆಗ್ಬಿಟ್ಟೆ' ಎಂದು ನೊಂದ ಗಂಟಲು ತೆಗೆದ. ನೀನು ಯೋಚನೆ ಮಾಡಬೇಡ, ಪಂಚಮ ಬೋರ್ಡ್‌ನವರು ಸರ್ಕಾರಿ ನೌಕರರಲ್ಲವೆ. ಇರಲಿ-ನನ್ನ ಕೈಗೆ ಒಂದು ಅರ್ಜಿ ಬರೆದುಕೊಡು ಎಂದು ಅದನ್ನು ಹೊತ್ತುಕೊಂಡು ವಿಧಾನಸೌಧದ ಮೆಟ್ಟಿಲು ತುಳಿದೆ. ಸೆಕ್ರೆಟರಿ, ಅಂಡರ್ ಸೆಕ್ರೆಟರಿಯವರನ್ನ ಕಂಡು ದಾಖಲಾತಿಗಳನ್ನು ನೋಡಿಸಿ ಪಂಚಮ ಬೋರ್ಡ್‌ನ ಸಿಬ್ಬಂದಿಯವರಿಗೂ ನಿವೃತ್ತಿವೇತನ ಕೊಡಬಹುದೆಂದು ಸರ್ಕಾರಿ ಆಜ್ಞೆ ಹೊರಡಿಸಿದೆ. ನಿವೃತ್ತಿವೇತನ ತಕ್ಕೊಂಡು ಬಂದ. ವೆಂಕಟರಮಣಯ್ಯನ ಕಣ್ಣಲ್ಲಿ ಆನಂದ ಕಂಡು ನಾನು ಧನ್ಯ ಎನಿಸಿತು.

ಈ ಬೋರ್ಡಿನ ಹಿಂದಿನ ಅಧ್ಯಕ್ಷರು ಹಳ್ಳಿಕೇರಿ ಗುದ್ಲಪ್ಪನವರು. ಇವರ ಕಾಲದಲ್ಲಿ ಬೋರ್ಡ್‌ನಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆಯೆಂಬ ವಿಚಾರ ಆಡಿಟ್ ನಂತರ ಪ್ರಚಾರಕ್ಕೆ ಬಂತು. ಸರ್ಕಾರದವರು ತನಿಖೆ ನಡೆಸುವಂತೆ ಆಜ್ಞೆ ಮಾಡಿದರು, ಹಾಲಿ ಅಧ್ಯಕ್ಷರು ಸಹ ಈ ವಿಚಾರ ನೋಡಿ ಎಂದರು. ಸ್ಪೆಷಲ್ ಆಡಿಟರ್‌ಗಳಿಂದ ಆಡಿಟ್ ಆಯ್ತು. ಅಕೌಂಟ್ಸ್ ಆಫೀಸರ್ ಕೃಷ್ಣಮೂರ್ತಿ ಅವರಿಂದ ಮಾಹಿತಿ ಅವ್ಯವಹಾರದ ವಿಚಾರಗಳನ್ನೆಲ್ಲ ಕ್ರಮಬದ್ಧವಾಗಿ ವಿಂಗಡಸಿದೆ. ಹಳ್ಳಿಕೇರಿ ಅವರಿಗೆ ವಿವರಣೆ ಕೇಳಿ ಎರಡು-ಮೂರು ರಿಜಿಸ್ಟರ್ಡ್ ಪತ್ರ ಬರೆದದ್ದಾಯಿತು, ಹಳ್ಳಿಕೇರಿಯವರು ಸಹ ರಾಜಕೀಯದಲ್ಲಿ ದೊಡ್ಡ ನೆಲೆಯಿದ್ದವರು. ನಿಜಲಿಂಗಪ್ಪನೋರ ಆಪ್ತ ಬಳಗದವರು. ರಿಜಿಸ್ಟರ್ಡ್ ಪತ್ರಕ್ಕೆ ಅವರಿಂದ ಉತ್ತರ ಬರಲಿಲ್ಲ, ಬಿಸಿ ಆರಿದ ನಂತರ ಅಧ್ಯಕ್ಷರು ಹಾಗೂ ಸರ್ಕಾರದವರಿಬ್ಬರೂ ಸುಮ್ಮನಾದರು.

ಇದೇ ಸಮಯದಲ್ಲಿ ವಿಧಾನಸಭೆಯ ಚುನಾವಣೆ ಬಂತು. ಆಗ ಹೊಸದುರ್ಗ ಪ್ರತಿಷ್ಠಿತ ಕೇಂದ್ರವಾಗಿತ್ತು. ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನೋರು ಆ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಅವರ ಪ್ರತಿಸ್ಪರ್ಧಿ ಕುರುಬ ಜನಾಂಗದ ಬಾಗೂರು ರಂಗಪ್ಪ ಎಂಬುವವರು. ಸ್ವತಂತ್ರ ಅಭ್ಯರ್ಥಿ. ಈ ಸಂದರ್ಭದಲ್ಲಿ ಒಂದು ದಿನ ಟಿ.ಮರಿಯಪ್ಪನೋರ ಮನೆಗೆ ನಾನು ಹೋಗಿದ್ದೆ. ಅನಾರೋಗ್ಯದ ಕಾರಣ ಮರಿಯಪ್ಪನೋರು ಪ್ರಚಾರಕ್ಕೆ ಹೋಗುತ್ತಿರಲಿಲ್ಲ. ಹೊಸದುರ್ಗ ಕಡೆಯ

ಅನೇಕ ಜನ ಅಲ್ಲಿ ಜಮಾಯಿಸಿದ್ದರು. ಹಿಂದೆ ನಾನಲ್ಲಿದ್ದ ಕಾರಣ ಅವರಲ್ಲಿ ಅನೇಕರು ನನಗೆ ಪರಿಚಿತರು. ಅವರಲ್ಲಿ ಒಬ್ಬರು ಮರಿಯಪ್ಪನೋರಿಗೆ ಆ ಮಾತು ಈ ಮಾತು ಆಡುತ್ತಾ ಆ ಗದಗಿನ ಹನುಮಂತಪ್ಪನಿಗೆ ಹೇಳಿ 'ನಮ್ಮ ರಂಗಪ್ಪನಿಗೆ ಒಂದಿಷ್ಟು ದುಡ್ಡು ಕೊಡ್ಸಿ, ಪಾಪ ಕಷ್ಟದಲ್ಲಿದ್ದಾನೆ' ಎಂದರು. ಸುಮ್ಮನೆ ಕೂತಿದ್ದ ಮರಿಯಪ್ಪನೋರು 'ನನ್ನ ಏನಂತ ತಿಳ್ಕೊಂಡಿದೀರಿ - I am a true congressman. ಸರಿ - ನೀವಿನ್ನು ಹೊರಡಿ-' ಎನ್ನುತ್ತಾ ರೂಮಿಗೆ ದೌಡಾಯಿಸಿದರು. ಒಂದು ಕ್ಷಣ ಆಶ್ಚರ್ಯದಿಂದ ಮೂಕನಾದೆ. ಮರಿಯಪ್ಪ ನೋರನ್ನ ನಾನು ಬಲ್ಲವನಾಗಿದ್ದರೂ ಅವರ ತಾತ್ವಿಕ ನಿಲುವಿನ ಪರಿಚಯ ಆಗಿರಲಿಲ್ಲ, ಆದರೆ ಇಂದು ಈ ಮನುಷ್ಯ ಎಂತಹವರೆಂಬ ವಿಚಾರ ತಿಳಿಯಿತು. ಆದರೂ ಈ ರಾಜ್ಯದಲ್ಲಿ ಮರಿಯಪ್ಪನವರ ಬಗ್ಗೆ ಯಾವ ಭಾವನೆ ಇದೆ ಹತ್ತರಲ್ಲಿ ಹನ್ನೊಂದರ ಮಂತ್ರಿ ಎಂಬುದೇ ಬಹು ಜನರ ತಿಳುವಳಿಕೆ, ಅಷ್ಟಕ್ಕೂ ಹಿಂದುಳಿದವರಿಗೆ ಇದೇನೂ ಹೊಸತಲ್ಲ. ದೇಶಪ್ರೇಮ, ತತ್ವನಿಷ್ಠೆ, ನಾಯಕತ್ವ ಪಕ್ಷನಿಷ್ಠೆ ಮೇಲ್ವರ್ಗದ ಜನರ ಸೊತ್ತು ತಾನೇ? ಪ್ರತಿಷ್ಠಿತ ಮನೆತನ ಅಥವಾ ವ್ಯಕ್ತಿ ಎಲ್ಲಿರುತ್ತಾನೋ ಅಲ್ಲಿ ಒಂದು ಪಕ್ಷವೇ - ಸರ್ಕಾರ, ದೇಶ ಇರುತ್ತದೆಂಬ ಗುಲಾಮಿ ಭಾವನೆ ಇರೋ ಸಮಾಜದಲ್ಲಿ ಹಿಂದುಳಿದೋರ ಬಗ್ಗೆ ಸಂಶಯ ದೃಷ್ಟಿಯಿಂದ ನೋಡೋದು ಸಹಜ. ಸ್ವಾತಂತ್ರ್ಯ ಪೂರ್ವದಲ್ಲಿ ಅಂಬೇಡ್ಕರರ ನಿಷ್ಠೆಯನ್ನೇ ಬಣ್ಣದ ಕನ್ನಡಕದಿಂಬ ಜನ ನೋಡಿದ್ದರು.

ಮನೆಯಲ್ಲಿ ನಾನು ಯಾವುದೋ ಫೈಲು ನೋಡುತ್ತಿರಬೇಕಾದರೆ ಶಿರಾದ ಮಿತ್ರರು ಬಂದರು. 'ನೋಡಿ ದಾಸಪ್ಪನ ಹೆಸರು ಅಮಲ್ದಾರ್ ಬಡ್ತಿ ಲಿಸ್ಟ್‌ಗೆ ಸೇರಿಲ್ಲ ಹಸಿಗೂಸಿನಂತಹವನು. ನೀವೊಂದು ಮಾತು ಹೇಳಿ' ಎಂದರು ತುಮಕೂರಿನಲ್ಲಿ ಅವರ ಕಡೆಯವರೇ ಡಿ.ಸಿ. ಆ ಮೂಲಕ ಪ್ರಯತ್ನಿಸಿ, ಎಂದೆ. ನಾನು ಇದಾದ ಮೇಲೆ ಒಂದು ಸಾರಿ ತುಮಕೂರಿಗೆ ಹೋದರೆ ಜಿಲ್ಲಾಧಿಕಾರಿ ಎಸ್.ನಂಜುಂಡಯ್ಯನೋರು. 'ಏನ್ರೀ ನೀವೆಲ್ಲ ಸೇರ್ಕೊಂಡು ಆ ದಾಸಪ್ನ ತಲೆ ಕೆಡಿಸಿ, ನನ್ನ ತಂಗೀನ ಭಾವಿಕೆರೆ ಬೀಳಿಸಬೇಕೆಂದು ಮಾಡಿದ್ದೀರಾ?' ಎಂದರು 'ಅಯ್ಯೋ ಸಾರ್ ಅದೊಂದೂ ನಾನರಿಯೆ. ನಾನು ಸಂಸಾರನ ಕೂಡಿಸ್ತೀನೆ ಹೊರತು, ಕೆಡಿಸೋನಲ್ಲ. ನೀವಿಬ್ಬರೂ ನನ್ನ ಹಿತೈಷಿಗಳೇ. ಆತನಿಗೆ ಬಡ್ತಿ ಕೊಡಿಸಲು ಪ್ರಯತ್ನಿಸಿದೆನೇ ಹೊರತು ಹಾಳು ಮಾಡೋಕೆ ಹೋಗಿಲ್ಲ' ಎಂದು ಉತ್ತರಿಸಿದೆ; ಇದಾದ ಹದಿನೈದು ದಿನದ ನಂತರ ಬೆಂಗಳೂರಿನ ಡಿವಿಜನಲ್

ಕಮೀಷನರ್ ಚಿಕ್ಕನಾರಾಯಣಸ್ವಾಮಿ ಅವರು ನನ್ನ ಕರೆದು ''ನೋಡಿ, ಮಲ್ಲಪ್ಪ ಹಿಂದಿನ ಡಿವಿಜನಲ್ ಕಮೀಷನರ್ ಶೇಷಗಿರಿಯಪ್ಪ ಮತ್ತು ತುಮಕೂರಿನ ಡಿ.ಸಿ., ಎಸ್.ನಂಜುಂಡಯ್ಯನೋರು ನಿಮ್ಮ ಮೇಲೆ ಸರ್ಕಾರಕ್ಕೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನಲ್ಲಿ ರಿಮಾರ್ಕ್ಸ್ ಬರೆದಿದ್ದಾರೆ'' ಎಂದರು. 'ಅಲ್ಲ, ನಂಜುಂಡಯ್ಯನೋರು ನಿಮ್ಮೋರು' ಎಂಬುದು ಅವರ ಒಕ್ಕಣಿ ಬೇರೆ; 'ಒಂದು ಲಕ್ಷ ಚಿಲ್ಲರೆ ಜಮೀನನ್ನ ಕೇವಲ ಒಂದೂವರೆ ವರ್ಷದಲ್ಲಿ ಹಂಚಿ ಬಂದು ಬಿಟ್ಟೆ. ಪಾಪ ಬರೀದೇ ಏನುಮಾಡ್ತಾರೆ'..... ಎಂದುಕೊಂಡೆ, ಹಿಂದೆ ಹೊಸದುರ್ಗದಲ್ಲಿ ಸೊಸೈಟಿ ಇನ್ಸ್‌ಪೆಕ್ಟರ್ ಆಗಿದ್ದಾಗ ನಮ್ಮವನೇ ಬಾಗೂರಿನ ಪಟೇಲ ಶ್ಯಾನುಭೋಗರ ಆಣತಿಯಂತೆ ನನ್ನ ಮೇಲೆ ಅರ್ಜಿಬರೆದು ಹಾಕಿದ. ಇಂದು ನಮ್ಮ ಜಿಲ್ಲಾಧಿಕಾರಿಗಳು 'ಇಷ್ಟೊಂದು ಒಳ್ಳೆ ಕೆಲಸ ಮಾಡಿದ್ದಾರಲ್ಲ ಅಂತ' ಸರ್ಕಾರಕ್ಕೆ ರಿಮಾರ್ಕ್ಸ್ ಬರೆದು ಹಾಕಿದರು. ಮೊದಲನೆಯದಲ್ಲಿ ಅಜ್ಞಾನ, ಮುಗ್ಧತೆ....... ಎರಡನೆಯದರಲ್ಲಿ..... ಏನು ಹೇಳೋದು. ನಾನು ದರಖಾಸ್ತು ಜಮೀನು ಮಂಜೂರು ಮಾಡಿದ ಪ್ರತಿಯೊಂದೂ ನ್ಯಾಯವಾಗಿಯೇ ಇದೆಯೆಂದು ಎಣಿಸೆಣಿಸಿ ಹೇಳುತ್ತಿಲ್ಲ, ಮಾಡಿದ್ದೆಲ್ಲಾ ಸಮರ್ಪಕವಾಗಿದೆಯಂತಾಗಲಿ, ಅದೆಲ್ಲ ಸದುಪಯೋಗವಾಗಿದೆ ಎಂಬ ಭ್ರಮೆಯಾಗಲೀ ನನ್ನದಲ್ಲ, ಆದರೆ ನಾನು ಆತ್ಮ ಸಾಕ್ಷಿಗೆ ಹೆದರಿ ನೇರ ನಡಿಗೆ ನಡೆದಿದ್ದೇನೆ. ತಿಳಿದೂ ತಿಳಿದು ಅನ್ಯಾಯ ಮಾಡಿಲ್ಲ ಎಂಬುದು ಮಾತ್ರ ಸತ್ಯ. ಆಮೇಲೆ ಸರ್ಕಾರ ನನಗೆ ಈ ಸಂಬಂಧವಾಗಿ ವಿವರಣೆ ಕೇಳಿತು. ಆ ಪತ್ರಾನ ಸಿದ್ದವೀರಪ್ಪನೋರಿಗೆ ಕೊಟ್ಟೆ. ಸಮರ್ಥ ಅಂಕಿ ಅಂಶಗಳೊಂದಿಗೆ ಸಿದ್ದವೀರಪ್ಪನವರು ಮೇಲಿನವರಿಗೆ ಬರೆದು ಹಾಕಿದರು. ನಿಮ್ಮ ಮಾಹಿತಿ ತೃಪ್ತಿಕರವಾಗಿದೆ ಎಂಬ ಷರಾ ಕೂಡ ಸರ್ಕಾರದಿಂದ ಬಂತೆಂದು ಇಟ್ಟುಕೊಳ್ಳಿ

ಈ ಸಮಯದಲ್ಲಿ ಕೂಡ ತುಮಕೂರಿನಲ್ಲಿ ನಮ್ಮ ಹಾಸ್ಟೆಲ್ ಕಟ್ಟಡ ನಡೆದೇ ಇತ್ತು. ಒಂದು ಸಾರಿ ಕಂಟ್ರಾಕ್ಟರ್ ದುಡ್ಡಿಲ್ಲ' ಎಂದು ಕೆಲಸ ನಿಲ್ಲಿಸಿದ. ಆಫೀಸಿಗೆ ರಜ ಹಾಕಿ ಕಂಟ್ರಾಕ್ಟರ್ ಮನೆಗೆ ಹೋಗಿ 'ನೋಡಿ ಸ್ವಾಮಿ ಈ ಸಾರಿ ದೊಡ್ಡ ಮನಸ್ಸು ಮಾಡಿ, ನನ್ನ ಮನೆ ಮಠ ಬೇಕಾದರೂ ದೀಡು ಇಟ್ಟು ಬರೆದುಕೋಡ್ತೀನಿ. ಅರ್ಧ ಊಟ ಹಾಕಿ ನಿಲ್ಲಿಸಬೇಡಿ' ಅಂತ ಕೈ ಮುಗಿದು ಬೇಡಿಕೊಂಡೆ. ಪುಣ್ಯಾತ್ಮ ಕೆಲಸ ಮುಂದುವರಿಸಿದ. ಸೆಕ್ರೆಟರಿ ಸಿರಿಯಪ್ಪ ಒಡೆಯರ್ ಕಟ್ಟಡದ ಕೆಲಸ ನೋಡುತ್ತಿದ್ದರು. ನಾನು ಜಿಲ್ಲೆ ಸುತ್ತಿ 8-10 ಸಾವಿರ

ತಕ್ಷಣ ಸಂಗ್ರಹಿಸಿದೆ, ಸರ್ಕಾರ ಮತ್ತೊಂದು ಕಂತಿನ ಗ್ರ್ಯಾಂಟ್ಸ್ ಮಂಜೂರು ಮಾಡಿತು.

ಹೊಸದುರ್ಗ ಕ್ಷೇತ್ರದಲ್ಲಿ ನಿಜಲಿಂಗಪ್ಪನೋರು ಸೋತಿದ್ದೇ ದೊಡ್ಡ ಪ್ರಮಾದ ಆಗಿ ಹೊಯ್ತು. ಸಿದ್ದವೀರಪ್ಪನೋರ ಕೈಕೆಳಗಿದ್ದ ನಾನು ಅವರ ಯಜ್ಞಪಶುವಾದೆ. ಖಾದಿಬೋರ್ಡ್‌ನ ವೆಹಿಕಲ್ಸ್ ತಕ್ಕೊಂಡ್ ಹೋಗಿ ನಾನು ಪ್ರಚಾರ ಮಾಡಿದನೆಂದು ಅವರುಗಳು ದೂರಿದರು. ಈ ವಿಚಾರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಯಲ್ಲಿ ಸಹ ಚರ್ಚೆ ಆಯಿತು. ಸಾಮಾನ್ಯ ಅಧಿಕಾರಿಯೊಬ್ಬನ ಪ್ರಚಾರಕ್ಕೆ ಮುಖ್ಯಮಂತ್ರಿಗಳು ಸೋತರೆಂದು ಆ ಜನ ಭಾವಿಸಿದರೆ ಏನು ಹೇಳೋದು. ಒಬ್ಬ ವ್ಯಕ್ತಿ ಸೋತಾಕ್ಷಣಕ್ಕೆ ಹಿಂದುಳಿದೋರಿಗೆ ಭಾರೀ ಸವಲತ್ತು ಸಿಕ್ಕುತ್ತದೆಂದು ನಾನೇನೂ ಭಾವಿಸಿರಲಿಲ್ಲ, ಖಂಡಿತವಾಗಿ ನಾನು ಆ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಸಂಬಂಧ ಇಟ್ಟುಕೊಂಡಿರಲಿಲ್ಲ. ಹಾಗಾದರೂ ನನ್ನ ಮೇಲೆ ಗೂಬೆ ಕೂರಿಸೋದನ್ನ ಅವರು ಬಿಡಲಿಲ್ಲ, ಇಲ್ಲಿ ಖಾದಿಬೋರ್ಡ್ ಆಡಳಿತಾಧಿಕಾರಿಯಾಗಿ ಹಗಲಿರುಳು ದುಡಿದರೂ ಡ್ಯೂಟಿ ಅಲೋಯನ್ಸ್ ಐವತ್ತು ರೂಪಾಯಿನ ನಮ್ಮ ಹಣಕಾಸು ಸಚಿವ ಟಿ. ಮರಿಯಪ್ಪನೋರು ಯಾವ ಕಾರಣಕ್ಕೋ ಮಂಜೂರು ಮಾಡಿರಲಿಲ್ಲ. ಬೋರ್ಡ್‌ನ ಅಧ್ಯಕ್ಷರಾದ ಸಿದ್ಧವೀರಪ್ಪನೋರು ಸಹಕಾರಿ ಮಂತ್ರಿ ಮಾಲಿ ಮರಿಯಪ್ಪನೋರು ಶಿಫಾರಸ್ಸು ಮಾಡಿದರೂ ನಮ್ಮ 'ದುಡ್ಡಿನ ಧಣಿ' ಜಪ್ಪಯ್ಯ ಎನ್ನಲಿಲ್ಲ. ಬೆಂಗಳೂರಿನಲ್ಲಿದ್ದಾಗ ನನ್ನ ಆರೋಗ್ಯ ಕೂಡ ಸರಿ ಇರುತ್ತಿರಲಿಲ್ಲ, ಇವೆಲ್ಲ ನೋಡ್ಕೊಂಡು 'ಇಲ್ಲಿಂದ ನನ್ನ ಬಿಡುಗಡೆ ಮಾಡಿ' ಅಂತ ಸರ್ಕಾರವನ್ನು ಪ್ರಾರ್ಥಿಸಿದೆ.

# ಮೈಸೂರು

## ಡಿವಿಜನಲ್ ಕಮೀಷನರ್ ಆಫೀಸ್

ಖಾದಿ ಬೋರ್ಡ್‌ನ ಸಹವಾಸ ಸಾಕೆನಿಸಿತು. 'ಸಿದ್ದ ವೀರಪ್ಪನೋರೇ ನನ್ನನ್ನು ಬಿಡುಗಡೆ ಮಾಡಿ' ಎಂದು ಕೋರಿದೆ. ಕೊನೆಗೂ 1963ರ ಪ್ರಾರಂಭದಲ್ಲಿ ನಾನು ಮೈಸೂರು ಡಿವಿಜನಲ್ ಕಮೀಷನರ್ ಅವರ ಮೂರು ಅಸಿಸ್ಟೆಂಟ್‌ಗಳಲ್ಲಿ ನಾನೂ ಒಬ್ಬನಾದೆ. ನನ್ನದು ಡೆವಲಪ್‌ಮೆಂಟ್ ವಿಭಾಗ. ಈ ತನಕ ಗೂಳಿಯಂತೆ ಅಲ್ಲಲ್ಲಿ ನುಗ್ಗಿ ಕೆಲಸ ಮಾಡಿದ್ದೆ. ಇಲ್ಲಿ-ಪೆನ್ನು ಪೇಪರ್ ಜೊತೆ ಟೇಬಲ್ ಹತ್ತಿರ ಕುರ್ಚಿಗೆ ಆತು ಕುಳಿತುಕೊಳ್ಳಬೇಕಾಯಿತು. ಅದರ ಜೊತೆಗೆ ನಿವೃತ್ತಿ ದಿನ ಕೂಡ ದೂರವಿರಲಿಲ್ಲ. ಹಿಂದೆ ತಿಪಟೂರು ಸರ್ಕಲ್‌ಗೆ ಸೊಸೈಟಿ ಇನ್ಸ್‌ಪೆಕ್ಟರ್ ಆಗಿ ಹೋದ ಮಲ್ಲಪ್ಪನ ಕಸುವು ಈಗ ನನ್ನ ಶರೀರದಲ್ಲಿ ಉಳಿದಿರಲಿಲ್ಲ. ನಾನು ರೋಗದ ಗೂಡಾಗಿದ್ದೆ. ನನ್ನ ಹಿರೇ ಮಕ್ಕಳು ರಾಜ ಹಾಗು ಶಂಕರ ಮೈಸೂರಿನಲ್ಲೇ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಓದುತ್ತಿದ್ದರು. ಉಳಿದೋರು ಕೂಡ ಇಲ್ಲೇ ವಿದ್ಯಾಭ್ಯಾಸ ಮಾಡ್ತಿದ್ದು ನನಗೆ ಮೈಸೂರು ವರ ಪ್ರಧಾನವಾಗಿತ್ತು. ವಿದ್ಯಾರ್ಥಿದಿಸೆಯಿಂದಲೂ ಕಾಡಿದ ಗ್ಯಾಸ್ಟ್ರಿಕ್ ಖಾಯಿಲೆ ಈ ನಡುವೆ ಹೆಚ್ಚಾಗಿತ್ತು. ಹೋಟೆಲ್ ಊಟ ಬೇಡವೆಂದೂ ವಾಣಿವಿಲಾಸಪುರದ ಮೊದಲನೇ ರಸ್ತೆಯಲ್ಲಿ ಮನೆ ಹುಡುಕಿ ಸಂಸಾರವನ್ನು ಕರೆಸಿದೆ.

ನಾನು ಇಲ್ಲಿಗೆ ಬಂದಾಗ ಬೀರಪ್ಪನೋರೇ ಡಿವಿಜನಲ್ ಕಮೀಷನರ್ ಆಗಿದ್ದರು. ಆಮೇಲೆ ಬೆಂಗಳೂರಿಗೆ ಟ್ರಿಬ್ಯುನಲ್ ಛೇರ್ಮನ್ ಆಗಿ ಹೋದರು, ಆಗ ಅವರು ಮೈಸೂರಿನ ಕುರುಬರ ಸಾರ್ವಜನಿಕ ವಿದ್ಯಾರ್ಥಿನಿಲಯದ ಅಧ್ಯಕ್ಷರೂ ಆಗಿದ್ದರು. ಮಂತ್ರಿಗಳಾಗಿದ್ದ ಟಿ.ಮರಿಯಪ್ಪನವರು ಯಾರ್‍ಯಾರನ್ನೋ ಹಿಡಿದು ಸಿಲ್ಕ್‌ಫಾರಂ ಬಳಿ ವಿಶಾಲವಾದ ನಿವೇಶನವೊಂದರಲ್ಲಿ ವಿದ್ಯಾರ್ಥಿನಿಲಯ ಕಟ್ಟಿಸಿದ್ದರು. ಬೀರಪ್ಪನೋರು ಹೋಗುತ್ತಾ ಈ ಹಾಸ್ಟೆಲಿನ ಅಧ್ಯಕ್ಷಗಿರಿ ನನ್ನ ತಲೆಗೆ ಕಟ್ಟಿಸಿದರು. ಮೈಸೂರಿನಲ್ಲಿ ಎಷ್ಟೋ ಜನ ನನ್ನ ಅಪ್ಪನಂತಹವರು ಇದ್ದರು. ಯಾರೂ ಹಾಸ್ಟೆಲ್ ಕಡೆ ತಲೆ ಹಾಕಿ ಮಲಗಿದವರಲ್ಲ. ಈ ವಿದ್ಯಾರ್ಥಿ ನಿಲಯಕ್ಕೆ ನನ್ನ ಗುರುಗಳಾದ ಡಾ|| ಎಸ್.ವಿ.ರಂಗಣ್ಣನವರು ಕೂಡ ಭಾಷಣಕ್ಕೆ ಬಂದಿದ್ದರು. ತುಮಕೂರಿನ ಕಾಳಿದಾಸ ವಿದ್ಯಾವರ್ಧಕ ಆಶ್ರಯದಲ್ಲಿದ್ದ ವಸತಿಗೃಹ ಕೂಡ

ಹೇಗೋ ನಡೆಯುತ್ತಿತ್ತು. ಕಟ್ಟಡ ಪೂರ್ಣ ಆಗುತ್ತಿತ್ತು. ಇಷ್ಟು ಹೊತ್ತಿಗೆ ಶ್ರೀನಿವಾಸನ್ ಎಂಬುವವರು ಮೈಸೂರಿನ ಡಿವಿಜನಲ್ ಕಮೀಷನರ್ ಆಗಿ ಬಂದಿದ್ದರು. ಮದ್ರಾಸ್‌ನೋರು. ಕಾನೂನು ಗೆರೆ ಇಟ್ಟುಕೊಂಡೇ ಕೆಲಸ ಮಾಡುತ್ತಿದ್ದರು. ನನ್ನ ಈ ಸಾರ್ವಜನಿಕ ಚಟುವಟಿಕೆ, ಅವರಿಗೆ ಗೊತ್ತಾಗಿರಬೇಕು. ಒಂದು ಸಾರಿ 'ಏನು ಮಲ್ಲಪ್ಪನೋರೇ ನೀವು ಸಿನ್ಸಿಯರ್ ವರ್ಕರ್, ನೀವು ಇಲ್ಲಿನ ಒಂದು ಹಾಸ್ಟೆಲ್ ಅಧ್ಯಕ್ಷರೂ ಅಲ್ಲದೆ ಇನ್ನೆಲ್ಲೋ ಹಾಸ್ಟೆಲ್, ಕಟ್ಟಡ ಅಂತ ಓಡಾಡ್ತೀರಂತೆ' ಎಂದರು. 'ಹೌದು ಸಾರ್, ನೆಮ್ಮದಿ ಜೀವನಕ್ಕೆ ಈ ಕೆಲಸ ಎಂದೆ.' ಆಗ ಅವರು ಬೆಣ್ಣೆಯಲ್ಲಿ ಕೂದಲು ತೆಗೆದಂತೆ 'ನೋಡಿ ಅಲ್ಲೂ ಹೋಗಿ ನಾನು ಬೇಡ ಅನ್ನೋದಿಲ್ಲ. ಆದರೆ ರಸೀತಿಗೆ ಮತ್ತಿತರಕ್ಕೆ ರುಜು ಹಾಕಿ ಕಮಿಟ್ ಮಾಡ್ಕೋಬೇಡಿ ಎಂದರು. ಅಲ್ಲಿ 'ಹೂಂ' ಅಂದರೂ ಹಳ್ಳಿ ಮೇಲೆ ಹೋದಾಗ ವಸೂಲಾದ ಹಣಕ್ಕೆ ರಶೀತಿ ನಾನೇ ರುಜು ಮಾಡಿ ಕೊಡಬೇಕಾಗಿತ್ತು. ಶ್ರೀನಿವಾಸನ್‌ರವರೇನೋ ಒಳ್ಳೆ ಸಹೃದಯರು. ಒಂದು ದಿನ 5-45ಕ್ಕೆ ಆಫೀಸ್‌ನಿಂದ ಹೊರಡುತ್ತಿದ್ದಂತೆ ಹೇಳಿ ಕಳುಹಿಸಿದರು. ನಾನಿನ್ನೂ ಆಫೀಸ್‌ನಲ್ಲಿದ್ದೇನೆ, ಹೊರಟುಬಿಟ್ರಲ್ಲಾ' ಎನ್ನುತ್ತಾ ಫ್ಲಾಸ್ಕ್‌ನಲ್ಲಿದ್ದ ಬೋರ್ನ್ ವೀಟಾನ ಬಗ್ಗಿಸಿಕೊಂಡು ಇಷ್ಟಿಷ್ಟೇ ಹೀರುತ್ತಾ ಮಾತನಾಡಲಾರಂಭಿಸಿದರು. ನಾನು ಕೂಲ್ ಆಗಿ 'ಎಸ್ಸಾರ್, ಸಂಜೆ ಆರು ಗಂಟೆ ತನಕ ಯಾಕೆ ಈ ಫೈಲ್‌ನಲ್ಲಿ ಮುಳುಗುತ್ತೀರಾ. ಹಾಗೇನೇ ನಿಮ್ಮ ಮಿಸೆಸ್ ಜೊತೆಯಲ್ಲಿ ಕುಕ್ಕನಹಳ್ಳಿ ಕೆರೆ ಏರಿ ಮೇಲೆ ಒಂದು ಈವನಿಂಗ್ ವಾಕ್ ತಕ್ಕೊಳ್ಳಿ, ಹಾಗೇನೇ ಗಂಗೋತ್ರಿ ಆವರಣಕ್ಕೆ ಹೋಗಿ. ಯಾವ್ಯಾವ ಗಿಡ ಬಂದಿಲ್ಲ, ಅನ್ನೋದು ಗುರ್ತಿಸಿ. ಬೆಳಗಿನ ಚಾವಕ್ಕೂ ಬನ್ನಿ. ಒಳ್ಳೆ ತಂಪಾದ ಹವೆ ಸಿಗುತ್ತೆ' ಎಂದೆ. ಅದಕ್ಕವರು 'ಹೌದು, ಹೌದು ಹಾಗೇ ಮಾಡ್ತೀನಿ-ಈ ಆಫೀಸಿಗೆ ಬಂದ್ಬಿಟ್ರೆ ಹೊರಪ್ರಪಂಚಾನೆ ಗೊತ್ತಾಗೋದಿಲ್ಲ' ಎಂದರು.

ಈ ತನಕ ನನ್ನ ಸರ್ವೀಸ್‌ನಲ್ಲಿ ಕೂತು ಕೆಲಸ ಮಾಡಿದ್ದೇ ಇಲ್ಲ. ಈ ಆಫೀಸಿಗೆ ಬಂದ ಮೇಲೆ ಮೊಳೆ ಹೊಡ್ಕೊಂಡೇ ಕುಳಿತುಕೊಳ್ಳಬೇಕಾಯಿತು ಆದರೂ ಡಿವಿಜನಲ್ ಕಮೀಷನರ್ ಅವರು ಆಯಾಯಾ ಜಿಲ್ಲೆಗಳಿಗೆ ಹೋಗಿ ಆಗಿರೋ ಕೆಲಸದ ಪ್ರಗತೀನ ನೋಡ್ಕೊಂಡು ಬನ್ನಿ ಎನ್ನುತ್ತಿದ್ದರು. ಗೂಂತಿನಿಂದ ಹಗ್ಗ ಕಳಚಿ ಬಿಟ್ಟ ಕರು ತರಹ ದೌಡಾಯಿಸುತ್ತಿದ್ದೆ. ಆಯಾಯ ಸಂದರ್ಭದಲ್ಲಿ ಸಾರ್ವಜನಿಕರನ್ನು ಕುರಿತು ಸಹ ಮಾತನಾಡಬೇಕಾಗಿತ್ತು. ಒಂದು ಸಾರಿ ಹೀಗೆ

ಮಳವಳ್ಳಿಯಲ್ಲಿ 'ಕುಟುಂಬ ಕಲ್ಯಾಣ'ದ ಪ್ರಯೋಜನ ಕುರಿತು ನನ್ನ ಹಳ್ಳಿ ಭಾಷೆಯಲ್ಲಿ ಮಾತನಾಡುತ್ತಿದ್ದೆ. 'ನೋಡಿ, ನನಗೆ ಮೂರು ಜನ ಗಂಡು ಮಕ್ಕಳು. ನಾಲ್ಕು ಜನ-ಹೆಣ್ಣುಮಕ್ಕಳು ಗಂಡು ಮಕ್ಕಳು ಇನ್ನೂ ಡಾಕ್ಟರ್ ಇಂಜಿನಿಯರ್ ಓದ್ತಾ ಅವರೆ. ಹೆಣ್ಣು ಮಕ್ಕಳಿನ್ನೂ ದಡ ಮುಟ್ಟಿಲ್ಲ. ನನಗೋ ಎರಡು ತಿಂಗಳಿಗೆ ಪಿಂಚಣಿ ಆಗ್ತದೆ. ಆದರೆ ನನ್ನ ಸಂಸಾರ ಇನ್ನೂ ಅರ್ಧಾಂತರ ಆಗಿದೆ. ಅದು ಬೀದಿ ಪಾಲಾಗಬಾರದು, ನನ್ನ ನೋಡಿ, ನಿಮ್ಮ ಮಕ್ಕಳ ಸಂಖ್ಯೆ ಸರಿ ಮಾಡಿಕೊಳ್ಳಿ'' ಎನ್ನುತ್ತಿದ್ದೆ. ಕೇವಲ ಹಳ್ಳಿ ಜನರ ತೊಂದರೆ ನಿವಾರಣೆಗಾಗಿ ಹೇಳುತ್ತಿದ್ದರೂ ನನ್ನ ಅಂತರಂಗದಲ್ಲೂ ಈ ಸಮಸ್ಯೆ ಕಾಡುತ್ತಲೂ ಇತ್ತು. ಇದನ್ನೆಲ್ಲಾ ನೆನೆದಾಗ - ಎದೆ ಡವಗುಟ್ಟುತ್ತಿತ್ತು.

ಒಂದು ದಿನ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆದ ಮುನಿಸ್ವಾಮಿ ಅವರ ಜೊತೆ ಮಾದರಿ ಯುವಕರ ತರಬೇತಿ ಕೇಂದ್ರವಾದ ಶಿವಾರ ಗುಡ್ಡಕ್ಕೆ ಹೋದೆ. ಅಲ್ಲಿನ ಹಲಸು, ಸಪೋಟ, ತೆಂಗಿನ ಮರಗಳು ನನಗೆ ಖುಷಿ ಕೊಟ್ಟವು. ಒಳ್ಳೆ ಭೂಮಿ, ಸಾಕಷ್ಟು ಚೆನ್ನಾಗಿ ಬೇಸಾಯ ಮಾಡಿದ್ದರು. ಅಲ್ಲಿನೋರಿಗೆ ಸಾಕಷ್ಟು ಕಿಮ್ಮತ್ತು ಕೊಟ್ಟರೆ ಏನು ಬೇಕಾದರೂ ಮಾಡಬಹುದೆನ್ನಿಸಿತು. ಅಲ್ಲಿನ ಕೋಳಿ ಸಾಕಾಣಿಕೆ ಉದ್ಯಮ ನನಗೆ ಬಹು ಹಿಡಿಸಿತು. ಮನೆಗೆ ಬಂದವನೇ 'ನಾನೇಕೆ ಸಣ್ಣ ಫಾರಂ ಒಂದು ಮಾಡ ಬಾರದು' ಅಂತ ನಿರ್ಧರಿಸಿದೆ. ಬೆಳಿಗ್ಗೆ ಎದ್ದು ಬಡಗಿಯವನನ್ನ ಹುಡುಕಿ ಒಂದು ಗೂಡು ಮಾಡಿಸಿದೆ. ವಿವಿಧ ಜಾತಿಯ 50-60 ಕೋಳಿಗಳು ಬಂದವು. ಕೋಳಿ ಸಾಕಾಣಿಕೆಯ ಬಗ್ಗೆ ನಾನು ಸಾಕಷ್ಟು ಮಾಹಿತಿ ಪಡೆದುಕೊಂಡೆ ಕಾಂಪೌಂಡಿನ ತೆಂಗಿನ ಮರದ ನೆರಳಿನಲ್ಲಿ ಗೂಡು ಇಟ್ಟೆ. ನಾನು ಮತ್ತು ನನ್ನ ಹೆಂಡತಿ ಅವುಗಳ ಸಂಬಂಧವಾಗಿ ಒಂದಿಷ್ಟು ಕೆಲಸ ಮಾಡಿದೆವು. ಪ್ರತಿಫಲ-ಯಥೇಚ್ಛವಾದ ಮೊಟ್ಟೆಗಳು. ನಮ್ಮ ಹುಡುಗರಿಗೆ ದಿನಾ ಯುಗಾದಿನೇ ಆಯಿತು. ನಾನು ಉಪಯೋಗಿಸುತ್ತಿರಲಿಲ್ಲ ಅದನ್ನ ಮಾರಿದಾಗ ಒಂದಿಷ್ಟು ದುಡ್ಡು ಬರುತ್ತಿತ್ತು. ನಾನು ಖಾಯಿಲೆಯಾಗಿ ಆಸ್ಪತ್ರೆಗೆ ಸೇರಿದ ಮೇಲೆ ಆರೈಕೆಯಿಲ್ಲದೆ ಈ ಸಣ್ಣ ಫಾರಂ ನಶಿಸಿ ಹೋಯಿತು. ಅಂದರೆ ನನ್ನ ಮನಸ್ಸಿಗೆ ಬಂದ ಕೆಲಸನ ಯಾವುದೇ ಕಾಲದಲ್ಲೆ ಆಗಲೀ ಮಾಡದೇ ಇರುತ್ತಿರಲಿಲ್ಲ.

ಆಗಲೂ ಆಹಾರ ಧಾನ್ಯಗಳ ಕಂಟ್ರೋಲ್ ಇತ್ತು. ಸರ್ಕಾರಿ ನೌಕರರು ಅಕ್ಕಿ,

ರಾಗಿ, ಗೋಧಿ, ಸಕ್ಕರೆಗಾಗಿ ಅಲ್ಲಲ್ಲಿ ಅಲೆದಾಡಬೇಕಾಗಿತ್ತು. ಇದಕ್ಕಾಗಿ ಸರ್ಕಾರಿ ನೌಕರರ ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ ಪ್ರಾರಂಭಿಸಲು ಕಮೀಷನರ್ ಅಪ್ಪಣೆ ದೊರಕಿಸಿಕೊಂಡೆ. ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿಕೊಂಡು ಕಾರ್ಯ ಪ್ರವೃತ್ತನಾದೆ. ಇದರಿಂದ ಸರ್ಕಾರಿ ನೌಕರರಿಗೆ ಎಷ್ಟೋ ಉಪಕಾರವಾಯಿತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಆಗ ಟ್ರಸ್ಟ್ ಬೋರ್ಡಿನವರು ನಿವೇಶನಗಳನ್ನು ವಿಲೇವಾರಿ ಮಾಡುತ್ತಿದ್ದರು. ನಾನೊಂದು ಅರ್ಜಿ ಹಾಕಿದೆ. ಸರಸ್ವತಿಪುರಂನ ಮುಖ್ಯರಸ್ತೆಯಲ್ಲೇ 110 x 60 ಸೈಟೊಂದು ಮಂಜೂರಾಯಿತು. ಇದರ ಡೆಪಾಸಿಟ್ ಮೊಬಲಗು 1000 ರೂ.ಗಳನ್ನು ಕಟ್ಟಿದೆ. 'ನಿಮ್ಮ ಮಕ್ಕಳ ಹೆಸರಿನಲ್ಲಿ ಒಂದೆರಡು ಸೈಟು ಮಾಡಿ. ಮುಂದಕ್ಕೆ ತಲೆ ಕಾಯ್ತದೆ' ಎಂದರು ಕೆಲವರು. ಕೊಟ್ಟಷ್ಟು ಸಾಕು ಹೆಚ್ಚಿಗೆ ಬೇಡ ಎಂದೆ. ಈ ಸೈಟಿನಲ್ಲಿ ಗೂಡೊಂದನ್ನು ನಿರ್ಮಿಸಬೇಕೆಂದು ಯೋಚಿಸಿ, ಹೌಸಿಂಗ್ ಬೋರ್ಡಿಗೆ ಸಾಲಕ್ಕೆ ಅರ್ಜಿ ಹಾಕಿದೆ. ಹನ್ನೆರಡು ಸಾವಿರ ರೂಪಾಯಿ ಸಾಲ ದೊರಕಿತು. ಒಂದು ಔಟ್ ಹೌಸ್ ಮಾತ್ರ ಕಟ್ಟಲು ಸಾಧ್ಯವಾಯಿತು, ಕಂಟ್ರಾಕ್ಟರ್ ಒಬ್ಬನಿಗೆ ಕೂಲಿ ಗುತ್ತಿಗೆ ಆಧಾರದ ಮೇಲೆ ವಹಿಸಿದೆ. ಮನೆ ಕೆಲಸಕ್ಕಾಗಿ ಹೆಣಗಬೇಕಾಯಿತು. ಬೆಳಿಗ್ಗೆ ಆಫೀಸಿಗೆ ಹೋಗೋಕೆ ಮುಂಚೆ. ಸಂಜೆ ಆಫೀಸ್ ನಂತರ ಮನೆ ಕೆಲಸಕ್ಕೆ ಹೋಗುತ್ತಿದ್ದೆ. ಇನ್ನು ಉಳಿಕೆ ಸಮಯದಲ್ಲಿ ನನ್ನ ಹೆಂಡತಿ ಅಲ್ಲಿರುತ್ತಿದ್ದಳು. ಇಟ್ಟಿಗೆ ಕೊಡೋದು, ನೀರು ಹಾಕೋದು ಮುಂತಾದನ್ನೆಲ್ಲಾ ನನ್ನ ಹೆಂಡತೀನೇ ಮಾಡುತ್ತಿದ್ದಳು. ಸಂಜೆ ಆಫೀಸ್‌ನಿಂದ ಸೀದಾ ಅಲ್ಲಿಗೆ ಹೋಗಿ ಬಳಲಿ ಬೆಂಡಾಗಿರುತ್ತಿದ್ದ ಆಕೆನ ಮಾತನಾಡಿಸುತ್ತಾ ಮನೆ ಸೇರುತ್ತಿದ್ದೆ. ವಿವಿಧ ವಿಚಾರಗಳನ್ನ ಮಾತನಾಡುತ್ತ ಮನೆ ಸೇರುತ್ತಿದ್ದೆವು. ಆಕೆ ಒಲೆ ಹತ್ತಿರ ಹಿಟ್ಟು ತೊಳೆಸುತ್ತಿರಬೇಕಾದರೆ ಮಾತನಾಡುತ್ತಾ ಅಲ್ಲೆ ಕುಳಿತುಕೊಳ್ಳುತ್ತಿದ್ದುದನ್ನು ಈಗ ನೆನೆದರೆ ಪರಸ್ಪರ ಕಷ್ಟವನ್ನು, ಹಂಚಿಕೊಳ್ಳುತ್ತಿದ್ದ ಆ ಸನ್ನಿವೇಶ ಹೊರಟು ಹೋಯಿತೇ..... ಅನ್ನಿಸುತ್ತದೆ.

ಆಗ ಮೈಸೂರಿನಲ್ಲಿ ಸಿವಿಲ್ ಜಡ್ಜ್ ಆಗಿದ್ದ ಸಿದ್ದಪ್ಪ ಎಂಬುವರು ಹಿಂದೆ ನನ್ನ ಕಾಲೇಜ್ ಸಹಪಾಠಿ ಸಹ ಆಗಿದ್ದರು. ಸೇವಾ ತತ್ಪರರು. ಯಾವುದೇ ಕೆಲಸ ಮೇಲು ಕೀಳನ್ನದೆ ಮಾಡೋ ಸ್ವಭಾವದವರು. ಹಿಂದೆ ಕಾಲೇಜ್ ದಿನಗಳಲ್ಲಿ ನಮ್ಮ ಮಿತ್ರರೊಬ್ಬರಿಗೆ ಕಾಲರಾ ತರಹ ಅಂಟು ಜಾಡ್ಯ ತಲೆದೋರಿದಾಗ ಆ

ಪ್ರಾಂತಿ ಭೇದಿನ ಬೇಸರಿಸಿಕೊಳ್ಳದೆ ಸ್ವಚ್ಛ ಮಾಡಿದವರು. ಅವರು ಆಸ್ಪತ್ರೆಯಲ್ಲಿದ್ದಾರೆಂದು ಯಾರೋ ಹೇಳಿದರು. ಸ್ಪೆಷಲ್ ವಾರ್ಡಿಗೆ ಓಡಿದೆ. ನನ್ನನ್ನು ನೋಡಿ ಅವರಿಗೆ ಪರಮಾನಂದ. ಹಳೆಯ ದಿನಗಳನ್ನು ನೆನೆಸಿಕೊಂಡರು. ನಮ್ಮ ಉಪಾಧ್ಯಾಯರುಗಳನ್ನು ಜ್ಞಾಪಿಸಿಕೊಂಡರು. ಎಷ್ಟು ಮಾತನಾಡಿದರೂ ಅವರಿಗೆ ತೃಪ್ತಿ ಇಲ್ಲ. ಬೇಡ ಈ ಸ್ಥಿತೀಲಿ ನೀವು ಆಯಾಸ ಮಾಡ್ಕೋಬೇಡ್ರಿ ಅಂದ್ರೆ ಅಯ್ಯೋ ನೀವು ಸಿಕ್ಕಿದೀರಾ ನಾನು ಪುನಃ ಕಾಲೇಜು ಹುಡುಗನಾದೆ, ಅಂದರು. ಇದಾದ ಎರಡು ದಿನಕ್ಕೆ ಅವರ ದೇಹಸ್ಥಿತಿ ಕೆಟ್ಟು ಕೋಮಸ್ಥಿತಿಗೆ ಬಂತು. ಮತ್ತೆರಡು ದಿನಗಳಲ್ಲಿ ಇಹಲೋಕ ತ್ಯಜಿಸಿದರು.

ಸಿದ್ದಪ್ಪನೋರ ಸಾವಿನಿಂದ ನಾನು ಚೇತರಿಸಿಕೊಂಡಿರಲಿಲ್ಲ, ಬೆಂಗಳೂರಿನಿಂದ ದೂರ ವಾಣಿಯೊಂದು ಬಂತು. ಟಿ.ಮರಿಯಪ್ಪನವರು ಸ್ವರ್ಗಸ್ಥರಾಗಿದ್ದರು. ನಾನು ತಂದೆನ ನೋಡಿರಲಿಲ್ಲ. ಆದರೆ ಮರಿಯಪ್ಪನವರ ಪರಿಚಯವಾದ ಮೇಲೆ ಅದರ ಕೊರತೆ ಎನಿಸಿರಲಿಲ್ಲ. ಎಲ್ಲಾ ತಂದೆಗೂ ತಮ್ಮ ಮಕ್ಕಳು ಶ್ರೇಯೊಭಿಲಾಷಿಗಳಾಗಬೇಕೆಂಬ ಹಂಬಲವಿರುತ್ತದೆ. ಮರಿಯಪ್ಪನೋರಿಗೆ ನನ್ನೊಬ್ಬನ ಶ್ರೇಯಸ್ಸಿನ ಬಗ್ಗೆ ಮಾತ್ರ ಆಸಕ್ತಿ ಇರಲಿಲ್ಲ. ಬಡವರ ಮತ್ತು ಹಿಂದುಳಿದವರ ಬಗ್ಗೆ ಅಪಾರ ಆಸೆ ಇತ್ತು. ರಾಜ್ಯದ ರಮ್ಯ ರಾಜಕೀಯ ಇತಿಹಾಸದಲ್ಲಿ ಮರಿಯಪ್ಪನೋರಿಗೆ ಯಾವ ಸ್ಥಾನ ಇರುತ್ತದೋ ಬಲ್ಲವರು ಹೇಳಬೇಕು. ಸಾರಿಗೆ ಸಚಿವರಾಗಿದ್ದಾಗ ಮಾಡಿದ ರಾಷ್ಟ್ರೀಕರಣ ಯೋಜನೆ ಸಹಕಾರ ಸಚಿವರಾಗಿದ್ದಾಗ ಮಾಡಿದ ಸಹಕಾರ ತತ್ವದ ವ್ಯಾಪಕ ಪ್ರಚಾರ, ಹಣಕಾಸು ಸಚಿವರಾಗಿದ್ದಾಗ ಮಾಡಿದ ವಿವಿಧ ಯೋಜನೆಗಳಿಂದಾಗಿ ಮರಿಯಪ್ಪನೋರು ಸ್ವಾತಂತ್ರ್ಯದ ಪ್ರಭಾವಶಾಲೀ ನಾಯಕರಾಗಿ ಉಳಿಯೋದರಲ್ಲಿ ಸಂಶಯವಿಲ್ಲ. ತುಸು ಆರೋಗ್ಯ ಹದಗೆಟ್ಟ ತಕ್ಷಣ ಅಧಿಕಾರ ಬಿಟ್ಟರು, ಕೊನೇತನಕ ಪಕ್ಷನಿಷ್ಠೆ, ತತ್ವ ನಿಷ್ಠೆಗಳನ್ನು ನಂಬಿದ್ದರು. ಸಮಾಜದ ಕೆಳವರ್ಗದ ಜನರ ಬಗ್ಗೆ ಕಾಳಜಿ ಹೊಂದಿದ್ದ ಮರಿಯಪ್ಪನೋರ ವ್ಯಕ್ತಿತ್ವವನ್ನಂತೂ ನಾನು ಈ ಜನ್ಮದಲ್ಲಿ ಮರೆಯಲು ಸಾಧ್ಯವಿಲ್ಲ.

ಶ್ರೀ ಶ್ರೀನಿವಾಸನ್ ನಂತರ ನರಸಿಂಹಮೂರ್ತಿ ಮೈಸೂರಿನ ಡಿವಿಜನಲ್ ಕಮೀಷನರ್ ಆಗಿ ಬಂದರು. ಇವರು ಮಹಾರಾಜ ಕಾಲೇಜಿನಲ್ಲಿ ನನ್ನ ಸೀನಿಯರ್ ವಿದ್ಯಾರ್ಥಿದೆಸೆಯಲ್ಲೇ ''ಆಧುನಿಕ ಜಗತ್ತಿನಲ್ಲಿ ಪ್ರಿಂಟಿಂಗ್ ಪ್ರೆಸ್ಸಿನ

ಮಹತ್ವ'' ಎಂಬ ವಿಚಾರದ ಬಗ್ಗೆ ಮಾತನಾಡಿ ಅಂದು ಅಧ್ಯಾಪಕ ವರ್ಗದವರನ್ನು ದಂಗುಬಡಿಸಿದ್ದವರು; ಅದನ್ನು ಅವರಿಗೆ ಸ್ವಾಗತ ಕೋರುವ ಸಂದರ್ಭದಲ್ಲಿ ಜ್ಞಾಪಿಸಿಕೊಟ್ಟೆ. ಆಗ ಮೈಸೂರಿನಲ್ಲಿ ನಡೆಯುತ್ತಿದ್ದ ದಸರಾ ಕಾರ್ಯಕ್ರಮದ ಆಟೋಟ ಸ್ಪರ್ಧೆಯ ಮೇಲುಸ್ತುವಾರಿಯನ್ನು ಡಿವಿಜನಲ್ ಕಮೀಷನ್ನರೇ ನೋಡಿಕೊಳ್ಳುತ್ತಿದ್ದರು. ಆಟದ ಅಭ್ಯರ್ಥಿಗಳಿಗೆ ಊಟದ ಹೊಣೆಗಾರಿಕೆ ನನ್ನ ಪಾಲಿಗೆ ಬಂದಿತ್ತು. ಸಸ್ಯಾಹಾರಿ ಊಟದವರದೇನೂ ಸಮಸ್ಯೆ ಇರುತ್ತಿರಲಿಲ್ಲ, ಮಾಂಸ ತಿನ್ನೋರು ''ನಮಗೆ ಬಾಡಿನ ತುಂಡು ಹಾಕಲಿಲ್ಲ'' ಅಂತ ಗಲಾಟೆ ಮಾಡುತ್ತಿದ್ದರು, ಯಾವ ಕಂಟ್ರಾಕ್ಟರೂ ಈ ಕೆಲಸಕ್ಕೆ ಬರುತ್ತಿರಲಿಲ್ಲ. ಯಾವನೋ ಒಬ್ಬನ್ನ ನೇಮಿಸಿ, ಊಟ ಬಡಿಸೋಕೆ ನಾನೇ ಸೌಟು ಹಿಡಿದೆ. ಏನೂ ಗಲಾಟೆಯಿಲ್ಲದೆ ಸುಸೂತ್ರವಾಗಿ ಆ ಸಾರಿ ನಡೆದಿತ್ತು.

ಡಿವಿಜನಲ್ ಕಮೀಷನರ ಅಸಿಸ್ಟೆಂಟ್ ಕೆಲಸವೆಂದರೆ ಕುರ್ಚಿಗೆ ಮೊಳೆ ಹೊಡ್ಕೊಂಡು ಕೂತಿರೋ ಕೆಲಸ. ಇದರ ಕೃಪಾಕಟಾಕ್ಷದಿಂದ ನನಗೆ ಮೊಳೆ ರೋಗ ಬಂತು. ಎಲ್ಲರೂ ಅಪರೇಷನ್ ಮಾಡ್ಸಿಕೊಳ್ಳಿ ಅಂದರೂ, ಈ ವಯಸ್ಸಿನಲ್ಲಿ ಆಪರೇಷನ್ ಮಾಡಿಸಿಕೊಂಡರೆ ಹೇಗೋ ಅಂತ ಹೆದರಿದೆ. ಹಾಗೇ ಒಂದು ಸಂಜೆ ಶಿವರಾಮ ಪೇಟೆಯಲ್ಲಿ ಬರಬೇಕಾದರೆ ಒಂದು ದೊಡ್ಡ ಬೋರ್ಡ್ ಕಾಣಿಸಿತು. ಕೇವಲ ಏಳೆಂಟು ದಿನಗಳಲ್ಲಿ ಆಪರೇಷನ್ ಇಲ್ಲದೆ ಮೊಳೆ ರೋಗ ಕುಲಾಸ್-ರಾಮಬಾಣದ ಔಷಧಿ' ಎಂದಿತ್ತು. ಸರಿ. ನಾನು ಹಿಗ್ಗಿ ಹಿಂದೆ ಮುಂದೆ ಯೋಚಿಸದೆ ನುಗ್ಗಿದೆ. ಕುರ್ಚಿ ಮೇಲೆ ಕೂತಿದ್ದ ವ್ಯಕ್ತಿ ಒಳ್ಳೆ ಬಕರ ಬಂದವನೆಂದು, ಬನ್ನಿ ಬನ್ನಿ ಎಂದು ಸ್ವಾಗತಿಸಿದ. ನೀವೇನೂ ಯೋಚನೆ ಮಾಡಬೇಡಿ ಈ ಮುಲಾಂನ ಎರಡು ಸಲ ಹಚ್ಚಿ. ನಿಮ್ಮ ಅಡ್ರೆಸ್ ಕೊಡಿ. ಮಾರನೇ ದಿನ ನಾವೇ ಬರುತ್ತೇವೆ' ಎಂದು ನನ್ನನ್ನು ಮಾತಿಗೆ ಬಿಡದೆ ತಲೆ ಸವರಿ ಅಟ್ಟಿದ. ಮಾರನೇ ದಿನ ಸಂಜೆ ಇಬ್ಬರು ಬಂದರು. ಓದುತ್ತಿದ್ದ ನನ್ನ ಗಂಡು ಮಕ್ಕಳನ್ನು ಕಳುಹಿಸಿ ನನ್ನ ಆ ರೂಂನಲ್ಲಿ ಕೂರಿಸಿಕೊಂಡರು. ಮೂವತ್ತು ರೂಪಾಯಿ ಕೊಡಿ ಎಂದರು. ಕೊಟ್ಟೆ ಚಾಪೆ ಹಾಕಿದರು. ಮಾರಿ ಕಂಬಕ್ಕೆ ಬರುವ ಹೋತದಂತೆ ನಾನು ಅವರ ಮಾತು ಪಾಲಿಸಿದೆ. ಒಬ್ಬ ಕೈ ಕಾಲು ಹಿಡಿದುಕೊಂಡ. ಮತ್ತೊಬ್ಬ ಚೀಲದಿಂದ ಚಾಕು, ಸಣ್ಣ ಗರಗಸ ತಕ್ಕೊಂಡು ಗುದದ್ವಾರದ ಹತ್ತಿರ ಯರ್ರಾಬಿರ್ರಿ ಕುಯ್ಯಲಾರಂಭಿಸಿದ. ನನಗೆ ಪ್ರಾಣವೇ ಹೋದಂತಾಯಿತು. ನಿಜವಾದ ನರಕವೆಂದರೆ ಇದೇ ಇರಬೇಕೆಂದುಕೊಂಡೆ. ಬಾಯಿ

ಬಿಡಿದುಕೊಳ್ಳೋಣ ಅಂದರೆ, ಎರಡೂ ಕೈಗಳನ್ನು ಒಬ್ಬ ಹಿಡಿದಿದ್ದಾನೆ. ಏನೂ ಗೊತ್ತಿರದ ಹೆಂಡತಿ ಮಕ್ಕಳು ಆಕ್ರಂದನ ಧ್ವನಿ ತೆಗೆದರು. ಈ ರಣ ವೈದ್ಯರಿಗೂ ಗಾಬರಿಯಾಗಿರಬೇಕು. ಬೇಗ ಮುಗಿಸಿ ಒಂದು ಪೆನ್ಸಿಲಿನ್ ಇಂಜಕ್ಷನ್ ತಕ್ಕೊಳ್ಳಿ ಅಂತ ಹೇಳಿ ಓಡಿದರು. ಅಂತೂ ಈ ಜನ್ಮದಲ್ಲಿ ಈ ರಣ ವೈದ್ಯರಿಂದ ಬಿಡುಗಡೆಯಾಯಿತಲ್ಲ ಎನಿಸಿತು. ಚಾಪೆ ತುಂಬ ರಕ್ತ. ವಿಷಯ ತಿಳಿದ ಡಾಕ್ಟರ್ ಓದುತ್ತಿದ್ದ ಮಗ ಹಾಗೂ ಹೆಂಡತಿ ನನಗೆ ಸಾಕಷ್ಟು ಛೀಮಾರಿ ಹಾಕಿದರು. ಮುಂದೆ ಈ ಮೊಳೆ ರೋಗ ಇನ್ನೂ ಹೆಚ್ಚಾಯಿತು. ಆಪರೇಷನ್ ಮಾಡ್ಸಿಕೊಂಡೆ ಅನ್ನಿ, ಇಷ್ಟೆಲ್ಲಾ ಗೊತ್ತಿದ್ದರೂ ಹೇಗೆ ಬೇಸ್ತು ಬೀಳುತ್ತೇನೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

ಒಂದು ಸಾರಿ ಆಫೀಸ್‌ನಲ್ಲಿ ವಿರಾಮಕಾಲದಲ್ಲಿ ಊಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಹೊಟ್ಟೆಯಲ್ಲಿ ಏನೋ ಹೊರಳಿದಂತಾಗಿ ಕುಸಿದು ಬಿದ್ದೆ. ಸ್ನೇಹಿತರ ಸಹಾಯದಿಂದ ಆಸ್ಪತ್ರೆಗೆ ಸೇರಿದೆ. ಡಾ|| ಪಿ.ರಾಜಪ್ಪ ಮತ್ತು ಡಾ|| ಕೆ.ದಾಸ್ ನನ್ನನ್ನು ನೋಡಿಕೊಳ್ಳುತ್ತಿದ್ದರು. ದೊಡ್ಡ ಕರುಳಿನ ತುದಿಯಲ್ಲಿ ಭಾರೀ ವ್ರಣವೊಂದು ಬೆಳೆದಿತ್ತೆಂದು ಕೆಲವರು ಭಾವಿಸಿದ್ದಂತೆ ತೋರುತ್ತದೆ. ಆದರೆ ಅದಾವುದೂ ಇಲ್ಲದೆ ಗ್ಯಾಸ್ಟ್ರಿಕ್ ಸಂಬಂಧಪಟ್ಟ ಕಾಯಿಲೆ ಅದು, ನಾನು ಆಸ್ಪತ್ರೆಗೆ ಸೇರಿದ ಮೇಲೆ ನನ್ನ ನೋಡಿಕೊಂಡು ಹೋಗಲು ಅನೇಕ ಮಿತ್ರರು, ಅಭಿಮಾನಿಗಳು, ಬಂದರು. ಅವರಲ್ಲಿ ಕೊಳ್ಳೇಗಾಲದ ಡಾ|| ದೊಡ್ಡ ಮಾದೇಗೌಡರು ಹಾಗೂ ರಾಜೇಗೌಡ್ರು ಬಂದು ನನ್ನ ಹತ್ತಿರ ಬಹಳ ಹೊತ್ತು ಇದ್ದರು. ಆನಂತರ ಒಂದು ದೊಡ್ಡ ನೋಟಿನ ಪಿಂಡಿನ ಕೈಯಲ್ಲಿರಿಸಿ 'ಕಷ್ಟಕಾಲಕ್ಕೆ ಇದಾಗಲಿ' ಎಂದರು. ನಾನು ಸಾವಧಾನವಾಗಿ 'ಬೇಡ, ಈಗೇನೂ ಕಷ್ಟವಿಲ್ಲ' ಎಂದು ಹೇಳಿ ಅದನ್ನು ವಾಪಸ್ ಕೊಟ್ಟೆ. ಆದರೂ ಅವರ ವಿಶ್ವಾಸ ಕಂಡು ಕೃತಜ್ಞತೆ ಸೂಚಿಸಿದೆ. ಇದೇ ಸಂದರ್ಭಧಲ್ಲಿ ನಮ್ಮ ಡಿವಿಜನಲ್ ಕಮೀಷನರ್ ಬಂದು ನನ್ನ ನೋಡಿ, 'ಮಲ್ಲಪ್ಪನೋರೇ ಈ ಖಾಲಿ ಕಾಗದದ ಮೇಲೆ ರುಜು ಹಾಕಿ. ನಿಮಗೆ ಇನ್ನೆರಡು ವರ್ಷ ಎಕ್ಸಟೆನ್‌ಷನ್ ಕೊಡೋ ಹಾಗೆ ಮಾಡ್ತೀನಿ' ಎಂದರು. ನಾನು ಮಲಗಿದ್ದಲ್ಲಿಂದಲೇ ಕೈ ಮುಗಿದು 'ಬೇಡಿ ಸ್ವಾಮಿ, ಈ ಗಾಣದ ಎತ್ತಿನ ಕೆಲಸ ಇಲ್ಲಿಗೆ ಸಾಕಾಗಲಿ, ಕಾಲು, ಕೈ, ಮನಸ್ಸು ತನ್ನ ಇಷ್ಟದಂತೆ ಮುಂದೆ ಕೆಲಸ ಮಾಡಲಿ ಬಿಡಿ' ಎಂದು ಹೇಳಿ ನಮ್ರವಾಗಿ ಅವರ ಆಹ್ವಾನವನ್ನು ತಿರಸ್ಕರಿಸಿದೆ.

ನಾನು ಆಸ್ಪತ್ರೆಗೆ ಸೇರಿದಾಗ ಎಲ್ಲರೂ ಹೆದರಿದರು, ನನ್ನನು ನೋಡಲು ಹೆಂಡತಿ, ಮಕ್ಕಳು ಬರುತ್ತಿದ್ದರು. ಸೇರು, ಪಾವು, ಚಟಾಕುಗಳನ್ನು ನೋಡಿದಾಗ ಆಸ್ಪತ್ರೆ ಸಿಬ್ಬಂದಿಯವರಿಗೆ 'ಈ ಬೆಟಾಲಿಯನ್ ಯಾರದು' ಎಂಬ ಆಶ್ಚರ್ಯ.

ಆಸ್ಪತ್ರೆಯಿಂದ ಬಂದ ಮೇಲೆ ಮನೆಯಲ್ಲಿ ಒಂದಿಷ್ಟು ದಿನ ವಿಶ್ರಾಂತಿ ತಕ್ಕೊಂಡೆ. ಮಧ್ಯೆ ಡಾ|| ರಾಜಪ್ಪನಿಗೆ ಲಗ್ನ ಮಾಡಿದ್ದೂ ದೊಡ್ಡ ಸಾಹಸ ವಾಯಿತೆನ್ನಬೇಕು. ಆತ ಪದ್ಮಸಾಲೆ ಪಂಗಡದವನು. ನಾನು ಹರಿಹರದಲ್ಲಿ ಅಮಲ್ದಾರ್ ಆಗಿದ್ದಾಗ ಅವನಿಗೆ ಸಹಾಯ ಮಾಡಿ ಮೆಡಿಕಲ್‌ಗೆ ಸೇರಿಸಿದ್ದೆ. ಈಗ ಹೆಣ್ಣು ಹುಡುಕಲು ನಾವು ದಂಪತಿಗಳು ಒಂದು ಯಾತ್ರೆ ಹೊರೆಟೆವು. ಬಳ್ಳಾರಿ ಮೂಲಕ ಕಡಪಾಕ್ಕೆ ಹೊರಟು ಅಲ್ಲಿ ಸದ್ಗ್ರಹಸ್ಥರ ಮನೆ ಹೆಣ್ಣು ತಂದು ಮದುವೆ ಮಾಡಿದೆವು. ಈಗ ಆರೇಳು ಮಕ್ಕಳ ತಂದೆಯಾಗಿ ಆತ ಸುಖವಾಗಿದ್ದಾರೆ.

ಇಷ್ಟು ಹೊತ್ತಿಗೆ ನನ್ನ ನಿವೃತ್ತಿದಿನ ಕೂಡ ಹತ್ತಿರ ಬಂತು. 1965ರ ನವೆಂಬರ್ ತಿಂಗಳಲ್ಲಿ ಸರ್ಕಾರಿ ಚಾಕರಿಯಿಂದ ನಿವೃತ್ತನಾದೆ. ಮೂವತ್ತೊಂದಕ್ಕೆ ಮೇಲ್ಪಟ್ಟ ಸೇವೆಯ ನೌಕರಿಯೂ ಕೊನೆಗೆ ಅಂತ್ಯ ಕಂಡಿತು. ಕಾಲಿಗೆ ಬೆಸೆದು ಒಂದಾಗಿದ್ದ ಚೈನು ಸಂಪರ್ಕ ಕಡಿದುಕೊಂಡೆ. ಬಹಳ ಕಾಲ ಚೈನಿನ ಆಶ್ರಯದಲ್ಲೇ ಇದ್ದುದರಿಂದ ಕಾಲುಗಳು ನಿಸ್ತೇಜವೇನೋ ಅನಿಸಿದ್ದವು. ಕ್ರಮೇಣ ಕಾಲುಗಳಿಗೆ ಸಹಜತೆ ಬಂತು. ಚೈನಿನ ಅಂತರವನ್ನ ಮೀರಿ ನಡೆಯಿತು. ಪಾದಗಳು ಹೊಸ ಹೆಜ್ಜೆ ಹಾಕಿದವು.

# ಸೇಣಸಾಟ

ಮೈಸೂರಿನ ಆಸ್ಪತ್ರೆಯಲ್ಲಿ ಮಲಗಿದ್ದಾಗ ಮತ್ತು ಆನಂತರವೂ ಒಂದೊಂದು ಸಾರಿ ನನಗೆ ಭಯವಾಗುತ್ತಿತ್ತು. 'ಏನಪ್ಪ ಗತಿ ದೇವರೇ'' ಮೂರು ಜನ ಗಂಡು ಮಕ್ಕಳು ಈಗಿನ್ನು ಓದಿನ ಹಂತಕ್ಕೆ ಬಂದಿದ್ದಾರೆ. ಅಗೋ-ಇಗೋ ಎನ್ನ ಬೇಕಾದರೆ ನಾಲ್ಕು ಹೆಣ್ಣು ಮಕ್ಕಳು ದೊಡ್ಡವರಾಗಿ ಬಿಡುತ್ತವೆ. ಇವರ ಮದುವೆ ಅವರ ಓದು ಹೇಗೆ ನಡೆಸೋದು. ಈ ಮಧ್ಯ ಹಳೆಯ ಮಿತ್ರರಾದ ನ್ಯಾಯಾಧೀಶ ಸಿದ್ದಪ್ಪನವರ ಸಾವಿನಿಂದ ಆ ಕುಟುಂಬಕ್ಕೆ ಒದಗಿದ ಕಷ್ಟ ಅಂತಿಂತಹದಲ್ಲ, ಇದೂ ನನ್ನದರ ಬಗ್ಗ್ಯೊ ಇನ್ನೂ ಭಯ ಹುಟ್ಟಸಿತು. ಪ್ರಾಯಶಃ ಮನುಷ್ಯನಿಗೆ ಈ ತರಹದ ಭಯವೇ ಶನಿಯಾಗಿ ಕಾಡಬಹುದೇನೋ. ಸಾವು ಸತ್ಯವಾದುದು ಅಜೇಯವಾದುದು ಎಂಬ ಪ್ರಜ್ಞೆಯಿದ್ದರೂ, ಅದರ ಪರಿಧಿಗೆ ಸಿಕ್ಕಾಗ ನಮ್ಮ ಚಿಂತನೆ ಬೇರೆಯಾಗ್ತದೆ. ಅಥವಾ ನಮ್ಮ ಡಿವಿಜನಲ್ ಕಮೀಷನರ್ ಹೇಳುವಂತೆ ನನ್ನ ತಾಪತ್ರಯಗಳ ಕಾರಣದಿಂದ ನನಗೆ ಎರಡು ವರ್ಷ ಸರ್ವೀಸು ಜೀವ ಕೊಡ್ರಿ ಎಂದು ಬೇಡಿಕೊಳ್ಳಲೇ, ಅಂತ ಯೋಚಿಸಿದಾಗ ಸಂತ ಕನಕದಾಸರ ವಾಣಿ ಆಗಾಗ್ಗೆ ಕಿವಿಯೊಳಗೆ ಮೊಳಗುತ್ತಿತ್ತು ''ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ, ಅಲ್ಲಲ್ಲಿಗಾಹಾರವಿತ್ತವರು ಯಾರೋ ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ'' ನಮ್ಮ ತತ್ವಜ್ಞಾನ, ಅನುಭವಗಳು ಏನೇ ಹೇಳಿದರೂ ತಲ್ಲಣಿಸಿದ ಮನಕ್ಕೆ ಶಾಂತಿ ದೊರೆಯುತ್ತದೆಯೇ? ಇಲ್ಲ, ಬಾಳಸಂಗಾತಿಯಲ್ಲಿ ಇದನ್ನು ಹಂಚಿಕೊಳ್ಳೋಣವೆಂದರೆ, ಶಾಂತ ಮೃದು ಮನಸ್ಸಿಗೆ ಯಾಕೆ ಘಾಸಿ ಉಂಟುಮಾಡಲೆಂಬ ಅಳುಕು. ಇನ್ನು ಮೈಸೂರಿನ ಮಿತ್ರರು ನೀವು ಇಲ್ಲೇ ಇರಿ ಏನಾದರು ಮಾಡುವ ಎಂಬ ಬಲವಂತ. ತುಮಕೂರಿನಲ್ಲಿ ಅರ್ಧಂಬರ್ಧವಾದ ಕೆಲಸ ನನ್ನನ್ನು ಕೈಬೀಸಿ ಕರೆಯುತ್ತಿತ್ತು, ಕೊನೆಗೂ ನಿರ್ಧಾರ ನನ್ನದೇ ಆಯಿತು. ಹೆಂಡತಿ ಮಕ್ಕಳು ನನ್ನನ್ನು ಬೈದರೂ ಚಿಂತೆ ಇಲ್ಲ. ನನ್ನ ಜೊತೆ ಇದ್ದುದಕ್ಕೆ ಸ್ವಲ್ಪ ಕಷ್ಟ ಅನುಭವಿಸಲೆಂದುಕೊಂಡೆ. ಆಗ ಮಂಜೂರಾದ ಪಿಂಚಿನಿಯೋ ಕೇವಲ 233 ರೂಪಾಯಿ ಪೆನ್‌ಷನ್ ದುಡ್ಡಿನಲ್ಲೇ ಜೀವನ ಮಾಡೋಣ ಎಂದು ಎದೆ ಗಟ್ಟಿಮಾಡಿಕೊಂಡೆ.

ಸರ್ಕಾರಿ ಚಾಕರಿಯಲ್ಲಿದ್ದಷ್ಟು ದಿನ ನಡೆಸಿದ ಬದುಕೇ ಬೇರೆ. ಬೆಳಿಗ್ಗೆ ಏಳುತ್ತಲೆ ಆಫೀಸಿನ ಗ್ಯಾನ. ಅಲ್ಲೂ ಕೂಡ ಅಷ್ಟೇ. ತಾನು ಇಲ್ಲಿದಿದ್ದರೆ ಆಫೀಸು

ಮುಳಗಿ ಹೋಗುತ್ತದೆ ಎಂಬ ಭ್ರಮೆ. ಇನ್ನು ಅಲ್ಲಿ ಎಲ್ಲಾ ತನ್ನಿಂದನೇ ಆಗ ಬೇಕೆಂಬ ಚಪಲ. ಯಾವುದೋ ಗುಂಗಿನಲ್ಲಿ ಮನೆಗೆ ಬಂದು ಅದರಲ್ಲೇ ಹೆಂಡತಿ ಮಕ್ಕ ಮೇಲೆ ಎಗರಿಬೀಳೋದು. ನಿವೃತ್ತನಾದ ಮೇಲೆ ತೀರಿತು. 'ಬೆಲ್ಲು ಒತ್ತಿದಾಗ ಬಂದು ಸಲಾಮು ಹಾಕುವ ಜವಾನ, ಗುಟರಿಕೆಗೆ ಬೆದರುವ ಗುಮಾಸ್ತರು, ಕೃಪಾಕಟಾಕ್ಷಕ್ಕೆ ಕಾತರರಾಗಿರುವ ಸಾರ್ವಜನಿಕರು ಇಲ್ಲದೆ ಆತ ಅನಾಥ' ಆಗುತ್ತಾನೆ. ನಿಜವಾದ ದುಡಿಮೆಗಾರನಿಗೆ ನಿವೃತ್ತಿ ಮತ್ತು ಹಿಂದಿನ ದಿನಕ್ಕೆ ವ್ಯತ್ಯಾಸ ಇಲ್ಲ, ಭಗವಂತನ ಕೃಪೆಯಲ್ಲಿ ಸೃಷ್ಟಿಯ ಚರಾಚರ ವಸ್ತುಗಳೆಲ್ಲಾ ಹೇಗೆ ಸಮಾನವೋ, ನಿಜವಾದ ದುಡಿಮೆಗಾರ ಸರ್ಕಾರದ ಸಂಬಳದ ನಂತರ ಸೋಮಾರಿಯಾಗೋದಿಲ್ಲ. ವಿಶ್ರಾಂತಿಯೆಂದರೆ ಕೆಲಸ ಬದಲಾವಣೆಯೇ ಹೊರತು ಜಡತ್ವವಲ್ಲ. ನೈಜ ಕರ್ಮಯೋಗಿ ಕಾರ್ಯದಲ್ಲಿರುವಾಗ ಗುರುದರ್ಶನ ಮರೆಯುತ್ತಾನೆ. ಲಿಂಗ ಪೂಜೆಯನ್ನು ಬೇಕಾದರೂ ಬಿಡುತ್ತಾನೆ. ಯಾವುದೇ ಕೆಲಸವಾಗಲಿ ಅದನ್ನು ಕಲೆಯಂತೇ ಭಾವಿಸಿ ದುಡಿಯುತ್ತಾನೆ. ಅದರಲ್ಲಿ ಬುದ್ಧಿಭಾವಗಳನ್ನು ಬೆಳೆಸದಿದ್ದರೆ ಕೆಲಸ ಕಲೆಯಾಗುವುದಿಲ್ಲ, ಕೊಲೆಯಾಗುತ್ತದೆ. ನಿವೃತ್ತಿಯ ನಂತರ ನಾನು ಹತ್ತಾರು ಕೆಲಸಗಳನ್ನು ಹಾಕಿಕೊಂಡೆ. ಆಫೀಸಿಗೆ ಹೋಗಬೇಕಾದರೆ ಎಂಟು ಘಂಟೆ ಕೆಲಸ ಮಾಡುತ್ತಿದ್ದರೆ ಈಗ ದಿನವಿಡೀ ದುಡಿಯುತ್ತಿದ್ದೆ. ಇದರಿಂದ ಆರ್ಥಿಕ ಲಾಭ, ನನಗಾಗದಿರಬಹುದು. ಆದರೆ ಮಾನಸಿಕ ತೃಪ್ತಿ ದೊರೆಯುತ್ತಿತ್ತು. ಒಳ್ಳೆಯ ಆರೋಗ್ಯ ನನ್ನ ಪಾಲಿಗೆ ದೊರೆಯಿತು. ಯಾರಿಗೆ ನನ್ನ ದುಡಿಮೆಯಿಂದ ಅನುಕೂಲವಾಗಿದೆಯೋ ನಾ ತಿಳಿಯೆ. ನನ್ನ ಪಾಲಿಗಂತೂ ಸದಾ ಚಟುವಟಿಕೆ ಬದುಕು ದೊರಕಿದೆ. 'ಬದಲಾವಣೆ ಬಾಳಿನ ಒಗ್ಗರಣೆ' ಎಂಬಂತೆ ನಿವೃತ್ತಿಯಾದ ನಂತರ ನಾನು ಹಮ್ಮಿಕೊಂಡ ನೂರೆಂಟು ಕೆಲಸ ನನ್ನ ಸಾಂಸಾರಿಕ ಜಂಜಾಟವನ್ನ ಮರೆಯುವಂತೆ ಮಾಡಿದೆ. ''ಸಮರವೇ ಜೀವನದ ತಿರುಳು, ಹೋರಾಟವೇ ಜೀವನದ ಚಿಹ್ನೆ, ಆದರ್ಶ ಪ್ರಾಪ್ತಿಯೇ ಜೀವನದ ಪರಿ ಸಮಾಪ್ತಿ'' ಎನ್ನುವ ಮಡಿಯಂತೆ ನಾನಂತೂ ಒಂದಿಷ್ಟು ಕೆಲಸ ಕಾರ್ಯಗಳಿಗೆ ಗುದ್ದಾಡಿದ್ದೇನೆ. ಯಾವುದೋ ಆದರ್ಶ ನನ್ನಲ್ಲಿ ಐಯ್ತೆಂಬ ಭ್ರಮೆಯಂತೂ ನನಗಿಲ್ಲ. ಯಾವುದು ಇಷ್ಟವೆಂದು ಭಾವಿಸಿದ್ದನೋ ಆ ಕೆಲಸಗಳನ್ನು ಮಾಡುವಲ್ಲಿ ಕೆಲವೊಮ್ಮೆ ಎಡವಿದ್ದೇನೆ. ಮತ್ತೊಂದು ಕಡೆ ನನ್ನ ಉದ್ದೇಶಕ್ಕಿಂತ ಹೆಚ್ಚಿಗೆ ಶ್ರೇಯಸ್ಸು ದೊರಕಿದೆ. ಅಮ್ಮ, ಅಕ್ಕ, ನರಸಯ್ಯ, ಟಿ.ಮರಿಯಪ್ಪ, ವೆಂಕಟ ಸ್ವಾಮಯ್ಯ ಎಸ್.ವಿ.ರಂಗಣ್ಣ, ಜಿವಿನಾ, ಸಹಕಾರ

ಇಲಾಖೆಯ ಅಧಿಕಾರಿಗಳು, ಕಡಿದಾಳ್ ಮಂಜಪ್ಪ, ಬೀರಪ್ಪ, ನನ್ನ ಕುಲದ ಬಾಂಧವರು, ಮಡದಿ ಮಕ್ಕಳು, ಹೀಗೆ ಸಮಸ್ತರೂ ನನ್ನ ಕೆಲಸದಲ್ಲಿ ಶ್ರಮಿಸಿ ನನ್ನ ಖಾತೆಗೆ ಶ್ರೇಯಸ್ಸನ್ನು ಜಮಾ ಮಾಡಿದ್ದಾರೆ. ತಾಯಿ ಮಗನಿಗೆ ಹೊಸ ಚಲ್ಲಣ ತೊಡಿಸಿ, ಅಲಂಕರಿಸಿ ನೋಡಿ ಆನಂದ ಪಡುವಂತೆ ಇವರು ನನ್ನ ಮೇಲೆ ಅಗಾಧ ಋಣದ ಹೊರೆ ಹೊರಿಸಿದ್ದಾರೆ. ನಾಟಕದ ರಾಜನ ಪಾತ್ರಧಾರಿಗೆ ಈ ವೈಭವ ಕೇವಲ ಪ್ರೇಕ್ಷಕರ ರಂಜನೆ ಮಾತ್ರ, ಇದೆಲ್ಲಾ ನನ್ನ ನೈಜವಾದುದಲ್ಲ ಎಂಬ ಪ್ರಜ್ಞೆ ಇರುವಂತೆ ನನಗೂ ಶರೀರ ನನ್ನದಾಗಿದ್ದರೂ ಅದನ್ನು ಅನೇಕರು ತಮ್ಮ ತಮ್ಮ ಕೃಪಾ ಶೀರ್ವಾದದಿಂದ ಸಲಹಿದ್ದಾರೆ, ಎಂಬ ಅರಿವಿದೆ. ''ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು, ಇರುಳು ಕತ್ತಲೆ; ಮನೆ ದೂರ ಕನಿಕರಿಸಿ, ಕೈಹಿಡಿದು ನಡೆಸೆನ್ನನು.'' ಎಂಬುದು ನನ್ನ ಇಂದಿಗೂ ಕೂಡ ಅನುದಿನದ ಪ್ರಾರ್ಥನೆ. ಹೀಗಾಗಿ ನನ್ನ ವಿಶ್ರಾಂತಿ ಜೀವನ ಕೂಡ ಕರುಣಾಳು ಬೆಳಕಿನ ಕೃಪೆಯಿಂದ ಸಂತೃಪ್ತಿಯಾಗಿದೆ. ಹೊಯ್ದಾಟಗಳ ನಡುವೆಯೂ ಬೆಳಕಿನ ಪುಂಜು ಸ್ಥಿರವಾಗಿದೆ. ದಾರಿ ಸ್ಪಷ್ಟವಾಗಿದೆ. ನಿಧಾನವಾಗಿ ನಾನು ಹೆಜ್ಜೆ ಹಾಕುತ್ತಿದ್ದೇನೆ. ಒಂದು ದಿನ ನಮ್ಮ ಸಾರ್ವಜನಿಕ ಹಾಸ್ಟೆಲಿನ ಯಾವುದೋ ತುರ್ತು ಕೆಲಸಕ್ಕಾಗಿ, ತುಮಕೂರಿಗೆ ಹೋಗೋಣವೆಂತ ಬಸ್‌ಸ್ಟಾಂಡಿಗೆ ಬಂದೆ. ಇನ್ನೂ ಬಸ್ಸು ಬಂದಿರಲಿಲ್ಲ. ನನ್ನ ಜೊತೆ ಕೊನೆ ಮಗ ಕುಮಾರ ಕೂಡ ಬಂದಿದ್ದ. ಎಲ್ಲಿಂದಲೋ ಒಂದು ನಾಯಿ ಹಿಂಭಾಗದ ಬಲಗಾಲಿನ ಮೀನು ಕಂಡ ಕಿತ್ತು ಬರುವಂತೆ ಕಚ್ಚಿತು. ''ನಳಚರಿತ್ರೆ'' ಯಲ್ಲಿ ಕನಕದಾಸರು ಹೇಳುತ್ತಾರಲ್ಲ. ನಳ ಬೆಂಕಿಯಲ್ಲಿ ಬಿದ್ದಿದ್ದ ಕಾರ್ಕೋಟವನ್ನು ಬಿಡಿಸಿದಾಗ ಆತನನ್ನು ''ಕರವಿಡಿದು ಕಚ್ಚಿತಂತೆ'' ಹಾಗಾಯಿತು ನನ್ನ ಸ್ಥಿತಿ, ನಾಯಿಯ ಕೋರೆಹಲ್ಲು ಬಲವಾಗಿ ಊರಿತ್ತು. ನನ್ನ ಮಗನೇ ಕೆ.ಆರ್.ಆಸ್ಪತ್ರೆಗೆ ನನ್ನನ್ನು ಸಾಗಿಸಿಕೊಂಡು ಹೋಗಿ ಚಿಕಿತ್ಸೆ ಮಾಡಿಸಿದ. ನನ್ನ ಗ್ರಹಚಾರ, ಇತರರಿಗೂ ತೊಂದರೆ ಕೊಡುತ್ತಾ ಕೆಲವೊಮ್ಮೆ ನನಗೆ ಪಾಠ ಕಲಿಸುತ್ತಿರುತ್ತದೆ.

ತುಮಕೂರಿಗೆ ಹೋದ ಹೊಸತು. ಪಾಳ್ಯದಿಂದ ಸಿ.ನರಸಯ್ಯನವರ ಸ್ಥಿತಿ ಅತ್ತ-ಇತ್ತವೆಂಬ ಸುದ್ದಿ ಬಂತು, ಓಡಿದೆ. ನಮ್ಮ ಮನೆತನದ ಹಿರಿಯಾತ ಆತ. ಈಗಲೋ ಆಗಲೋ ಪ್ರಾಣ ಹೋಗುವಂತಿತ್ತು. ನರಸಯ್ಯ ಸೋದರತ್ತೆಯ ಮಗನಾಗಿದ್ದರೂ ಅಭಿರುಚಿ ಮತ್ತೆಲ್ಲಾ ವಿಚಾರದಲ್ಲೂ ಸ್ನೇಹಿತರಾಗಿದ್ದೆವು. ಅವರ ಜೊತೆಗೆ ಖುಷಿಯಿಂದ ನಮ್ಮ ತವರನ್ನೆಲ್ಲಾ ಸುತ್ತಿದ್ದೇನೆ. ಕೋಪದಿಂದ ಜಗಳ

ಕಾದಿದ್ದೇನೆ. ಇಷ್ಟಾದ್ರೂ ಆತ್ಮೀಯಂತೆ ಕುಂದಿರಲಿಲ್ಲ. ಮೇಸ್ತ್ರಿ ಕೆಲಸ ಮಾಡುತ್ತಿದ್ದರೂ ನಮ್ಮ ಹುಡುಗರು ವಿದ್ಯೆಕಲಿಯಬೇಕೆಂಬ ಆತನ ಆಕಾಂಕ್ಷೆಯ ತಳಾನ ಈಗ ಗುರುತಿಸಲಾರೆ. ಸತ್ವ ಗುಣ ದೊಡ್ಡವರಲ್ಲಿ ಹೆಚ್ಚಿರಬಹುದು. ಇದು ಕಿರುಪ್ರಮಾಣದ ಸಣ್ಣವರಲ್ಲಿ ಕಾಣಸಿಕೊಂಡಾಗ ಗುರುತಿಸಲಾರದೆ ಇರಲಾಗುತ್ತದೆಯೇ! J.Hamilton ಎಂಬಾತ ದೊಡ್ಡತನ ಕುರಿತು "True gentleness is love in society holding intercource with those around it ಎನ್ನುತ್ತಾನೆ. ಪ್ರಾಯಶಃ ಅಂತಹ ಎತ್ತರವಲ್ಲದಿದ್ದರೂ ನರಸಯ್ಯ ಮನುಷ್ಯನನ್ನು ಪ್ರೀತಿಸಿದ ವ್ಯಕ್ತಿ. ಇದಕ್ಕೆ ಕಾರಣ ಆತನ ಸಾಂಸಾರಿಕ ಬದುಕು. ಮೊದಲಿನಿಂದಲೂ ಮಕ್ಕಳಿಲ್ಲದ ಆತನಿಗೆ ನೆರೆ-ಹೊರೆಯವರೆ ಬಂಧುಗಳು, ಅಣ್ಣನ ಮಕ್ಕಳು, ಮತ್ತಿತರ ಕಳ್ಳುಬಳ್ಳಿ ತನ್ನವರಾಗಿರಬೇಕು-ಹೀಗಾಗಿ ಆತನ ಪರಿಧಿಗೆ ನಾನೂ ಸೇರಿದೆ. ತೀರ ಪರಿಮಿತವಲಯದಲ್ಲಿದ್ದ ಆತನಿಂದ ಇದಕ್ಕಿಂತ ಹೆಚ್ಚಿನ ಆದರ್ಶ ನಡವಳಿಕೆ ನೀರೀಕ್ಷಿಸೋದು ಕಷ್ಟ. ಬಹುಶಃ ಸಮೂಹವೇ ತಮ್ಮದೆಂಬ ದೊಡ್ಡ ಕಲ್ಪನೆಗೆ ಆತ ಏರಲಾಗದಿದ್ದಕ್ಕೇನೋ ಕೊನೆಗಾಲದಲ್ಲಿ ಸ್ವಲ್ಪ ನಿರಾಶೆ ಅನುಭವಿಸಿದ್ದರು.

Education is the Apprenticeship of life ಎಂಬ ಮಾತು ನಿಜ. ಮಕ್ಕಳ ಬದುಕಿನ ತರಬೇತಿ ಅವಕಾಶವೇ ಅವರ ವಿದ್ಯಾರ್ಥಿ ಜೀವನ. ನನಗೆ ಮೊದಲಿನಿಂದಲೂ ಏನಾದರೂ ಮಾಡಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬೇಕೆಂಬ ಅಭಿಲಾಷೆ ಇತ್ತು. ತುಮಕೂರಿಗೆ ಹೋದ ಪ್ರಾರಂಭದಲ್ಲೇ ಗುರು ಸಿರಿಯಪ್ಪ ಒಡೆಯರು ತಾವೊಂದು ಹೈಸ್ಕೂಲು ಪ್ರಾರಂಭಿಸಿರುವುದಾಗಿಯೂ, 'ಯುನೈಟೆಡ್ ಹೈಸ್ಕೂಲು' ಎಂದು ನಾಮಕರಣ ಮಾಡಿರುವುದಾಗಿಯೂ ಹೇಳಿದ್ದರು. ಮೈಸೂರಿನಿಂದ ಬಂದ ನಾನು ಇನ್ನೂ ಇಲ್ಲಿಗೆ ಹೊಂದಿಕೊಳ್ಳದೆ ಚಡಪಡಿಸುತ್ತಿದ್ದೆ. ನನ್ನ ಪ್ರತಿಕ್ರಿಯೆ ಕೇಳದೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಿಸಿಕೊಂಡಿದ್ದರು.

# ಸಮ್ಮೇಳನ

ಸಾಮಾನ್ಯವಾಗಿ ''ಸಮ್ಮೇಳನ''ಗಳು ಜಾತ್ರೆಗಳಂತೆ ಅರ್ಥಹೀನವಾಗಿರುವುದುಂಟು. ಸಹಜ-ಮನಸ್ಸಿನ ಜನ ಒಂದೆಡೆ ವಿಚಾರ ವಿನಿಮಯ ನಡೆಸಿದರೆ, ತಪ್ಪೇನು? ಸರ್ಕಾರ ಅಥವಾ ಸಾರ್ವಜನಿಕ ಹಿತಾಸಕ್ತಿಯುಳ್ಳ ಜನ ಏರ್ಪಡಿಸಿದರೆ ಇದರಿಂದ ಅನೇಕ ಸಾರಿ ಮೂಲಭೂತ ವಿಷಯವೇ ಮರೆತು ಹೋಗುವುದುಂಟು. ಆದರೆ ಇಡೀ ಜನಸಮುದಾಯದಲ್ಲಿ ಒಗ್ಗಟ್ಟು, ಸಹಬಾಳ್ವೆ, ಸದುದ್ದೇಶದಿಂದ ನಡೆಸಿದರೆ ಅದು ವ್ಯರ್ಥವಾಗುವುದಿಲ್ಲ. ಎನ್ನಬೇಕು. 1967-68ರಲ್ಲಿ ಮೈಸೂರಿನಲ್ಲಿ ರಾಜ್ಯ ಮಟ್ಟದ ಕುರುಬರ ಸಮ್ಮೇಳನವೊಂದನ್ನು ನಡೆಸಲು ನಿಯೋಜಿಸಲಾಯಿತು. ಈ ಸಂಬಂಧದಲ್ಲಿ ರಾಜ್ಯದ ನಾನಾಕಡೆ ಪ್ರವಾಸ ಮಾಡಲಾಯಿತು. ನನ್ನ ಜೊತೆ ಡಿ.ಲಿಂಗಯ್ಯ ಹಾಗೂ ಪಿ.ಆರ್.ತಿಪ್ಪೇಸ್ವಾಮಿ ಇದ್ದರು. ಧಾರವಾಡದ ಕಡೆ ಪ್ರವಾಸ ಕೈಗೊಂಡಿದ್ದಾಗ ಅನೇಕ ಮಿತ್ರರ ಸಹವಾಸ ದೊರೆಯಿತು. ಅಡ್ವೊಕೇಟ್ ಎಸ್.ಎಲ್.ಒಡೆಯರ್, ಡಿ.ಕೆ.ನಾಯ್ಕರ್, ಕುರುಡುಗಿ ಹನುಮಂತಪ್ಪ, ಅಡ್ವೊಕೇಟ್ ಕಲ್ಲಣ್ಣನವರ್ ಮುಂತಾದವರು ಅಲ್ಲಿ ಸಭೆಯೊಂದರಲ್ಲಿ ಸೇರಿದ್ದರು. ನಮ್ಮ ಹುಡುಗರು ವಿದ್ಯೆಯನ್ನು ಪಡೆದರೆ, ಮುಂದಿನ ಸಮಸ್ಯೆಗಳು ತಾವಾಗಿಯೇ ಬಗೆ ಹರಿಯುತ್ತವೆ. ಹುಬ್ಬಳ್ಳಿಯಲ್ಲಿ ಕಾಲೇಜುಗಳಿದ್ದಾಗ್ಯೂ ಜನಾಂಗದ ವಸತಿ ಗೃಹಗಳಿಲ್ಲದಿರುವುದು ಎಷ್ಟೊಂದು ವಿಪರ್ಯಾಸವೆಂದು ಅಲ್ಲಿನವರಿಗೆ ಹೇಳಿದೆ. ಇದಕ್ಕಾಗಿ ನಿವೇಶನವೊಂದು ಮೀಸಲಾಗಿದ್ದರೂ, ಕಾರ್ಯಕರ್ತರು ಸಂಘಟಿತರಾಗಿ ಕೆಲಸಮಾಡದಿರುವುದು ಶೋಚನೀಯವೆಂದೆ. ಯಾವುದೇ ಪಂಗಡ ಅಥವಾ ಜಾತಿ ಹಿಂದುಳಿದಿರಬಹುದು. ಆದರೆ ಆ ಸಮಾಜದಲ್ಲಿನ ಪ್ರಬುದ್ಧರೆನಿಸಿಕೊಂಡ ಕೆಲವೇ ಜನ ಸ್ವಾರ್ಥಿಗಳಾದರೆ, ದೂರದೃಷ್ಟಿಯಿಲ್ಲದವರಾದರೆ ಅಂತಹ ವರ್ಗಗಳ ಅಧಃಪತನ ಗ್ಯಾರಂಟಿಯೆಂದು ತಿಳಿಯಪಡಿಸಿದೆ. ನಿಮ್ಮ ನಿಸ್ವಾರ್ಥ ಸೇವೆ ಯುವಕರಿಗೆ ಸ್ಫೂರ್ತಿ ಸಿಗಲೆಂದು ಹಾರೈಸಿದೆ. ಇತ್ತೀಚೆಗೆ ಧಾರ್ವಾಡ ನಗರದಲ್ಲಿ ಡಿ.ಕೆ.ನಾಯ್ಕರ್ ದಂಪತಿಗಳ ಶ್ರಮದ ಫಲವಾಗಿ ಒಳ್ಳೆ ವಿಸ್ತಾರವಾದ ಮಜಬೂತಾದ ಹಾಸ್ಟೆಲ್ ಕಟ್ಟಡವು ನಿರ್ಮಾಣವಾಗುತ್ತಿದೆಯೆಂದು ಕೇಳಿ, ಎಲ್ಲರಿಗೂ ಸಂತೋಷವಾಗಿದೆ.

ಇಷ್ಟರ ಮಧ್ಯೆ ಹೇಗೋ ಮೈಸೂರಿನಲ್ಲಿ ಅಖಿಲ ಕರ್ನಾಟಕ ಕುರುಬರ ಸಮ್ಮೇಳನ ಜರುಗಿತು. ಇದರ ಉದ್ಘಾಟನೆಗೆ ರಾಜ್ಯದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಬಂದಿದ್ದರು. ರಾಜ್ಯ ಪಶುಸಂಗೋಪನಾ ರಾಜ್ಯ ಸಚಿವರಾದ ಜಿ.ಬಿ.ಶಂಕರರಾವ್ ಅಧ್ಯಕ್ಷತೆ ವಹಿಸಿದ್ದರು. ಕುರಿ ಹಾಗೂ ಉಣ್ಣೆ ಅಭಿವೃದ್ಧಿಗಾಗಿ ಪ್ರತ್ಯೇಕ ಮಂಡಳಿ ರಚಿಸಬೇಕೆಂದು ಸಮ್ಮೇಳನದಲ್ಲಿ ಒತ್ತಾಯಮಾಡಲಾಯ್ತು. ಸಹಕಾರ ಸಂಘಗಳ ಮೂಲಕ ಇದರ ಉತ್ಪನ್ನಗಳ ಮಾರಾಟವಾಗಬೇಕು. ಕುರಿ ಅಭಿವೃದ್ಧಿಯನ್ನು ರಾಜ್ಯದ ಆರ್ಥಿಕ ರಂಗಕ್ಕೆ ಗಂಟು ಹಾಕಬೇಕು ಇತ್ಯಾದಿ ಹೇಳಲಾಯಿತು. ಮಂತ್ರಿಗಳು ಎಲ್ಲವನ್ನೂ ಕೇಳಿಸಿಕೊಂಡರು. ''ಆಯಿತು ನಿಮ್ಮ ವಿಷಯ-ಭರ್ಜರಿ ಯಾಗಿದೆ, ಸೊಗಸಾಗಿತ್ತು, ಮಾಡೋಣ'' ಎಂದು ಮಾತಿನಲ್ಲೆ ಮುತ್ತು ಸುರಿಸಿದರು. ಆದರೆ ಕೊನೆಗೆ ಪಶುಸಂಗೋಪನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಲಹಾಸಮಿತಿಯೊಂದನ್ನು ರಚಿಸಲಾಗುವುದೆಂದು ತಿಳಿಸಿದರು. ನನಗಾದ ನಿರಾಶೆ ಅಷ್ಟಿಷ್ಟಲ್ಲ. ನಾನಂತೂ ಇದನ್ನು ಒಪ್ಪಲೇ ಇಲ್ಲ. ಆದರೆ ಸಮ್ಮೇಳನದ ವತಿಯಿಂದ ನಮ್ಮ ಧ್ವನಿ ಇತರರಿಗೆ ಬೀಳುವಂತಾಯಿತೆಂಬುದೇ ಸಮಾಧಾನ.

ಇಂತಹುದೇ ಮತ್ತೊಂದು ಸಮ್ಮೇಳನ 26-9-1971ರಲ್ಲಿ ತುಮಕೂರಿನಲ್ಲಿ ಜರುಗಿತು. ಕುರುಬರ ಉಣ್ಣೆ ನೇಕಾರರ ಸಮಸ್ಯೆಗಳನ್ನು ಅರಿಯುವುದಕ್ಕೆ ಇದೊಂದು ಉಪಯುಕ್ತ ಅವಕಾಶವೆಂದು ಭಾವಿಸಲಾಯಿತು. ಇದರ ಸಂಬಂಧವಾಗಿ ಸೀದಾ ಚಿಕ್ಕನಾಯಕನ ಹಳ್ಳಿ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿದೆ. 'ಪಟ್ನಾಯಕನ್' ಹಳ್ಳಿಗೆ ಹೋಗಿದ್ದಾಗ, ಶ್ರೀ ಕೆ.ಎಲ್.ಕಾಟಣ್ಣ ಇಲ್ಲಿ ಕಂಬಳಿ ನೇಕಾರರು ಯಥೇಚ್ಛವಾದ ಸಂಖ್ಯೆಯಲ್ಲಿದ್ದಾರೆ, ಕೇವಲ ಕೆಲಸದಲ್ಲಿ ಅವರು ಮುಳುಗುವುದರ ಜೊತೆ ಒಂದಿಷ್ಟು ತಿಳುವಳಿಕೆ ಕೂಡ ಬರಲಿ. ಯಾರಿಗಾದರೂ ಹೇಳಿ ಪುಸ್ತಕ ಭಂಡಾರ ಮತ್ತು ವಾಚನಾಲಯ ಸ್ಥಾಪಿಸುವಂತೆ ಕೇಳಿಕೊಂಡರು. ಈ ವಿಚಾರದಲ್ಲಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ನಿರ್ದೇಶಕರಾದ ಮುನಿಸ್ವಾಮಿ ಅವರಲ್ಲಿ ಪ್ರಸ್ತಾಪಿಸಿದಾಗ ಸಾರ್ವಜನಿಕ ವತಿಯಿಂದ 500-00 ರೂ.ಗಳನ್ನು ಕಟ್ಟಿದರೆ ಮುಂದೆ ನೋಡುವ ಎಂದರು. ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆ ವತಿಯಿಂದ ಆ ಹಣ ಕಟ್ಟಿದಾಗ 1972ರಲ್ಲಿ ಪುಸ್ತಕ ಭಂಡಾರ ಹಾಗೂ ವಾಚನಾಲಯ ಮಂಜೂರಾಯಿತು. ಜಿಲ್ಲೆಯ ಹಿಂದುಳಿದ ಸ್ಥಳ ಒಂದರಲ್ಲಿ

ಜ್ಞಾನದೀವಿಗೆ ಇಡುವ ಸೌಭಾಗ್ಯ ದೊರಕಿತು ಎಂಬ ಸಮಾಧಾನ ನನಗೆ. ನಮ್ಮ ಯೋಜನೆಯಂತೆ ಸಮ್ಮೇಳನಕ್ಕೆ ನಾಲ್ಕಾರು ಕಡೆ ಸಹಾಯ ದೊರಕಿತು. ಜಿಲ್ಲೆಯ ಹೊರಗಡೆ ಕೂಡ ಇದಕ್ಕೆ ಬೆಂಬಲ ವ್ಯಕ್ತಪಡಿಸಿದರು. ಈ ಸಮ್ಮೇಳನದಲ್ಲಿ ಭಾಗವಹಿಸಲು ಆಡಳಿತ ಕಾಂಗ್ರೆಸ್‌ನ ಸಂಚಾಲಕರಾಗಿದ್ದ ಡಿ.ದೇವರಾಜ ಅರಸು, ಕೊಲ್ಲೂರು ಮಲ್ಲಪ್ಪ, ಹೆಚ್.ಸಿದ್ದವೀರಪ್ಪ ಮೊದಲಾದವರು ಆಗಮಿಸಿದ್ದರು. ಮತ್ತೊಮ್ಮೆ ನಮ್ಮ ಹಳೆಯ ಬೇಡಿಕೆಗಳನ್ನೇ ಹೇಳಲಾಯಿತು. ಹಿಂದುಳಿದ ವರ್ಗಗಳ ಸಂಘಟನೆ ಹಾಗೂ ಅವರ ಆಶಾಜ್ಯೋತಿಯಾಗಿದ್ದ ಶ್ರೀಮಾನ್ ಡಿ.ದೇವರಾಜ ಅರಸು ಅವರಿಗೆ ಈ ತರಹ ಸಮಸ್ಯೆಗಳು ಬಹಳ ಚೆನ್ನಾಗಿ ಅರ್ಥವಾಗುತ್ತಿದ್ದವು. ತಮ್ಮ ಸರ್ಕಾರ ರಚನೆಯಾದ ಕೂಡಲೇ ಕುರಿ ಮತ್ತು ಉಣ್ಣೆ ನೇಕಾರರ ಅಭಿವೃದ್ಧಿಗೆ ಒಂದು ಮಂಡಳಿ ರಚಿಸುವುದಾಗಿ ಹೇಳಿದರು. ಸಮ್ಮೇಳನದಲ್ಲಿ ನಿರ್ಣಯ ಅಂಗೀಕಾರವಾದ ನಂತರ ಅದರ ಕಾರ್ಯಾಚರಣೆಗೆ ಹಗಲಿರುಳು ಪ್ರಯತ್ನಿಸಲಾಯಿತು. 'ಕುರಿ ಸಾಕುವವನು ಕುರಿ ತರಹನೇ ಶೋಷಣೆಗೆ ಒಳಗಾಗಿದ್ದಾನೆ. ನನಗೆ ಏನಾದರೂ ಸಹಾಯ ಮಾಡಿ ಎಂದು ಅವನು ವ್ಯವಸಾಯ ಇಲಾಖೆಗೆ ಹೋದರೆ, ಅವರು ಇದನ್ನು ಕೈಗಾರಿಕೆ ಇಲಾಖೆಯಲ್ಲಿ ವಿಚಾರಿಸಿ ಅನ್ನುತ್ತಾರೆ. ಅವರು ಅಲ್ಲಿ ಸಹಕಾರ ಇಲಾಖೆ ಕಡೆ ಹೋಗಿ ಎನ್ನುತ್ತಾರೆ. ಸಹಕಾರ ಇಲಾಖೆಯವರು ಪಶುಸಂಗೋಪನಾ ಇಲಾಖೆಗೆ ಹೋಗಿ ಎನ್ನುತ್ತಾರೆ. ಆತನು ಫುಟ್ ಬಾಲ್ ತರಹ ಬಿದ್ದ ಕಡೆ ಓಡಾಡುತ್ತಿರಬೇಕೆ ಹೊರತು, ಫಲ ಕಾಣೋದಿಲ್ಲ, ಎಂದು ನಾನು ಆ ಸಮ್ಮೇಳನದಲ್ಲಿ ಮಾತನಾಡಿದರೆ' ನಮ್ಮ ಜನ 'ಹೌದು' 'ಹೌದು' ಎನ್ನುತ್ತ ಒಕ್ಕೊರಳಲ್ಲಿ ಹೇಳಿದರು. ಅಂದಿನ ಕಾನೂನು ಮಂತ್ರಿ ಡಿ.ಕೆ.ನಾಯ್ಕರ್ ಅವರ ನೇತೃತ್ವದಲ್ಲಿ ಸಾಕಷ್ಟು ಚರ್ಚೆ ನಡೆಸಿ, ಈ ಮಂಡಲಿಯ ಅಸ್ತಿತ್ವಕ್ಕೆ ಬೇಕಾದ ಕರಡನ್ನು ಸಿದ್ಧಮಾಡಿ ಸರ್ಕಾರಕ್ಕೆ ಕಳುಹಿಸಲಾಯಿತು. ಸರ್ಕಾರ 1972ರಲ್ಲಿ 19 ಜನ ಸದಸ್ಯರ ಕುರಿ ಅಭಿವೃದ್ಧಿ ಮಂಡಲಿಯನ್ನು ರಚಿಸಿ ನನ್ನನ್ನೇ ಅದರ ಪ್ರಥಮ ಅಧ್ಯಕ್ಷರನ್ನಾಗಿ ನೇಮಿಸಿ ಹುಕುಂ ಹೊರಡಿಸಿತು. ನಮ್ಮ ಗೃಹ ಕೈಗಾರಿಕೆಗಳಲ್ಲಿ ಒಂದಾದ ಗ್ರಾಮೀಣ ಜನರ ಬಹುತೇಕ ಉದ್ಯೋಗಕ್ಕೆ ದಾರಿಯಾದ ಕುರಿ ಹಾಗೂ ಉಣ್ಣೆ ಅಭಿವೃದ್ಧಿಗೆ ಸ್ವಾಯತ್ತತೆಯ ಮಂಡಲಿ ನೇಮಿಸಲು ಸ್ವಾತಂತ್ರ್ಯಾ ನಂತರ ಇಪ್ಪತ್ತೈದು ವರ್ಷ ತೆಗೆದುಕೊಂಡಿದ್ದೇವೆ. ಅಂದಮೇಲೆ ನಮ್ಮ ಯೋಜನೆ ಹಾಗೂ ಬೆಳವಣಿಗೆ ಯಾವ ಗತಿಯಲ್ಲಿ ಸಾಗುತ್ತಿತ್ತೆಂದು ಊಹಿಸಬಹುದಲ್ಲವೆ?

# ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿ

ಹೇಗೋ ಸರ್ಕಾರ ಅವಕಾಶ ಕೊಟ್ಟಿದೆ. ಒಂದಿಷ್ಟು ಕೆಲಸ ಮಾಡೋಣವೆಂದು ನಿರ್ಧರಿಸಿ ಈ ಸಂಬಂಧವಾಗಿ ಮುಖ್ಯ ಕಾರ್ಯದರ್ಶಿಯನ್ನು ಕಂಡೆ. ಸರ್ಕಾರದ ಆಜ್ಞೆಯ ಮೇರೆಗೆ ಅವರು ವಿಧಾನಸೌಧದ ಮೂರನೆಯ ಮಹಡಿಯಲ್ಲಿ ನಮ್ಮ ಕಾರ್ಯಾಲಯಕ್ಕೆ ಅನುವು ಮಾಡಿಕೊಟ್ಟರು. ಹಾವನೂರು ಹಿಂದುಳಿದ ಆಯೋಗ ಕೆಲಸ ಮಾಡುತ್ತಿದ್ದ ಕೊಠಡಿಯಲ್ಲೇ ಕೆಲಸ ಪ್ರಾರಂಭಿಸಿದೆ. ಸಧ್ಯದಲ್ಲಿ ಇದೊಂದು ಸಲಹಾ ಮಂಡಲಿಯಾಗಿತ್ತೇ ಹೊರತು ಶಾಸನಬದ್ಧ ಮಂಡಲಿಯಾಗಿರಲಿಲ್ಲ. ಎರಡು ಸದನಗಳಲ್ಲೂ ಇದಕ್ಕೆ ಒಪ್ಪಿಗೆ ದೊರೆತ ನಂತರ ಅದು ಕಾರ್ಯಗತವಾಗುತ್ತಿತ್ತು. ಒಬ್ಬ ಗುಮಾಸ್ತನನ್ನು ಕೂಡಲೇ ಕೊಡುವ ಬಗ್ಗೆ ಕೇಳಿದೆ. ಒಬ್ಬ ಜವಾನನ್ನು ಹೇಗೋ ನಾನೇ ನೇಮಿಸಿಕೊಂಡೆ. ಅವನಿಗೆ ಎರಡು ತಿಂಗಳು ಕಳೆದರೂ ಸಂಬಳವಿಲ್ಲ. ನಾನೆಂತಹ ಛೇರ್ಮನ್, ಒಬ್ಬ ಜವಾನನಿಗೆ ಸಂಬಳಕೊಡಿಸೋ ತಾಕತ್ತು ಇಲ್ಲವೆಂಬ ಜಿಗುಪ್ಸೆಯಾಗುತ್ತಿತ್ತು. ಆದರೂ ವಿಧಾನಸೌಧದ ಮೂರನೆಯ ಮಹಡಿಯನ್ನು ಪ್ರತಿನಿತ್ಯ ಹತ್ತುತ್ತಿದ್ದೆ. ಪ್ರಥಮ ಮೀಟಿಂಗನ್ನು ವಿಧಾನಸೌಧದ ಮೀಟಿಂಗ್ ಹಾಲ್‌ನಲ್ಲೇ ಏರ್ಪಡಿಸಲಾಯಿತು. ಸರ್ಕಾರದ ಕಾರ್ಯದರ್ಶಿಗಳು ಪಶುಸಂಗೋಪನಾ ಮತ್ತು ಕೈಗಾರಿಕಾ ಇಲಾಖೆಗಳ ನಿರ್ದೇಶಕರು ಖಾಸಗಿ ಸದಸ್ಯರು ಸಂಬಂಧಪಟ್ಟ ಇತರ ಗಣ್ಯ ಅಧಿಕಾರಿಗಳು ಆಗಮಿಸಿದ್ದರು. ಒಂದೆರಡು ಉಪಸಮಿತಿಗಳನ್ನು ರಚಿಸಲಾಯಿತು. ಕೆಲವು ಗೊತ್ತುವಳಿಗಳೂ ಆದವು. ಬೆಂಗಳೂರು ನಗರದಲ್ಲಿರುವ ಅಂದರೆ ಕಾರ್ಪೊರೇಷನ್ ವತಿಯಿಂದ ನಡೆಯಲ್ಪಡುತ್ತಿರುವ 'Slaughter House' ''ಮಾಂಸ ಮಾರಾಟಮಳಿಗೆಯನ್ನು (ಅಂಗಡಿ)'' ವಹಿಸಿಕೊಂಡು ಮಂಡಲಿ ಸ್ವತಂತ್ರ್ಯವಾಗಿ ನಡೆಸಬೇಕೆಂದು ಅದರ ವ್ಯವಸ್ಥಾಪಕರಾಗಿ ಮಂಡಲಿಯ ಸದಸ್ಯ ಡಾ. ಎಂ. ಡಿ. ನಟರಾಜ್‌ರನ್ನು ನೇಮಿಸಬೇಕೆಂದು ಮಂಡಳಿಯಲ್ಲಿ ಅಂಗೀಕರಿಸಲಾಯಿತು. ನಾನು ಸದಸ್ಯರಿಗೆ ಇದೊಂದು ಸಲಹಾ ಮಂಡಲಿ, ತಕ್ಷಣ ಈ ತೀರ್ಮಾನವನ್ನು ಕಾರ್ಯಗತ ಮಾಡುವುದು, ನಮ್ಮ ಪರಿಮಿತಿಗೆ ಮೀರಿದ್ದಲ್ಲವೇ ಎಂದು ಹೇಳಿದೆ. ಈ ಮಧ್ಯೆ ವಿಷಯ ಕಾನೂನು ಮಂತ್ರಿಗಳಾದ ಡಿ.ಕೆ.ನಾಯ್ಕರ್ ಅವರಿಗೆ ತಿಳಿದು, ನಟರಾಜುಗೆ ಸರ್ಕಾರದಲ್ಲಿ ಸಾಕಷ್ಟು ವರ್ಚಸ್ಸಿರುವುದರಿಂದ ನಿಮ್ಮ ಅಭಿಪ್ರಾಯದೊಡನೆ ಮೇಲಕ್ಕೆ ವಿಳಂಬವಿಲ್ಲದೆ ಕಳುಹಿಸಿ ಎಂದರು. ಒಂದಿಷ್ಟು ಕೆಲಸವಾಗುವುದಾದರೆ ನಾನೇಕೆ ಅಡ್ಡಗಾಲು

ಹಾಕಲೆಂದು ತಿಳಿದು ನಿರ್ಣಯವನ್ನು ಮೇಲಕ್ಕೆ ಕಳುಹಿಸಿದೆ. ಹಣಕಾಸಿನ ಕಾರ್ಯದರ್ಶಿ ಸತೀಶ್‌ಚಂದ್ರ ಅವರು ನಿಮ್ಮ ಸಂಸ್ಥೆಗೆ ಇನ್ನೂ ಏನೂ ಇಲ್ಲ. ಕೇವಲ ಅದೊಂದು ಸಲಹಾ ಮಂಡಲಿ. ಹೀಗಿರಬೇಕಾದರೆ ಹುಚ್ಚುಚ್ಚಾಗಿ ಇಂತಹ ಯೋಜನೆಗಳನ್ನು ನೀವು ನುರಿತ ಆಡಳಿತಗಾರರಾಗಿ ಹೇಗೆ ಕಳುಹಿಸಿದಿರಿ ಎಂದರು. ವಿಷಯ ಅಲ್ಲಿಗೆ ತಟಸ್ಥಗೊಂಡಿತು. ಸರ್ಕಾರ ಜನತೆಯ ಕಣ್ಣಿಗೆ ಮಣ್ಣೆರಚಲು ಮಂಡಲಿಯೊಂದನ್ನು ನೇಮಿಸಿತು. ಅದರ ಪ್ರಯೋಜನ ಎಷ್ಟೆಂದು ಪ್ರಾಜ್ಞರು ತಿಳಿಯಬೇಕು. ನಮ್ಮ ಸಂಸ್ಥೆಯ ಮೂಲೋದ್ದೇಶ ಕುರಿ ತಳಿಗಳನ್ನು ಅಭಿವೃದ್ಧಿಪಡಿಸಿ ಅಂದರೆ ಕ್ರಾಸ್ ಬ್ರೀಡು ಮತ್ತಿತರ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವುದು. ಒಳ್ಳೆ ಕಚ್ಚಾ ಮಾಲು ಉಣ್ಣೆಯನ್ನು ಕಂಬಳಿ ನೇಕಾರರಿಗೆ ಒದಗಿಸುವುದು. ಈ ಬಗ್ಗೆ ಯೋಜನೆಯೊಂದನ್ನು ಸರ್ಕಾರಕ್ಕೆ ಕಳುಹಿಸಿದ್ದಾಯ್ತು, ಆದರೆ ಪ್ರಯೋಜನವೇನೂ ಆಗಲಿಲ್ಲ. ಕೇವಲ 25 ರಿಂದ 30 ಸಾವಿರ ಹಣನ ಮಾತ್ರ ಮಂಡಳಿಗೆ ಕೊಡಲಾಗುತ್ತಿತ್ತು. ನಾವು ತಯಾರಿಸಿದ ಆ ಯೋಜನೆಗಳನ್ನು ಕೇಳಿದ ಕುರಿ ಸಾಕಾಣಿಕೆದಾರರು ಎಷ್ಟೋ ಆಸೆಯನ್ನು ಇಟ್ಟುಕೊಂಡು ಗೋಪುರ ಕಟ್ಟುತ್ತಿದ್ದರು. ಅಷ್ಟರಲ್ಲೇ ಶಾಸನ ಮಂಡಳಿ ರಚನೆಯಾಗುವುದೆಂದೂ ಆಗ ಭಾರಿ ಪ್ರಯೋಜನ ದೊರೆಯಲಿರುವುದೆಂದೂ ಹೇಳತೊಡಗಿದೆ. ಪಶುಸಂಗೋಪನಾ ಮಂತ್ರಿ ಎನ್.ಚಿಕ್ಕೇಗೌಡ ಅವರ ಸೂಚನೆಯಂತೆ ಕುರಿ ಅಭಿವೃದ್ಧಿಗೆ ಅಂತರರಾಷ್ಟ್ರೀಯ ಸಂಸ್ಥೆಯ ನೆರವು ಯಾಚಿಸುವ ಕಾರ್ಯ ಹಮ್ಮಿಕೊಳ್ಳಲಾಯಿತು. ಮಾಸ್ಟರ್ ಪ್ಲಾನು ಒಳಗೊಂಡು ಪ್ರಾಜೆಕ್ಟ್ ರಿಪೋರ್ಟು ತಯಾರಿಸಿ ಇಲಾಖೆಯ ನಿರ್ದೇಶಕರ ಮೂಲಕ ಸರ್ಕಾರಕ್ಕೆ ಕಳುಹಿಸಲಾಯಿತು.

ನಮ್ಮ ಯೋಜನೆಗಳೆಲ್ಲಾ ವೈಜ್ಞಾನಿಕ ತತ್ವದ ಆಧಾರದ ಮೇಲೆ ಅಳವಡಿಸಲಾಯಿತು. ಅದರಲ್ಲೂ ಕುರಿ ಪಿಚಿಕೆ-ಗಂಜಲಗಳ ಶೇಖರಣೆಯ ಮೂಲಕ ಅಳವಡಿಸಿ ತಯಾರಿಸಿದ್ದ Fertiliser Project ಬಗ್ಗೆ ಅರ್ಥಖಾತೆ ಸಚಿವ ಎಂ.ವೈ.ಘೋರ್ಪಡೆ ಸಂತೃಪ್ತಿ ವ್ಯಕ್ತಪಡಿಸಿದ್ದರು. ಇದರಲ್ಲಿನ ವಾಸ್ತವಾಂಶಗಳು ತಮಗೆ ಹಿಡಿಸಿವೆಯೆಂದೂ ತಮ್ಮಲ್ಲೇ 500 ಕುರಿಗಳಿರುವುದಾಗಿಯೂ, ಈ ಯೋಜನೆಯ ಯಶಸ್ಸು ನಮ್ಮಿಂದ ಆಗಬಹುದೆಂಬ ಭರವಸೆ ತಾಳಬಹುದೆಂದು ತಿಳಿಸಿದರು. 6 ತಿಂಗಳು ಬೋರ್ಡಿನ ಖರ್ಚಿಗೆ ಬೇಕಾಗುವ ಹಣ ಮಂಜೂರು ಮಾಡುವುದಾಗಿ ಹೇಳಿ ನಮ್ಮ ಪ್ರಾಜೆಕ್ಟ್‌ಗಳ ತಾಂತ್ರಿಕ ಹಿನ್ನೆಲೆಯನ್ನು ಒಪ್ಪಿಕೊಂಡರು.

ಕುರಿ ಅಭಿವೃದ್ಧಿ ಕುರಿತಂತೆ ಸರ್ಕಾರದ ಮೇಲೆ ಒತ್ತಡ ತರಲು ಹಾಗೂ ಕುರಿ ಸಾಕುವವರಲ್ಲಿ ತಮ್ಮ ಕಾಯಕದ ಬಗ್ಗೆ ಶ್ರದ್ಧೆ ತಾಳಲು ಅನುಕೂಲವಾಗಲೋಸುಗ ಅಖಿಲ ಕರ್ನಾಟಕ ಕುರಿ ಪೋಷಕರ ಸಮ್ಮೇಳನವೊಂದನ್ನು ನಡೆಸಲು ನಿಶ್ಚಯಿಸಿದೆ. ಈ ಸಂಬಂಧವಾಗಿ ಸ್ಮರಣ ಸಂಚಿಕೆಯೊಂದನ್ನೂ ತರುವ ಕಾರ್ಯಕ್ರಮ ಸಹ ಹಮ್ಮಿಕೊಳ್ಳಲಾಯಿತು. ಈ ಸಮ್ಮೇಳನಕ್ಕೆ ಒಟ್ಟು 50,000 ರೂ.ಗಳು ವೆಚ್ಚವಾಗುವುದೆಂದು ನಿರ್ಧರಿಸಲಾಯಿತು. ಸರ್ಕಾರ ಅರ್ಧದಷ್ಟು ಅಂದರೆ 25,000 ರೂ.ಗಳನ್ನು ಕೊಡಲು ತೀರ್ಮಾನಿಸಿತು. ಈ ಸಮ್ಮೇಳನದ ಅಂಗವಾಗಿ ನಾನು ರಾಜ್ಯಾದ್ಯಂತ ಪ್ರವಾಸ ಮಾಡಬೇಕಾಗಿತ್ತು. ಮಂಡಳಿಗೆ ಕಾರು ಕೊಡಬೇಕೆಂದು ಸರ್ಕಾರಕ್ಕೆ ಪ್ರಾರ್ಥಿಸಿ ಪತ್ರಬರೆದೆ. ಸಧ್ಯಕ್ಕೆ ಕೈಗಾರಿಕಾ ಇಲಾಖೆಯವರ ಮೂರು-ನಾಲ್ಕು ವಾಹನಗಳಲ್ಲಿ ತಾವೊಂದನ್ನು ಬಳಸಿಕೊಳ್ಳಬಹುದೆಂದು ಕೈಗಾರಿಕಾ ಮಂತ್ರಿಯವರು ಹೇಳಿದರು. ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ಇಲಾಖೆಯ ನಿರ್ದೇಶಕರು ತಾವು ಮಂತ್ರಿಗಳೊಡನೆ ಮಾತನಾಡುವುದಾಗಿ ಹೇಳಿ ವಾಹನ ಕೊಡಲೇ ಇಲ್ಲ. ''ದೇವರು ಕೊಟ್ಟರೂ ಪೂಜಾರಿ ಕೊಡ'' ಎಂಬಂತೆ ಸರ್ಕಾರದ ಹುಕುಂ ಕಾಗದದ ಮೇಲೆ ಉಳಿಯಿತು. ನಮ್ಮ ಆಧುನಿಕ ಕಾಲದಲ್ಲಿ ಮಂತ್ರಿಮಹೋದಯರನ್ನು ಆಡಿಸುವವರು ಇವರೇ. ಸ್ವಂತ ವಿವೇಚನಾ ಶಕ್ತಿಯಿಲ್ಲದ ಮಂತ್ರಿಯಿಂದ ಏನನ್ನು ತಾನೆ ನಿರೀಕ್ಷಿಸಲು ಸಾಧ್ಯ. ಸಮ್ಮೇಳನ ನಡೆಯುವುದು ಒಂದೆರಡು ದಿನವಿರಬೇಕಾದರೆ ಸಿಬ್ಬಂದಿ ಉಪ ಕಾರ್ಯದರ್ಶಿಯವರು ನಮ್ಮ ಆಫೀಸಿನ ದೂರವಾಣಿ ಸಂಪರ್ಕ ಸಹ ತೆಗೆಸಿಬಿಟ್ಟರು. ಶತಶತಮಾನಗಳಿಂದಲೂ ತುಳಿತಕ್ಕೆ ಒಳಗಾಗಿ ಜನ ಸಂಘಟಿತವಾಗಿ ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆಂಬ ಸಂತೋಷ ನಮಗಿದ್ದರೆ ಹೊಟ್ಟೆ ತುಂಬಿದ ಜನಕ್ಕೆ ಏನಾಗಬೇಕು. ತಮ್ಮ ಕೈ ಮೇಲಾಗಬೇಕೆಂಬುದೇ ಅವರ ಮಹತ್ವಾಕಾಂಕ್ಷೆ. ಈ ಕಿರುಕುಳಗಳ ನಡುವೆಯೂ ರಾಜ್ಯದ ಜಿಲ್ಲಾ ಪ್ರದೇಶಗಳಿಗೆ ಭೇಟಿ ಕೊಟ್ಟು, ಆಯಾ ಜಿಲ್ಲೆಯ ಕುರಿ ಪೋಷಕ ಹಾಗೂ ಉಣ್ಣೆ ನೇಕಾರರ ಜಿಲ್ಲಾ ಮಟ್ಟದ ಸಭೆಗಳನ್ನು ನಡೆಸಿ ಅಲ್ಲಿನ ಪರಿಸ್ಥಿತಿಯನ್ನು ವೀಕ್ಷಿಸಿ ಅಂಕಿಅಂಶಗಳನ್ನು ಅಲ್ಲಲ್ಲೇ ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ. ಸುದ್ದಿ ಮಹತ್ವ ಅರಿತು ಅನೇಕ ಪತ್ರಿಕೆಗಳು ಮುಖಪುಟದಲ್ಲಿ ಇದನ್ನು ಪ್ರಕಟಿಸಿದವು. ಒಟ್ಟಾರೆ, ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ರಾಜ್ಯಾದ್ಯಂತ ಕುರಿ ಪೋಷಕರಲ್ಲಿ ಜಾಗೃತಿ ಪ್ರಾರಂಭವಾಗಿ ವೇದಿಕೆಯೊಂದು ಸಿದ್ಧವಾಯಿತು. 1973ರಲ್ಲಿ ನವೆಂಬರ್ 23 ರಂದು ಕೆಂಪೇಗೌಡ ರಸ್ತೆಯಲ್ಲಿರುವ ಕೈಗಾರಿಕಾ-ವಾಣಿಜ್ಯ ಸಂಘದ ಭವನದ

ಒಳಾಂಗಣದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಪೋಷಕರ ಹಾಗೂ ಕಂಬಳಿ ನೇಕಾರರ ಸಮ್ಮೇಳನ ಪ್ರಾರಂಭವಾಯ್ತು. ಇದಕ್ಕೆ ಹಿಂದಿನ ಬೆಳಿಗ್ಗೆ ವಿಧಾನಸೌಧದ ನಮ್ಮ ಕಛೇರಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆ ಕರೆದಿದ್ದೆ. ಈ ಎರಡು ತೊಡರುಗಳ ನಡುವೆ ಮಂಡಳಿ ಸಾಧಿಸಿದ ಕಾರ್ಯವೇನು, ಕುರಿ ಅಭಿವೃದ್ಧಿ ಮುಂದಿನ ದಶಕಗಳಲ್ಲಿ ಹೇಗೆ ಉತ್ತಮ ಗೃಹ ಕೈಗಾರಿಕೆಯಾಗಬಲ್ಲವೆಂಬುದನ್ನು ವಿವರಿಸಿ ಹೇಳಿದೆ. ಕುರಿಯನ್ನು, ಕೇವಲ ಮುಗ್ಧತೆ, ಸೌಮ್ಯತೆಗಳಿಗೆ ಮಾತ್ರ ಬಲ್ಲವರಿದ್ದ ಪತ್ರಕರ್ತರು ಈ ಸಂಬಂಧವಾಗಿ ಪಂಚವಾರ್ಷಿಕ ಯೋಜನೆಯೊಂದನ್ನು ಸಿದ್ಧಮಾಡಿ ತಲುಪಿಸಿರುವುದಾಗಿ ಹೇಳಿದಾಗ ಅವರ ಕುತೂಹಲ ಅಷ್ಟಿಷ್ಟಲ್ಲ. ಜನಸಾಂದ್ರತೆ ಹೆಚ್ಚಿರುವ ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿರುವ ಭಾರತದಲ್ಲಿ ಪಶುಪಾಲನೆ ಹಾಗೂ ಕುರಿ ಸಾಗಾಣಿಕೆ ಒಳ್ಳೆ ಉದ್ಯಮಗಳಾಗಬಹುದು. ವ್ಯವಸಾಯದ ಜೊತೆ ಇದನ್ನು ಸಮರ್ಪಕವಾಗಿ ಜಾರಿಗೆ ತಂದಿದ್ದಾದರೆ ಪ್ರಕೃತಿ ವಿಕೋಪದ ಸಂದರ್ಭದಲ್ಲೂ ಇವು ಜನರನ್ನು ಕಾಪಾಡಬಹುದು. ನೂರಾರು ಜನರ ಅನ್ನಕ್ಕೆ ಮೂಲಬಿಂದು ಇಲ್ಲಿದೆಯೆಂದೂ; ನಮ್ಮ ನಾಗರೀಕತೆಯ ಮೂಲಾಂಶವೇ ಇದೆಂದೂ ಹೇಳಿದಾಗ ಅವರೆಲ್ಲಾ ಖುಷಿಪಟ್ಟರು. ವಿಶೇಷ ಲೇಖನಗಳು ಸಹ ಒಂದೆರಡು ಪತ್ರಿಕೆಗಳಲ್ಲಿ ಬರೆಯಲ್ಪಟ್ಟವು. ನಾನು ಮತ್ತೆ ಮತ್ತೆ ಹೇಳುತ್ತಿದ್ದೆ ಇದೊಂದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ, ರಾಜ್ಯದ 30 ಲಕ್ಷ ಜನರ ಹೊಟ್ಟೆ ಪ್ರಶ್ನೆ ಎಂದು. ಕೈಗಾರಿಕಾ ಮಂತ್ರಿ ಎಸ್.ಎಂ.ಕೃಷ್ಣ, ಪಶುಸಂಗೋಪನಾ ಮಂತ್ರಿ ಚಿಕ್ಕೇಗೌಡ, ಸಂಸದೀಯ ವ್ಯವಹಾರಗಳ ಮಂತ್ರಿ ಡಿ.ಕೆ.ನಾಯ್ಕರ್ ಮುಂತಾದವರು ಇದರಲ್ಲಿ ಭಾಗವಹಿಸಿದ್ದರು. ಸಾರ್ವಜನಿಕರಿಗಾಗಿಯೇ ವಿಜಾತೀಯ ಟಗರುಗಳು ಯಂತ್ರೋಪಕರಣದಿಂದ ಕುರಿಗಳ ಮೇಲಿನ ಉಣ್ಣೆ ಬೇರ್ಪಡಿಸುವ ವಿಧಾನ, ಷಟಲ್ ಮತ್ತು ಪಿಟ್ ಮಗ್ಗಗಳಿಂದ ಕಂಬಳಿ ನೇಯುವಿಕೆ ರಾಜ್ಯದ ನಾನಾ ಕಡೆಯಿಂದ ಬಂದ ಕಂಬಳಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಂತ್ರಿಗಳು, ಕುರಿ ಮತ್ತು ಉಣ್ಣೆ ಅಭಿವೃದ್ಧಿಗಾಗಿ ಎಲ್ಲಾ ನೆರವು ಕೊಡುವುದಾಗಿ ಹೇಳಿದರು. ಮರುದಿನ ಸಮ್ಮೇಳನದಲ್ಲಿ ಚರ್ಚೆ ನಡೆದು ಈ ಉದ್ಯಮ ಬೆಳವಣಿಗೆ ನಕಾಶೆ ತಯಾರಿಸಲಾಯಿತು. ಕುರಿ ಅಭಿವೃದ್ಧಿಗೆ ಅಂತರಾಷ್ಟ್ರೀಯ ಸಂಸ್ಥೆಯೊಂದರಿಂದ ಹಣಕಾಸಿನ ನೆರವು ಪಡೆಯುವುದು, ಕುರಿ ತಳಿ ಅಭಿವೃದ್ಧಿಗೆ ಸಂಮಿಶ್ರಣ ತಳಿ ಬಳಸುವುದು, ಇತ್ಯಾದಿಗಳ ಬಗ್ಗೆ ಒಮ್ಮತದ ನಿರ್ಣಯಕ್ಕೆ ಬರಲಾಯಿತು.

ಸಮಾರೋಪ ಸಮಾರಂಭಕ್ಕೆ ಮುಖ್ಯ ಮಂತ್ರಿ ಡಿ.ದೇವರಾಜ ಅರಸು ಬಾರದಿದ್ದರೂ ತಮ್ಮ ಭಾಷಣವನ್ನು ವ್ಯವಸಾಯ ಮಂತ್ರಿ ಕೆ.ಎಚ್.ಪಾಟೀಲರ ಜೊತೆ ಕಳುಹಿಸಿದ್ದರು. ಈ ಉದ್ಯಮದ ಅಗತ್ಯತೆಯನ್ನು ಒತ್ತಿ ಹೇಳಿದ ಮುಖ್ಯ ಮಂತ್ರಿಗಳು ಇದರ ಅಭಿವೃದ್ಧಿಗೆ ಎಲ್ಲಾ ನೆರವು ಕೊಡುವುದಾಗಿ ಹೇಳಿದರು. ಅಂತೂ ಬಹುದಿನದ ಕನಸು ನನಸಾಯಿತು. ಕುರಿಗಾರ-ನೇಕಾರರ ಆಸೆ ಆಕಾಂಕ್ಷೆಗಳನ್ನು ಜನತೆ ಹಾಗೂ ಸರ್ಕಾರದ ಮುಂದೆ ಇಟ್ಟಿದ್ದೇನೆ. ಪುರಸ್ಕರಿಸಿ ನಾಡಿನ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದು ಆಡಳಿತದ ಹೊಣೆ ಹೊತ್ತವರ ಕೆಲಸ. ಒಂದೇ ದಿನದಲ್ಲಿ ಇವೆಲ್ಲಾ ಆಗಿ ಬಿಡುತ್ತೆಂಬ ಭ್ರಮೆ ಕೂಡ ನನಗಿಲ್ಲ. Samuel Butler, ಹೇಳುವಂತೆ ಯಾರಿಗಾದರೂ Life is one long process of getting tired, ಅನಿಸದೆ ಇರದು. ಇದೇ ಸಮಯದಲ್ಲಿ ವಿಧಾನಸಭಾಧಿವೇಶನ ನಡೆಯಿತು. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಲಿಯ ಕಾಯಿದೆ ಅಂಗೀಕಾರವಾಗಿ ಇದು ಶಾಸನ ಬದ್ಧ ಮಂಡಲಿಯೂ ಆಯಿತು. ಒಬ್ಬ ಗುಮಾಸ್ತ, ಅಕೌಂಟೆಂಟರುಗಳು ನೇಮಕವಾದರು. ಆರ್.ವಿ.ರೋಡಿನ ಮಿನರ್ವ ಸರ್ಕಲ್‌ನ 21ನೆಯ ನಂಬರ್ ಕಟ್ಟಡಕ್ಕೆ ನಮ್ಮ ಕಛೇರಿ ವರ್ಗಾವಣೆ ಮಾಡಲಾಯಿತು. ಮಂಡಲಿ ಸಲಹಾ ಮಂಡಲಿಯಾಗಿದ್ದಾಗಲೇ ನಮ್ಮ ಮೀಟಿಂಗ್‌ಗಳಿಗೆ ರಾಷ್ಟ್ರೀಯ ಬ್ಯಾಂಕ್ ಅಧಿಕಾರಿಗಳನ್ನು ಕರೆಸುತ್ತಿದ್ದೆ. ಅವರ ಮನ ಒಲಿಸಿ ಕುರಿ ಸಾಕಾಣಿಕೆ ಮತ್ತಿತರ ಉದ್ದಿಮೆಗಳಿಗಾಗಿ 40 ಲಕ್ಷದವರೆಗಿನ ಸಾಲವನ್ನು ರಾಣಿಬೆನ್ನೂರು, ಬೆಳಗಾಂ ಕುರಿ ಪೋಷಕ ಸಂಘಗಳಿಗೆ ಒದಗಿಸಲಾಯ್ತು. ಮಂಡಲಿಯಿಂದ ಯಾವುದಾದರೂ ಸಹಾಯ ಸಹಕಾರಗಳು ಬೇಕಿದ್ದರೂ ಕುರಿ ಮತ್ತು ಉಣ್ಣೆ ಉತ್ಪನ್ನ ಸಹಕಾರ ಸಂಘ ಸ್ಥಾಪಿಸಿಕೊಳ್ಳಲು ಸಲಹೆ ಕೊಡಲಾಯಿತು. ಇದರ ಜೊತೆ ಸರ್ಕಾರದ ಆಡಳಿತದಲ್ಲಿರುವ ಜಿಲ್ಲಾ ಫಾರಂಗಳನ್ನು ಮಂಡಲಿಗೆ ತೆಗೆದುಕೊಳ್ಳುವ ವ್ಯವಸ್ಥೆ ಸಹ ಆಯಿತು. ಮಂಡಲಿ ಕೊಡುವ ಸೌಲಭ್ಯಗಳನ್ನು ಅದರ ಅಧ್ಯಕ್ಷ ಉಪಯೋಗಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಅಪ್ರಾಮಾಣಿಕತೆ ತೋರಿಸಿದರೆ ಆತನನ್ನು ದೂಷಿಸಬೇಕು. ನನಗಾದರೋ ಈ ಸೌಲಭ್ಯನ ಯಥೇಚ್ಛವಾಗಿ ಉಪಯೋಗಿಸಿದರೆ ಜನ ಏನಂದಾರೋ ಏನೋ ಸಾಕಷ್ಟು ಕೆಲಸ ಮಾಡದೆ, ಎಂಬ ಅಳುಕು. ಮಂಡಲಿಯ ಕಾರಿನಲ್ಲಿ ನಾನು ಕುಳಿತು ಹೋಗುತ್ತಿದ್ದಾಗ ಪ್ರತಿದಿನ ಪಾದಚಾರಿಗಳೊಡನೆ ಹೆಜ್ಜೆ ಹಾಕುತ್ತಿದ್ದ ನೆನಪು. ಯಾರಾದರೂ "ನೋಡೋ ಅವನ ಧಿಮಾಕು, ನಿನ್ನೆ ಮೊನ್ನೆ ನಮ್ಮಂಗೆ ಇದ್ದವ, ಈಗ ಜುಮ್ ಅಂತ ಕಾರಿನಲ್ಲಿ ಹೊರಟಿದ್ದಾನೇ" ಅಂದರೆ ಏನು ಹೇಳೋದು.

ಅದಕ್ಕೆ ಸೆಖೆಯಾದರೂ ಪರವಾಗಿಲ್ಲ ಯಾರಾದರೂ ನೋಡಿಯಾರೆಂದು ಕಾರಿನ ಗ್ಲಾಸ್‌ನ ಎತ್ತರಿಸಿ ಬಿಡುತ್ತಿದ್ದೆ.

ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿದ ತರುವಾಯ ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ಪಂಗಡಗಳನ್ನು ಒಂದುಗೂಡಿಸುವ ಏರ್ಪಾಡು ಮಾಡಿದೆ. ಇದಕ್ಕೊಂದು ಸಮಾವೇಶ ಜರುಗಿತು. ಜಿಲ್ಲಾ ಕೋ-ಆಪರೇಟಿವ್ ಯೂನಿಯನ್ ಆಫೀಸ್‌ನಲ್ಲಿ ಜರುಗಿದ ಸಮಾವೇಶ ನನ್ನನ್ನು ಅಧ್ಯಕ್ಷನನ್ನಾಗಿಯೂ, ಮಾಜಿ ಶಾಸಕ ಕೆ.ಎಲ್.ನರಸಿಂಹಯ್ಯ ಅವರನ್ನು ಕಾರ್ಯದರ್ಶಿಯನ್ನಾಗಿ ಆರಿಸಿತು. ಇದೇ ಮುಂದೆ ಹಿಂದುಳಿದವರ ಒಕ್ಕೂಟವಾಗಿ ಪರಿವರ್ತನೆಗೊಂಡಿತು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಮೀಸಲಾತಿ, ಕೇಂದ್ರಸರ್ಕಾರದಲ್ಲಿ ಹಿಂದುಳಿದವರ ಸ್ಥಿತಿಗತಿಗಳ ಅಧ್ಯಯನಕ್ಕೆ ಸಮಿತಿಯ ನೇಮಕ ಇತ್ಯಾದಿಗಳನ್ನು ಕುರಿತು ಸಮಾವೇಶ ಚರ್ಚೆ ಮಾಡಿತ್ತು. 1974ರ ಆಗಸ್ಟ್‌ನಲ್ಲಿ ಬಿಜಾಪುರದಲ್ಲಿ ಇಂತಹದೇ ಸಮ್ಮೇಳನ ಜರುಗಲಿತ್ತು. ನಾನು ಮತ್ತು ಮಂಡಲಿಯ ಬಿಜಾಪುರದ ಸದಸ್ಯ ಜಿದ್ದಿ ಅವರು ಬಿಜಾಪುರ ಜಿಲ್ಲೆಯ ಕುರುಬ ಉಣ್ಣೆ ನೇಕಾರರ ಬೃಹತ್ ಸಮ್ಮೇಳನವೊಂದನ್ನು ಇದೇ ಸಂದರ್ಭದಲ್ಲಿ ಏರ್ಪಡಿಸಿದೆವು. ಈ ಎರಡೂ ಸಮ್ಮೇಳನಗಳಲ್ಲಿ ಪ್ರಮುಖ ಪಾತ್ರವಹಿಸಿ ಇದರ ಯಶಸ್ಸಿಗೆ ಕಾರಣರಾದವರು ಮುಖ್ಯ ಮಂತ್ರಿಗಳ ಸೋದರ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿದ್ದ ದಿವಂಗತ ಕೆಂಪರಾಜು ಅರಸು ಅವರು. ನಾನು ಮತ್ತು ಅರಸು ಅವರು ಊರೂರು ತಿರುಗಿ ಜನರಲ್ಲಿ ಸಮ್ಮೇಳನದ ಜಾಗೃತಿ ಮೂಡಿಸಿದೆವು. ಜನ ತಂಡೋಪ ತಂಡದಲ್ಲಿ ಭಾಗವಹಿಸಿ ಈ ಹಿಂದೆ ಹಿಂದುಳಿದವರನ್ನು ಕಡೆಗಣಿಸಿದ್ದರ ಔಚಿತ್ಯವನ್ನು ಪ್ರಶ್ನಿಸಿದರು. ನಮ್ಮವರೇ ಅಂದರೆ ಕುರುಬ ಉಣ್ಣೇ ನೇಕಾರರೇ ಬಹು ಸಂಖ್ಯೆಯಲ್ಲಿ ತಮ್ಮ ಡೋಲ್-ಮ್ಯಸಲ್ ವಾದ್ಯಗಳೊಂದಿಗೆ ಭಾಗವಹಿಸಿ ಸಮ್ಮೇಳನಕ್ಕೆ ಕಳೆಕೊಟ್ಟರು. ಇದರಲ್ಲಿ ಭಾಗವಹಿಸಿದ್ದ ಹಣಕಾಸು ಮಂತ್ರಿ ಎಂ.ವೈ.ಘೋರ್ಪಡೆ ಅವರು ಮಂಡಲಿಯ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿದರು. ನಮ್ಮ ಚಿಂತನೆಗಳನ್ನು ಎಳೆ ಎಳೆಯಾಗಿ ಬಿಡಿಸಿ ಅದರ ಅಗತ್ಯತೆಯನ್ನು ಮನಗಂಡು, ಹೊಸತರ ಅವಿಷ್ಕಾರದ ಚಾಲನ ಶಕ್ತಿಯಾದರು. ಮಂಡಲಿಗೆ ಬೇಕಾಗುವ ಆರು ತಿಂಗಳ ಹಣಕಾಸನ್ನು ಅವರು ತಕ್ಷಣ ಮಂಜೂರು ಮಾಡುವುದಾಗಿ ಭರವಸೆ ಕೊಟ್ಟರು.

ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕು. ಸಮ್ಮೇಳನ

ಸಮಾವೇಶಗಳಂತಹ ಜನ ಜಾತ್ರೆಗಳಲ್ಲಿ ನೈಜ ಕೆಲಸಗಾರರು ಹೇಗೆ ಫಲ ಕಾಣಲು ಸಾಧ್ಯವೆಂಬುದು. ಈ ಮಾತಿನಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಆದರೂ ಕಾಂಗ್ರೆಸ್ ಅಂತಹ ಮಹಾಸಂಸ್ಥೆ. ಪ್ರತಿ ವರ್ಷ ಅಧಿವೇಶನಗಳನ್ನು ನಡೆಸುತ್ತಾ ಸ್ವಾತಂತ್ರ್ಯ ಗಳಿಕೆಯ ತನ್ನ ಗುರಿಯನ್ನು ಜನತೆಗೆ ಬಿತ್ತರಿಸುತ್ತಿಲ್ಲವೆ? ರಾಷ್ಟ್ರೀಯ ನಾಯಕರ ಸಂಘಟನಾ ಶಕ್ತಿ ಅಡಗಿರುವುದೂ ಇಂತಹ ಜನಜಾಗೃತಿ ಕೆಲಸದಲ್ಲಿ ಮಾತ್ರ. ಹೀಗೆಂದ ಮೇಲೆ ಎಲ್ಲಾ ಸಮಾವೇಶಗಳೂ ಪೂರ್ಣ ವ್ಯರ್ಥವಾಗುವುದಿಲ್ಲ. ಅದರಲ್ಲೂ ದೇವರಾಜ ಅರಸರವರು ಮುಖ್ಯಮಂತ್ರಿಯಾಗಿದ್ದ ಕಾಲ ಹತ್ತಾರು ವಿಧದಲ್ಲಿ ಪ್ರಾಮುಖ್ಯವಾದದ್ದು. ಸ್ವಾತಂತ್ರ್ಯ ಬಂದರೂ ದೇಶನಾಯಕರಿಗೆ ಸಮಾಜದ ಅತ್ಯಂತ ಬಡಜನರು ಯಾವುದೇ ಗಣನೆಗೆ ಬಂದಿರಲಿಲ್ಲ. ಕೆಲವೇ ಜನರಲ್ಲಿ ಹೇಗೋ ಅಧಿಕಾರ ಹೆಪ್ಪುಗಟ್ಟಿ, ಅವರುಗಳು ಅನಿವಾರ್ಯವಾಗಿದ್ದರು. ಶ್ರೀ ದೇವರಾಜ ಅರಸು ಅವರು ತಮ್ಮ ಅಮೋಘ ರಾಜಕೀಯ ಚಾಣಾಕ್ಷತೆಯಿಂದ ಅಸಂಘಟಿತ ವರ್ಗಗಳನ್ನು ಸಂಘಟಿಸಿ, ಅದನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿದರು. ಪ್ರಾಯಶಃ ಕರ್ನಾಟಕದಲ್ಲಿ ನೈಜ ಪಾಳೆಗಾರಿಕೆ ಆಳ್ವಿಕೆಗೆ ಇತಿಶ್ರೀ ಹಾಡಿದ ಕೀರ್ತಿ ಅವರಿಗೆ ಸೇರಬೇಕು. ಮುಂದೆ ಯಾರು ಬಂದರೂ ಈ ಹಿಂದುಳಿದ ವರ್ಗದವರನ್ನು ಕಡೆಗಣಿಸುವಂತಿಲ್ಲವೆಂದು ಅರಸು ಅವರು ಅಮರ ಶಾಸನ ಬರೆಸಿದರು. ಅದಕ್ಕಾಗಿ ಕೇಂದ್ರದಲ್ಲಿ ಅವರ ಸರ್ಕಾರಿ ಅಧಿಕಾರ ಕಳ್ಕೊಂಡರೂ ಜನ ತಮ್ಮ ದಣಿಯನ್ನು ಮರೆಯಲಿಲ್ಲ. ಇದಕ್ಕೆ ಪೂರ್ವ ಪೀಠಿಕೆಯಂಬಂತೆ ಹತ್ತಾರು ಹಿಂದುಳಿದ ಜಾತಿಯವರ ಸಮ್ಮೇಳನಗಳು ಕರ್ನಾಟಕದಲ್ಲೆಲ್ಲಾ ಜರುಗಿದವು. ತುಮಕೂರು ಹಾಗೂ ಬಿಜಾಪುರದ ಸಮ್ಮೇಳನಗಳು ಅವುಗಳ ವರವೇ ಆಗಿವೆ.

ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆಯ ವತಿಯಿಂದ ಸಿರಾ ಗೇಟಿನಲ್ಲಿ ಹೈಸ್ಕೂಲು ಒಂದು ನಡೆಯುತ್ತಿತ್ತಷ್ಟೇ. ವರ್ಷವರ್ಷೇ ಫಲಿತಾಂಶದ ಏರಿಕೆಯಿಂದ ವಿದ್ಯಾರ್ಥಿಗಳು ಹೆಚ್ಚಾದರು. ಅಸಹ್ಯ ಬರುವ ಸ್ಥಳದಲ್ಲಿ ಪಾಠಗಳು ನಡೆಯುತ್ತಿದ್ದವು. ಕ್ರೈಸ್ತ ಸೆಮಿನಾರ್‌ನ ಮುಂಭಾಗದ ಮೂರೂವರೆ ಎಕರೆ ಪ್ರದೇಶವನ್ನು ನಮ್ಮ ಪ್ರೌಢಶಾಲೆಗೆ ದೊರಕಿಸಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಇದು, ವಿದ್ಯಾ ಇಲಾಖೆಗೆ ಸೇರಿದ್ದ ಪ್ರದೇಶವಾಗಿತ್ತು. ಅವರು ರೆವಿನ್ಯೂ ಇಲಾಖೆಗೆ ವಹಿಸಿ ಅಲ್ಲಿಂದ ನಮಗೆ ಬರಬೇಕಾಗಿತ್ತು. ಹತ್ತಾರು ಸಾರಿ ಸುತ್ತಿ ಫೈಲು ತಯಾರಿಸಿದೆ. ಮಂತ್ರಿ ಡಿ.ಕೆ.ನಾಯ್ಕರ್‌ರನ್ನು ಹಿಡಿದು ಅದಕ್ಕೊಂದು ರೂಪು ಕೊಡಿಸಿದೆ. ಆದರೆ ಕಂದಾಯ ಮಂತ್ರಿ, ನಮ್ಮ ಜಿಲ್ಲೆಯವರೇ ಆದ

ಎನ್.ಹುಚ್ಚಮಾಸ್ತಿಗೌಡ್ರು ಅಡರುಗಾಲು ಹಾಕಿದರು. ಬಡ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆಗೆ ಕಟ್ಟಡ ಕಟ್ಟಲು ತಾಕತ್ತು ಇದೆಯೇ, ಸರ್ಕಾರಕ್ಕೆ ಈ ಬೆಲೆಯುಳ್ಳ ಜಾಗ ಬೇರೆ ಯಾವ ರೀತಿಯಲ್ಲಾದರೂ ಉಪಯುಕ್ತವಾಗಬಹುದೆಂಬ ಕುಂಟ ನೆಪ ಹಾಕತೊಡಗಿದಾಗ ನಾನು ''ಇಲ್ಲ ಸ್ವಾಮಿ. ನೀವೊಂದು ಸಲ ಅಲ್ಲಿಗೆ ಬನ್ನಿ ನಮ್ಮಲ್ಲಿರೋ ಓದೋ ಮಕ್ಕಳ ಮುಖನೋಡಿ ಹೇಳಿ'' ಎಂದು ಪಟ್ಟುಹಿಡಿದೆ. 28-7-74ರಲ್ಲಿ ಸ್ಥಳ ಪರೀಕ್ಷೆ ಶಾಸ್ತ್ರ ಮಾಡಿದರು. ಸರ್ಕಾರದಿಂದ ನಿವೇಶನ ಮಂಜೂರಾಯಿತು. ದೇವರು ದೊಡ್ಡವನು, ಅವರು ಮಾಡಿದ ಟೀಕೆ ನಿಜವಾಗಲಿಲ್ಲ. ಸಂಘ ಹೇಗೋ ಕಟ್ಟಡದ ಕೆಲಸ ಶುರು ಮಾಡಿತು. ಈ ಕಾಲದ ಒಂದೆರಡು ವೈಯಕ್ತಿಕ ವಿಚಾರ, ಹೇಳದಿದ್ದರೆ ಹೇಗೆ? ಬೆಂಗಳೂರಲ್ಲಿ ನಡೆಯಬೇಕಾದ ರಾಜ್ಯ ಕುರಿ ಸಮ್ಮೇಳನದ ಸಂದರ್ಭವಿರಬಹುದು. ಈ ಸಮ್ಮೇಳನಕ್ಕೆಂದು ಎರಡು ರೀಮ್ ಕಾಗದ ತರಿಸಿ ವಿಧಾನಸೌಧದ ನಮ್ಮ ಕಛೇರಿಯಲ್ಲಿ ಇಟ್ಟಿದ್ದೆ. ಮಾರನೆಯ ದಿನ ಬಂದು ನೋಡಿದರೆ ಅದು ಮಂಗಮಾಯ. ಕಛೇರಿಯ ಕೀಗಳೆಲ್ಲಾ ವಿಧಾನಸೌಧದ ಸೆಕ್ಯೂರಿಟಿ ಅವರ ಅಧೀನದಲ್ಲಿರುತ್ತದೆ. ಅವರ ಮೇಲೆ ದೂರು ಕೊಟ್ಟರೆ - ಮುಖ್ಯ ಕಾರ್ಯದರ್ಶಿಗಳಿಗೆ ಕೊಡಬೇಕು. ಅದನ್ನು ಪ್ರಮಾಣೀಕರಿಸುವುದಂತೂ ಆಗದ ಮಾತು. ಇಲ್ಲದ ಹಗರಣ ಏಕೆಂದು ಸ್ವಂತ ದುಡ್ಡು ಹಾಕಿ ಬೇರೆ ಕಾಗದ ತರಿಸಿಟ್ಟೆ. ನಾನು ಹೇಳೋದು ಇಷ್ಟು. ನಮ್ಮ ಅಧಿಕಾರ ವರ್ಗದಲ್ಲಿ ಎಳ್ಳಷ್ಟು ಪ್ರಾಮಾಣಿಕತೆ, ತಮ್ಮನ್ನು ಸಾಕುತ್ತಿರುವ ಪ್ರಭುಗಳ ಬಗ್ಗೆ ಕೃತಜ್ಞತೆ ಇಲ್ಲದ ಬಗ್ಗೆ, ಏನು ಹೇಳುವುದು. ಸರಿಯಾಗಿ ನಮ್ಮವರು ಸ್ಟಾಕ್ ರಿಜಿಸ್ಟರು ಮುಂತಾದವನ್ನು ಇರಿಸದಿದ್ದರೆ ಕಟ್ಟಡದ ಸಮೇತ ಇವರು ಮನೆಗೆ ಸಾಗಿಸಿ ಬಿಡುತ್ತಿದ್ದರೇನೋ-ಗೊತ್ತಿಲ್ಲ !

ನಮ್ಮ ''ಕಾಳಿದಾಸ ವಿದ್ಯಾವರ್ಧಕ ಸಂಸ್ಥೆ''ಯನ್ನು ಹೇಗೋ ಕಟ್ಟಿದ್ದೇವೆ. ದೇವರಿಗೆ ವಜ್ರದ ಬೆಂಡೋಲೆ ಕೊಡುವವರು, ಹೆಸರು ಹೇಳದೆ ಲಕ್ಷಾಂತರ ರೂಪಾಯಿಗಳನ್ನು ಅರ್ಪಿಸುವವರಿದ್ದರೂ, ಕುಚೇಲನ ಅವಲಕ್ಕಿಯೇ ಅವನಿಗೆ ಪ್ರಿಯವಾಯಿತು. ಧಾರ್ಮಿಕ ಹಿನ್ನೆಲೆಯಿಲ್ಲದೆ, ರಾಜಕಾರಣದ ಬೆಂಬಲವಿಲ್ಲದೆ, ಅಶಕ್ತ ಹಾಗೂ ಸರ್ವವಿಧದಲ್ಲೂ ಹಿಂದುಳಿದ ಕುರುಬ ಜನಾಂಗದಲ್ಲಿ ಜಾಗೃತಿ ಮೂಡಿಸಿ, ಸೇವಾಸಂಸ್ಥೆ ಸ್ಥಾಪಿಸುವ ಕಷ್ಟ ಅದರ ಜೊತೆ ಹೆಣಗಿದವರಿಗೇ ಮಾತ್ರ ಗೊತ್ತು. ಸಂಸ್ಥೆ ಒಂದಿಷ್ಟು ಆಕಾರ ಪಡೆದರೆ ಬೇರೆಯವರು ಕಣ್ಣೆಸರು ಪಡುವುದಿರಲಿ ನಮ್ಮವರೇ ಮುಂದೆ ನಿಂತವರ ಮೇಲೆ ಸಲ್ಲದ ಆಪಾದನೆ ಮಾಡುವರು. ಈ ಕಾಲದ ನನ್ನ ಅನುಭವ ಹೀಗಿತ್ತು. ಒಂದುದಿನ

ವಿಧಾನಸೌಧದ ನನ್ನ ಕಛೇರಿಯ ಕೆಲಸದಲ್ಲಿ ಮಗ್ನನಾಗಿದ್ದಾಗ ನನ್ನ ಸಹಪಾಠಿ, ಪರಮಮಿತ್ರ ಸಿ.ಎಂ.ಗುರುಲಿಂಗಪ್ಪನವರಿಂದ ರಿಜಿಸ್ಟರ್ಡ್ ಲಕೋಟೆ ಬಂತು. ತುಮಕೂರಿನಲ್ಲಿ ಏನೋ ಅನಾಹುತ ಆಗಿ ಹೋಗಿದೆಯೋ ಎಂಬ ಆತಂಕ ಮೂಡಿತು. ಒಡೆದು ನೋಡಿದರೆ ಮೂರು ನಾಲ್ಕು ಪುಟಗಳಿರುವ ಪ್ರಸಿದ್ಧ ಮುದ್ರಿತ ಕರಪತ್ರವದು. ನಾನು ಕಾಳಿದಾಸ ವಿದ್ಯಾವರ್ಧಕ ಸಂಸ್ಥೆಯಿಂದ ಲಕ್ಷಾಂತರ ರೂಪಾಯಿ ತಿಂದು ಹಾಕಿರುವುದಾಗಿಯೂ, ಅನೇಕ ಗೋಲುಮಾಲು ಕೆಲಸ ನನ್ನ ಕಾಲದಲ್ಲಿ ನಡೆದಿರುವುದಾಗಿಯೂ ಆಪಾದಿಸಲಾಗಿತ್ತು, ಈ ಪತ್ರವನ್ನು ಎಲ್ಲಾ ಶಾಸಕರಿಗೆ, ಮಂತ್ರಿ ಮಾನ್ಯರಿಗೆ ಹಾಗೂ ಇತರೇ ಗಣ್ಯರಿಗೆ ರವಾನೆ ಮಾಡಲಾಗಿತ್ತು. ಇದನ್ನು ನೋಡಿದ ನನ್ನ ಅಭಿಮಾನಿಗಳು ಕೆರಳಿ ಕೆಂಡವಾದರು. ಮನೆಯ ಮಕ್ಕಳಂತೂ ''ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡುವ'' ಎಂದರು. ಮಡದಿಯಂತೂ 'ನಾನು ಬಡಕೊಂಡೆ, ಈ ಊರು ಕಾಯೋ ಕೆಲಸ ಬೇಡ ಅಂದ್ರೆ ಕೇಳಿದಿರಾ, ಈಗ ನೋಡಿ ಹೇಗೆ ಅಂತಾರೆ.'' ಎಂದು ಅಳತೊಡಗಿದಳು. ನಾನೇನೋ ಸಮಚಿತ್ತ ಕಳೆದುಕೊಳ್ಳಲಿಲ್ಲ. ಸಾರ್ವಜನಿಕ ರಂಗಕ್ಕೆ ಇಳಿದ ಮೇಲೆ ಇಂತಹುದು ಸಹಜ. ಆದರೆ ದೂರನ್ನು ಅಲಕ್ಷ್ಯ ಮಾಡಬಾರದೆಂದು ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆದೆ. ಶ್ರೀ ವಿ.ಚಿಕ್ಕವೀರಯ್ಯನವರು ಅಧ್ಯಕ್ಷತೆ ವಹಿಸಿದ್ದರು. 29-5-73ರ ಆ ಸಭೆಗೆ ಸಿ.ಎಂ.ಗುರುಲಿಂಪ್ಪನವರನ್ನು ಆಹ್ವಾನಿಸಿ ಕರಕೊಂಡು ಬರಲಾಯಿತು. ಸದಸ್ಯರ ಮಾತುಗಳಿಗೆ ಅವರೇನೂ ಉತ್ತರ ಕೊಡದವರಾದರು. ಮಲ್ಲಪ್ಪನವರ ಮೇಲೆ ಆಪಾದನೆ ಹೊರಿಸಿದ್ದು ತಪ್ಪು ತಮ್ಮದೆಂದು ಒಪ್ಪಿಕೊಂಡು ಕ್ಷಮಾಪಣಾ ಪತ್ರ ಮುದ್ರಿಸಿ ಹಿಂದೆ ಕಳುಹಿಸಿದ ಎಲ್ಲರಿಗೂ ತಲುಪಿಸುವುದಾಗಿ ವಾಗ್ದಾನ ಮಾಡಿದರು. ಪಾಪ, ಹಾಗೆಯೇ ಮಾಡಿದರು. ಗುರುಲಿಂಗಪ್ಪನವರು ವಿದ್ಯಾವಂತರು. ಸದ್ಗುಣಿಗಳು. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರಬೇಕಾದರೆ ಕಿತ್ತರೆ ಕೀಳದಂತ ಸ್ನೇಹ ನಮ್ಮದು. ವಿದ್ಯಾರ್ಥಿಜೀವನದ ನಂತರ ಬಹುಕಾಲದ ನಮ್ಮ ಆಗಲಿಕೆ ಅವರಿಗೆ ಈ ತರಹದ ಸಂಶಯ ತಂದುಕೊಟ್ಟಿತೋ, ಇಲ್ಲ ಬೇರೆಯವರ ಮೋಡಿ ಮಾತುಗಳಿಗೆ ಬಲಿಯಾಗಿ ಈ ಪ್ರಸಂಗದಲ್ಲಿ ಸಿಲುಕಿಕೊಂಡರೋ ತಿಳಿಯದು. ಡಿ.ವಿ.ಜಿ. ಹೇಳುವ ''ನಾಲ್ಕು ತಪ' ಗಳು ಸನ್ನದಾಗಬೇಕೆಂಬ ಹಂಬಲ ನನ್ನದು. ಅವುಗಳೆಂದರೆ ಕ್ಷಮೆ ದೋಷಿಗಳಲ್ಲಿ, ಕೆಚ್ಚೆದೆ ವಿಧಿಯ ಬಿರುಬಿನಲ್ಲಿ, ಸಮತೆ ನಿರ್ಮತ್ಸರತೆ ಸೋಲ್ಗೆಲವುಗಳಲ್ಲಿ.

ಮನುಷ್ಯ ಎಷ್ಟೇ ದೊಡ್ಡ ಸ್ಥಾನ ವಹಿಸಿದ್ದರೂ ದೊಡ್ಡತನ ಕೂಡಿ ಬರೋದಿಲ್ಲವೋ ಏನೋ. ಅನುಭವ ಅವನಲ್ಲಿ ಉದಾರತೆ ಬೆಳೆಸೋಲ್ಲ. ಅದು ಹೇಗೆಂದರೆ ನನ್ನ ವಿವೇಕವದೇನು ಬರಿಯ ಮಳೆ ನೀರಲ್ಲ, ಕೆರೆಯ ನೀರೆ. ಊರ ಮೈಸೋಂಕುಗಳ ಬೆರಕೆ. ಕೆಲವರಿಗೆ ತಮ್ಮದೆ ಶ್ರೇಷ್ಠಸ್ಥಾನ. ಉಳಿದವರು ಗುಲಾಮರೆಂಬ ಭಾವನೆ. ಈ ಪ್ರಸಂಗದಲ್ಲಿ ಅನಿವಾರ್ಯವಾಗಿ ಹಿಂದೆ ಮಂತ್ರಿಗಳಾಗಿದ್ದ ಎನ್.ರಾಚಯ್ಯ ಅವರ ಹೆಸರು ಹೇಳಬೇಕಾಗಿದೆ. ನನಗೆ ಅಂದರೆ ಕುರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಿಗೆ ಆಗ ವಿಧಾನಸೌಧದಲ್ಲಿ ಕೊಠಡಿ ಕೊಟ್ಟಿರುವುದು ರಾಜಕಾರಣಿಗಳು ಹೇಗೆ ಒಪ್ಪಿಕೊಳ್ಳಲು ಸಾಧ್ಯ. ಅವರೊಬ್ಬ ಸಾಮಾನ್ಯ ನಿವೃತ್ತ ಅಸಿಸ್ಟೆಂಟ್ ಕಮೀಷನರ್, ಅವರಿಗೇನೆ ವಿಧಾನ ಸೌಧದಲ್ಲಿ ಕೊಠಡಿ ಕೊಡಬೇಕಾದರೆ ನನ್ನ ಸ್ಥಾನವೇನು? ನನಗೆ ಕೊಠಡಿನೇ ಇಲ್ಲವಲ್ಲ ಎಂದು ಅನೇಕ ವಿ.ಐ.ಪಿ.ಗಳ ಮುಂದೆ ಮತ್ತೆ ಅಳಲು ತೋಡಿ ಕೊಂಡರಂತೆ. ಪ್ರಾಯಶಃ ವಿಧಾನಸೌಧ, ಇನ್ಮುಂದೆ ನಿವೃತ್ತ ಮಂತ್ರಿಗಳ ಆಸ್ತಿಯೆಂದು ಅದನ್ನು ಘೋಷಿಸುವ ಕಾಲಬರುತ್ತದೇನೋ ಗೊತ್ತಿಲ್ಲ, -ಹಿಂದಿನ ರಾಜರ ಅರಮನೆಗಳ ತರಹ, ಒಂದು ದಿನ ನಾನು ಮುಖ್ಯಮಂತ್ರಿಗಳನ್ನು ನೋಡೋಣ ಅಂತ ಅವರ ಮನೆಗೆ ಹೋದಾಗ. ಅಲ್ಲಿ (ಹಾಲಿನಲ್ಲಿ) ಎನ್.ರಾಚಯ್ಯ ಕುಳಿತಿದ್ದಾರೆ. ಅವರೊಂದಿಗೆ ಒಳಕ್ಕೆ ಹೋದೆ. ಹಿಂದೆ ಸರ್ಕಾರಿ ಸೇವೆಯಲ್ಲಿದ್ದಾಗ ನಿಟ್ಟೂರು ಹರಿಜನ ಸಮ್ಮೇಳನದಲ್ಲಿ ನನ್ನ ಬಗ್ಗೆ, ರಾಚಯ್ಯನವರಾಡಿರದ ಮಾತನ್ನು ಸೂಚ್ಯವಾಗಿ ಹೇಳಿ, ನನಗೆ ವಿಧಾನಸೌಧದಲ್ಲಿ ಕೊಠಡಿ ಕೊಟ್ಟಿರುವುದು ನಿಮಗೆ ಕಣ್ಣುರಿಯೇ ಎಂದೆ. ಆಗವರು ಇಲ್ಲ ನಿಮ್ಮಂತಹವರ ಮೇಲೆ ನನ್ನದು ಮೇಲಾಟವೇ. ತಾವೂ ಹಿಂದುಳಿದ ಜಾತಿ ಛಾಂಪಿಯನ್, ತಮಗೆ ಒಂದು ಕೊಠಡಿ ಇಲ್ಲದಿದ್ದರೆ ಹೇಗೆ' ಎಂದರು.

ಬಿಜಾಪುರ ಸಮ್ಮೇಳನದಿಂದ ನಾನು ವಾಪಸ್ಸು ಬರುವ ಹೊತ್ತಿಗೆ ನನ್ನ ಮೇಲೆ ಆಪಾದನೆಗಳ ಸುರಿಮಳೆ, ಜೊತೆ ಜೊತೆ ಪಿಸುಮಾತಿನ ಅಪಪ್ರಚಾರ ಪ್ರಾರಂಭವಾಗಿತ್ತು. ಮುಖ್ಯಮಂತ್ರಿಗಳ ಅಳಿಯರಾಗಿದ್ದ ಡಾ॥ ಎಂ.ಡಿ.ನಟರಾಜ ಅವರು ಪಶುಸಂಗೋಪನಾ ಇಲಾಖೆಯ ನಿವೃತ್ತ ಅಧಿಕಾರಿ ಚಂದ್ರಶೇಖರ್ ಅವರಿಗೆ ಈ ಸ್ಥಾನ ಕೊಡಿಸುವ ಹವಣಿಕೆಯಲ್ಲಿದ್ದರು, ನನ್ನ ಯೋಜನೆಗಳೆಲ್ಲಾ ಕಾಗದದ ಮೇಲೆ ಉಳಿದಿದ್ದರೂ ಅದಕ್ಕೆ ನೈತಿಕ ಬೆಂಬಲ ದೊರಕಿತ್ತು. ರಾಷ್ಟ್ರೀಕೃತ ಬ್ಯಾಂಕ್‌ಗಳು ಕುರಿ ಸಾಕುವಿಕೆಯ ಸಹಕಾರ ಸಂಘಗಳಿಗೆ ಸಾಲ ಕೊಡಲು ಮುಂದಾಗಿದ್ದವು. ಕೆಲಸಮಾಡಲು ಪ್ರೋತ್ಸಾಹದಾಯಕ ವಾತಾವರಣವಿದ್ದರೂ,

ಈ ರಾಜಕೀಯ ಸುಳಿಯಲ್ಲಿ ಈಜುವ ಸಾಹಸ ನನ್ನ ಕೈಯಲ್ಲಿ ಆಗಲಿಲ್ಲ ಅಥವಾ ಮಂತ್ರಿಗಳ ಹತ್ತಿರ ಹಲ್ಲುಗಿಂಜಿ ಕೆಲಸ ಮಾಡಲಾಗಲಿಲ್ಲ. ಬುದ್ಧಿ-ಅವರನ್ನು ಸಂತೃಪ್ತಿ ಮಾಡೋ ಕಾರ್ಯಕ್ಕೆ ಮನಸ್ಸು ಮಾಡಲಿಲ್ಲ. ಈ ಮಧ್ಯೆ ಮುಖ್ಯ ಮಂತ್ರಿಗಳು ಯಾವುದೋ ಪತ್ರಿಕಾಗೋಷ್ಠಿಯಲ್ಲಿ ಮಂಡಲಿಗೆ ಬೇರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವ ಯೋಜನೆ ಇದೆಯೆಂದರು. ಅದನ್ನು ನೋಡಿದ ತಕ್ಷಣ ಅಂದರೆ 7-10-74ರಲ್ಲಿ ರಾಜೀನಾಮೆ ಪತ್ರ ಬರೆದು ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಕಳುಹಿಸಿಬಿಟ್ಟೆ. ಅದರ ಜೊತೆ ಮಂಡಳಿಯ ಇತರ ಸದಸ್ಯರಿಗೂ ಪತ್ರಿಕೆಗಳಿಗೂ ಈ ಸುದ್ದಿ ತಿಳಿಸಿದೆ. ಅನೇಕ ಜನ 'ನೀವು ದುಡುಕಿದಿರಿ, ಇನ್ನೂ ಕೂಡ ಮಂಡಲಿಗೆ ಯಾರನ್ನು ನೇಮಿಸೋದಿಲ್ಲ. ನೀವೊಂದು ಸಾರಿ ಅರಸುರವರನ್ನು ನೋಡಬೇಕಾಗಿತ್ತು'' ಎನ್ನುತ್ತಿದ್ದರು. ಆ ಮಾತುಗಳಲ್ಲಿ ಒಂದಂಶ ಸರಿ. ನಾನು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕಟ್ಟೊ ಒಂದು ವರ್ಷದ ನಂತರ ಚನ್ನಯ್ಯ ಒಡೆಯರ್‌ರನ್ನು ಅಧ್ಯಕ್ಷರನ್ನಾಗಿಯೂ, ಚಂದ್ರಶೇಖರ್ ಅವರನ್ನು ಕಾರ್ಯದರ್ಶಿಯನರ್ನ್ನಾಗಿಯೂ ನೇಮಿಸಲಾಯಿತು. ಮುಂದೆ ಮುಖ್ಯಮಂತ್ರಿಗಳು ಸಿಕ್ಕಿದರು. ಈ ವಿಚಾರ ನಾವಿಬ್ಬರೂ ಪ್ರಸ್ತಾಪಿಸಲಿಲ್ಲ. ಯಾವುದಾದರೂ ಅಧಿಕಾರವಿದ್ದರೆ ಮಾತ್ರ ಜನತೆಗೆ ಒಳ್ಳೆಯದು ಮಾಡಬಹುದೆಂಬ ಭ್ರಮೆ ಇಳಿಯಿತು. ಅಂತೂ ವಿಧಾನಸೌಧದ ಮೆಟ್ಟಲನ್ನು ಹೇಗೋ ಹತ್ತಿ ಇಳಿದೆ. ನನಗೇನೋ ಉಪಯೋಗವಾಗದಿದ್ದರೂ, ಮಂಡಲಿಯ ಯೋಜನೆಗಳ ನಿರೂಪಣೆಯಲ್ಲಿ ಒಂದಿಷ್ಟು ಕೆಲಸ ಮಾಡಿದ ಧನ್ಯ ಭಾವವಿದೆ. ನನ್ನ ಹುಟ್ಟಿನ ಪರಿಸರಕ್ಕೊಂದು ಅರ್ಥಕೊಡುವ, ನಮ್ಮ ಜನಗಳಿಗೆ ಸ್ಥಾನ ಕಲ್ಪಿಸುವ ಮಹೋದ್ದೇಶವಿತ್ತು. ನಾವೆಷ್ಟು ಕೊರಗಿದರೂ ಅದು ಜರುಗಬೇಕಲ್ಲ. ಇದ್ದುದರಲ್ಲಿ ಸಂತೃಪ್ತಿ ಪಡೆಯಬೇಕು.

ತುಮಕೂರಿಗೆ ಬಂದ ತಕ್ಷಣ ಒಂದುಸಾರಿ ನಮ್ಮ ಪಾಳ್ಯದ ಕಡೆ ಹೋಗಿದ್ದೆ. ಕಾಲೇಜ್‌ಗೆ ಹೋಗುತ್ತಿದ್ದ ಹೈಕಳುಗಳು ಸುಮ್ಮನೆ ಅಡ್ಡಾಡುತ್ತಿದ್ದರು. ಹಿಂದೆ ನಾವು ನಗರದ ಕೃಷ್ಣರಾಜೇಂದ್ರ ಗ್ರಂಥಾಲಯಕ್ಕೆ 'ಮದ್ರಾಸ್ ಮೇಲ್' 'ಹರಿಜನ ಪತ್ರಿಕೆ'ಗಳನ್ನು ಓದಲು ಹೋಗುತ್ತಿದ್ದವು. ಈಗ ಶಿರಾಗೇಟಿನ ಆವರಣ ಉತ್ತಮಗೊಂಡಿದೆ. ಹೈಸ್ಕೂಲು ಒಂದಿಗೆ ಇಲ್ಲೊಂದು ಸಾರ್ವಜನಿಕ ಗ್ರಂಥಾಲಯ ಬೇಕೆಂದು, ನಿರ್ಧರಿಸಿ ರಾಜ್ಯದ ಗ್ರಂಥಾಲಯ ಮುಖ್ಯಾಧಿಕಾರಿ ಎನ್.ಡಿ.ಬಗರಿ ಅವರನ್ನು ಕಂಡು ಅಸ್ತು ಎನಿಸಿಕೊಂಡೆ. ಸಾರ್ವಜನಿಕ ಪುಸ್ತಕ ಭಂಡಾರ ಹಾಗೂ ವಾಚನಾಲಯ ಆರಂಭವಾದವು.

ಈ ಪರಿಸರದಲ್ಲಿ ಸಣ್ಣ ಮಕ್ಕಳಿಗೆ ಯಾವುದಾದರೊಂದು ನರ್ಸರಿ ಶಾಲೆ ಮಾಡಬೇಕೆಂದು ನಿರ್ಧರಿಸಿ ಇದಕ್ಕೆ ತಕ್ಕ ಸಲಕರಣೆ ಮಾಡಿಕೊಂಡು ನಮ್ಮ ಸಂಘದ ವತಿಯಿಂದಲೇ ನಮ್ಮ ಪ್ರೌಢಶಾಲೆ ಆವರಣದಲ್ಲಿ ಪ್ರಾರಂಭಮಾಡಿದೆವು. ರೆಡ್ ಕ್ರಾಸ್ ಸಂಸ್ಥೆ ಅವರು ಇದಕ್ಕೆ ಸಾಕಷ್ಟು ನೆರವು ನೀಡಿದರು. ಪಾವಗಡದ ಸಾರ್ವಜನಿಕ ವಿಶ್ರಾಂತಿ ಗೃಹದ ಆವರಣದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಅವರ ಸಹಕಾರದಿಂದ ನರ್ಸರಿ ಶಾಲೆಯೊಂದನ್ನು ಪ್ರಾರಂಭಿಸಿದೆವು. ಇಂತಹ ಶೈಕ್ಷಣಿಕ ಕೆಲಸಗಳಿಗೆ ನನಗೆ ಭೀಮನ ಬಲ ಬರುತ್ತದೆ. ಸ್ಥಾನಮಾನ ಮರೆತು ಮುನ್ನುಗ್ಗಿದ್ದೇನೆ. ಸರಿಯಾಗಿ ದಿನಾಂಕ ಜ್ಞಾಪಕವಿಲ್ಲ. 1967-68 ಇರಬಹುದು. ವೀರೇಂದ್ರಪಾಟೀಲ್ ಅವರ ಸರ್ಕಾರವಿದ್ದ ಕಾಲ ಪಾವಗಡ ತುಮಕೂರು ಜಿಲ್ಲೆಯ-ರಾಜ್ಯದಲ್ಲೇ ಹಿಂದುಳಿದ ಗಡಿ ಪ್ರಾಂತ್ಯ. ಆ ತಾಲ್ಲೂಕಿನ ವೆಂಕಟಾಪುರ ಜನನಿಬಿಡ ಗ್ರಾಮ. 'ಉಣ್ಣೆ ಕೈ ಮಗ್ಗದ' ನೇಕಾರರೇ ಅಲ್ಲಿ ಹೆಚ್ಚು. ಸರ್ಕಾರ ಇಲ್ಲೊಂದು ಹೈಸ್ಕೂಲು ಮಾಡಬಹುದೆಂದು ಮೇಲಕ್ಕೆ ಶಿಫಾರಸ್ಸು ಕಳುಹಿಸಿತ್ತು. ಸ್ಥಳೀಯ ಶಾಸಕರು ಹಾಗೂ ಇತರೆ ರಾಜಕೀಯ ವ್ಯಕ್ತಿಗಳಿಂದ ಈ ಪ್ರೌಢಶಾಲೆ ಬೇರೆ ಊರಿಗೆ ವರ್ಗವಾಯಿತು. ವೆಂಕಟಾಪುರದ ಜನರ ಗೋಳು ಹೇಳತೀರದು. ನನ್ನ ಮೊರೆಹೊಕ್ಕರು. ನಾನು ವಿದ್ಯಾ ಇಲಾಖೆಯ ಕಾರ್ಯದರ್ಶಿ ರಾಮಚಂದ್ರ ಅವರನ್ನು ಮೊರೆಹೊಕ್ಕೆನು. ''ಒಂದು ಮೈಲಿ ಫಾಸಲೆ ಅಂತರದಲ್ಲಿ ಎರಡು ಪ್ರೌಢಶಾಲೆ ಬಿಲ್‌ಕುಲ್ ಆಗೋದಿಲ್ಲ.'' ಎಂದು ಹಠ ಹಿಡಿದರು. ಸರಿ ಶಿಕ್ಷಣ ಮಂತ್ರಿ ಕೆ.ವಿ.ಶಂಕರೇಗೌಡ ಅವರ ಬಳಿ ಹೋದೆ. ಮೈಸೂರಿನಲ್ಲಿ ನಾನು ಡಿವಿಜನಲ್ ಕಮೀಷನರ್ ಅವರಿಗೆ ಸಹಾಯಕನಾಗಿದ್ದ ಕಾಲದಲ್ಲಿ ಕೆ.ವಿ.ಶಂಕರೇಗೌಡ ಅವರ ದೂರದ ಸಂಪರ್ಕ ಲಭಿಸಿತ್ತು. ಅವರೇ ಕಛೇರಿಗೆ ಬಂದು ಯಾವುದಕ್ಕೂ ಪ್ರಭಾವ ಬೀರಿದವರಲ್ಲ. ಯಾವುದಾದರೂ ಅಭಿವೃದ್ಧಿ ಕೆಲಸಗಳಾಗಬೇಕಾದರೆ ಕಛೇರಿ ಆವರಣಕ್ಕೆ ಕಾರಿನಲ್ಲಿ ಬರುತ್ತಿದ್ದರು. ಅವರ ಶಿಷ್ಯರ ಮುಖೇನಾ ಆ ಕೆಲಸಗಳಾಗುತ್ತಿದ್ದವು. ಆದರೂ ಮಂಡ್ಯ ಪುರೋಭಿವೃದ್ಧಿಗೆ ಶ್ರಮಿಸಿದ ಶಂಕರಗೌಡ ಅವರ ಶಕ್ತಿ ಸಾಮರ್ಥ್ಯಗಳ ಅರಿವು ಇಲ್ಲದೆ ಇರಲಿಲ್ಲ. ಹೋಗಿ ನಿಂತಾಕ್ಷಣ, ಆಶ್ಚರ್ಯವೆನ್ನುವಂತೆ ಮಂತ್ರಿಗಳು ಒಳಗೆ ಕರೆದರು. ಆ ಸ್ಥಾನಕ್ಕೆ ಅಲ್ಲವೆಂಬಷ್ಟು ಸರಳತೆ, ಆತ್ಮೀಯವಾಗಿ, ಏನು ತಾವು ಬಂದಿದ್ದು, ಎಂದರು. ನಾನೇ ಕೊಂಚ ಉದ್ವೇಗವಾಗಿ ''ನೋಡಿ ಸ್ವಾಮಿ ಪಾವಗಡದ ತಾಲ್ಲೂಕಿನ ವೆಂಕಟಾಪುರದಲ್ಲಿ ಬಡ ಉಣ್ಣೆನೇಕಾರರ ಮಕ್ಕಳಿದ್ದಾರೆ. ಅವರಿಗೆ ಕೊಡಬೇಕಾದ ಪ್ರೌಢಶಾಲೆನ ಶಾಸಕರ ಮಾತಿನಿಂದ ಬೇರೆ ಕೊಟ್ಟಿದ್ದಾರೆ. ನೀವು

ಸರಿಮಾಡಿ, ಇಲ್ಲ, ಗಾಂಧಿ ಅಸ್ತ್ರ ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆ'' ಎಂದೆ. ಗರುಡ ಮಚ್ಚೆ ಕಂಡು ಸರ್ಪ ಬೆದರುವಂತೆ ಗಾಂಧಿ ಎಂಬ ಶಬ್ದ ಕೇಳಿದೊಡನೆ ಮೈಮರೆತ ಶಿಕ್ಷಣ ಮಂತ್ರಿ ಶ್ರೀ ಕೆ.ವಿ.ಶಂಕರಗೌಡ ಅವರು ''ಅದಕ್ಕೆ ಯಾಕಷ್ಟು ಗಾಬರಿಯಾಗುತ್ತೀರಾ ಮಲ್ಲಪ್ಪ, ನೋಡಿ ಆ ಮಕ್ಕಳೂ ವಿದ್ಯಾಭ್ಯಾಸ ಮಾಡಲಿ, ಇವರಿಗೂ ಇನ್ನೊಂದು ಪ್ರೌಢಶಾಲೆ ಕೊಡೋಣ'' ಎಂದು ಬಿಟ್ಟರು. ನಾನೇನೋ ಹೇಳುವಷ್ಟರಲ್ಲೇ ಆಪ್ತ ಕಾರ್ಯದರ್ಶಿನ ಕರೆದು ವೆಂಕಟಾಪುರಕ್ಕೆ ಪ್ರೌಢಶಾಲೆ ಮಂಜೂರು ಮಾಡಿದೆ ಎಂದರು. ಈಗ ಆ ಪ್ರೌಢಶಾಲೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಈ ಮಾತು ಯಾಕೆ ಹೇಳಬೇಕಾಯಿತೆಂದರೆ, ನೋವನ್ನು ಅರಿತ ದೊಡ್ಡಸ್ತಿಕೆ ಇರೋ ಸಹೃದಯ ಜನಗಳು ಅಧಿಕಾರ ಸೂತ್ರಕ್ಕೆ ಬರಬೇಕೆಂಬುದಕ್ಕೆ, ನಾನು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಲಿಗೆ ಹಾಕಿದ ಯೋಜನೆ ಹಾಗೂ ಅದರ ಹಿಂದಿರುವ ದುಡಿಮೆಯ ನೈಜ ಅಂತಃಕರಣದ ಅರಿವು ದೊಡ್ಡವರಿಗೆ ಆಗಬೇಕಾಗಿತ್ತು, ಅಷ್ಟೇ.

ಈ ಸಂದರ್ಭದಲ್ಲಿ ಹೊಸದೊಂದು ಉಡುಗೊರೆ ನನಗೆ ದೇವರು ದಯ ಪಾಲಿಸಿದೆ. ಪ್ರಾಯಶಃ ಅದು ಬೆಂಗಳೂರಿನಲ್ಲಿರಬೇಕಾದರೆ ದೊರೆತ ಬಳುವಳಿಯೆಂದು ಕೊಂಡಿದ್ದೇನೆ. 1973 ನವೆಂಬರ್, ಟ್ರಸ್ಟ್ ಬೋರ್ಡ್ ಹಿಂಭಾಗದ ನನ್ನ ಮನೆಯಿಂದ ಬಳ್ಳಾರಿ ರೋಡ್‌ಗೆ ಬೆಳಗಿನ ವಾಕ್ ಹೋಗಬೇಕಾದರೆ ಎಡವಿಬಿದ್ದೆ. ಒಂದಿಷ್ಟು ಗಾಯ, ವಾಸಿಯಾಗಲೇ ಇಲ್ಲ. ಬಾಲ್ಯದಿಂದಲೂ ಕಾಡುತ್ತಿರುವ ಗ್ಯಾಸ್ಟ್ರಿಕ್ ಕಾಯಿಲೆ ಜೊತೆಗೆ 'ಇದ್ಯಾವುದಪ್ಪ' ಎಂದುಕೊಂಡು ಡಾಕ್ಟರ್ ಬಳಿ ಹೋದರೆ ನಿಮ್ಮ ಶರೀರದಲ್ಲಿ ವಿಪರೀತ ಸಕ್ಕರೆ ಇರುವುದೆಂದು ಹೇಳಿದರು. ವಂದ ಪರೀಕ್ಷೆ ನಡೆಯಿತು. ಡಾಕ್ಟರ್ ಓದಿದ ಮಗ ಶಂಕರ ಮುಂದಿನ ಜೀವನ ರೀತಿ-ನೀತಿಗಳ ಪಟ್ಟಿಕೊಟ್ಟ. 63 ವರ್ಷ ನನಗೆ. ಇದು ಹೊರಲಾರದ ಹೊರೆ ಎನಿಸಿದರೂ ಊಟೋಪಚಾರದಲ್ಲಿ ಎಚ್ಚರ ವಹಿಸಿದ್ದೆ. ಆದರೂ ಆ ಕಾಯಿಲೆಯ ಆಟೋಪ ನಿಂತಂತೆ ಇಲ್ಲ. ಬಂದಿದ್ದನ್ನು ಅನುಭವಿಸಲೇಬೇಕು. ನಾಳೆ ಎಂಬುದು ಅಗೋಚರವಲ್ಲವೇ? ಟರ್ಕೀಷ್ ಗಾದೆಯೊಂದು ಹೇಳುವ ಮಾತು ನಿಜ. No one knows what will happen to him before sunset ! ! ಮುಂದೆ ಏನು ಕಾದಿದೆಯೋ ಯಾರು ಬಲ್ಲರು?

# ಉಣ್ಣೆ ಕೈಮಗ್ಗದ ನೇಕಾರರ ಸಹಕಾರ ಸಂಘ

ಇದೊಂದು ರಾಜ್ಯ ಗೃಹ ಕೈಗಾರಿಕೆಗಳ ಮಾತೃದೇವತೆ. ನಾನು ಸರ್ಕಾರಿ ಚಾಕರಿಯಲ್ಲಿದ್ದಾಗಲೇ ಇದರ ಏಳು-ಬೀಳು ನೋಡುತ್ತ ಬಂದಿದ್ದೆ. ಅದರಲ್ಲೂ ಸೊಸೈಟಿ ಇನ್‌ಸ್ಪೆಕ್ಟರ್ ಆಗಿ ಸರ್ಕಾರಿ ಸೇವೆ ಆರಂಭಿಸಿದ ನನಗೆ ಇದರಲ್ಲಿ ಆಸಕ್ತಿ ಇದ್ದರೂ ಅಸಹಜವೇನಲ್ಲ. ಮೈಸೂರಿನಲ್ಲಿದ್ದಾಗಲೇ ಇದಕ್ಕೆ ನನ್ನನ್ನು ಸೇರ್ಪಡೆ ಮಾಡಬೇಕೆಂಬ ವರಾತ್ತು ಕೊಲ್ಲೂರು ಮಲ್ಲಪ್ಪನವರ ಕರೆಯಿಂದ ಬಂದಿತ್ತು. ಇದರ ಆಡಳಿತಾಧಿಕಾರಿಯಾಗಿ ಮಾಡಬೇಕೆಂಬುದು ಅವರ ಆಸೆ. ಆದರೆ ಕತೆ ಬೇರೆಯಾಗಿತ್ತು ಈ ಸಂಘದೊಡನೆ ಕೊಲ್ಲೂರು ಮಲ್ಲಪ್ಪನವರು ಇದರ ಅಧ್ಯಕ್ಷರಾಗಿದ್ದು ಬಹು ಕಾಲ ಸಂಬಂಧವಿಟ್ಟುಕೊಂಡಿದ್ದರು. 1969ರ ನಂತರ ರಾಷ್ಟ್ರದ ರಾಜಕೀಯ ಚೆಲ್ಲಾಪಿಲ್ಲಿಯಾಯಿತಷ್ಟೆ. ಯಾರ್‍ಯಾರು ಎಲ್ಲೆಲ್ಲೋ, ಯಾರು ನೈಜ ಕಾಂಗ್ರೆಸಿಗರೋ, ಜನಕ್ಕೂ-ಗೊಂದಲ, ವ್ಯಕ್ತಿಗಳಿಗೂ ಗೊಂದಲ. ರಾಜ್ಯದಲ್ಲಿ ವೀರೇಂದ್ರ ಪಾಟೀಲರ ಸರ್ಕಾರವಿತ್ತು ಕೊಲ್ಲೂರು ಮಲ್ಲಪ್ಪನವರ ನಿಷ್ಠೆ ಶ್ರೀಮತಿ ಇಂದಿರಾಗಾಂಧಿ ಅವರಿಗೆ ಹೋಯಿತು. ರಾಜ್ಯ ಹಾಗೂ ರಾಷ್ಟ್ರ ನಾಯಕರಿಗೆ ಸಹಜ ಕಣ್ಣುರಿ ಇರಬೇಡವೇ? ಇವರನ್ನು ಮುಗಿಸುವುದು ಹೇಗೆ? ಮಣ್ಣೊ ಅಥವಾ ಬಣ್ಣಾನೋ ಇವರ ಮೇಲೆ ಎರಚಿದರೆ ಹೇಗೆ ಎಂದು ನಿಶ್ಚಯಿಸಿದರು. ಒಂದು ದಿನ ಸಹಕಾರ ಇಲಾಖೆ ಜಾಯಿಂಟ್ ರಿಜಿಸ್ಟ್ರಾರ್ ಅವರು ನನಗೆ ತಿಳಿಸಿದರು, ತಕ್ಷಣ ಬಂದು ನೋಡುವಂತೆ. ಆನಂತರ ಹೋದರೆ ಕೊಲ್ಲೂರು ಮಲ್ಲಪ್ಪನವರು ಅಧ್ಯಕ್ಷರಾಗಿದ್ದಾಗ ಅಂದರೆ ನಾಕ್ಕೈದು ವರ್ಷದ ಹಿಂದೆ ಈ ಸಂಸ್ಥೆಯಲ್ಲಿ ಬಾರಿ ಗೋಲ್‌ಮಾಲು ಆಗಿದೆ. ಇದನ್ನು ತನಿಖೆ ಮಾಡಲು ವಿಶೇಷ ತನಿಖಾಧಿಕಾರಿ ನೇಮಿಸಲು ನಿಶ್ಚಯಿಸಲಾಗಿದೆ. ನೀವು ಅವರೊಡನೆ ಸರಿಯಾಗಿ ಸಹಕರಿಸಿ. ಸರ್ಕಾರದವರು ನಿಮ್ಮನ್ನು ನೋಡಿಕೊಳ್ಳುತ್ತಾರೆ. ಏನು ಬೇಕಾದರೂ ಸೌಲಭ್ಯ ಕೊಡ್ತಾರೆ ಎಂದ್ಹೇಳಿ ಹುರಿದುಂಬಿಸಲು ನೋಡಿದರು. 'ಸ್ವಾಮಿ, ಸಂಘದಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ ತನಿಖೆ ನಡೆಸಿ ನಾನು ಕೈಲಾದ ಸಹಾಯ ಕೊಡುತ್ತೇನೆ, ಆದರೆ ಈ ಹೊಣೆ ಬೇಡ' ಎಂದೆ. ನಾನು ಡೈರೆಕ್ಟರ್ ಆಗಿ ಈಗ ಚುನಾಯಿತ ಅಧ್ಯಕ್ಷನಾಗಿದ್ದೇನೆ ಉಣ್ಣೆನೇಕಾರರ ಸಹಕಾರ ಸಂಘದ ಅಧ್ಯಕ್ಷನಾಗಿ ತಮಗೆ ಅಗತ್ಯ ಮಾಹಿತಿ, ಒದಗಿಸುತ್ತೇನೆಯೇ ಹೊರತು, ವ್ಯಕ್ತಿಯೊಬ್ಬರನ್ನು ತನಿಖೆಯ ನೆಪದಲ್ಲಿ ಹೀಗೆಳೆಯುವ ಕೆಲಸ ಮಾಡಲಾರೆನೆಂದೆ.

ಪ್ರಾಯಶಃ ನನ್ನ ಮಾತು ಅವರಿಗೆ ಆಶ್ಚರ್ಯ ತಂದಿರಬಹುದು. ಆದರೆ ನನಗೆ ಅಂತರಾತ್ಮದ ನುಡಿಗೆ ತಲೆಬಾಗಿದ್ದೇನೆ ಎನಿಸಿತು. ಮುಂದೆ ಯಾವುದೇ ತನಿಖೆ ನಡೆಯಲಿಲ್ಲ. ಅವರಿಂದಲೇ ಅವರನ್ನು ಹೊಡಿಸಿಹಾಕಿಬಿಟ್ಟರೆ ಜನ ಅದು-ಇದು ಮಾತಾಡೋದಿಲ್ಲ ಅಲ್ಲವೇ? ಹೀಗೆಂದಾಕ್ಷಣ ನಾನು ಕೊಲ್ಲೂರು ಮಲ್ಲಪ್ಪನವರ ಕೃಪಾಶೀರ್ವಾದದಿಂದ ಉಣ್ಣೆನೇಕಾರರ ಸಹಕಾರ ಸಂಘದ ಅಧ್ಯಕ್ಷಗಿರಿ ಕಾರ್ಯನಿರ್ವಹಿಸಿದೆನೆಂಬ ಅರ್ಥವಲ್ಲ. ಸುಮ್ಮನೆ ವ್ಯಕ್ತಿಗಳ ಚಾರಿತ್ರ್ಯವಧೆಗೆ ನನ್ನ ವಿರೋಧವಿತ್ತೇ ಹೊರತು ಯಾವುದೇ ಅವ್ಯವಹಾರ ನಡೆದರೆ ನಾನು ಕೈಕಟ್ಟಿ ಕುಳಿತುಕೊಳ್ಳುತ್ತಿರಲಿಲ್ಲ. ಈಗ ಒಂದು ಪ್ರಸಂಗ ಹೇಳಬೇಕಾಗಿದೆ. ನಮ್ಮ ಸಹಕಾರ ಸಂಘವೂ ರಾಯಚೂರಿನಲ್ಲಿ ಫಾರಂವೊಂದನ್ನು ಮಾಡಿ ಭವ್ಯ ಕಟ್ಟಡವೊಂದನ್ನು ನಿರ್ಮಿಸಿತು. ಇದರ ಕಂಟ್ರಾಕ್ಟ್ ಕೆಲಸವನ್ನು ಕೊಲ್ಲೂರು ಮಲ್ಲಪ್ಪನವರ ಸಂಬಂಧಿಕರೇ ತೆಗೆದುಕೊಂಡಿದ್ದರು. ನಾನು ಅಧ್ಯಕ್ಷನಾಗಿದ್ದಾಗ ಮೂರು ನಾಲ್ಕು ಸಾರಿ ಆ ಕಂಟ್ರಾಕ್ಟರ್ ಬಂದು ''ನನಗೆ ಕೇಂದ್ರ ಸಹಕಾರ ಸಂಘದಿಂದ 10-15 ಸಾವಿರ ರೂಪಾಯಿ ಬರಬೇಕು ಕೊಡಿಸಿ'' ಎಂದು ತಗಾದೆ ಮಾಡಹತ್ತಿದರು. 'ನೋಡಪ್ಪ ಆಡಿಟ್‌ನವರು ಗಲಾಟೆ ಮಾಡ್ತಾರೆ ನಿಮಗೆ ಹಣ ಕೊಡಕ್ಕಾಗಲ್ಲ' ಎಂದು ಎಷ್ಟು ಹೇಳಿದರೂ ಕೇಳದೆ, ಕೊಲ್ಲೂರು ಮಲ್ಲಪ್ಪನವರ ಬಳಿ ದೂರು ಒಯ್ದರು. ಅವರು ಮೂರು ನಾಲ್ಕುಸಾರಿ ಹೇಳಿ ಕಳಿಸಿದ ನಂತರ ಹೋದೆ. ರೂಮಿನಲ್ಲಿ ಕುಳಿತು ಮಾತನಾಡುತ್ತಿದ್ದಾಗ ಅವರು ಸಂಬಂಧಿಕರ ಮುಖ ನೋಡಿ ''ಏನು ಮಲ್ಲಪ್ಪನವರೇ ಅವರಿಗೆ ಬರಬೇಕಾದದ್ದನ್ನು ಕೊಡಿಸಿ'' ಎಂದರು. ಅದು ಹೇಗೆ ಕೊಡಲಿಕ್ಕೆ ಸಾಧ್ಯವೆಂದು ಹೇಳುತ್ತಿರಬೇಕಾದರೆ, ಕೋಪದಿಂದ ಕೊಲ್ಲೂರು ಮಲ್ಲಪ್ಪನವರು ''ಅವನು ಕೋರ್ಟಿಗೆ ಹೋಗುತ್ತಾನೆ ಏನು ಮಾಡುತ್ತೀರಾ'' ಎಂದು ಬೆದರಿಸಲು ನೋಡಿದರು. ನನಗೆ ಯಾಕೋ ಕೋಪಬಂತು. ''ನೋಡಿ ಸಾರ್, ಇದೊಂದು ಬಡವರ ಸಹಕಾರ ಸಂಘ. ನ್ಯಾಯವಾಗಿ ಕೊಡೋದು ಬೇಕಾದರೆ ಪರಿಶೀಲನೆ ಮಾಡ್ತೀನಿ. ಇಲ್ಲದಿದ್ದರೆ ನೀವೇನು ಬೇಕಾದರೂ ಮಾಡಿಕೊಳ್ಳಿ'' ಎಂದ್ಹೇಳಿ ಉತ್ತರಕ್ಕೆ ಕಾಯದೆ ಹೊರಬಂದೆ. ಮನೆ ಮಕ್ಕಳೆಲ್ಲಾ ಇದನ್ನು ಕಂಡು ಕಕ್ಕಾಬಿಕ್ಕಿಯಾದರು. ಮುಂದೆ ನಾನು ಕುರಿ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗುವ ಹೊತ್ತಿಗೆ ಬಳಕೆ ಬಂದಿತು. ಕ್ರಮೇಣ ಆ ವಿಷಯಗಳಿಗೆ ಮಾಯವಾಗಿ ವಿಶ್ವಾಸ ಮೊದಲಿನಂತಾಯಿತು.

ಈ ಸಂಘ ಕುರಿತಂತೆ ನನ್ನ ಸಂಬಂಧ ದೀರ್ಘವಾದುದು. ನನ್ನ ಸಾರ್ವಜನಿಕ

ಜೀವನದಲ್ಲಿ ಇದರ ಏಳಿಗೆಗೆ ನಾನು ಹಚ್ಚಿಕೊಂಡಷ್ಟು ಮತ್ಯಾವುದನ್ನೂ ಹಚ್ಚಿಕೊಂಡಿರಲಿಲ್ಲ. ಡೈರೆಕ್ಟರಾಗಿ ಚುನಾಯಿತನಾದೊಡನೆಯೆ ಅಧ್ಯಕ್ಷನಾದೆ. ಅದು 1970ರಿಂದ 1972ರವರೆಗೆ. ಆನಂತರ ಮತ್ತೆ 1977ರಿಂದ 1983ರವರೆಗೂ ಕೂಡ ಇದರ ಅಧ್ಯಕ್ಷನಾಗಿದ್ದೆ. ಉಣ್ಣೆನೇಕಾರರ ಸಹಕಾರ ಸಂಘವೂ ಸಾಕಷ್ಟು ದೀರ್ಘ ಇತಿಹಾಸವುಳ್ಳದ್ದಾಗಿತ್ತು. ಸ್ವಾತಂತ್ರ್ಯ ನಂತರದ ಪ್ರಾರಂಭದಲ್ಲಿ ವಿಶ್ವೇಶ್ವರಯ್ಯನವರು ರಾಜ್ಯಕ್ಕೆ ಕೈಗಾರಿಕೆಗಳ ಅಭಿವೃದ್ಧಿಗೆ ಯೋಜನೆಯೊಂದನ್ನು ತಯಾರಿಸಿ ಕೊಟ್ಟರಷ್ಟೇ. ಇದರ ಅನುಷ್ಠಾನಕ್ಕೆ ಅವರೇ ಬಯಸಿ ಬೀರಪ್ಪನವರನ್ನು ತೆಗೆದುಕೊಂಡಿದ್ದರು. ಅವರ ಕಾಲದಲ್ಲಿ ಉಣ್ಣೆ. ಹತ್ತಿ ರೇಷ್ಮೆಗಳ ಅಭಿವೃದ್ಧಿಗೆ ಸಹಕಾರ ಸಂಘಗಳು ಪ್ರಾರಂಭವಾದವು. ಇದು 1950ರ ದಶಕದಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಗುರಿ ಉಣ್ಣೇ ನೇಕಾರರಿಗೆ ಕಚ್ಚಾಮಾಲನ್ನು ಸಕಾಲದಲ್ಲಿ ಒದಗಿಸುವುದು. ಹಾಗೆಯೇ ಕಂಬಳಿ ಸಿದ್ಧಪಡಿಸಿದ ಕೂಡಲೇ ತಯಾರಾದ ವಸ್ತುಗಳನ್ನು ರಾಜ್ಯದ ಇತರ ಭಾಗಗಳಿಗೆ ಹಾಗೂ ದೇಶದ ನಾನಾ ಮೂಲೆಗಳಿಗೆ ಕಳುಹಿಸುವುದು, ನೇಕಾರರಿಗೆ ಸಾಲ ಸೌಲಭ್ಯ ಒದಗಿಸುವುದು ಇತ್ಯಾದಿಗಳನ್ನು ಈ ಸಹಕಾರ ಸಂಘ ಮಾಡಬೇಕಾಗಿತ್ತು. ಒಟ್ಟಾರೆ ಈ ಸಹಕಾರ ಸಂಘ ಉಣ್ಣೆನೇಕಾರರ ಸರ್ವಾಂಗ ಅಭಿವೃದ್ಧಿಯ ಕಡೆ ಗಮನ ಕೇಂದ್ರೀಕರಿಸಿತ್ತು.

ಈ ಸಂಘಕ್ಕೆ ಅಂಟಿಕೊಂಡ ಮೇಲೆ ನನ್ನ ಪಾಡು ಹೇಳತೀರದು. ಮನೆಯವರಿಗೆ ಭೀಕರ ಕಾಯಿಲೆ, ನನಗೋ ಹಠದ ಮೇಲೆ ಪೈಪೋಟಿಯೊಡನೆ ಬಂದೆರಗುವ ರೋಗಗಳು. ಅಕ್ಕಪಕ್ಕದವರ ನಿರುತ್ಸಾಹ, ಅಂದುಕೊಂಡ ಕೆಲಸವಾಗದೆ ಉಂಟಾದ ತಾಕಲಾಟ. ಒಂದೇ, ಎರಡೇ. ನನ್ನ ವಯಸ್ಸು ಮರೆತು ಅಲೆದಾಡಿದೆ. ತುಮಕೂರು ಬೆಂಗಳೂರಿಗೆ ಸುತ್ತಾಡಿದೆ. ನನ್ನ ಪರ್ಸಿಗೆ ಹೆಚ್ಚು ತೊಂದರೆ ಕೊಟ್ಟರೆ ಸಂಘಕ್ಕೆ ಏನು ಆಘಾತವಾಗುತ್ತದೋ ಎಂದು ರೈಲು ಪಾಸು ಮಾಡಿಸಿದೆ. ಮತ್ತೊಮ್ಮೆ ಸಂಬಳ ಕೊಡದ ಹುದ್ದೆಗೆ ಅಂಟಿಕೊಂಡೆ.

ನಮ್ಮ ಉಣ್ಣೆನೇಕಾರರ ಸಹಕಾರ ಸಂಘಕ್ಕೆ ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಆಯೋಗದವರಿಂದ ಹಣಕಾಸಿನ ಸೌಲಭ್ಯ ಸಿಕ್ಕುತ್ತಿತ್ತು. ಆಯೋಗದವರು 7 ಲಕ್ಷದ ಪರಿಮಿತಿಯ ಗೋಡೌನ್ ಸಾಲದ ಸೌಲಭ್ಯ ಒದಗಿಸಿದ್ದರು. ಸಹಕಾರ ಸಂಘದ ಅಧ್ಯಕ್ಷರು ಪ್ರತಿ ವರ್ಷ ಬೊಂಬಾಯಿ-ಬಡ್ಜೆಟ್ ಮೀಟಿಂಗ್‌ನಲ್ಲಿ ಅಂಕಿ-ಅಂಶ ಹೇಳಿ ಗೋಡೌನ್ ಸಾಲದ ಸೌಲಭ್ಯವನ್ನು

ಮುಂದುವರೆಸಿ ಕೊಂಡು ಬರಬೇಕಾಗಿತ್ತು. ನಾನು ಅಧ್ಯಕ್ಷನಾಗಿದ್ದ ಒಂದು ವರ್ಷದಲ್ಲಿ ಅಂಕಿಅಂಶಗಳೊಡನೆ ಬೊಂಬಾಯಿಗೆ ಹೋದೆ. ಬೆಂಗಳೂರಿನಿಂದ ಖಾದಿ ಆಯೋಗದ ಕಛೇರಿಯವರೂ ಬಂದಿದ್ದರು. ಆದರೂ ಮೀಟಿಂಗ್‌ನಲ್ಲಿ ಹಾಜರಿದ್ದ ಅವರ ಅಂಕಿ-ಅಂಶಗಳು ಸಾಕಷ್ಟು ಹಿಂದಿನವು. ಈ ಆಯೊಗದವರು ಬೆಂಗಳೂರಿನಲ್ಲಿ ನಾವು ಲೆಕ್ಕಕೊಟ್ಟು, ಕಾಡಿ ಬೇಡಿದರೂ ಹಣ ಕೊಡುತ್ತಿರಲಿಲ್ಲ. ನಮ್ಮ ಅಂಕಿ-ಅಂಶಗಳ ಸಮೇತ ವಾಸ್ತವಾಂಶ ಮೂಡಿಸಿ ಕಲ್ಲು ಕರಗುವಂತೆ ಹೇಳಿ 'ಬಡ ನೇಕಾರರ ಹೊಟ್ಟೆಯ ಮೇಲೆ ಹೊಡಿಬೇಡಿ'' ಎಂದು ಪ್ರಾರ್ಥಿಸುತ್ತಿದ್ದೆ. ನಮ್ಮ ಸಹಕಾರ ಸಂಘಗಳ ವಿಫಲತೆ ಅಡಗಿರುವುದೆ ಇಲ್ಲಿ. ದಲ್ಲಾಳಿಗಳಿಗೆ ಉತ್ತೇಜನ ಕೊಟ್ಟಿರುವವರು ಖಂಡಿತ ಉತ್ಪಾದಕರಾಗಲಿ ಅಥವಾ ಬಳಕೆದಾರರಾಗಲಿ ಅಲ್ಲವೇ ಅಲ್ಲ. ಕಷ್ಟವಾಗುತ್ತಿರುವುದು ನಮ್ಮ ಸಹಕಾರ ಸಂಘಗಳಲ್ಲಿನ ಅವ್ಯವಸ್ಥೆ ಹಾಗೂ ಉಪೇಕ್ಷೆಯಿಂದಲೇ, ಎಂದು ವಿಷಾದದಿಂದ ಹೇಳಬೇಕಾಗಿದೆ. ಕಂಬಳಿ ನೇಯ್ಗೆಯಿಂದಲೇ ಜೀವನ ಮಾಡುವ ಬಡ ಉಣ್ಣೆನೇಕಾರ ಎಷ್ಟು ದಿನ ಪ್ರಾಥಮಿಕ ಸಹಕಾರ ಸಂಘಕ್ಕೆ ಕಂಬಳಿ-ಕೊಟ್ಟು ದುಡ್ಡಿಗಾಗಿ ಕಾದಾನು. ಅಥವಾ ಪ್ರಾಥಮಿಕ ಸಹಕಾರ ಸಂಘ ಕೂಡ ತನಗೆ ಬರಬೇಕಾದ ಹಣಕ್ಕೆ ಎಷ್ಟು ದಿನ ಕಾದೀತು. ಸ್ವಾತಂತ್ರ್ಯಾನಂತರ ಆಡಳಿತ ಸುಧಾರಣಾ ಸಮಿತಿಗಳಂತೂ ಲೆಕ್ಕವಿಲ್ಲದಷ್ಟು ಆಗಿವೆ. ಆಡಳಿತ ವ್ಯವಸ್ಥೆಯಲ್ಲಿ ಚುರುಕು ಕಂಡಿಲ್ಲ. ಈ ಹಿನ್ನೆಲೆಯಲ್ಲಿ ನನ್ನ ವಾದ ಕೇಳಿ ಕಮಿಷನ್ ಅಧ್ಯಕ್ಷ ಎನ್ ದೇಬರ್ Are you a practising lawyer? ಎಂದು ಕೇಳಿದರು. ''ಇಲ್ಲ ಸ್ವಾಮಿ ನಾನು ಕೋರ್ಟ್ ಮುಖ ಕಂಡವನಲ್ಲ. ನಿವೃತ್ತ ಸರ್ಕಾರಿ ಅಧಿಕಾರಿ ಮಾತ್ರ'' ಎಂದ್ಹೇಳಿದೆ. ನಾವು ಹಾಜರು ಪಡಿಸಿದ ಲೆಕ್ಕ ಹಾಗೂ ನಮ್ಮ ಮಾತು ಕತೆಗಳನ್ನೆಲ್ಲಾ ಕೇಳಿದ ಅವರು ಆ ತಕ್ಷಣವೆ 2 ಲಕ್ಷ ರೂ. ಮಂಜೂರು ಮಾಡಿ ತಂತಿ ಮೂಲ್ಕ ಮನಿಯಾರ್ಡರನ್ನು ಬೆಂಗಳೂರಿಗೆ ಕಳುಹಿಸುವಂತೆ ಹೇಳಿದರು. ಅಲ್ಲಿ ನೆರೆದಿದ್ದ ಇತರೆ-ರಾಜ್ಯದ ಸಹಕಾರ ಸಂಘಗಳ ಪ್ರತಿನಿಧಿಗಳಿಗೆ ಆಶ್ಚರ್ಯವೋ ಆಶ್ಚರ್ಯ. ತಾವೇನೊ ಮೋಡಿ ಮಾಡಿಬಿಟ್ಟಿರಿ ಬೊಂಬಾಯಿನ ಖಾದಿ ಕಮೀಷನ್ ಅಧ್ಯಕ್ಷರಿಗೆ, ಎನ್ನುವವರೇ ಎಲ್ಲರೂ. ನಮ್ಮ ಜೊತೆಗೆ ಬಂದಿದ್ದ ಬೆಂಗಳೂರಿನ ಖಾದಿ ಆಯೋಗದ ಡೈರೆಕ್ಟರ್ ರಾವ್ ಅವರು ನನ್ನನ್ನು ಅಭಿನಂದಿಸಿ ಇನ್ನು ಮುಂದೆ ತಾವು ಪೂರ್ಣ ಸಹಕಾರ ಕೊಡುವುದಾಗಿ ಭರವಸೆ ಇತ್ತರು. ನಾನು ಬೊಂಬಾಯಿನಲ್ಲಿ ಬಸ್ಸಿನಲ್ಲೆ ಪ್ರಯಾಣ ಮಾಡುತ್ತಿದ್ದೆ. ನಗರದ ವಿವಿಧ ಬಡಾವಣೆಗಳ ದರ್ಶನದ ಜೊತೆ ಹೊಸ ಜನರ ಪರಿಚಯದ ಲಾಭವಾಯಿತು.

ಮತ್ತೊಂದು ಇದರಿಂದ ಸಂಘಕ್ಕೆ ನನ್ನ ಪ್ರಯಾಣ ವೆಚ್ಚ ಕೂಡ ಕಡಿಮೆಯಾಯಿತು.

ನಾನು ಮೈಸೂರಿನಲ್ಲಿದ್ದಾಗಲೇ ಉಣ್ಣೆ ನೇಕಾರರ ಸಹಕಾರ ಸಂಘ ಹಚ್ಚಿಕೊಂಡೆನಲ್ಲವೇ? ನಾನು ನಿವೃತ್ತಿಯ ಅಂಚಿನಲ್ಲಿದ್ದೇನೆಂದು ತಿಳಿದು ಕೊಲ್ಲೂರು ಮಲ್ಲಪ್ಪನವರು ಹೇಳಿ ಕಳುಹಿಸಿ ಇದರ ಆಡಳಿತಾಧಿಕಾರಿಯಾಗು ಎಂದಿದ್ದರು. ನಾನು ಒಪ್ಪದೆ ಚುನಾಯಿತ ಅಧ್ಯಕ್ಷನಾಗಿದ್ದೆ. ನಾನು ತುಮಕೂರಿಗೆ ಹೋದ ಹೊಸತು. ಸ್ಥಳೀಯ ಸಂಸ್ಥೆಗಳ ವತಿಯಿಂದ ವಿಧಾನ ಪರಿಷತ್ತಿಗೆ ಚುನಾವಣೆ ನಡೆಯಿತು. ಮಿತ್ರರ ಅಭಿಮಾನಿಗಳ ಬೆಂಬಲದಿಂದ ನಾನು ನಾಮಪತ್ರಕ್ಕೆ ಸಹಿ ಹಾಕಿದೆ. ಸಹಕಾರ ಇಲಾಖೆ ರೆವಿನ್ಯೂ ಇಲಾಖೆಗಳ ಜನರಿಗೆ ಜನ ಸಂಪರ್ಕವಿರುವುದು ಆಶ್ಚರ್ಯವಲ್ಲ, ಪಾವಗಡ, ಮಧುಗಿರಿ, ಕೊರಟಗೆರೆ, ಮುಂತಾದ ಕಡೆಯಿಂದ ಜನ ಬಂದು ನೀವು ನಿಲ್ಲಿ ಎನ್ನ ತೊಡಗಿದರು. ಪ್ರಾಯಶಃ ನಿಂತಿದ್ದರೆ ಗೆಲ್ಲುತ್ತಿದ್ದೇನೇನೋ. ಮುಂದೆ ರಾಜಕೀಯ ಚದುರಂಗದಾಟದಲ್ಲಿ ಯಾವ ಸ್ಥಾನ ಸೇರುತ್ತಿದ್ದೆನೋ ತಿಳಿಯದು. ಮನೆಯಲ್ಲಿ ಮಡದಿ ಮಕ್ಕಳಂತೂ ಬಿಲ್‌ಕುಲ್ ನೀವು ರಾಜಕೀಯಕ್ಕೆ ಹೋಗಕೂಡದು. ನಿಮ್ಮ ಆರೋಗ್ಯ ನೋಡಿಕೊಳ್ಳಿ ಎಂದು ಹಠ ಹಿಡಿದರು. ಮನೆಯವರೆಲ್ಲರ ನಿಷ್ಠುರ ಕಟ್ಟಿಕೊಂಡು ನಾನು ತಾನೇ ಏನು ಸಾಧಿಸೋದು ಅಲ್ಲಿ ಹೋಗಿ ಎಂದು ಸುಮ್ಮನಾದೆ. ಆದರೆ ಕುರಿ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾದ ಮೇಲೆ ಅನಿಸಿತು, ಸಕ್ರಿಯ ರಾಜಕೀಯ ರಂಗದಲ್ಲಿದ್ದ ತಕ್ಷಣ ನಾವು ಸೈ ಅನಿಸಿದ್ದನ್ನು ಮಾಡಿ ಬಿಡುತ್ತೇವೆಂಬುದು ಭ್ರಮೆ ಅಷ್ಟೆ ಅಂತ. ಹೀಗಾಗಿ ನಾನು ಅಸೆಂಬ್ಲಿ ಮೆಂಬರ್ ಆಗಲಿಲ್ಲ. ಮಂತ್ರಿಯಾಗಲಿಲ್ಲ ಎಂಬ ನಿರಾಶೆಯಿಲ್ಲ. ನನ್ನ ಕೆಲಸಗಳಲ್ಲಿ ಸಂತೃಪ್ತಿ ಕಂಡಿದ್ದೇನೆ. ಆದರೆ ನನ್ನೊಡನೆ ಈ ಕಾರ್ಯಕ್ಕೆ ದುಡಿದ ಮಿತ್ರರಿಗೆ ನನ್ನಿಂದ ನಿರಾಶೆಯಾಗಿರಬಹುದು. ಅವರ ಕ್ಷಮ ಕೇಳಬೇಕಾಯ್ತು. ನನ್ನದು ಈ ತತ್ವ, ''ಕಂಡು ಕಂಡುದನೆಲ್ಲ ಬೇಡುವವರು ನಾವಲ್ಲ ಉಂಡು ಸುಖಿಪೆವು ಕೈಗೆ ಬಂದ ಫಲ''.

ಇದೆ ಕಾಲದಲ್ಲಿರಬೇಕು. ನಮ್ಮ ಹುಡುಗ ಚಿಕ್ಕವೀರಯ್ಯ ತುಮಕೂರಿನ ಪುರಸಭೆಯ ಅಧ್ಯಕ್ಷನಾದ. ಸಿ.ನರಸಯ್ಯನವರ ದತ್ತು ಪುತ್ರ ವಿ.ಚಿಕ್ಕವೀರಯ್ಯ ನನಗೆ ಮೊದಲಿನಿಂದಲೂ ಪರಿಚಿತನೇ. ಈಗ ನಾಡಿನಲ್ಲಿ ಉತ್ತಮ ಕವಿಯೆಂದೆನಿಸಿ ಪ್ರಸಿದ್ಧನಾಗಿದ್ದಾನೆ. ವ್ಯವಸಾಯ, ಬಿಡುವಿನ ವೇಳೆಯಲ್ಲಿ ಸಮಾಜ ಸೇವೆ,

ರಾಜಕೀಯ ಹಾಗೂ ಸಾಹಿತ್ಯ ಸಂಪರ್ಕದಿಂದ ಚಿಕ್ಕವೀರಯ್ಯ ನಾಲ್ಕು ಜನಕ್ಕೆ ಬೇಕಾದ ವ್ಯಕ್ತಿಯಾಗಿರುವುದು ನನಗೆ ಸಂತಸದ ವಿಚಾರವೇ ಆಗಿದೆ. ನಮ್ಮ ಪಾಳ್ಯದ ಹುಡುಗರು ಹೀಗೆ ಪ್ರಕಾಶಮಾನರಾದರೆ ನನಗಿಂತ ಹೆಮ್ಮೆ ಪಡುವವರು ಯಾರಿದ್ದಾರೆ?

1977ರ ನಂತರ ಮತ್ತೊಮ್ಮೆ ಉಣ್ಣೆನೇಕಾರರು ಸಹಕಾರ ಸಂಘಕ್ಕೆ ಹೋಗಬೇಕಾಯಿತು. ಯಾಕೋ ದಿನೇ ದಿನೇ ಸಂಘ ಅಧಃಪತನಕ್ಕೆ ಇಳಿಯುತ್ತಿತ್ತು. ನಮ್ಮ ಜಿಲ್ಲೆಯ ಕಂಬಳಿ ನೇಯ್ಗೆ ಜನಗಳು ''ಸ್ವಾಮಿ ನಮ್ಮನ್ನು ಕಾಪಾಡಿ'' ಎಂದು ಮೊರೆ ಇಡುತ್ತಿದ್ದರು. ನನಗೆ ಈಗಾಗಲೇ ಕುರಿ ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿ ದೊರೆತ ಅನುಭವವೇ ಹೆಚ್ಚಿತ್ತು. ಆದರೂ ಜನ ಬಿಡಬೇಕಲ್ಲ ಅಥವಾ ಸುಮ್ಮನೇ ಕುಳಿತುಕೊಳ್ಳಲಾಗದ ನಾನು ಕೂಡ ಮತ್ತೊಮ್ಮೆ ಇದಕ್ಕೆ ಅಂಟಿಕೊಂಡೆ. ಹಿಂದೆ 1970ರಲ್ಲಿ ಬೊಂಬಾಯಿಗೆ ಹೋಗಿ ಖಾದಿ ಕಮಿಷನ್ ಅಧ್ಯಕ್ಷ ದೇಬರ್ ಅವರನ್ನು ಕಂಡು ಅಂದೇ ಅವರಿಂದ ಸಂಘಕ್ಕೆ ಎರಡು ಲಕ್ಷ ರೂ.ಗಳ ಗೋಡೌನ್ ಸಾಲ ತಂದಿದ್ದೆನಲ್ಲವೇ? ಬೊಂಬಾಯಿನ ಈ ಕಛೇರಿಯಿಂದ ಸಂಘಕ್ಕೆ 7 ಲಕ್ಷ ರೂಪಾಯಿ ರೀಬೇಟು ಮೊಬಲಗು ಬರಬೇಕಾಗಿತ್ತು. ಹಿಂದೆ ಖಾದಿ ಕಮಿಷನ್ನವರು ಕೊಡುತ್ತೇವೆಂದು ಹೇಳಿದ ತಕ್ಷಣ ನಾವು ಆ ಸೌಲಭ್ಯನ ಬಳಕೆದಾರರಿಗೆ ಕೊಟ್ಟಿದ್ದೆವು. ಇಂದು ಖಾದಿ ಕಮೀಷನ್ನವರು ಹಣನ 4-5 ವರ್ಷಗಳಿಂದ ಕೊಡಲು ಒಪ್ಪದೇ ಅದನ್ನು ಹೊಡೆಸಿ ಹಾಕಿ ಬಿಟ್ಟಿದ್ದರು. ದೇಬರ್ ಅವರನ್ನು ಹತ್ತಾರು ಧಪ ಕಂಡು ಸಂಘಕ್ಕೆ ಆಗಿರುವ ಅನ್ಯಾಯವನ್ನು ವಿವರಿಸಿದೆ. ದೇಬರ್ ತುಂಬ ಸಜ್ಜನ ವ್ಯಕ್ತಿ ಬಡವರ ಕಷ್ಟದ ಬಗ್ಗೆ ಸಹಾನುಭೂತಿಯುಳ್ಳವರು. ಇದಕ್ಕೆ ಲಕ್ನೋ ಸರ್ಟಿಫಿಕೇಷನ್ ಕಮೀಷನ್ ಛೇರ್ಮನ್ ವಿಚಿತ್ರ ನಾರಾಯಣ ಶರ್ಮ ಅವರೇ ಕಬೂಲಾಗಬೇಕೇ ಶಿವಾಯಿ ತಮ್ಮಿಂದ ಏನೂ ಮಾಡಲಾಗುವುದಿಲ್ಲವೆಂದು ತಮ್ಮ ನಿಸ್ಸಾಹಾಯಕತೆ ತೋಡಿಕೊಂಡರು. ಹೋಗಲಿ ಲಕ್ನೋಕ್ಕೆ ಹೋಗಿ ನಾನೇ ಆ ಛೇರ್ಮನ್ನರನ್ನು ನೋಡಲೇ. ನನ್ನ ಆರೋಗ್ಯ ಬೇರೆ ಸರಿಯಿಲ್ಲ. ಏನು ಮಾಡವುದೆಂದು ಯೋಚಿಸ ತೊಡಗಿದೆ. ಚಿಂತೆ ಇಲ್ಲ. ನಮ್ಮ ನೇಕಾರರಿಗೆ ಈ ಪ್ರಯಾಣದಿಂದ ಅನುಕೂಲವಾಗುವುದಾದರೆ ಈ ದೈಹಿಕ ಕಷ್ಟ ಸಹಿಸೋಣ ಎಂದು ದೃಢ ಮನಸ್ಸಿನಿಂದ ಬೊಂಬಾಯಿಗೆ ಹೊರಟೆ. ಜೊತೆಗೆ ಸಂಘದ ಸೆಕ್ರೆಟರಿ ಗಜಾನನರಾವ್ ಇದ್ದರು. ಪ್ರಯಾಣದ ಉದ್ದಕ್ಕೂ ಹೋಟೆಲ್ ಊಟ ಹೊಟ್ಟೆಯಲ್ಲೆಲ್ಲಾ ಕಿವುಚಿದಂತಾಗುತ್ತಿತ್ತು.

ಬೊಂಬಾಯಿ ತಲುಪಿ, ಹೋಟೆಲ್‌ನಲ್ಲಿ ರೂಮ್ ಮಾಡಿ ಉಣ್ಣೆ ಖಾದಿಗೆ ಸಂಬಂಧಪಟ್ಟ ಡೈರೆಕ್ಟರ್ ಎ.ಆರ್.ಮೂರ್ತಿ ಅವರನ್ನು ಭೇಟಿಯಾದೆ. ಆಗಲೇ ನನಗೆ ಯಾವುದೂ ಬೇಕಾಗಿರಲಿಲ್ಲ. ಹೇಗೋ ರೂಮಿಗೆ ಬಂದು ಹಾಸಿಗೆ ಸೇರಿದೆ. ಯಾರನ್ನೋ ನೋಡಿ ಬರುವುದಾಗಿ ಹೇಳಿ ಗಜಾನನರಾವ್ ಹೊರಗೆ ಹೋದರು. ರಾತ್ರಿ ಸ್ವಲ್ಪ ಹೊತ್ತಿನಲ್ಲೇ ಹೊಟ್ಟೆನೋವು ಜಾಸ್ತಿಯಾಯಿತು. ವಿಪರೀತ ಜ್ವರ ಮೈಯಲ್ಲೆಲ್ಲಾ ಅಡರಿತು. ಯಾರನ್ನಾದರೂ ಕೂಗೋಣವೆಂದರೆ ಮಾತೇ ಹೊರಡದು. ಪಕ್ಕದ ಟೇಬಲಿನಲ್ಲಿದ್ದ ನೀರು ಬಗ್ಗಿಸಿಕೊಂಡು ಕುಡಿಯಲು ಶಕ್ತಿ ಇಲ್ಲ. ಸ್ವಲ್ಪ ಹೊತ್ತಿಗೆ ಜಲ ಬಾಧೆ ಜಾಸ್ತಿಯಾಯಿತು. ತೆವಳಿಕೊಂಡು ಬಾತ್‌ರೂಂಗೆ ಹೋಗಿ ಬಂದೆ. ನನ್ನ ಗತಿ ಮುಗೀತು ಎಂದುಕೊಂಡೆ. ಹೊಟ್ಟೆಯೆಲ್ಲಾ ಕಲ್ಲಾದ ಹಾಗಿತ್ತು. ಒಂದು ಕ್ಷಣ ಮಡದಿ ಮಕ್ಕಳು ನೆನಪಿಗೆ ಬಂದರು. ಮದುವೆಗೆ ಬಂದು ನಿಂತಿರುವ ಹೆಣ್ಣುಮಕ್ಕಳು. ಓದುತ್ತಿರುವ ಗಂಡು ಮಕ್ಕಳು. ನನ್ನ ನಿವೃತ್ತಿಯಾದ ಮೇಲೆ ಆಕಾಶವೇ ತಲೆ ಮೇಲೆ ಬಿದ್ದಂತೆ ಈಗಾಗಲೇ ಅಧೈರ್ಯಳಾದ ಹೆಂಡತಿ ಮುಖ, ಇವೆಲ್ಲಾ ನೆನಪಿಗೆ ಬಂದವು. ಅಂತು ನನ್ನ ಸಾವು ಬೊಂಬಾಯಿಯಲ್ಲಿಯೇ ಬರುತ್ತದೆಂಬ ಗ್ಯಾರಂಟಿ ನನಗಾಯಿತು. ನಾನು ಈ ಅನಾರೋಗ್ಯದ ನಡುವೆ ಪ್ರವಾಸ ಕೈಗೊಳ್ಳಬಾರದೆನಿಸಿತು, ಮರಣಕ್ಕೆ ಅಂಜುವವನು ನಾನಲ್ಲ, ಆದರೆ ಕರ್ತವ್ಯ ಪೂರ್ಣಗೊಳ್ಳದೆ ಹೀಗೆ ದುರ್ಮರಣಕ್ಕೆ ಈಡಾದರೆ ಏನು ಗತಿ ಎಂಬುದೇ ನನ್ನ ಚಿಂತೆ. ನನ್ನ ಹೋರಾಟವೆಲ್ಲಾ ''ಕತ್ತಲು ಮುಚ್ಚಿಹ ಬಾಳಿರುಳಾಚೆ ಆಸೆ ಚಂದ್ರ''ನನ್ನು ಹುಡುಕುವುದು ವ್ಯರ್ಥಸಾಹಸವೇನೋ ಅನಿಸುತ್ತಿತ್ತು ಕವಿ ಬೇಂದ್ರೆ ಹೇಳುವಂತೆ,-

ಆ ಆಳೆ ಅಳೀತು
ಈ ಬಾಳೆ ಬಾಳೀತು
ಬದಕಬೇಕೆಂಬಾಸೆ ಯಾರಿಗಿಲ್ಲ?

ಅಂತೂ ದಶರಥನ ಸಾವು ನನ್ನದಾಯಿತಲ್ಲ ಎಂಬ ಭಯ ನನ್ನದು ಇಷ್ಟು ಹೊತ್ತಿಗೆ ರಾತ್ರಿ ಹತ್ತು ಘಂಟೆ ಇರಬಹುದು. ಆಚೆ ಹೋಗಿದ್ದ ಗಜಾನನರಾವ್ ಬಂದು ನನ್ನ ಸ್ಥಿತಿ ನೋಡಿದರು. ಅವರಿಗೆ ಗಾಬರಿಯಾಯಿತು. ಮಾತನಾಡಿಸಿದರೂ ನಾನು ಮಾತನಾಡಲು ಆಗದೆ ಕೈ ಸನ್ನೆ ಮಾಡಿದೆ. ಅವರಿನ್ನೂ ಗಾಬರಿಯಾದರು. ಡಾಕ್ಟರು ಕರೆ ತರುವುದಾಗಿ ಓಡಿಹೋದರು. ಪಾಪ ಆಗ

ಹನ್ನೊಂದು ಗಂಟೆ, ಆ ಸರಿಹೊತ್ನಲ್ಲಿ ಯಾವ ಡಾಕ್ಟರು ಸಿಗಬೇಕು. ತೆರೆದಿದ್ದ ಮೆಡಿಕಲ್ ಷಾಪ್‌ನಲ್ಲಿ ಐದಾರು ಅನಾಸಿನ್ ಮಾತ್ರೆ ತಂದರು. ಒಂದು ಲೋಟ ನೀರು ಕೊಟ್ಟು ಮೂರು ನಾಲ್ಕು ಮಾತ್ರೆಗಳನ್ನು ಒಂದೇ ಸಾರಿ ನುಂಗಿಸಿದರು. ಕೊಂಡು ತಂದಿದ್ದ ಥರ್ಮಾಮೀಟರ್‌ನಲ್ಲಿ ನೋಡಿದರೆ 104 ಡಿಗ್ರಿ ಜ್ವರವಿತ್ತು. ಗಾಬರಿಗೊಂಡು ರಾತ್ರಿಯೆಲ್ಲಾ ನನ್ನ ಪಕ್ಕದಲ್ಲಿ ಕುಳಿತು ತಣ್ಣೀರಿನ ಹಣೆ ಪಟ್ಟಿ ಹಾಕುತ್ತಾ ಕುಳಿತರು. ಬೆಳಿಗ್ಗೆ ಹೇಗೋ ಡಾಕ್ಟರ್‌ನ ಕರ್‍ಕೊಂಡು ಬಂದರು. ಅವರ ಔಷಧಿ-ಇಂಜಕ್ಷನ್‌ಗಳ ನಂತರ ನಿತ್ಯ ಕರ್ಮ ಸುಸೂತ್ರವಾಗಿ ನಡೆಯಿತು. ಕಲ್ಲಿನಂತಾಗಿದ್ದ ಹೊಟ್ಟೆ ಇದೀಗ ಮೃದುವಾಯಿತು. ಎರಡು ದಿನ ವಿಶ್ರಾಂತಿ ಪಡೆದು ಲಕ್ನೋಕ್ಕೆ ಪ್ರಯಾಣ ಮುಂದುವರಿಸಿದೆ. ಸಾಮಾನ್ಯವಾಗಿ. ನಾವು ಒಂದನ್ನು ಆರಿಸಿಕೊಳ್ಳಬೇಕು. One must choose in life between boredom-suffering ಹೀಗಾಗಿ ನಾನು ಕೆಲಸ-ಕಾರ್ಯಗಳಲ್ಲಿ ಇದ್ದೆ ಕೊನೆಗಾಣಬೇಕೆಂದು ನಿರ್ಧರಿಸಿದೆ. ನಮ್ಮ ಪ್ರಯಾಣದ ನಡುವೆ ಹೊಟ್ಟೆನೋವು ನಿಂತಿರಲಿಲ್ಲ. 'ಅಪ್ಪಾಜಿ ನಿಮಗೆ ಹೀಗಾದರೆ ಲಿಕ್ವಿಡ್ ಡೈಜಿನ್ ಒಂದು ಬಾಟಲ್ ಸೂಟ್‌ಕೇಸ್‌ನಲ್ಲಿ ಹಾಕಿದ್ದೇನೆ. ತಕ್ಕೋಳಿ' ಎಂದು ಡಾಕ್ಟರ್ ಶಂಕರ ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. ತಕ್ಷಣ 2-3 ಚಮಚ ಅದನ್ನು ತಕ್ಕೊಂಡೆ. ಸ್ವಲ್ಪ ಹೊಟ್ಟೆನೋವು ಕಡಿಮೆಯಾಯಿತೆನಿಸಿತು. ಅಂದಿನಿಂದಲೇ ಹೊತ್ತಾರೆ ಸಂಜೆ ಡೈಜಿನ್ ಕುಡಿಯೋದ ಖಾಯಂ ಮಾಡಿದೆ. ಗ್ಯಾಸ್ಟ್ರಿಕ್ ಖಾಯಿಲೆ ಒಂದು ತಹಬಂದಿಗೆ ಬರುವಂತೆ ಭಾಸವಾಯಿತು. ಹನ್ನೊಂದು ಘಂಟೆಗೆ ಲಕ್ನೋ ತಲುಪಿದೆವು. ಸರ್ಟಿಫಿಕೇಶನ್ ಕಮೀಟಿಯ ಕಛೇರಿಗೆ ಭೇಟಿ ಕೊಟ್ಟು ಅಲ್ಲಿಂದಲೇ ಛೇರ್ಮನ್ ವಿಚಿತ್ರನಾರಾಯಣಶರ್ಮ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ನಮ್ಮ ಭೇಟಿ ಮಧ್ಯಾಹ್ನ ನಾಲ್ಕು ಘಂಟೆಗೆಂದು ನಿರ್ಧರಿಸಿದೆ. ಒಂದಿಷ್ಟು ವಿಶ್ರಾಂತಿ ಪಡೆದು ಡೆಪ್ಯುಟಿ ಡೈರೆಕ್ಟರ್‌ರೊಡನೆ ಎಲ್ಲಾ ರೆಕಾರ್ಡ್ ಸಮೇತ ಛೇರ್ಮನ್ ವಿಚಿತ್ರನಾರಾಯಣಶರ್ಮ ಅವರ ಬಂಗಲೆಯನ್ನು 3-30ಕ್ಕೆ ತಲುಪಿದೆ. ವಿಚಿತ್ರನಾರಾಯಣಶರ್ಮರು ಆಜಾನುಬಾಹು. ಮಿಗಿಲಾದ ಎತ್ತರ. ಅವರು ಈಜಿ ಕುರ್ಚಿ ಮೇಲೆ ಬಿಸಿಲಿಗೆ ಎದುರಾಗಿ ತಮ್ಮ ಶರೀರವನ್ನು ಹರಿಬಿಟ್ಟಿದ್ದರು. ಕಟ್ಟಾ ಗಾಂಧಿ ಅನುಯಾಯಿಗಳಾದ ಅವರು ಯಾಕೆ ಹಾಗೆ ಕುಳಿತಿದ್ದಾರೆಂದು ವಿಚಾರಿಸಿಕೊಂಡೆ. ತಮ್ಮ ಹೊಟ್ಟೆಯ ಉಬ್ಬರಕ್ಕೆ ಇದೊಂದು ಪ್ರಕೃತಿ ಚಿಕಿತ್ಸೆಯೆಂದು ಹೇಳಿದರು. ಅವರಿಗೆ 90 ವರ್ಷಗಳಿರಬಹುದು. ಗಾಂಧೀಜಿಯ ಜೊತೆಯಲ್ಲಿ ಕೆಲಸ ಮಾಡಿದವರು. ಆ ವಯಸ್ಸಿನಲ್ಲೂ ಚುರುಕಾಗಿದ್ದರು. ನಮ್ಮ

ವಿಷಯದ ಬಗ್ಗೆ ಆತ್ಮೀಯವಾಗಿ ವಿಚಾರಿಸಿದರು. ನಾನು ಹಿಂದೆ ನಮ್ಮ ಸಂಘದ ಪರ್ಚೇಸ್ ಮತ್ತು ಸೇಲ್ಸ್‌ಕಮಿಟಿ ಸದಸ್ಯರು ಖಾದಿ ಕಮಿಷನ್‌ನವರು ತಮ್ಮ ಸಂಘಕ್ಕೆ ರಿಬೇಟನ್ನು ಕೊಡುತ್ತಾರೆಂಬ ಭರವಸೆ ಮೇಲೆ ರಿಬೇಟನ್ನು ಕಳೆದು ಕಂಬಳಿಗಳನ್ನು ಮಾರಾಟ ಮಾಡಿದ್ದಾರೆ. ಬಡ ನೇಕಾರರಿಗೆ ಆ ಹಣ ಸಂದಾಯವಾಗದೆ ನಮ್ಮ ಉಣ್ಣೆ ನೇಕಾರರ ಸಹಕಾರ ಸಂಘಕ್ಕೆ ಸುಮಾರು 7 ಲಕ್ಷ ರೂ ನಷ್ಟವಾಗಿದೆ. ನಮ್ಮ ಕಡೆ ಮಳೆ ಬೆಳೆಯಿಲ್ಲದೆ ಬಡ ನೇಕಾರರು ಪಡುತ್ತಿರುವ ಪಾಡನ್ನು ಹೃದಯಂಗಮ ವರ್ಣಿಸಿದೆ. ಬಡ ಉಣ್ಣೆನೇಕಾರರಿಗೆ ನೀವು ಮಾಡುವ ಉಪಕಾರ ಅನೇಕ ಸಂಸಾರಗಳಿಗೆ ಅನ್ನ ಕೊಟ್ಟ ಫಲ ಬರುತ್ತದೆಂದು ಬಿನ್ನವಿಸಿದೆ. ಆನಂತರ ವಿಚಿತ್ರನಾರಾಯಣಶರ್ಮ ಅವರು ನಮ್ಮ ಕಛೇರಿಯ ನೋಟ್ಸನ್ನು, ಬೊಂಬಾಯಿ ಕಛೇರಿಯ ಪತ್ರ ಎಲ್ಲವನ್ನು ಅಧ್ಯಯನ ಮಾಡಿದರು. ಮಧ್ಯ ಮಧ್ಯ ವಿವರಣೆ ಕೇಳಿ ಪಡೆದರು. ನಾನು ಮಾತುಕತೆ ಸಂದರ್ಭದಲ್ಲಿ ಇಡೀ ಉಣ್ಣೆ ಉದ್ಯಮ ಸ್ಥಿತಿಗತಿಯನ್ನು ಅವರಿಗೆ ತಿಳಿಸಿದೆ, ಜನಾಂಗದ ಸಮಸ್ಯೆಗಳನ್ನು ಅವರಲ್ಲಿ ಅರಿಕೆ ಮಾಡಿಕೊಂಡೆ. ನನ್ನ ಮಾತುಕತೆ ಕೇಳಿದ ಶ್ರೀ ಶರ್ಮ ಅವರು ''ನೀವೇನು ಮಾಡ್ತಿದ್ದೀರಿ, ಅಡ್ವೋಕೇಟ್ ಆಗಿ ಹೈಕೋರ್ಟಿನಲ್ಲಿ ಪ್ರಾಕ್ಟೀಸು ಮಾಡುತ್ತಿದ್ದೀರ'' ಎಂದರು. ನನಗೆ ಆಶ್ಚರ್ಯವೋ ಆಶ್ಚರ್ಯ, ಧೇಬರ್ ಅವರಂತೆ ಇವರೂ ನನ್ನನ್ನು ಏಕೆ ಲಾಯರ್ ಎಂದು ನಿರ್ಧರಿಸಿದರೋ ಗೊತ್ತಿಲ್ಲ. ಆಗ ಅವರಿಗೆ ಇಲ್ಲ, ನನ್ನ ಮಾತುಗಾರಿಕೆ ತಮಗೆ ಹಾಗೆ ಅನಿಸಿದ್ದರೆ ಕ್ಷಮ ಕೇಳುತ್ತೇನೆ. ನಾನು ವಾದ ಮಾಡಲಿಕ್ಕೆ ಈ ಮಾತು ಹೇಳಲಿಲ್ಲ. ನಾನು ಕೂಡ ನೇಕಾರರ ಸಮೂಹದಿಂದ ಬಂದವನು. ಬದುಕಿನ ಬಹುಕಾಲ ಅವರ ಕಾಯಕ ನೋಡುತ್ತಾ ತಿಳಿಯತ್ತಾ ಬಂದಿದ್ದೇನೆ. ಹೀಗಾಗಿ ಅವರುಗಳ ಮೇಲಿನ ತೀವ್ರ ಅಂತಃಕರಣ ಇಷ್ಟೊಂದು ಮಾತನಾಡಿಸಿತೆಂದು ಹೇಳಿದೆ. ನನ್ನ ಮಾತನ್ನೆಲ್ಲಾ ಸಾವಧಾನದಿಂದ ಕೇಳುತ್ತಿದ್ದ ಅವರು ಮೇಲೆದ್ದು ಬಿಗಿದಪ್ಪಿಕೊಂಡರು, ನಿಜಕ್ಕೂ ಕರ್ನಾಟಕದವರು ಗಾಂದೀಜಿಯ ಗೃಹ ಕೈಗಾರಿಕೆಯನ್ನು ಮರೆತಿಲ್ಲವಲ್ಲ ಎಂದು ಹರ್ಷ ವ್ಯಕ್ತಪಡಿಸಿದರು. ಆ ಆಜಾನುಬಾಹುವಿನ ಆಲಿಂಗನದಲ್ಲಿ ನಾನು ಮಗುವಾದೆ. ನನ್ನ ಶ್ರಮವೆಲ್ಲಾ ಮರೆತು ಹೋಯಿತು. ನನ್ನ ಕಾಯಿಲೆ-ಕಸಾಲೆಗಳು ಆ ಕ್ಷಣದಲ್ಲಿ ಎಲ್ಲಿ ಓಡಿ ಹೋದವೋ ತಿಳಿಯದು. ನೈಜ ಸ್ನೇಹಕ್ಕೆ ಜಾತಿ ಮತ ಪ್ರಾಂತ್ಯ ಭಾಷೆಗಳ ಅಂತರವೆಲ್ಲಿರುತ್ತದೆ? ಎರಡೂ ಸಮಾನ ಹೃದಯಗಳ ಮಿಲನವಷ್ಟೇ ಅದಕ್ಕೆ ಬೇಕಾಗುವುದು. ವಿಚಿತ್ರನಾರಾಯಣಶರ್ಮ ಹಾಗೂ ನನಗೂ ಈ ಬಾಂಧವ್ಯ ಉಂಟಾಗಲು ಕಾರಣ-ಬಡ ಉಣ್ಣೆ ನೇಕಾರರು; ಇವರೋ

ಮಹಾತ್ಮಗಾಂದೀಜಿಯವರಂತೆ ನೈಜ ಕರ್ಮಯೋಗಿಗಳು ತಾನೇ. ಆದರೆ ಈ ತನಕ ನಾವಾಗಲಿ ಅಥವಾ ಸರ್ಕಾರವಾಗಲಿ ಅವರನ್ನು ಗುರುತಿಸಲಿಲ್ಲ. ಆಗ ಡಾ|| ಜಿ.ಎಸ್.ಶಿವರುದ್ರಪ್ಪನವರ ಪದ್ಯವೊಂದು ನೆನಪಿಗೆ ಬಂತು.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ,

ಆ ತಕ್ಷಣ ಶ್ರೀಯುತರು ವೈ.ಎನ್.ಹೊಸಕೋಟೆ, ವೆಂಕಟಾಪುರ, ಮತ್ತು ಪಾವಗಡ ಈ ಸಂಘಗಳ ಬಾಬ್ತು ಮೂರು ಲಕ್ಷ ಮೂವತ್ತು ಸಾವಿರ ರೂಪಾಯಿ ಮಂಜೂರು ಮಾಡಿದರು. ಆ ಕೂಡಲೇ ಆರ್ಡರ್ ಒಂದನ್ನು ನನ್ನ ಕೈಗೆ ತಲುಪಿಸಿದರು. ನಮ್ಮ ಕಛೇರಿಗೆ ಕೂಡ ಪ್ರತಿಯನ್ನು ಅಂದೇ ಕಳುಹಿಸಿದರು. ಈ ಮೂರು ಸಂಘಗಳು ಮಾರಿದ ಕಂಬಳಿ, ಅವರಿಗೆ ಕೊಡಬೇಕಾದ ರಿಬೇಟು ಮುಂತಾದವುಗಳನ್ನು ಲೆಕ್ಕಹಾಕಿ ವ್ಯವಸ್ಥೆ ಮಾಡಿದ್ದರು. ಇನ್ನುಳಿದ ಹಣನ ನಮ್ಮ ಕೇಂದ್ರ ಸಹಕಾರ ಸಂಘ ಅವರಿಗೆ ಅಂಕಿ-ಅಂಶಗಳನ್ನು ಕೊಟ್ಟು ಪಡೆದುಕೊಳ್ಳಬೇಕಾಯಿತು. ಹಣನೇ ಕೊಡುವುದಿಲ್ಲವೆಂದಿದ್ದ ಖಾದಿ ಕಮಿಷನ್‌ರವರು ತಾತ್ವಿಕವಾಗಿ ರಿಬೇಟು ಕೊಡಲು ಒಪ್ಪಿಕೊಂಡಿದ್ದುದೂ ನಮ್ಮ ನೈತಿಕ ಸ್ಥೈರ್ಯ ಹೆಚ್ಚಿಸಲು ಕಾರಣವಾಯಿತು. ನನಗೋ ಈ ಶಾರೀರಿಕ ತೊಂದರೆಗಳೊಡನೆ ಏಕೆ ಈ ಪ್ರವಾಸ ಮಾಡಿದ್ದೇನೆಂಬ ಭೀತಿ ಇರಬೇಕಾದರೆ ಈ ಬೆಳವಣಿಗೆ ಪುಷ್ಠಿ ಕೊಟ್ಟಿತು. ಹೋಗಲಿ ಖಾದಿ ಆಯೋಗದ ಸರ್ಟಿಫಿಕೇಶನ್ ಕಮಿಷನ್ನಿನ ಅಧ್ಯಕ್ಷರಾದರೂ ಇನ್ನೂ ಗಾಂಧಿ ಸಿದ್ಧಾಂತದಲ್ಲಿ ನಂಬಿಕೆ ಇರಿಸಿಕೊಂಡಿದ್ದಾರಲ್ಲ ಎಂಬ ಸಮಾಧಾನ ನನಗಾಯಿತು. ಸಾಕಷ್ಟು ದೈಹಿಕ ತೊಂದರೆ ಅನುಭವಿಸಿಕೊಂಡೇ ಬೆಂಗಳೂರಿಗೆ ಹಿಂತಿರುಗಿದೆ.

ಇಷ್ಟೆಲ್ಲಾ ಆಗೋ ಹೊತ್ತಿಗೆ ಸಂಘದಲ್ಲಿ ಆಗಲೇ 3 ವರ್ಷ ಅಧ್ಯಕ್ಷನಾಗಿದ್ದೆ. ಶರೀರ ಪ್ರಕೃತಿಯೂ ಸರಿಯಾಗಿಲ್ಲ ಮುಂದೆಯೂ ಅಧ್ಯಕ್ಷನಾಗಿರಲು ಸಾಧ್ಯವೇ ಇಲ್ಲವೆಂತ ಹೇಳಿ-ಸಂಸ್ಥೆಯಿಂದ ನಿರ್ಗಮಿಸಿದೆ.

ಇದಾದ ನಂತರ ನನ್ನ ಕಾರ್ಯ ಕ್ಷೇತ್ರ ಬೇರೆಲ್ಲೋ ತಿರುಗಿತ್ತು. ರಾಜಕೀಯ

ದೊಂಬರಾಟದಲ್ಲಿ ನಾನೊಂದು ದಾಳವಾಗಿ ಹೇಗೋ ಕುರಿ ಅಭಿವೃದ್ಧಿ ಮಂಡಲಿಗೆ ಅಧ್ಯಕ್ಷನಾದೆ. ಅಲ್ಲಿಂದ ಹೊರಬಂದು ಒಂದಿನಿತು ಕಾಲ ತುಮಕೂರಿನಲ್ಲಿ ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಘದ ಚಟುವಟಿಕೆಯಲ್ಲಿ ಮುಳುಗಿದೆ. ಮತ್ತೆ ನಮ್ಮ ನೇಕಾರ ಬಂಧುಗಳು ತಮ್ಮ ಕಷ್ಟಗಳನ್ನು ತೋಡಿಕೊಳ್ಳಲು ಪ್ರಾರಂಭಿಸಿದರು. ನಮ್ಮ ಜಿಲ್ಲೆಯ ಪ್ರೈಮರಿ ಸಂಘದವರು, ಮನೆಗೆ ಬಂದು ತಾವು ಶೇಖರಿಸಿರುವ ಕಂಬಳಿ ಗೆದ್ದಲು ತಿನ್ನುತ್ತಿವೆ. ನೇಕಾರರು ಉಪವಾಸ ಬಿದ್ದು ಸಾಯಬೇಕಾಗಿದೆ ಎಂದು ಗೋಳುಹುಯ್ದುಕೊಳ್ಳಲು ಪ್ರಾರಂಭಿಸಿದರು. ಖಾದಿ ಬೋರ್ಡ್‌ನ ಅಧ್ಯಕ್ಷರು ಹಾಗೂ ಕಾರ್ಯದರ್ಶಿ, ಉಣ್ಣೆ ನೇಕಾರರ ಸಹಕಾರ ಸಂಘಕ್ಕೆ ಬರುವಂತೆ ಒತ್ತಾಯ ಮಾಡಿದರು. ಹೀಗಾಗಿ ತುಮಕೂರು ಜಿಲ್ಲೆಯ ಪ್ರಾಥಮಿಕ ಸಂಸ್ಥೆಯೊಂದರಿಂದ ಡೈರೆಕ್ಟರ್ ಆಗಿ ಪುನಃ ಆಯ್ಕೆಯಾದೆ. 27-11-77ರಲ್ಲಿ ಸರ್ವಾನುಮತದಿಂದ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಯಿತು. ಸಂಘ ಹಣಕಾಸಿನ ಸ್ಥಿತಿ ಹೇಳುವ ಹಾಗೆಯೇ ಇಲ್ಲ. ಚೆನ್ನಾಗಿ ನಡೆಯುತ್ತಿದ್ದರೆ ಇಂತಹ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಇಷ್ಟೊಂದು ಜುಲಮೆ ಎಲ್ಲಿರುತ್ತಿತ್ತು? ಖಾದಿ ಕಮಿಷನ್‌ನವರು ಗೋಡೌನ್ ಸಾಲ 2 ಲಕ್ಷ ರೂಪಾಯಿ ಸುಸ್ತಿ ನಿಂತಿರುವುದರಿಂದ ಹಣ ಕೊಡಲು ಒಪ್ಪಲಿಲ್ಲ. ಕಂಬಳಿ ಕೊಟ್ಟು ಹಣಕ್ಕೆ ಕಾದು ಕುಳಿತ ನೇಕಾರರ ಮುಖ ನೋಡಲಾಗುವುದಿಲ್ಲ. ಕಾರ್ಯದರ್ಶಿ ರಾಮರಾಜು ತುಮಕೂರಿಗೆ 6-3-78ರಲ್ಲಿ ಧಾವಿಸಿ ಬಂದರು. ನನಗೆ ಏನು ಮಾಡುವುದಕ್ಕೂ ತೋಚಲೇ ಇಲ್ಲ. ನನಗೆ ದೇವರ ಕೃಪೆಯಿಂದ ದಿನ ನಿತ್ಯದ ಮನೆ ನಡೆಸಲು ಕಷ್ಟವೇನಿರಲಿಲ್ಲ. ಆದರೆ ಸಾರ್ವಜನಿಕರ ಈ ತರದ ಸಮಸ್ಯೆಗಳು ಆಗಾಗ್ಗೆ ಕಾಣಿಸಿಕೊಂಡು ನನ್ನನ್ನು ಮಂಕನನ್ನಾಗಿಸುತ್ತವೆ. ಏನು ಮಾಡೋದು? ಒಂದೇ ಎರಡೇ-ನೂರೇ, ವ್ಯಕ್ತಿಯೊಬ್ಬನಿಂದ ಹೊಂದಿಸಲು ಸಾಧ್ಯವೇ? ಒಂದರಗಳಿಗೆ ಯೋಚನೆ ಮಾಡಿದೆ, ಸೀದಾ ಸೋಮೇಶ್ವರಪುರಂ ಬಡಾವಣೆಯಲ್ಲಿರುವ ಕರ್ನಾಟಕ ಬ್ಯಾಂಕ್‌ಗೆ ಹೋದೆ. ಅಲ್ಲಿನ ಮ್ಯಾನೇಜರು ನನಗೆ ಪರಿಚಯದವರು. ಪರಿಸ್ಥಿತಿ ವಿವರಿಸಿದೆ. ಅವರು ಮಾತನಾಡುವುದರೊಳಗೆ ನಾಲ್ಕಾರು ನನ್ನ ಚರ ಆಸ್ತಿಗಳನ್ನು ಬ್ಯಾಂಕಿಗ ದೀಡು ಹಾಕ್ಕೊಂಡು ರೂ. 10,000/- ಹಣ ಕೊಡಿ ಎಂದೆ. ಒಂದೆರಡು ಘಂಟೆಯೊಳಗೆ ಹಣ ಪಡೆದು ರಾಮರಾಜು ಅವರಿಗೆ ಕೊಟ್ಟು ಬರಗೂರಿಗೆ ಓಡಿಸಿದೆ. ಅದನ್ನು ಬಟವಾಡೇ ಮಾಡಿ ಅಲ್ಲಿದ್ದ ಕಂಬಳಿ ಸ್ಟಾಕ್ ತೆಗೆದುಕೊಂಡು ಬಾ ಎಂದೆ. ಹೀಗಿತ್ತು ಕೇಂದ್ರ ಸಂಘದ ಹಣಕಾಸಿನ ಸ್ಥಿತಿ. ಕಂಬಳಿಕೊಂಡು ಬಾಕಿಗಳನ್ನು ನಿಲ್ಲಿಸಿ ಕೊಂಡಿರುವ ನೂರಾರು ದೂರುಗಳನ್ನು ಜಿಲ್ಲೆಯ ಪ್ರಾಥಮಿಕ

ಸಂಘದವರು ಕೇಂದ್ರ ಸಂಘದ ಮೇಲೆ ಹೇಳುತ್ತಿದ್ದರು. ಕೇಂದ್ರ ಸಂಘ ಖಾದಿ ಕಮೀಷನ್‌ರವರ ಮೇಲೆ ದೂರು ಹೇಳುತ್ತಿದ್ದರು. ಮೊದಲು ಪ್ರಾಥಮಿಕ ಸಂಘಗಳ ಸಭೆಯಲ್ಲಿ, ಇವೆಲ್ಲಾ ನನಗೆ ಸವಾಲು ಹಾಕತೊಡಗಿದವು. ಆದರೆ ನಾನು ಅಧೈರ್ಯ ಪಡದೆ ಕೆಲವು ದಿನ ಸಮಯ ಕೊಡಿ ಪ್ರಾಥಮಿಕ ಸಂಘದ ಎಲ್ಲಾ ಬಾಕಿನ ತೀರಿಸುತ್ತೇನೆ ಎಂದು ಹೇಳಿದೆ. ಪ್ರಾಯಶಃ ಇವರ ಕೈಯಲ್ಲಿ ಆಗದ ಕೆಲಸವೆಂದು ಭಾವಿಸಿದರೋ ಅಥವಾ ಸಮಯ ಕೊಡೋಣ ಎಂದುಕೊಂಡರೋ ತಿಳಿಯದು, 'ಸರಿ' ಎಂದರು, ಅಂತೂ 'ಬೀಸುವ ದೊಣ್ಣೆ ತಪ್ಪಿಸಿಕೊಂಡರೆ ಸಾವಿರವರ್ಷ' ಅಂತಾರಲ್ಲ ಹಾಗೆ ಸದ್ಯದ ವಿಪತ್ತಿನಿಂದ ಬಚಾವಾದೆ. ನಮಗೆ ಖಾದಿ ಕಮಿಷನ್ ಅವರು ಕೊಡುತ್ತಿದ್ದ ಗೋಡೌನ್ ಸಾಲ 7 ಲಕ್ಷ ರೂಪಾಯಿಗಳ ವಿಷಯವನ್ನು ಖಾದಿ ಕಮಿಷನ್‌ನ ಉಣ್ಣೆ ವಿಭಾಗದ ನಿರ್ದೇಶಕ ವಿ.ಕೆ.ಮೂರ್ತಿ ಅವರೊಂದಿಗೆ ಚರ್ಚಿಸಿ ಕಮಿಷನ್ನವರಿಗೆ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಾಗಿರುವ ಫಂಡ್‌ನಿಂದ ರಾಜ್ಯ ಅಪೆಕ್ಸ್ ಬ್ಯಾಂಕ್ ಮೂಲಕ ಅಲ್ಪಾವಧಿ ಸಾಲವನ್ನಾಗಿ 10 ಲಕ್ಷ ನಮಗೆ ಕೊಡಿಸುವ ಬಗ್ಗೆ ಸಲಹೆ ಕಳುಹಿಸಿಕೊಟ್ಟೆ. ನಮ್ಮ ಗೋಡೌನ್‌ನಲ್ಲಿದ್ದ ಸ್ಟಾಕ್ 7 ಲಕ್ಷ ಇರಬೇಕೆಂದು ಜ್ಞಾಪಕ, ಹೇಗೋ ಸಾಲ ಮಂಜೂರಾಯಿತು. ಮೊದಲಿಗೆ ಖಾದಿ ಕಮಿಷನ್ ಅವರ 7 ಲಕ್ಷ ರೂ. ಗೋಡೌನ್ ಸಾಲ ತೀರಿಸಿಬಿಟ್ಟೆ. ಈಗ 10 ಲಕ್ಷ ರೂ. ವ್ಯವಹಾರ ಮಾಡಲು ದೊರಕಿತು. ಪ್ರಾಥಮಿಕ ಸಂಘದವರಿಗೆ ಕೆಲವೇ ದಿನಗಳಲ್ಲಿ ಅವರ ಬಾಕಿನ ಚುಕ್ತಾ ಮಾಡಲಾಯ್ತು. ಸಂಘದ ವ್ಯವಹಾರ ನಾಲ್ಕುಪಟ್ಟು ಹೆಚ್ಚಾಗಿ ನಡೆಯಲಿಕ್ಕೆ ಪ್ರಾರಂಭವಾಯಿತು. ಏನೊ ಗೊತ್ತಿಲ್ಲ, ರಿಸರ್ವ್ ಬ್ಯಾಂಕ್‌ನಿಂದ ಮತ್ತೆ 5 ಲಕ್ಷ ರೂಪಾಯಿ ಮಂಜೂರಾಯಿತು. ಒಟ್ಟಾರೆ ಏಳೆಂಟು ತಿಂಗಳ ಅವಧಿಯಲ್ಲಿ 15 ಲಕ್ಷ ರೂಪಾಯಿಗಳು ವ್ಯವಹಾರಕ್ಕೆ ಸಿಕ್ಕಿ ಪ್ರಾಥಮಿಕ ಸಂಘಗಳಿಗೆ ಬಾಕಿ ಇದ್ದ ಹಣವೆಲ್ಲಾ ಪಾವತಿಯಾದವು. ಹಣಕಾಸಿನಲ್ಲಿ ಸಂಘ ಸುವ್ಯವಸ್ಥೆಗೆ ಬಂತು. ಏನು ಹೇಳುವುದು - ದೇವರು ಕರುಣಾಮಯಿ, ನನ್ನದು ಬರಿ ಮಾತಾಗಲಿಲ್ಲ. ಮಾತು ಕಾಯ್ದುಕೊಂಡಂಗಾಯ್ತು. ನಮ್ಮ ನೇಕಾರರಿಂದ ಕಂಬಳಿಯನ್ನು ಆರನ್ನು ಮೂರಕ್ಕೆ ಕೊಂಡುಕೊಳ್ಳುತ್ತಿದ್ದ ಖಾಸಗಿ ವ್ಯಾಪಾರಿಗಳು, ಮದ್ರಾಸ್ ಭವನದವರಿಗೂ ಈ ಬೆಳವಣಿಗೆ ಆಶ್ಚರ್ಯವಾಗಿರಬಹುದು. ಈ ಸಂಘಕ್ಕೆ ಲಕ್ವ ಹೊಡೆದಿದೆ. ಅದು ಮೇಲೆ ಏಳೋದೆ ಇಲ್ಲವೆಂದುಕೊಂಡು ಆರಾಮವಾಗಿ ಮೆರೆಯುತ್ತಿದ್ದ ಇಂತಹವರಿಗೆ ಷಾಕ್ ಎನಿಸಿದರೆ ಸೋಜಿಗವಿಲ್ಲ. ಜಿಲ್ಲೆಯಲ್ಲಿ ಪ್ರವಾಸ ಮಾಡಿ ಇಂತಿಷ್ಟು ಇಂತಿಂತ ಕಂಬಳಿಗಳನ್ನು ಸಂಘಕ್ಕೆ ಕೊಡಲೇಬೇಕೆಂಬ

ನಿಬಂಧನೆ ಹಾಕಿದೆ. ಮುಂದೆ ಸಂಘ ಕೇವಲ ಆಡಂಬರದ ಸ್ಥಳವಾಗಬಾರದಲ್ಲವೆ? ತುಮಕೂರು ಜಿಲ್ಲೆ ಗಂಜಿ ಕಂಬಳಿಗೆ ಪ್ರಸಿದ್ಧಿ. ಕಾಫಿ ಟೀ ಎಸ್ಟೇಟ್‌ಗಳಿಗೆ ಸರಬರಾಜು ಆಗುವಂಥ ಕಂಬಳಿಗಳೆಲ್ಲಾ ಶೇ. 90-95ರಷ್ಟು ತುಮಕೂರು ಜಿಲ್ಲೆಯ ಉಣ್ಣೇ ಸಹಕಾರ ಕೇಂದ್ರಗಳಾದ ವೆಂಕಟಾಪುರ, ಪಾವಗಡ, ವೈ.ಎನ್.ಹೊಸಕೋಟೆ, ಸಿರಾ, ಬರಗೂರು, ಬೇವಿನಹಳ್ಳಿ, ಕಾಮಗೊಂಡನಹಳ್ಳಿ ಇತ್ಯಾದಿಗಳಿಂದಲೇ. ಸಮಯನೋಡಿ ದಳ್ಳಾಳಿಗಳು ನೇಕಾರರ ಮೇಲೆ ಒತ್ತಡ ತಂದು ನಮ್ಮ ಸಂಘಕ್ಕೆ ಚಕ್ಕರ್ ಕೊಟ್ಟರೆ ಏನು ಮಾಡುವುದು. ಜನ ಹಸಿದಿದ್ದಾಗ ಏನು ಕೊಟ್ಟರೂ ಬೇಡ ಎನ್ನುವುದಿಲ್ಲ. ಹೊಟ್ಟೆ ತುಂಬಿದ ಮೇಲೆ ನಂಬಿಕೆ ಕೇಳುತ್ತಾರೆ. ನೇಕಾರರು ಕೈಕೊಟ್ಟರೆ ಕೇಂದ್ರ ಸಂಘ ಬೇಬೆತ್ತೆ ಆಗುವುದರಲ್ಲಿ ಸಂಶಯವಿಲ್ಲ. ನಾನು ಆರ್ತಹೃದಯದಿಂದ ನೇಕಾರರಿಗೆ ಸಹಾಯ ಮಾಡೋಣ, ಆದರೆ ಅನ್ನ ಕೊಡುವ ಧಣಿಯನ್ನು ರಕ್ಷಿಸಿ ಈ ಉಪಕಾರ ಮಾಡೋಣ ಎಂಬುದೇ ನನ್ನ ಮಾತು. ಹಾಲು ಕೊಡುವ ಹಸುವಿನ ಕೆಚ್ಚಲು ಕುಯ್ಯಬಾರದಲ್ಲವೆ? ಹೇಗೋ ಮನಸ್ಸಿದ್ದರೆ ಮಹಾದೇವ ಅಂತಾರಲ್ಲ - ಹಾಗೆ ಈ ವಿಚಾರದಲ್ಲಿ ಹೆಜ್ಜೆ ಹಾಕಿದ ಕಡೆ ನೀರುಕ್ಕಿತ್ತು. ಕೇಂದ್ರ ಸಂಘಕ್ಕೂ ಪ್ರಾಥಮಿಕ ಸಂಘಗಳಿಗೂ ಸುಮಧುರ ಬಾಂಧವ್ಯವೇರ್ಪಟ್ಟಿತು.

ನಮ್ಮ ಗೃಹ ಕೈಗಾರಿಕೆಗಳ ಪುರೋಭಿವೃದ್ಧಿಗಾಗಿ ಯಾವುದೇ ಯೋಜನೆ ಇಲ್ಲ. ಅಪ್ಪ ಹಾಕಿದ ಆಲದ ಮರಕ್ಕೆ ನೇತುಹಾಕಿಕೊಳ್ಳುತ್ತಾರೆ. ಸಂಪ್ರದಾಯವಾದಿಗಳು; ಮಹಾತ್ಮಗಾಂಧಿ ಅವರು ಹತ್ತಿ ಖಾದಿ ತಯಾರಿಸಲು ಒಂದೇ ಒಂದು ಕದಿರಿನ ಚರಕ ಉಪಯೋಗಿಸುತ್ತಿದ್ದರು. ಪ್ರಾಯಶಃ ಖಾದಿ ಮತ್ತು ಚರಕ ಎರಡು ಅಸ್ತ್ರಗಳನ್ನು ಅಂದಿನ ಪರಿಸ್ಥಿತಿಗೆ ತಕ್ಕಂತೆ ಗಾಂದೀಜಿ ಉಪಯೋಗಿಸಿಕೊಂಡರು. ನಮ್ಮಗಳಿಗೆ ಇದರ ಬಗ್ಗೆ ಗೌರವ ಇರಬೇಕೆ ಹೊರತು ಭಾವನಾತ್ಮಕವಾದ ಅಂಧಾಭಿಮಾನ ಇರಬಾರದು. ಕೇಂದ್ರ ಖಾದಿ ಕಮೀಷನ್ ಮತ್ತು ಸಂಪ್ರದಾಯವಾದಿಗಳು ಇಲ್ಲಿ ವಿದ್ಯುಚ್ಛಕ್ತಿ ಮತ್ತಿತರ ಆಧುನಿಕ ಸೌಲಭ್ಯ ಉಪಯೋಗಿಸಿಕೊಳ್ಳಲು ಅಡ್ಡಗಾಲು ಹಾಕುತ್ತಿದ್ದಾರೆ. ಗಾಂದೀಜಿ ವಾಸ್ತವವಾದಿಯಾಗಿ ಸಮಸ್ಯೆಗೆ ಉತ್ತರ ಕೊಡುತ್ತಾ ಈ ಖಾದಿ ಮತ್ತಿತರ ಗೃಹ ಕೈಗಾರಿಕೆಯನ್ನು ಪ್ರೋತ್ಸಾಹಿಸಿದರೇ ಹೊರತು ಆವೇಶ ಪೂರ್ಣ ನಿರ್ಣಯದಿಂದಲ್ಲ. ನಮ್ಮ ಖಾದಿ ಕಮಿಷನ್ ಅವರು ಕೂಡಾ ಉಣ್ಣೆ ಉದ್ಯಮನ ಗೃಹ ಕೈಗಾರಿಕೆಯೆಂದು ಪ್ರಥಮ ಆದ್ಯತೆ ಕೊಡುವುದಿಲ್ಲ; ಏನಿದ್ದರೂ ಅವರ

ಒಲವೆಲ್ಲಾ ಹತ್ತಿ ಮತ್ತು ರೇಷ್ಮೆ ಖಾದಿಯ ಮೇಲೆ, ಅಲ್ಲೂ ಕೂಡಾ ಉದ್ಯಮಕ್ಕೆ ಪೂರಕವಾದ ದೃಷ್ಟಿಯಿರದೆ ಮತ್ತಾವುದೋ ಅಂಶಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಒಟ್ಟಾರೆ ಗಾಂಧಿಯನ್ನು ತಮ್ಮ ಕಪಿ ಮುಷ್ಠಿಯಿಂದ ಬಿಡುಗಡೆ ಮಾಡಲೊಲ್ಲರು-ಈ ಜನ. ಅನೇಕ ಖಾದಿ ಕಮಿಷನ್‌ರವರ ಸೆಮಿನಾರ್‌ಗಳಲ್ಲಿ ಭಾಗವಹಿಸಿ ನಾನು ಉಣ್ಣೆ ನೇಕಾರರಿಗೆ ಅನುಕೂಲವಾಗುವ ಯಾವುದಾದರೊಂದು ಉಪಕರಣ ಪರಿಶೋಧಿಸಿ ಎಂದು ಹೇಳುತ್ತಾ ಬಂದಿದ್ದೇನೆ. ಈ ಉದ್ಯಮಕ್ಕೆ ಒಂದಿಷ್ಟು ಕಾಯಕಲ್ಪ ಮಾಡಿ ಎನ್ನುತ್ತಿದ್ದೇನೆ. ಆದರೂ, ನನ್ನ ಪ್ರಾರ್ಥನೆ ಈವರೆಗೆ ಅರಣ್ಯರೋದನವೇ ಆಗಿದೆ. ನಾಲ್ಕಾರು ಕದಿರಿನ ಚರಕ ತಯಾರು ಮಾಡುತ್ತೇ ಅಂತ ವರ್ಷಾಂತರದಿಂದ ಹೇಳುತ್ತಲೇ ಇದ್ದಾರೆ, ಕಾರ್ಯತಹ ಆಗಿಲ್ಲ. ಹಳ್ಳಿಯ ನೇಕಾರ ಈಗಲೂ ಕೂತು, ಕಂಬಳಿ ನೇಯುವುದು, ಹಳ್ಳದಲ್ಲಿ ಅಡರಗಾಲುಹಾಕಿ ಒಂದೆಳೆಯನ್ನು ಓಬಿರಾಯನ ಕಾಲದ ರೀತಿಯಲ್ಲಿ ನೇಯಬೇಕು. ಎಷ್ಟೋ ಹಳ್ಳಿಯಲ್ಲಿ ನಮ್ಮ ಹೆಣ್ಣುಮಕ್ಕಳು ತಮ್ಮ ತೊಡೆಯ ಮೇಲೆ ಹೊಸೆದು ನೂಲು ತೆಗೆಯುತ್ತಾರೆ. ಅವರುಗಳಿಗೆ ಖಾದಿ ಆಯೋಗದವರು ಚರಕ ಒದಗಿಸಿ ಇದಕ್ಕೆ ಉತ್ತೇಜನ ಕೊಟ್ಟರೆ ಗ್ರಾಮೀಣ ಜನರ ಅಭಿವೃದ್ಧಿ ಯಾಗುವುದಿಲ್ಲವೆ? "ದೊರೆಯ ತನಕ ದೂರು" ಎಂಬಂತೆ ರಾಜ್ಯ ಸಭಾಸದಸ್ಯರಾದ ಬಸವರಾಜು ಅವರ ನೇತೃತ್ವದಲ್ಲಿ ಮನವಿ ಅರ್ಪಿಸಿದೆವು. ಇದನ್ನು ಆ ಸದನದಲ್ಲೂ ಪ್ರಸ್ತಾಪ ಮಾಡಲಾಯಿತು. ದಿನ ಬೆಳಿಗ್ಗೆ ಎದ್ದರೆ ಬೃಹತ್ ಕೈಗಾರಿಕೋದ್ಯಮಿಗಳ ಸಾಲ ಮತ್ತಿತರ ವಿಚಾರಗಳನ್ನೇ ಚರ್ಚೆಮಾಡುವ ಸಂಸತ್ತು ಒಬ್ಬ ಸದಸ್ಯನ ಮಾತಿಗೆ ಕಿವಿಗೊಟ್ಟು ಆಲಿಸುವುದೇ? ಅಲ್ಲದೆ ನಯ ನಾಜೋಕು ಗಳಿಲ್ಲದ ಗ್ರಾಮೀಣ ಸಂಸ್ಕೃತಿಯ ಎರಕ ಹೊಯ್ದ ಬಡ ನೇಕಾರರ ಕೂಗು-ಅಳಲು, ನವನಾಗರಿಕತೆಯ ಜನಗಳಿಗಾಗಲಿ ಸಂಪ್ರದಯವಾದಿಗಳಾದ ಆಯೋಗದ ಮೇಧಾವಿಗಳಿಗಾಗಲೀ ಕೇಳಿಸೀತೆ? ಗಾಂಧಿ ಹುಟ್ಟಿದ ನಾಡಿನಲ್ಲಿ ಅವರ ವಿಚಾರಗಳ ಆಚರಣೆ ಇಷ್ಟೊಂದು ಅರ್ಥಪೂರ್ಣವಾಗಿ ಜಾರಿಗೆ ಬಂದಿದೆ.

ನಮ್ಮ ರಾಜ್ಯದಲ್ಲಿ ದೊರಕುವ ಉಣ್ಣೆ ಬಹು ಒರಟಾಗಿದೆ. ಅದರಿಂದ ಉತ್ಪಾದಿಸಿದ ಕಂಬಳಿ ಕೂಡ ಹೇಗಿರುತ್ತದೆ? ನನಗೆ ತಿಳಿದ ಹಾಗೇ ರಾಜ್ಯದಲ್ಲಿ ಒಟ್ಟು 48 ಲಕ್ಷ ಕುರಿಗಳಿದ್ದರೂ, ಸುಮಾರು 60 ಲಕ್ಷ ಪೌಂಡು ಉಣ್ಣೆ ಉತ್ಪತ್ತಿಯಾಗುತ್ತಿದ್ದರೂ, ಕಂಬಳಿಯಾದಾಗ ಅದು ಒರಟಾಗಿದ್ದು ಹೊದ್ದುಕೊಂಡರೆ ಚುಚ್ಚುತ್ತದೆ. ಹೀಗಾಗಿ ಜನ ಫ್ಯಾಕ್ಟರಿಯ ರಗ್ಗುಗಳಿಗೆ ಮಾರು

ಹೋಗುತ್ತಾರೆ. ಆದರೂ ಕಾಫಿ, ಟೀ. ಎಸ್ಟೇಟುಗಳ ಕೂಲಿಗಾರನಿಗೆ ಮುಂಗಾರಿ ಮಳೆಯಲ್ಲಿ ಕೆಲಸ ಮಾಡುವಾಗ ಸಮಗಂಜಿ ಕಂಬಳಿಗಳೇ ಬೇಕು. ಅವುಗಳು ಪಾವಗಡ, ವೆಂಕಟಾಪುರ, ಸಿರಾ ತಾಲ್ಲೂಕಿನ ಸಂಘಗಳಿಂದ ತಯಾರಾಗುವ ಕಂಬಳಿಗಳು ಈ ಜನರಿಗೆ ಒದಗಿಸಲ್ಪಡುತ್ತವೆ. ಈ ಕಂಬಳಿಗಳು ಚಳಿಗಾಲದಲ್ಲಿ ಬೆಚ್ಚನೆ ಹೊದಿಕೆಯಾಗುವುದರಲ್ಲಿ ಸಂಶಯವಿಲ್ಲ. ನಮ್ಮ ಈ ಗೃಹ ಕೈಗಾರಿಕೆಗೆ ಒಂದಿಷ್ಟು ಸಂಸ್ಕಾರ ಮಾಡಿದರೆ ಬೃಹತ್ ಉದ್ಯಮಿಗಳ ಜೊತೆಗೆ ಹಳ್ಳಿಗರನ್ನು ಸ್ಪರ್ಧೆಗೆ ಇಳಿಸಬಹುದು. ಈ ಕಾರಣದಿಂದಲೇ ನನ್ನಂತಹ ಸಹ ಮನಸ್ಸಿನ ಮಿತ್ರರು ಸರ್ಕಾರದ ಮೇಲೆ ಒತ್ತಡ ತಂದು ಕುರಿ ಅಭಿವೃದ್ಧಿ ಮಂಡಲಿ ಸ್ಥಾಪಿಸಿದರು. ಅಧ್ಯಕ್ಷನಾಗಿ ಬಿಟ್ಟರೆ ಏನೋ ಸಾಧಿಸಿ ಬಿಡುತ್ತೇನೆಂಬ ಹುಚ್ಚು ಹಂಬಲ ನನಗೂ ಇತ್ತು. ಅದು ಇಳಿಯಿತಲ್ಲ. ನಮ್ಮ ಆಧುನಿಕ ಕಾಲದಲ್ಲಿ ನಾವು ಎಲ್ಲ ತಾತ್ಕಾಲಿಕ ಪ್ರಯೋಜನದ ಮೇಲೆ ಮಾಡುತ್ತೇವೆ. ಇದನ್ನು ಬಿಟ್ಟು ದೇಶದ ಅಭಿವೃದ್ಧಿಗೆ ಗಮನಕೊಟ್ಟದ್ದೆ ಆದರೆ ಇಂತಹ ಜನಾವಶ್ಯಕವಾದ ಯೋಜನೆಗಳು ಅಭಿವೃದ್ಧಿಯಾಗುತ್ತಿರಲಿಲ್ಲವೆ? ನಮ್ಮ ಉನ್ನತಾಧಿಕಾರಿಗಳು, ರಾಜಕಾರಣಿಗಳು, ಬಹು ಅಂತಸ್ತಿನ ಕಟ್ಟಡದಲ್ಲಿ ಕುಳಿತು ಯೋಚಿಸತೊಡಗಿದರೆ ಪ್ರಯೋಜನವೇನು? ಎಷ್ಟೇ ಚಿಂತಕರ ಚಾವುಡಿಗಳಿದ್ದಾಗ್ಯೂ ಬಡ ಗ್ರಾಮೀಣ ಕಾರ್ಮಿಕರಿಗೆ ದೊರೆತ ಸೌಭಾಗ್ಯವಾದರೂ ಏನು? ನಮ್ಮಂತಹ ಮುದಿಯರು ಅಳಲನ್ನು ಹೀಗೇ ಆಡಿ ತೊಡಿಕೊಳ್ಳಬೇಕೇನೊ - ದೇವರೇ ಬಲ್ಲ. ಇಷ್ಟಾದರೂ ನಾನು ಸುಮ್ಮನೆ ಕೂರಲಿಲ್ಲ. ಊದೋ ಶಂಖ ಊದಿಬಿಡೋಣ ಎಂದು ಹೋದ ಕಡೆಯಲ್ಲೆಲ್ಲಾ ಈ ಭಜನೆ ಮಾಡ್ತಾನೆ ಇದ್ದೆ. ಕೈಗಾರಿಕೆ ಇಲಾಖೆಯ ಅಡಿಷನಲ್ ಡೈರೆಕ್ಟರ್ ಹನುಮಯ್ಯನವರಿಗೆ ದೆಹಲಿಯಿಂದ ಒಂದು ಪತ್ರ ಬಂತು. ಅಡಿಷನಲ್ ಡೆವಲಪ್‌ಮೆಂಟ್ ಕಮಿಷನರ್ ಶಂಕರ್‌ರವರು ರಾಜ್ಯದ ಉಣ್ಣೆ ಕೈಮಗ್ಗದ ಉದ್ಯಮದ ಅಭಿವೃದ್ಧಿ ಬಗ್ಗೆ ಒಂದು ಸಭೆ ಕರೆದಿರುವುದಾಗಿಯೂ ನಾನು ಬಂದು ಸಲಹೆ-ಸೂಚನೆ ಕೊಡಬೇಕೆಂದೂ ಕೇಳಿದ್ದರು. ಅವರು ನನಗೆ ಆ ಪತ್ರನ ರವಾನಿಸಿದರು, ರಾತ್ರಿ ಕಂಡ ನಿಧಿ ಬೆಳಗ್ಗೆ ಮನೆ ಬಾಗಿಲಿಗೆ ಬಂದರೆ ಯಾರು ತಾನೇ ಬಿಡ್ತಾರೆ, ಅಂಕಿ-ಅಂಶಗಳ ಜೊತೆ 15-12-1980ರಂದು ದೆಹಲಿಗೆ ಓಡಿದೆ. ಪಂಜಾಬು, ಹಿಮಾಚಲ ಪ್ರದೇಶದ ಜನ ಹೇಗೆ ಕೈಚಾಲಿತ ಮೆಷಿನ್‌ಗಳ ಮೂಲಕ, ಷಟಲ್ ಮಗ್ಗಗಳ ವತಿಯಿಂದ ಅತ್ಯುತ್ತಮ ಕಂಬಳಿ ತಯಾರಿಸುತ್ತಾರೆಂಬುದನ್ನು ಅಂಕಿ-ಅಂಶಗಳ ಜೊತೆ ವಿವರಿಸಿದೆ. ಈ ಕೈಕಸುಬಿಗೆ ಯಥೇಚ್ಛವಾದ ಹಣ ಹಾಗೂ ಹಸನಾದ ಕಚ್ಚಾಮಾಲು ಉಣ್ಣೆ ಒದಗಿಸಿದರೆ, ಕರ್ನಾಟಕದಲ್ಲೂ ಪ್ರಗತಿ

ಕಾಣಬಹುದೆಂದು ಪ್ರಾರ್ಥಿಸಿಕೊಂಡೆ, ಮಾರನೆಯ ದಿನ ರಾಜ್ಯ ಸಭಾಸದಸ್ಯರಾದ ಬಸವರಾಜು ಅವರನ್ನು ಕಂಡು ನಮ್ಮ ಮಾತುಕತೆ ವಿವರ ಒದಗಿಸಿ, ಮುಂದೆ ಮಂತ್ರಿಗಳ ಮಟ್ಟದಲ್ಲಿ ಈ ವಿಷಯ ಚರ್ಚಿಸುವಂತೆ ಕೇಳಿಕೊಂಡೆ. ಒಟ್ಟಾರೆ ಎದೆಯಾಳದಲ್ಲಿ ಹುದುಗಿದ್ದ ಭಾವನೆಗಳನ್ನು ತೋಡಿಕೊಳ್ಳಲು ಅವಕಾಶ ಸಿಕ್ಕಿತ್ತಲ್ಲ ಅದೇ ಸಮಾಧಾನ. ಪ್ರಾಯಶಃ ಬಸವರಾಜು ಅವರಿಗೂ ಇದು ತಲೆ ಹೊಕ್ಕಿರಬೇಕು. ನಮ್ಮ ಬೇಡಿಕೆಯ ಬೆನ್ನು ಹತ್ತಿದರು. 1972ರಲ್ಲಿ ದೆಹಲಿಯಿಂದ ಇದಕ್ಕಾಗಿಯೇ ರಾಜ್ಯಸಭೆಯ ''ಪಿಟಿಷನ್ ಕಮಿಟಿ'' ಹತ್ತು ಜನರ ಸದಸ್ಯರೊಡನೆ ಬೆಂಗಳೂರಿಗೆ ಪ್ರಯಾಣ ಬೆಳೆಸಿತು. ವಿಧಾನಸೌಧ ಸಭಾಂಗಣದಲ್ಲಿ ಕೈಗಾರಿಕೆ ಇಲಾಖೆಯ ನಿರ್ದೇಶಕರು, ಸಹಕಾರ ಇಲಾಖೆಯ ಅಧಿಕಾರಿಗಳೊಡನೆ, ನಾನು ಕೂಡ 7-9-1982ರ ಬೆಳಿಗ್ಗೆ ಸಾಕ್ಷ್ಯ ನುಡಿದೆ. ಹತ್ತಿ, ರೇಷ್ಮೆಗಳಿಗೆ ಹೋಲಿಸಿದರೆ ಉಣ್ಣೆಗೆ ಆಗಿರುವ ಅನ್ಯಾಯ ದೊಡ್ಡದು. ತಲತಲಾಂತರದಿಂದ ನೇಕಾರರು ಪಡುತ್ತಿರುವ ಬವಣೆ, ಈಗ ಅವನ ದಿನವಹೀ ಆದಾಯ ಕೇವಲ 4 ರೂಗಳು, ಮುಂತಾದ ಹತ್ತಾರು ಅಂಶಗಳನ್ನು ಅವರಿಗೆ ತಿಳಿಸಿದೆ. ಸಮಿತಿ ಪಿಟ್ ಮಗ್ಗದಿಂದ ಕಂಬಳಿ ಮಾಡುವುದನ್ನು ನೋಡಲು ಚಿಕ್ಕನಾಯಕನಹಳ್ಳಿ ಮುಂತಾದ ಕಡೆ ಪ್ರವಾಸ ಹೊರಟಿತು. ಇದಕ್ಕೆ ಮೊದಲು 23-1-82ರಲ್ಲಿ ಮಗ್ಗಗಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಸುಬ್ರಹ್ಮಣ್ಯನೊಂದಿಗೆ ಚರ್ಚೆ ನಡೆಸಿದೆ. ಆನೇಕಲ್, ಮಾಯಸಂದ್ರ, ಉಣ್ಣೆ ನೇಕಾರರ ಸಂಘದ ಆಶ್ರಯದಲ್ಲಿ ನಡೆಯುವ ಕೈಮಗ್ಗಗಳ ಕಾರ್ಯವನ್ನು ವೀಕ್ಷಿಸಿದರು. ಇದರ ಜೊತೆಗೆ ದೆಹಲಿ ಕಮಿಷನರ್ ಕಛೇರಿಯಿಂದ ಮೊಕ್ತೇಸ್‌ರಾದ ರಾಮಕೃಷ್ಣ ಎಂಬುವರು ಸಮಾಲೋಚಿಸಿದ್ದರು. ಇವೆಲ್ಲದರ ಪರಿಣಾಮವೆಂದರೆ ಈಗಿರುವ ಮಗ್ಗಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ನಯವಾದ ಮಿಲ್‌ದಾರದಿಂದ ಮೃದುವಾದ ಒಳ್ಳೊಳ್ಳೆ ಸನಗೂಗಳನ್ನು ಷಟಲ್ ಮಗ್ಗದಿಂದ ತಯಾರಿಸುವ ಬಗ್ಗೆ ಪ್ರಾಥಮಿಕ ಸಂಘಗಳ ಅಭಿಪ್ರಾಯ ಕೇಳುವಂತೆ ಸೂಚಿಸಿದರು. ಅಂತೂ ಜೀವ ಬಂತಲ್ಲ ಎಂದುಕೊಂಡು 21-1-1983ರಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಸಂಘದ ವಿಶೇಷ ಸಭೆ ಕರೆದೆ. ನಮ್ಮ ಗೃಹ ಕೈಗಾರಿಕೆಗೆ ಒಂದಿಷ್ಟು ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಚರ್ಚಿಸಿ ಸರ್ವಾನುಮತದ ಒಪ್ಪಿಗೆ ಪಡೆದೆ. ಮತ್ತೊಮ್ಮೆ ಕೇಂದ್ರ ಸರ್ಕಾರದ ಉಪನಿರ್ದೇಶಕರೊಂದಿಗೂ ರಾಜ್ಯ ಕೈಗಾರಿಕಾ ಕಮಿಷನರ್ ವಿಶ್ವನಾಥ ಅವರೊಂದಿಗೂ ಚರ್ಚೆ ನಡೆಸಲಾಯಿತು. ಒಟ್ಟಾರೆ, ಸರ್ಕಾರ ಕಂಬಳಿ ಕೈಗಾರಿಕೆಯನ್ನು ಆಧುನಿಕರಿಸಲು ಒಂದೂವರೇ ಕೋಟಿ ರೂ.ಗಳ ವೆಚ್ಚದಲ್ಲಿ ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು

ಚಿತ್ರದುರ್ಗದಲ್ಲಿ ಸ್ಥಾಪಿಸಲು ಒಪ್ಪಿತು. ಅಲ್ಲಿ ಮುಂದೆ ಆಫೀಸ್, ವರ್ಕ್‌ಷಡ್, ಷಟಲ್ ಮಗ್ಗಗಳು, ಹಾಗೂ ಇತರ ಸಲಕರಣೆಗಳೊಂದಿಗೆ ಕಾರ್ಯಾರಂಭ ಮಾಡಿಸಿದೆ. ಈ ಆಧುನೀಕರಣದ ಕೆಲಸ ತುಮಕೂರು, ಧಾರವಾಡ ಜಿಲ್ಲೆಯ ಆಯ್ದ ಸ್ಥಳಗಳಲ್ಲಿ ನಡೆಯುವ ವ್ಯವಸ್ಥೆಯಾಯಿತು. ಇದರ ಮೇಲ್ವಿಚಾರಣೆಗೆ ಕೇಂದ್ರಸರ್ಕಾರದ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದ ರಾಮಸ್ವಾಮಿ ಅವರನ್ನು ನೇಮಿಸುವಂತೆ ಸರ್ಕಾರವನ್ನು ಪ್ರಾರ್ಥಿಸಿದೆ. ಕೇವಲ ಕಣ್ಣುಮಿಟಕಿಸುವುದರಲ್ಲಿ ಈ ಉದ್ಯಮ ಅತ್ಯಾಧುನಿಕವಾಗುತ್ತದೆಂಬುದಲ್ಲ. ನೇಕಾರರು ಸರ್ಕಾರದೊಡನೆ ಸಹಕರಿಸಬೇಕು. ಹೊಸತನ್ನು ರೂಢಿಸಿಕೊಳ್ಳುವ ದಿಟ್ಟ ಮನಸ್ಸಿನಿಂದ ಅವರೊಡನೆ ದುಡಿಯಬೇಕು. ಸರ್ಕಾರ ಕೂಡ ಬಂಡವಾಳ ಷಾಹಿಗಳ ಕೈಗೊಂಬೆಯಾಗಿ ನಮ್ಮ ಕೂಗಾಟಕ್ಕೆ ಈ ನಾಟಕ ಆಡುವುದನ್ನು ಬಿಟ್ಟು-ರಾಷ್ಟ್ರದ ಪ್ರಚಲಿತ ಸಮಸ್ಯೆಯನ್ನು ಬಗೆಹರಿಸಲು ಇದನ್ನು ಸಾಧನವನ್ನಾಗಿ ಮಾಡಿಕೊಳ್ಳಬೇಕು. ಆಧುನಿಕ ರಾಷ್ಟ್ರಗಳಲ್ಲಿ ಸಂಶೋಧನಾ ವಿಭಾಗವೇ ಅದರ ಹೆಚ್ಚಿನ ಬಂಡವಾಳವನ್ನು ಅಪೇಕ್ಷಿಸುತ್ತದೆ. ಉದಾಹರಣೆಗೆ ಮುದ್ರಣಕಲೆಯನ್ನೇ ತೆಗೆದುಕೊಳ್ಳಿ. ಇದರಲ್ಲಿನ ಇತ್ತೀಚಿನ ಆಧುನಿಕತೆ ಎಂತಹವರನ್ನಾದರೂ ಮೂಕರನ್ನಾಗಿಸುವುದು. ಮೊದಲಿಗೆ ಎಣ್ಣೆ ಉತ್ಪಾದನೆಯ ಕಚ್ಚಾ ಮಾಲು ಮೂರು-ನಾಲ್ಕು ಮಾತ್ರವಿತ್ತು. ಆದರೆ ಈಗ ತೌಡಿನಿಂದ ಕೂಡ ಎಣ್ಣೆ ತೆಗೆಯಬಲ್ಲರೆಂದು ಕೇಳಿದ್ದೇನೆ. ನಮ್ಮ ಜನಗಳ ಉದ್ಯಮ ಅವರ ತಾತ ಮುತ್ತಾತರಿಂದ ಹೇಗೆ ನಡೆಯುತ್ತಿತ್ತೋ ಹಾಗೆ ನಡೆಯುತ್ತಿದೆ. ಅದು ನಿಜ ಅನ್ನಿ. ಏನಾದರೂ ಇದು ರಾಷ್ಟ್ರ ನಿರ್ಮಾಪಕರೆನಿಸಿಕೊಂಡವರ ಮನೆತನದ ಕಸುಬೇ? ಯಾರೋ ಕುರಿ ಕಾಯುವವರ ಹೊಟ್ಟೆ ಪಾಡಿನ ಉದ್ಯೋಗ, ದೇಶದ ನಾಯಕ ಶಿರೋಮಣಿಗಳು ತಲೆಕೆಡಿಸಿಕೊಳ್ಳಬೇಕಾದ ಪ್ರಮೇಯವೇನು? ಬಡತನ ಯಾವುದೇ ರಾಷ್ಟ್ರದ ಗುತ್ತಿಗೆಯಲ್ಲ. ಇಸ್ರೇಲ್‌ನಂತಹ ರಾಷ್ಟ್ರದಲ್ಲಿ ನೀರು ಇಲ್ಲದಿದ್ದರೂ ಹೇಗೆ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು? ನಮ್ಮ ಯೋಜನೆಯ ನಿರ್ಮಾಪಕರು, ಸರ್ಕಾರದ ಚಿಂತಕರ ಚಾವುಡಿಯ ಮಹೋನ್ನತಿಯ ಪಂಡಿತರು ಒಂದಿಷ್ಟು ಕಣ್ಣು ತೆರೆದು ನೋಡಿದರೆ ನಮ್ಮಂತಹ ನೂರಾರು ಹಳ್ಳಿಗರು ಬದುಕಿಕೊಳ್ಳುತ್ತಾರೆ. ಇಲ್ಲದೆ ಹೋದರೆ ಇವರ ಹೆಣದ ಮೇಲೆ 21ನೆಯ ಶತಮಾನಕ್ಕೆ ಹೆಜ್ಜೆ ಹಾಕಬೇಕಷ್ಟೆ.

ಎಸ್.ವಿ.ಪರಮೇಶ್ವರಭಟ್ಟರು ಒಂದೆಡೆ 'ದಿನದಿನದ ಲೋಕಾನುಭವದೊಳೆದೆಯನು ತುಂಬಿ ಜೀವನವದಗೊಳಿಸಿ ದೀಪ ಹಚ್ಚು'' ಎನ್ನುತ್ತಾರೆ. ಈ ಉಣ್ಣೇನೇಕಾರರ ಸಂಘಕ್ಕೆ ಸೇರಿದ ಮೇಲೆ ನನಗಾದ ಅನುಭವ ಅಷ್ಟಿಷ್ಟಲ್ಲ, ಸರ್ಕಾರದ ವತಿಯಿಂದ ಕೆಲಸ ಮಾಡಿಸಬೇಕಾದರೆ ಮಂತ್ರಿಗಳ ಮರ್ಜಿ, ಅಧಿಕಾರಿಗಳ ಕೃಪೆ ಪಡೆಯಬೇಕಾಗಿತ್ತು. ಇವೆರಡು ಸಾಮಾನ್ಯವಾಗಿ ಕಷ್ಟದ ಕೆಲಸವೇ, ಆದರೂ ಸಾಧಿಸುವ ಬಯಕೆಯಿಂದ ಇದಕ್ಕೆ ಕೈಹಾಕಿದೆ. ನಮ್ಮ ಕೇಂದ್ರ ಸಂಘದ ಹಳೆಯ ಸರ್ಕಾರದ ಸಾಲಗಳು ಸುಮಾರು ೧೦ ಲಕ್ಷ ರೂ.ಗಳಾಗುತ್ತಿತ್ತು. ಈ ಸಾರಿ ಅಧ್ಯಕ್ಷನಾದ ಮೇಲೆ ಇದನ್ನು ಷೇರು ಹಣವನ್ನಾಗಿ ಪರಿವರ್ತಿಸಲು ಯೋಚಿಸಿದೆ. ಈ ಮೊಬಲಗಿಗೆ ಬಡ್ಡಿಯೇ ವರ್ಷಾವರ್ಷ ಏರುತ್ತಾ ಹೋಗಿತ್ತು. ಹತ್ತಿ ಕೇಂದ್ರ ಸಂಘಕ್ಕೆ ಈಗಾಗಲೇ ಈ ಸೌಲಭ್ಯ ಒದಗಿಸಿಕೊಡಲಾಗಿತ್ತು. 1981ರಲ್ಲಿ ಎಚ್.ಸಿ.ಶ್ರೀಕಂಠಯ್ಯ ಅವರು ಸಹಕಾರ ಇಲಾಖಾ ಮಂತ್ರಿಗಳಾದ ಮೇಲೆ ಅವರಿಗೆ ಗಂಟುಬಿದ್ದೆ. ಶ್ರೀಕಂಠಯ್ಯನವರ ಪರಿಚಯ ನನಗೆ ತುಂಬಾ ಹಳೆಯದು. ಮೈಸೂರಿನಲ್ಲಿ ಡಿವಿಜನಲ್ ಕಮಿಷನರ್ ಅವರಿಗೆ ಸಹಾಯಕನಾಗಿದ್ದಾಗಲೇ ಅವರ ಬಳಕೆ ಇತ್ತು. ಆಗಲೇ ಅವರು ಕಛೇರಿಗೆ ಬಂದು ಜನೋಪಯೋಗಿ ಕಾರ್ಯಗಳನ್ನು ತಮ್ಮ ಕ್ಷೇತ್ರದಲ್ಲಿ ಮಾಡಿಸುತ್ತಿದ್ದರು. ಒಂದು ಸಾರಿ ವಿಶ್ವಾಸ ಮೂಡಿದ ಮೇಲೆ ಸುಲಭವಾಗಿ ಮರೆಯುವವರಲ್ಲ. ಸಂಘಕ್ಕೆ ನನ್ನ ದುಡಿಮೆ ನೋಡಿ, ಮಾಡಿಸಿಕೊಡೋಣ ಎಂದರು. ಬೆಳಿಗ್ಗೆ ಸಂಜೆ ಅವರ ಮನೆ ಸುತ್ತಿದೆ. ಒಂದು ಸಾರಿ ಅವರು ತಮ್ಮ ಛೇಂಬರ್‌ನಲ್ಲಿ ಸಹಕಾರ ಇಲಾಖೆ ಅಧಿಕಾರಿ ಹಾಗೂ ಹಣಕಾಸಿನ ಅಧಿಕಾರಿಗಳ ಸಭೆ ಕರೆದು ''ನೋಡಿ ಮಲ್ಲಪ್ಪನವರು ಈ ಕಾರ್ಯಕ್ಕಾಗಿ ನನ್ನ ಮನೆ ಹಾಗೂ ಕಛೇರಿಗೆ ಸುತ್ತುತ್ತಿರುವುದನ್ನು ನೋಡಿದರೆ, ಅವರ ಕಾಲೆಲ್ಲ ಸವೆದು ಹೋಗಿರಬೇಕು. ಹೋಗಲಿ ಈ ಕೆಲಸ ಮಾಡಿಬಿಡೋಣ'' ಎಂದರು. ಸಭೆ ಅಂತೂ ಹೇಗೋ ಸಾಲವನ್ನು ಷೇರು ಹಣವಾಗಿ ಪರಿವರ್ತಿಸಲು ತಾಂತ್ರಿಕವಾಗಿ ಒಪ್ಪಿತು. ಈ ತನಕದ ಬಡ್ಡಿಯನ್ನು ಸಂಘ ಹಿಂದಿರುಗಿಸಲು ಒಪ್ಪಿತು. ಇನ್ಮುಂದೆ ನೀವು ಕೆಲಸ ಮಾಡಿಸಿಕೊಳ್ಳಿ ಎಂದು ಸೆಕ್ರೆಟರಿ ಹಾಗೂ ಮ್ಯಾನೇಜರಿಗೆ ಹೇಳಿದೆ. ಸಚಿವಾಲಯವನ್ನು ಒಲಿಸಿಕೊಳ್ಳಲು ಇಂತಹವರಿಗೆ ಸಾಧ್ಯವೇ? ನಾನೇ ಮೂರ್‍ನಾಲ್ಕು ಭಾರಿ ವಿಧಾನಸೌಧದ ಹಣಕಾಸು ಖಾತೆ ಅನುಮತಿ ಕೊಟ್ಟು ಸರ್ಕಾರಿ ಆಜ್ಞೆ ಹೊರಡಿಸಲು ಅನುಕೂಲ ಮಾಡಿದೆ. ಅಷ್ಟರಲ್ಲಿ ನಾನು ಸಂಘದಿಂದ ನಿರ್ಗಮಿಸಿದೆ.

ನಮ್ಮ ಸಂಘಕ್ಕೆ ಬೆಂಗಳೂರು ನಗರ ಮಧ್ಯದಲ್ಲಿ ಮಳಿಗೆ ತೆರೆಯಬೇಕೆಂಬ ಬಯಕೆ ಮೊದಲಿನಿಂದ ಇತ್ತು. ಗಾಂಧಿನಗರದ ಕನಕ ವೃತ್ತದಲ್ಲಿ ನಮ್ಮ ಕುರುಬರ. ಸಂಘ ಇದೆಯಷ್ಟೇ. ನಮ್ಮ ಮಾರಾಟಮಳಿಗೆಗೆ ಜಾಗ ಕೊಡಿಯೆಂದು ಪ್ರಾರ್ಥಿಸಿದರೆ ಒಳಗಡೆಯ ಮೂಲೆಯೊಂದರ ಕೊಠಡಿಯೊಂದನ್ನು ಕೊಟ್ಟರು. ಅದಕ್ಕೆ ಬದಲು ಹಾಲಿ ಕಾಳಿದಾಸ ಬ್ಯಾಂಕಿನ ಕೆಳಗಿನ ಮುಂಭಾಗದ ಖಾಲಿ ಜಾಗದಲ್ಲಿ ಕೊಠಡಿ ಕಟ್ಟಿಸಿ ಕೊಡಲು ಕೇಳಲಾಯ್ತು. ಹಿರಿಯರಾದ ಕೊಲ್ಲೂರು ಮಲ್ಲಪ್ಪನವರು ಕುರುಬರ ಸಂಘದ ಅಧ್ಯಕ್ಷ ಎಸ್.ನಂಜುಂಡಯ್ಯ ಮತ್ತು ಸೆಕ್ರೆಟರಿ ಮುನಿಸಂಜೀವಯ್ಯನವರಿಗೆ ಕೇಂದ್ರ ಉಣ್ಣೆ ಸಂಘಕ್ಕೆ ಮೇಲ್ಕಂಡ ಜಾಗಕೊಡುವ ಬಗ್ಗೆ ತಿಳಿಸಿದರು. ನಗರ ಸಭೆಯವರಿಗೆ ಲೈಸನ್ಸ್‌ವಗೈರೆ ಕೊಡುವ ಬಗ್ಗೆ ಪ್ಲಾನ್ ತಯಾರಿಸಿ ಅರ್ಜಿ ಸಹ ಹಾಕಲಾಯ್ತು. ನಾನು ಸಂಘದಿಂದ ಹೊರಬಿದ್ದಾಗ ವಿಚಾರ ಅಲ್ಲಿಗೆ ನಿಂತಿತ್ತು.

ಸರ್ಕಾರದವರು ಚಳಿಗಾಲದಲ್ಲಿ 30 ದಿನಗಳ ಕಾಲ ಕಂಬಳಿ ಮಾರಾಟದ ಮೇಲೆ ಶೇಕಡ 30 ರಷ್ಟು ರಿಬೇಟು ಕೊಡ್ತಾರೆ. ಇದನ್ನ ಬೆಂಗಳೂರು ಬಿಟ್ಟು ಬೇರೆ ಸ್ಥಳದಲ್ಲಿ ಜನ ಹೇಗೆ ಉಪಯೋಗಿಸಿಕೊಳ್ಳುತ್ತಾರೆಂದು ಯೋಚಿಸಿ ತುಮಕೂರು ಸಿದ್ದರಾಮಣ್ಣ ಟ್ರಸ್ಟ್‌ನವರ ಮಳಿಗೆಯಲ್ಲಿ ತಾತ್ಕಾಲಿಕ ಡಿಪೋವೊಂದನ್ನು ತೆರೆದೆ. ಕೋಲಾರ, ಬಾಗಲಕೋಟೆ ಮುಂತಾದ ಕಡೆಯಿಂದ ಯಥೇಚ್ಛವಾದ ಮಾಲುಗಳು ಬಂದವು. ಸುಮಾರು ಎರಡು ಲಕ್ಷ ರೂಗಳಿಗೂ ಹೆಚ್ಚು ಕಂಬಳಿ ಮಾರಾಟವಾದ ಸಂಗತಿ ತಿಳಿದೆ. ನನಗಾದ ಆನಂದ ಅಷ್ಟಿಷ್ಟಲ್ಲ, ಜನವರಿ ತಿಂಗಳ ಆ ದಿನದಲ್ಲಿ ಶಾಲು-ರಗ್ಗುಗಳಂತೂ ಬಿಸಿ ದೋಸೆಗಿಂತ ವೇಗದಲ್ಲಿ ಬಿಕರಿಯಾದವು. ಈ ಕಾಲದಲ್ಲಿ ಗೋವಾದಲ್ಲೂ ಮಾರಾಟ ಮಳಿಗೆ ಪ್ರಾರಂಭಿಸಲಾಯ್ತು. ಮುಂದೆ 29-10-82ರಲ್ಲಿ ಕುಟುಂಬ ಸಮೇತ ಊಟಿ ಮುಂತಾದ ಕಡೆ ಪ್ರವಾಸ ಹೊರಟಿದ್ದೆ. ವೃದ್ಧಾಪ್ಯದಲ್ಲಿ ಹನಿಮೂನ್‌ಗಾಗಿ ಹೊರಟಿರಲಿಲ್ಲ. ಕಾಲನ ಮನೆಯ ಬಾಗಿಲ ಬಳಿ ನಿಂತಿದ್ದ ಹೆಂಡತಿಯ ಗೆಲುವಿಗೆ ಈ ಪ್ರವಾಸ ಕಾರಣವಾಗಬಹುದೇನೋ ಎಂಬ ಆಸೆಯಿಂದ ಅತ್ತ ಹೊರಟಿದ್ದೆವು, ಊಟಿಯಲ್ಲಿ ಮೂಲ್ಚಂದ್ ಎಂಬ ಕಂಬಳಿ ವ್ಯಾಪಾರಿಗೆ ನನ್ನ ಕುಲಗೋತ್ರಗಳೆಲ್ಲಾ ಹೇಗೋ ತಿಳಿದು ಬಿಟ್ಟಿತ್ತು. ನಾವು ಬೇಡ ಬೇಡವೆಂದರೂ ಊಟದ ವ್ಯವಸ್ಥೆಯ ಹೊಣೆ ಹೊತ್ತ. ನಾನು ಇಲ್ಲಿ ಪ್ರತಿವರ್ಷ ಮಾರಾಟವಾಗುವ ಕಂಬಳಿ ಎಷ್ಟೆಂದು ಗಿಣಿಗೆ ಕೇಳಿದಂತೆ ಕೇಳಿದೆ, ಜಪ್ಪಯ್ಯ ಎಂದರೂ ಗುಟ್ಟು ಬಿಡ, ಆದರೆ ನಾನು ಕಿಲಾಡಿ. ಹೇಗೋ ತಿಳಿದುಕೊಂಡೆ.

ವರ್ಷಕ್ಕೆ ಸುಮಾರು ನಾಲ್ಕೈದು ಲಕ್ಷ ರೂಪಾಯಿ ವ್ಯಾಪಾರ ಆಗುತ್ತೆ. ಎಂಟು-ಹತ್ತು-ಸಾವಿರ ರೂಪಾಯಿ ಕಮಿಷನ್ ಈ ಮಧ್ಯವರ್ತಿಯವರಿಗೆ ನಮ್ಮ ಉಣ್ಣೆನೇಕಾರರ ಕಷ್ಟದ ದುಡಿಮೆ ಏಕೆ ಹೋಗಬೇಕು. ನಾವೇ ಒಂದು ಮಾರಾಟ, ಮಳಿಗೆ ತೆರೆದರೆ ಹೇಗೆ ಎಂದು ನಿರ್ಧರಿಸಿದೆ. ಉಂಡ ಮನೆಗೆ ಎರಡು ಬಗಿಬಾರದೆಂದು ಹಿರೇರು ಹೇಳುತ್ತಾರೆ. ಆದರೆ ನನಗೆ ಮಾತ್ರ ಸಂಸ್ಥೆ-ನೇಕಾರರ ಸಂಘವಲ್ಲವೆ? ಊಟಿಯಲ್ಲಿ ಮಳಿಗೆ ತೆಗೆಯುವ ನನ್ನ ಬಯಕೆ, ಸಾಧ್ಯವಾಗಲಿಲ್ಲ. ಅದು ಕೈಗೂಡುವ ಮೊದಲೇ ನಾನು ಕೇಂದ್ರಸಂಘದಿಂದ ಹೊರಬಂದೆ. ಆ ತನಕ ನಷ್ಟದಲ್ಲಿದ್ದ ಕೇಂದ್ರ ಸಂಘಕ್ಕೆ ನಿವ್ವಳಲಾಭ 1981-82ರಲ್ಲಿ 37,351-91 ಆಯಿತು. 1982-83ರಲ್ಲಿ 63,743-31 ಎಂದು ಆಯಾಯ ವರ್ಷದ ಆಡಿಟ್ ವರದಿ ಹೇಳುತ್ತದೆ. ಯಾವುದೇನೂ ನಷ್ಟವಾಗಿ ತಲೆ ಮೇಲೆ ಬೀಳೋದಿಲ್ಲ. ತ್ರಿವಿಕ್ರಮನಂತೆ ಹಿಡಿದ ಕೆಲಸ ಹಠದಿಂದ ಮಾಡಿದರೆ ಫಲ ಕಾಣೋದರಲ್ಲಿ ಸಂಶಯವಿಲ್ಲ.

ಸಾಮಾನ್ಯವಾಗಿ ಪಾವಗಡ ತಾಲ್ಲೂಕಿನಲ್ಲಿ ವೆಂಕಟಾಪುರ ವೈ.ಎನ್.ಹೊಸಕೋಟೆಗಳ ಉಣ್ಣೆನೇಕಾರರ ಸಹಕಾರ ಸಂಘಗಳು ಜಾಯಂಟು ಮತ್ತು ನೀಲರಖಂ ಕಂಬಳಿಗಳನ್ನು ತಯಾರಿಸುತ್ತಾರೆ. ಮಲೆನಾಡಿನಲ್ಲಿ ಇವಕ್ಕೆ ಬೇಡಿಕೆ ಇದೆ. ಪೆನುಗೊಂಡ, ಮಡಕಶಿರಾ, ಹಿಂದೂಪುರದ ಹಳ್ಳಿಗಳಲ್ಲೂ ಈ ತರಹದ ಕಂಬಳಿ ಉತ್ಪಾದನೆ ಮಾಡ್ತಾರೆ. ಈ ರಖಂ ಒಳ್ಳೆಯ ಗುಣಮಟ್ಟದ ಕಂಬಳಿಗಳ ಅವಶ್ಯಕತೆ ಕಂಡು ದಳ್ಳಾಳಿಗಳು ಬಲೆ ಬೀಸಿ ನೇಕಾರರಿಂದ ಮಾಲನ್ನು ಕೊಂಡು ತಮ್ಮ ಬೇಳೆ ಬೇಸಿಕೊಳ್ಳುತ್ತಿದ್ದರು. ಈ ಸಂಬಂಧವಾಗಿ ಚರ್ಚೆನಡೆಸಲು 10-9-78ರಲ್ಲಿ "ಕರ್ನಾಟಕ-ಆಂಧ್ರ ಅಂತರ ರಾಜ್ಯ ಕಂಬಳಿ ನೇಕಾರರ ಸಭೆಯನ್ನು" ಹಿಂದೂಪುರದಲ್ಲಿ ಕರೆದೆ. ಆಂದ್ರ ಪ್ರದೇಶದಿಂದ ಕೆಲವೊಂದು ಸಂಘಗಳ ನೇಕಾರರು ಬಂದಿದ್ದರು. ಎರಡು ರಾಜ್ಯಗಳ ಪರಸ್ಪರ ಸೌಹಾರ್ದದಿಂದ ಈ ಉದ್ಯಮ ಬೆಳವಣಿಗೆ ಕಾರ್ಯಕ್ರಮ ಹಾಕಿಕೊಳ್ಳಬಹುದೆಂದು ಸೂಚಿಸಿದೆ. ತಮ್ಮಲ್ಲಿ ಸಹಕಾರ ಸಂಘಗಳಿದ್ದಾಗ್ಯೂ ನೇಕಾರರೂ ಅದರ ಪ್ರಯೋಜನ ಪಡೆಯುತ್ತಿಲ್ಲವೆಂದು ಅವರು ಹೇಳಿದ್ದನ್ನು ನೋಡಿದರೆ ಅಲ್ಲಿ ಮಧ್ಯವರ್ತಿಗಳ ಕೈ ಎಷ್ಟೊಂದು ಮೇಲಿತ್ತೆಂದು ಊಹಿಸಬಹುದು. ಮತ್ತೊಮ್ಮೆ 2-6-83ರಲ್ಲಿ ಬೆಂಗಳೂರಿನಲ್ಲಿ ಈ ಸಭೆ ಕರೆದೆ. ಮಾತುಕತೆಗೆ ಒಂದಿಬ್ಬರು ಆಂದ್ರಪ್ರದೇಶದ ಪ್ರತಿನಿಧಿಗಳು ಮಾತ್ರ ಬಂದಿದ್ದರು. ಇದರಿಂದ ಪ್ರಯೋಜನವಿಲ್ಲವೆಂದು ನಮ್ಮ

ರಾಜ್ಯದ ಕಂಬಳಿ ಅತ್ತಿತ್ತ ಹೋಗದಂತೆ ಬಿಗಿ ಮಾಡಿದೆ. ದೇಶದಲ್ಲೆಲ್ಲಾ ಈ ಗೃಹಕೈಗಾರಿಕೆಯನ್ನು ಒಂದೆಡೆ ತಂದು ದುಡಿಮೆಗಾರರಿಗೆ ಮಾತ್ರ ಆದ ಫಲ ಕೊಡಬೇಕೆಂಬ ಆಸೆಯೇನೋ ನನ್ನದು, ಆದರೆ ಅದು ಆಗಬೇಕಲ್ಲ. ಹಿಮಾಲಯ ನೋಡಿದಾಗ ಅದು ನಮ್ಮೂರಿನಲ್ಲಿರಬೇಕೆನಿಸುವುದು ಸಹಜ. ಆದರೆ ಎತ್ತಿಕೊಂಡು ಬರುವ ತಾಕತ್ತು ಇರಬೇಕಲ್ಲ. ಆಸೆಗೇನು ಬೆಟ್ಟದಷ್ಟು ಇರುತ್ತದೆ. ಅದು ಕೈಗೂಡಬೇಕಲ್ಲ. ಇಂತಹ ಸೋಲುಗಳನ್ನು ಕಂಡಾಗೆಲ್ಲಾ ನಮ್ಮ ಶಕ್ತಿ ಪರಿಮಿತಿ ಅರಿವಾಗುತ್ತದೆ. ಸಾಧಿಸಬೇಕಾದ ಕೆಲಸದ ಅಗಾಧತೆ ಗೊತ್ತಾಗುತ್ತದೆ.

16-9-79ರಂದು ದಾವಣಗೆರೆಯಲ್ಲಿ ಸ್ಥಳೀಯ ಕುರುಬರ ಸಂಘದವರು ಉಣ್ಣೆನೇಕಾರರ ಸಮ್ಮೇಳನವೊಂದನ್ನು ವ್ಯವಸ್ಥೆಮಾಡಿದರು. ನಾನೂ ಹೋಗಿದ್ದೆ. ಭಾರಿ ಭಾರಿ ಮಾತುಕತೆ ನಡೆಯಿತು. ಹಳೆಯ ನಿರ್ಣಯಗಳನ್ನೆಲ್ಲಾ ಪರಿಷ್ಕರಿಸಿ ರೂಪುಕೊಟ್ಟವುಗಳೆಲ್ಲಾ ಯಾವ ಗಟಾರಕ್ಕೆ ಬಿದ್ದಿದೆಯೋ ತಿಳಿಯದು.

ನನ್ನ ಅಧಿಕಾರಿಸ್ಥಾನ ಕೆಲವೊಮ್ಮೆ ಇಕ್ಕಟ್ಟಿಗೆ ಸಿಲುಕಿಸುವುದುಂಟು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಕಾರ್ಯದರ್ಶಿಯಾಗಿದ್ದ ಟಿ.ರಂಗದಾಸಪ್ಪನವರು ಧಾರವಾಡ, ಬೆಳಗಾಂ ಕಡೆ ಸರ್ಕೀಟು ಹೋಗೋಣ ಬನ್ನಿ ಎಂದರು. ಉಪ್ಪಿನ ಬೆಟಗೇರಿಯ ಉಣ್ಣೆನೇಕಾರರ ಸಹಕಾರ ಸಂಘ ಅತ್ಯುತ್ತಮವಾದ ಕೆಲಸ ಮಾಡುತ್ತಿದೆ. ಉಪ್ಪಿನಬೆಟಗೇರಿಯ ಸುತ್ತಮುತ್ತಲಿನ ಸಾವಿರಾರು ಕುಟುಂಬಗಳು ಇದರಿಂದ ಜೀವನ ನಿರ್ವಹಿಸುತ್ತಾರೆ. ಇಲ್ಲಿ ಥಾನುಗಟ್ಟಲೆ ಒಳ್ಳೆಯ ಸೂಟ್ ಬಟ್ಟೆ ಇತ್ತು. ರಂಗದಾಸಪ್ಪನವರು ಒಂದು ಜೊತೆ ಸೂಟ್ ಬಟ್ಟೆ ಹರಿಸಿದರು. ಕಾರ್ಯದರ್ಶಿ ನನಗೊಂದು ಕೋಟ್ ಬಟ್ಟೆ ಕೊಟ್ಟರು. ಆತನನ್ನು ವರಚ್ಚಿಗೆ ಕರೆದು ಹಣ ಎಷ್ಟೆಂದು ಕೇಳಿದೆ, ಬಾಯಿ ಬಿಡಲಿಲ್ಲ. ಬೆಳಗಾಂಗೆ ಬಂದೆವು. ಕನಕ ಉಣ್ಣೆ ನೇಕಾರರ ಸಂಘ ನಡಸುತ್ತಿದ್ದ ಬ್ಯಾರಕ್ ಬ್ಲಾಂಕೆಟ್ ಟ್ರೈನಿಂಗ್ ಸೆಂಟರ್ ನೋಡಿದೆ. ಅದರ ಅಧ್ಯಕ್ಷ ಬೆಕ್ಕಿನಕೇರಿ ಸಹೃದಯರು. ಅವರಿಂದ ಮಜಭೂತಾದ ಆದರ-ಆತಿಥ್ಯಗಳು ನಡೆದವು. ಸಂಜೆ ಸಮಾರಂಭ ನಡೆಸಿ ನಮಗೆ ಉಣ್ಣೆ ರಗ್ಗುಗಳನ್ನು ಹೊದಿಸಿದರು. ನಿಮ್ಮ ಸತ್ಕಾರ ಬೇಡೆಂದು ಅನಾಗರೀಕವಾಗಿ ಅನ್ನಲು ಮನಸ್ಸಿಗೆ ಇರುಸು-ಮುರುಸ್ಸಾಗಿ ಸುಮ್ಮನೆ ಸಹಿಸಿಕೊಂಡೆ. ಬೆಂಗಳೂರಿಗೆ ಬಂದ ನಂತರ ಅಧ್ಯಕ್ಷ ಬೆಕ್ಕಿನಕೇರಿ ಅವರಿಗೆ ಪತ್ರ ಬರೆದೆ. ''ನಿಮ್ಮ ಸಂಘಕ್ಕೂ ನಮಗೂ ವ್ಯವಹಾರವಿದೆಯಲ್ಲವೆ? ಅಲ್ಲದೆ

ಬಡನೇಕಾರರ ಹಣದಲ್ಲಿ ನಾನೊಂದು ಉಡುಗೊರೆ ಪಡೆದರೆ ನನ್ನನ್ನು ಏನೆಂದುಕೊಳ್ಳಬೇಕು. ತಾವೇ ಯೋಚಿಸಿ, ನಾನು ಕಳುಹಿಸುತ್ತಿರುವ ರಗ್ಗಿನ ಬೆಲೆ ಈ 80/- ರೂ.ಗಳು ನಾನು ಪ್ರಾಮಾಣಿಕನೆಂದು ಪ್ರದರ್ಶಿಸಿಕೊಳ್ಳಲು ಅಲ್ಲ. ಮನಸ್ಸಿಗೆ ಆದ ಕೊರತೆಯನ್ನು ನೀಗಿಸಲು, ದಯಮಾಡಿ ಒಪ್ಪಿಕೊಳ್ಳಿ, ನಿಮ್ಮ ಆತಿಥ್ಯ ಮರೆತಿಲ್ಲ; ಅದಕ್ಕೆ ಕೃತಜ್ಞತೆಗಳು'' ಎಂದೆ. ಹಾಗೆಯೇ ಉಪ್ಪಿನ ಬೆಟಗೇರಿಯ ಡಿಪೋ ಕಾರ್ಯದರ್ಶಿಗೆ 35-00 ರೂಪಾಯಿ ಕೋಟು ಬಟ್ಟೆಗಾಗಿ ಎಂ.ಒ. ಕಳುಹಿಸಿದೆ. ಪ್ರಾಯಶಃ ನಮ್ಮನ್ನು ತಿದ್ದಿಕೊಳ್ಳುತ್ತಾ ಹೋಗಬೇಕು. ಕೊನೆಕೊನೆಗೇನಾದರೂ ಸರಿಯಾದ ಮಾರ್ಗಕ್ಕೆ ಬರುತ್ತೇವೇನೋ ಗೊತ್ತಿಲ್ಲ.

ಕೋಲಾರ ಜಿಲ್ಲೆ ರಾಜ್ಯದಲ್ಲೇ ಅತಿಯಾದ ಹಿಂದುಳಿದ ಪ್ರದೇಶ. ಮೊದಲಿಗೆ ಮೃದುವಾದ ಕಂಬಳಿಗೆ ಈ ಪ್ರದೇಶ ಪ್ರಖ್ಯಾತವಾಗಿತ್ತು. ಏಕೋ ಇತ್ತೀಚೆಗೆ ನಮ್ಮವರು ಕೂಲಿನಾಲಿ ಮಾಡುತ್ತ ಈ ಉದ್ಯಮಕ್ಕೆ ನಮಸ್ಕಾರ ಹಾಕುತ್ತಿದ್ದರು. ನಾನು ಇಲ್ಲಿದ್ದ ಉಣ್ಣೆ ಸಂಘಕ್ಕೆ ಜೀವಕೊಟ್ಟು ಷಟಲ್ ಮಗ್ಗಗಳ ಮೂಲಕ ನವುರಾದ ಕಂಬಳಿ ತಯಾರಿಸಬಹುದೆಂದು ನಿರ್ಧರಿಸಿದೆ. ಹಾಸುಗಂಬಳಿ, ರತ್ನ ಕಂಬಳಿ ಮತ್ತಿತರೆ ಮಾಲುಗಳನ್ನು ಉತ್ಪಾದಿಸಿದರೆ ಒಳ್ಳೆಯದೆಂದು ಆಲೋಚಿಸಿ ಅವರ ಆದಾಯ ಹೆಚ್ಚಿಸಿ ಸಂಘವನ್ನು ಪುನರುಜ್ಜೀವನಗೊಳಿಸಲು ವ್ಯವಸ್ಥೆಮಾಡಿದೆ. ಸರ್ಕಾರ ಹಾಗೂ ಖಾದಿ ಬೋರ್ಡಿನವರೂ ಸಹ ಸಾಕಷ್ಟು ಸಹಾಯ ಕೊಡುವುದಾಗಿ ಒಪ್ಪಿದ್ದರು. ಆದರೆ ಆರೆ ಹೊಟ್ಟೆಯಿಂದ ದುಡಿಯುತ್ತಿದ್ದ ಉಣ್ಣೆ ಕಸುಬುದಾರರು ಯಾರೂ ಈ ಕಡೆ ನೋಡಿಲಿಲ್ಲ. ನಾಲ್ಕಾರು ಬಂಡವಾಳಗಾರರು ನಾಜೋಕಾಗಿ ಕಂಬಲಿ ಮಾಡುವ ಈ ನೇಕಾರರಿಗೆ ಅಡ್ವಾನ್ಸ್ ಕೊಟ್ಟು ಇಲ್ಲಿದನ್ನೆಲ್ಲಾ ಬಾಚಿಕೊಳ್ಳುತ್ತಿದ್ದರು. 'ನೇಕಾರನ ಬೆನ್ನು ಬೆತ್ತಲೆ', ಎಂಬಂತೆ ಕಂಬಳಿ ನೇಯ್ಗೆಯ ಅವರು ಬಡವರಾಗುತ್ತಲೇ ಇದ್ದರೆ ಮಧ್ಯವರ್ತಿಗಳ ವ್ಯಾಪಾರ ಹೆಚ್ಚುತ್ತಲೇ ಇರುತ್ತಿದೆ. ಕೇಂದ್ರ ಸಂಘಕ್ಕೂ ಹಾಗೂ ಪ್ರಾಥಮಿಕ ಸಂಘಕ್ಕೂ ಉಪಯೋಗವಾಗದೆ, ನಮ್ಮ ಇಡೀ ಯೋಜನೆಯ ಮೂಲೋದ್ದೇಶವನ್ನೇ ಹಾಳುಗೆಡುವ ನಮ್ಮ ಅಜ್ಞಾನಿ ನೇಕಾರರಿಗೆ ಯಾರು ಬುದ್ಧಿ ಹೇಳಬೇಕೋ, ನನಗಂತೂ ಸಾಕಾಗಿ ಹೋಯ್ತು.

ಪಾವಗಡದ ಉಣ್ಣೆನೇಕಾರರ ಸಂಘದ ಕಾರ್ಯದರ್ಶಿ ಶ್ರೀನಿವಾಸ ಎಂಬುವವರು ಪಾಕಡಾ ಆಸಾಮಿ. ಅಲ್ಲಿನ ಉತ್ತಮ ಜಾಯಿಂಟ್ ಕಂಬಳಿಯನ್ನು

ಬೇರೆ ಕಡೆ ಕಳುಹಿಸುವ ಪ್ರಯತ್ನ ಮಾಡಿದ್ದ. ಇದಲ್ಲದೆ ನೇಕಾರರ ಮಾಲುಗಳಿಗೂ ಎರಡು-ಮೂರು ರೂಪಾಯಿ ಕಡಿಮೆ ಕೊಡೋದು, ಇಲ್ಲ ಅವರನ್ನು ವೃಥಾ ಅಲೆಸೋದು ಮುಂತಾದ ಚಿಲ್ಲರೆ ಕೆಲಸ ಮಾಡುತ್ತಿದ್ದ. ಒಂದು ಸಾರಿ 40-50 ಸಾವಿರ ಹಣಾನ ಅಧ್ಯಕ್ಷರ ಗಮನಕ್ಕೆ ಬಾರದೆ ಬೇರೆ ವ್ಯವಹಾರ ನಡೆಸಿದ್ದ. ಈತನನ್ನು ಇಲಾಖೆ ಸಸ್ಪೆಂಡ್ ಮಾಡಿದ್ದರೂ ಅವನ ಕೈಯಲ್ಲೇ ವ್ಯವಹಾರ ಮಾಡಿಸಿದರು. ಈತನ ಪ್ರತಾಪ ಇಷ್ಟಕ್ಕೆ ನಿಲ್ಲದೆ ''ಮದ್ರಾಸ್‌ಭವನ'' ದವರೊಡನೆ ಅಲಿಖಿತ ಒಪ್ಪಂದ ಮಾಡಿಕೊಂಡು ಮಾಲು ಕಳುಹಿಸುತ್ತಿದ್ದ. ಇದರಿಂದಾಗಿ ಕೆಲವು ನೇಕಾರರು ವೆಂಕಟಾಪುರ ಸಹಕಾರ ಸಂಘಕ್ಕೆ ಮಾಲು ಕಳುಹಿಸುತ್ತಿದ್ದರು. ಈ ಕಾಲದಲ್ಲಿ ಸಂಘದ ಅಧ್ಯಕ್ಷರಾಗಿದ್ದವರು. ಅಡ್ವೋಕೇಟರುಗಳಾದ ಬೀರಪ್ಪ ಮತ್ತು ನಾಗೇಂದ್ರಪ್ಪ. ಅವರನ್ನು ನಾನು ಕರೆಸಿ ನೀವುಗಳು ಇನ್ನೂ ಯುವಕರು, ಸಮಾಜ ಸೇವೆ ಮಾಡುವಾಗ ಈಗಲೇ ಕೈಕೆಸರು ಮಾಡಿಕೊಳ್ಳಬಾರದು; ಅಥವಾ ಅಂತಹವರ ಜೊತೆ ಸಹ ಇರಬಾರದು. ಆ ವ್ಯಕ್ತಿನ ತೆಗೆದು ಬಿಡಿ ಎಂದೆ. ಪ್ರಾಯಶಃ ಕೆಲವೊಮ್ಮೆ ಹತ್ತಿರದಲ್ಲಿರುವವರು ಅತಿ ಬಳಕೆಯ ಕಾರಣ ಅವರ ಯಾವುದೇ ಅಪರಾಧವೂ ಕಣ್ಣು ಕೋರೈಸುವುದಿಲ್ಲ. ಬೇಸತ್ತು ನಾವೇ ನೇರವಾಗಿ ನೇಕಾರರಿಂದ ಮಾಲನ್ನು ತೆಗೆದುಕೊಳ್ಳಲು ನಿರ್ಧರಿಸಿದೆವು. ಈ ಮಧ್ಯೆ ಆಡಿಟರ್ ಈ ಸಹಕಾರ ಸಂಘದಲ್ಲಿ 50 ಸಾವಿರ ರೂಪಾಯಿಯಷ್ಟು ಅವ್ಯವಹಾರ ನಡೆದಿರುವುದಾಗಿ ಹೇಳಿದರು. ಪಾಪ ಆ ಯುವಕರಿಬ್ಬರು ಕಣ್ಣು ಬಾಯಿ ಬಿಡಲಿಕ್ಕೆ ಪ್ರಾರಂಭಿಸಿದರು. ಇಂತಹ ಒಬ್ಬಿಬ್ಬರು ಈ ಸಹಕಾರ ಚಳುವಳಿಯಲ್ಲಿದ್ದುಬಿಟ್ಟರೆ ಬೇರೇನೂ ಬೇಡ, ಒಳಗೇನೆ - ಇರುವ ಕರಿ ತಲೆ ಹುಳು ಹತ್ತಾರು ವರ್ಷದ ತೆಂಗಿನರ ಮರನ ಒಂದೆರಡು ದಿನದಲ್ಲಿ ನಿರ್ಜೀವ ಮಾಡಿಬಿಡುವಂತೆ ಮಾಡುತ್ತಾರೆ.

ಹಳ್ಳಿಯಲ್ಲಿರುವ ನೇಕಾರರು ಕೋಳಿಗೂಡಿನಂತಹ ಮನೆಗಳಲ್ಲಿ ವಾಸಿಸುತ್ತಾರೆ. ಅವರಿಗೆ ವಸತಿಸೌಕರ್ಯ ಒದಗಿದರೆ ಉತ್ತಮವಲ್ಲವೆ ಎಂದುಕೊಂಡು ಹೌಸಿಂಗ್ ಬೋರ್ಡ್‌ನವರನ್ನು ಭೇಟಿ ಮಾಡಿದೆ. ಇದಕ್ಕೆ ಸಂಬಂಧಪಟ್ಟ ಸಚಿವರನ್ನು ನೋಡಿದ್ದಾಯಿತು. ಆನಂತರ ಈ ಇಲಾಖೆಯ ಕಮಿಷನರನ್ನು ನೋಡಿ ಅವರ ಆದೇಶದಂತೆ ಇದಕ್ಕೆ ಸಂಬಂಧಪಟ್ಟ ರೆಕಾರ್ಡ್ ಸಿದ್ಧ ಮಾಡಿದೆ. ಮತ್ತೆ ಸಚಿವರನ್ನ ನೋಡಿ ಹೌಸಿಂಗ್‌ಬೋರ್ಡ್ ಕಛೇರಿಗೆ ಬಂದರೆ ನಮ್ಮ ಫೈಲ್ ನಾಪತ್ತೆ. ಕೈಗಾರಿಕಾ ಯೋಜನೆಯಲ್ಲಿ ನೇಕಾರರಿಗೆ ವಸತಿ ಸೌಕರ್ಯ ಕಲ್ಪಿಸಿದರೆ ಎಷ್ಟೊಂದು

ಪ್ರಯೋಜನ ಅಂತೀರ. ಒಂದು ಗ್ರಾಮೀಣ ಜನರಿಗೆ ನೈರ್ಮಲ್ಯ ಒದಗಿಸಿ ಕೊಡುವುದರ ಜೊತೆ ಈ ಗೃಹಕೈಗಾರಿಕೆಯ ಬೆಳವಣಿಗೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದಲ್ಲವೆ? ಯಾವ ಕಾಲಕ್ಕೆ ಇದು ಈಡೇರುವುದೋ ಆ ಪರಮಾತ್ಮನೇ ಬಲ್ಲ.

ಹುಬ್ಬಳ್ಳಿಯಲ್ಲಿ 17-5-84ರಲ್ಲಿ ಕೈಮಗ್ಗದ ಅಭಿವೃದ್ಧಿಗೆ ಬೃಹತ್ ಸಮ್ಮೇಳನವವೊಂದು ಏರ್ಪಟ್ಟಿತು. ರೇಷ್ಮೆ, ಹತ್ತಿ, ಉಣ್ಣೆ ಕೈಮಗ್ಗ ದುಡಿಮೆಗಾರರು ಒಂದೆಡೆ ಸೇರಿ ಪರಸ್ಪರ ಚರ್ಚೆ ನಡೆಸಿ ಸಾಮೂಹಿಕ ಪ್ರಯತ್ನದೊಡನೆ ಮುಂದೆ ಹೆಜ್ಜೆ ಹಾಕುವ ಎಂದು ನಿರ್ಧರಿಸಲಾಯಿತು. ಮುಖ್ಯಮಂತ್ರಿ, ಸಹಕಾರ ಮಂತ್ರಿ ಪೌರಾಡಳಿತ ಮಂತ್ರಿಗಳು ಭಾಗವಹಿಸಿದ್ದರು. ಮುಖ್ಯಮಂತ್ರಿ ಆರ್.ಗುಂಡೂರಾವ್ ಅವು ಈ ಉದ್ಯಮ ಅಭಿವೃದ್ಧಿಗೆ ಎಲ್ಲಾ ಸಹಾಯ ಕೊಡುವುದಾಗಿ ಹೇಳಿದರು. ನಾನು ಉಣ್ಣೆ ಉಧ್ಯಮದ ಸ್ಥಿತಿಗತಿಗಳನ್ನು ವಿವರಿಸಿದೆ.

ಸುಮಾರು 1983ರ ಹೊತ್ತಿಗೆ ಉಣ್ಣೆ ನೇಕಾರರ ಸಹಕಾರ ಸಂಘಕ್ಕೆ ವಿದಾಯ ಹೇಳುವ ಎನಿಸಿತ್ತು. ಈ ಮಧ್ಯ ಸಾಂಸಾರಿಕ ಜಂಜಾಟಗಳು, ದೈಹಿಕ ತೊಂದರೆಗಳು, ಆದರೂ ಚಿತ್ರದುರ್ಗ ಉಣ್ಣೆ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭ ಮಾಡುವ ಬಯಕೆಯಿಂದ ಕೈಗಾರಿಕಾ ಮಂತ್ರಿ ಶ್ರೀಮಾನ್ ಎಸ್.ಆರ್.ಬೊಮ್ಮಾಯಿ ಅವರಿಂದ ದಿನ ನಿಗದಿ ಪಡಿಸಿದೆ. ಈ ಮಧ್ಯ ಸಂಘದ ಸಾಮಾನ್ಯ ಸಭೆ ಕರೆದು ನನ್ನ ಕಾಲದ ಲೆಕ್ಕಪತ್ರಗಳನ್ನು ಒಪ್ಪಿಸಿದೆ. ಬಹುಮಟ್ಟಿಗೆ ನನ್ನ ಹೆಗಲ ಭಾರ ಕಡಿಮೆ ಎನಿಸಿತು. 4-9-83ರಲ್ಲಿ ಶಿರಾದಲ್ಲಿ ಐದು ಉಣ್ಣೆ ಸಹಕಾರ ಸಂಘಗಳು ಸೇರಿ ಮುಂದಿನ ಅಭ್ಯರ್ಥಿ ಆಯ್ಕೆಮಾಡುವುದಿತ್ತು. ಚಿತ್ರದುರ್ಗಕ್ಕೆ ಹೋಗುವವನಿದ್ದ ನಾನು ಅಲ್ಲೇ ಇಳಿದು ಹೋಗೋಣ ಎಂದು ಆ ಸಭೆಗೆ ಹೋದೆ. ಎಲ್ಲರೂ ನೀವು ಮತ್ತೆ ಚುನಾವಣೆಗೆ ನಿಲ್ಲಬೇಕೆಂದು ಒತ್ತಾಯ ಮಾಡಿದರು. ನಾನು ಮನೆಯ ಪರಿಸ್ಥಿತಿ ಹಾಗೂ ದೈಹಿಕ ತೊಂದರೆಗಳನ್ನು ಪರಿಪರಿಯಾಗಿ ಬಿನ್ನವಿಸಿದೆ. ಸಭೆಯಲ್ಲಿದ್ದ ಹಿರಿಯರು, ಕಿರಿಯರು ಆಣೆ ಮಾಡೋದು, ಕಾಲಿಗೆ ಬೀಳೋದು ಮಾಡಿ ನನ್ನನ್ನು ''ಹೂ'' ಎನಿಸಿಬಿಟ್ಟರು. ನಾನು ಅಧ್ಯಕ್ಷನಾಗಿ ಆರು ವರ್ಷ ್ದ ಕಾರಣ ಪುನಃ ಅಧ್ಯಕ್ಷನಾಗುವ ಹಾಗಿರಲಿಲ್ಲ. ಆದರೆ ಒಬ್ಬ ಡೈರೆಕ್ಟರ್ ಆಗಿ ಸಲಹೆ, ಸೂಚನೆಗಳನ್ನು ಕೊಡಲು ತಕರಾರು ಇರಲಿಲ್ಲ.

ಕಿರಿಯರನ್ನು ಚುನಾವಣೆಗೆ ನಿಲ್ಲಿಸಿ ತಯಾರು ಮಾಡಬೇಕೆಂಬ ನನ್ನ ಹಂಬಲ ಕೈಗೂಡಲಿಲ್ಲ. ಕಾಮಗೊಂಡನಹಳ್ಳಿ ಪ್ರಾಥಮಿಕ ಸಹಕಾರ ಸಂಘದಿಂದ ಕೇಂದ್ರಕ್ಕೆ ನನ್ನ ಉಮೇದುವಾರಿಕೆ ಸಲ್ಲಿಸಲು ಸ್ಥಿರಪಟ್ಟಿತು. ಈ ಹಿಂದೆ ಕೂಡ ಇದರ ಮೂಲ್ಕವೆ ನಾನು ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ನಾನು ಆ ಸಭೆಯಿಂದ ಹೊರಬಂದ ಮೇಲೆ ಏನೇನೋ ಮಸಲತ್ತು ನಡೆದಿರಬೇಕು. ಕೆಲವೇ ದಿನಗಳಲ್ಲಿ ತುಮಕೂರು ಜಿಲ್ಲೆಯಿಂದ ಅಂದರೆ ಬೇವಿನಹಳ್ಳಿ ಸಂಘದ ಮೂಲಕ ಮತ್ತೊಬ್ಬರು ಅರ್ಜಿ ಹಾಕಿದರು. ಈ ಒಳ ಮಸಲತ್ತಿನಿಂದ ಬೇಸತ್ತ ನಾನು ಪಾವಗಡ ತಾಲ್ಲೂಕು ವೆಂಕಟಾಪುರ ಪ್ರಾಥಮಿಕ ಸಂಘದಿಂದ ಅರ್ಜಿ ಹಾಕಿದೆ. ಚುನಾವಣೆ 15-9-1983ರಂದು ನಡೆಯಬೇಕಾಗಿತ್ತು. ಅದರ ಹಿಂದಿನ ದಿನ ಡೈರೆಕ್ಟರ್‌ಗಳ ಸಭೆ ಜರುಗಲಿತ್ತು. ಸಹಜವಾಗಿ, ನಾನೇ ಅಧ್ಯಕ್ಷತೆ ವಹಿಸಲಿದ್ದೆ. ಬೇವಿನಹಳ್ಳಿಯಿಂದ ಸ್ಪರ್ಧಿಸಿದ್ದ ಅಭ್ಯರ್ಥಿ, ಹಾಲಿ ಅಧ್ಯಕ್ಷರು ಕಾಮಗೊಂಡನಹಳ್ಳಿ ಹಾಗೂ ವೆಂಕಟಾಪುರಗಳೆರಡರ ಸಹಕಾರ ಸಂಘಗಳಿಂದ ಸದಸ್ಯರಾಗಿದ್ದಾರೆಂದು ಈಗಿನ ದಾಖಲೆಗಳು ತೋರಿಸುತ್ತವೆಂದು ಆಕ್ಷೇಪಿಸಿದರು. ನಾನು ಉಪಾಧ್ಯಕ್ಷರಿಗೆ ಅಧ್ಯಕ್ಷತೆ ವಹಿಸುವಂತೆ ವಿನಂತಿಸಿಕೊಂಡು, ಮೀಟಿಂಗ್ ಹಾಲಿನಿಂದ ಅಧ್ಯಕ್ಷರ ಕೋಣೆಗೆ ಹೋಗಿ, ನನ್ನ ಕೈಚೀಲ ತಕ್ಕೊಂಡು, ಉಣ್ಣೆ ನೇಕಾರರ ಸಹಕಾರ ಸಂಘಕ್ಕೆ ದೊಡ್ಡ ನಮಸ್ಕಾರ ಹೇಳಿ ಹೊರಬಂದೆ. ಹಿಂದೆ ಸಂಘ ಕಷ್ಟಕಾಲದಲ್ಲಿದ್ದಾಗಿನ ಮಿತ್ರರು, ಅಭಿಮಾನಿಗಳು ನಮಗೆ ಅಧ್ಯಕ್ಷ ಪಟ್ಟಕಟ್ಟಿ ಎಳೆದುತಂದು ಕೂರಿಸಿದ್ದರು. ನಾನು ಕೂಡ ಯೋಜನೆಗಳ ಮೂಟೆಯನ್ನೇ ಹೊತ್ತು ತಂದಿದ್ದೆ, ಅವೆಲ್ಲಾ ಖರ್ಚಾಗಿ ಕೆಲವೊಂದು ಯಶಸ್ಸುಗೊಂಡು ಸಂಘ ಜೀವಂತಿಕೆಯ ಕಳೆ ಪಡೆದುಕೊಂಡಿತು. ಮಾರನೆಯ ದಿನದ ಚುನಾವಣೆಗೆ ನಾನು ಹೋಗಿ ಯಾರ ಮುಂದೂ ಗೋಗರೆಯಲಿಲ್ಲ. ನಿರೀಕ್ಷೆಯಂತೆ ಸೋಲು ನನ್ನದಾಯಿತು. ಯಾವ ಸಂಸ್ಥೆಯ ಶ್ರೇಯಸ್ಸಿಗೆ ಆರೋಗ್ಯ, ಮನಶ್ಯಾಂತಿಗಳನ್ನು ತೂರೆದು ಸುತ್ತಾಡಿದೆನೋ, ಯಾವ ಜನರಿಗೆ ನನ್ನ ಗಳಿಕೆಯನ್ನೆಲ್ಲಾ ದೀಡು ಮಾಡಿ ಹಣಗಳಿಸಿಕೊಟ್ಟಿದ್ದೆನೊ ಯಾವ ಸಂಘಕ್ಕೆ ಆತ್ಮಗೌರವ ತೊರೆದು ಮಂತ್ರಿ ಅಧಿಕಾರಿಗಳ ಮುಂದೆ ಅಂಗಲಾಚಿ ಬೇಡಿದೆನೋ, ಯಾವ ಜನರಿಗೆ ಒಳಿತಾಗ ಬೇಕೆಂದು ದಲ್ಲಾಳಿಗಳ ಹಾಗೂ ಶ್ರೀಮಂತರ ವಿರೋಧ ಕಟ್ಟಿಕೊಂಡೆನೋ, ಯಾರ ಕಲ್ಯಾಣಕ್ಕೆ ನನ್ನ ಮನೆಯ ಮಡದಿಮಕ್ಕಳಿಗೆ ಕಿರಿಕಿರಿಯುಂಟು ಮಾಡಿದೆನೋ, ಅಂತಹ ಸಂಘದಿಂದ, ಯಾರಿಗೂ ಹೇಳದಂತೆ ದುಡಿಸಿಕೊಂಡವರಿಗೆ ಬೇಡದವನಂತೆ, ಕಾರ್ಯಕ್ಕೆ ಬೆಲೆ ಸಿಗದವನಂತೆ ಹೊರಬಂದೆ. ನನ್ನ ಉತ್ಸಾಹ ಜರ್‍ರನೆ ಇಳಿಯಿತು.

ಒಂದಿಷ್ಟು ಮಂದಿ ಹೇಳಬಂದ ಉಪಚಾರದ ಮಾತುಗಳು ಬೇಡವಾದವು. "ನಿಮ್ಮ ಅಪ್ಪಾಜಿಗೆ ಪಿಂಚಣಿಯಾದ ಮೇಲೆ ಓಡಾಟ ಜಾಸ್ತಿಯಾಗಿದೆ, ಯಾವಾಗಲೂ ಮನೆಯಲ್ಲಿ ಇರೋದೆ ಇಲ್ಲವೆಂಬ" ಹೆಂಡತಿ ನುಡಿಗಳು ಜ್ಞಾಪಕಕ್ಕೆ ಬಂದು ನನ್ನ ಓಡಾಟಕ್ಕೆ ಬೆಲೆ ಇಲ್ಲವೇನೋ ಎನಿಸಿತು. ನನ್ನ ಸೋಲಿಗೆ ನಾನು ಯಾರನ್ನೂ ದೂಷಿಸುವುದಿಲ್ಲ. ಮುಗ್ಧ ಕಂಬಳಿ ನೇಕಾರರು ನನ್ನನ್ನು ಅದಮ್ಯವಾಗಿ ಪ್ರೀತಿಸುತ್ತಿದ್ದರು. ಅವರ ಪ್ರೀತಿಯ ರಕ್ಷಾಕವಚ ಇನ್ನೂ ನನ್ನ ಮೇಲೆ ಹಾಗೆಯೇ ಇದೆ. ಆದರೆ ಸಹಕಾರ ಚಳುವಳಿಯ ವಿರುದ್ಧವಾಗಿದ್ದವರು, ಶೋಷಣೆಯ ಮೂಲಕರ್ತರಾಗಿದ್ದವರು, ನನ್ನಿಂದ ತೊಂದರೆಯಾಗುತ್ತದೆಂದು ಭಾವಿಸಿದ ಒಬ್ಬಿಬ್ಬ ಭ್ರಷ್ಟ ನೌಕರರು ನನಗೆ ವಿರುದ್ಧವಾಗಿ ಕೆಲಸ ಮಾಡಿರಬೇಕು. ನಾನೆಂದೂ ಅಲ್ಲಲ್ಲಿ ಹೋಗಿ ನನ್ನ ಕೆಲಸಕಾರ್ಯಗಳ ಬಗ್ಗೆ ಬಡಾಯಿ ಕೊಚ್ಚಿಕೊಂಡವನಲ್ಲ. ಸ್ವಭಾವತಃ ನಾಚಿಕೆಯವನಾದ ನನಗೆ ಇವನ್ನೆಲ್ಲಾ ತಿಳಿಹೇಳುವ ಮಾತುಗಾರಿಕೆ ರೂಢಿ ಬರಲಿಲ್ಲ. ಅಲ್ಲದೆ, ಈ ಉದ್ಯಮದ ಬಗ್ಗೆ ನನ್ನ ಆಲೋಚನಾ ಸರಣಿ ಕೂಡ ಮುಗ್ಧ ನೇಕಾರರಿಗೆ ಅರಿವಾದಂತಿಲ್ಲ. ಪ್ರಾಯಶಃ ಇದು ಎಲ್ಲಾ ಕಾಲಕ್ಕೂ ಸತ್ಯವಾದ ಮಾತೆನಿಸುತ್ತದೆ. ನಾಯಕ ತನ್ನ ಒಂದೊಂದು ಕ್ರಿಯೆಯನ್ನು ಸಮಸ್ತರಿಗೆ ತಿಳಿಹೇಳುತ್ತಾ ಹೊರಟರೆ ಬರೀ ಮಾತು ಸಾಗುವುದಲ್ಲದೆ ಕೆಲಸವಾಗುವುದಿಲ್ಲ. ನಾಯಕನ ಹೆಜ್ಜೆಯನ್ನನುಸರಿಸಿ ಜನ ನುಗ್ಗಿದರೆ, ಬದಲಾವಣೆ ಸಾಧ್ಯವೇ ಹೊರತು, ಒಬ್ಬನ ಹೆಜ್ಜೆಯಿಂದ ಪ್ರಯೋಜನವೇನೂ ಇಲ್ಲ. ಕೆಲವೇ ದಿನಗಳಲ್ಲಿ ಆ ಹೆಜ್ಜೆ ಗುರುತು ನಾಶವಾಗಬಹುದು. ಅಂತು ಕೊನೆಗೂ "ಸಿರಾ ನೀಲಾ" ಸಪ್ಲೈ ಮಾಡುತ್ತಿದ್ದ ಸಿರಾ ತಾಲೂಕಿನ ನೇಕಾರರಿಗೆ ಅಕಲಾಯವಾಗುತ್ತಿದ್ದ ಒಂದು ರೂಪಾಯಿಯಲ್ಲಿ ಅರ್ಧದಷ್ಟಾದರೂ ಜಾಸ್ತಿರೇಟು ಕೊಡಿಸಬೇಕೆಂಬ ನನ್ನ ಆಸೆ ಕೈಗೂಡಲೇ ಇಲ್ಲ. ಬಹುಶಃ ಅನುಭವ ವಾಕ್ಯವೊಂದು ಹೇಳುವ ಮಾತು ನಿಜವಿರಬಹುದು, "ಒಬ್ಬನೇ ಸಿಹಿ ಪದಾರ್ಥವನ್ನು ತಿನ್ನಬಾರದು; ಒಬ್ಬನೇ ಕಾರ್ಯವನ್ನು ಕುರಿತು ಚಿಂತಿಸಬಾರದು; ಹಾದಿ ನಡೆಯಬಾರದು; ಎಲ್ಲರೂ ನಿದ್ರಿಸುತ್ತಿರುವಾಗ ಎಚ್ಚರವಾಗಿರಬಾರದು."

ಮನೆಯಲ್ಲಿ ಮಡದಿಗೆ ಭೀಕರ ಖಾಯಿಲೆ, ಗಂಡು ಮಕ್ಕಳೆಲ್ಲಾ ಕೆಲಸದ ಮೇಲೆ ಅಲ್ಲಲ್ಲಿ ಹೋಗಿದ್ದರು. ನನಗೋ ಹೇಳಲಸಾಧ್ಯವಾದ ರೋಗಗಳು- ಇವುಗಳ ನಡುವೆ ಬಿಡುವಿಲ್ಲದ ದುಡಿಮೆಯೊಂದೇ ನನಗೆ ಆಧಾರವಾಗಿತ್ತು. ಕಾಳಿದಾಸ ಬ್ಯಾಂಕಿನ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟೆ. ಉಣ್ಣೆ ನೇಕಾರರ ಸಹಕಾರ ಸಂಘದ

ಕೆಲಸ, ನನಗೆ ಕಾಲ ನೂಕುವುದಕ್ಕಿಂತ ಆತ್ಮ ಸಂತೋಷ ತಂದು ಕೊಟ್ಟಿತ್ತು. ನೇಕಾರರಿಗೆ ಶಾಶ್ವತ ಅನ್ನದ ದಾರಿಯೊಂದನ್ನು ಮಾಡಿಕೊಡಬೇಕೆಂಬುದೊಂದೇ ನನ್ನ ಉದ್ದಿಶ್ಯ. ಮತ್ತೊಮ್ಮೆ ಅಧ್ಯಕ್ಷನಾಗಬೇಕೆಂಬುದಲ್ಲವೇ ಅಲ್ಲ.

ಕಾನೂನು ಪ್ರಕಾರ ಆರು ವರ್ಷ ಅಧ್ಯಕ್ಷನಾದವ ಮತ್ತೆ ಅಧ್ಯಕ್ಷನಾಗುವ ಹಾಗಿರಲಿಲ್ಲ. ಆದರೆ ಡೈರೆಕ್ಟರ್ ಆಗಿದ್ದರೂ, ಅಪೂರ್ಣಗೊಂಡ ಕೆಲಸಗಳನ್ನು ಉತ್ಸಾಹೀ ಯುವಕರೊಡನೆ ಮಾಡಿಸಬಹುದಾಗಿತ್ತು. "ಜೀವನವೆಂಬುದೊಂದು ಆಕಾಂಕ್ಷೆ; ಸಿದ್ಧಿ, ಮತ್ತು ಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚಧ್ಯೇಯವನ್ನು ಕೆಳಗಿಳಿಸಕೂಡದು ಎಂಬ ಮಹಾತ್ಮಗಾಂದೀಜಿ ಮಾತನ್ನ ನಾನು ನಂಬಿದವನು. ಹೇಗೋ, ಅಧಿಕಾರ ಗಿಟ್ಟಿಸಿಕೊಂಡರೆ ಸಾಕೆಂದವನಲ್ಲ. ಹೀಗಾಗಿ ನನಗೆ ಬದುಕಿನಲ್ಲಾದ ದೊಡ್ಡ ಆಘಾತವಿದು.

ಕಾಯಿಲೆಯಿಂದ ನರಳುತ್ತಿದ್ದರೂ ಸಾಂತ್ವನ ಮಾತುಗಳಿಂದ ಪುನಃ ಚೈತನ್ಯ ತುಂಬಿದವಳು ನನ್ನ ಮಡದಿ; ಮಕ್ಕಳು ಮೌನವಾಗಿದ್ದರೂ, ಬಹಳಷ್ಟು ಆಕೆ ನೊಂದುಕೊಂಡಂತೆ ಕಾಣಿಸಿತು. ತುಮಕೂರಿಗೆ ನನ್ನ ಮೊಕ್ಕಾಮು ಬದಲಾಯಿಸಿದೆ. ಹಾಸ್ಟಲ್‌ಗೆ ಬೆಳಿಗ್ಗೆ-ಸಂಜೆ ಹೋಗಲಾರಂಭಿಸಿದೆ. ಹುಡುಗರ ಜೊತೆ ಮಾತುಕತೆಗಳಾಡುತ್ತಾ ಕಾಲ ಹೋಗಿದ್ದುದೇ ತಿಳಿಯಲಿಲ್ಲ. ಈ ಮಧ್ಯೆ ಬಂದ ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವ ಸಮಾರಂಭ ನನ್ನನ್ನು ಹದಿಹರೆಯದ ಯುವಕನನ್ನಾಗಿಸಿತು. ಇಷ್ಟರ ಮೇಲೆ ಕಾಲಕ್ಕೆ ಯಾವುದನ್ನು ತಾನೇ ಹಳತಾಗಿಸುವ ಶಕ್ತಿ ಇಲ್ಲ? ಇವೆಲ್ಲದರ ಮೇಲೂ ಒಂದು ಮಾತು ಇದೆ, -ದುಡಿಮೆಗಾರರು ಆಗಾಗ್ಗೆ ಕಾಣಿಸಿಕೊಳ್ಳುವ ಈ ಅಸಹಜ ಘಟನೆಗಳಿಗೆ ಶರಣಾಗಬಾರದು. ಒಂದಿಷ್ಟು ಎದೆತುಡಿತವನ್ನು ಕಡಿಮೆ ಮಾಡಿಕೊಂಡು ಮತ್ತೊಂದು ಕಡೆ ಸಮಾಜಕ್ಕೆ ದುಡಿಯುತ್ತಾ ಹಳೆಯದನ್ನು ಮರೆಯಬೇಕು. ಇದು ನನ್ನ ದಾರಿಯೆಂದುಕೊಂಡಿದ್ದೇನೆ.

# ಶ್ರೀ ಕಾಳಿದಾಸ ಕೋ-ಆಪರೇಟಿವ್ ಬ್ಯಾಂಕ್

ಒಂದು ಜನಾಂಗದ ಶಕ್ತಿ-ಸಾಮರ್ಥ್ಯ ಅಡಗಿರುವುದು ಅದರ ಆರ್ಥಿಕ ಸ್ವಾವಲಂಬನೆಯ ವಿಚಾರದ ಮೇಲೆ. ಜರ್ಮನಿಯ ಯಹೂದಿ ಜನಾಂಗದ ಆರ್ಥಿಕ ಶಕ್ತಿಯೇ ಅವರು ಸರ್ವಾಧಿಕಾರದತ್ತ ಹೋರಾಡಲು ಸಮರ್ಥವಾಯಿತು. ನಮ್ಮಲ್ಲೂ ಸಿಂಧಿ, ಗುಜರಾತಿಯ ಮಾರ್ವಾಡಿ ಹಾಗೂ ವೈಶ್ಯ ಜನಾಂಗಗಳು ವ್ಯಾಪಾರ ವಹಿವಾಟಿನ ಮೂಲಕ ತೆರೆಯ ಮರೆಯಲ್ಲಿದ್ದರೂ ಸಾಕಷ್ಟು ಸಮೃದ್ಧಿಯುಳ್ಳವರಾಗಿದ್ದಾರೆ. ನಮ್ಮ ಕುರುಬ ಜನಾಂಗಕ್ಕೆ ವಿಶೇಷವಾದ ಸೌಕರ್ಯವುಂಟು, ಮೂಲತಃ ವ್ಯವಸಾಯ ಇವರ ಕಸುಬು ಆದರೂ, ವಾಣಿಜ್ಯೋದ್ಯಮವನ್ನು ಬಿಡುವಂತಿಲ್ಲ. ಕುರಿ ಹಾಗೂ ಅದರ ಉತ್ಪನ್ನಗಳನ್ನು ವ್ಯಾಪಾರ ವಹಿವಾಟಿಗೆ ಬಳಸಿದರೆ, ಸಹಜವಾಗಿಯೇ ಅವರ ಜೀವನ ಮಟ್ಟ ಅಭಿವೃದ್ಧಿಗೊಳ್ಳುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ವ್ಯವಸಾಯದ ಜೊತೆ ಹೋಟೆಲ್ ಉದ್ಯಮದಿಂದಾಗಿ ಅವರ ಹಣಕಾಸಿನ ವಹಿವಾಟು ಹೆಚ್ಚಲು ಕಾರಣವಾಗಿತ್ತು. ಮಣಿಪಾಲಿನಲ್ಲಿ ಪೈ ಕುಟುಂಬದವರು ಮನೆಯೊಳಗೆ ಸ್ಥಾಪಿಸಿದ ಬ್ಯಾಂಕ್ ಉದ್ಯಮ ಈಗ ರಾಷ್ಟ್ರವ್ಯಾಪ್ತಿಗೆ ಹೆಚ್ಚಿರುವುದಲ್ಲದೆ, ಅಲ್ಲಿನ ಎಲ್ಲಾ ಚಟುವಟಿಕೆಗಳ ಜೀವ ನಾಡಿಯಾಗಿದೆ. ನೆಪೋಲಿಯನ್ ಕೂಡ 'ಬ್ಯಾಂಕ್ ಆಫ್ ಪ್ಯಾರಿಸ್' ಸ್ಥಾಪಿಸಿ ಫ್ರಾನ್ಸ್ ಕ್ರಾಂತಿಯ ಪ್ರಮುಖ ಧ್ಯೇಯವಾದ ಆರ್ಥಿಕ ಸಮೃದ್ಧಿಯನ್ನು ತರುವ ಪ್ರಯತ್ನ ನಡೆಸಿದನು. ನನಗೆ ಮೊದಲಿನಿಂದಲೂ ನಮ್ಮ ಜನಾಂಗದ ಏಳಿಗೆಯನ್ನು ರೂಪಿಸಬಲ್ಲ ಬ್ಯಾಂಕ್ ಸ್ಥಾಪಿಸಬೇಕೆಂಬ ಆಸೆ ಇತ್ತು. ಅದರಲ್ಲೂ ಸಹಕಾರ ತತ್ವದ ಹಿನ್ನೆಲೆಯಲ್ಲೇ ಈ ಬ್ಯಾಂಕ್ ಅಭಿವೃದ್ಧಿಗೊಳ್ಳಬೇಕೆಂಬುದು ನನ್ನ ಹಿರಿಯಾಸೆ. ಕೇವಲ ನಾಲ್ಕಾರು ಬಂಡವಾಳಗಾರರಿಗೆ ಇದು ಬೆಂಬಲವಾಗಿ ನಿಲ್ಲದೆ ಇಡೀ ಕುರಿ ಹಾಗೂ ಉಣ್ಣೆ ಉದ್ಯಮ ಕಸುಬಿನ ಸಮಸ್ತರಿಗೂ ಕಾಮಧೇನುವಾಗಬೇಕೆಂದು ಬಯಸಿದೆ. ಬ್ಯಾಂಕ್ ಏನೋ ಸ್ಥಾಪನೆಯಾಯಿತು, ನನ್ನ ಗುರಿಯು ಸಾಸುವೆಯಷ್ಟೂ ಈಡೇರಿಲ್ಲ. ಆದರೂ ಮುಂದೆ ಎಲ್ಲಾ ಜಿಲ್ಲೆಗಳಲ್ಲೂ ನಮ್ಮ ಉತ್ಸಾಹೀ ತರುಣರು ಈ ತರಹದ ಸಹಕಾರ ಬ್ಯಾಂಕ್‌ಗಳನ್ನು ಸ್ಥಾಪಿಸಿ ಬಡವರಿಗೆ ಅನುಕೂಲ ಮಾಡುವರೆಂಬ ಆಸೆಯಿದೆ.

ಮೊದಲಿಗೆ ರಾಜ್ಯ ಕುರುಬ ಸಂಘದವರು 1974ರ ತರುವಾಯದಲ್ಲಿ ಇಂತಹ ಕೋ-ಆಪರೇಟಿವ್ ಬ್ಯಾಂಕ್‌ವೊಂದನ್ನು ಸ್ಥಾಪಿಸಬೇಕೆಂದರು ನಿರ್ಣಯಿಸಿದರು. ಈ ಬ್ಯಾಂಕು ಆಸ್ತಿತ್ವಕ್ಕೆ ಬರಬೇಕಾದರೆ ಮೂರು ಲಕ್ಷ ಷೇರುಧನವನ್ನು ಜಮಾಯಿಸಬೇಕು. ಮತ್ತೆ ಮೂರು ಸಾವಿರ ಷೇರುದಾರರನ್ನೂ ಸೇರಿಸಬೇಕಾಗಿತ್ತು. ಹಾಗೂ ಹೀಗೂ ಒಂದು ಲಕ್ಷ ರೂಪಾಯಿವರೆಗೂ ಷೇರು ಹಣ ಜಮಾ ಆಯ್ತು. 1976ರಲ್ಲಿ ನಾಲ್ಕಾರು ಸಾರಿ ಪ್ರಮೋಟರುಗಳು ಸಭೆ ಸೇರಿದರು. ಪ್ರಯೋಜನವೇನೂ ಆಗಲಿಲ್ಲ. ಚೀಫ್ ಪ್ರಮೋಟರು ಆದ ಹೆಚ್.ಚಿಕ್ಕಣ್ಣ ಈ ತನಕ ಆದ ಪರಪಾಟು ಕಂಡು ವಸೂಲಿಯಾದ ಷೇರು ಹಣನ ವಾಪಸ್ಸು ಮಾಡಬೇಕಾಗುತ್ತದೆಂದು ಹೇಳಿದರು. ಈ ಮಧ್ಯೆ ಕೈಗಾರಿಕೋದ್ಯಮಿ ವಿಶ್ವನಾಥ್ ಅವರನ್ನು ಕಂಡು ಎರಡೂವರೆ ಲಕ್ಷ ರೂಪಾಯಿಯನ್ನು ನಮ್ಮ ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿಡುವಂತೆ ಕೇಳಲಾಯಿತು. ಅವರು ಒಪ್ಪಿದರು. ಹಲವಾರು ಸಾರಿ ಹೋಗಿ ಅವರನ್ನು ಪ್ರಾರ್ಥನೆ ಮಾಡಲಾಯಿತು. ಏನೂ ಪ್ರಯೋಜನವಾಗಲಿಲ್ಲ. ಪುನಃ ಪ್ರಮೋಟರುಗಳ ಸಭೆ ಈ ಪರಿಸ್ಥಿತಿಯಲ್ಲಿ ಹಣ ವಾಪಸ್ಸು ಮಾಡುವುದೇ ಸೂಕ್ತವೆಂದು ನಿರ್ಣಯ ತೆಗೆದುಕೊಳ್ಳುವ ಹಂತದಲ್ಲಿದ್ದರು. ಆಗ ನಾನು ಇಡೀ ನಮ್ಮ ಜನಕ್ಕೆ ನಾವು ಬ್ಯಾಂಕು ಸ್ಥಾಪಿಸುವವೆಂದು ಡಂಗೂರು ಸಾರಿದ್ದೇವೆ, ಈಗ ಹಿಂದೆ ಹೆಜ್ಜೆ ಇಟ್ಟರೆ ಅಪಹಾಸ್ಯಕ್ಕೆ ಕಾರಣವಾಗುವುದಿಲ್ಲವೆ, ಎಂದ್ಹೇಳಿ ಮತ್ತೊಮ್ಮೆ ಪ್ರಯತ್ನ ಮಾಡುವ ಎಂದು ವಿನಂತಿಸಿಕೊಂಡೆ. ನನ್ನ ಮಾತನ್ನು ಉಳಿಸಿಕೊಳ್ಳಲು ತುಮಕೂರು ಜಿಲ್ಲೆಯಾದ್ಯಂತ ಬುತ್ತಿ ಕಟ್ಟಿಕೊಂಡು ಪ್ರವಾಸ ಹೊರಟೆ. ಮಧುಗಿರಿ, ಪಾವಗಡ ಮತ್ತು ಶಿರಾ ತ್ಲಾಲೂಕುಗಳಲ್ಲಿನ ಹಳ್ಳಿಹಳ್ಳಿಗಳಿಗೂ ಭೇಟಿ ಕೊಟ್ಟೆ. ಕೆಲವೇ ದಿನಗಳಲ್ಲಿ ರೂ. 50,000ಕ್ಕೂ ಹೆಚ್ಚಿನ ಮೊಬಲಗನ್ನು ಸಂಗ್ರಹಿಸಿ ಕಳುಹಿಸಿಕೊಟ್ಟೆ.

ಆನಂತರ ಈ ಕೆಲಸಕ್ಕಾಗಿ ಕೋಲಾರ ಜಿಲ್ಲೆಯ ಗೌರಿಬಿದನೂರು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿನ ಹಳ್ಳಿಹಳ್ಳಿಯನ್ನು ಸುತ್ತಿದೆ. ಭಕ್ತರಹಳ್ಳಿಯ ಪಿ.ನರಸಿಂಹಯ್ಯ, ಚಿಕ್ಕಬಳ್ಳಾಪುರದ ಎಸ್.ವೈ.ಮರಿಯಪ್ಪ, ಕೋಲಾರದ ನಾರಾಯಣಸ್ವಾಮಿ ಅವರುಗಳು ನನ್ನ ಜೊತೆ ಹಳ್ಳಿಗೆಲ್ಲಾ ಬಂದಿದ್ದರು. ಆ ಗ್ರಾಮೀಣ ಜನರ ಸಹೃದಯತೆ, ನಿರಾಶೆ, ಬಡತನಗಳನ್ನು ಕಂಡಾಗ ಅವರಿಗೆ ಏನನ್ನೂ ಮಾಡಲಾಗಲಿಲ್ಲವೆಂಬ ಕೊರಗು ನನ್ನಲ್ಲಿರುತ್ತಿತ್ತು. ನನ್ನ ಕೆಲಸ ಇತರ ಸದಸ್ಯರಿಗೆ ಸ್ಫೂರ್ತಿ ಕೊಟ್ಟಿತು. ಬೆಂಗಳೂರಿನಲ್ಲಿ ಡಾ॥ ಹೆಚ್.ನಂದೀಶ್ ಮತ್ತು

ಇತರೆ ಮಿತ್ರರ ಜೊತೆ ನಾನು ಕೂಡ ಒಂದಿಷ್ಟು ಸುತ್ತಾಡಿದೆ. ನಂದೀಶರಂತೂ ಬ್ಯಾಂಕ್ ಕೆಲಸಕ್ಕೆ ತಮ್ಮ ಸ್ವಂತ ಕಾರನ್ನು ಚೆನ್ನಾಗಿಯೇ ಉಪಯೋಗಿಸಿದರು. 1977ರ ಜುಲೈ ತಿಂಗಳ ಹೊತ್ತಿಗೆ ಹಣಾಹಣಿ ಓಡಾಟದಿಂದಾಗಿ ಮೂರು ಲಕ್ಷರೂಪಾಯಿ ಷೇರುಧನ ಸಂಗ್ರಹವಾಯಿತು. ರಿಜಿಸ್ಟಾರ್‌ಅವರು ಬ್ಯಾಂಕಿನ ವ್ಯಾಪ್ತಿ ಹಾಗೂ ಉದ್ದೇಶವನ್ನು ಅರಿತು ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಈ ಬ್ಯಾಂಕು ಕಾರ್ಯಾಚರಣೆ ಮಾಡಬಹುದೆಂದು ಶಿಫಾರಸ್ಸು ಮಾಡಿದರೂ 'ರಿಸರ್ವ್ ಬ್ಯಾಂಕ್'ನವರು ಒಪ್ಪಲಿಲ್ಲ. ಬೆಂಗಳೂರು ನಗರ ಸಭೆಯ ವ್ಯಾಪ್ತಿಯನ್ನು ಇದು . ಮೀರುವಂತಿಲ್ಲವೆಂದು ಹೇಳಿದರು. ನನಗೆ ಇದೊಳ್ಳೆ ಪ್ರಾಣ ಸಂಕಟವಾಯಿತು. ತುಮಕೂರು ಹಾಗೂ ಕೋಲಾರ ಕಡೆ ಷೇರು ಹಣ ಸಂಗ್ರಹಿಸಿದ ನನಗೆ ಆ ಜನಗಳಿಗೆ ಮುಖ ತೋರಿಸುವುದು ಹೇಗೆಂಬ ಚಿಂತೆ. ಕೇಂದ್ರ ಹಣಕಾಸು ಸಚಿವ ಪ್ರಣವ್ ಮುಖರ್ಜಿ ಅವರಿಗೂ ಪತ್ರ ಬರೆದೆ. ನಾಲ್ಕಾರು ಲೋಕ ಸಭಾ ಸದಸ್ಯರು ಈ ಬಗ್ಗೆ ಪತ್ರ ಬರೆಯುವಂತೆ ಮಾಡಿದೆ. ಕೇಂದ್ರ ಹಣಕಾಸು ಖಾತೆ ರಾಜ್ಯಕ್ಕೆ ಅನ್ವಯಿಸುವಂತೆ, ನಿಮ್ಮ ಬ್ಯಾಂಕ್ ಸ್ಥಾಪಿಸಲು ಅನುಮತಿ ಕೊಡಲಾಗುವುದಿಲ್ಲ ಎಂದಿತು. ನನ್ನ ಅತಿ ಉತ್ಸಾಹ ಹಾಗೂ ಸಮರ್ಪಕ ತಿಳುವಳಿಕೆಯ ಅಭಾವದಿಂದಾಗಿ ಈ ಅಚಾತರ್ಯ ನಡೆಯಿತು. ನನಗೊಂದು ರೀತಿಯ ಕಳಂಕ ಅಂಟಿತು. ಆದರೂ ಉತ್ಸಾಹೀ ತರುಣರು ಆಯಾಯ ಜಿಲ್ಲೆಯಲ್ಲಿ ಬ್ಯಾಂಕು ಸ್ಥಾಪಿಸಿ ಇಲ್ಲಿನ ಷೇರು ಹಣವನ್ನು ವರ್ಗಾವಣೆ ಮಾಡಿಕೊಳ್ಳಬಹುದು. ಜಿಲ್ಲೆಗೊಂದು ಇಂತಹ ಬ್ಯಾಂಕಿನ ಅವಶ್ಯಕತೆಯಂತೂ ಖಂಡಿತ ಇದೆ. ನಮ್ಮ ಉಣ್ಣೆ ಉದ್ಯಮಕ್ಕೆ ಇದರಿಂದ ಭಾರಿ ಪ್ರಯೋಜನವಾಗುತ್ತದೆ. ಆದರೆ ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವವರ್‍ಯಾರು? ನಮ್ಮ ಯುವ ಜನಾಂಗದಲ್ಲಿ ಒಂದಿಷ್ಟು ಪ್ರತಿಭಾವಂತರು, ಬೇಗನೆ ಚಾಕರಿಗೇ ಹೊರಟು ಹೋಗ್ತಾರೆ. ವ್ಯಾಪಾರ ವಹಿವಾಟಿನ ಜನಕ್ಕೆ ಸಮಾಜ ಸೇವೆಯ ಹೆಸರಿನಲ್ಲಿ ಕೀರ್ತಿಬೇಕೇ ಹೊರತು, ಖಾಯಂ ಕೆಲಸ ಮಾಡುವ ಮನಸ್ಸಿಲ್ಲ. ಅವರಿಗೆ ಬಿಡುವು ದೊರೆಯುವುದು ಕಷ್ಟ. ಇನ್ನು ರಾಜಕೀಯ ಕ್ಷೇತ್ರದ ಮೇಲೆ ಕಣ್ಣಿರುವವರ ಪಾಡು ಹೇಳಬೇಕಾಗಿಲ್ಲ. ಅವರಿಗೆ ಅಧಿಕಾರ ಬೇಕು, - ಅಂತಸ್ತು ಬೇಕು. ಅಂತಹದರಲ್ಲಿ ದೂರದ ಹಳ್ಳಿಯ ಅಗಣಿತ ಉದ್ಯಮ ಶೀಲ ಜನಕ್ಕೆ ಉಪಯುಕ್ತವಾಗುವ ಈ ತರಹದ ಸಹಕಾರ ಬ್ಯಾಂಕು ಅವರಿಗೇನು ಪ್ರಯೋಜನವಾಗುತ್ತದೆ?

ಅಂತೂ 20-4-1978ರಲ್ಲಿ ಶ್ರೀ ಕಾಳಿದಾಸ ಕೋ-ಆಪರೇಟಿವ್ ಬ್ಯಾಂಕ್ ಸ್ಥಾಪನೆಯಾಯಿತು. ಬೆಂಗಳೂರಿನಲ್ಲಿ ಗಾಂಧಿಗರದಲ್ಲಿ ಕುರುಬರ ಸಂಘದ ಮಹಡಿಯ ಮೇಲೆ ಇದರ ಕಛೇರಿ. ಅಂದಿನ ಕಾನೂನು ಮಂತ್ರಿ ಎಲ್.ಜಿ.ಹಾವನೂರುರವರು ಉದ್ಘಾಟನೆ ಮಾಡಿದರು, ಹೆಚ್.ಚಿಕ್ಕಣ್ಣನವರೇ ಅಧ್ಯಕ್ಷರಾದರು. ಆನಂತರ ನನ್ನನ್ನು ಸರ್ವಾನುಮತದಿಂದ ಅಧ್ಯಕ್ಷನನ್ನಾಗಿ ಮಾಡಲಾಯಿತು. ಎರಡು ವರ್ಷ ಕಳೆದ ಮೇಲೆ ನನ್ನ ಮನೆಯ ತಾಪತ್ರಯಗಳ ಕಾರಣದಿಂದಾಗಿ ನಾನೇ ಅಧ್ಯಕ್ಷ ಸ್ಥಾನದಿಂದ ಹೊರಬಂದೆ.

ಚಿಕ್ಕಹನುಮಯ್ಯ ನನ್ನ ಅಕ್ಕರೆಯ ಅಕ್ಕ ಕೆಂಪಚಿಕ್ಕಮ್ಮನ ಮಗ. ನಾವಿಬ್ಬರೂ ಒಟ್ಟಿಗೆ ಬೆಳೆದೆವು. ನಾನು ಎರಡು ವರ್ಷ ಹಿರಿಯವ. ಚಿಕ್ಕಂದಿನಲ್ಲಿ ಪ್ರೈಮರಿ ಶಾಲೆಗೆ ಹೋಗುತ್ತಿರಬೇಕಾದರೆ ಅವನಿಗೆ ಒಂದು ಸಾರಿ ಮೂರ್ಛೆ ರೋಗ ಬಂತು. ದಾರಿಯಲ್ಲೇ ಬಿದ್ದುಬಿಟ್ಟ. ಅಲ್ಲಿಂದ ಈ ರೋಗ ವಾಸಿಯಾಗಲೇ ಇಲ್ಲ. ನಮ್ಮವ್ವ ಅವನ ಅಜ್ಜಿ-ಊರೂರದೇವರಿಗೆ ಹರಕೆ ಕಟ್ಟಿ ದಿಂಡುಉರುಳನ್ನು ಉಳ್ಳಿಸಿದರೂ ಪ್ರಯೋಜನವಾಗಲಿಲ್ಲ. ಔಷಧಿ-ಲೇಹ ಮಾಡ್ಸಿ ತಿನ್ನಿಸಿದರೂ ಕಾಯಿಲೆ ಆಗಾಗ ಕಾಣಿಸಿಕೊಳ್ಳುತ್ತಿತ್ತು. ನಾನು ಓದಿನಲ್ಲಿ ಮುಂದುವರಿದರೂ ಆತ ಪ್ರೈಮರಿ ಶಾಲೆಗೆ ವಿದಾಯ ಹೇಳಿ ಸೈಕಲ್ ಷಾಪ್ ಇಟ್ಟ. ನನಗಂತೂ ಗ್ಯಾಸ್ಟ್ರಿಕ್ ಕಾಯಿಲೆ ಬಂದು ಚೆನ್ನರಾಯಪಟ್ಟಣದಲ್ಲಿ ಉಳಿಯಲಾರೆನೆಂಬ ಶಂಕೆಯ ಮೇಲೆ ಪಾಳ್ಯಕ್ಕೆ ಬಂದಾಗ ಈತನೇ. ಶುಶ್ರೂಷೆ ಮಾಡಿಸಿ ಉಳಿಸಿಕೊಂಡ. ಆತ 14-2-1980ರಲ್ಲಿ ನಿಧನವಾದಾಗ ನನಗಂತೂ ಆದ ವ್ಯಥೆ ಅಷ್ಟಿಷ್ಟಲ್ಲ. ಎಳೆತನದ ಸಲುಗೆ ಕ್ರಮೇಣ ದೂರವಾಗುತ್ತಾ ಹೋಯಿತಾದರೂ ನೈಜಪ್ರೇಮ ಕಡಿಮೆಯಾಗಿರಲಿಲ್ಲ. ನಾನು ಅಲ್ಲಲ್ಲಿ ಕೆಲಸ ಮಾಡುತ್ತಿದ್ದಾಗ ಪಾಳ್ಯಕ್ಕೆ ಹೋದರೆ ಎಲ್ಲಿಂದಲೋ ಬಂದು ನನ್ನ ಬಳಿ ನಿಲ್ಲುತ್ತಿದ್ದ. ನಾನಾಗಿಯೇ ಮೈದಡವಿ....... ಹೇಗಿದ್ದೀಯಾ? ಎಂದು ಮಾತನಾಡಿಸಿದರೂ ಮನ ಬಿಚ್ಚಿ ಮಾತನಾಡದ ಹೀನಾಯ. ಆದರೂ ನನ್ನ ಜೊತೆ ಈಗಲೂ ಚೆನ್ನಾಗಿ ಮಾತನಾಡುತ್ತಾನಲ್ಲ - ಎಂಬ ಆತ್ಮೀಯ ಸಂತೃಪ್ತಿ ಆತನ ಕಣ್ಣಲ್ಲಿ ಮಿಂಚುತ್ತಿತ್ತು. ಸಾಧ್ಯವಾದಷ್ಟು ದಿನ ಆತನೊಡನೆ ಕಳೆಯುವ ಪುರಸೊತ್ತು ನನಗಿಲ್ಲವಾದರೂ ದೀರ್ಘಕಾಲದ ರಕ್ತ ಸಂಬಂಧ ಮೀರಿದ 'ಆತ್ಮೀಯತೆ' ನಮ್ಮಲ್ಲಿತ್ತು. ವ್ಯಕ್ತಿ ದೊಡ್ಡವನಾಗುತ್ತ ಅನೇಕ ಸಂದರ್ಭದಲ್ಲಿ ಸಹಜವಾದ ಪ್ರೀತಿ ವಾತ್ಸಲ್ಯದಿಂದ ದೂರವಾಗುತ್ತಾನೆ.

ಯಾವುದಾದರೊಂದು ವಸ್ತುವನ್ನು ಸಮೀಪ ಪಡೆದುಕೊಂಡಾಗ ಅದರ ಆಕರ್ಷಣೆಗೆ ಒಳಗಾಗುವುದು ಮಾನವ ಸಹಜವಾದದು. ಒಂದು ಪುಸ್ತಕವಾಗಲಿ, ಸಂಗೀತವಾಗಲಿ, ಅಪರಿಚಿತವೆಂಬಂತೆ ಅದರಿಂದ ಬಿಡುಗಡೆ ಪಡೆಯುವುದು ಕಷ್ಟ. ವ್ಯಕ್ತಿಯೊಬ್ಬರ ಪ್ರಭಾವದ ನೆರಳಿನಲ್ಲಿ ಸಿಕ್ಕಿಬಿಟ್ಟರಂತೂ ಅವರಿಗೆ ಈ ಜನ್ಮದಲ್ಲಿ ಮುಕ್ತಿ ದೊರೆಯುವುದಿಲ್ಲವೇನೋ ಅನಿಸುತ್ತದೆ. ಕೆಲಸ ಬದಲಾವಣೆ, ದೀರ್ಘ ಕಾಲದ ಅನುಭವದ ತುಲನೆ, ವ್ಯಕ್ತಿಸಹಜವಾದ ಆತ್ಮಭಿಮಾನದಿಂದ ಮಾತ್ರ ಇವರಿಂದ ತಪ್ಪಿಸಿಕೊಳ್ಳಬಹುದು. ಉಣ್ಣೆನೇಕಾರರ ಸಂಘದ ಕಾರ್ಯಕ್ಕೆ ಲಕ್ನೋಕ್ಕೆ ಹೋಗಿದ್ದೆನಷ್ಟೆ. ಅಲ್ಲಿ ಖಾದಿ ಸರ್ಟಿಫಿಕೇಶನ್ ಕಮಿಷನ್ ಕಮಿಟಿ ಛೇರ್ಮನ್ ವಿಚಿತ್ರ ನಾರಾಯಣ ಶರ್ಮ ಅವರನ್ನು ಸಂದರ್ಶಿಸಿದೆ. ಅವರು ಆ ಸಂಜೆ ತಮ್ಮ ಅಗಾಧ ಶರೀರವನ್ನು ಸೂರ್ಯನ ಎದುರಿಗೆ ಚೆಲ್ಲಿದ್ದರು. ಹೊಟ್ಟೆ ಉಬ್ಬರಕ್ಕೆ ಇದೊಂದು ಪ್ರಕೃತಿ ಚಿಕಿತ್ಸೆ ಎಂಬುದು ಅವರ ವ್ಯಾಖ್ಯಾನ. ನನಗೆ ಆಗಲೇ ಸಕ್ಕರೆ ಖಾಯಿಲೆ ರೋಗ ಅಂಟಿಕೊಂಡಿತ್ತಲ್ಲ. ನನಗೂ ಗುಳಿಗೆ ನುಂಗಿ ವಾಕರಿಕೆ ಬರುತ್ತಿತ್ತು. ಎದೆಯಲ್ಲೂ ಚಳಕು ಕಂಡಿತು. ಯಾರೋ ಒಬ್ಬರು ಬೇವಿನ ಎಳೆ ಸೊಪ್ಪು ದಿನ ತಿನ್ನಿ ಎಂದರು. ಸರಿ, ಎಂದು ಪ್ರಾರಂಭ ಮಾಡಿದೆ. ಎರಡು ಮೂರು ತಿಂಗಳು 10-12 ಎಲೆನಾ ದಿನಾ ಬೇವಿನ ಸೊಪ್ಪು ತಿನ್ನುತ್ತಾ ಬಂದೆ. ನೋಡೋಣ ಎಂದು ಮಾತ್ರೆ ನಿಲ್ಲಿಸಿಬಿಟ್ಟೆ. ಶಂಕರ, ಪರೀಕ್ಷಿಸಿ ನೋಡ್ತಾನೆ, - ಸಕ್ಕರೆ ಅಂಶ ಜಾಸ್ತಿಯಾಗಿ ರಕ್ತದಲ್ಲೂ ಸಕ್ಕರೆ ಅಂಶ ಸೇರಿಯಾಗಿದೆ. 'ಕೆಟ್ಟೆನಲ್ಲಪ್ಪ' ಎಂದು ಪುನಃ ಮಾತ್ರೆ ಶುರು ಮಾಡಿದೆ. ಗ್ಯಾಸ್ಟ್ರಿಕ್ ಜೊತೆ ಅಮಿಬಿಕ್ ಡಿಸೆಂಟ್ರಿಯೂ ಪ್ರಾರಂಭವಾಯಿತು. ನನ್ನ ಸ್ವಯಂ ಅಪರಾಧದಿಂದ ಕಾಯಿಲೆಗಳನ್ನೆಲ್ಲಾ ಹೆಚ್ಚು ಮಾಡಿಕೊಂಡೆ. ನನ್ನ ದಡ್ಡತನದಿಂದ ದೂರದಲ್ಲಿದ್ದ ಮಾರಿಯನ್ನು ಶರೀರಕ್ಕೆ ಅಹ್ವಾನಿಸಿಕೊಂಡೆ. ಯಾವುದು ನೆಲೆಯಿಲ್ಲದೆ ಸಮಯಕ್ಕೆ ತಕ್ಕಂತೆ ಪಥ್ಯ ಮಾಡ್ತೀನಿ ಎಂದರೆ ಬಂದಿರುವ ಕಾಯಿಲೆ ಕೇಳಬೇಕಲ್ಲ. ಯಾವ ಮೂಲ ಪ್ರಕೃತಿ ಚಿಕಿತ್ಸೆನೂ ಬೇಡ ಎಂದು, ಡಾಕ್ಟರ್‌ಗೇ ಶರಣಾದೆ.

# ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆ

ವಿದ್ಯಾರ್ಥಿ ದೆಸೆಯಲ್ಲಿ ಟಿ.ಮರಿಯಪ್ಪ ಹಾಗೂ ಬಿ.ವೆಂಕಟಸ್ವಾಮಯ್ಯನವರ ಕಾರುಣ್ಯದ ಶಿಶುವಾಗಿ ಬೆಳೆದ ನನಗೆ ಆ ಋಣ ತೀರಿಸಬೇಕೆಂಬ ಆಸೆ ಉಳಿದೇ ಇತ್ತು. ಇಂತಹ ಕಾರ್ಯಗಳಿಗೆ ನಿರಂತರ ಸ್ಫೂರ್ತಿ ಚಿಲುಮೆಯಾದ ಬಿ.ಬೀರಪ್ಪನವರು ನನ್ನನ್ನು ಹರಿಹರದಿಂದ ತುಮಕೂರಿಗೆ ಗ್ರಾಮಾಂತರ ಕೈಗಾರಿಕೆಗಳ ಸೂಪರಿಟೇಂಡೆಂಟ್ ಆಗಿ ಕರೆಸಿಕೊಂಡರು. ಮೊದಲಿಗೆ ಹಾಸ್ಟಲ್ ಒಂದನ್ನು ಪ್ರಾರಂಭ ಮಾಡಿದೆವು ಕಲ್ಲು ಕಟ್ಟಡವೂ ತಲೆ ಎತ್ತಿತು. ಆನಂತರ ಈ ಸಂಘದ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳೂ ಹುಟ್ಕೊಂಡವು. ನಾನು ಕುರಿ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿದ್ದ ಕಾಲದಲ್ಲಿ ತುಮಕೂರಿನಲ್ಲಿ ನಮ್ಮವರ ಸ್ವಾರ್ಥತೆ ಕಂಡು ಜಿಗುಪ್ಸೆ ಹೊಂದಿ ರಾಜೀನಾಮೆ ಕೊಟ್ಟಿದ್ದೆ. 1979ರ ಡಿಸೆಂಬರ್‌ನಲ್ಲಿ ಸಂಘದ ಸದಸ್ಯರು ನಮ್ಮ ಮನೆಗೆ ಬಂದು ನೀವು ಮತ್ತೊಮ್ಮೆ ಅಧ್ಯಕ್ಷರಾಗಬೇಕೆಂದು ಒತ್ತಡ ಹೇರಲಾರಂಭಿಸಿದರು. ಇಲ್ಲಿದಿದ್ದಲ್ಲಿ ಸತ್ಯಾಗ್ರಹ ಹೂಡುವುದಾಗಿ ಸಪ್ರೇಮಪೂರಿತ ಬಲವಂತ ಮಾಡಲಾರಂಭಿಸಿದರು. ಪ್ರಾಯಶಃ ನಾನೂ ಈ ಸಂಘ ತೊರೆದು ನೀರಿನಲ್ಲಿಲ್ಲದ ಮೀನಿನಂತಾಗಿದ್ದೆನೇನೋ ತಿಳಿಯದು. ಪುನಃ ಅದರ ಪರಿಧಿಗೆ ಹೋದೆ. ಮೊದಲಿಗೆ ಈ ಸಂಘ ಕೈಗೊಂಡ ಕಾರ್ಯವೆಂದರೆ ವಿದ್ಯಾರ್ಥಿಗಳಿಗೆ ವಸತಿಗೃಹ. ಟಿ.ಮರಿಯಪ್ಪ ಮತ್ತು ಕೊಲ್ಲೂರು ಮಲ್ಲಪ್ಪನವರು ಆಗಮಿಸಿ ಕಟ್ಟಡದ ಪ್ರಾರಂಭೋತ್ಸವ ನಡೆಸಿದರು. ಸರ್ಕಾರಿ ಚಾಕರಿಗೆ ಸೇರಿದ ನಾನೂ ಎಲ್ಲೆಲ್ಲೂ ಹೋಗಬೇಕಾಯಿತು. ಸಿರಿಯಪ್ಪ ಒಡೆಯರ್ ಅವರೇ ಈ ಸಂಘದ ಕಟ್ಟಡ ನಿರ್ಮಾಣದ ಮೇಲ್ವಿಚಾರಣೆ ನೋಡಿಕೊಂಡರು. ನಾನು ಮೈಸೂರಿನಲ್ಲಿದ್ದಾಗಲೇ ಅವರು ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಲು ನಿಶ್ಚಯಿಸಿ ''ಯುನೈಟೆಡ್ ಹೈಸ್ಕೂಲು'' ಎಂದು ಶಿರಾ ಗೇಟಿನಲ್ಲಿ ಶಾಲೆ ತೆರೆದಿದ್ದರು. ನನ್ನನ್ನೇ ಅಧ್ಯಕ್ಷನನ್ನಾಗಿ ನೇಮಿಸಿಕೊಳ್ಳಲಾಗಿತ್ತು. ಅವರ ಮಕ್ಕಳೇ ಅಲ್ಲಿ ಉಪಾಧ್ಯಾಯರಾಗಿದ್ದರು. ಅದೊಂದು ಪಾಪದ ಕೂಸಾಗಿ ಅಯ್ಯನವರ ಕೊರಳಿಗೆ ನೇತು ಬಿದ್ದಿತು. ''ನೀವು ಇದನ್ನು ಸಂಘಕ್ಕೆ ವಹಿಸಿಕೊಳ್ಳಿ, ಇಲ್ಲ ಮಠದವರಿಗೆ ಕೊಟ್ಟುಬಿಡ್ತಿನಿ'' ಎಂದು ಒಡೆಯರ್ ಪ್ರತಿನಿತ್ಯ ತಮ್ಮ ಸಂಕಟ ತೋಡಿಕೊಳ್ಳುತ್ತಿದ್ದರು. ನಿವೃತ್ತನಾಗಿ ಮನೆ ಸೇರಿದ ನಾನು ಇದನ್ನು ಹೇಗೆ ವಹಿಸಿಕೊಳ್ಳಲಪ್ಪ ಎಂದು ಚಿಂತಿಸತೊಡಗಿದೆ. ಎರಡು ವರ್ಷದಿಂದ ಅಧ್ಯಾಪಕರಿಗೆ

ಸಂಬಳವಿರಲಿಲ್ಲ. ಸಂಘ ಕೂಡ ಯಾವುದೇ ರೀತಿ ಆರ್ಥಿಕ ಸಹಾಯ ಒದಗಿಸುವ ಸ್ಥಿತಿಯಲ್ಲಿರಲಿಲ್ಲ. ಅಂತೂ ಎದೆ ಗಟ್ಟಿ ಮಾಡಿಕೊಂಡು ಆ ಹೈಸ್ಕೂಲನ್ನು ಜಿಲ್ಲೆಯ ನಮ್ಮ ಜನಾಂಗದ ಮನಸೆಳೆಯಲು ಹಳ್ಳಿಗಳಿಗೆ ಹೋದರೆ, ತುಮಕೂರು ನಗರದಲ್ಲಿ ನಡೆಯುತ್ತಿರುವ ಶಾಲೆಗೆ ನಾವೇಕೆ ವಂತಿಕೆ ಕೊಡಬೇಕೆಂಬ ಪ್ರಶ್ನೆ ಕೇಳುತ್ತಿದ್ದರು. ಈ ನಡುವೆ ಬೆಳಕಿನಂತೆ ಕಾಣಿಸಿಕೊಂಡವರು -ನಮ್ಮವರು-ಆಗ ಬೆಂಗಳೂರಲ್ಲಿ ಕಮರ್ಷಿಯಲ್ ಇಲಾಖೆಯ ಡೆಪ್ಯೂಟಿ ಕಮೀಷನರ್ ಆಗಿದ್ದ ಟಿ.ಹೆಚ್.ಹನುಮಂತರಾಯಪ್ಪ ಅವರು ನನ್ನ ಪರದಾಟ ನೋಡಿ ಚಿಂತೆ ಬೇಡ, ನನ್ನೊಡನೆ ಬೆಂಗಳೂರಿಗೆ ಬನ್ನಿ ಎಂದರು. ಅವರ ಮೂಲಕ ಒಂದು ವಾರದಲ್ಲೇ 6-7 ಸಹಸ್ರ ರೂಪಾಯಿ ಸಂಗ್ರಹಿಸಿ ಅಧ್ಯಾಪಕರಿಗೆ ಒಂದಷ್ಟು ಹಣ ಕೊಟ್ಟು ಉಸಿರಾಡುವ ಪರಿಸ್ಥಿತಿ ಮೂಡಿಸಿದೆ. ಆನಂತರ ''ಶ್ರೀ ಕಾಳಿದಾಸ ಪ್ರೌಢಶಾಲೆ''ಎಂದು ಹೆಸರನ್ನು ಬದಲಾಯಿಸಿದ್ದಾಯಿತು. ಅದರ ಆಡಳಿತ ವರ್ಗದಲ್ಲಿ ಒಂದಿಷ್ಟು ಬದಲಾವಣೆ ನಡೆಸಿ ಪ್ರೌಢಶಾಲೆ ಕಣ್ಣು ಬಿಡುವಂತೆ ಮಾಡಿದೆ. ಆದರೂ ಮನಸ್ಸಿಗೆ ನೆಮ್ಮದಿ ಇಲ್ಲ. ಫಲಿತಾಂಶ ಬೇಸರ ತರಿಸುತ್ತಿತ್ತು. ಯಾಕಾದರೂ ಈ ಶಾಲೇನ ವಹಿಸಿಕೊಂಡೆನೊ ಎಂಬಂತಹ ಪೀಕಲಾಟ ನನ್ನದು-ನಾನು ಬೇಕಾದರೆ ಹಣವೋ ಅಥವಾ ಇತರೆ ಸೌಲಭ್ಯ ಒದಗಿಸಬಲ್ಲನೇ ಹೊರತು, ಶೈಕ್ಷಣಿಕ ವಿಚಾರಗಳಲ್ಲಿ ಅಜ್ಞಾನಿಯಾಗಿದ್ದೆ. ಇಂತಹ ಸಂದರ್ಭದಲ್ಲಿ ಈ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಕೃಷ್ಣಮೂರ್ತಿ ರಾಜೀನಾಮೆ ಕೊಟ್ಟರು. ಮಗಳು ವಿದ್ಯಾವಂತೆಯಾದರೆ ತಂದೆ ತಾಯಿಗಳ ಚಿಂತೆ ಪರಿಹಾರವಾಗುವುದಿಲ್ಲ, ಯೋಗ್ಯರ ಕೈಯಲ್ಲಿ ಆಕೆಯನ್ನು ಒಪ್ಪಿಸಿದಾಗಲೆ ಅವರ ಜವಾಬ್ದಾರಿ ಕಳೆಯುವುದು, ನನಗೂ ಹೀಗಾಗಿತ್ತು. ಒಂದು ಹೈಸ್ಕೂಲಿನ ಸಮಾರಂಭಕ್ಕೆ ಪಾತಗಾನಹಳ್ಳಿಗೆ ಹೋಗಿದ್ದಾಗ ಅಲ್ಲಿದ್ದ ನಮ್ಮ ಹುಡುಗ ಕೆ.ಸಿ.ರಾಮಯ್ಯ ಕಣ್ಣಿಗೆ ಬಿದ್ದರು. ಆತ ನಮ್ಮ ಸಂಘದ ಪ್ರಾರಂಭದ ವಿದ್ಯಾರ್ಥಿ. ಮೊಲಿನಿಂದಲೂ ಚುರುಕು. ವಹಿಸಿದ ಕೆಲಸನ ಶ್ರದ್ಧೆಯಿಂದ ಮಾಡುವ ಛಾತಿಯಳ್ಳ ವ್ಯಕ್ತಿ. ನಮ್ಮ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದುಬಿಡುವಂತೆ ಕೇಳಿದಾಗ ಒಪ್ಪಿಕೊಂಡ. ನನ್ನ ಹೆಗಲ ಮೇಲಿನ ಹೊರೆನ ರಾಮಯ್ಯನಿಗೆ ವರ್ಗಾಯಿಸಿದೆ. ಸಂಪಿಗೆಯಲ್ಲಿ ಕೆಲಸ ಮಾಡುತ್ತಿದ್ದ ವಿಜ್ಞಾನದ ಉಪಾಧ್ಯಾಯ ಶಿವಣ್ಣ ಎಂಬುವವರನ್ನು ಈ ಸಂದರ್ಭದಲ್ಲಿ ಸೇರಿಸಿಕೊಳ್ಳಲಾಯಿತು. ಸಂಸ್ಥೆಯಿಂದ ವ್ಯಕ್ತಿಗೆ-ವ್ಯಕ್ತಿಯಿಂದ ಸಂಸ್ಥೆಗೆ ಕೀರ್ತಿ ಬರುತ್ತದೆಂಬ ಪ್ರತೀತಿಯುಂಟು. ಇಲ್ಲಿ ಸಂಸ್ಥೆ ಮತ್ತು ವ್ಯಕ್ತಿಯಿಬ್ಬರೂ ಸಮಾನ ಕೀರ್ತಿ ಗಳಿಸಿಕೊಂಡರು. ಶಿವಣ್ಣ ಆದರ್ಶ ಅಧ್ಯಾಪಕನಿಗೆ

ಬೇಕಾದ ಎಲ್ಲಾ ಅರ್ಹತೆ ಪಡೆದಾತ. ವಿದ್ಯಾರ್ಥಿ ದೆಸೆಯಲ್ಲಿ ಮಕ್ಕಳಿಗೆ ಕೇವಲ ಪಾಠ ಮಾಡುವುದಕ್ಕಿಂತ ಸಲಕರಣೆಗಳ ಮೂಲಕ ಪಾಠ ಪರಿಚಯಿಸಿದರೆ ಹೆಚ್ಚು ಪ್ರಯೋಜನವೆಂದು ಭಾವಿಸಿ, ಇಡೀ ತನ್ನ ಶಿಕ್ಷಕ ಕಾಲವನ್ನು ಅದಕ್ಕಾಗಿ ಮೀಸಲಾಗಿಟ್ಟ ವ್ಯಕ್ತಿ. ಆತ ತಯಾರಿಸಿದ ಪಾಠೋಪಕರಣಗಳು ರಾಜ್ಯದಲ್ಲೇ ಮಾತ್ರವಲ್ಲದೆ, ದೇಶಾದ್ಯಂತ ಇರುವ ಶಿಕ್ಷಣತಜ್ಞರ ಮೆಚ್ಚುಗೆ ಗಳಿಸಿವೆ. ಪ್ರತಿವರ್ಷ 'ಅಂತರ ರಾಷ್ಟ್ರೀಯ ಸೆಮಿನಾರ್'ನಲ್ಲಿ ನಮ್ಮ ಹುಡುಗರು ಬಹುಮಾನ ತರುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಆತ್ಮಸಂತೋಷ ಯಾವುದಿದೆ. ರಾಮಯ್ಯನ ಕ್ರಿಯಾಶೀಲತೆ ಹಾಗೂ ಶಿವಣ್ಣನ ಸೇವಾ ಕೈಂಕರ್ಯ ಬಹುಬೇಗನೆ ಈ ಪ್ರೌಢಶಾಲೆಯ ಘನತೆ ಹೆಚ್ಚಿಸಿತು. ಫಲಿತಾಂಶವೊಂದರ ಹೆಚ್ಚಳ ಮಾತ್ರವಲ್ಲದೆ, ನಗರದ ಕಾರ್ಯ ತತ್ಪರತೆಯುಳ್ಳ ಪ್ರೌಢಶಾಲೆಗಳಲ್ಲಿ ಇದೊಂದು ಎಂಬುದಾಗಿ ಪರಿಗಣಿತವಾಯಿತು. ನಾನು ಕುರಿ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿದ್ದ ಕಾಲದಲ್ಲಿ ಇದಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಯಿತು. ಹಾಗೂ ಹೀಗೂ ಕಟ್ಟಡದ ನಿರ್ಮಾಣಕ್ಕೆ ಸಂಘ ಮುಂದಾಯಿತು. ರಾಜ್ಯ ಸರ್ಕಾರ 90,000 ರೂಪಾಯಿಗಳನ್ನು ಕಾಳಿದಾಸ ವಿದ್ಯಾವರ್ಧಕ ಸಂಘ 80,000 ರೂಪಾಯಿಗಳನ್ನು, ತುಮಕೂರು ನಗರ ಸಭೆ 50,000 ರೂಪಾಯಿಗಳನ್ನು ಈ ಕಟ್ಟಡಕ್ಕೆ ಮಂಜೂರು ಮಾಡಿದವು. ನಗರದ ಪ್ರಸಿದ್ಧ ಕೈಗಾರಿಕೋದ್ಯಮಿ ಎನ್.ಆರ್.ಜಗದೀಶ್ ವ್ಯಾಪಾರಿ ಟಿ.ಪಿ.ಬ್ರಹ್ಮಯ್ಯ ಮತ್ತೊಬ್ಬ ವ್ಯಾಪಾರಿ ಪದ್ಮರಾಜಯ್ಯ, ಯಡಿಯೂರಪ್ಪ, ಕಸ್ತೂರಿ ರಮೇಶ ಪೈ ಮೊದಲಾದ ಗಣ್ಯರು ಸಂಕುಚಿತ ಭಾವನೆ ತೊರೆದು ಕೊಡುಗೈ ದಾನಿಗಳಾಗಿ ಕಟ್ಟಡದ ಆಧಾರ ಸ್ಥಂಭಗಳಾದರು. ನಿಧಿ ಸಂಗ್ರಹ ಕಾರ್ಯಕ್ಕೂ ನೆರವಾದರು. ಈ ಕಟ್ಟಡದ ಸಮಿತಿಗೆ ಎನ್.ಆರ್.ಜಗದೀಶ್ ಅವರೇ, ಅಧ್ಯಕ್ಷರಾಗಿಯೂ ಟಿ.ಪಿ.ಬ್ರಹ್ಮಯ್ಯ, ಕಾರ್ಯದರ್ಶಿಯಾಗಿದ್ದರು. ಈ ಎಲ್ಲಾ ನೆರವನ್ನು ಒಂದೆಡೆ ಕಲೆ ಹಾಕಿ ಅದಕ್ಕೆ ಮೂರ್ತಿರೂಪ ಕೊಟ್ಟವರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಕೆ.ಸಿ.ರಾಮಯ್ಯ ಹಾಗೂ ಅವರ ಮಿತ್ರರು. ಜೇನುತುಪ್ಪ ಸವಿಯುವಾಗ ಅದರ ಸಿಹಿಯನ್ನಷ್ಟೇ ಹೊಗಳುತ್ತೇವೆ. ಜೇನುಹುಳ ವಿವಿಧ ಹೂಗಳಿಂದ ಸಂಗ್ರಹಿಸಿದ ಮಧುವನ್ನಾಗಲಿ, ಆ ಮಧುವನ್ನು ಕೊಟ್ಟ ಪ್ರಕೃತಿಯನ್ನಾಗಲಿ ನೆನೆಯುವುದಿಲ್ಲ. ನಾವು ವಿಚಾರವಾದಿಗಳು ಕಣ್ಣಿನ ಎದುರಿಗಿದ್ದಷ್ಟೇ ನಂಬುವ ಹುಂಬರು. ಆದರೆ ಪಂಚೇಂದ್ರಿಯಗಳಿಗೂ ಮೀರಿದ ಅನುಭೂತಿಯ ವಿಚಾರಗಳುಂಟು. ನನಗೆ ತಿಳಿದಿಲ್ಲವೆಂಬ ಕಾರಣಕ್ಕಾಗಿ ಎಲ್ಲಾ ವಿಚಾರಗಳು ಮಿಥ್ಯವಲ್ಲ. ನಮ್ಮ ಸಂಘ ಈ ಪ್ರೌಢಶಾಲೆನ ಕಟ್ಟಿರಬಹುದು.

ಆದರೆ ನಗರದ ಶಾಲೆಯು ಅಭಿವೃದ್ಧಿಗೊಳ್ಳಲೆಂದು ನಿಸ್ವಾರ್ಥದಿಂದ ನಮಗೆ ಬೆನ್ನೆಲುಬಾಗಿ ನಿಂತ ನೂರಾರು ದಾನಿಗಳು, ಸಾರ್ವಜನಿಕರು ಕೊನೆಗೆ ಒಂದು ಇಟ್ಟಿಗೆ ಎತ್ತಿಕೊಟ್ಟ ಶಾಲೆಯ ವಿದ್ಯಾರ್ಥಿ ಕೂಡ ಸ್ಮರಣೆಗೆ ಅರ್ಹರಾದ ವ್ಯಕ್ತಿಗಳು, ಸೂರ್ಯನ ರಶ್ಮಿಗಳಂತೆ ಇವರು ಅಸಂಖ್ಯಾತರಾದರೂ, ನಮ್ಮ ಮುನ್ನಡೆಗೆ ದಾರಿ ದೀಪವಾದರೆಂದು ಮಾತ್ರ ಹೇಳಬಹುದು. ಇದೇ ಆವರಣದಲ್ಲಿ ನರ್ಸರಿ ಶಾಲೆಯೊಂದನ್ನು ತೆರೆಯಲಾಯಿತು. 1980ರಲ್ಲಿ ಪ್ರೌಢಶಾಲೆಗೆ ಹೊಂದಿಕೊಂಡಂತೆ ಜೂನಿಯರ್ ಕಾಲೇಜು ತೆರೆಯುವ ನಿರ್ಧಾರ ಕೈಗೊಳ್ಳಲಾಯಿತು. ಅದರಂತೆ ಸರ್ಕಾರದ ಆಜ್ಞೆಯ ಮೇಲೆ ವಿಜ್ಞಾನ ಹಾಗೂ ಕಲಾ ವಿಭಾಗದ ಪಿ.ಯು.ಸಿ. ಶಾಲೆಗಳು ಆರಂಭವಾದವು. ಕಲಾ ವಿಭಾಗದ ''ಶಿಕ್ಷಣ ಶಾಸ್ತ್ರ''ವಿದ್ದದ್ದರಿಂದ ಎಲ್ಲೆಡೆಯ ವಿದ್ಯಾರ್ಥಿಗಳು ಬಂದರು. ನಮ್ಮ ಜೂನಿಯರ್ ಕಾಲೇಜಿನ ಚಟುವಟಿಕೆ ಕಂಡು ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಎಂದು ನಿರ್ಧರಿಸಿ 1985ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಐದು ಸಾವಿರ ಕೊಟ್ಟು ಅರ್ಜಿ ಹಾಕಿದೆವು. ನಾವಿನ್ನು ಆ ಕಡೆ ಈ ಕಡೆ ನೋಡುತ್ತಿರಬೇಕಾದರೆ, ಸರ್ಕಾರ, ಕ್ರಿಶ್ಚಿಯನ್ ಮಿಷನರಿಗೆ ಪ್ರಥಮ ದರ್ಜೆ ಕಾಲೇಜು ಕೊಟ್ಟಿತು. ನಾವು ಶಿಕ್ಷಣ ಮಂತ್ರಿಗಳನ್ನು ಕಂಡು ನಮಗೆ ಕಾಲೇಜು ಕೊಡಿ ಎಂದು ಪ್ರಾರ್ಥಿಸಿದೆವು. ಈ ವರ್ಷ ಯಾವುದೇ ಹೊಸ ಕಾಲೇಜು ಕೊಡುವುದಿಲ್ಲವೆಂಬ ಕರಾಳ ಶಾಸನ ಮಾಡಿರುವುದಾಗಿ ಜನತಾ ಸರ್ಕಾರದ ಮಂತ್ರಿಗಳು ಭರತವಾಕ್ಯ ಹೇಳಿದಾಗ ನಿಸ್ಸಹಾಯಕನಾಗಿ ವಾಪಸ್ಸು ಬಂದೆ. ಇತ್ತೀಚೆಗೆ ನಾಲ್ಕಾರು ಇಂಜಿನಿಯರಿಂಗ್ ಕಾಲೇಜು ಕೊಡುವುದಾಗಿ ವಿಧಾನ ಸಭೆಯಲ್ಲಿ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಸುಳ್ಳು ಹೇಳುವುದು, ರಾಜಕೀಯ ವಿಚಾರಗಳನ್ನು ಶಿಕ್ಷಣ ರಂಗದಲ್ಲಿ ಚರ್ಚಿಸುವುದೇ ಹವ್ಯಾಸವುಳ್ಳ ರಾಜಕಾರಣಿಗಳಿಗೆ ಏನು ಹೇಳುವುದು. ಯಾರು ಅರಸನಾದರೂ ನಮಗೇನೂ ರಾಗಿ ಬೀಸೋದು ತಪ್ಪುತ್ತದೆಯೇ ಎಂಬ ಹಳ್ಳಿ ಮುಗ್ಧೆಯ ಮಾತನ್ನ ನೆರೆಯುತ್ತಾ, ಯಾವ ವ್ಯಕ್ತಿ ಅಧಿಕಾರಕ್ಕೆ ಬಂದರೂ ಹಿಂದುಳಿದವರಿಗೆ ನಿಜವಾದ ಶೈಕ್ಷಣಿಕ ಆಸಕ್ತಿಯುಳ್ಳ ಜನರಿಗೆ ಅವಕಾಶವೆಲ್ಲಿ ಸಿಕ್ಕುತ್ತದೆಂದು ಸುಮ್ಮನೇ ಆದೆ. ಅಲ್ಲೊಂದು ಪದವೀ ಕಾಲೇಜು ಪ್ರಾರಂಭವಾಗಿ ಅದರ ಜೊತೆ ವಸತಿ ಗೃಹವೊಂದು ಸಿದ್ಧವಾಗಬೇಕು. ಯಾವುದೇ ಊರಿನಲ್ಲಿರುವ ಬಡ ನೇಕಾರರ ಅಥವಾ ಹಮಾಮ್ ಕೋಂ ಜಾತಿ ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆ ತಮ್ಮದೆಂದುಕೊಳ್ಳಬೇಕು. ಹಳ್ಳಿಯಿಂಧ ಬಂದ ಮಕ್ಕಳು ಎಲ್ಲೋ ಅವಜ್ಞೆಗೆ ಗುರಿಯಾಗಿ ಮಾನಸಿಕ ಹಿಂಸೆ ಅನುಭವಿಸುವ ಬದಲು, ವ್ಯವಸ್ಥಾಪಕರಿಂದ ಅದರ

ಅಂತಃಕರಣ ಪಡೆದು ಆತ್ಮಶಕ್ತಿಯುಳ್ಳ ಯುವಕರಾಗಬೇಕು. ಇವೆಲ್ಲಾ ಕನಸುಗಳ ನಿವೃತ್ತಿಯಾಗಿ ಸಾಕಷ್ಟು ಕೆಲಸವಿಲ್ಲದ ಮೇಲೆ ಮನಸ್ಸು ಇಂತಹ ಹುಚ್ಚು ಕಲ್ಪನೆ ತಾನೇ ಮಾಡುವುದು, ನೋಡೋಣ ನನ್ನ ಕಾಲದ ನಂತರವಾದರೂ ನಮ್ಮ ಯುವಕರು ಇದನ್ನು ಮಾಡಿಯಾರೇನೋ.

ಇದಾದ ಮೇಲೆ ಕೊರಟಗೆರೆಯಲ್ಲೊಂದು ಪ್ರೌಢಶಾಲೆ ಪ್ರಾರಂಭವಾಯಿತು. ಅಲ್ಲಿನವರೇ ಇದನ್ನು ನೋಡಿಕೊಳ್ಳುವ ಹೊಣೆ ಹೊತ್ತರು. ಸರಿ ಎಂದೆ. ಶಿರಾ ತಾಲ್ಲೂಕು ದ್ವಾರನಕುಂಟೆಯಲ್ಲಿ ಪ್ರೌಢಶಾಲೆ ಪ್ರಾರಂಭ ಮಾಡಿದೆವು. ಅಲ್ಲಿಂದ ಗುಬ್ಬಿ ತಾಲ್ಲೂಕು ಬಿದರೆಯಲ್ಲಿ ಈ ಮೊದಲೇ ಪ್ರೌಢಶಾಲೆ ಪ್ರಾರಂಭ ಮಾಡಿದೆವು. ಉಪಾಧ್ಯಾಯ ವರ್ಗದವರು ಜೊತೆಗೂಡಿ ಇಲ್ಲಿ ಶಾಲೆಗೆ ಸ್ವಂತ ಕಟ್ಟಡ ಕಟ್ಟಿದರು. ಚಿಕ್ಕಲಿಂಗಯ್ಯ ಎಂಬ ಮುಖ್ಯೋಪಾಧ್ಯಾಯರ ಶ್ರಮ ಹೇಳಬೇಕು. ಸಿದ್ದಗಂಗಯ್ಯ ಎಂಬ ದಾನಿಯೊಬ್ಬರು ಶುರುವಿನಲ್ಲಿ 4-5 ವರ್ಷ ತನ್ನ ಸ್ವಂತ ಕಟ್ಟಡವೊಂದನ್ನು ಸ್ಕೂಲು ನಡೆಸಲು ಬಿಟ್ಟು ಕೊಟ್ಟಿದ್ದರು. ನಂತರ ಶಾಲೆಯ ಕಟ್ಟಡದ 2 ರೂಮುಗಳನ್ನು ಸಹ ಉದಾರವಾಗಿ ಕಟ್ಟಿಸಿಕೊಟ್ಟರು. ಸರ್ಕಾರಿ ಶಾಲೆಯಲ್ಲಿರದ ದುಡಿಮೆ, ನಮ್ಮಂತಹವರ ಸಂಸ್ಥೆಗಳಲ್ಲಿ, ಅಧ್ಯಾಪಕರಲ್ಲಿ ಕಾಣಬಹುದು. ಜಿಲ್ಲೆಯ ಕುಗ್ರಾಮಗಳಲ್ಲಿ ಶಾಲೆಗಳಿವೆ. ನನ್ನ ಕಾಲದ ಸಾಮಾನ್ಯ ಬಿ.ಎ. ಪದವಿಗೆ ಈಗೇನು ಬೆಲೆ, ಅವು ಕಾಸಿಗೊಂದು ಕೊಸರಿಗೊಂಡು ಬಿದ್ದಿವೆ. ಚಾಲ್ತಿಯಲ್ಲಿರುವ ಪದವಿಯೆಂದರೆ ತಾಂತ್ರಿಕ ಶಿಕ್ಷಣ ಎಂದು ತಿಳಿಯುವ ಕಾಲಕ್ಕೆ ನನ್ನ ಆಯುಷ್ಯದ ಬಹುಭಾಗ ಮುಗಿಯುತ್ತಾ ಬಂದಿದೆ. ಆದರೂ ಚಿಂತೆ ಇಲ್ಲವೆಂದೂ ಪಾಲಿ ಟೆಕ್ನಿಕ್ ಕಾಲೇಜಿಗೆ ಪ್ರಯತ್ನಿಸಲಾಯಿತು. ಸಂಘಕ್ಕೆ ಬಂದ 'ಶಿಕ್ಷಣ ಮಂತ್ರಿ' ನಮಗೆ ಕಾಲೇಜು ಕೊಟ್ಟರು. ಎಂ.ಎಲ್.ಎ.ಚುನಾವಣೆಯಲ್ಲಿ ಸೋತ ಅಭ್ಯರ್ಥಿಗೆ ಕಷ್ಟ ಪರಿಹಾರ ರೂಪವಾಗಿ ಮುಖ್ಯಮಂತ್ರಿ ಅದೇ ಸ್ಥಳಕ್ಕೆ ಮತ್ತೊಂದು ಕಾಲೇಜು ಕೊಟ್ಟರು. ಕಾಲೇಜು ಪ್ರಾರಂಭವಾಗುವ ಸಮಯಕ್ಕೆ ನಮಗೆ ನೋವು ಶುರುವಾಯಿತು. ಮೂರುಲಕ್ಷ ರೂಪಾಯಿ ಠೇವಣಿ ಹಣ ಕಟ್ಟಿರಿ ಎನ್ನುತ್ತಾರೆ ತಾಂತ್ರಿಕ ಮಂಡಲಿಯವರು. ನಾವು ತೀರಾ ಬಡವರು, ಅಲ್ಲದೆ ನಾವು 'ಶಿರಾ' ದಂತಹ ನಿರಂತರ ಬರಗಾಲದ ಸ್ಥಳದಲ್ಲಿ ಕಾಲೇಜು ಪ್ರಾರಂಭ ಮಾಡುತ್ತಿದ್ದೇವೆ, ಕರುಣೆ ತೋರಿ ಎಂದರೆ ಅದೆಲ್ಲಾ ಆಗೋಲ್ಲ. ಎಲ್ಲರಿಗೂ ಒಂದೇ ಅಳತೆ ಟೋಪಿ. ತಲೆ ಚಿಕ್ಕದಿದ್ದರೆ ದಪ್ಪ ಮಾಡಿಕೊಳ್ಳಿ. ದೊಡ್ಡದಾಗಿದ್ದರೆ ಸಣ್ಣದು ಮಾಡಿಕೊಳ್ಳಿ. ನಮಗೆಲ್ಲಾ ಅದು ಗೊತ್ತಿಲ್ಲ. ನಿಮಗೆ

ಬೇಕೋ-ಬೇಡವೋ ಹೇಳಿ ಎಂದು ಜಬ್ಬರಿಸಿ ಕೇಳ್ತಾರೆ. ಸುಂಕದವನ ಮುಂದೆ ಸುಖ ದುಃಖವೇ ಎನ್ನುವಂತೆ ಬ್ಯಾಂಕ್‌ನಲ್ಲಿ ಸಾಲ ಮಾಡಿ ಕಾಲೇಜ್ ತೆರೆದಿದ್ದೇವೆ. ಸುಮಾರು ಐವತ್ತು ವರ್ಷದ ಅವಧಿಯಲ್ಲಿ ಏನೇನೋ ಆಗಿ ಹೋಗಿದೆಂಬುದನ್ನು ನೆನೆದಾಗ ಭಯವಾಗುತ್ತದೆ. 'ಗುಲಾಮಗಿರಿ' ಯನ್ನ ಪೋಷಿಸುವ ವಿದ್ಯೆ ಬೇಡ ಎಂದ ಗಾಂಧೀಜಿಯವರಿಂದ ನಾವು ಹೇಗೆ ಬೇರ್ಪಟ್ಟಿದ್ದೇವೆ? ಯಾಂತ್ರೀಕರಣದ ಪೋಷಕವಾದ ವಿದ್ಯೆ ನಮಗೆ ಪ್ರಿಯವೆನಿಸಿದೆ. ದೇಶದ ಅಭಿವೃದ್ಧಿಗೆ ಪೂರಕವಾದ ಜನಾಂಗ ಸೃಷ್ಟಿ ಮಾಡಬೇಕೆಂಬ ಶೈಕ್ಷಣಿಕ ಯೋಜನೆಯ ಜಾಗದಲ್ಲಿ ಎಂತಹವರನ್ನು ಸೃಷ್ಟಿಸಿದ್ದೇವೆ. ನಮ್ಮ ಸರ್ಕಾರಕ್ಕೆ ಕೂಡ ಯಾವುದೇ ನಿರ್ದಿಷ್ಟ ನೆಲೆ ಇಲ್ಲ. ಹಿಂದೆ ಶೈಕ್ಷಣಿಕ ಕಾರ್ಯ ಸೇವೆ ಹಾಗೂ ತ್ಯಾಗಗಳ ಮೇಲೆ ನಿಂತಿತ್ತು. ಇಂದು ದುರಾಸೆ ಹಾಗೂ ಹಣಗಳಿಸುವ ಮಾರ್ಗಗಳಿಗೆ ಸಹಾಯಕವಾಗಿ ನಿಂತಿದೆ. ಇದಕ್ಕೆ 'ಯುವಜನತೆ' ಯನ್ನು ಬೈದು ಫಲವಿಲ್ಲ. ನನಗೆ ಮೊದಲಿನಿಂದಲೂ ಯುವಕರನ್ನು ನೆಚ್ಚಿಕೊಂಡರೆ ಏನಾದರೂ ಫಲ ದೊರೆಯುತ್ತದೆಂಬ ಆಸೆ. ಅದಕ್ಕೆ 'ಕಾಳಿದಾಸ ಯುವಕ ಮಂಡಲಿ' ಯೊಂದನ್ನು ತೆರೆಯಲಾಯಿತು. ಈ ಮಂಡಳಿಯ ಆಶ್ರಯದಲ್ಲೆ 11-11-79ರಂದು ಹಿಂದುಳಿದ ಯುವಕ ಸಮ್ಮೇಳನವೊಂದನ್ನು ಸಂಘಟಿಸಲಾಯಿತು. 'ತುಮಕೂರು ಟೈಮ್ಸ್' ಪತ್ರಿಕೆಯ ಸಂಪಾದಕ ಸಿ.ಎನ್.ಭಾಸ್ಕರಪ್ಪ ಇದರ ನೇತೃತ್ವ ವಹಿಸಿದ್ದರು. ಆನಂತರ ಹಾಸ್ಟಲ್‌ನಲ್ಲಿರುವ ಯುವಕರಿಗೆ ಪ್ರತಿ ಸೋಮವಾರ ಸಭೆ ಸೇರಿ ಯಾವುದಾದರೊಂದು ವಿಚಾರ ಚರ್ಚೆ ಮಾಡಿ, ನಾನು ಬರುತ್ತೇನೆ, ಎಂದು ಅನೇಕ ಸಲ ಹೇಳಿದ್ದೇನೆ. ವರ್ಷ ಪ್ರಾರಂಭದಲ್ಲಿ ವಾರ್ಡನ್ ಹಾಗೂ ಇತರ ಒಂದಿಬ್ಬರು ವಿದ್ಯಾರ್ಥಿಗಳು ಉತ್ಸಾಹ ತೋರಿಸುತ್ತಾರೆ. ಆಮೇಲೆ ಯಥಾ ಪ್ರಕಾರ ಕಾಲೇಜು, ತಿಂಡಿ, ಓದು ಇಷ್ಟರಲ್ಲೇ ಮುಳುಗಿ ಹೋಗುತ್ತಾರೆ. ಇನ್ನು ಕ್ರೀಡೆಯ ಬಗ್ಗೆಗೂ ಹೇಳಬೇಕಾಗಿಲ್ಲ. ಸಂಜೆಯಾಗಲಿ ಅಥವಾ ಬೆಳಿಗ್ಗೆಯಾಗಲಿ ನಮ್ಮ ಹುಡುಗರು ಆರೋಗ್ಯಕ್ಕಾಗಿ ಕ್ರೀಡೆಗಳನ್ನಾಡುತ್ತಿಲ್ಲ. ಅವರು ಹೇಳೋದು ಇಷ್ಟು''ನಮಗೆಲ್ಲಾ ಅಂಕಪಟ್ಟಿಯ ಮೇಲೆ ಭವಿಷ್ಯ ನಿರ್ಣಯ ಮಾಡ್ತಾರೆ, ಇದೆಲ್ಲಾ ಯಾಕೆ?'' ಈ ಮಾತು ನಿಜವಿರಬಹುದು. ಹೀಗೆ ಅಚ್ಚಿನ ಬಿಲ್ಲೆ ತರಹ ಮುಂದಿನ ಜನಾಂಗವನ್ನ ತಯಾರು ಮಾಡುತ್ತಿದ್ದರೆ ಗತಿ ಏನು? ಭಾವನಾತ್ಮಕವಾಗಿ ದೇಶವನ್ನು ಸಂಘಟಿಸಿ ಯಾವುದಾದರೊಂದು ಮಹತ್ಕಾರ್ಯಕ್ಕೆ ಅಣಿಗೊಳಿಸಬೇಕಾದರೆ ಇಂತಹವರಿಂದ ದೊರೆಯುವ ಪ್ರಯೋಜನವಾದರೂ ಏನು?

ಈ ಶಿಕ್ಷಣ ಸಂಸ್ಥೆಗಳ ಒಡನಾಟದಲ್ಲಿರಬೇಕಾದರೆ ನಮ್ಮ ಸಮಸ್ಯೆಗಳನ್ನು ಅಭಿವೃದ್ಧಿಗೊಳಿಸಲು ಸೂಕ್ತ ವೇದಿಕೆ ಇರಬೇಕೆನಿಸಿತು. ಈಗಾಗಲೇ ಚಿಕ್ಕನಾಯಕನ ಹಳ್ಳಿ, ಮಾಯಸಂದ್ರ ಮತ್ತು ಕನಕಪುರಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಗೆಳೆಯ ಜಿ.ವಿ.ನಾ. ಕೂಡ ಇದಕ್ಕೆ ದನಿಗೂಡಿಸಿ ತಕ್ಷಣವೇ ಜಿಲ್ಲೆಯ ಇತರ ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರ್ಯಕರ್ತರನ್ನು ಕಲೆ ಹಾಕಿದೆ. 29-9-1975ರಲ್ಲಿ ಕಾಳಿದಾಸ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಸಭೆ ಸೇರಿ "ತುಮಕೂರು ಜಿಲ್ಲಾ ಸಹಾಯಧನ ಪಡೆದ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಸಂಘ" ಎಂಬ ಹೊಸ ಸಂಸ್ಥೆ ಜನ್ಮತಾಳಿತು. ನನ್ನನ್ನೇ ಅಧ್ಯಕ್ಷರನ್ನಾಗಿ ಜಿ.ವಿ.ನಾರಾಯಣಮೂರ್ತಿಯನ್ನು ಕಾರ್ಯದರ್ಶಿಯನ್ನಾಗಿ ಆರಿಸಲಾಯಿತು. ಸಂಘದ ನೊಂದಾವಣೆ ಕೆಲಸ ಮುಗಿದ ನಂತರ 18-1-1976ರಲ್ಲಿ ವಿದ್ಯಾಮಂತ್ರಿ ಎಸ್.ಮಲ್ಲಿಕಾರ್ಜುಸ್ವಾಮಿ ಇದನ್ನು ಉದ್ಘಾಟಿಸಿದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿ ನಮ್ಮ ಬಿದರೆ ಕೊರಟಗೆರೆ ಪ್ರೌಢ ಶಾಲೆಗಳ ಪ್ರಾರಂಭದ ಸಮಯದಲ್ಲಿ ಉತ್ತಮ ಸಹಕಾರ ನೀಡಿದ್ದರು. ಪರಿಶಿಷ್ಠ ಜಾತಿಗೆ ಸೇರಿದ್ದ ಮಲ್ಲಿಕಾರ್ಜುನ ಸ್ವಾಮಿ ಚೆನ್ನಾಗಿ ಓದಿಕೊಂಡಿದ್ದರು. ಕೆಲಸ ಮಾಡುವವರ ಪರವಾಗಿ ನಿಂತು ಉತ್ತೇಜನರ ಕೊಡುವವರಾಗಿದ್ದರು. ಈ ಉದ್ಘಾಟನಾ ಸಮಾರಂಭದಲ್ಲಿ ಆದರ್ಶ ಶಿಕ್ಷಕರನ್ನು, ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಭವಿಸುತ್ತಿರುವ ಬವಣೆಯನ್ನು ಅರಿಕೆ ಮಾಡಿಕೊಂಡು, ಸರ್ಕಾರ ತ್ರಿವಿಧ ಸೌಲಭ್ಯ ಒದಗಿಸುವ ಬಗ್ಗೆ ಒತ್ತಾಯ ಹೇರಲಾಯಿತು. ಈ ಸಂಸ್ಥೆ ಎರಡು ವರ್ಷ ಜಿಲ್ಲೆಯಲ್ಲಿ ಅತ್ಯುತ್ತಮ ಕೆಲಸ ಮಾಡಿತು. ಶಿಕ್ಷಣ ಸಂಸ್ಥೆಗಳ ಸಮಸ್ಯೆಯನ್ನು ಸಾರ್ವಜನಿಕರಿಗೆ ಹಾಗೂ ಸರ್ಕಾರಕ್ಕೆ ತಿಳಿಸುವ ದಿಸೆಯಲ್ಲಿ ಇದರ ಕಾರ್ಯ ಶ್ಲಾಘನೀಯ. ಮಾಯಸಂದ್ರ, ಅಳಲಘಟ್ಟ ಕೊಡಗೇನಹಳ್ಳಿ ಮುಂತಾದ ಖಾಸಗಿ ಪ್ರೌಢಶಾಲಾ ಆವರಣದಲ್ಲಿ ಮಂಡಲಿಯ ಸಭೆ ಸೇರಿತು. ಒಂದೆರಡು ವಿಚಾರ ಸಂಕಿರಣಗಳನ್ನು ಸಹ ಏರ್ಪಡಿಸಲಾಯಿತು. ಜಿ.ವಿ.ನಾರಾಯಣ ಮೂರ್ತಿ ಈ ಸಂಘದ ಸರ್ವಸ್ವವೂ ಆಗಿದ್ದು 1978ರಲ್ಲಿ ಆತನಿಗೆ ಪಾರ್ಶ್ವವಾಯು ಬಡಿದಾಗ ಸಂಘಕ್ಕೂ ಅದೇ ಗತಿಯಾಯಿತು. ಸಹಾಯಧನ ನಿಯಮಾವಳಿ ತಿದ್ದುಪಡಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೋಷಣೆ ತಪ್ಪಿಸುವ ನಮ್ಮ ಗುರಿ ಹಾಗೇ ಉಳಿಯಿತು. 1977ರಲ್ಲಿ ಸಂಘಕ್ಕೆ ಕೆಲಸ ಮಾಡಲು ಸಾಕಷ್ಟು ಶಕ್ತಿಯಿಲ್ಲದ ಕಾರಣ ನಾನು ಹಿಂಜರಿಯಬೇಕಾಯಿತು.

ಇಂಗ್ಲೀಷ್ ಗಾದೆಯೊಂದು A Poor man's debt makes a great noise ಎಂದು ಹೇಳುತ್ತದೆ. ಹಾಗಾಯಿತು ಚೆನ್ನಮ್ಮ ಎಂಬಾಕೆ ವಿಚಾರ. ಈಕೆ ಚಿಕ್ಕಹನುಮಯ್ಯನ ಹೆಂಡತಿ. ಆತ ಇಪ್ಪತ್ತೈದು ವರ್ಷದ ಹಿಂದೆ ಜಿಲ್ಲಾ ಬೋರ್ಡ್ ಅಧ್ಯಕ್ಷರ ಮನೆಯೊಂದರಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿ ಮರಣ ಹೊಂದಿದ್ದ, ಆಗಾಗ್ಗೆ ಚೆನ್ನಮ್ಮ 'ಅಣ್ಣಾ, ನನ್ನ ಜೀವನಕ್ಕೆ ಏನಾದರೂ ಗತಿ ಮಾಡಿಕೊಡಿ' ಎನ್ನುತ್ತಿದ್ದಳು. ಆತ ನಿವೃತ್ತನಾಗುವ ವೇಳೆಗೆ ಕುಟುಂಬ ವಿಶ್ರಾಂತಿ ವೇತನ ಮತ್ತಿತರ ಯಾವುದೇ ಸೌಲಭ್ಯ ಜಿಲ್ಲಾ ಬೋರ್ಡ್‌ನ ನೌಕರರಿಗೆ ಇರಲಿಲ್ಲ. ಸರ್ಕಾರದಿಂದ ನಿನಗೆ ಏನು ಸಹಾಯ ಮಾಡಿಸುವ ಹಾಗಿಲ್ಲವೆಂದರೆ ಅವಳು ಕೇಳುವಂತಿರಲಿಲ್ಲ. ''ನೀವು ದೊಡ್ಡ ಮನಸ್ಸು ಮಾಡಬೇಕು'' ಎಂದು ಹಳೇ ರಾಗ ತೆಗೆಯುತ್ತಿದ್ದಳು. ಜಿಲ್ಲಾಧಿಕಾರಿ ಕಛೇರಿಯ ರಿಕಾರ್ಡ್‌ನ್ನೆಲ್ಲಾ ಪರಿಶೋಧಿಸಿದೆ. ಗ್ರಾಚುಯುಟಿ ಹಾಗೂ ಕುಟುಂಬ ವಿಶ್ರಾಂತಿ ವೇತನ ಕೊಡುವ ಬಗ್ಗೆ ಯಾವುದೇ ಸರ್ಕಾರದ ಹುಕುಂ ಇರಲಿಲ್ಲ. ಇಪ್ಪತ್ತೈದು ವರ್ಷದ ಹಳೆಯ ಕೇಸಿಗೆ ನೀವ್ಯಾಕೆ ಕೈಹಾಕಿ ನಿರಾಶೆ ಪಡ್ತೀರ ಅನ್ನುತ್ತಾರೆ ಮಕ್ಕಳು. ವಿಧಾನಸೌಧದಲ್ಲಿ ಪೆನ್‌ಷನ್ ವಿಲೇವಾರಿಗೆ ಒಬ್ಬ ವಿಶೇಷ ಅಧಿಕಾರಿ ಇರುವುದು ತಿಳಿದುಬಂತು, ಅವರ ಹೆಸರು ಗೋಪಾಲಸ್ವಾಮಿ ಎಂದಿರಬೇಕು. ಅವರನ್ನು ಕಂಡು ಜಿಲ್ಲಾಬೋರ್ಡ್ ನೌಕರರಿಗೂ ಏಕೆ ಕುಟುಂಬ ವಿಶ್ರಾಂತಿ ಕೊಡಬಾರದೆಂದು ಕೇಳಿದೆ. ಅವರು ಮಾತನಾಡುವಷ್ಟರಲ್ಲಿ ಚೆನ್ನಮ್ಮ ಅರ್ಥಾತ್ ದಿವಂಗತ ಚಿಕ್ಕಹನುಮಯ್ಯನ ಹೆಂಡತಿಯ ಅರ್ಜಿ ಇಟ್ಟೆ. ಮತ್ತೊಮ್ಮೆ ಚಿಕ್ಕಹನುಮಯ್ಯನ ಸರ್ವಿಸನ್ನೆಲ್ಲಾ ಜಾಲಾಡಿ ತಂದಿದ್ದಾಯಿತು. ಸತ್ತು ಸ್ವರ್ಗದಲ್ಲಿರುವ ಅನಾಮಧೇಯನ ಮೇಲೆ ವಿಶಿಷ್ಟ ರೀತಿಯ ರೆಕಾರ್ಡ್ ಸಿದ್ಧವಾಯಿತು. ಇಲ್ಲಿ ಎರಡು ಕೆಲಸವಾಗಬೇಕಾಗಿತ್ತು. ಜಿಲ್ಲಾ ಬೋರ್ಡಿನ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದು, ಹಾಗೆಯೇ ದಿವಂಗತನ ಹೆಂಡತಿಗೆ ಕುಟುಂಬ ವೇತನ ಮಂಜೂರು ಮಾಡುವುದು. ಆ ವಿಶೇಷಾಧಿಕಾರಿ ಚೆನ್ನಮ್ಮನ ಅರ್ಜಿಯ ಜೊತೆ ಚಿಕ್ಕಹನುಮಯ್ಯನ ಸಮಸ್ತ ರಿಕಾರ್ಡ್‌ನ್ನೂ ಅಕೌಂಟೆಂಟ್ ಜನರಲ್‌ರವರ ಕಛೇರಿಗೆ ಹಾಕಿದರು. ಅವರೋ ಕೊಕ್ಕೆಗಳ ಬಾಣದ ಸುರಿಮಳೆಯನ್ನೆ ಸುರಿಸಿದರು. ಈಗ ಹೇಗೂ ನೀರಿನಲ್ಲಿ ಮುಳುಗಿದ್ದೇನಲ್ಲ ಎಂದುಕೊಂಡು ತಾಳ್ಮೆಯಿಂದ ಅವಕ್ಕೆಲ್ಲಾ ಪರಿಹಾರ ಸೂಚಿಸಿದೆ. ಕೊನೆಗೆ ಚೆನ್ನಮ್ಮನಿಗೆ 150-00 ರೂಪಾಯಿಗಳ ವಿಶ್ರಾಂತಿ ವೇತನ ಮಂಜೂರಾಯಿತು. ನನಗಂತೂ ಸ್ವರ್ಗಕ್ಕೆ ಮೂರೇ ಗೇಣು ಅಂತಾರಲ್ಲ, ಎಂಬಷ್ಟು ಸಂತೋಷ ಎಡವಿಬಿದ್ದ ಗರಿಕೆಯ ತಳಶೋಧಿಸಿದ ಚಾಣುಕ್ಯ

ಅಂತಾರೆ. ನಾನಾದರೋ ಬೇರೆಯವರ ದೃಷ್ಟಿಯಿಂದ ಹಿಡಿದ ಕೆಲಸ ಮುಗಿಸಿದೆ.

ಈ ಮಧ್ಯ 'ರೆಂಡಾರ್ ಪೆಸ್ಟ್' ಸಾಂಕ್ರಾಮಿಕ ಕಾಯಿಲೆಯಿಂದಾಗಿ ಅನೇಕ ಕುರಿಗಳು ಸಾಯತೊಡಗಿದ್ದವು. ದಿನನಿತ್ಯ ನಾನಾ ಕಡೆಯಿಂದ ಕಳವಳದ ಸುದ್ದಿ ಬರುತ್ತಿತ್ತು. ಚಿತ್ರದುರ್ಗ, ಬಳ್ಳಾರಿ ಪ್ರವಾಸ ಕೈಗೊಂಡು ಜೀವನಾಧಾರದ ಕುರಿಗಳನ್ನು ಕಳ್ಕೊಂಡು ನಮ್ಮವರು ದಿಕ್ಕು ತೋಚದಂತೆ ಕಂಗಾಲಾಗಿದ್ದರು. ಚಿತ್ರದುರ್ಗದಲ್ಲಿ ಪತ್ರಿಕಾಗೋಷ್ಠಿ ಕರೆದು ತಕ್ಷಣ ಸರ್ಕಾರ ಕ್ರಮಕೈಗೊಳ್ಳುವಂತೆ ಒತ್ತಾಯ ಮಾಡಿದೆ. ರಾಜ್ಯ ಪಶುಸಂಗೋಪನಾ ಮಂತ್ರಿ ಹಾಗೂ ಮುಖ್ಯಮಂತ್ರಿಗಳಿಗೆ ಇಡೀ ಪ್ರವಾಸದ ವರದಿಯನ್ನು ಕಳುಹಿಸಿಕೊಟ್ಟೆ. ಕುರಿ ಸಾಕುವವರಿಗೆ ಆದ ಅನ್ಯಾಯದ ಸ್ಪಷ್ಟ ಚಿತ್ರಕೊಟ್ಟೆ. ಸಂಚಾರಿ ಪಶುಸಂಗೋಪನಾ ಘಟಕ ಚುರುಕುಗೊಳ್ಳಬೇಕೆಂದು ಆಗ್ರಹಪಡಿಸಿದೆ. ತುಮಕೂರಿನಲ್ಲಿ ಪತ್ರಿಕಾಗೋಷ್ಠಿ ಕರೆದು ಸರ್ಕಾರದ ನಿಷ್ಕ್ರಿಯತೆಯ ಬಗ್ಗೆ ಟೀಕೆ ಮಾಡಿದೆ. ಕೆ.ಆರ್.ನಗರದ ವಿಧಾನಸಭಾ ಸದಸ್ಯರಾದ ವಿಶ್ವನಾಥ ಅವರಿಗೆ ವರದಿಯೊಂದನ್ನು ಕಳುಹಿಸಿದಾಗ ಅಸೆಂಬ್ಲಿಯಲ್ಲಿ ಗಮನ ಸೆಳೆಯುವ ಸೂಚನೆಯ ಮೇಲೆ ಸರ್ಕಾರದ ಕಣ್ತೆರೆಸಿದರು. ಆಮೇಲೆ ಒಂದಿಷ್ಟು ಕೆಲಸ ನಡೆದವು. ಅಷ್ಟರಲ್ಲಿ ಆದಂತಹ ಆಘಾತ ಅಷ್ಟಿಷ್ಟಲ್ಲ. ಸಾವಿರಾರು ಕುರಿಗಳನ್ನು ಕಳೆದುಕೊಂಡು ಕುರುಬರು ಬಡವರೇ ಆದರೂ ಅವರಿಗೆ ಯಾವುದೇ ಪರಿಹಾರವಿಲ್ಲ. ದನಿಯಿಲ್ಲದವರ ಪಾಡು ಇದೇ ತಾನೇ! ಲಕ್ಷಾಂತರ ರೂಪಾಯಿ ಸಾಲವನ್ನು ದೊಡ್ಡ ಕೈಗಾರಿಕೆಗಳಿಗೆ ಕೊಟ್ಟು ವಜಾ ಮಾಡುವ, ಅಂತರ ರಾಷ್ಟ್ರೀಯ ಸಮ್ಮೇಳನದ ಅವಾಂತರಗಳಲ್ಲಿ ಕೋಟ್ಯಾಂತರ ಹಣಾನ ನೀರಿನಂತೆ ಖರ್ಚು ಮಾಡುವ, ಕೆಲವೇ ಜನಕ್ಕೆ ದೇಶದ ಮುಕ್ಕಾಲು ಆದಾಯವನ್ನು ಮೀಸಲಾಗಿರಿಸುವ ನಾವು, ಹಳ್ಳಿಗನ ದನ, ಕುರಿ, ಕೋಳಿ ಮತ್ತಿತರ ಜಾನುವಾರುಗಳು ಸಾಂಕ್ರಾಮಿಕದಿಂದ ಸತ್ತಾಗ ಒಂದಿಷ್ಟು ಪರಿಹಾರ ಕೊಡಲು ಕಾನೂನಿನ ನೆಪ ಹಾಕುತ್ತೇವೆ-ಹೇಗಿದೆ ನಮ್ಮ ಸಮಾಜವಾದ!

"Facts, apart from their relationship are like labels on empty bottles" ಎಂಬುದು ನಿಜ; ಹಣೆಬರಹದಲ್ಲಿದ್ದ ಕಷ್ಟಗಳು, ವಯಸ್ಸು, ಸಮಯ ಮುಂತಾದ ಯಾವುದೇ ವಿನಾಯ್ತಿ ತೋರಿಸಿ ಬರುತ್ತವೆಯೇ; ಈ ವಯಸ್ಸಿನಲ್ಲಿ ಇಂತಹ ಕಷ್ಟ ಬಂದರೆ ಹೇಗಪ್ಪ ಎಂದುಕೊಂಡರೂ, ವಿಪತ್ತು ಯಾವಾಗ ಬಂದರೂ ಒಂದೇ ಥರ. ಅಲಗಿಗೆ ಸಿಲುಕಿ ನರಳಬೇಕಾದ್ದು ಖಂಡಿತ, 14-1-19೫1ರ ಬೆಳಿಗ್ಗೆ ತುಮಕೂರು ಸೋಮೇಶ್ವರಪುರಂ ಬಡಾವಣೆಯ ನನ್ನ

ಮನೆಯಿಂದ ಬೆಳಗಿನ ವಾಕಿಂಗ್ ಹೊರಟಿದ್ದೆ. ಮನೆಯಿಂದ ನೂರು ಹೆಜ್ಜೆ ಇಟ್ಟಿರಬಹುದು, ಫುಟ್‌ಪಾತ್ ಮೇಲೆ ಹೋಗುತ್ತಿದ್ದ ನನಗೆ ರಭಸವಾಗಿ ಬಂದ ಆಟೋರಿಕ್ಷಾ ಏಕ್‌ದಂ ಡ್ಯಾಷ್ ಹೊಡ್ದು ಪಲ್ಟಿ ಹೊಡಿಸ್ತು. ತಲೆ, ಕಾಲು, ಸೊಂಟ, ಕೈಗಳಿಗೆ ಜಖಂ ಆಗಿ ಸಾಕಷ್ಟು ರಕ್ತ ಹರಿಸಿತು. ಅಕ್ಕಪಕ್ಕದೋರು, ಹೆಂಡತಿ ಮಕ್ಕಳು ಜೊತೆಗೂಡಿ ತಕ್ಷಣ ಆಸ್ಪತ್ರೆಗೆ ಸೇರಿಸಿದರು. ಬಲಗಾಲಿನ ಮಂಡಿ ಸೊಂಟಗಳಿಗೆ ಹೆಚ್ಚು ಬಡ್ತ ಬಡಿದಿತ್ತು. ವಯಸ್ಸು ಕಾರಣ, ಮೂಳೆ ಕೂಡೋದು ಕಷ್ಟ ಅಂದರು ಡಾಕ್ಟು. ಸಕ್ಕರೆ ಕಾಯಿಲೆ, ಗ್ಯಾಸ್ಟ್ರಿಕ್ ರೋಗಗಳ ನಡುವೆ ಜರ್ಜರಿತನಾದ ನನಗೆ ಹೊಸ ಧಾಳಿಯೊಂದು ಬಡೀತು. ಇಪ್ಪತ್ತೈದು ದಿನಗಳ ನಂತರ ಆಸ್ಪತ್ರೆಯಿಂದ ಮನೆಗೆ ಬಂದೆ. ಮನೆಯವರಿಗಂತೂ ನಾನೊಂದು ಕೂಸಾಗಿದ್ದೆ. ನನಗೂ ನನ್ನ ಸ್ಥಿತಿ ಬೇಸರಿಕೆ ತರಿಸುತ್ತಿತ್ತು. ಎಲ್ಲಿಗೂ ದಿಢೀರನೆ ಹೋಗುವ ಹಾಗಿಲ್ಲ. ದೀರ್ಘ ಪ್ರಯಾಣ ಕೈಗೊಳ್ಳುವಲ್ಲಿ, ಹಿಂದಿದ್ದ ವಿಶ್ವಾಸ ಮಾಯವಾಗಿತ್ತು. ಕಾಲ ಕ್ರಮೇಣ ಬೆಂಗಳೂರು, ಮತ್ತಿತರ ಕಡೆ ಸುತ್ತಾಡಲು ತಯಾರಾದೆ, ಆದರೂ ಮೊದಲಿದ್ದ ಶಕ್ತಿಯಿಲ್ಲ. ಪ್ರತಿನಿತ್ಯ ಬಲಗಾಲಿನ ಮಂಡಿ ಹಾಗೂ ಸೊಂಟದ ನೋವು ಇದ್ದೇ ಇರುತ್ತದೆ. ಆಲೋಪತಿ, ಹೋಮಿಯೋಪತಿ, ಆಯುರ್ವೇದಿಕ್ ಮುಲಾಮು, ಮಾತ್ರೆ ಪುಡಿಗಳನ್ನೆಲ್ಲಾ ಉಪಯೋಗಿಸುತ್ತಿದ್ದೇನೆ. ಆದರೆ ನೋವು ಬಿಸಿಲ್ಗುದುರೆಯಂತೆ ಆಡಿಸುತ್ತಿದೆ.

ಈ ಮಧ್ಯೆ ಟ್ರಾಫಿಕ್ ಪೊಲೀಸ್‌ನವರು ಆಟೋ ಮಾಲೀಕರ ಮೇಲೆ ಜಿಲ್ಲಾ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವಂತೆ ಸೂಚಿಸಿದರು. ಕೋರ್ಟ್ ಕಛೇರಿಗಳ ಸಹವಾಸ ಸಾಕೆಂದು ನಾನು ಸುಮ್ಮನಿದ್ದರೂ ಪೊಲೀಸ್‌ನವರ ಒತ್ತಾಯದ ಮೇಲೆ ಮೊಕದ್ದಮೆ ಹೂಡಲೇಬೇಕಾಯಿತು. ನ್ಯಾಯಾಲಯ 15-7-1982ರಲ್ಲಿ 10 ಸಾವಿರ ರೂ. ಪರಿಹಾರ ಕೊಡಬೇಕೆಂದು ಹೇಳಿದಾಗ, ಆಟೋರಿಕ್ಷಾದ ಮಾಲೀಕರು ಹೈಕೋರ್ಟಿಗೆ ಅಪೀಲು ಹಾಕಿದರು. ಅವರ ಹೆಸರು ಡಾ|| ಭಗವಾನ್‌ಸಿಂಗ್ ಎಂದು; ನನಗೆ ಬಹುಮಟ್ಟಿನ ಪರಿಚಿತರೂ ಹೌದು. ನನಗೆ ಅಪಘಾತವಾದಾಗಾಗಲಿ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುವಾಗಾಗಲಿ ನನ್ನನ್ನು ಮಾನವೀಯತೆಯಿಂದಾದರೂ ನೋಡಲು ಬರಲೇ ಇಲ್ಲ. ಅವರ ಅಪೀಲ್ ನಂತರ, ಹೈಕೋರ್ಟ್ ಎಂಟು ಸಾವಿರ ರೂಪಾಯಿಗಳನ್ನು ಪರಿಹಾರ ಕೊಡಬೇಕೆಂದು ಆಜ್ಞಾಪಿಸಿದಾಗ 4,000-00 ತಕ್ಕೋಳಿ ಅಂತಾ ರಾಜಿ-ಕಬೂಲಿಗೆ ಬಂದರು. ಹಣವೊಂದರ ವಿಚಾರ ಬಂದು ಬಿಟ್ಟರೆ ಈ ಜನ

ಯಾವ ಮಟ್ಟಕ್ಕೆ ಬೇಕಾದರೂ ಬರುತ್ತಾರೆ. ಇಂತಹ ವರ್ತನೆ ನನಗೆ ಜಿಗುಪ್ಸೆ ತಂದಿತು. ಇನ್ನೂ ಕೂಡ ಪೂರ್ತಿ ಮೊತ್ತ ಬಂದಿಲ್ಲ.

ಬೆಂಗಳೂರಿನ ಗೆಳೆಯರು "ನೀವು ಸಮಾಜಕ್ಕೆ ದುಡಿದಿದ್ದೀರಿ ನಿಮಗೊಂದು ಸನ್ಮಾನ ಮಾಡಬೇಕು" ಎಂದರು. ನಾನು ಇಲ್ಲ, ನಾನೇನೂ ಮಹತ್ಕಾರ್ಯ ಮಾಡಿಲ್ಲ, ಬೇಡವೆಂದು ಹೇಳಿದೆ. ಆದರೂ ಕೇಳದೆ ಮಾಜಿ ಸಚಿವರಾದ ವೈ.ರಾಮಚಂದ್ರ ಅವರ ಅಧ್ಯಕ್ಷತೆಯಲ್ಲಿ ಭರ್ಜರಿ ಸಮಾರಂಭ ಏರ್ಪಡಿಸಿದರು. ಡಾ॥ ಎಚ್.ನರಸಿಂಹಯ್ಯನವರು ಸಹ ಈ ಸಮಾರಂಭಕ್ಕೆ ಬಂದಿದ್ದರು.

ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಘ ನಡೆಸುತ್ತಿದ್ದ ವಸತಿ ಗೃಹಕ್ಕೆ ಇಪ್ಪತ್ತೈದು ವರ್ಷ ಆಯ್ತು. ಕಾರ್ಯಕಾರಿ ಸಮಿತಿಯವರು ಬೆಳ್ಳಿಹಬ್ಬ ಆಚರಣೆ ಮಾಡಬೇಕೆಂದಾಗ ನಾನು 'ಸುಮ್ಮನೇ ಹಬ್ಬ ಮಾಡಿ, ಊಟ ಮಾಡಿದರೆ ಏನು ಸಾಧಿಸಿದಂಗೆ ಆಯ್ತದೆ, ಒಂದಿಷ್ಟು ಉಳಿಯೋ ಕೆಲಸ ಮಾಡೋಣ" ಎಂದೆ. ನೀವೇನಾದರೂ ಸಲಹೆಕೊಡಿ ಎಂದರು. ಸಂಘದ ಮುಂದಿದ್ದ ಜಾಗದಲ್ಲಿ ಒಂದೈದು ಅಂಗಡಿ ಹಾಕೋಣ ಬರೋ ಬಾಡಿಗೆಯಲ್ಲಿ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಊಟ ಕೊಡೋಣ ಎಂದೆ. ಮೊದಲಿಗೆ ನಾನೇ ಐದು ಸಾವಿರ ಹಾಕಿದೆ. ಬೆಳ್ಳಿಹಬ್ಬದ ಆಚರಣೆಗೆಂದು ಮತ್ತೊಮ್ಮೆ ಜೋಳಿಗೆ ಹೆಗಲಿಗೆ ಹಾಕಿದೆ. ಪಾವಗಡ, ಶಿರಾ ಮತ್ತಿತರ ಭಾಗಗಳಿಂದ 55,000-00 ರೂ.ಗಳು ಸಂಗ್ರಹವಾದವು. ಶಂಕು ಸ್ಥಾಪನೆಯಲ್ಲಿ ಡಿ.ಕೆ.ನಾಯ್ಕರ್, ರಾಜ್ಯಸಭಾ ಸದಸ್ಯರಾದ ಕೆ.ಆರ್.ನಗರದ ಬಸವರಾಜು ಮತ್ತಿತರರು ಭಾವಗಹಿಸಿದ್ದರು. ಸುಮಾರು ಎರಡು ಲಕ್ಷದ ಕಟ್ಟಡ ಸಿದ್ಧವಾಯ್ತು. ಒಂದು ದಿನ ಆ ಮಳಿಗೆಗಳಿಗೆಲ್ಲಾ ಮೇಲೆ ಕಾಂಕ್ರಿಟ್ ಹಾಕಿದ್ದಾರೆ. ಸಂಜೆ ಹೋದರೆ, ನೀರು ಹಾಕಿದಂತೆ ಕಂಡು ಬರಲಿಲ್ಲ. ನಾನೇ ಏಣಿ ಹತ್ತಿ ಮೇಲಕ್ಕೆ ಹೋದೆ. ಆಮೇಲೆ ಹೇಗೋ ನೀರು ಹಾಕಿಸಿದ್ದಾಯಿತು. ಏಣಿಯೊಳಗೆ ಸಿಕ್ಕ ಕಾಲಿಗೆ ಗಾಯ ಆಯಿತು. ಮೊದಲೇ ಸಕ್ಕರೆ ಕಾಯಿಲೆ. ಇನ್ನು ಇದನ್ನು ಬೇರೆ ಮಾಡ್ಕೊಂಡ್ರಲ್ಲ, ಎಂದು ಡಾಕ್ಟರುಗಳು ಅಭಿಮಾನದಿಂದ ಛೀಗುಟ್ಟಿದರು. ಆ ಹಾಳಾದ ಗಾಯ ಮೂರು ತಿಂಗಳಾದರೂ ವಾಸಿಯಾಗಲೇ ಇಲ್ಲ. ಕಟ್ಟಡದ ಪ್ರಾರಂಭೋತ್ಸವ ಅದ್ದೂರಿಯಿಂದ ಮಾಡಬೇಕೆಂದು ಸಂಘದ ಕಾರ್ಯದರ್ಶಿ ಕೆ.ದಾಸಪ್ಪ, ಕೆ.ಸಿ.ರಾಮಯ್ಯ, ಸಿ.ಎಂ.ಭಾಸ್ಕರಪ್ಪ ಮೊದಲಾದವರು ಹೇಳಲಾರಂಭಿಸಿದರು. ನಾನೂ ಇದೆಲ್ಲಾ ಡವಲು ಏಕೆ ಆ ಹಣಾನ ಇಲ್ಲಿ ಕೊಡಿ

ಇನ್ನಿಬ್ಬರು ಬಡ ಹುಡುಗರಿಗೆ ಊಟ ಹಾಕೋಣ ಎಂದರೆ ಎಲ್ಲರೂ 'ನೀವು ದೇವರಾಗಿರಿ' ಎಂದು ಸುಮ್ಮನಾಗಿಸಿದರು. ನನಗೊಂದು ಅಭಿನಂದನ ಗ್ರಂಥ ಸಿದ್ಧವಾಯಿತು. ಚಿಕ್ಕವೀರಯ್ಯ, ದಾಸಪ್ಪ, ರಾಮಯ್ಯ, ಕಮಲೇಶ್ ಮೊದಲಾದ ಗೆಳೆಯರು ಶ್ರಮ ವಹಿಸಿ ಗ್ರಂಥ ಸಿದ್ಧಮಾಡಿದರು. ದುರಾದೃಷ್ಟವಶಾತ್ ಸಮಾರಂಭ ನಡೆಯುವ ಮೊದಲೇ ದಾಸಪ್ಪ - ನಮ್ಮನ್ನು ಅಗಲಿದ್ರು. ಶಿಕ್ಷಣಮಂತ್ರಿ ರಘುಪತಿ ಕಟ್ಟಡದ ಪ್ರಾರಂಭೋತ್ಸವ ನಡೆಸಿದರು. ಸಚಿವರಾಗಿದ್ದ ವೈ.ಕೆ.ರಾಮಯ್ಯ, ವಿ.ಎಲ್.ಪಾಟೀಲ್, ಸಿದ್ಧರಾಮಯ್ಯ, ಉಪಸಭಾಪತಿ ಎಸ್.ಮಲ್ಲಿಕಾರ್ಜುನಯ್ಯ ಮೊದಲಾದವರು ಭಾಗವಹಿಸಿದ್ದರು. ಹೂವು ತರುವಷ್ಟು ಕೆಲಸವನ್ನು ಮಿತ್ರರು ಬೆಟ್ಟದಷ್ಟು ಮಾಡಿ ನನ್ನನ್ನು ಕುಬ್ಜನನ್ನಾಗಿಸಿದರು. ತಮ್ಮ ಕಮ್ಮ ಕಲ್ಪನೆಯನ್ನೆಲ್ಲಾ ನನ್ನಲ್ಲಿ ಕಂಡು ನಾನು ಮತ್ತೊಮ್ಮೆ ಆತ್ಮದರ್ಶನ ಮಾಡಿಕೊಳ್ಳುವಂತೆ ಮಾಡಿದರು. ನನ್ನೆಲ್ಲಾ ದೋಷಗಳನ್ನು ತಮ್ಮಗಳ ಔದಾರ್ಯದ ಹೊಂಬೆಳಕಿನಲ್ಲಿ ವೀಕ್ಷಿಸಿ ಹೊಸ ಜನ್ಮ ಕರುಣಿಸಿದರು. ಈ ಮಿತ್ರರ, ಅಭಿಮಾನಿಗಳ ಅಗಾಧ ಋಣದ ಹೊರೆಯಿಂದ ನಾನು ಕುಗ್ಗಿದ್ದೇನೆ. ನನ್ನ ಕೆಲಸ ಕಾರ್ಯಗಳು ಎಷ್ಟೊಂದು ಸಫಲವಾಗಿವೆಯೋ ನಾ ತಿಳಿಯೆ, ಆದರೆ ಅವರ ಪ್ರೀತಿ ಅಭಿಮಾನಗಳು ಮಾತ್ರ ನನ್ನನ್ನು ಸಾಲಗಾರನನ್ನಾಗಿಸಿವೆ. ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘದ ಸ್ಥಾಪನೆ, ಅದರ ಬೆಳವಣಿಗೆ ವೀಕ್ಷಿಸಿದಾಗ ನನಗಿನ್ನೂ ಅತೃಪ್ತಿ ಇದೆ. ನಮ್ಮ ಸಮಾಜದ ಅವಶ್ಯಕತೆಗನುಗುಣವಾಗಿ ಅದಿನ್ನೂ ಬೆಳೆದಿಲ್ಲ. ಪ್ರಾಯಶಃ ನನ್ನ ಶಕ್ತಿ ಸಾಮರ್ಥ್ಯಗಳ ಪರಿಮಿತಿ ಅದಕ್ಕೂ ಅಂಟಿರಬಹುದೇ. ಹಿಂದುಳಿದ ಜನಾಂಗವಾದ ಕುರುಬರಿಗೆ ಅಜ್ಞಾನ, ಬಡತನ, ಅಧೈರ್ಯಗಳು ಹುಟ್ಟುತ್ತಲೇ ಬಳುವಳಿಯಾಗಿ ಬಂದಿವೆ. ಇದು ನೀಗಬೇಕಾದರೆ ಜ್ಞಾನ ಪ್ರಸಾರವಾಗಬೇಕು. ಆರ್ಥಿಕ ಸ್ವಾವಲಂಬನೆ ದೊರೆಯಬೇಕು. ನಮ್ಮ ಯುವಕರು ಯಾವುದೇ ಜವಾಬ್ದಾರಿ ಹೊರಲು ಸಮರ್ಥರಾಗುವ ವಾತಾವರಣ ಈ ಸಂಘದ ಆಶ್ರಯದಲ್ಲಿ ಮೂಡಬೇಕು. ಅಷ್ಟೆ ಅಲ್ಲ; ಎಲ್ಲಾ ಹಮಾಮುಕೋಮು ಜಾತಿಯ ಸಮಗ್ರ ಅಧ್ಯಯನಕ್ಕೆ ಇಲ್ಲಿ ಅವಕಾಶವಿರಬೇಕು. ವೈಜ್ಞಾನಿಕ ತಳಹದಿಯ ಮೇಲೆ ನಮ್ಮ ಸಾಮಾಜಿಕ ಸ್ತರಗಳ ಅಧ್ಯಯನವಾಗಬೇಕೆಂದುಕೊಂಡಿದ್ದೇನೆ. ಸರ್ಕಾರಿ ಉದ್ಯೋಗದಲ್ಲಿರುವವರ ಸಂಖ್ಯೆ, ಕುಲ ಕಸುಬು, ಅವರ ಏಳು-ಬೀಳು, ಸರ್ಕಾರದ ಕರ್ತವ್ಯ, ಸಮಾಜ ಸೇವಕರ ದುಡಿಮೆ, ಆಯಾಯ ಕೋಮುಗಳ ಸಂಪ್ರದಾಯ, ಸಾಹಿತ್ಯ ಮುಂತಾದ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡಬೇಕೆಂಬುದು ನನ್ನಾಸೆಯಾಗಿತ್ತು, ಅದಕ್ಕಾಗಿ

''ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧ್ಯಯನರ ಕೇಂದ್ರ'' ಎಂಬ ಸಂಸ್ಥೆ ಜನ್ಮ ತಾಳಬೇಕೆಂದಿರುವವನು ನಾನು. ಆಸೆ ಹಿಮಾಲಯದಷ್ಟು ಇರುತ್ತದಲ್ಲವೆ? ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಘ ಹೀಗೆ ಇನ್ನೂ ಬೆಳೆಯಬೇಕು. ನಾವು ಅಡಿಗಲ್ಲು ಮಾತ್ರ ಹಾಕಿದ್ದೇವೆ, ಕಟ್ಟಡ ನಿರ್ಮಾಣ ಮುಂದಿನವರದು.

# ನನ್ನ ಮನೆ

ಮನೆಯೆಂಬುದು ಬರಿಯ ಗೋಡೆ ನೆಲಗಳಿಗೆ ಹೆಳುವಂತಹುದಲ್ಲ. ಮನೆಯೆಂದರೆ ಕುಟುಂಬ ಎಂದರ್ಥ. ಕುಟುಂಬವೆಂದರೆ ಗಂಡ-ಹೆಂಡತಿ ಹಾಗೂ ಅವನ ಸಂತತಿ. ಇಂತಹ ಕುಟುಂಬಗಳ ಮಿಶ್ರಣವೇ ಸಮಾಜ. ಹತ್ತಾರು ಸಮಾಜಗಳ ಜೊತೆ ಭೌಗೋಳಿಕ ಪ್ರದೇಶವನ್ನು ಒಳಗೊಂಡಂತೆ ಕರೆಯುವ ಘಟಕವೇ ದೇಶ. ಈಗ ನಾನು ಕರೆದ 'ನನ್ನ ಮನೆ' ನೈಜ ಅರ್ಥದಲ್ಲಿ 'ನಮ್ಮ ಮನೆ' ಎಂದಾಗ ಬೇಕಾಗಿತ್ತು. ಆದರೆ 'ನಮ್ಮ' ಎಂದು ಹೇಳಿಕೊಳ್ಳಬೇಕಾದ 'ಬಾಳಸಂಗಾತಿ' ಇಲ್ಲದ ಕಾರಣ 'ನನ್ನ' ಎಂದಿದ್ದೇನೆ. ಆದರೆ ಈ ಮನೆಯ ಶ್ರೇಯಸ್ಸಿಗೆ ದುಡಿದ ಹಿರಿಯ ಕಾಲ ಆಕೆಯದೇ. ಕೇವಲ ನಾನು ಹೆಜ್ಜೆ ಹಾಕಿದ್ದೇನೆ. ನಮ್ಮ ಹಳ್ಳಿಯಲ್ಲಿ ಹತ್ತಾರು ದಶಕ ಜೊತೆ ಕಳೆದ 'ಜೋಡೆತ್ತು' ಕೊನೆ ಕೊನೆಗೆ ಅಪರೂಪದ ಸ್ನೇಹಿತರಾಗಿ ಬಿಡುತ್ತದೆ. ಗಾಡಿ ಎಳೆಯಬೇಕಾದರೆ, ಕೆಸರುಗದ್ದೆ ಉಳಬೇಕಾದರೆ, ಹೊಲ ಗೇಯಬೇಕಾದರೆ ಸಮಪಾಲು ಹಾಗೂ ಶ್ರಮವಿದ್ದರೂ ಯಾವುದಾದರೊಂದು ಎತ್ತು ದೈಹಿಕ ಹಿಂಸೆ ಅನುಭವಿಸುತ್ತಿರಬೇಕಾದರೆ ಬೇರೆಯದರ ಸಂಕಷ್ಟ ನೋಡಲಾಗದು. ಇದರ ಕಷ್ಟವನ್ನೆಲ್ಲಾ ತನ್ನ ಕಣ್ಣಿನಿಂದಲೇ ಹೊರಹೊಮ್ಮಿಸುವ ಅದರ ಮುಖವನ್ನಂತೂ ಯಾವ ರೈತ ಕೂಡ ಮರೆಯಲಾರ. ಹಾಗೆಯೇ, ಬಾಳರಥ ಎಳೆದ ದಂಪತಿಗಳ ಅಗಲಿಕೆ ಕೂಡ ಅನುಭವ ಸಹಜವಾದರೂ ತಾಳಿಕೊಳ್ಳುವುದು ಕಷ್ಟದ ಮಾತೇ ಎನ್ನಬೇಕು. ವಯಸ್ಸು ಅವರಿಬ್ಬರ ಪ್ರೀತಿ-ವಾತ್ಸಲ್ಯಗಳ ನಡುವೆ ಅಡ್ಡ ಬಾರದು. ಅವರಿಬ್ಬರೂ 'ದಿನಬಳಕೆಯಲ್ಲಿ ನಿನ್ನ ಚೆಲುವು ಮಾಸದು' ಎನ್ನುವವರೇ. ತಮ್ಮಿಬ್ಬರ ನೆನಪಿನ ಗೊಂಡಾರಣ್ಯದಲ್ಲಿ ಸಮಯ ಸಿಕ್ಕಾಗೆಲ್ಲಾ ಅಲೆದಾಡುತ್ತ ''ಮುಂಗಯ್ಯ ಮಾಲೆ ಮುದ್ದುಂಡು ಬೆರತಾವ ಮುದ್ದು ಮಾತಿನ ಗಿಣಿ, ಮಕ್ಕಳ ಮಾಣಿಕದ ಕಣಿ'' ಎಂದು ತಮ್ಮ ಸಂತತಿಯನ್ನು ನೋಡಿ ನಲಿಯುವವರೆ. ಹಾಗೆಂದಾಕ್ಷಣ ಕುಟುಂಬ ಕೇವಲ ಹಾಲು ಜೇನಿನ ಹೊಳೆಯಲ್ಲ. ಶ್ರೀ ರಾಮಕೃಷ್ಣ ಪರಮಹಂಸರು ಹೇಳುವಂತೆ ಅದೊಂದು ಕೋಟೆ. ಕೋಟೆಯೊಳಗಿದ್ದರೂ ಶತ್ರುಗಳನ್ನು ಗೆಲ್ಲಲು ಅನುಕೂಲವಾಗುವಂತೆ ಸಂಸಾರದಲ್ಲಿದ್ದೂ ಲೌಕಿಕ ಜಗತ್ತಿನಲ್ಲಿ ಶ್ರೇಯಸ್ಸು ಪಡೆಯುವುದು ಸುಲಭ. ತಾಯಿಗೆ ಮಾತ್ರ ಹೆರಿಗೆಯ ನೋವು ತಿಳಿಯುವಂತೆ ಸಂಸಾರವಂದಿಗರಿಗೆ ಮಾತ್ರ ಇದರ ಕಷ್ಟಗಳು ತಿಳಿದಾವು.

ಇದೊಂದು ದೊಡ್ಡ ಸರ್ಕಸ್ಸು ಇದ್ದಂತೆ. ಅವರಿಬ್ಬರೂ ರಿಂಗ್ ಮಾಸ್ಟರ್ಸ್ ಆದರೆ ಸಾಧ್ಯ. ಅವರ ಸಂಬಂಧವಾದ ಒಂದು ಚುಟುಕ ಹೀಗಿದೆ.

''ಸಂಸಾರವೆನುವುದು ಬಹುದೊಡ್ಡ ಸರ್ಕಸ್ಸು
ಇದ ನಡೆಸುವುದೆ ತಪಸ್ಸು
ಹುಲಿ ಕರಡಿಗಳಿಂದ ಸಾಮು ಮಾಡಿಸಬೇಕು
ಹೊಡಿ ಮೂರು ಲಾಗವೆನಬೇಕು''.

ಇದರಲ್ಲಿ ಸ್ತ್ರೀಯರದೇ ಸಿಂಹಪಾಲು. ಪುರುಷನಿಗೆ ತನ್ನ ಶಕ್ತಿಯೊಂದಿದ್ದರೆ ಸ್ತ್ರೀಗೆ ಜಗತ್ತಿನ ಎಲ್ಲಾ ಸತ್-ಶಕ್ತಿಯೂ ಬಂದಿರುತ್ತದೆ. ಹೆಣ್ಣು ಅನಕ್ಷರಸ್ಥೆಯಾಗಿದ್ದರೂ, ವ್ಯಾವಹಾರಿಕೆ ಚಾಣಾಕ್ಷತೆಯಿಲ್ಲದಿದ್ದರೂ ತಾಯಿ ಸಹಜವಾದ ಪ್ರೌಢಿಮೆಯಿಂದ ವಯಸ್ಸಿಗೆ ಮೀರಿದ ಅನುಭವವನ್ನು ದಕ್ಕಿಸಿಕೊಡುತ್ತಾಳೆ. ಗಂಡ ಎಷ್ಟೇ ಪ್ರಬುದ್ಧನಾಗಿದ್ದರೂ ಅವನ ಜೊತೆ ಹೊಯ್ ಕೈ ಆಗಿ ಹೆಜ್ಜೆ ಹಾಕುತ್ತಾ ಸಕಾಲದಲ್ಲಿ ಮಾರ್ಗದರ್ಶನ ಕೊಡುತ್ತಾಳೆ. ಕುವೆಂಪು ಹೇಳುವಂತೆ ಆಕೆ ಮನೆಮನೆಯ ''ಗೃಹತಪಸ್ವಿನಿ'. ಇಂತಹ ಮಧುರ ಬಂಧನ ನಮ್ಮ ಸಮಾಜದಲ್ಲಿರುವ ಕಾರಣದಿಂದಲೇ ಎಷ್ಟೇ ಯಾಂತ್ರೀಕರಣದ ದುಷ್ಪರಿಣಾಮಗಳ ವಿರುದ್ಧವೂ ನಮ್ಮ ಕುಟುಂಟ ವ್ಯವಸ್ಥೆ ಮುರಿದು ಬಿದ್ದಿಲ್ಲ. ತಲತಲಾಂತರದಿಂದ ನಮ್ಮ ಸಂಸ್ಕೃತಿ ಕಾಯ್ದುಕೊಂಡಿರುವುದು, ಈ ಅಮೂಲ್ಯ ನಿಧಿಯನ್ನೇ. ಪ್ರಾಚೀನ ಋಷಿ ಪರಂಪರೆ ಕೂಡ ನಮ್ಮ ಕೌಟುಂಬಿಕ ಇತಿಹಾಸದ ಅವಿಚ್ಛಿನ್ನತೆಯನ್ನು ಸಾರಿ ಹೇಳುತ್ತದೆ. ಯಾವುದೇ ಅನ್ಯಾಯ ಈ ಭಾರತೀಯ ಸಮಾಜದಲ್ಲಿ ಪೂರ್ವಿಕರಿಂದ ನಡೆದಿರಬಹುದು. ಜಾತಿ, ವಿದ್ಯೆ ಅವಕಾಶಗಳನ್ನು ಎಲ್ಲರಿಗೂ ಕೊಡದಿರಬಹುದು. ಆದರೆ ಏಕತರಹದ ಕುಟುಂಬ ಮಾತ್ರ ಎಲ್ಲಾ ವರ್ಗ, ಜಾತಿಗಳಲ್ಲೂ ಕಾಣಬಹುದಾಗಿದೆ. ಸಾಮಾನ್ಯ ಸೂತ್ರದ ಮೇಲೆ ಒಟ್ಟಾರೆ ಸಮಾಜದ ಸಂಸಾರ ಕಾರ್ಯ ನಿರ್ವಹಿಸುತ್ತಿದೆ. ಇಂದು ಅಲ್ಲಲ್ಲಿ ಮೇಲ್‌ಸ್ತರದ ಬದಲಾವಣೆಯಾದರೂ ಅಂತರ್‌ಸತ್ವ ಉದುಗಿ ಹೋಗಿಲ್ಲ. ಅದೇ ಸಂತೋಷದಾಯಕವಾದ ವಿಚಾರ.

ನಮ್ಮ ಕುಟುಂಬ ಮೊದಲಿನಿಂದಲೂ ಪಾಳ್ಯದಲ್ಲೇ ಎಲ್ಲರ ಕಾರುಣ್ಯಕ್ಕೆ ಪಾತ್ರವಾದದ್ದು. ನನಗೆ ಬುದ್ಧಿ ಬರುವುದಕ್ಕೆ ಮೊದಲೇ ನಮ್ಮಪ್ಪ ಸತ್ತು ಹೋಗಿದ್ದ. ಇದ್ದ ಮೂರುವರೆ ಎಕರೆ ಜಮೀನಿನಲ್ಲಿ ತಾಯಿ, ಅಕ್ಕ, ಅಣ್ಣ ಹಾಗೂ ನನ್ನನ್ನು

ಸಾಕಬೇಕಾಗಿತ್ತು. ಆಕೆ ದಿಟ್ಟ ಹೆಂಗಸು. ಹೊಲ ಉಳುವುದಕ್ಕೂ ಹಿಂಜರಿಯದೆ ಆಕೆ ಕೂಲಿನಾಲಿ ಮಾಡುತ್ತಾ ನಮ್ಮನ್ನು ಸಾಕಿದಳು. ಅಕ್ಕನ ಮದುವೆಯ ನಂತರ ತಾಯಿಯ ಸಾವು, ಅಣ್ಣನ ಅಕಾಲ ಮರಣಗಳಿಂದಾಗಿ ಎಳೆತನದಲ್ಲೇ ಮನೆಯೆಂದರೆ ನನಗೆ ಕಷ್ಟಗಳ ತಾಣ ಎಂದಾಗಿತ್ತು. ಮೈಸೂರಿನಲ್ಲಿ ಹಾಸ್ಟೆಲ್‌ನಾಗೆ ಓದುತ್ತಿದ್ದಾಗ ಮನೆಯ ಗೆಪ್ತಿಯೇ ಶೂನ್ಯವಾಗಿತ್ತು. ಶ್ರೀ ಬಿ.ವೆಂಕಟಸ್ವಾಮಯ್ಯ ನವರ ಮನೆಯ ಸಂಪರ್ಕ ದೂರದ ಊರಿನಲ್ಲಿದ್ದ ನನ್ನ ಏಕಾಂಗಿತನಕ್ಕೆ ಸಂಜೀವಿನಿಯಾಗಿತ್ತು. ಶ್ರೀ ಟಿ.ಮರಿಯಪ್ಪನವರ ಪಿತೃ ಸಹಜವಾದ ಆತ್ಮೀಯ ಅಂತಃಕರಣ ನನ್ನ ವಿದ್ಯಾರ್ಥಿದೆಸೆಯಲ್ಲಿ ಜ್ಯೋತಿ ಸ್ವರೂಪವಾಗಿತ್ತು. ಹೇಗೋ ಕೆಲಸಕ್ಕೆ ಸೇರಿದೆ. ಮದುವೆ ಹತ್ತಾರು ಕಾರಣಗಳಿಂದ ತಡವಾಗುತ್ತಾ ಬಂತು. ಕಷ್ಟ ಕಾಲದಲ್ಲಿ ಸಹಾಯಹಸ್ತ ನೀಡಿದ ಶ್ರೀ ನರಸಯ್ಯನನ್ನು ನಿರಾಶೆಗೊಳಿಸ ಬೇಕಾಯಿತು. ಇಷ್ಟು ಹೊತ್ತಿಗೆ ನಮ್ಮಕ್ಕ ನನ್ನ ಭಾಗಕ್ಕೆ ತಾಯಿಯಾದಳು. ತಾಯಿ ಸತ್ತಿದ್ದರೂ ಆ ಮಾತೃಪ್ರೇಮದ ಸತ್ಫಲವನ್ನು ನೀಡುತ್ತಾ ಬಂದ ನಮ್ಮಕ್ಕ ನನಗೆ ಎಲ್ಲವೂ ಆದಳು. ಆ ಹೆಣ್ಣು, ಈ ಹೆಣ್ಣು ಎಂದು ನೂರಾರು ಹೆಣ್ಣುಗಳನ್ನು ನೋಡದೆ ದೊಡ್ಡೇರಿ ಬಳಿಯ ಬಡ ಕುಟುಂಬವೊಂದರ, 'ರಂಗಮ್ಮ' ಎಂಬಾಕೆಯನ್ನು ನಮ್ಮಕ್ಕನೇ ನನಗೆ ತೋರಿಸಿದಳು. ಈಗಾಗಲೇ ಅಕ್ಕನ ಪ್ರಭಾವ ವಲಯಕ್ಕೆ ಸೇರಿ ಹೋಗಿದ್ದ ನಾನು ಆಕೆ ಏನು ಹೇಳಿದರೂ 'ಹೂ' ಎನ್ನುತ್ತಿದ್ದೆ. ಈ ಮದುವೆ ನಡೆಯದಂತೆ ಅನೇಕ ಕರಾಮತ್ತುಗಳನ್ನು ನಮ್ಮವರೇ ಮಾಡಿದ್ದುಂಟು. ನನಗೂ ಆ ಕಾಲಕ್ಕೆ ಅನಾಮಧೇಯ ಪತ್ರಗಳು ಬಂದು ಹಲವರು ''ನೀನು ಗ್ರಾಜ್ಯುಯೆಟ್, ಆಕೆ ಓದು ಬರಹ ತಿಳಿಯದ ಮಡ್ಡಿ. ಈ ಮದುವೆ ಬೇಡ, ಬೇರೆ ಕಡೆ ನೋಡಿಕೊ'' ಎಂದಿದ್ದರು. ಈ ದಾಂಪತ್ಯ ಜೀವನದಲ್ಲಿ ಎರಡು ತರಹ. ಮೊದಲೇ ಪರಸ್ಪರ ಪರಿಚಯಗೊಂಡು ಮದುವೆ ಮಾಡಿಕೊಳ್ಳುವುದು. ಇಲ್ಲ ಮದುವೆಯಾದ ಮೇಲೆ ಹೊಂದಿಕೊಳ್ಳುವುದು. ನಮ್ಮ ಕಾಲಕ್ಕೆ ಎರಡನೆಯದೇ ಹೆಚ್ಚಿಗೆ ರೂಢಿಯಲ್ಲಿತ್ತು. ನನ್ನ ಹಣೆಯಲ್ಲಿ ಬರೆದದ್ದಾಗಲಿ, ನಮ್ಮಕ್ಕ ಬೇರೆಯಲ್ಲ, ತಾಯಿ ಬೇರೆಯಲ್ಲ. ಆಕೆ ಒಪ್ಪಿಗೆ ಕೊಟ್ಟ ಮೇಲೆ ನನ್ನೇನೂ ಉಳಿದಿಲ್ಲ, ಎಂದು ಸ್ಪಷ್ಟವಾಗಿ ಹೇಳಿದೆ. ಹೇಗೋ ಬಡತನದಲ್ಲಿದ್ದವಳನ್ನೇ ಮದುವೆ ಮಾಡ್ಕೊಂಡೆ.

ನಾನು ಬೆಂಗಳೂರಿನಲ್ಲಿದ್ದಾಗಲೇ ನಮ್ಮ ಮೊದಲ ಸಂಸಾರದ ಆರಂಭ. ಕಲ್ಲುವೊಂದು ಚೆನ್ನಾಗಿದ್ದರೆ ಸಾಕು, ಶಿಲ್ಪಿಯ ಕೈಚಳಕದ ಮೇಲೆ ತಾನೇ ಮೂರ್ತಿಯ ಅಂದ ನಿಲ್ಲುವುದು. ನನ್ನ ಹೆಂಡತೀನ ಯಾವ ತರಹ ಬೇಕಾದರೂ

ತಿದ್ದಿಕೊಳ್ಳಬಹುದೆಂಬ ಹುಮ್ಮಸ್ಸು ಯೌವ್ವನದಲ್ಲಿತ್ತು. ಮೊದಲಿನಿಂದಲೂ ಅಷ್ಟೇನೂ ಪರಿಚಯವಿಲ್ಲದ ಆಕೆಗೆ ನನ್ನ ಮೇಲೆ ಭಯಮಿಶ್ರಿತವಾದ ಗೌರವವಿತ್ತು. ಮೊದಮೊದಲು ಆಕೇನ ವಿದ್ಯಾವಂತವಳನ್ನಾಗಿ ಮಾಡಹೋದೆ. ನನ್ನ ಆಟ ಸಾಗಲಿಲ್ಲ. ಎಲ್ಲಾದರೂ ಹಾಳಾಗಿ ಹೋಗಲೆಂದು ಬಿಟ್ಟೆ; ಈ ನಡುವೆ ಒಂದಿಷ್ಟು ನಿರಾಶೆ; ಆನಂತರ ಚನ್ನರಾಯಪಟ್ಟಣಕ್ಕೆ ಹೋದೆ. ಈ ಊರಿನಲ್ಲಿದ್ದಷ್ಟು ದಿನ ರೋಗದ ಮುದ್ದೆಯಾಗಿದ್ದೆ. ಪ್ರಾಯಶಃ ಈ ಕಾಲದಲ್ಲಿ ನಮ್ಮಿಬ್ಬರ ಹೊಂದಾಣಿಕೆಗೆ ಅವಕಾಶವಾಗಿರಬೇಕು. ಪಾಳ್ಯದಲ್ಲಿ ನಾನು ಕಾಯಿಲೆ ಬಿದ್ದಿದ್ದಾಗ ಈಕೆ ಕೂಡ ನನ್ನ ಸೇವೆ ಮಾಡಿದಳು. ಮದುವೆಯಾಗಿ ಮೂರು ನಾಲ್ಕು ವರ್ಷಗಳಾದರೂ ಮಕ್ಕಳಾಗಿಲ್ಲ'ವೆಂದು ನಮ್ಮಕ್ಕ ಆತಂಕ ವ್ಯಕ್ತಪಡಿಸುತ್ತಿದ್ದರೂ, ನನಗೇನೂ ಚಿಂತೆ ಇರಲಿಲ್ಲ. ಅಲ್ಲಿಂದ ಚಿಕ್ಕನಾಯಕನ ಹಳ್ಳಿಗೆ ಪ್ರಯಾಣ. ಶ್ರೀ ಜಿ.ವಿ.ನಾರಾಯಣಮೂರ್ತಿಯವರ ಸುಸಂಸ್ಕೃತ ಕುಟುಂಬದ ಸಂಪರ್ಕ. ಇಷ್ಟು ಹೊತ್ತಿಗಾಗಲೇ ನಮ್ಮಿಬ್ಬರ ಗಡಿರೇಖೆಗಳು ನಿರ್ಣಯಿಸಲ್ಪಟ್ಟಿದ್ದವು. ಕುಟುಂಬದ ಸಂಪೂರ್ಣ ಜವಾಬ್ದಾರಿ ಆಕೆಯದಾದರೆ, ಸರ್ಕಾರಿ-ಸಾರ್ವಜನಿಕ ಕೆಲಸಗಳು ನನ್ನದಾದವು. ದಾವಣಗೆರೆ. ಚಿಕ್ಕಬಳ್ಳಾಪುರದಲ್ಲಿದ್ದ ಕಾಲದಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ಕಾಲ ಸಾಗಿದವು. ಬೇಂದ್ರೆ ಹೇಳುವಂತೆ ''ಮಕ್ಕಳ ಮಾಣಿಕದ ಕಣಿ'' ನಮ್ಮಿಬ್ಬರನ್ನು ಅನ್ಯೋನ್ಯವಾಗಿಸಿದ್ದವು. ತುಮಕೂರಿಗೆ ಕೈಗಾರಿಕಾ ಇಲಾಖೆಯ ಸೂಪರಿಂಟೆಂಡೆಂಟ್ ಆಗಿ ಬಂದ ಮೇಲೆ ಮನೆಗಿಂತ ಆಚಿನ ಕೆಲಸಗಳು ಹೆಚ್ಚಾದವು. ಹಿರಿಯ ಮಗಳು ಜಯಮ್ಮನ ಸಾವಿನಿಂದ ನಾವಿಬ್ಬರೂ ಸಮಾನ ದುಃಖಿಗಳಾದೆವು. ಆರೋಗ್ಯ ಕಳ್ಕೊಂಡು ಹೊರಗೆ ಇರುತ್ತಿದ್ದ ನನ್ನನ್ನು ಕಂಡು ಅತೀವ ಕಾಳಜಿಯಿಂದ ಸಿಡಿಮಿಡಿಗೊಳ್ಳುತ್ತಿದ್ದಳು. 'ಯಾರಿಗೂ ಬೇಡದ ಈ ಹಾಸ್ಟೆಲ್ ಕೆಲಸ ನಿಮಗೇಕೆ, ಬಿಟ್ಟುಬಿಡಿರಿ' ಎನ್ನುತ್ತಿದ್ದಳು. ಆದರೆ ನನಗೆ ಈಗಾಗಲೇ ಗುರಿ ನಿಚ್ಚಳವಾಗಿತ್ತು. ಮುಕ್ತಿ ಕಾಣುವುದಾದರೆ ಇಲ್ಲಿ ಮಾತ್ರವೆಂದುಕೊಂಡಿದ್ದೆ. ಆಕೆಯ ಮಾತಿಗೆ ಎದುರಾಡದೆ ನನ್ನ ಕೆಲಸದಲ್ಲಿ ಮುಳುಗಿ ಹೋಗುತ್ತಿದ್ದೆ. ಇಷ್ಟಾದರೂ ಮನೆಗೆ ಬಂದ ನೆಂಟರಿಷ್ಟರನ್ನು. ವಿದ್ಯಾರ್ಥಿಗಳನ್ನು ಸಹಜ ಅಂತಃಕರಣದಿಂದಲೇ ಆಕೆ ಉಪಚರಿಸುತ್ತಿದ್ದಳು. ಮುಂದೆ ಅಸಿಸ್ಟೆಂಟ್ ಕಮೀಷನರ್ ಹುದ್ದೆಯಲ್ಲಿದ್ದಾಗ ಬಹುಮಟ್ಟಿಗೆ ಆಕೆನೇ ಮನೇ ಜವಾಬ್ದಾರಿ ಹೊತ್ತಳು. ಮಕ್ಕಳು ಕೂಡ ತಾಯಿಯೊಟ್ಟಿಗೆ ಬೆಳೆದವು. ನಮ್ಮ ಮನೆಗೆ ನಾನು 'ಅತಿಥಿ' ಯಾದೆ. 'ಇವರು ಸರಿಹೋಗಲ್ಲ, ಜನ್ಮಕಂಟಿದ

ಹುಚ್ಚು' ಎಂದುಕೊಂಡಳೇನೋ ಆಕೆ ತಿಳಿಯದು. ಕೈಯಲ್ಲಿದ್ದಷ್ಟು ದುಡ್ಡು ಕೊಡುತ್ತಿದ್ದೆ. ಆಗಾಗ್ಗೆ ಮಕ್ಕಳ ಓದನ್ನು ನೋಡುತ್ತಿದ್ದೆ. ದೇವರ ದಯೆಯಿಂದ ಮಕ್ಕಳು ಓದಿನಲ್ಲಿ ಹಿಂದುಳಿಯಲಿಲ್ಲ. ಬೆಂಗಳೂರಿಗೆ ಖಾದಿ ಬೋರ್ಡ್‌ಗೆ ಬರುವಷ್ಟರ ಹೊತ್ತಿಗೆ ನಾವಿಬ್ಬರೂ ಸಾಕಷ್ಟು ಮಾಗಿದ್ದೆವು. ಮೂರು ಗಂಡುಮಕ್ಕಳು, ನಾಲ್ಕು ಹೆಣ್ಣುಮಕ್ಕಳು ನಮ್ಮವರಾಗಿದ್ದವು. ರೆವಿನ್ಯೂ ಇಲಾಖೆಯಲ್ಲಿದ್ದರೂ ಏನೂ ಮಾಡಿಕೊಂಡಿರಲಿಲ್ಲ ಎನ್ನುತ್ತಿದ್ದರು ಜನ. ಹೆಣ್ಣುಮಕ್ಕಳ ಮದುವೆ ಹೇಗೆ ಮಾಡಬೇಕೆಂಬುದರ ಚಿಂತೆ. ಗಂಡುಮಕ್ಕಳಿಬ್ಬರು ಇಂಜಿನಿಯರ್ ಮತ್ತು ಡಾಕ್ಟರ್ ಓದುಗಳನ್ನು ಓದುತ್ತಿದ್ದರು. ಈ ಮಧ್ಯೆ ಮೈಸೂರಿಗೆ ಹೋದೆವು. ಹಬ್ಬ-ಹರಿದಿನಗಳಲ್ಲಿ ಮಕ್ಕಳ ಜೊತೆ ಊಟಕ್ಕೆ ಕುಳಿತಾಗ ಆಗುತ್ತಿದ್ದ ಸಂತೋಷ ಹೇಳತೀರದು. ಆದರೆ ನನ್ನಾಕೆ ಮಾತ್ರ ಇನ್ನೆರಡು ವರ್ಷದ ನಂತರ ಏನು ಗತಿ, ನಿಮಗೆ ಪಿಂಚಣಿಯಾಗಿಬಿಟ್ಟರೆ ಇವರುಗಳನ್ನು ಗತಿ ಮುಟ್ಟಿಸೋದು ಹೇಗೆ ಎಂದು ಯೋಚಿಸುತ್ತಿದ್ದಳು. ಟ್ರಸ್ಟ್ ಬೋರ್ಡ್‌ನಿಂದ ಸೈಟು ತೆಗೆದು ಮನೆ ಕಟ್ಟಲು ಪ್ರಾರಂಭಿಸಿದೆ. ಆದರೆ ಈ ಮನೆ ಕಟ್ಟಿದ್ದು ನಾನಲ್ಲ. ನನ್ನಾಕೆ. ಬೆಳಿಗ್ಗೆ ನಮಗೆ ಅಡಿಗೆ ಮಾಡಿಕೊಟ್ಟು ಮೈಸೂರಿನ ಸರಸ್ವತಿಪುರಂನ ಮನೆ ಕಟ್ಟುವ ಜಾಗಕ್ಕೆ ಹೋಗುತ್ತಿದ್ದಳು. ಸಂಜೆ ತನಕ ಅಲ್ಲೇ ಇರುತ್ತಿದ್ದಳು. ನಾನು ಸಂಜೆ ಕಛೇರಿಯಿಂದ ಅಲ್ಲಿಗೆ ಬಂದು ಮಾತನಾಡುತ್ತಾ ಮನೆಗೆ ಬರುತ್ತಿದ್ದೆವು. ಶಾಲಾ ಕಾಲೇಜುಗಳಿಂದ ಮಕ್ಕಳು ಬರುತ್ತಿದ್ದರು. ನಮಗೆ ವಿಶ್ರಾಂತಿ. ಆಕೆ ಮತ್ತೆ ಅಡಿಗೆ ಮನೆಗೆ ಹೋಗುತ್ತಿದ್ದಳು. ಹೀಗೆ ಹೊರಗೆ-ಒಳಗೆ ದುಡಿದರೂ ಒಂದಿಷ್ಟು ಆಯಾಸವೆನ್ನುತ್ತಿರಲಿಲ್ಲ. ಹೆಂಗಸಿನ ಗುಣವೆ ಹಾಗೆ. ತನ್ನದೆಂಬ ಭಾವನೆ ಬೇರೂರಿಬಿಟ್ಟರೆ ಎಲ್ಲವನ್ನು ಸಮರ್ಪಿಸಿಕೊಂಡುಬಿಡೋದು. ಅರ್ಪಣಾ ಮನೋಭಾವ ಆಕೆಯದು. ಅದಕ್ಕೆ ತ್ಯಾಗ ಎಂಬುದು ಆಕೆಗೆ ಹೆಚ್ಚಿಗೆ ಮೀಸಲಾಗಿದೆ. ನಾನು ಸೇವಾವಧೀನಾ ಒಂದೆರಡು ವರ್ಷ ವಿಸ್ತರಣೆ ಪಡೆದಿದ್ದರೆ ಆಕೆಗೆ ಖುಷಿಯಾಗುತ್ತಿತ್ತೇನೋ? ನನಗಂತೂ ಈ ಸರ್ಕಾರಿ ಚಾಕರಿ ಎಂಬ ಚಿನ್ನದ ಪಂಜರದಿಂದ ಬಿಡುಗಡೆ ಬೇಕಾಗಿತ್ತು. ದೊಡ್ಡ ಮಕ್ಕಳ ಓದು ಒಂದೆರಡು ವರ್ಷದಲ್ಲೆ ಮುಗಿಯುತ್ತಿತ್ತು. ದೇವರ ಮೇಲೆ ಭಾರ ಹಾಕಿ ಪಿಂಚಣಿ ನಂತರ ತುಮಕೂರಿಗೆ ಬಂದೆ. ಕೈ ತುಂಬ ಕೆಲಸಗಳು; ಆಕೆಗೆ ತಾತ್ಕಾಲಿಕ ಪರಿಸ್ಥಿತಿಯಿಂದಾಗಿ ಚಡಪಡಿಕೆಯುಂಟಾಗಿರಬೇಕು. ಆದರೂ ನನ್ನಿಷ್ಟಕ್ಕೆ ವಿರುದ್ಧ ಮಾತನಾಡಿದವಳಲ್ಲ. ನನಗೋ ಈ ಸಮಸ್ಯೆಗಳು ಶಾಶ್ವತವಾದುದಲ್ಲ. ''ಮಕ್ಕಳು ಕೈಗೆ ಬಂದವರೆ ಹೇಗೋ ಕಷ್ಟಕಾಲಕ್ಕೆ ಆಗ್ತಾರೆ'' ಎಂದು ಹೇಳುತ್ತಿದ್ದೆ.

ಮೊದಲು ಇಬ್ಬರು ಗಂಡು - ರಾಜ, ಶಂಕರ ಇಂಜಿನಿಯರ್ ಹಾಗೂ ಡಾಕ್ಟರ್ ಆದರು; ಶಂಕರನೇ ಮೊದಲು ಕೆಲಸಕ್ಕೆ ಸೇರಿದ. ಆನಂತರ ಎಂ.ಎಸ್. ಕೂಡ ಮಾಡಿ ಸರ್ಜನ್ ಆದ. ಮೊದಲನೆಯವ ಇಂಜಿನಿಯರ್ ಆಗಿ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಹೋದ. ಕೊನೆಯವ ಬಿ.ಎಸ್.ಸಿ. ಮುಗಿಸಿದಾಗ; ನನ್ನ ಕೈ ಬೀಳಂಗ್ ಆಗಿತ್ತು. ಮೆಡಿಕಲ್‌ಗೆ ಕಳಿಸಲಾಗಲಿಲ್ಲ. 'ಲಾ' ಮಾಡು - ಎಂದೆ. ಪರೀಕ್ಷೆ ಏನೋ ಮುಗಿಯಿತು. ಸಂಪೂರ್ಣ ಸಾರ್ವಜನಿಕ ಜೀವನಕ್ಕೆ ಇಳಿಯಲು ಇಂದಿನ ಯುವಕರು ಹೆದರುತ್ತಾರೆ. ಪ್ರಾಯಶಃ ನೈಜ ಕೆಲಸಗಾರರು ಅನುಭವಿಸುತ್ತಿರುವ ಕಷ್ಟಗಳನ್ನು ಕಂಡೋ ಅಥವಾ ಸಾರ್ವಜನಿಕ ರಂಗ ಅಪಾತ್ರರ ಕೈಯಲ್ಲಿ ಸಿಲುಕಿರುವ ಕಾರಣವೋ ಪ್ರತಿಭಾವಂತರು ಇಲ್ಲಿಗೆ ಹೋಗಲು ಹಿಂಜರಿಯುತ್ತಾರೆ. ನಾನೇಕೆ ಅವರವರ-ಇಷ್ಟಕ್ಕೆ ಅಡ್ಡಿ ಆಗಲೆಂದು ಸುಮ್ಮನಾದೆ. ಲೋಕಸೇವಾ ಆಯೋಗದ ಮೂಲಕ ಪರೀಕ್ಷೆ ಪಾಸು ಮಾಡಿ ಶಿಕ್ಷಣ ಇಲಾಖೆಯಲ್ಲಿ ಆಫೀಸರ್ ಆದ. ಆ ಇಲಾಖೆ ಬೇಡವೆಂತ ಹೇಳಿದೆ, ಕೇಳಲಿಲ್ಲ. ಅಂತೂ ಮೂರು ಜನ ಗಂಡುಮಕ್ಕಳೂ ತಮ್ಮ ಸಾಮರ್ಥ್ಯದಿಂದಲೆ ಕೆಲಸ ಪಡೆದರು. ನನಗಿದ್ದ ಚಿಂತೆ ಪರಿಹಾರವಾಯಿತು.

ಹೆಣ್ಮಕ್ಕಳು ತಾಯಿ ಜೊತೆ ಗೃಹಕೃತ್ಯಗಳಲ್ಲಿ ಅನುಭವ ಪಡೆದರು. ಮೊದಲನೆಯಾಕೆ ಮಾತ್ರ ಪದವಿ ತಕ್ಕೊಂಡಳು. ನಾನು ಅನೇಕ ಕಡೆ ತಿರುಗುತ್ತಿದ್ದರಿಂದ ಮಿತ್ರರಿಗೆ ನನ್ನ ವಿಚಾರ ಹೇಳಿದ್ದೆ. ಮನೆಯ ಪರಿಸ್ಥಿತಿ ತಿಳಿದ ಹಿತೈಷಿಗಳು ಹತ್ತಾರು ಗಂಡುಗಳನ್ನು ಹೇಳುತ್ತಿದ್ದರು. ಮೊದಲನೆಯವಳಿಗೆ ಬಳ್ಳಾರಿ ಕಡೆ ಸಂಬಂಧ ಕುದುರಿತು. ಆತ ವ್ಯವಸಾಯ ಇಲಾಖೆಯಲ್ಲಿ ಎಕ್ಸ್‌ಟೆನ್‌ಷನ್ ಆಫೀಸರ್ ಆಗಿದ್ದರು. ಎರಡನೆಯವಳಿಗೆ ಒಂದಿಷ್ಟು ಹೆಚ್ಚಿಗೆ ಹುಡುಕಬೇಕಾಯಿತು. ಆನಂತರ ತುಮಕೂರಿನ ನಮ್ಮ ಹುಡುಗನೇ ಗೊತ್ತಾಯಿತು. ಸರ್ಕಾರಿ ಮುದ್ರಣಾಲಯದಲ್ಲಿ ಆತ ಅಧಿಕಾರಿಯಾಗಿದ್ದರು. ಮೂರನೆಯವಳಿಗೆ ಧಾರವಾಡದ ಕಡೆ ಸಂಬಂಧ, ಡಾಕ್ಟರ್ ಪರೀಕ್ಷೆ ಪಾಸು ಮಾಡಿದವ. ಕೊನೆಯ ಮಗಳ ಮದುವೆ ಹತ್ತಿರಕ್ಕೆ ಕೈ ಬರಿದಾಗಿತ್ತು. ಆತ ಕೂಡ ತಹಸೀಲ್ದಾರ್ ಆಗಿದ್ದಾರೆ. ಮೈಸೂರಿನ ಮನೆ ಮಾರಿದೆ. ಕೊನೆಯ ಮಗಳ ಮದುವೆ ಮಾಡಿ, ತುಮಕೂರಿನಲ್ಲಿ ಸರ್ಕಾರಿ ಕಾಲೇಜು ಎದುರು ಸಣ್ಣ ಮನೆ ಕಟ್ಟಿಸಿದೆ. ಅಳಿಯಂದಿರು ನನ್ನಿಂದ ಹೆಚ್ಚಿಗೆ ನಿರೀಕ್ಷಿಸಲಿಲ್ಲ. ಒಂದಿಷ್ಟು ಉದ್ಯೋಗ ಸಂಬಂಧವಾಗಿ ಸಹಾಯ ಮಾಡಿದ್ದುಂಟು. ಆದರೆ ಪುಣ್ಯವಶಾತ್ ಎಲ್ಲರೂ ತುಂಬಾ ಸಜ್ಜನರು. ಮೂರು ಜನ ಗಂಡು ಮಕ್ಕಳ ಜೊತೆ ನಾಲ್ವರು ಸೇರಿದರೆ

ಹೊರತು ಬೇರೆ ಏನೂ ಇಲ್ಲ. ಇದರಿಂದ ನನಗಿಂತ ನನ್ನಾಕೆಗೆ ಹೆಚ್ಚಿನ ಸಂತೋಷ. ಹೆಣ್ಮಕ್ಕಳು ಗಂಡನ ಮನೆಯಲ್ಲಿ ನೆಮ್ಮದಿಯಾಗಿದ್ದರೆನ್ನುವುದರ ಜೊತೆ, ನನ್ನ ಗಂಡ ಇಷ್ಟೆಲ್ಲಾ ಮಾಡಿದರಲ್ಲಾ ಎಂಬ ಸಮಾಧಾನ. ಗಂಡು ಮಕ್ಕಳಿಗೂ ಮಧ್ಯಮಧ್ಯದಲ್ಲೇ ಮದುವೆಯಾಯಿತು. ಒಳ್ಳೆಯ ಸಂಬಂಧಗಳೇ ದೊರಕಿದವು. ನಮ್ಮ ಹೆಣ್ಮಕ್ಕಳು ಆಚೆ ಹೋಗಿಲ್ಲವೆನ್ನುವಂತೆ ಸೊಸೆಯಂದಿರು ನೋಡಿಕೊಂಡರು. ಮೊಮ್ಮಕ್ಕಳ ಪ್ರವೇಶ, ಎಲ್ಲೆಲ್ಲಿ ನೋಡಲು ಹರುಷ. ಗೌರಿ-ದೀಪಾವಳಿ ಹಬ್ಬಗಳಲ್ಲಿ ಅಳಿಯಂದಿರು, ಸೊಸೆಯರು, ಹೆಣ್ಮಕ್ಕಳು ಹಾಗೂ ಅವರ ಕುಟುಂಬಗಳಿಂದ ಮನೆಯ ವಾತಾವರಣ ವಿನೂತನವಾಗಿತ್ತು. ನನ್ನ ಕಾಳಿದಾಸ ವಿದ್ಯಾವರ್ಧಕ ಸಂಘ, ಉಣ್ಣೆ ನೇಕಾರರ ಸಂಘ, ಕಾಲೇಜುಗಳು ಮರೆತು ಹೋಗಿದ್ದವು. ನನ್ನಮ್ಮ, ಅಕ್ಕ ಇವರ ಹಿರಿಯಾಸೆಯಂತೆ ನಮ್ಮ ವಂಶದ ಬಳ್ಳಿ ಹತ್ತಾರು ಹೂವುಗಳನ್ನು ಅರಳಿಸಿದೆ. ಅವುಗಳ ಸೊಗಸು ನಮಗೆ ಆನಂದ ಕೊಟ್ಟಷ್ಟೂ ಆ ತಂದೆತಾಯಿಗಳಿಗೂ ಕೊಡುತ್ತಿವೆ. ನನ್ನಾಕೆಯ ಸಂತೃಪ್ತಿ - ನೆಮ್ಮದಿಗಳೂ ನನ್ನ ಕರ್ತವ್ಯ ನಿರ್ವಹಣೆಗೆ ದೊರೆತ ಸರ್ಟಿಫಿಕೇಟುಗಳೆಂದುಕೊಂಡೆ.

ತುಮಕೂರಿನಲ್ಲಿ ನಾವಿಬ್ಬರೇ ಇರುತ್ತಿದ್ದೆವು. ಗಂಡುಮಕ್ಕಳು ಉದ್ಯೋಗ ದೊಡನೆ ಬೇರೆ ಊರಿನಲ್ಲಿರುತ್ತಿದ್ದರು. ಹೆಣ್ಮಕ್ಕಳು ಗಂಡನ ಮನೆಯಲ್ಲಿದ್ದರು. ನಮ್ಮ ನೈಜ ಪ್ರೇಮಪೂರಿತ ದಾಂಪತ್ಯ ಜೀವನ ಇಲ್ಲಿಂದ ಪ್ರಾರಂಭವಾಗಬೇಕಾಗಿತ್ತು. ನಾನು ಕೂಡ ತುಮಕೂರಿನ 'ಕಾಳಿದಾಸ ವಿದ್ಯಾವರ್ಧಕ ಸಂಘ'ದ ಸಂಪರ್ಕವೊಂದನ್ನು ಮಾತ್ರ ಇಟ್ಟುಕೊಂಡಿದ್ದೆ. ಕಾಯಿಲೆಗಳ ಹೊಡೆತದಿಂದ ಶರೀರ ಜರ್ಜರಿತವಾಗಿದ್ದರೂ ಜವಾಬ್ದಾರಿಗಳೆಲ್ಲಾ ನಿಸೂರಾಗಿ ಕಳೆದು ಪೊರೆಬಿಟ್ಟ ಹಾವಾಗಿದ್ದೆ. ಈ ಮಧ್ಯೆ ನನ್ನಾಕೆ ತುತ್ತು ನುಂಗಬೇಕಾದರೆ ತಡೆದ ಹಾಗೆ ಆಗ್ತಾದೆ ಎನ್ನುತ್ತಿದ್ದಳು. ಮಗ ಡಾ.ಶಂಕರ, ಅಳಿಯ ಡಾ.ಪುಲಕೇಶಿ ಅವರುಗಳು ಬಂದಾಗ ಹೇಳಿದರೆ ಪರೀಕ್ಷೆ ಮಾಡಿದ ಅವರು ಏನೂ ಇಲ್ಲವೆಂದು ಹೇಳಿದರು. ನಾನು ಏನೇ ಆಗಲಿ ನೋಡೋಣವೆಂದು ಜಿಲ್ಲಾ ಸರ್ಜನ್ ಡಾ. ರಂಗಪ್ಪನವರಿಗೆ ತೋರಿಸಿದೆ. ತುಮಕೂರಿನ ಪ್ರಸಿದ್ಧ ವೈದ್ಯರಾದ ಡಾ|| ತಮ್ಮಯ್ಯನವರಿಗೆ ತೋರಿಸಿದ್ದಾಯಿತು. ಎಕ್ಸರೇ ಮುಂತಾದುವುಗಳೆಲ್ಲಾ ಮಾಡಿಸಿದರೂ ಏನೂ ಇಲ್ಲವೆಂಬ ಉತ್ತರವೇ ಎಲ್ಲರಿಂದಲೂ. ಆದರೆ ನನ್ನಾಕೆ ಮಾತ್ರ ನೋವು ಜಾಸ್ತಿಯೆಂದೇ ಹೇಳುತ್ತಿದ್ದಳು. ಆಗಾಗ್ಗೆ ದೊಣ್ಣೆಕೆಮ್ಮು ಕಾಣಿಸಿಕೊಂಡು ಒದ್ದಾಡುತ್ತಿದ್ದಳು. ಒಂದಷ್ಟು ಚಿಕಿತ್ಸೆ

ಮಾಡಿಸಿದರೂ ಪ್ರಯೋಜನವಿಲ್ಲದಾಯಿತು. ಬೆಂಗಳೂರಿನಲ್ಲಿ ತೋರಿಸಬೇಕೆಂದು ಕೆ.ಜಿ.ಎಫ್.ನಲ್ಲಿದ್ದ ಮಗ ಡಾಕ್ಟರ್ ಶಂಕರನನ್ನು ಕರೆಸಿಕೊಂಡೆ. ಪ್ರಾರಂಭದಲ್ಲಿ ಎಲ್ಲಾ ಡಾಕ್ಟರ್‌ಗಳೂ ಏನೂ ಇಲ್ಲವೆಂದು ಹೇಳುತ್ತಿದ್ದರು. ಕೊನೆಗೆ ಕ್ಯಾನ್ಸರ್ ಆಗಿದೆಯೆಂದು ನಿರ್ಣಯಿಸಿದರು. ನನ್ನ ಮೇಲೆ ಆಕಾಶವೇ ಕವುಚಿದಂತಾಯಿತು. ಹೆಣ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಧಾವಿಸಿದರು, ಯಾರು ಯಾರಿಗೆ ಸಮಾಧಾನ ಹೇಳುವುದು. ತಾಯಿಯನ್ನು ಸಾವಿಗೆ ಈಡುಮಾಡಿ ಅನಾಥ ಮಕ್ಕಳಿಗೆ ಸಮಾಧಾನ ಹೇಳುವುದೇ ಅಥವಾ ಇಳಿ ವಯಸ್ಸಿನಲ್ಲಿ ಜವಾಬ್ದಾರಿಗಳೆಲ್ಲಾ ಮುಗಿಸಿ ಹೊಸಬದುಕು ಸಾಗಿಸಲು ಸಂಕಲ್ಪಿಸಿದ್ದ-ನನಗೆ ನಾನೇ ಸಮಾಧಾನ ಹೇಳುವುದೇ ಅಥವಾ ನನ್ನಾಕೆಗೆ ಇಂತಹ ವಾಸಿಯಾಗದ ಘೋರ ಕಾಯಲೆ ಆವರಿಸಿದೆಯೆಂದು ಹೇಳಿ ಕಾಲನನ್ನು ಬೇಗ ಬರಮಾಡಿಕೊಳ್ಳುವುದೇ? ಸವಜ್ಞ ಹೇಳುವಂತೆ. 'ಸ್ವರ್ಗ ಸುಖಕ್ಕಿಂತ ಶ್ರೇಷ್ಠ ವಾದ ಸಂಸಾರ' ನನ್ನದಾಗುತ್ತಿತ್ತು; ಆದರೆ ಬಾಳಿನ ಬಂಡಿಯ ಒಂದು ಗಾಡಿ ಮೂಕು ಮುರಿದುಕೊಂಡು ಗಟಾರಕ್ಕೆ ಬಿದ್ದಿತು. ಅಲ್ಗೆ ಗಾಡಿಯ ಪ್ರಯಾಣ ನಿಂತಿತು. 17-9-1982ರಂದು ಕ್ಯಾನ್ಸರ್ ಆಸ್ಪತ್ರೆಗೆ ಸೇರಿಸಲಾಯಿತು. ಇಂಜಕ್ಷನ್, ಎಲೆಕ್ಟ್ರಿಕಲ್ ಮಸ್ಸಾಜ್ ವಗೈರೆ ಚಿಕಿತ್ಸೆನ 21 ದಿನದವರೆಗೆ ನಡೆಸಲಾಯಿತು. ಯಾತನೆ ತಾಳಲಾರದೆ ಆಕೆ ಪಡುತ್ತಿದ್ದ ಪಾಡಂತೂ ನೋಡಲಾಗಲಿಲ್ಲ. ಆಕೆ ನೋವಿಗೆ ಕಿರುಚುತ್ತಿದ್ದಾಗಲೆಲ್ಲಾ ನಾನಂತೂ ತಪ್ಪು ಮಾಡಿದೆ ಎನಿಸುತ್ತಿತ್ತು. ನಮ್ಮ ಮನೆಗೆ ಆಕೆ ಬಂದ ಮೇಲೆ ನನ್ನ ಮತ್ತು ಮಕ್ಕಳ ಶುಶ್ರೂಷೆಯಲ್ಲೇ ಜೀವ ತೇದಳು. ನಾನಂತು ಆ ಕೆಲಸ ಈ ಕೆಲಸವೆಂದು ಮನೆಯ ಹೊರಗಡೆ ನೆಮ್ಮದಿ ಕಾಣಲು ಪ್ರಯತ್ನಿಸಿದೆ. ಈಗ ನನ್ನ ಬದುಕಿನಲ್ಲಿ ಯಾವ ಅರ್ಥವೂ ಕಾಣುತ್ತಿರಲಿಲ್ಲ. ಉಣ್ಣೇ ನೇಕಾರರ ಸಹಕಾರ ಸಂಘ ಹಾಗೂ ಬ್ಯಾಂಕ್‌ನ ಅಧ್ಯಕ್ಷ ಸ್ಥಾನಗಳಿಗೆ ರಾಜಿನಾಮೆ ಕೊಡಲು ನಿರ್ಧರಿಸಿದೆ.

ಅಕ್ಟೋಬರ್ ತಿಂಗಳಲ್ಲಿ ನನ್ನಾಕೇನ ತುಮಕೂರಿಗೆ ಕರ್ರೊಂಡು ಬಂದೆವು. ಬಂದ ಘೋರ ವಿಪತ್ತಿನಿಂದ ಪಾರಾಗುವುದಂತೂ ದುಸ್ಸಾಧ್ಯ. ನಾವುಗಳೇ ಪ್ರತಿ ನಿತ್ಯ ಅಳುತ್ತಾ ಆಕೆ ಮುಂದೆ ಕುಳಿತು ರೋಗಿಯನ್ನು ಮತ್ತಷ್ಟು ಅಧೈರ್ಯ ಪಡಿಸಬಾರದೆಂದು ಎಲ್ಲಾ ಮಕ್ಕಳಿಗೂ ಸಮಾಧಾನ ಹೇಳಿದ್ದಾಯಿತು. ತಮ್ಮ ತಾಯಿ ಇಷ್ಟುದಿನ ಕಷ್ಟಗಳ ನಡುವೆಯೇ ಕಳೆದು ಸುಖ ಬರುವ ಕಾಲಕ್ಕೆ ಅವಳು ಇಲ್ಲವಾದಳಲ್ಲ ಎಂಬ ಕೊರಗು ಮಕ್ಕಳದು. ಆದರೆ ಎಲ್ಲಕ್ಕೂ ಪುಣ್ಯ ಬೇಕಲ್ಲವೇ? ಮಕ್ಕಳೆಲ್ಲಾ ನಮ್ಮ ಗೆಲುವಿಗಾಗಿ ಒಂದಿಷ್ಟು ಪ್ರವಾಸ ಹೋಗೋಣ ಎಂದರು.

ಹಿರಿಯರಿಗೆ ಧೂಪಹಾಕಿ ಅವರ ಪೂಜೆ ಆನಂತರ ಮೈಸೂರು ಮಾರ್ಗವಾಗಿ ಊಟಿ ಕಡೆ ಹೊರಟೆವು. ನಮ್ಮ ಮದುವೆಯಾದ ತಾರುಣ್ಯದಲ್ಲಿ ಇಂತಹ ಪ್ರವಾಸ ಕೈಗೊಂಡಿರಲಿಲ್ಲ. ಕಾಯಿಲೆಯೊಂದು ಇಲ್ಲದಿದ್ದರೆ ಮೊದಲ ಪ್ರವಾಸಕ್ಕಿಂತ ಇದು ಚೆನ್ನಾಗಿರುತ್ತಿತ್ತು. ಸರ್ಪದ ಹೆಡೆಯ ಕೆಳಗಿನ ಅಸಹಾಯಕ ಪ್ರಾಣಿಯಂತೆ ನಮ್ಮ ತಾತ್ಕಾಲಿಕ ಸಂತೋಷ ಕೂಡ ಅಪಾಯಕಾರಿಯಾಗಿತ್ತು. ಮೈಸೂರಿನಲ್ಲಿ ದಸರಾ ಉತ್ಸವ ನೋಡ್ಕೊಂಡು ಚಾಮುಂಡಿಬೆಟ್ಟ ಹತ್ತಿ ಚಾಮರಾಜ ನಗರಕ್ಕೆ ಪ್ರಯಾಣ ಮಾಡಿದೆವು. ಅಲ್ಲಿನ ಪ್ರವಾಸಿಮಂದಿರದಲ್ಲಿ ತಂಗಿದೆವು. ಮುಂದಿನ ಬಯಲಿನಲ್ಲಿ ಮೊಮ್ಮಕ್ಕಳನ್ನು ಮುದ್ದಿಸುತ್ತಿದ್ದ ರೀತಿ ತನ್ನ ಸಂಸಾರದಲ್ಲಿನ ನನ್ನವಳಿಗೆ ಇದ್ದ ಆಸಕ್ತಿ ಕಂಡು ಆಶ್ಚರ್ಯವಾಗುತ್ತಿತ್ತು. ಪ್ರವಾಸಿ ಮಂದಿರದ ಎದುರು ಕುಟುಂಬದ ಎಲ್ಲಾ ಸದಸ್ಯರನ್ನು ಒಳಗೊಂಡಂತೆ ಒಂದು ಗ್ರೂಪ್ ಫೋಟೋ ತೆಗೆದುಕೊಳ್ಳಲಾಯಿತು. ಇಂದಿಗೆ ಅದೊಂದೇ ನಮ್ಮ ಆಸ್ತಿಯಾಗಿ ಉಳಿದಿರುವುದು. ಅಲ್ಲಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಹೋದೆವು. ಸಲಗಗಳು, ಜಿಂಕೆಗಳು, ವಿವಿಧ ರೀತಿ ಪ್ರಾಣಿಪಕ್ಷಿಗಳನ್ನು ಕಂಡಾಗ ನಮ್ಮೆಲ್ಲಾ ಚಿಂತೆಗಳು ತುಸು ಕಾಲ ಮಾಯವಾಗಿದ್ದವು. ಈ ಮಧ್ಯೆ ಎಲ್ಲಿತ್ತೋ ಮಳೆ ರಾಚಿಕೊಂಡು ಬಂತು. ಹೇಗೋ ಮತ್ತೆ ಚಾಮರಾಜ ನಗರಕ್ಕೆ ಬಂದೆವು. ಮಕ್ಕಳಿಗಂತೂ ಜಿಂಕೆ, ಕೋತಿ, ಆನೆಗಳನ್ನು ನೋಡಿ ನಲಿಯುವುದೇ ಆಗಿತ್ತು. ಆ ಮೊಮ್ಮಕ್ಕಳ ಜೊತೆ ನಾವೂ ಮಕ್ಕಳಾದೆವು. ಅವುಗಳು ಉಂಟು ಮಾಡಿದ ಹರ್ಷದ ವಾತಾವರಣ ನಮಗೆಲ್ಲಾ ಸಂಜೀವಿನಿಯಾಯಿತು. ಅಂದಿನ ಸಂಜೆ 7-30ಕ್ಕೆ ಊಟಿ ತಲುಪಿ ಹೋಟೆಲ್ ವುಡ್‌ಲ್ಯಾಂಡ್ಸ್‌ನಲ್ಲಿ ತಂಗಿದೆವು. ಊಟಿಪ್ರದೇಶ ಇಂದು ನಮ್ಮಲ್ಲಿ ಇಲ್ಲದಿದ್ದರೂ ಅಚ್ಚ ಕನ್ನಡ ಪ್ರದೇಶವೆನ್ನುವಷ್ಟು ಆತ್ಮೀಯತೆ ಹುಟ್ಟಿಸುತ್ತದೆ. ಮೊದಲೇ ಗಿಡ-ಮರಗಳಿಂದ ಆವೃತವಾದ ಈ ಪ್ರದೇಶ ಇಲ್ಲಿನವರ ಅಚ್ಚುಕಟ್ಟುತನದಿಂದ ಒಂದು ಅಲೌಕಿಕ ಸೌಂದರ್ಯ ಬಂದಿದೆ. ಬಟಾನಿಕಲ್ ಗಾರ್ಡನ್ ನೋಡುತ್ತಿದ್ದರೆ ಈ ಪ್ರಪಂಚವೇ ಬೇಕಾಗಿರುವುದಿಲ್ಲ. ಬಹಳ ಹೊತ್ತು ನನ್ನಾಕೆಯ ಜೊತೆ ಕಾಲ ಕಳೆಯುವ ಸಂದರ್ಭ ಮದುವೆಯಾದ ನಲವತ್ತನಾಲ್ಕು ವರ್ಷಗಳ ನಂತರ ದೊರಕಿದೆ. ಊಟಿ ಚಳಿಯೂ ನನಗೇನೂ ಅನಿಸಲೇ ಇಲ್ಲ. ಇವಳೂ ಗೆಲುವಾಗಿ ಕಂಡಳು. ಕೊನೆಯ ಅಳಿಯ ರಾಮಾಂಜನೇಯ ಆಗ ಮೂಡಿಗೆರೆಯಲ್ಲಿ ತಹಸಿಲ್ದಾರ್ ಆಗಿದ್ದರು. ಧರ್ಮಸ್ಥಳಕ್ಕೆ ಬನ್ನಿ ಎಂದರು. 11-11-1982ರಂದು ನಾವಿಬ್ಬರೂ ಮೂಡಿಗೆರೆಗೆ ಪ್ರಯಾಣ ಮಾಡಿದೆವು. ಬೆಳಿಗ್ಗೆ ಅಳಿಯನ ಜೊತೆ ಧರ್ಮಸ್ಥಳಕ್ಕೆ ಹೋದೆವು. ವೀರೇಂದ್ರ ಹೆಗ್ಗಡೆ ಅವರ ತಂದೆ ಕಾಲದಲ್ಲಿ ಒಮ್ಮೆ

ನನ್ನಾಕೆ ಸಮೇತ ಈ ಪ್ರದೇಶಕ್ಕೆ ಬಂದಿದ್ದೆ. ಆ ಕಾಲಕ್ಕೂ ಈಗ್ಯೂ ಬಹಳ ವ್ಯತ್ಯಾಸವಿದೆ. ಇಂದು ಕ್ಷೇತ್ರದ ಉತ್ಪತ್ತಿ ಹಣಾನ ಅಭಿವೃದ್ಧಿ ಕಾರ್ಯಕ್ಕೇ ಬಳಸಲಾಗಿದೆ. ಯಾತ್ರಿಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿದ್ದಾರೆ. ಆದಾಯವೇನೋ ಸಾಕಷ್ಟು ಇದೆ. ಒಂದು ಸಣ್ಣ ಘಟನೆ ನಡೆಯಿತು. ಇದನ್ನು ಹೆಂಡತಿಗೆ ವಿನಹ ಬೇರೆಯವರಿಗೆ ತಿಳಿಸಿರಲಿಲ್ಲ. ನನ್ನ ಹತ್ತಿರ ಆಗ ಪರ್ಸಿನಲ್ಲಿ 350-00 ರೂಪಾಯಿ ಇತ್ತು. ಅಲ್ಲಿ ಹತ್ತು ಮೈಲಿ ದೂರದಲ್ಲಿರುವ ಊರಿಗೆ ಹೋಗಲು ಬಸ್‌ಗೆ ಹೋಗಿ ಜೇಬು ನೋಡಿಕೊಂಡರೆ ಪರ್ಸ್ ನಾಪತ್ತೆ. ಯಾರೋ ಬಸ್ ಹತ್ತಬೇಕಾದರೆ ಜೇಬಿಗೆ ಕತ್ತರಿ ಹಾಕಿದ್ದಾರೆ. ಇದನ್ನ ಕೇಳಿದ ಹೆಂಡತಿ 'ನೀವು ಭಕ್ತಿಯಿಂದ ಮಂಜುನಾಥನನ್ನು ಪೂಜೆ ಮಾಡಲಿಲ್ಲ, ನಿಮಗೆಲ್ಲಾ ಉಡಾಫೆ, ಮಂಜುನಾಥ ಒಂದು ಕೈ ತೋರಿಸದ' ಎನ್ನತೊಡಗಿದಳು, ಪ್ರಾಯಶಃ ದೇವರು ತನ್ನ ಮೇಲೆ ಅಸಡ್ಡೆ ತೋರಿಸಿದವರಿಗೆಲ್ಲಾ ಶೀಘ್ರದಲ್ಲಿ ಬುದ್ಧಿ ಕಲಿಸುವ ಹಾಗಿದ್ದರೆ ಲೋಕ ಯಾಕೆ ಹೀಗಿರುತ್ತಿತ್ತು? ಅದಕ್ಕೇ ಧೈರ್ಯದಿಂದ ನಾವು ಇಷ್ಟೊಂದು ತಪ್ಪುಗಳನ್ನು ಮಾಡುತ್ತಾ ಇರುವುದು.

ಆನಂತರ ಕೊಲ್ಲೂರಿಗೆ ಪಯಣ ಕೈಗೊಂಡೆವು. ಇಂದಿರಾಗಾಂಧಿ, ಅಮಿತಾಬ್ ಬಚ್ಚನ್, ಎಂ.ಜಿ.ರಾಮಚಂದ್ರನ್, ಮುಂತಾದ ಘಟಾನುಘಟಿಗಳನ್ನು ಹಿಡಿದು ಹಾಕ್ಕೊಂಡ ದೇವತೆಯಿದು. ಈ ದೇವತೆ ಎಷ್ಟೊಂದು ಪ್ರಭಾವಶಾಲಿಯೆಂಬ ಕುತೂಹಲವಿತ್ತು. ಆದರೆ ನನಗೇನೂ ಅಂತಹ ಆಶೋತ್ತರಗಳಿರಲಿಲ್ಲ. ಸುಮ್ಮನೆ ಕುತೂಹಲದಿಂದ ಮೂಕಾಂಬೀಕೇನ ನೋಡಿದೆ. ಆಮೇಲೆ ಕುದುರೆ ಮುಖ ನೋಡಿದೆವು, ಈ ಪ್ರದೇಶ ಹಲವಾರು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಒಂದು ಗುಡ್ಡ ಕುದುರೆಮುಖ ಹೋಲುವುದರಿಂದ ಈ ಪ್ರದೇಶಕ್ಕೆ ಕುದುರೆಮುಖ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ. ಮ್ಯಾಂಗನೀಸ್‌ನಿಂದಾಗಿ ಈ ಪ್ರದೇಶಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ ದೊರಕಿದೆ. ಗಣಿ ವಿಭಾಗದ ಸಂಸ್ಥೆಯ ಆಡಳಿತ ಕಾರಣದಿಂದಾಗಿ ವಿದ್ಯಾಸಂಸ್ಥೆಗಳು, ಆಸ್ಪತ್ರೆ, ಕುಡಿಯುವ ನೀರಿನ ಯೋಜನೆ, ಮತ್ತಿತರ ನಾಗರೀಕ ಸೌಲಭ್ಯಗಳು ದೊರಕಿವೆ. ಪ್ರಕೃತಿ ಸೌಂದರ್ಯದಿಂದಾಗಿ, ಈ ಜಾಗವನ್ನು ಬಿಡುವುದಕ್ಕೆ ಮನಸ್ಸೇ ಬರಲಿಲ್ಲ. 'ಕಳಸ' ದಿಂದ ಸ್ವಲ್ಪ ದೂರದಲ್ಲಿ ಅನ್ನಪೂರ್ಣೇಶ್ವರಿ ದೇವತೆಯುಂಟು. ಮಗಳು ಹಾಗೂ ನನ್ನ ಹೆಂಡತಿ ಭಕ್ತಿಯಿಂದ ಪೂಜೆ ಮಾಡಿದರು. ಅರ್ಚಕರು ಹೊಟ್ಟೆ ಬಿರಿಯುವಷ್ಟು ಪ್ರಸಾದಾನ ಕೊಟ್ಟರು. ಅದೇ

ಹೆಮ್ಮೆಯ ಸಂಗತಿ. ಇಲ್ಲಿ ಮೇಲಿನ ಬೆಟ್ಟಗಳಿಂದ ಹರಿದು ಬರುವ ಜರಿಯಿಂದಾಗಿ ಈ ಪ್ರದೇಶವೆಲ್ಲಾ ಅಚ್ಚ ಹಸಿರಾಗಿದೆ. ಈ ಪ್ರಕೃತಿ ದೇವತೆ ಆಶೀರ್ವಾದದಿಂದ ರೈತರು ಯಾವಾಗಲೂ ಬೆಳೆಯುತ್ತಾರೆ. ಈ ಭಾಗ ನಮ್ಮ ಇತರೆ ರೈತಾಪಿ ಜನಾಂಗಕ್ಕೆ ಎಲ್ಲಿ ಬರಬೇಕು. ಆಕಾಶನ ನೋಡುತ್ತಾ ಕುಳಿತುಕೋಬೇಕಷ್ಟೆ. ಈ ಪ್ರವಾಸ ಕಾಲದಲ್ಲಿದ್ದ ದಿನ ನನ್ನಾಕೆ ತನಗಿದ್ದ ಕ್ಯಾನ್ಸರ್ ಖಾಯಿಲೇನ ಮರೆತೇ ಬಿಟ್ಟಿದ್ದಳು. ಅಲ್ಲಿಂದ ತುಮಕೂರಿಗೆ ಹಿಂತಿರುಗಿದೆವು. ನಗುವಿನ ನಂದನವನದಂತಿದ್ದ ನನ್ನ ಮನೆ ಬಿಕೋ ಎನ್ನುತ್ತಿತ್ತು. ಮಕ್ಕಳೆಲ್ಲಾ ಉದ್ಯೋಗಕ್ಕೆ ಅವರವರ ಊರಿಗೆ ಹೋದರು. ಹಾಸ್ಟೆಲ್‌ನ ಹುಡುಗ ಮನೆಗೆ ಬಂದು ಹೋಗುತ್ತಾನೆ. ಇಡೀ ಮನೆ ತುಂಬಾ ನಾವಿಬ್ಬರೇ. ಸಂಜೆ ವಾಕ್ ಹೋಗೋದು ಬಿಟ್ಟರೆ ಇಡೀ ದಿನ ಅವಳ ಹತ್ತಿರಾನೇ ಕಳೆಯುತ್ತಿದ್ದೆ. ಹಿಂದೆ ಉಳಿಸಿದ್ದ ಮಾತುಕತೆಗಳೆಲ್ಲಾ ಪೂರ್ಣಗೊಂಡವು. ಆದರೆ ಎಂದೂ ವಿಷಯಕ್ಕೆ ಅಭಾವ ಬರಲಿಲ್ಲ. ಅಥವಾ ಮುಂದಿನ ಭಯಾನಕ ಸ್ಥಿತಿ ನೆನೆದು ಇಬ್ಬರೂ ಗಂಟೆಗಟ್ಟಲೆ ಮೌನವಾಗಿ ಕುಳಿತು ಬಿಡುತ್ತಿದ್ದೆವು. ಒಂದೊಂದು ರಾತ್ರಿ ಆಕೆ ನೋವಿನಿಂದ ನಿದ್ದೆ ಮಾಡುತ್ತಿರಲಿಲ್ಲ. ಆಗೆಲ್ಲಾ ನಾನು ಪಕ್ಕದಲ್ಲಿರುತ್ತಿದ್ದೆ. ನಾನೆಷ್ಟೇ ಒದ್ದಾಡಿದರೂ ಆಕೆಯ ನೋವನ್ನು ತೆಗೆದುಕೊಳ್ಳಲಾಗುತ್ತದೆಯೇ? ಒಬ್ಬರ ಕಷ್ಟಕ್ಕೆ ಆಗುತ್ತೇವೆಂಬುದು ನಮ್ಮ ಭ್ರಮೆ ಅಷ್ಟೇ, ನಿಮಗೆ ಗ್ಯಾಸ್ಟ್ರಿಕ್ ಕಾಯಿಲೆ. ಸಾಲದ್ದಕ್ಕೆ ಆಟೋರಿಕ್ಷಾ ಮೇಲೆ ಹರಿದಿದೆ. ವಯಸ್ಸು ಆಯಿತು ನಿದ್ದೆಗೆಟ್ಟರೆ ಒಳ್ಳೆಯದಲ್ಲ. ನೀವು ಮಲಗಿ ಎನ್ನುತ್ತಾಳೆ ನನ್ನಾಕೆ. ಆದರೆ ನಿದ್ದೆ ಹತ್ತುತ್ತದೆಯೇ? ನಾವಿಬ್ಬರೇ ಇದ್ದಾಗ ಏನೋ ವಿಪತ್ತು ಮೇಲಿಂದ ಅಡರಿ ಬಂದು ಅಪ್ಪಳಿಸುತ್ತದೆ ಎಂಬ ಭಾವನೆ ಬರುತ್ತಿತ್ತು. ಮಿತ್ರರೋ ಮನೆಗೆ ಮಕ್ಕಳೋ ಬಂದಾಗ ಒಂದಿನಿತು ಬೇರೆ ವಾತಾವರಣವಿರುತ್ತಿತ್ತು. ಮತ್ತೊಮ್ಮೆ ಗಂಟಲಿಗೆ ಏನೂ ಇಳಿಯದಂತಾಯಿತು. ಕೊನೆಯ ಮಗ ಕುಮಾರ ಬೆಂಗಳೂರಿನಲ್ಲಿದ್ದ. ನಾನು ಇನ್ನೂ ಬೆಂಗಳೂರಿನ ಉಣ್ಣೆನೇಕಾರರ ಸಹಕಾರ ಸಂಘಾನ ಪೂರ್ತಾ ಬಿಟ್ಟಿರಲಿಲ್ಲ. ತುಮಕೂರಿನಲ್ಲಿ ಕೈತುಂಬ ಕೆಲಸವಿರುತ್ತಿತ್ತು. ''ಬೆಂಗಳೂರಲ್ಲಿ ಮಗನ ಮನೆಯಲ್ಲಿ ನೀನು ಒಂದೆರಡು ದಿನ ಹಾಯಾಗಿರು'' ಎಂದರೆ ಕೇಳೋದಿಲ್ಲ. ಈ ಮಧ್ಯ ನಾನು ಜೀವ ತೇದ ಉಣ್ಣೆ ಸಂಸ್ಥೆಯಿಂದ ನಿರಾಶನಾಗಿ ಹೊರಬರಬೇಕಾಯಿತು. ಪ್ರತಿನಿತ್ಯ ಚಟುವಟಿಕೆಯ ಬದುಕನ್ನು ನಡೆಸಿದ ನನಗೆ ಈಗ ಸುಮ್ಮನೇ ಕುಳಿತುಕೋಬೇಕು. ಎಂದರೆ ಹೇಗೆ? ಇದರ ಮಧ್ಯೆ ಕಾಳಿದಾಸ ಸಂಘದ ಬೆಳ್ಳಿಹಬ್ಬದ ನೆನಪಿನ ಕಟ್ಟಡವಾಗಬೇಕು. ಏನಾದರೂ ಆಗಲಿ ಜತೆ ಜತೆಗೆ ಒಂದಿಷ್ಟು ದಿನ

ತುಮಕೂರಿನಲ್ಲಿದ್ದಾಗ ಈ ಕೆಲಸಗಳನ್ನು ಮಾಡೋಣವೆಂದು ನಿರ್ಧರಿಸಿದೆ. ಸಾರ್ವಜನಿಕ ಜೀವನದಲ್ಲಿ ನನಗೆ ಸೋಲಿನ ಪೆಟ್ಟುಬಿದ್ದಾಗ ಆಕೆ 'ಅಯ್ಯೋ, ಈ ಮನೆ ಹಾಳ ಕೆಲಸವೆಲ್ಲಾ ಬಿಡರಿ. ತುಮಕೂರಿಗೆ ಹೋಗೋಣ. ಹಾಸ್ಟಲ್‌ನಲ್ಲಿರುವ ಮಕ್ಕಳನ್ನು ನೋಡ್ತಾ ಕಾಲಕಳೆಯಿರಿ' ಎನ್ನುತ್ತಿದ್ದಳು. ಒಂದು ದಿನ ನನಗೆ ಬೆಂಗಳೂರು ತುಸು ಬೇಸರ ಬಂದು ತುಮಕೂರಿಗೆ ಹೊರಟೆ. ಇವಳು ನಾನು ಬರುತ್ತೀನಿ ಎಂದಳು. ನಾನು ಎಷ್ಟೇ ಹೇಳಿದರೂ, ಕೇಳದೆ ಹೊರಟುಬಿಟ್ಟಳು. 4-20ರ ಅರಸೀಕೆರೆ ಪ್ಯಾಸೆಂಜರ್ ಟ್ರೈನ್‌ಗೆ ಬೆಂಗಳೂರಿನಿಂದ ತುಮಕೂರಿಗೆ ಹೊರಟೆವು. ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ಆಕೆಗೆ ಬಾಧೆ ಹೆಚ್ಚಾಗಬಹುದೆಂಬ ಭಯ ನನ್ನದು. ಈಗಾಗಲೇ ಆಹಾರ ತಕೊಂಡು ಎಂಟು-ಹತ್ತು ದಿನಗಳಾಗಿತ್ತು. ಪ್ಯಾಸೆಂಜರ್ ರೈಲಿಗೆ ಹೊರಟ ನಾವು ದೊಡ್ಡ ಸಂಕಷ್ಟಕ್ಕೆ ಸಿಲುಕಿದೆವು. ರಾತ್ರಿ 7-45ಕ್ಕೆ ಹಿರೇಹಳ್ಳಿ ಬಿಡುತ್ತಾ ಟ್ರೈನ್, ಮಾರ್ಗ ಮಧ್ಯದಲ್ಲಿ ಕೆಟ್ಟು ನಿಂತಿತು. ಮುಂದಿನ ರೈಲ್ವೆ ನಿಲ್ದಾಣ ಕ್ಯಾತ್ಸಂದ್ರ ಮುಟ್ಟಲು ರೈಲ್ವೆ ಹಳಿಯ ಮೇಲೆ ಎರಡು ಮೈಲಿ ನಡೆದು ಹೋಗಬೇಕು. ಪ್ರಯಾಣಿಕರು ತಮ್ಮ ಪದಾರ್ಥಗಳ ಜೊತೆ ಹೆಜ್ಜೆ ಹಾಕತೊಡಗಿದರು. ವೃದ್ಧ ದಂಪತಿಗಳನ್ನು ಅದರಲ್ಲೂ ರೋಗದ ಮುದ್ದೆಗಳನ್ನು ಯಾರು ತಾನೇ ಕರೆದೊಯ್ಯುತ್ತಾರೆ. ನನಗೋ ಮಧ್ಯಾಹ್ನ ಒಂದಿಷ್ಟು ಉಂಡಿದ್ದರೂ ಹೊಟ್ಟೆ ತಾಳ ಹಾಕುತ್ತಿತ್ತು. ಹೊರಗೆ ಗವ್ವೆನ್ನುವ ಕತ್ತಲು. ಈ ರೈಲು ರಿಪೇರಿಯಾಗಿ ಮನೆಗೆ ಸೇರಬೇಕಾದರೆ ನಾಳೇನೇ ಸರಿ. ಕ್ಯಾನ್ಸರ್ ಕಾಯಿಲೆಯವಳಿಗೆ ಈ ಗತಿ ತಂದು ಬಿಟ್ಟೆನಲ್ಲ ಎಂಬ ಕೊರಗು ನನ್ನದು. ಅಲ್ಲದೆ ರಾತ್ರಿ ಹೊತ್ತು ನನಗೂ ಕಣ್ಣು ಮದ್ದಿಷ್ಟೆ, ಆಟೋ ಅಪಘಾತದಿಂದ ಬಲಗಾಲಿನ ಮಂಡಿ ಹಾಗೂ ಸೊಂಟ ಹೇಳಿದ ಮಾತು ಕೇಳಲಿಲ್ಲ. ಹಾಗೇ ಒಂದು ಕ್ಷಣ ಕಣ್ಣಿಗೆ ಕತ್ತಲೆ ಕವುಚಿಕೊಳ್ಳುತ್ತ ಬಂತು. ಆ ತನಕ ಮಲಗಿದ್ದ ಈಕೆ ಎದ್ದು ಬಾಗಿಲ ಬಳಿ ಬಂದಳು. ಕೊನೆಯ ಬೋಗಿಯಲ್ಲಿದ್ದ ನನ್ನ ಮಗ ಕುಮಾರನ ಸ್ನೇಹಿತ ಹನುಮಂತರಾಯಪ್ಪ ಇವಳನ್ನು ಕಂಡು ತೀವ್ರ ಕಾಯಿಲೆಯ ಈಕೆಯನ್ನು ಗುರುತಿಸಿ - ಅಮ್ಮ ನೀವು ಈ ಟ್ರೈನ್‌ನಲ್ಲಿ ಎಂದ. ನೀವು ಹೀಗೆ ನಿಂತರೆ ಎಷ್ಟು ಹೊತ್ತು ಆಗುತ್ತದೋ ಹಾಗೆ ಹೆಜ್ಜೆ ಹಾಕೋಣ ಎಂದು ಹುರಿದುಂಬಿಸಿದ. ಈಕೆ 'ಹನುಮಂತಣ್ಣ ಸಿಕ್ಕವನೇ ಹೋಗೋಣ ನಡಿರಿ' ಎಂದಳು. ಅಯ್ಯೋ ಈ ಕತ್ತಲಾಗೆ, ಅದರಲ್ಲೂ ನಿನ್ನ ಈ ಸ್ಥಿತಿ ಎನ್ನತೊಡಗಿದೆ. ಅವಳೇ, ಹನುಮಂತಪ್ಪ ಎಂದು ಕೂಗಿ ನಮ್ಮ ಲಗೇಜ್‌ನೆಲ್ಲಾ ಅವನ ಹೆಗಲ ಮೇಲೆ ಹಾಕಿ ನನ್ನ ಎಬ್ಬಿಸಿಕೊಂಡು ಹೊರಟಳು. ಮೊದಲೇ ಸೀದಾ ರಸ್ತೆಯಲ್ಲಿ

ನಡೆಯೋದೇ ಕಷ್ಟ ನನಗೆ, ಇನ್ನು ರೈಲ್ವೆ ಹಳಿಯ ಮೇಲೆ ನಡೆಯುವ ಕಷ್ಟ ಹೇಳಬೇಕಾಗಿಲ್ಲ. ಗೊರಜು ಜಲ್ಲಿ, ಒಬ್ಬರ ಮುಖ ಮತ್ತೊಬ್ಬರಿಗೆ ಕಾಣಸದ ಕತ್ತಲು, ಕುಟುಕು ಮಳೆ ಹನಿ, ಹನುಮಂತಪ್ಪ ಮುಂದೆ. ಆತನ ಹಿಂದಿದ್ದ ಈಕೆ. ಇವಳ ಹೆಗಲ ಮೇಲೆ ಕೈಯಿಟ್ಟು-ತಟ್ಟಾಡುತ್ತಾ ಹೆಜ್ಜೆ ಹಾಕುತ್ತಿದ್ದ ನಾನು. ವಯಸ್ಸಾದ ಮೇಲೆ ಹೆಂಡತಿ ಗಂಡನನ್ನು ಮಗುವಿನಂತೆ ಕೈಹಿಡಿದು ನಡೆಸುತ್ತಾಳೆಂಬ ಮಾತಿದೆ. ಆದರೆ ಸಾವಿನ ಮನೆಗೆ ಹತ್ತಿರವಿರುವ ನನ್ನಾಕೆ ವಿಶಿಷ್ಟ ಸಂದರ್ಭದಲ್ಲಿ ನನ್ನನ್ನು ಆ ಕತ್ತಲಿನಿಂದ ಬೆಳಕಿನೆಡೆಗೆ ನಡೆಸಿದಳು. ಆ ಘಳಿಗೆಯಲ್ಲಿ ಅವಳ ನಿತ್ರಾಣ, ರೋಗ, ನೋವು, ಎಲ್ಲಿ ಅಡಗಿತ್ತೋ ಆ ಪರಮಾತ್ಮನೇ ಬಲ್ಲ! ತುಮಕೂರಿಗೆ ಸಖತ್ ಖಾಯಿಲೆಯ ಆಕೆಯನ್ನು ಹೇಗೋ ಸಾಗಿಸಿಕೊಂಡು ಹೋಗಬೇಕಾಗಿದ್ದ ನಾನೇ ಅವಳಿಗೆ - ಹೊರೆಯಾದೆ. ಆಗಲೇ ಸಾವಿಗೀಡಾಗಿದ್ದ ಅವಳ ಹೆಗಲ ಮೇಲೆ ಗತ್ಯಂತರವೇ ಇಲ್ಲದೆ, ಕೈಯಿಟ್ಟು - ನನ್ನ ಭಾರವನ್ನೆಲ್ಲಾ ಅವಳ ಮೇಲೆ ಹೇರಿ ತಟ್ಟಾಡುತ್ತಾ - ಹೇಗೋ ಕಾಲೆಳೆಯುತ್ತಿದ್ದೆ. ಗಂಡನೆನಸಿಕೊಂಡ ನನಗೆ ಒಳಗೊಳಗೇ ದುಃಖ-ನಾಚಿಕೆಗಳು ಒಟ್ಟಾಗಿ ಉಮ್ಮಳಿಸಿ ಬಂದು ಕಣ್ಣೀರು ತಾನೇ ತಾನಾಗಿ ಕೋಡಿಯಾಗಿ ಹರಿಯುತ್ತಿತ್ತು. ಕ್ಯಾತ್ಸಂದ್ರಕ್ಕೆ ಬಂದು ಅಲ್ಲಿಂದ ಲಾರಿ ಹತ್ತಿ ತುಮಕೂರಿನ ಗಡಿಯಲ್ಲಿಳಿದು ಆಟೋರಿಕ್ಷಾ ಮೂಲಕ ಮನೆ ಮುಟ್ಟಬೇಕಾದರೆ ರಾತ್ರಿ ಹನ್ನೊಂದು ಗಂಟೆ ಆಯಿತು. ನಲವತ್ತನಾಲ್ಕು ವರ್ಷಗಳ ದಾಂಪತ್ಯ ಜೀವನ ಪ್ರಯಾಣ ಕೂಡ ಯಾವತ್ತು ನಮಗೆ ಇಷ್ಟೊಂದು ಆಯಾಸ ತಂದಿರಲಿಲ್ಲ. ಆದರೆ ಬೆಂಗಳೂರಿನಿಂದ ತುಮಕೂರಿನ ಈ ಪ್ರಯಾಣ ಮಾತ್ರ ಸಾಕು ಸಾಕಾಗಿ ಹೋಯಿತು. ತುಮಕೂರಿಗೆ ಹೋಗಿ ಒಂದಿಷ್ಟು ವಿಶ್ರಾಂತಿ ಪಡೆಯಬೇಕೆನ್ನುವ ಆಕೆಯ ಮಹದಾಸೆಗೆ ಎಷ್ಟೊಂದು ವಿಘ್ನ! ಆ ರಾತ್ರಿ ಮನೆಯಲ್ಲಿದ್ದ ಹಾಲು ಬಿಸಿ ಮಾಡಿಕೊಂಡು ಕುಡಿದು ಮಲಗಿದೆವು.

ಒಂದಿಷ್ಟು ದಿನದಲ್ಲಿ ಮಕ್ಕಳು ತಮ್ಮ ತಾಯೀನ ಅವರವರ ಊರಿಗೆ ಕರೆದೊಯ್ಯುವುದಾಗಿ ಹೇಳತೊಡಗಿದರು. ಈ ಮಧ್ಯ ಗಂಟಲಲ್ಲಿ ಅನ್ನ, ಗಂಜಿ ಮತ್ತಿತರ ಯಾವುದೇ ತಿನಿಸು ಇಳಿಯದಂತಾಯಿತು. ಕೆ.ಜಿ.ಎಫ್.ನಲ್ಲಿದ್ದ ಮಗ ಡಾ|| ಶಂಕರ ತಾಯೀನ ಕರ್‍ಕೊಂಡು ಹೋಗಿ ಹೊಟ್ಟೆಗೆ ಟ್ಯೂಬೊಂದನ್ನು ಅಳವಡಿಸಿದ. ಇದರಿಂದ ಹಾಲು, ಗಂಜಿ, ಹಣ್ಣಿನ ರಸ ಸುಲಭವಾಗಿ ಹೊಟ್ಟೆಗೆ ಬಿಡಬಹುದಾಗಿತ್ತು. ಮೂವರು ಗಂಡುಮಕ್ಕಳು ಸರದಿಯಂತೆ ತಾಯಿಗೆ ಒಂದೊಂದು ಬಾಟಲು ರಕ್ತ ಕೊಡುತ್ತಿದ್ದರು. ಕೊನೆ ಮಗಳು ಮಂಗಳಮ್ಮ ಕೂಡ

ರಕ್ತ ಕೊಡಬೇಕಾಯಿತು. ಮಕ್ಕಳೆಲ್ಲಾ ಕಾಲನ ವಿರುದ್ಧ ಹೋರಾಡಿ ತಾಯಿಯನ್ನು ಸಾಧ್ಯವಾದಷ್ಟು ದಿನ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೂ ಕ್ಯಾನ್ಸರ್ ತನ್ನ ಕೈಚಳಕಾನ ಪ್ರತಿನಿತ್ಯ ತೋರಿಸುತ್ತಲೇ ಇತ್ತು. ಕ್ಯಾನ್ಸರ್ ಆಸ್ಪತ್ರೆಯ ಡಾಕ್ಟರ್‌ಗಳು ಆಸೆ ಬಿಟ್ಟಿದ್ದರು. ಈಗ ಕುಮಾರ ತುಮಕೂರಿಗೆ ವರ್ಗ ಮಾಡಿಸಿಕೊಂಡ. ನಮ್ಮ ಜೊತೆ ಇದ್ದ ಹೆಣ್ಮಕ್ಕಳು ಗಂಡುಮಕ್ಕಳು ಎಂಬ ಭೇದವಿಲ್ಲದೆ ಅವರ ತಾಯಿ ಸೇವೆ ಮಾಡಿದರು. ಯಾರೂ ಇಲ್ಲದಾಗ ಈಕೆ ಮಾತ್ರ ಕಣ್ಣೀರು ಸುರಿಸುತ್ತಾ ಎಷ್ಟು ದಿನ ಅಂತ ಸೇವೆ ಮಾಡ್ಸಿಕೊಳ್ಳೋದು. ಮಕ್ಕಳಿಗೆ ರಕ್ತ ಕೊಟ್ಟಿರೋದನ್ನು ಈಗ ಕಿತ್ತುಕೊಳ್ಳಬೇಕಾಗಿದೆಯಲ್ಲ ಎನ್ನುತ್ತಿದ್ದಳು. ಆಗ ನಾನು ಏನು ಮಾಡೋದು, ಆ ದೇವರಿಗೆ ಏನು ಪ್ರೀತಿನೋ ಅದನ್ನ ಮಾಡಿಸಿಕೊಳ್ಳುತ್ತಾನೆ. ನೀನು ನಿಶ್ಚಿಂತಳಾಗಿರು ಎಂದು ಸಮಾಧಾನ ಮಾಡುತ್ತಿದ್ದೆ. ಮಕ್ಕಳು ನಿರ್ಗಮಿಸಿದರು. ಈ ಮಧ್ಯೆ ನನಗೆ ಆಶೀರ್ಯಿಂದ ಅಂಟಿಕೊಂಡಿದ್ದ ಗ್ಯಾಸ್ಟ್ರಿಕ್ ವ್ಯಾಧಿ, ಅಮೀಬಾ ಡಿಸೆಂಟರಿ - ಮರುಕಳಿಸಿದವು. ಚೈತನ್ಯ ನರ್ಸಿಂಗ್ ಹೋಂ ಸೇರಿದೆ. ಆಗ ಕೂಡ ಆಕೇನೆ ಫೋನ್ ಮಾಡಿ ಡಾಕ್ಟರನ್ನು ಕರೆಸಿಕೊಂಡು ಆಸ್ಪತ್ರೆಗೆ ಸೇರಿಸಿದಳು. ಮಾರನೆಯ ದಿನ ಮಕ್ಕಳೆಲ್ಲಾ ಬಂದರು. ಸೊಸೆಯರ ಜೊತೆ ಬೇಡ ಬೇಡವೆಂದರೂ ಪ್ರತಿನಿತ್ಯ ಎಳೆಯಲಾರದ ಕಾಲನ್ನು ಎಳೆದುಕೊಂಡು ಬಂದು, ನರ್ಸಿಂಗ್ ಹೋಂ ತುಳಿಯುತ್ತಿದ್ದಳು. ಹಾಸ್ಟಲ್ ಮ್ಯಾನೇಜರ್ ಬಂದರೆ ಹುಡುಗರಿಗೆ ಊಟ ಹಾಕಿದಿರಾ? ಏನು ಎಂತು? ಎಂದು ವಿಚಾರಿಸಿಕೊಳ್ಳುತ್ತಿದ್ದಳು. ಆಕೆಯ ಹೆಸರಿನಲ್ಲಿ ಗ್ರಾಮಾಂತರ ಯುವಕರಲ್ಲಿ ಭಾಷಣ ಕಲೆ ಬೆಳೆಯುವುದಕ್ಕಾಗಿ ನಮ್ಮ ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘಕ್ಕೆ ಪರ್ಯಾಯ ಪಾರಿತೋಷಕ ಕೊಟ್ಟಾಗ ನನ್ನಂತಹ ಓದುಬರಹ ತಿಳಿಯದವಳ ಹೆಸರಿನಲ್ಲಿ ಈ ಬಹುಮಾನ ಕೊಡುವುದೇ ಬೇಡ ಎಂದು ಪ್ರತಿಭಟಿಸಿದಳು. ಆಗ ನಾನು ನೀನು ಸುಮ್ಮನಿರು, ನಮ್ಮ ಹೈಕಳುಗಳು ಬರಿ ಅಕ್ಷರ ಕಲಿತರೆ ಸಾಲದು. ಜೀವನದಲ್ಲಿ ಶ್ರದ್ಧೆ ತ್ಯಾಗಗಳನ್ನು ಕಲಿಯಬೇಕು. ನನಗೆ ನಿನ್ನ ಹೆಸರು ಸರಿ ಎನಿಸಿದೆ ಎನ್ನತೊಡಗಿದೆ. 1984ರ ಡಿಸೆಂಬರ್ ತಿಂಗಳ ಹೊತ್ತಿಗೆ ಆಕೆಯ ಸ್ಥಿತೀನ ನೋಡಕ್ಕೆ ಆಗುತ್ತಿರಲಿಲ್ಲ. ಹೆಚ್ಚಾಗಿ ನರಳಿದರೆ ನಾವೆಲ್ಲಿ ಬೇಸರಿಕೆ ಮಾಡಿಕೊಳ್ಳುತ್ತೇವೋ ಎಂದು ನೋವನ್ನ ಹಂಗೆ ನುಂಗುತ್ತಿದ್ದಳು. ಮಕ್ಕಳಿಗೆಲ್ಲಾ ಹೇಳಿದೆ. ಪ್ರಕೃತ್ತಿಯ ವಿರುದ್ಧವಾಗಿ ಹೋರಾಡುವುದು ಸಾಕು ಅವಳಿಗೂ ಇದರಿಂದ ಪ್ರಯೋಜನವಿಲ್ಲ. ಮಾವಿನಹಣ್ಣನ್ನು ಕಾಲಾತೀತವಾಗಿ ತಿನ್ನಬಹುದೆಂದು ಫ್ರಿಜ್‌ನಲ್ಲಿಟ್ಟರೆ, ಒಂದಿಷ್ಟು ದಿನ ಮಾತ್ರ ರುಚಿ ಇರುತ್ತದೆ. ಆಮೇಲೆ ಅದರ ಮಹತ್ವವೇ ಹೊರಟು

ಹೋಗುತ್ತದೆ. ಪ್ರಕೃತಿ ಜೊತೆ ಹೊಂದಿಕೊಳ್ಳೋಣ ಎಂದೆ. ಆದರೆ ಡಿಸೆಂಬರ್ 28, 1984ರ ಬೆಳಿಗ್ಗೆ 4-10ರ ವೇಳೆಯಲ್ಲಿ ನನ್ನಾಕೆ ಇಲ್ಲವಾದಳು. ಮನೆತುಂಬ ಮೊಮ್ಮಕ್ಕಳು, ಸೊಸೆಯಂದಿರು ಹೆಣ್ಮಕ್ಕಳು, ಅಳಿಯಂದಿರು ಗಂಡ ಮಕ್ಕಳಿದ್ದರೂ, ಆಕೆ ಇನ್ನು ಯಾರನ್ನೂ ನೋಡುವಂತಿರಲಿಲ್ಲ. ನಾನು ಆಕೆಯ ಪ್ರತಿನಿತ್ಯದ ಯಾತನೆ ಸಂದರ್ಭದಲ್ಲಿ ಲೋಕದ ನಿಸ್ಸಾರತೆಯ ಬಗ್ಗೆ ಹೇಳಲೇಬೇಕು. ನಮ್ಮ ಕೈಯಲ್ಲಿ ಏನಿಲ್ಲವೆಂಬುದಂತೂ ಅಕ್ಷರಶಃ ಸತ್ಯ. 'ಮಂಕುತಿಮ್ಮ' ನ ಕಗ್ಗದಲ್ಲಿರುವ ಈ ಮಾತೇ ಯಾವಾಗಲೂ ಕೊನೆಯದಾಗುತ್ತದೆ.

''ಎಲ್ಲಿಯೋ ವಿಧಿಯ ಗೂಢ ಕರ್ಮಶಾಲೆಯಲಿ
ನಿಲ್ಲದಾಡುತ್ತಿಹವು ಯಂತ್ರ ಕೀಲುಗಳು
ಎಲ್ಲಾಗುಹೋಗುಗಳದೂ ಚಕ್ರಗತಿಯಂತೆ
ತಲ್ಲಣವು ನಿನಗೇಕೆ?

ಶ್ರೇಷ್ಠ ವ್ಯಕ್ತಿಗಳ ಸಾಧನೆಯ ಹಿಂದೆ ಸ್ತ್ರೀಶಕ್ತಿಯೊಂದಿರುತ್ತದೆಂದು ಬಲ್ಲವರು ಹೇಳುತ್ತಾರೆ. ನಾನಂತೂ ಶ್ರೇಷ್ಠನಲ್ಲ ಅಥವಾ ಮಹಾನ್ ವ್ಯಕ್ತಿಯೂ ಅಲ್ಲ. ಬದುಕನ್ನು ನೇರವಾಗಿಸಲು ಸೆಣಸಾಡುತ್ತಿರುವ ವ್ಯಕ್ತಿ. ನನ್ನ ಬಾಳಿನಲ್ಲಿ ಒಂದಿಷ್ಟು ಸಮೃದ್ಧಿ ಕಾಣಲು ನೆರವಾದವರು ಮೂರು ಸ್ತ್ರೀಶಕ್ತಿಗಳು; ಮೊದಲಿಗೆ ತಾಯಿ-ತಾರುಣ್ಯದಲ್ಲಿ ಅಕ್ಕ-ಮದುವೆಯ ನಂತರ, ಸಂಸಾರ ರಥದಲ್ಲಿ ಸಮಪಾಲು ಹೊತ್ತ ನನ್ನಾಕೆ. ಈ ಮೂವರು ನನಗೆ ಬೆಳಕಿತ್ತು, ರಕ್ಷಿಸಿ ನನ್ನನ್ನು ಪುನೀತನನ್ನಾಗಿಸಿದ್ದಾರೆ.

# ಕೊನೆಗೆ ಉಳಿದಿದ್ದೇನು

ಈ ತನಕದ ನನ್ನ ಸುಮಾರು ಎಂಭತ್ತು ವರ್ಷದ ಬದುಕು ಏನನ್ನು ಕಲಿಸಿತೆಂಬುದನ್ನು ಯೋಚಿಸುತ್ತಿದ್ದೇನೆ. ಸಣ್ಣ ಪಾಳ್ಯದಲ್ಲ ಹುಟ್ಟಿದ ನಾನು ದೇಶದ ಬಹುಭಾಗ ಸುತ್ತಿದೆ. ವಿದ್ಯಾರ್ಥಿ ದೆಸೆಯಲ್ಲ ಒಳಗಾದ ಪ್ರಭಾವದ ಒಂದಿಷ್ಟು ಆದರ್ಶಗಳನ್ನು ಕಲಿತೆ, ಹೇಗೋ ಅದರ ಮಾರ್ಗದಲ್ಲಿ ನಡೆದೆ. ಇದರಿಂದ ಮನಸ್ಸು ಅತ್ತಿತ್ತ ಹೋಗದೆ ಹೆದ್ದಾರಿಯಲ್ಲೆ ನಡೆಯಿತು. ನಿರೀಕ್ಷಿಸಿದಷ್ಟು ನಾನು ಗುರಿ ಸಾಧಿಸದಿರಬಹುದು. ನನ್ನ ಯೋಚನಾಲಹರಿ ಆ ದಾರಿಯಲ್ಲಿಲ್ಲವೆಂಬುದು ನನಗೆ ಸಮಾಧಾನ.

ಹಾರೈಸು ಹಾರೈಸು ಹಾರೈಸು ಜೀವ<br>
ಹಾರೈಸು ನೀನಾಗುವನ್ನೆಗಂ ದೇವ.

ಈ ಕವಿವಾಣಿಯನ್ನು ಅಕ್ಷರಶಃ ಸರಿಯಾಗಿ ಪಾಲಿಸದಿದ್ದರೂ ಸಮಾಜದಲ್ಲಿ ಕಾರುಣ್ಯಕ್ಕೆ ಪಾತ್ರರಾದವರ ಬಗ್ಗೆ ಒಂದಿನಿತು ಯೋಚಿಸಿದ್ದೇನೆ. ನನಗೆ ತಿಳಿದಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದೇನೆ. ಈ ನೆವದಲ್ಲಿ ಮನೆಯವರನ್ನು ತೊರೆಯಲಿಲ್ಲ. ಪರಿಪೂರ್ಣವಲ್ಲದಿದ್ದರೂ ಅಂತರಾತ್ಮಕ್ಕನುಗುಣವಾಗಿ ಮಡದಿ ಮಕ್ಕಳನ್ನು ಕಂಡಿದ್ದೇನೆ. ಹಣ ಹೆಚ್ಚಿದಾಗ ಪಾಳ್ಯದ ದಿನಗಳನ್ನು ಮರೆಯಲಿಲ್ಲ. ಕಾಲಕ್ಕನುಗುಣವಾಗಿ ದೊಡ್ಡವರ ಬಳಕೆಯಾದರೂ ನನಗೆ ಬದುಕನ್ನು ಕೊಟ್ಟ ಬಂಧುಗಳನ್ನು ಮರೆಯಲಿಲ್ಲ. ಹಠ, ಮುಂಗೋಪ ಸಣ್ಣ ವಿಚಾರಕ್ಕೆ ಹಿಂದೆ ಮುಂದೆ ಯೋಚಿಸದೆ ಮುಂದಿದ್ದವರ ಮೇಲೆ ಎಗರಿ ಬೀಳೋದು, ನನ್ನದೇ ನಡೆಯಬೇಕೆಂಬ ಒತ್ತಾಯ ಮಾಡುವುದು ಇವೆಲ್ಲ ನನ್ನಲ್ಲಿ ಹುಟ್ಟನಿಂದ ಬಂದು ಅನೇಕರಿಗೆ ಇದರಿಂದ ತೊಂದರೆಯಾಗಿದೆ. ಆದರೆ ಇವುಗಳಿಂದ ಬೇರೆಯವರಿಗೆ ಕೆಟ್ಟದು ಮಾಡಬೇಕೆಂದು ನಾನೆಂದೂ ನಿರ್ಧರಿಸಿಲ್ಲ, ಆದರೂ ಈ ಅವಗುಣಗಳು ಮನೆಯವರಿಗೆ ಮಾತ್ರವಲ್ಲ, ನನ್ನ ಸಹವಾಸದಲ್ಲಿರುವ ಅನೇಕರಿಗೆ ಪರಿಚಿತವಾಗಿದ್ದರೂ ಅದನ್ನೆಲ್ಲಾ ಅವರು ಸಹಿಸಿಕೊಂಡು, ನನ್ನನ್ನು ರೂಪಿಸಿದ್ದಾರೆ. ಒಬ್ಬ ಮನುಷ್ಯ ಪೂರ್ಣ ಒಳ್ಳೆಯವನೆಂದೂ, ಇಲ್ಲ ಕೆಟ್ಟವನೆಂದೂ ತೀರ್ಪು ಸಾರುವುದು ಸರಿಯಲ್ಲ. ವ್ಯಕ್ತಿಯಲ್ಲಿ ರಾಮ-ರಾವಣರಿಬ್ಬರೂ ಇರುವುದು ಕಾಣಬರುತ್ತದೆ. ರಾಮನ ಅಂಶ ಹೆಚ್ಚಿದ್ದರೆ ಜನೋಪಕಾರಿಯಾಗುತ್ತಾನೆ.

ರಾವಣನ ಅಂಶ ಅಧಿಕವಿದ್ದರೆ ಜನಕಂಟಕನಾಗುತ್ತಾನೆ. ವ್ಯಕ್ತಿ ರಾವಣನ ಅಂಶವನ್ನು ಕಡಿಮೆ ಮಾಡಿಕೊಳ್ಳುತ್ತಾ, ರಾಮನ ಅಂಶಕ್ಕೆ ಹತ್ತಿರವಾಗಬೇಕು. ಇದೇ ಸಾಧನೆ. ಮನುಷ್ಯನ ಬದುಕಿಗೊಂಡು ಅರ್ಥವಿರುವುದೇ ಈ ವಿಚಾರದಿಂದ ಎನ್ನಬೇಕು. ''ದೇವ-ದಾನವರ ರಣರಂಗ ಮಾನವ ಹೃದಯ'' ಎಂಬ ಸೂಕ್ತಿ ಸದಾಕಾಲ ನೆನಪಲ್ಲಿರಬೇಕು. ಕಾಣದ ಲೋಕವನ್ನು ಕಂಡು ಹಂಬಲಿಸದೆ ಇಲ್ಲಿನ ಲೋಕಕ್ಕೆ ನ್ಯಾಯ ಸಂದಾಯ ಮಾಡಬೇಕು.

ಛತ್ರದಲ್ಲಿ ಉಳಿದುಕೊಳ್ಳುವವರು ಯಾತ್ರಿಕರು ಮಾತ್ರ ತಾನೇ. ಬದುಕು ಕೂಡ ಒಂದಿಷ್ಟು ಕಾಲವಿರುವ ಯಾತ್ರಾ ಕ್ಷೇತ್ರ. ಈ ಛತ್ರ ನಮಗೊಬ್ಬರಿಗೆ ಮಾತ್ರ ಕಟ್ಟಿಲ್ಲ. ಕಾಲಾತೀತವಾದ ಯಾತ್ರಿಕರ ಸೌಲಭ್ಯಕ್ಕಾಗಿ ಈ ಛತ್ರ ನಿರ್ಮಾಣವಾಗಿದೆ. ಅದನ್ನ ಸ್ವಚ್ಛವಾಗಿಡುವುದು, ಸುಭದ್ರವಾಗಿಡುವುದು ಪ್ರತಿಯೊಬ್ಬ ಯಾತ್ರಿಕರ ನೈತಿಕ ಜವಾಬ್ದಾರಿ. ಈ ಬದುಕು ವ್ಯಕ್ತಿಯೊಬ್ಬನದೇ ಅಲ್ಲ, ಸಮಸ್ತ ಜನರದು. ಪ್ರಕೃತಿ ಸಂಪತ್ತು. ವನ್ಯಸಂಪತ್ತು ಹಾಗೂ ಇತರೆ ಸೌಲಭ್ಯಗಳನ್ನು ಹಂಚಿಕೊಂಡು ಉಣ್ಣಬೇಕು. ಹಾಗಾದಾಗ ಮಾತ್ರ ಮನುಷ್ಯ ಹೆಮ್ಮೆ ಪಡಬಹುದಾದ ಪರಿಸ್ಥಿತಿಯನ್ನು ಕಾಣಬಹುದು. ಇಲ್ಲದಿದ್ದರೆ ದ್ವೇಷ, ಅಸೂಯೆ, ಸೇಡು, ಸಂಕುಚಿತ ಭಾವನೆಗಳು ಹೆಚ್ಚಿದರೆ ಇಂದಿನ ಜಗತ್ತನ್ನೇ ನಾವು ಕಾಣುವುದು. ಶರಣರ ಗುಣಾನ ಮರಣದಲ್ಲಿ ನೋಡು - ಎನ್ನುವ ಹಾಗೆ ಈ ವಿಚಾರಾನ ಅವರುಗಳ ಸಾವಿನಲ್ಲೆ ನೋಡ ಬಯಸುತ್ತೇವೆ. ಸಾವು ವ್ಯಕ್ತಿಯ ಬದುಕಿಗೆ ಅನಿವಾರ್ಯವಾದ ಪ್ರಕೃತಿಯ ಸಹಜ ಕ್ರಿಯೆ. ರಾಮಾಯಣ-ಮಹಾಭಾರತಗಳು ಸಾವನ್ನು ಕುರಿತು ಕೊಡುವ ವ್ಯಾಖ್ಯಾನ, ಇಂದಿಗೂ ಹೊಚ್ಚಹೊಸತು ಎನಿಸುತ್ತದೆ. ಯೌವನದ ಮದದಲ್ಲಿ ಮುನಿಕುಮಾರನ ಹತ್ಯೆಗೆ ಕಾರಣನಾಗಿ ಅದರಿಂದ ಮಾನಸಿಕ ಭೀತಿಗೊಳಗಾದ ದಶರಥನ ಸಾವು, ಕಾಮ ವಿಕಾರದಿಂದ ಮನುಷ್ಯತ್ವವನ್ನು ಕಳ್ಕೊಂಡ ಕೀಚಕನ ಸಾವು-ನಮ್ಮ ಹಳ್ಳಿಗರಿಗೆ ಚಿರಪರಿಚಿತವಾದದ್ದು. ಜನಮೇಜಯನು ಕೂಡ ಸಾವಿನಿಂದಾದ ಕ್ಲಿಷ್ಟತೆಯನ್ನು ತೊಡೆದು ಹಾಕಲೆಂದೇ ಸಾವಿನ ಪರಂಪರೆಯುಳ್ಳ ಮಹಾಭಾರತ ಕೇಳಬಯಸಿದನು. ಕುರುಕ್ಷೇತ್ರ ಯುದ್ಧದ ಹತ್ತು ದಿನಗಳನ್ನು ತನ್ನದಾಗಿಸಿಕೊಂಡ ಭೀಷ್ಮ ಆನಂತರ ಯೋಚಿಸಿದ್ದೂ ಮನುಷ್ಯನ ಬದುಕಿನಲ್ಲಿ ಸಾವಿನ ಮಹತ್ವವನ್ನು ತಾನೇ? ಎಲ್ಲಾಕ್ಕೂ ನಕಾರಾತ್ಮಕ ಉತ್ತರ ಹೇಳುತ್ತಿದ್ದ ಬುದ್ಧ ಮನುಷ್ಯ ಬದುಕಿಗೆ ಸಾವಿನ ಅನಿವಾರ್ಯತೆಯನ್ನು ಸಮರ್ಪಕವಾಗಿ ಗುರುತಿಸಿದ್ದಾನೆ. ಅಶ್ವತ್ಥಾಮನ

ಚಿರಂಜೀವಿತ್ವದೊಡನೆ ಅಭಿಮನ್ಯುವಿನ ಮರಣ ಹೋಲಿಸಿದರೆ ಇಂದು ಯಾವುದಕ್ಕೆ ಹೆಚ್ಚಿನ ಬೆಲೆಯೆಂಬುದು ಅರಿವಾಗುತ್ತದೆ. ಈ ದೀರ್ಘಕಾಲದ ಬೇಸರಿಕೆಯ ಬದುಕಿಗೆ ಅರ್ಥ ಕೊಡುವ, ಸಮಾಪ್ತಿ ನೀಡುವ ಮಹಾ ಪವಿತ್ರ ವಸ್ತು ಸಾವು. ಈ ಸಾವಿನ ಅನಂತರ ಆಯಾಯ ವ್ಯಕ್ತಿ ಅಳತೆಗೆ ನಿಲುಕುತ್ತಾನೆ. ಸಮಾಜಕ್ಕೆ ಅವನ ಕಾಣಿಕೆ, ಅದರ ಒಳಿತು ಕೆಡಕುಗಳ ವಿಹಂಗಮನೋಟ ದೊರೆಯುತ್ತದೆ.

ನನಗೆ ಮೊದಲಿನಿಂದಲೂ ಸಾವನ್ನು ಕುರಿತು ಯೋಚಿಸುವ ಹುಚ್ಚು ಎರಡು ವರ್ಷದ ಮಗುವಾಗಿದ್ದಾಗಲೇ ಅಪ್ಪನ್ನ ನುಂಗಿ ದಿನನಿತ್ಯ ತಾಯಿಯ ಕಣ್ಣೀರಿಗೆ ಕಾರಣವಾದ ಸಾವು ಹೇಗಿರುತ್ತದೆಂಬ ಕುತೂಹಲ. ವಿದ್ಯಾರ್ಥಿ ದೆಸೆಯಲ್ಲಿ ಅಂದರೆ ಅರಿವು ಮೂಡುವುದಕ್ಕೆ ಮೊದಲು ತಾಯಿಯನ್ನು ಬೇರ್ಪಡಿಸಿದ ಸಾವಿನ ಕೈಚಳಕ ನೋಡುವ ತವಕ. ಮದುವೆಯಾಗಿ ನೆಮ್ಮದಿಯಾಗಿದ್ದ ಅಣ್ಣನ ಸಾವು. ಪ್ರೀತಿ ವಾತ್ಸಲ್ಯಗಳಿಂದ ಮುಚ್ಚಟೆಯಾಗಿ ಕಾಪಾಡಿದ ಅಕ್ಕನ ಸಾವು- ಹೀಗೆ ಸಾವಿನ ಚಕ್ರದಲ್ಲಿ ಸಿಲುಕಿದ ನಾನು ಇದಕ್ಕೆ ಸ್ಪಂದಿಸಲಾರೆನೇನೋ ಎಂಬಷ್ಟು ಅದು ಸಹಜವಾಗುತ್ತಿತ್ತು. ಆದರೆ ಈ ಮಧ್ಯೆ ಮಗಳು ಜಯಮ್ಮನ ಸಾವು ಮತ್ತೆ ಹುಟ್ಟು-ಸಾವುಗಳ ಚಕ್ರಕ್ಕೆ ಸಿಲುಕಿಸಿತು. ಈ ಸಾವಿನ ಗೋಳಿನಿಂದ ಬೇಸತ್ತು ವ್ಯಕ್ತಿಗಳು ಯೋಗಿಗಳಾಗುತ್ತಾರೆ; ಆದರೆ ನಾನು ಪ್ರತಿಯೊಂದು ಸಾವಿನ ಅನಂತರ ಯೋಚನಾಪರನಾಗುತ್ತೇನೆ.

ನಾನು ಮೈಸೂರಿನ ವಿಭಾಗಾಧಿಕಾರಿಗಳಿಗೆ ಸಹಾಯಕನಾಗಿದ್ದಾಗಿನಿಂದಲೂ ಹುಣಸೂರಿನ ನಾಯಕರಾದ ಡಿ.ದೇವರಾಜ ಅರಸು ಅವರ ಬಳಕೆ ಇತ್ತು. ಅನೇಕ ವಿಚಾರದಲ್ಲಿ ಸಮಾನ ಮನಸ್ಕರಾಗಿದ್ದೆವು. ಅರಸು ಅವರು ದಿಢೀರನೆ ನಾಯಕರಾದವರಲ್ಲ. ರಾಜ ಮನೆತನದ ಹುಟ್ಟು ಪಡೆದವರಾದರೂ ವ್ಯವಸಾಯ ಕೆಲಸ ಮಾಡಿದವರು. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ರಾಜಕೀಯದ ಸಂಪರ್ಕವಿಟ್ಟುಕೊಂಡವರು. ಮೈಸೂರು ಪ್ರಾಂತದ ದೀರ್ಘ ಕಾಲದ ರಾಜಕೀಯ ಅನುಭವದೊಡನೆ ಅವರು ಮುಖ್ಯಮಂತ್ರಿಗಳಾದರು. ತಮ್ಮನ್ನು ಕಡೆಗಣಿಸಿದ ಮೇಲು ಜಾತಿಯ ಬಗ್ಗೆ ಸದಭಿಪ್ರಾಯ ಹೊಂದಿದ್ದ ಅರಸು ಅವರು, ಅಧಿಕಾರದ ಗದ್ದುಗೆಗೇರಿದ ತಕ್ಷಣ ಆ ಸನಾತನ ಶಕ್ತಿಗಳ ಪ್ರಭಾವ ಕಡಿಮೆ ಮಾಡಲು ಪ್ರಯತ್ನಿಸಿದರು. ತಮಗೆ ಅಧಿಕಾರ ಕೊಟ್ಟವರ ಸಂತೃಪ್ತಿಗಾಗಿ, ಅನಂತರ ತಮಗೆ ಅಧಿಕಾರದ ಬಗ್ಗೆ ಬೆಳೆದ ವ್ಯಾಮೋಹದಿಂದ ಅನೇಕ ತಪ್ಪು

ಕೆಲಸಗಳನ್ನು ಮಾಡಿದರು. ಕೇವಲ ಜನತೆ ಹಿತದೃಷ್ಟಿಯಿಂದ ಮಾತ್ರವಲ್ಲದೆ, ವ್ಯಕ್ತಿ ಬದುಕಿನಲ್ಲಿ ಅನುಸರಿಸಬಾರದಷ್ಟು ಅಡ್ಡದಾರಿಗೆ ಇಳಿದರು. ಇಷ್ಟಾದರೂ ಅರಸು ಅವರು ಕೆಟ್ಟವರೆಂದು ಅಥವಾ ಇನ್ನಾವುದೇ ಭಾಷೆಯಿಂದ ತೆಗಳಲು ನಾನು ಸಿದ್ಧನಿಲ್ಲ. ಅವರಿದ್ದಾಗ ಒಂದಿಷ್ಟು ಕೆಲಸ ಮಾಡಿದ ಅನುಭವ ನನ್ನದು. ಬಡವರ ಬಗ್ಗೆ ಅದರಲ್ಲೂ ಹಿಂದುಳಿದವರ ಬಗ್ಗೆ ಅವರ ಅನುಕಂಪ ಅಧಿಕಾರ ಉಳಿಸಿಕೊಳ್ಳುವ ತಂತ್ರವಾಗಿರಲಿಲ್ಲ. ಶತಶತಮಾನಗಳಿಂದ ತುಳಿತಕ್ಕೆ ಒಳಗಾದ ಜನರ ನೋವನ್ನು ಅವಮಾನವನ್ನು ಕೇವಲ ಬಾಯಿಂದ ಅಥವಾ ಬರಹದಿಂದ ಮಾಡದೆ ತಮ್ಮ ಕೆಲಸ ಕಾರ್ಯಗಳಿಂದ ನಿರೂಪಿಸಿದರು. ಭೂಸುಧಾರಣೆಯ ವಿಚಾರದಲ್ಲಿ ಅವರಿಗಿದ್ದ ಕಾಳಜಿ, ಅದರ ಅನುಷ್ಠಾನಕ್ಕೆ ಅವರ ಪ್ರಾಮಾಣಿಕ ಪ್ರಯತ್ನ ಹತ್ತಿರವಿದ್ದವರಿಗೆ ಮಾತ್ರ ಗೊತ್ತು. ಅರಸು ಅವರ ದೀರ್ಘಕಾಲದ ಆಡಳಿತ ಈ ನಾಡಿಗೆ ಏನನ್ನೇ ಕೆಟ್ಟದು ಮಾಡಿರಲಿಲ್ಲ. ಪೂರ್ವದಿಂದ ನಡೆದುಕೊಂಡು ಬಂದ ಪರಂಪರಾನುಗತ ಆಳ್ವಿಕೆ ಕೊನೆಗೊಂಡು ಒಂದಿಷ್ಟು ಪ್ರಜಾಪ್ರಭುತ್ವಕ್ಕೆ ಸಮೀಪವಾದ ವ್ಯವಸ್ಥೆ ರೂಢಿಗೆ ಬಂತೆನ್ನಬಹುದು. ಇದೇನೂ ಕಡಿಮೆ ಸಾಧನೆಯಲ್ಲ. ಯುಗವೊಂದರಲ್ಲೇ ಕಾಣುವ ಬದಲಾವಣೆ. ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅತಿಯಾಗಿ ಭ್ರಮಿಸಿ ಅರಸು ಅವರು ಕಾಲಾಂತರ ತಮ್ಮನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ ವ್ಯಕ್ತಿಯಿಂದ ದೂರ ಸರಿದರು. ತಾವು ಈ ತನಕ ಮಾಡಿರುವ ಒಳಿತು ಕೆಡುಕುಗಳನ್ನು ತೂಗಿ ನೋಡಿ ತನಗೆ ಪುನರ್ ಜೀವದಾನ ಮಾಡಿ ಎಂದು ಪ್ರಾರ್ಥಿಸಿದರು. ಎಲ್ಲವನ್ನು ತಡವಾಗಿ ಯೋಚಿಸಿ ನಿರ್ಧಾರ ಕೈಗೊಳ್ಳುವ ಅವರನ್ನ ಹನುಮಂತನುದಿಸಿದ ಈ ನಾಡಿನ ಜನ ನಡುನೀರಿನಲ್ಲೆ ಕೈ ಬಿಟ್ಟರು. ಇಲ್ಲಿಂದ ಅರಸು ಅವರಿಗೆ ಅವಸರ್ಪಣೆ ಯುಗ ಪ್ರಾರಂಭವಾಯಿತು. ಕೇಂದ್ರ ಮತ್ತು ರಾಜ್ಯದ ಮಹಾನ್ ವ್ಯಕ್ತಿಗಳೆನಿಸಿಕೊಂಡವರು ಇವರನ್ನ ತೊರೆದರು. ಪ್ರತಿನಿತ್ಯ ಬೆನ್ನಿಗೆ ಚೂರಿ ಹಾಕಿಸಿಕೊಳ್ಳುವುದೇ ಪರಿಪಾಟವಾಯಿತು. ಅಧಿಕಾರದಲ್ಲಿದ್ದಾಗ 'ಜೀ' 'ಹುಜೂರ್' 'ಬುದ್ಧಿ' ಎಂದುಕೊಂಡು ಸಲಾಮು ಹಾಕುತ್ತಿದ್ದವರು ಹೀಗಳೆಯಲು ಪ್ರಾರಂಭಿಸಿದರು. ಈ ಮಧ್ಯೆ ತಮ್ಮ ಕೆಂಪರಾಜ ಅರಸರ ಸಾವು ಅವರನ್ನು ಮತ್ತಷ್ಟು ಮುದುಡಿಸಿತು. ಈ ಚೇತರಿಕೆಯ ನಡುವೆ ಮಗಳು ನಾಗರತ್ನಳ ಅಕಾಲಿಕ ಸಾವು ಅವರನ್ನು ಪೂರ್ಣ ಮಲಗಿಸಿತು. ಜೂಲಿಯಸ್ ಸೀಜರ್‌ನಂತೆ ಅರಸು ಈಗ ಕೆಳಕ್ಕಿಳಿದರು. ಅದ್ಭುತ ಪವಾಡ ನಡೆದು ತಮಗೆ ಮರುಹುಟ್ಟು ದೊರೆಯಲೆಂದು ಕಂಡ ಕಂಡದ್ದಕ್ಕೆಲ್ಲಾ ಶರಣು ಹೋದರು. ಮಗಳ ಸಾವಿನ ನಂತರ ಒಮ್ಮೆ ಅವರ ಮನೆಗೆ ಹೋಗಿದ್ದೆ. ಹಿಂದೆ

ಮಾತನಾಡಿಸಲು ಆಗದಂತಹ ರೀತಿಯಲ್ಲಿ ಸ್ವಾರ್ಥಿಗಳಿಂದ ತುಂಬಿ ಹೋಗಿದ್ದ ಅರಸು ಅವರು ಇಂದು ಏಕಾಂಗಿಯಾಗಿದ್ದರು. ಈ ಸಂದರ್ಭದಲ್ಲಿ ಹುಡುಕಿಕೊಂಡು ಬಂದ ನನ್ನನ್ನು ಕುರಿತು ಆತ್ಮೀಯ ಪ್ರೀತಿಯನ್ನು ವ್ಯಕ್ತಪಡಿಸಿದರು. ಅವರೊಡನೆ ಕಳೆದ ಮಧುರ ಗಳಿಗೆಗಳು ನನ್ನ ಜೀವನದಲ್ಲಿ ಯಾವಾಗಲೂ ಸ್ಮರಣೀಯವೆಂದು ಭಾವಿಸುತ್ತೇನೆ. ತಮಗೆ ಎರಡು ಬಗೆದವರನ್ನು ದೂಷಿಸದೇ ಜಗತ್ತಿನ ವಿಚಿತ್ರ ಕ್ರಿಯೆಗಳನ್ನು ನೆನಸಿಕೊಳ್ಳುತ್ತ ನಿಟ್ಟುಸಿರು ಬಿಡುತ್ತಾ ಕುಳಿತಿದ್ದ ಅವರನ್ನ ಕಂಡರೆ ಯಾರಿಗಾದರೂ ಕರುಣೆ ಉಕ್ಕುತ್ತಿತ್ತು. ಆನಂತರ ಕೆಲವೇ ದಿನಗಳ್ಲಲೇ ಅರಸು ಅವರು ಇನ್ನಿಲ್ಲವಾದರು. ಮೂಲತಃ ನಮ್ಮ ಜನತೆ ತಮ್ಮ ನಾಯಕರನ್ನು ರಕ್ಷಿಸಿಕೊಳ್ಳುವ ಬಗ್ಗೆ ಏನನ್ನೂ ತಿಳಿದುಕೊಂಡಿಲ್ಲ. ಹುಚ್ಚು ಹೊಳೆಯ ತರಹ ಮಿತಿಮೀರಿ ಅವರನ್ನ ಪೂಜಿಸುವುದು ಬೇಡವಾದರೆ ಕಾಲಿನ ಕಸಕ್ಕಿಂತ ಹೆಚ್ಚಾಗಿ ಆಚೆ ದೂಡುವುದು. ಇದು ಯಾವ ಸಂಸ್ಕೃತಿ? ಇನು ಅವರ ಜೊತೆ ಇದ್ದವರು, ಅವರಿಂದ ತಮ್ಮನ್ನು ರೂಪಿಸಿಕೊಂಡವರ ನಡತೆಯನ್ನಂತೂ ಹೇಳಲೇಬೇಕಾಗಿಲ್ಲ. ಇವರೆಲ್ಲಾ ಸೇರಿ ಅರಸು ಅವರನ್ನ ಕೊಂದರು. ಅಧಿಕಾರಕ್ಕೆ ಬಂದ ಪ್ರಾರಂಭದಲ್ಲೇ ಹಾಗೂ ಅಧಿಕಾರ ಹೋದ ನಂತರ ಶ್ರೀ ಅರಸು ಅವರು ಪೂರ್ವಾಗ್ರಹವಿಲ್ಲದ ವಿವೇಚನೆ ಮಾಡಬಲ್ಲವರಾಗಿದ್ದರು. ಅವರ ಸಾವು ನನಗೆ ವ್ಯಕ್ತಿ ಎಷ್ಟೇ ಔನ್ನತ್ಯಕ್ಕೆ ಏರಿರಲಿ ಸಿಕ್ಕ ಅವಕಾಶಗಳನ್ನು ಸತ್ ಕೆಲಸಕ್ಕೆ ಉಪಯೋಗಿಸಿಕೊಳ್ಳದಿದ್ದರೆ ಕೊನೆಯಲ್ಲಿ ನಿರಾಶೆ ಅನುಭವಿಸಬೇಕಾದದ್ದು ಸಹಜ ಎನಿಸುತ್ತದೆ.

ಬಾಲ್ಯ ಗೆಳೆಯ ಜಿ.ವಿ.ನಾರಾಯಣಮೂರ್ತಿ ಕಳೆದ ವರ್ಷವಷ್ಟೇ ನಮ್ಮಗಳನ್ನು ಬಿಟ್ಟು ಹೋದ. ಸುಮಾರು ಆರೇಳು ದಶಕಗಳಷ್ಟು ದೀರ್ಘಕಾಲದ ಸ್ನೇಹ ನಮ್ಮದು. ಈಗ್ಗೆ ಸುಮಾರು ಐವತ್ತು ವರ್ಷಗಳ ಹಿಂದ ಪದವೀಧರನಾಗಿ ಗಾಂದೀಜಿ ಪ್ರಭಾವಕ್ಕೆ ಸಿಲುಕಿ ಚಳುವಳಿ, -ಅದರಿಂದ ಸೆರೆಮನೆ ವಾಸಗಳನ್ನು ಅನುಭವಿಸಿ ಸಮಾಜ ಸೇವೆಗೆ ಇಳಿದವನು. ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಜ್ಞಾನಜ್ಯೋತಿ ನೀಡಿದವನು. ಸುಮಾರು ಎಂಟು ಹತ್ತು ವರ್ಷದ ಹಿಂದೆ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದಾಗ ನಮ್ಮ ಸಮಾಜ ಆತನನ್ನು ಸುಮ್ಮನೆ ಅತ್ತ ಸರಿಸಿತು. ಅವನ ಗಾಂಧಿ ಸಾಹಿತ್ಯ. ಸಮಾಜ ಸೇವೆ, ಶೈಕ್ಷಣಿಕ ಕಾರ್ಯಗಳು ಹಾಗೂ ಅರ್ಧ ಶತಮಾನಕ್ಕೂ ಮಿಗಿಲಾದ ನಿಷ್ಕಲ್ಮಶ ಸೇವೆ ಎಲ್ಲವೂ ಎಲ್ಲೋ ಹೋದವು. ಸರ್ಕಾರವಾಗಲಿ, ಅವನಿಂದ ಸೇವೆ

ಮಾಡಿಸಿಕೊಂಡ ಸಮಾಜವಾಗಲಿ ಏನನ್ನ ತಾನೇ ಮಾಡಿತು. ತನ್ನ ಸ್ವಂತ ಆಸ್ತಿಯಿಂದ ಬದುಕಿದ ವ್ಯಕ್ತಿ ಆತ, ಮಿತ್ರರು ಹೇಗೋ ಜೊತೆಗೂಡಿ ಒಂದು ಅಭಿನಂದನಾ ಪಂಥ ತಂದರು. ಸುದ್ದಿಗಾಗಿ ಮಹತ್ವ ಕೊಡುವ ಪತ್ರಿಕೆ, ಗಣ್ಯವ್ಯಕ್ತಿಗಳನ್ನು ಮಾತ್ರ ನೋಡುವ ಜನ ಸಮೂಹ ಈ ಕಡೆ ನೋಡಲಿಲ್ಲ. ಅವನ ಸಾವಿನೊಂದಿಗೆ ನನ್ನ ಬಾಲ್ಯ, ವಿದ್ಯಾರ್ಥಿದೆಸೆ ಎಲ್ಲಾ ಹೋಯಿತು. ಇಂಥಹ ಮೂಲ ದುಡಿಮೆಗಾರರನ್ನ ಅಸಡ್ಡೆ ಮಾಡಿದರೆ ನಾವು ಹೇಗೆ ಮುಂದಿನ ಜನಾಂಗಕ್ಕೆ ಆದರ್ಶನ ಕಲಿಸೋದು. ದಿನ ನಿತ್ಯದ ಜಂಜಾಟಕ್ಕೆ ಸೀಮಿತರಾಗಿರುವ ಸಮಾಜದ ಬಹುಜನ, ಕೇವಲ ಕಾಲತಳ್ಳಿ ತಮ್ಮ ಸ್ವಾರ್ಥ ಬೆಳೆಸಿಕೊಳ್ಳುವ ಸರ್ಕಾರಗಳು ಏನು ತಾನೇ ಮಾಡುತ್ತವೆ. ನಾರಾಯಣ ಮೂರ್ತಿಯ ಸಾವು ಅನಿರೀಕ್ಷಿತದ್ದಲ್ಲ. ಆದರೆ ಸಾವಿಗೆ ಹತ್ತಿರವಿದ್ದ ಜನರನ್ನು ಸಜ್ಜನಿಕೆಯಿಂದ ನೋಡದ ನಮ್ಮ ಸಮಾಜದ ಅಧಃಪತನ ಕಂಡು ಹೇಸಿಗೆಯಾಗಿದೆ. ಇಂತಹ ಸಾವಿರಾರು ವ್ಯಕ್ತಿಗಳಿಗೆ ಆಗಿರಬಹುದಾದ ಮಾನಸಿಕ ಹಿಂಸೆಯನ್ನು ನಾವು ಸುಲಭವಾಗಿ ಊಹಿಸಿಕೊಳ್ಳಬಹುದು. ತಮ್ಮ ಕೆಲಸ ಕಾರ್ಯಗಳನ್ನು ಇವರೆಂದೂ ಲಾಭ ಮಾಡಿಕೊಳ್ಳಲಿಕ್ಕೆ ಹೋಗೊದಿಲ್ಲ. ನಾರಾಯಣಮೂರ್ತಿ ಸ್ವಾತಂತ್ರಗಳಿಕೆಗಾಗಿ ಸೆರೆಮನೆ ವಾಸ ಅನುಭವಿಸಿದ್ದರೂ ಅದರ ಸಂಬಂಧವಾದ ಸ್ವಾತಂತ್ರ ಹೋರಾಟಗಾರರ ಪಿಂಚಣಿ ಪಡೆಯುವುದಕ್ಕೂ ಒಪ್ಪಲಿಲ್ಲ. ವೃದ್ಧ ತಂದೆಯನ್ನು ಸಹಜ ವಾತ್ಸಲ್ಯದಿಂದ ಕಾಣುವ ಸತ್ ಪುತ್ರರಂತೆ ಸಮಾಜ ಇಂತಹ ಕ್ರಿಯಾಶೀಲ ವ್ಯಕ್ತಿಗಳನ್ನು ಅಕ್ಕರೆಯಿಂದ ಕಂಡಿದ್ದರೆ ಅವರಿಗೆಷ್ಟೋ ತೃಪ್ತಿಯಾಗುತ್ತಿತ್ತು.

ನಮ್ಮ ಕಾಳಿದಾಸ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾಗಿದ್ದ ಕೆ. ದಾಸಪ್ಪ ನವರ ಪರಿಚಯ ನನಗೆ ಮೊದಲಿನಿಂದಲೂ ಇತ್ತು, ನಮ್ಮ ಪಕ್ಕದ ಪಾಳ್ಯದವ ಆತ. ವಿದ್ಯಾರ್ಥಿ ದೆಸೆಯಿಂದಲೂ ಒಂದಿಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದವರು. ನನ್ನ ಹಾಗೆ ರೆವಿನ್ಯೂ ಇಲಾಖೆಯಲ್ಲಿದ್ದರೂ ನಿವೃತ್ತಿ ವೇಳೆಗೆ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ಏರಿದವರು. ಮೊದಲಿನಿಂದಲೂ ಓದಿನ ಹುಚ್ಚು. ಆ ಓದೆಲ್ಲಾ ಅಧ್ಯಾತ್ಮಿಕ ಗ್ರಂಥಕ್ಕೆ ಮೀಸಲು. ನಮ್ಮ ಅನೇಕ ಸಂಘದ ಮೀಟಿಂಗ್‌ಗಳಲ್ಲಿ ಆತ ಮಾತನಾಡುತ್ತಿದ್ದರೆ, ''ಇವರು ನಮ್ಮವರಲ್ಲ'' ಎನ್ನುವಷ್ಟು ವಿಶಾಲ ಮನೋಭಾವ ಕಾಣುತ್ತಿತ್ತು. ಸಂಘದ ಮುಂದೆ ನಾವು ಕಟ್ಟಿದ ಅಂಗಡಿಗಳಿಗೆ ಪುರಸಭೆ ಅವರು ಯದ್ವಾತದ್ವ ತೆರಿಗೆ ಹಾಕಿದಾಗ ದಾಸಪ್ಪನವರು ಪ್ರತಿಭಟಿಸಿದ ರೀತಿ ಉಲ್ಲೇಖಕ್ಕೆ ಉಚಿತ. ಹಗಲು ರಾತ್ರಿ ಸಂಬಂಧಪಟ್ಟ

ಕಾಯಿದೆಗಳನ್ನು ವ್ಯಾಸಂಗ ಮಾಡಿ, ಇಂತಹ ಸಾರ್ವಜನಿಕ ಸೇವೆಯನ್ನು ಗುರಿಯನ್ನಾಗುಳ್ಳ ಸಂಸ್ಥೆಗೆ ತೆರಿಗೆಯ ವಿನಾಯಿತಿ ಉಂಟು ಎಂಬ ಅಂಶವನ್ನು ಕೆದಕಿ ತೆಗೆದರು. ನನ್ನೊಡನೆ ಮುನ್ಸಿಪಲ್ ಕಮೀಷನರ್ ಹಾಗೂ ಅಧ್ಯಕ್ಷರನ್ನು ಕಂಡು ಸಾಕಷ್ಟು ವಿವರಗಳೊಂದಿಗೆ ತಮ್ಮ ವಾದ ಮಂಡಿಸಿದರು. ಅವರಿಬ್ಬರೂ ಇವರ ಸಾಮಗ್ರಿಗೆ ಬೆರಗಾಗಿ 'ಅಸ್ತು' ಎಂದರು. ನನ್ನ ಬಲವಂತಕ್ಕೆ ಸಂಘದ ಕಾರ್ಯದರ್ಶಿ ಹುದ್ದೆಗೆ ಅಂಟಿಕೊಂಡಿದ್ದರು. ಮೊದಲಿನಿಂದಲೂ ಕೂಡ ಅವರಿಗೆ ಉತ್ತಮ ಆರೋಗ್ಯ ಇರಲಿಲ್ಲ. 'ನನ್ನ ಬಿಡುಗಡೆ ಮಾಡಿ' ಕೋಲಾರದ ಹತ್ತಿರವಿರುವ ಅಂಜನೇಯ ಪ್ರಭುಗಳ ಹತ್ತಿರ ಹೋಗುತ್ತೇನೆ. ಕೊನೆಗಾಲದಲ್ಲಿ ಓದುತ್ತಾ, ಸುತ್ತಾಡುತ್ತಾ ಕಳಿತೀನಿ..... ಎಂದು ಪೀಡಿಸುತ್ತಿದ್ದರು. ಇದೋ ದಾಸಪ್ಪ ಸಂಘದ ಬೆಳ್ಳಿ ಹಬ್ಬವೊಂದು ಆಗ್ಲಿ, ನನಗೂ ಮನೆಕಡೆ ಪೀಡಿಸುತ್ತಿದ್ದಾರೆ. ಇಬ್ಬರೂ ಬಿಡಾನ.... ಎಂದು ಕಾಲ ತಳ್ಳುತ್ತಿದ್ದೆ. ಒಂದುದಿನ ಬಂದರು. ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಾನೂ ಹೇಳಿದರು. ಕ್ಯಾಷ್ ವಗ್ಗೆರೆಗಳ ಪಟ್ಟಿ ಕೊಟ್ಟರು. ನಾನು 'ಏನು ದಾಸಪ್ಪ ಯಾವುದಾದರೂ ಊರಿಗೆ ಹೋಗುತ್ತೀಯಾ.....' ಎಂದರೆ, ಎಲ್ಲೋ ನೋಡುತ್ತಾ ''ಹೂಂ'' ಎನ್ನುತ್ತಾ ''ಇಲ್ಲ ಸುಮ್ಮನೇ ಇವೆಲ್ಲಾ ನಿಮ್ಮ ಗಮನಕ್ಕೆ ಬರಲಿ, ಎಂದಷ್ಟೇ'' ಎಂದರು, ರಾತ್ರಿ ಮೂರು ಘಂಟೆಗೆ ಮನೆ ಹತ್ತಿರ ಯಾರೋ ಬಂದು ಎಬ್ಬಿಸಿದರು. ನಾನು ಮಾತನಾಡುವುದರೊಳಗೆ, ''ದಾಸಪ್ಪನೋರು ಹೋಗಿಬಿಟ್ಟರು'' ಎಂದರು. ಎಲ್ಲಿಗೆ ಎಂದು ಕೇಳಬೇಕಾಗಿದ್ದವನು ಅವರ ಮುಖ ನೋಡಿ ಸುಮ್ಮನಾದೆ. ನನಗೆ ಜಂಘಾಬಲವೇ ಇಳಿದು ಹೋಯಿತು. ಸಂಜೆ ನನ್ನ ಹತ್ತಿರ ಅಷ್ಟೆಲ್ಲಾ ಮಾತನಾಡಿದ ದಾಸಪ್ಪ ಈಗ ಹೇಗೆ ಇಲ್ಲವಾದರು. ಅವರ ಸಾವು ಅವರಿಗೆ ಸುಳಿವು ಸಿಕ್ಕಿತ್ತೇ? ಆರೇಳು ಘಂಟೆಯ ಕೆಳಗಿದ್ದ ವ್ಯಕ್ತಿ ಇಂದು ಮಾತನಾಡಲಾಗದವನಾಗಿದ್ದನೆಂದರೆ ಹೇಗೆ? ಅವನಿಗೂ ನನಗೂ ಎದ್ದಿರುವ ಅಡ್ಡಗೋಡೆ ಯಾವುದು?

ಎರಡು ವರ್ಷದ ಕೆಳಗೆ ಒಂದು ಮಧ್ಯಾಹ್ನ ಹಾಸ್ಟೆಲ್‌ನಿಂದ ಬರಬೇಕಾದರೆ ದಾರಿಯಲ್ಲೆಲ್ಲಾ ಜನ ಸೇರಿ ಏನೇನೋ ಮಾತನಾಡುತ್ತಿದ್ದರು. ಮನೆಗೆ ಬಂದು ರೇಡಿಯೋ ಹಚ್ಚಿದರೆ ಪ್ರಧಾನ ಶ್ರೀಮತಿ ಇಂದಿರಾಗಾಂಧಿ ಅಂಗರಕ್ಷಕರಿಂದ ಕಗ್ಗೊಲೆ ಮಾಡಲ್ಪಟ್ಟಿದ್ದರು. ಪಂಜಾಬಿನ ಸೈನಿಕ ಕಾರ್ಯಾಚರಣೆ ಅವರನ್ನ ಬಲಿ ತೆಗೆದುಕೊಂಡಿತು. ಅದಕ್ಕಿಂತ ಹೆಚ್ಚಾಗಿ ಅತಿಯಾದ ಧಾರ್ಮಿಕ ಪ್ರೇಮ, ಕುರುಡು

ವ್ಯಾಮೋಹ ಈ ಕೊಲೆಗೆ ಕಾರಣವಾಗಿತ್ತು. ಅಹಿಂಸೆಯನ್ನು ಎತ್ತಿಹಿಡಿದ ನಾಡಿನಲ್ಲೆ ಕೊಲೆಗಳ ಅವಾಂತರ. ಇಂದಿರಾಗಾಂಧಿ ಅವರ ಕೊಲೆ ಅನಂತರ ಸಾವಿನ ಮರಿಯುನ್ನಿಕ್ಕಿತು. ದೆಹಲಿ ಮುಂತಾದ ಕಡೆ ಸತ್ತ ನಿರಪರಾಧಿಗಳೆಷ್ಟು ಲೆಕ್ಕವಿಲ್ಲ. ಇವುಗಳ ತಾತ್ಕಾಲಿಕ ನಿಲುಗಡೆ ಸಿಖ್ ಗುರು ಹರಚಂದಲೋಂಗೋವಾಲ ಅವರ ಹತ್ಯೆಯಿಂದ ಎಂದಷ್ಟು ಮಾತ್ರ ಹೇಳಬಹುದು. ಸ್ವಾತಂತ್ರ್ಯ ಪಡೆಯಲು ನಾವು ತೆಗೆದುಕೊಂಡ ಕಾಲ ಎಷ್ಟು ಅದಕ್ಕೆ ನಮ್ಮ ಪೂರ್ವಿಕರು ಮಾಡಿರುವ ತ್ಯಾಗವಾದರೂ ಏನು? ಈ ಅತ್ಯಲ್ಪ ಕಾಲದಲ್ಲಿ ಅವುಗಳ ಸಮಾಧಿ ಮಾಡ ಹೊರಟಿರುವ ನಮ್ಮನ್ನು ಏನೆಂದು ಕರೆದುಕೊಳ್ಳಬೇಕು. ಮುಂದಿನ ಜನಾಂಗವಾದರೂ ನಮ್ಮ ದುರವಸ್ಥೆಗೆ ಶಪಿಸುವುದಿಲ್ಲವೇ? ನಾಡನ್ನ ಕಟ್ಟುವ ಬದಲು ವಿಭಜನೆ ಮಾಡುತ್ತಿದ್ದೇವೆಯಲ್ಲ. ಜನರನ್ನ ಕಾಪಾಡುವ ಬದಲು ಸಾವಿನ ಕೂಪಕ್ಕೆ ತಳ್ಳುತ್ತಿದ್ದೇವಲ್ಲ ಎಂದು ಪ್ರತಿನಿತ್ಯ ನಾನೊಬ್ಬನೇ ಚಿಂತಿಸುತ್ತೆದ್ದೇನೆ. ನನಗಿಂತ ದೇಶ ದೊಡ್ಡದು. ನನ್ನ ಅಧಿಕಾರ, ಅಂತಸ್ತುಗಳೆಲ್ಲಾ ಬಡಜನರ ಹಿತಕ್ಕೆ ಎಂಬ ಪ್ರಜ್ಞೆ ಎಲ್ಲರಲ್ಲೂ ಉದಯಿಸಲೆಂಬುದು ನನ್ನ ಪ್ರಾರ್ಥನೆ. ಸಾವು ಹೇಗೆ ನಿತ್ಯವೊ ಹಾಗೇ ಸುಂದರ ಜಗತ್ತು ನಿತ್ಯ! ನಮಗೆ ಬಾಳುವುದಕ್ಕೆ ಮಾತ್ರ ಅವಕಾಶ, ಉದ್ಯಾನವನದಲ್ಲಿ ಕುಳಿತು ಅದರ ಸೊಬಗು ನೋಡಬಹುದೇ ಹೊರತು, ಮಂಗನಂತೆ ಅದನ್ನ ಹಾಳುಗೈಯಬಾರದು. ಮನುಷ್ಯ ಮಂಗನಾಗದೆ ತನ್ನ ಅಪಾರ ಬುದ್ಧಿಶಕ್ತಿಯನ್ನು ಸರ್ವ ಕಲ್ಯಾಣಕ್ಕೆ ಬಳಸಿಕೊಳ್ಳಲಿ. ನನ್ನ ಆಸೆಯೆಂದರೆ,

ಮುತ್ತು ಮಾಣಿಕವ ಜೋಳದ ತೆರದಲಿ
ಹರಿಯಿಸಿ ನಾಡಿನಲಿ
ಉತ್ತಮ ಚರಿತೆಯ ಚಿತ್ರಪತಾಕೆಯ
ಮೆರೆಯಿಸಿ ಬಾನಿನಲಿ.

ನಾನಂತು ಗಾಂಧಿ ಹೇಳಿದಂತೆ ಹೆಚ್ಚು ಹೊತ್ತುಕಾಲ ಪ್ರಾರ್ಥನೆ ಮಾಡಿದವನಲ್ಲ ಅಥವಾ ದೈವ ಭಾಷೇನ ಓದಿ, ಅರಗಿಸಿಕೊಂಡು ನಿತ್ಯ ಜಪ ಮಾಡಿದವನಲ್ಲ. ಇಲ್ಲ ಹಾಡುಗಾರಿಕೆ ರೂಢಿಸಿಕೊಂಡು ಪದ ಹಾಡಿದ್ದವನಲ್ಲ. ನನ್ನದೇ ಆದ ಪ್ರಾರ್ಥನೆಯೊಂದನ್ನ ಬುದ್ಧಿ ತಿಳಿದಿದ್ದಾಗಲಿಂದ ಹೇಳ್ಕೊಂಡು ಬಂದಿದ್ದೇನೆ. ಅದರಲ್ಲಿ ಏನು ಇದೆಯೋ ಏನೂ ಇಲ್ಲವೊ ಒಂದೂ ತಿಳಿಯದು. ನನಗೆ ಈ ಮಾತುಗಳು ನನ್ನ ಹೆಸರಿನಷ್ಟೇ ಪರಿಚಿತವಾಗಿದ್ದ ಅವು ನನ್ನಲ್ಲಿ ಸೇರ್ಕೊಂಡಿದೆ.

## ಕೊನೆಗೆ ಉಳಿದಿದ್ದೇನು

ಸತ್ಯಮೆ ದೈವಂ, ನಿಷ್ಕಾಮ ಕರ್ಮಮೆ ದೈವಂ
ಬುದ್ಧ, ಕ್ರಿಸ್ತ, ಮಹಮದ್, ಮಹಾತ್ಮಾಜೀ
ರಾಮಕೃಷ್ಣ-ಗುರುವರ್ಯರೆ,
ಉಪಕಾರ ಮಾಡಿದ ಎಲ್ಲ ಮಹನೀಯರೆ
ಅನಂತ ವಂದನೆಗಳು.

# ಅಭಿಪ್ರಾಯಗಳು

## ಶ್ರೀ ಸಾಮಾನ್ಯನ ಜೀವನದ ಕಥೆ

### (ಪ್ರಜಾಮತ ವಾರಪತ್ರಿಕೆ - ಮಾರ್ಚ್ 20 1988)

**ಶೂದ್ರರು ಓದುವುದು ಕಷ್ಟವಾಗಿದ್ದ ಕಾಲದಲ್ಲಿ, ಹಳ್ಳಿ ಕುಟುಂಬವೊಂದರಿಂದ** ಬಂದು, ಓದಿ, ನಿರುದ್ಯೋಗಿಯಾಗಿ ಕಷ್ಟಪಟ್ಟು "ಹೈಸ್ಕೂಲ್ ಟೀಚರ್ರಾಗಿ ಚರಿತ್ರೆ ಪಾಠ ಹೇಳಬೇಕು" ಎಂದು ಹಂಬಲ ಹೊತ್ತು, ಕಡೆಗೆ ಸೊಸೈಟಿ ಇನ್ಸ್‌ಪೆಕ್ಟರಾಗಿ ಕೆಲಸಕ್ಕೆ ಸೇರಿ ಕಂದಾಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಷನರಾಗಿ ನಿವೃತ್ತರಾಗಿ, ಪ್ರಾಮಾಣಿಕರು, ದಕ್ಷರು ಎಂದು ಹೆಸರು ಪಡೆದು, ಕುರಿ ಅಭಿವೃದ್ಧಿ ಮಂಡಲಿ, ಉಣ್ಣೆ ನೇಕಾರರ ಸಂಘ, ಕಾಳಿದಾಸ ವಿದ್ಯಾವರ್ಧಕ ಸಂಘ ಮೊದಲಾದ ಸಂಘ ಸಂಸ್ಥೆಗಳನ್ನು ಬೆಳೆಸಿ ತಮ್ಮ ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದ ಎನ್.ಮಲ್ಲಪ್ಪನವರು 'ಕಳೆದ ಆ ದಿನಗಳು' ಎಂಬ ಆತ್ಮವೃತ್ತವನ್ನು ಪ್ರಕಟಿಸಿದ್ದಾರೆ. ಇದು 'ಅನ್ ಸೊಫಿಸ್ಟಿಕೇಟೆಡ್' ಬರಹ, ಸರಳ ಬರಹ, ಅನ್ನಿಸಿದ್ದನ್ನು ನೇರವಾಗಿ ಹೇಳಿಬಿಡುವ ಸೂಕ್ಷ್ಮ ಚಿಂತನೆ ಜಿಜ್ಞಾಸೆಗಳಿಲ್ಲದೆ ಅನುಭವವನ್ನು ತೆರೆದಿಡುವ ಬರಹ. ಮಲ್ಲಪ್ಪನವರ ತಾಯಿ ಗಂಡನನ್ನು ಕಳೆದುಕೊಂಡರೂ ನರಮನುಷ್ಯನನ್ನು ನಂಬದೆ ದೇವರನ್ನೇ ನಂಬಿ, ಮಕ್ಕಳನ್ನು ಸಾಕಲು ಶ್ರಮಿಸಿದರು. ಮಲ್ಲಪ್ಪನವರು ಸರ್ಕಾರಿ ಕೆಲಸದಲ್ಲಿ ನಿವೃತ್ತರಾದ ನಂತರ ಸಂಘ ಸಂಸ್ಥೆಗಳ ಕೆಲಸದಲ್ಲಿ ಹಲವು ಬಗೆಯ ಜನರನ್ನೂ ರಾಜಕಾರಣಿಗಳನ್ನೂ ಅಧಿಕಾರಿಗಳನ್ನೂ ಕಂಡವರು. ತಮ್ಮ ವರ್ತನೆಯನ್ನೂ ನಿಷ್ಪಕ್ಷಪಾತವಾಗಿ ಪರೀಕ್ಷಿಸಬಲ್ಲವರು. (ನಿಶ್ಶಬ್ದವಾಗಿ ಸಾಯಲೂ ಕೂಡ ನನ್ನಕ್ಕನಿಗೆ ಬಿಡದೆ ಸಂಪ್ರದಾಯ ಶರಣನಾದೆ.') ತಾವು ಯಾವುದೇ ಒಂದು ಜಾತಿಯಲ್ಲಿ ಹುಟ್ಟಿದವರು ಎಂಬ ಕಾರಣದಿಂದ, ಒಂದು ಉದ್ಯೋಗದಲ್ಲಿದ್ದುದರಿಂದ ಹಲವಾರು ಕಷ್ಟಗಳನ್ನು ಎದುರಿಸಿದವರು. ಎಂಜಲು ಹಣಕ್ಕೆ ಆಸೆ ಪಡದೆ, ಪ್ರಾಮಾಣಿಕವಾಗಿ ನಡೆದುಕೊಂಡವರು. ಅವರ ಆತ್ಮಕತೆ ಶ್ರೀಸಾಮಾನ್ಯನ ಜೀವನದ ಕಥೆ. ನಮಗೆ ತಿಳಿಯದ ಹಲವು ಜೀವನವೃತ್ತಗಳ ಪರಿಚಯವನ್ನು ಈ ಕೃತಿ ಮಾಡಿಕೊಡುತ್ತದೆ. ಹಲವಾರು ಸ್ವಭಾವಗಳ ಜನರನ್ನು ನಮ್ಮ ಮುಂದೆ ನಿಲ್ಲಿಸುತ್ತದೆ. ಕುತೂಹಲದಿಂದ ಓದಬಹುದಾದ ಪುಸ್ತಕ.

**-ಪ್ರೊ.॥ ಎಲ್.ಎಸ್.ಶೇಷಗಿರಿರಾವ್**

# ಮಾಗಿದ ಅನುಭವ, ಚಿತ್ರವತ್ತಾದ ಬರವಣಿಗೆ

## (ಪ್ರಜಾವಾಣಿ - ದಿನಪತ್ರಿಕೆ - 7ನೇ ಆಗಸ್ಟ್ 1988)

ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ಇಂಟರ್‌ಮೀಡಿಯಟ್ ಓದುವ ಹೊತ್ತೆ ತಾಯಿಯನ್ನು ಕಳೆದುಕೊಂಡು ಗುಡಿಸಲಿನಲ್ಲಿ ಬಾಲ್ಯವನ್ನು ಕಳೆದು ಎಸ್ಸೆಸ್ಸೆಲ್ಸಿಯಲ್ಲಿ ಡುಂಕಿ ಹೊಡೆದ ಎನ್.ಮಲ್ಲಪ್ಪನವರು, 80ನೇ ವಯಸ್ಸಿನಲ್ಲಿ ತಮ್ಮ ಬದುಕಿನ ವಿವರಗಳನ್ನು ದಾಖಲಿಸಿರುವ ಈ ಪುಸ್ತಕ, ಪ್ರತಿಯೊಬ್ಬರೂ ಓದಲೇ ಬೇಕಾದದ್ದು.

ಮೌಲ್ಯಾಧಾರಿತ ಬದುಕನ್ನು ಮೆಚ್ಚಿಕೊಳ್ಳುವ ಮಲ್ಲಪ್ಪನವರು, ಅಂತಹ ಧ್ಯೇಯವನ್ನಿಟ್ಟುಕೊಂಡು, ಕಷ್ಟಪಟ್ಟು ದುಡಿದು, ಅನೇಕ ಅವಮಾನಕರ ಸನ್ನಿವೇಶಗಳನ್ನು ಎದುರಿಸಿ, ತಮ್ಮ ಸುತ್ತಿನವರ ಬದುಕಿನ ಏಳಿಗೆಗಾಗಿ ಶ್ರಮಿಸಿದವರು. ಅವರು ಚಿಕ್ಕ ಹುಡುಗನಿದ್ದಾಗಲೆ ''ನಾನು ಬಿಲ್‌ಕುಲ್ ದನ ಕಾಯೋಕೆ ಹೋಗುವುದಿಲ್ಲ'' ಎಂದು ಹಟಹಿಡಿದು ಪ್ರೈಮರಿ ಶಾಲೆಗೆ ಸೇರಿದರು. ''ಬೇಗ ದೊಡ್ಡವನಾಗಿ ಬಿಡಬೇಕೆಂದು'' ಹಂಬಲಿಸಿದರು. ''ಶೂದ್ರಮುಂಡೇದೆ'' ಎಂದು ಸ್ಕೂಲಿನಲ್ಲಿ ಬೈಸಿಕೊಳ್ಳುತ್ತಿದ್ದರು. ವಿದ್ಯಾರ್ಥಿ ಜೀವನದಲ್ಲಿದ್ದಾಗಲೆ ಸೈಕಲ್ ಮೇಲೆ ಹತ್ತಿನಿಂತು ಗಾಂಧೀಜಿಯವರನ್ನು ಅವರು ನೋಡಿದರು. ಉರುಹೊಡೆದು ಲೋಯರ್‌ಸೆಕೆಂಡರಿ ಪಾಸಾದರು. ಹೈಸ್ಕೂಲು ಸೇರುವ ಹೊತ್ತಿಗೆ ''ನಮ್ಮ ರೈತಾಪಿ ಜನಾಂಗದಲ್ಲಿ ತಲೆಮಾರಿನಿಂದ ತಲೆಮಾರಿಗೆ ರವಾನಿ ಆಗೋದು ಸಾಲವೊಂದ'' ಎನ್ನುವುದನ್ನು ಕಂಡುಕೊಂಡರು. ಹೈಸ್ಕೂಲಿನಲ್ಲಿ ಅವರಿಗೆ ಎಂ.ಯಮುನಾಚಾರ್ಯ ಪಾಠ ಹೇಳುತ್ತಿದ್ದರಂತೆ. ನರಸಿಂಹನ್ ಅಂತ ಇನ್ನೊಬ್ಬ ಉಪಾಧ್ಯಾಯರಿದ್ದರಂತೆ. ಅವರ ಕ್ಲಾಸಿನಲ್ಲಿದ್ದಾಗ ಪಕ್ಕದ ಹುಡುಗ ಇವರ ಕಿವಿಯಲ್ಲಿ ಏನೋ ಹೇಳಿದ್ದಕ್ಕೆ ನರಸಿಂಹನ್ 'ಕ್ಲಾಸಿನಿಂದ ಆಚೆಗೆ ಹೋಗು' ಎಂದರು. ಮಲ್ಲಪ್ಪನವರು ಹೋಗಲಿಲ್ಲ. ಆಮೇಲೆ ಮಲ್ಲಪ್ಪನವರನ್ನು ಹೆಡ್‌ಮಾಸ್ಟರ್ ಕರೆದು ''ಆರ್ ಯು ಎ ಮಹಾರಾಜ ಟು ಡಿಸ್‌ಒಬೆ ಯುವರ್ ಟೀಚರ್?'' ಎಂದು ಕೇಳಿದಾಗ, ಮಲ್ಲಪ್ಪನವರು ''ಎಸ್ ಸರ್. ಐ ಆ್ಯಮ್ ಎ ಮಹಾರಾಜ ಸೋ ಫಾರ್ ಆ್ಯಸ್ ಮೈ ಸೆಲ್ಫ್ ರೆಸ್ಪೆಕ್ಟ್ ಅಂಡ್ ಆನರ್ ಈಸ್ ಕನ್ಸರ್ನ್ಡ್'' ಎಂದರಂತೆ. ಹೆಡ್‌ಮಾಸ್ಟರ್ ಛೀಮಾರಿ ಹಾಕದೆ ಕಳಿಸಿದರಂತೆ.

ಹೀಗೆ ಅನೇಕ ಘಟನೆಗಳನ್ನು ಮಲ್ಲಪ್ಪನವರು ಈ ಪುಸ್ತಕದ ಉದ್ದಕ್ಕೂ ಹೇಳುತ್ತಾರೆ. ಅವರು ಊಟದ ವಿಷಯವನ್ನೇ ಹೇಳಲಿ, ಹಳ್ಳಿಯ ಗುಡಿಯ ವಿಷಯವನ್ನೇ ಹೇಳಲಿ, ಕಣ್ಣಿಗೆ ಕಟ್ಟುವ ಹಾಗೆ ಹೇಳುತ್ತಾರೆ. ''ಹೊಳೇಲಿ ಮುಳುಗಿದ್ದೋನಿಗೆ ಹಗ್ಗ ಸಿಕ್ಕಿದಂತಾಯ್ತು-ಕಣ್ಣು ಕಟ್ಟಿದ ಕುದುರೆ ಹುಲ್ಲು ಕಂಡು ಅತ್ತಿತ್ತ ಸರಿದಾಡಿದರೂ ಮಾಲೀಕನೇಟಿಗೆ ಹೆದರಿ ಓಡುತ್ತಿರುವಂತೆ-ಮನಸ್ಸು ಕೆಣಕಿದ ಜೇನುಗೂಡಾಗಿತ್ತು-ಗೂಡು ಬಿಟ್ಟ ಮರಿಯೊಂದು ಮತ್ತೊಂದು ಗೂಡನ್ನು ಸೇರಿದಂತಾಗಿತ್ತು''- ಇದು ಮಲ್ಲಪ್ಪನವರ ಬರವಣಿಗೆಯ ಶೈಲಿ. ಹೀಗೆ ಚಿತ್ರವತ್ತಾಗಿ ಮಾತಾಡುವ ಮಲ್ಲಪ್ಪನವರು ತಮ್ಮ ಬರವಣಿಗೆಯ ಉದ್ದಕ್ಕೂ ಕಹಿ ಇಲ್ಲದೆ ಬರೆಯುತ್ತಾರೆ. ಅವರು ಸೊಸೈಟಿ ಇನ್‌ಸ್ಪೆಕ್ಟರ್ ಆದಾಗ ಮಾಯಸಂದ್ರಕ್ಕೆ ಹೋದದ್ದರ ಬಗ್ಗೆ ಹೀಗೆ ಹೇಳುತ್ತಾರೆ. ''ಬಸ್ಸಿಳಿದು ಸ್ಕೂಲ್ ಹತ್ತಿರಕ್ಕೆ ಹೋಗಿ ಸಂಘದ ಕಾರ್ಯದರ್ಶಿಗೆ ಹೇಳಿ ಕಳಿಸಿದೆ. ಮುಸ್ಸಂಜೆ ಹೊತ್ತು. ಕಾರ್ಯದರ್ಶಿಯವರು ಅಪ್ಪಟ ಬ್ರಾಹ್ಮಣರು. ಯಾರೋ ನನ್ನ ರೂಪ, ತಲೆಗೆ ಕಟ್ಟಿದ್ದ ಸಾದಾ ಮೈಸೂರು ಪೇಟಾದ ಬಣ್ಣಾನ ಅವರಿಗಾಗ್ಲೆ ಹೇಳಿರಬೇಕು. ಇಲ್ಲ, ಅವರೇ ಎಲ್ಲೋ ನಾನು ಬರಬೇಕಾದ್ರೆ ನೋಡಿರಬೇಕು. ನನ್ನನ್ನು ಹರಿಜನನೆಂದು ತೀರ್ಮಾನಿಸಿ, ಮುಖದರ್ಶನ ಮಾಡೋದು ಮೈಲಿಗೆ ಎಂದೂ, ಇನ್ನು ನಾನು ಮುಟ್ಟಿದ ಲೆಕ್ಕದ ಪುಸ್ತಕಗಳನ್ನು ವಾಪಸ್ಸು ತೆಗೆದುಕೊಳ್ಳೋದು ಸಾಧ್ಯವೇ ಎಂದ್ಕೊಂಡು ಊರಲ್ಲಿಲ್ಲವೆಂದು ಹೇಳಿಕಳಿಸಿದರು''. ಈ ಸಂದರ್ಭದ ಬಗ್ಗೆ ವಿಚಾರ ಮಾಡುತ್ತ ಮಲ್ಲಪ್ಪನವರು ಹೀಗೆ ಹೇಳುತ್ತಾರೆ. ''ಕೆಲವರಿಗೆ ಹುಟ್ಟು ವ್ಯಕ್ತಿತ್ವದ ಬೆಳವಣಿಗೆಗೆ ಪೋಷಕವಾಗುತ್ತದೆ. ಇನ್ನು ಕೆಲವರಿಗೆ ಕೆಡುಕಾಗುತ್ತದೆ. ಹಾಗಾದರೆ ಹುಟ್ಟು ನಮ್ಮ ಕೈಯಲ್ಲಿದೆಯೆ? ಯಾರನ್ನ ದೂಷಿಸಬೇಕೋ ಗೊತ್ತಾಗುವುದೆ ಇಲ್ಲ. ಈ ಜಾತಿಗಳನ್ನು ಯಾರು ಮಾಡಿದರೋ ಅವರ ಮನೆ ಹಾಳಾಗ ಎಂದೆಲ್ಲ ಯೋಚಿಸುತ್ತ ವ್ಯಸನದಿಂದ ಹಿಂದಿರುಗಿದೆ.''

ಮಲ್ಲಪ್ಪನವರು ಈ ಪುಸ್ತಕದ ಉದ್ದಕ್ಕೂ ಅನೇಕ ಕನ್ನಡಕವಿಗಳ ಹೆಸರನ್ನು ಹೇಳುತ್ತಾರೆ. ರಾಷ್ಟ್ರಕವಿ ಕುವೆಂಪು, ಸರ್ವಜ್ಞ, ಬೇಂದ್ರೆ ಅಕ್ಕಮಹಾದೇವಿ ರಾಜರತ್ನಂ, ಅಲ್ಲಮಪ್ರಭು, ಬಿ.ಎಂ.ಶ್ರೀ, ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಪರಮೇಶ್ವರಭಟ್ಟರು. ಡಿ.ವಿ.ಜಿ., ದೇವರ ದಾಸಿಮಯ್ಯ ಮೊದಲಾದ ಕವಿಗಳನ್ನು ಮತ್ತೆ ಮತ್ತೆ ಮಲ್ಲಪ್ಪನವರು ನೆನಪು ಮಾಡಿಕೊಳ್ಳುತ್ತಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್. ಶಿವರಾಮಕಾರಂತ, ಗೊರೂರು, ನರಸಿಂಹಾಚಾರ್,

ಅ.ನ.ಕೃಷ್ಣರಾವ್ ಮೊದಲಾದವರ ಕೃತಿಗಳನ್ನು ಕೆಲವೊಮ್ಮೆ ಇವರು ಉಲ್ಲೇಖಿಸುತ್ತಾರೆ.

ಒಟ್ಟಿನಲ್ಲಿ ಮಲ್ಲಪ್ಪನವರದು ಸುಸಂಸ್ಕೃತ ಮನಸ್ಸು, ಅವರದು ಮಾಗಿದ ಜೀವ. ತಮ್ಮ ಅನುಭವದ ಮೂಲಕ ಅವರು ಪಡೆದು ಅನೇಕ ತಿಳುವಳಿಕೆಗಳನ್ನು ಒಳಗೊಂಡಿರುವ ಈ ಕೃತಿ ಕಳೆದ ಎಂಭತ್ತು ವರ್ಷಗಳ ನಮ್ಮ ದೇಶದ ಚರಿತ್ರೆಯ ಒಳನೋಟವನ್ನೂ ಕೊಡುತ್ತದೆ. ಕೋ-ಆಪರೇಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರ್ ಆಗಿ, ಅಮಲ್ದಾರರಾಗಿ, ಅಸಿಸ್ಟೆಂಟ್ ಕಮಿಷನರ್ ಆಗಿ, ಖಾದಿ ಗ್ರಾಮೋದ್ಯೋಗ ಮಂಡಲಿಯ ಆಡಳಿತಾಧಿಕಾರಿಯಾಗಿ. ಮೈಸೂರಿನ ಡಿವಿಜನಲ್ ಕಮಿಷನರ್‌ರವರ ಸಹಾಯಕರಾಗಿ, ಕುರಿ ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ. ಕಾಳಿದಾಸ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ ಮಲ್ಲಪ್ಪನವರು ತಮ್ಮ ಸಮಾಜದ ಏಳಿಗೆಗೆ ಪ್ರಯತ್ನ ಮಾಡಿದ ಸಾಹಸದ ಕತೆ ಈ ಪುಸ್ತಕದಲ್ಲಿದೆ. ಸಮಾಜಶಾಸ್ತ್ರದ ಅಭ್ಯಾಸಿಗಳಿಗೆ ಕೂಡ ಈ ಪುಸ್ತಕ ಉಪಯುಕ್ತವಾಗಿದೆ. ಮಲ್ಲಪ್ಪನವರ ಜೀವನಶ್ರದ್ಧೆ, ಬದುಕಿನ ಬಗ್ಗೆ ಅವರಿಗಿರುವ ಆದರ, ಮೊದಲಾದವನ್ನು, ಒಂದುರೀತಿಯ ಮುಗ್ಧತೆಯಿಂದ ಚಿತ್ರಿಸುವ ಈ ಆತ್ಮಕತೆ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕವೆಂದೂ, ಅನೇಕರಿಗೆ ಮಾರ್ಗದರ್ಶಿಯಾಗುವಂತಹ ಪುಸ್ತಕವೆಂದೂ ತುಂಬ ಅಭಿಮಾನದಿಂದ ಹೇಳಬಹುದು.

-ಪ್ರೊ॥ ಸುಮತೀಂದ್ರ ನಾಡಿಗ

## ಮಲ್ಲಪ್ಪನವರ ''ಕಳೆದ ಆ ದಿನಗಳು'' ಕುರಿತು ಒಂದು ಟಿಪ್ಪಣಿ

### (ಶೂದ್ರ-ತಿಂಗಳ ಪತ್ರಿಕೆ-ಮಾರ್ಚ್ 1989)

ಅಕ್ಷರದ ಬೆಳಕೇ ಕಾಣದ ಲೋಕದಿಂದ ಬಂದ ಗ್ರಾಮೀಣ ಚೇತನವೊಂದು, ತಾನು ಹುಟ್ಟಿ ಬೆಳೆದ ಪರಿಸರ, ತಾನು ಪಟ್ಟಪಾಡುಗಳನ್ನು ಯಾವುದೇ ವಿವಂಚನೆಯಿಲ್ಲದೆ, ಆಡಂಬರದ ಸೋಗಿಲ್ಲದೆ ಅತ್ಯಂತ ಪ್ರಾಮಾಣಿಕವಾಗಿ ತನ್ನ ಒಡಲ ಭಾಷೆಯಲ್ಲಿಯೇ ನಿವೇದಿಸಿಕೊಂಡಿರುವ ಬರಹ ಇದು.

ಈ ಪುಸ್ತಕವು ನಮ್ಮ ಸಮಾಜದ ಒಂದು ಪ್ರಾತಿನಿಧಿಕ ಧ್ವನಿಯಾಗಿ ಮೂಡಿ ಬಂದಿದೆ. ಈ ಧ್ವನಿಯು ಆಕಸ್ಮಿಕವಾಗಿರದೆ ಮಲ್ಲಪ್ಪನವರ ಜೀವನದ ಅನುಭವದ ಗಣಿಯಿಂದ ಕೇಳಿಸುತ್ತಿರುವ ಧ್ವನಿಯಾಗಿದೆ. ಇದೊಂದು ಪ್ರಾತಿನಿಧಿಕ ಧ್ವನಿ. ಏಕೆಂದರೆ ತಮ್ಮ ವಿಶಿಷ್ಟ ಅನುಭವಕ್ಕೆ ಮಾತುಕೊಡುವುದು ಆ ಮಾತಿಗೆ ಬರವಣಿಗೆಯ ರೂಪ ಕಾಣಿಸುವುದು ಸಾಧ್ಯವೋ ಇಲ್ಲವೋ ಎಂಬುವಂತಹ ಅರಿಯುವ ಸ್ಥಿತಿಯಲ್ಲಿರುವ, ಅಕ್ಷರ ಲೋಕಕ್ಕೆ ಇತ್ತೀಚೆಗೆ ಪ್ರವೇಶಮಾಡುತ್ತಿರುವ ಕುರುಬ ಜನಾಂಗದ ಪ್ರತಿನಿಧಿಯಾಗಿ ಜೀವನಕ್ರಮ ರೂಪಿಸಿಕೊಂಡಿರುವುದೇ ಮೂಲ ಕಾರಣವಾಗಿದೆ.

ಈ ಪುಸ್ತಕದಲ್ಲಿ ಮಲ್ಲಪ್ಪನವರು ನೆನಪುಗಳಿಂದ ನೆನಪುಗಳಿಗೆ ನಡೆದುಬರುವುದು, ಬಾಲ್ಯ, ವಿದ್ಯಾಭ್ಯಾಸ, ಸರ್ಕಾರಿ ನೌಕರನಾಗಿ ಜೀವನ ಮುಂದರುವರಿಸಿದ್ದು, ಒಂದು ನೈಜ ಸಂಗತಿಯಾಗಿದೆ. ತಮ್ಮ ಜೀವನದ ಅಪಾರವಾದ ಅನುಭವಗಳನ್ನು ಆಯ್ದು ಒಂದು ಕ್ರಮದಲ್ಲಿ ಅದನ್ನು ಸಂಗ್ರಹಿಸಿ ಭಾಷೆಯ ಮಾಯಾಸ್ಪರ್ಶದಿಂದ ಆಕರ್ಷಕವಾಗಿ ಬರೆದಿದ್ದಾರೆ. ಮಲ್ಲಪ್ಪನವರ ಬರವಣಿಗೆಯ ದಿನ ನಿತ್ಯದ ಸತ್ಯಗಳನ್ನು ಕಂಡರಿಯಲು ಜಗತ್ತಿಗೆ ಓದುಗರ ಕೈನ ಹಿಡಿದು ಕರೆದುಕೊಂಡು ಹೋಗುತ್ತದೆ. ಆ ಜಗವು ಯಾವುದೆಂದರೆ, ''ನನ್ನ ತಾತ ಕೋಟಿ ಮಲ್ಲಯ್ಯನೆಂದು, ಗುಬ್ಬಿ ತಾಲ್ಲೂಕಿನ ಮೂಗನಾಯಕನ ಕೋಟೆಯಿಂದ ತುಮಕೂರಿಗೆ ಸಮೀಪದಲ್ಲಿರುವ ಅರ್ಜೀ ರಂಗಣ್ಣನ ಪಾಳ್ಯಕ್ಕೆ ಕುರಿ ಅಡ್ಡಾಡಿಸಿಕೊಂಡು ಬಂದನಂತೆ. ಅರ್ಜಿ ರಂಗಣ್ಣ ಎಂಬ ನಾಯಕ ವರ್ಗಕ್ಕೆ ಸೇರಿದ ಮನುಷ್ಯನೊಬ್ಬ ಹಿಂದೆ ಅಲ್ಲಿದ್ದನಂತೆ. ಆತನಿಂದ ಈ ಪಾಳ್ಯಕ್ಕೆ ಈ ಹೆಸರು ಬಂತೆಂದು ಹೇಳುತ್ತಾರೆ. ಆತ ಅರ್ಜಿ ಬರೆಯುವುದರಲ್ಲಿ ನಿಸ್ಸೀಮನಂತೆ.

ಅಲೆಮಾರಿಯಾಗಿ ಕುರಿಮಂದೆ ಹೊಡೆದುಕೊಂಡು ಬಂದ ನಮ್ಮ ತಾತ ಅಲ್ಲಿಯೇ ನೆಲೆ ನಿಂತು ತರಗು ಗುಡಿಸಿ ಗುಡಿಸಿಲೊಂದನ್ನು ಹಾಕಿಕೊಂಡರು. ''ಮಲ್ಲಪ್ಪನವರ ಧ್ವನಿಯು ಈ ಗುಡಿಸಲೊಳಗಿಂದ ಜ್ಯೋತಿಯಾಗಿ ಮೂಡಿಬಂದಿದೆ. ಹೀಗೆ ಮಲ್ಲಪ್ಪನವರು ಹುಟ್ಟಿ ಬೆಳೆದು ನಡೆದಾಡಿದರೆಂಬ ಸತ್ಯವನ್ನು ಈ ಗುಡಿಸಲ ಬೆಳಕಿನಲ್ಲಿ ನಾವು ಕಾಣಬಹುದು. ಈ ರೀತಿಯ ಬದುಕ ಬದುಕಿರುವುದು ಕೇವಲ ಮಲ್ಲಪ್ಪನವರ ವೈಯಕ್ತಿಕ ಅನುಭವವಾಗಿರದೆ ಇಂಡಿಯಾದ ಸಾಮಾಜಿಕ ಬದುಕಿನಲ್ಲಿರುವ ಪ್ರತಿ ಶ್ರೀ ಸಾಮಾನ್ಯನ ಅನುಭವವೆ ಆಗಿದೆ. ಆದ್ದರಿಂದ ಕನ್ನಡದ ಓದುಗರಿಗೆ ತಮ್ಮ ಬರವಣಿಗೆಯ ಮೂಲಕ ಶ್ರೀ ಸಾಮಾನ್ಯನ ಅನನ್ಯ ಅನುಭವದ ಗಣಿಯನ್ನು ತೆರೆದು ತೋರಿಸಿರುವ ಶ್ರೇಯಸ್ಸು ಮಲ್ಲಪ್ಪನವರಿಗೆ ಸೇರಿದ್ದಾಗಿದೆ.

ಕನ್ನಡ ಭಾಷೆಯ 'ಒಳಗನ್ನಡ'ಗಳು ಇಂದಿನ ಸಾಹಿತ್ಯ-ಕೃತಿಗಳಲ್ಲಿ ಅಪರೂಪವಾಗುತ್ತಿರುವಾಗ, ಅಪೂರ್ವವಾದ ಭಾಷೆಯ ಒಳಗುಟ್ಟನ್ನು ಹೊಂದಿರುವ ಈ ಕೃತಿ ಅಗಾಧ ಪ್ರಮಾಣದಲ್ಲಿ ಮಾನವೀಯ ರೂಪ ತಾಳಿರುವುದು ಕೌತುಕವೆ ಸರಿ. ''ಏನಾದ್ರೂ ತಿನ್ನಬೇಕೆಂಬ ಅದಮ್ಯ ಆಸೆ.... ಪಕ್ಕದಲ್ಲಿ ನೋಡಿದರೆ ದೇವಾನುದೇವತೆಗಳ ಶಾಪ ಪರಿಹಾರಕ್ಕೆ ಅರಿಶಿನದ ಬಟ್ಟೆಯಲ್ಲಿ ಹರಕೆ ಕಟ್ಟಿದ ಹರಕು ಸಣ್ಣಗಂಟುಗಳು ಕಾಣಿಸಿಕೊಂಡವು. ಸದ್ದು ಮಾಡದೆ ಎರಡುಮೂರು ಗಂಟು ಬಿಚ್ಚಿದೆ, ಒಂದು ಹಿಡಿಯಷ್ಟು ಅಕ್ಕಿ ಆಯಿತು. ತೊಳೆದು ಮಣ್ಣಿನ ಪಾಸಾಲೆಗೆ ಸುರುವಿ ಒಲೆಮೇಲಿಟ್ಟು ಪುಳ್ಳೆಗಳನ್ನು ನೂಕಿ ಉರಿ ಮಾಡಿದೆ ''ಮಲ್ಲಪ್ಪನವರು ಬಂದದ್ದು ಇಂಥ ದಾರುಣ ಬಡತನದ ಗುಡಿಸಲಿನಿಂದ, ಇಂಥ ದಾರುಣ ಸ್ಥಿತಿಯಲ್ಲಿಯೂ ಅಕ್ಷರಜ್ಞಾನ ಪಡೆಯಲು ಸ್ಕೂಲಿಗೆ ಬಂದರೆ ಅಲ್ಲೂ ಕೀಳರಿಮೆ ತುಂಬುವ ವಾತಾವರಣವೆ. ಶ್ರೀ ನರಸಿಂಹಶಾಸ್ತ್ರಿಗಳೆಂಬುವರು ಇಂಗ್ಲೀಷ್ ಪಾಠ ಹೇಳುತ್ತಿದ್ದರು... ಹಮಾಂಕೋಮ್ ಜಾತಿಗೆ ಸೇರಿದ ಹುಡುಗರನ್ನು ಕಂಡರೆ ಸಾಕು, ಮುಖ ಸಿಂಡರಿಸಿಕೊಳ್ಳುತ್ತಿದ್ದರು. ಇವರೆಲ್ಲ ಬಂದು ಸ್ಕೂಲು ಹಾಳಾಗ್ಹೋಯ್ತು' ಎನ್ನುವುದೇ ಅವರ ಜಪ. ಇವೆಲ್ಲಾ ಆ ಕಾಲ ಘಟ್ಟದಲ್ಲಿ ಕೆಳವರ್ಗಗಳು ಅನುಭವಿಸಲೇ ಬೇಕಾಗಿದ್ದ ಕೀಳರಿಮೆ. ತಬ್ಬಲಿತನವನ್ನು, ಅವರ ವ್ಯಾಪಕವಾದ ಜೀವನದ ವಿವರಗಳ ಮೂಲಕ ಕಾಣಿಸಿದ್ದಾರೆ. ಇದೇ ಪರಿಸ್ಥಿತಿಯಲ್ಲಿಯೇ ಅವರು ಮೈಸೂರಿಗೆ ಹೋಗಿ ಪದವಿ ಮುಗಿಸಿದರು. ಆಗಿನ ಮೈಸೂರಿನಲ್ಲಿದ್ದ ವಾತಾವರಣವೂ ಇದಕ್ಕಿಂತ ಹೊರತಾಗಿರಲಿಲ್ಲ, ಎನ್ನುವುದಕ್ಕೆ ಅವರ ಪುಸ್ತಕದಲ್ಲಿ ಅನೇಕ ಘಟನೆಗಳನ್ನು ಅವರು

ಬರೆಯುತ್ತಾರೆ. ನೆರೆಯ ಮದ್ರಾಸ್ ಪ್ರಾಂತ್ಯದಲ್ಲಿ ಹರಡಿದ್ದ ಬ್ರಾಹ್ಮಣೇತರ ಚಳುವಳಿ ಮೈಸೂರಿಗೂ ಹರಡಿತ್ತು. ಉನ್ನತ ಹುದ್ದೆಯಲ್ಲಿದ್ದವರು ಮೇಲ್ವರ್ಗದ ಜನರೇ..... ಸಂದರ್ಶನಕ್ಕೆ ಹೋದರೆ, ನಿಮ್ಮೋರು ಯಾರಾದರೂ ದೊಡ್ಡ ಹುದ್ದೆಯಲ್ಲಿದ್ದಾರ, ಅವರಿಂದ ಬರಸ್ಕೊಂಡು ತನ್ನಿ ಎನ್ನುವುದು ಸಾಮಾನ್ಯವಾಗಿತ್ತು'' ಕನ್ನಡ ಸಂಸ್ಕೃತಿಯ ಅತ್ಯಂತ ಮಹತ್ವದ ಘಟ್ಟವಾದ ನವೋದಯ ಕಾಲದ ಇನ್ನೂ ಅನೇಕ ಇಂಥ ಸಾಂಸ್ಕೃತಿಕ ಗುಟ್ಟುಗಳು ಇಲ್ಲಿ ಬಯಲಾಗಿವೆ. ಹೀಗೆ ಕೆಲವು ಕಡೆ ಇತಿಹಾಸಕಾರನಂತೆ ಮಲ್ಲಪ್ಪನವರ ಬರಹ ಅನೇಕ ಒಳನೋಟಗಳನ್ನು ಕೊಟ್ಟರೆ, ಇನ್ನೂ ಕೆಲವು ಕಡೆ ಸೃಜನಶೀಲ ಲೇಖಕರಂತೆ ತಮ್ಮ ಅನುಭವಗಳನ್ನು ಅವುಗಳ ಮಾನವೀಯ ಪರಿಸರದೊಂದಿಗೆ ಬರೆದಿರುವ ಘಟನೆಗಳು ನಮ್ಮನ್ನು ಹಿಡಿದು ಅಲ್ಲಾಡಿಸುತ್ತವೆ.

ಆಧುನಿಕ ರಾಕ್ಷಸಿ ತುಳಿತದಲ್ಲಿ ಮಾಯವಾಗುತ್ತಿರುವ ತಮ್ಮ ಬಾಲ್ಯದ ಮಾನವೀಯ ಜಗತ್ತನ್ನು ನೆನೆದು ವಿಷಾದಪಡುತ್ತಾರೆ. ಒಂದು ಸಾರಿ ಬಿರುಗಾಳಿಗೆ ಇವರ ಗುಡಿಸಲ ಗರಿಗಳೆಲ್ಲಾ ಹಾರಿ ನೆಲಕಚ್ಚಿದ ಮೇಲೆ, ಇವರಿಗೆ ಧೈರ್ಯ ಹೇಳಿ ನೆರವಿಗೆ ಬರುವ ನಾಯಕರ ಪೈಕಿಯ ಪೈಲ್ವಾನ್ ಕೆಂಪಣ್ಣನ ಮಾನವೀಯತೆಯನ್ನು ಕುರಿತು ಎದೆ ತುಂಬಿ ಬರೆಯುತ್ತಾರೆ. ''ನಗರ ಪ್ರದೇಶಕ್ಕೆ ಹತ್ತಿಕೊಂಡಿದ್ದರೂ ಅಚ್ಚ ಗ್ರಾಮೀಣ ಪರಿಸರದೊಂದಿಗೆ ಸರಳ ಮನಸ್ಸಿನ ಆ ಜನಗಳೆಲ್ಲಿ?'' ಬಹುಶಃ ಬೇಂದ್ರೆ ಕಳಕೊಂಡ ಜಗತ್ತು ಇದೇ ಆಗಿರಬಹುದು, ಅದಕ್ಕಾಗಿಯೇ 'ಎಲ್ಲಿ ಹೋದವೋ ಗೆಳೆಯ ಆ ಕಾಲ' ಎಂದು ಬೇಂದ್ರೆ ಮರುಗಬಹುದು, ಮಲ್ಲಪ್ಪನವರ ಕಳೆದುಕೊಂಡ ಜಗತ್ತೂ ಆ ಬಗೆಯದೇ ಆಗಿದೆ.

ಇಷ್ಟೆಲ್ಲ ಏಳುಬೀಳುಗಳ ನಡುವೆಯೂ ಅವರು ಸರ್ಕಾರಿ ಅಧಿಕಾರಿಗಳಾದರು. ಅಧಿಕಾರಿಯಾದ್ದೂ ತಮ್ಮ ಮೂಲ ಅಂತಃಕರಣವನ್ನು ಕಳೆದುಕೊಳ್ಳದೆ ಸದಾಕಾಲ ಸಾಂಸ್ಕೃತಿಕ ಪ್ರಾತಿನಿಧೀಕರಣವಿಲ್ಲದ ಕೆಳಜಾತಿ ಮತ್ತು ಕೆಳವರ್ಗಗಳ ಬಗ್ಗೆಯೇ ಚಿಂತಿಸಿದರು. ತಮ್ಮ ಕೈಬಾಯಿಗಳನ್ನು ಸದಾಕಾಲ ಶುದ್ಧವಾಗಿಯೇ ಇಟ್ಟುಕೊಂಡಿದ್ದ ಮಲ್ಲಪ್ಪನವರು 'ಆತ್ಮಗೌರವ, ಅದು ಹೋದರೆ ನಾನು ಸತ್ತಂತೆಯೇ ಸರಿ, ಹಂಗು ಆತ್ಮಗೌರವದ ಮೊದಲ ಶತ್ರು ಎಂದುಕೊಂಡೆ' ಎಂಬ ದಾರ್ಶನಿಕ ಸತ್ಯವನ್ನು ತಮ್ಮ ಅನುಭವಗಳಿಂದಲೇ ಕಂಡುಕೊಂಡಿದ್ದರು. ತಾವು ಭ್ರಷ್ಟರಾಗಬಹುದಾದ ಆಮಿಷಗಳು, ಆತಂಕಗಳು ಬರುತ್ತಿದ್ದರೂ ತಮ್ಮ ಸತ್ಯ ಪ್ರಾಮಾಣಿಕತೆಯ ಮಾರ್ಗವನ್ನು ತೊರೆಯಲಿಲ್ಲ. ಅದು ಸಾಕ್ರೆಟೀಸನು ತುಳಿದ

ಮಾರ್ಗ. ಅದನ್ನೇ ಮಲ್ಲಪ್ಪನವರೂ ಅನುಸರಿಸಿದರು. ಆದ್ದರಿಂದಲೆ ಮಲ್ಲಪ್ಪನವರು ಪುಸ್ತಕದಲ್ಲಿ ದಾರ್ಶನಿಕನೊಬ್ಬನ ನಿಷ್ಠೆ, ಸೃಜನಶೀಲ ಲೇಖಕನ ತಳಮಳ ಏಕಕಾಲಕ್ಕೆ ಕಂಡು ಬರುತ್ತದೆ. ಇಂಥದ್ದೇ ಅಪೂರ್ವವಾದ ಒಳನೋಟಗಳನ್ನು ಕಟ್ಟಿಕೊಡುವ ಕನ್ನಡದ ಅತ್ಯುತ್ತಮ ಆತ್ಮಕಥನಗಳಾದ ನವರತ್ನರಾಮರಾಯರ 'ಕೆಲವು ನೆನಪುಗಳು'. ಮಲ್ಲಿಕಾರ್ಜುನ ಮನ್ಸೂರ್‌ರ 'ನನ್ನ ರಸಯಾತ್ರೆ' ಪುಸ್ತಕಗಳ ಸಾಲಿನಲ್ಲಿ ಈ ಪುಸ್ತಕವು ಎದ್ದು ನಿಲ್ಲುತ್ತದೆ.

ಮಹಾತ್ಮ ಗಾಂಧೀಜಿಯವರ 'My Experiments with Truth' ಹಾಗೂ ಜವಹರಲಾಲ್ ನೆಹರೂರವರ Autobiography, ಶ್ರೀ ಭಗವಾನ್ ದಾಸ್‌ರ ಅಸ್ಪೃಶ್ಯನ ಆತ್ಮಕಥೆಯಂತಹ ಬಹುಮುಖ್ಯ ಬರವಣಿಗೆಗಳ ಸಾಲಿನಲ್ಲಿ ನಿಲ್ಲುವ ಮಲ್ಲಪ್ಪನವರ 'ಕಳೆದ ಆ ದಿನಗಳು', ಗಾಂದೀಜಿಯವರು ತಮ್ಮ ಜೀವನದಲ್ಲಿ 'ಸತ್ಯ ಅಹಿಂಸೆ'ಗಳ ಪ್ರಯೋಗ ಮಾಡಿ ಈ ಪ್ರಯೋಗದಲ್ಲಿ ಕಂಡುಕೊಂಡ ಸತ್ಯಗಳನ್ನು ಬರವಣಿಗೆಯಾಗಿಸಿದ್ದಾರೆ. ನಮ್ಮ ಸಾಮಾಜಿಕ ಜೀವನದಲ್ಲಿ ಸ್ವಾಭಿಮಾನ ಕಳೆದುಕೊಂಡು ಕೇವಲ ಪಶುಗಳಂತೆ ಬಾಳುತ್ತಿರುವ ಅಖಂಡ ಅಸ್ಪೃಶ್ಯರ ಸಂಕಟವನ್ನು ಭಗವಾನ್‌ದಾಸರವರು ತಮ್ಮ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ. ಸ್ವಾಭಿಮಾನಕ್ಕಾಗಿ ಹೋರಾಡಬೇಕೆಂಬ ಅರಿವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಅನಿಸಿಕೆಗಳು ಮಲ್ಲಪ್ಪನವರಲ್ಲಿ ದಟ್ಟವಾಗಿ ಕಂಡುಬರುತ್ತವೆ. ಎನ್.ಮಲ್ಲಪ್ಪ 'ಕಳೆದ ಆ ದಿನಗಳು' ಭಾವನಾತ್ಮಕವಾಗಿ ಇಂದಿನ ಜನಾಂಗದ ಯಾತನಾ ಸಂವೇದನೆಗಳನ್ನೂ ಒಗ್ಗೂಡಿಸಿಕೊಂಡಿದೆ.

ಒಬ್ಬ ಮನುಷ್ಯನು ವಿದ್ಯಾವಂತನೂ, ಬುದ್ಧಿಜೀವಿಯೂ ಆದಾಗ ಭಾವನಾತ್ಮಕ ಸಂಬಂಧಗಳು ವಿನಾಶವಾಗದಂತೆ ಕಾಪಾಡಿಕೊಂಡು ಬರುವುದು ಅಪರೂಪದ ಗುಣವೇ ಆಗಿದೆ. ಆದ್ದರಿಂದಲೇ ಏನೋ Johan Stuart Mill ಎಂಬ ತತ್ವ ಜ್ಞಾನಿಯು ತಮ್ಮ ತಂದೆಯ ಪ್ರಭಾವದಿಂದ ತೀವ್ರ ಅಧ್ಯಯನಶೀಲನಾಗಿದ್ದು, ತದನಂತರದಲ್ಲಿ ಅಧ್ಯಯನ ಶೀಲತೆಯು ನನ್ನಲ್ಲಿ ಅಧೋಗತಿಯನ್ನುಂಟು ಮಾಡಿತು. ನನ್ನಿಂದ 'How to feel' ಎಂಬ ಮೂಲಗುಣವನ್ನು ಕಿತ್ತುಕೊಂಡಿದೆ, ಎಂಬ ಹತಾಶೆಗೆ ಗುರಿಯಾಗಿ 'How to feel' ಎಂಬುದನ್ನು ಕಲಿಯಬೇಕೆಂದು ಅಂದುಕೊಳ್ಳುತ್ತಾನೆ. ಆದರೆ Johan Stuart Mill ಯಾವುದನ್ನು ಕಳೆದುಕೊಂಡಿದ್ದೇನೆಂದು ತಿಳಿಯುತ್ತಾನೋ ಅದು ಹುಟ್ಟಿನಿಂದಲೇ

ಭಗವಾನ್‌ದಾಸ್ ಮತ್ತು ಮಲ್ಲಪ್ಪನವರಿಗೆ ಲಭ್ಯವಾಗಿರುವುದರಿಂದಲೋ ಏನೋ ಮಲ್ಲಪ್ಪನವರು ರೆವಿನ್ಯೂ ಇಲಾಖೆಯಲ್ಲಿ ನೌಕರನಾಗಿದ್ದು, ವಿದ್ಯಾಸಂಸ್ಥೆ ಕಟ್ಟಿ ಕಟ್ಟಕಡೆಯ ಮನುಷ್ಯನ ಕಣ್ಣೀರು ಒರೆಸುವ ಎಷ್ಟೋ ಪ್ರಯತ್ನಗಳನ್ನು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಮಾಡಿದ್ದಾಗ್ಯೂ ಆತ್ಮತೃಪ್ತಿ ಇಲ್ಲದವರಾಗಿ, ಬಡವರ ಬಗೆಗಿನ ಅವರ ಕಳಕಳಿಯ ವಿಷಾದವು ಮತ್ತು ಅವರ ಪ್ರಾಮಾಣಿಕ ಬದುಕಿನ ಚೇತನವೂ ಮಲ್ಲಪ್ಪನವರ 'ಕಳೆದ ಆ ದಿನಗಳು' ಎಂಬ ಪುಸ್ತಕವನ್ನು ಬರೆಸಿಕೊಟ್ಟಿದೆ ಎಂಬುದು ನಾವು ಈ ಪುಸ್ತಕ ಓದುವುದರಿಂದ ತಿಳಿಯಬಹುದಾದ ಸತ್ಯಸಂಗತಿಯಾಗಿದೆ.

ಮಲ್ಲಪ್ಪನವರಂತೆ ಅಪಾರವಾದ ಅನುಭವಗಳನ್ನು ಇಟ್ಟುಕೊಂಡು ಅವುಗಳಿಗೆ ಬರಹರೂಪ ಕಾಣಿಸಲಾಗದ ಇನ್ನೂ ಅದೆಷ್ಟು ಚೇತನಗಳು ಈ ನಾಡಿನಲ್ಲಿವೆಯೋ! ಅವುಗಳಲ್ಲಿ ಮಲ್ಲಪ್ಪನವರದೂ ಒಂದು ಧ್ವನಿ.

-ಜಿ.ವಿ.ಆನಂದ ಮೂರ್ತಿ

# ನಿವೃತ್ತ ಅಧಿಕಾರಿಯ ನೆನಪುಗಳು

''ಕಳೆದ ಆ ದಿನಗಳು: (ದ್ವಿತೀಯ ಮುದ್ರಣ-1989) ಲೇ: ಎನ್.ಮಲ್ಲಪ್ಪ ಪ್ರ: ಶ್ರೀಮತಿ ರಂಗಮ್ಮ ಮಲ್ಲಪ್ಪಟ್ರಸ್ಟ್ 2120 ಸೋಮೇಶ್ವರ ಬಡಾವಣೆ, ತುಮಕೂರು-2, ಪುಟ: 235+XIV ಬೆಲೆ ರೂ. 40/-

ಸರ್ಕಾರಿ ನೌಕರಿಯಲ್ಲಿದ್ದು ಅದೂ ಕಂದಾಯ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ನಿವೃತ್ತಿ ಹೊಂದಿದ ಮಲ್ಲಪ್ಪನವರ ಸಾಹಿತ್ಯಾಸಕ್ತಿ - ಪ್ರವೃತ್ತಿ ಅವರ ಆತ್ಮಕಥನದ - ''ಕಳೆದ ಆ ದಿನಗಳು'' ಪುಸ್ತಕದಲ್ಲಿ ಕಾಣುಬಹುದಾಗಿದೆ. ಇಲ್ಲಿರುವ ಒಂದು ವಿಶಿಷ್ಟತೆ, ಬರಹದಲ್ಲಿರುವ ಸರಳತೆ, ವ್ಯವಹಾರಿಕ ಭಾಷೆಯ ಬಳಕೆ, ಯಥಾವತ್ತಾದ ವಾಸ್ತವಿಕ ಚಿತ್ರಣ - ಮಲ್ಲಪ್ಪನವರ ಕಾರ್ಯನಿಷ್ಠೆ ಕಾರ್ಯ ತತ್ಪರತೆ, ನಿಷ್ಪಕ್ಷಪಾತ ಮನೋಧರ್ಮ, ಪ್ರಾಮಾಣಿಕ ಗುಣ; ರೆವಿನ್ಯೂ ಇಲಾಖೆಯಲ್ಲಿಯೂ ಇಂಥವರಿದ್ದಾರೆಯೆ ಎಂಬ ಪ್ರಶ್ನೆಯನ್ನು ಸಹಜವಾಗಿ ಮೂಡಿಸಿದರೆ ಉತ್ಪ್ರೇಕ್ಷೆಯಲ್ಲ.

ಮಲ್ಲಪ್ಪನವರು ಬಂದದ್ದೆ ಗ್ರಾಮೀಣ ಪರಿಸರದಿಂದ. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಮೂಗನಾಯ್ಕನ ಕೋಟೆಯಿಂದ, ತುಮಕೂರು ಸಮೀಪದ ರಂಗಣ್ಣನ ಪಾಳ್ಯಕ್ಕೆ ಕುಟುಂಬ ವಲಸೆ ಬಂದದ್ದು. ಗುಬ್ಬಿ ತಾಲ್ಲೂಕು ಕನ್ನಡ ವೃತ್ತಿ ರಂಗಭೂಮಿಯ ದಿಗ್ಗಜವೆನಿಸಿದ ವೀರಣ್ಣನವರನ್ನು ನೀಡಿರುವಂತೆಯೆ, ನಟ, ಭಯಂಕರ ಎಂಬುವ ಗಂಗಾಧರರಾಯರಂಥ ವಿಶಿಷ್ಟ ನಟರನ್ನು ಕೊಡುಗೆಯಾಗಿತ್ತಿದೆ. ಇಲ್ಲಿನ ನಿಟ್ಟೂರು ನಂಜಯ್ಯವೆಂಬಾತ ಕೇಶಿರಾಜನ ''ಶಬ್ದಮಣಿದರ್ಪಣ''ಕ್ಕೆ ವ್ಯಾಖ್ಯಾನ ಬರೆದಿದ್ದಾನೆ. ಗುಬ್ಬಿ ಮಲ್ಲಣಾರ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಹೆಸರು ಪಡೆದಾತ.

ಕೃತಿಯಲ್ಲಿ ಹತ್ತು ಅಧಿಕರಣ ಇವೆ. ಸೊಸೈಟಿ ಇನ್‌ಸ್ಪೆಕ್ಟರ್ ಆದ ಮಲ್ಲಪ್ಪನವರು ಅಮಲ್ದಾರರಾದದ್ದು ಖಾದಿ ಗ್ರಾಮೋದ್ಯೋಗ ಮಂಡಲಿಯಲ್ಲಿ ದುಡಿಮೆ, ಸರ್ವಥಾ ಸಮಾಜದ ಶೋಷಿತ ವರ್ಗದವರ ಬಗ್ಗೆ ಚಿಂತನ, ಇಲ್ಲೆಲ್ಲ ಮಲ್ಲಪ್ಪನವರ ಮನಸ್ಸು ತಾನಾಗಿ ಪ್ರಸಾರ ಆಗುತ್ತಿದೆ. ಅನುಭವ, ಬದುಕಿಗೆ ಹೆಚ್ಚು ಅರ್ಥ ನೀಡುತ್ತದೆ. ''ಅನುಭವದ ಇಂದ್ರಚಾಪದಿಂದಾಚೆ ಹೊಸ ಜಗತ್ತುಗಳನ್ನೆ ಕಾಣಬಹುದು'' ಎನ್ನುವ ಟೆನಿಸನ್ ಕವಿಯ ಮಾತು ನೆನಪಾಗುತ್ತದೆ.

ಮಲ್ಲಪ್ಪನವರ ಈ ಆತ್ಮಕಥನ, ಅನುಭವದ ಮೂಸೆಗೊಳಗಾಗಿ ಬಂದದ್ದು ಅನುಭವದ ಹಂತಗಳನ್ನೊಳಕೊಂಡುದೇ ಈ ಕೃತಿ, ಸಾಮಾನ್ಯನೊಬ್ಬ ತನ್ನ ಅಂತಸ್ಸತ್ವದಿಂದ ಉನ್ನತಿ-ಪದವಿಗೇರಿದ ಪರಿಯನ್ನು ಅಷ್ಟೆ ಯಥಾವತ್ತಾಗಿ ಚಿತ್ರಿಸಿದ ಮಲ್ಲಪ್ಪನವರ ಈ ಕೃತಿ ನಿಜಕ್ಕೂ ಓದಿಸಿಕೊಂಡು ಹೋಗುವಂಥದು.

-ಡಾ|| ಎನ್.ಕೆ.ಆರ್

ಕನ್ನಡ ಪ್ರಭಾ

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು - ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೆ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'